ರ್ನಾಟಕ ಸರ್ಕಾರ

೫೦ ಕರ್ನಾಟಕ
KARNATAKA

ಮರದ ಎಲೆ ನೀಲಿ

ಮೂಲ: ಆಶಾಪೂರ್ಣ ದೇವಿ
ಅನು: ರಮಾ ನರಸಿಂಹಾಚಾರ್

ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು – ೫೬೦ ೦೦೨

ಕೊಡುಗೆ
ಶ್ರೀಮಹೇಶ್, ಕ್ರಿಯೇಟಿವ್ ಗ್ರೀಕ್

ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಪ್ರಕಟಣೆ - ೪೦

ಸಾಹಿತ್ಯಮಾಲೆ - ೩೯

ಪ್ರಧಾನ ಸಂಪಾದಕರು

ಡಾ. ಪ್ರಧಾನ್ ಗುರುದತ್ತ

ಮರದ ಎಲೆ ನೀಲಿ

(ಗಾಛೇರ್ ಪಾತಾ ನೀಲ್)

ಮರದ ಎಲೆ ನೀಲಿ

(ಗಾಛೇರ್ ಪಾತಾ ನೀಲ್)

ಬಂಗಾಳಿ ಮೂಲ

ಆಶಾಪೂರ್ಣ ದೇವಿ

ಅನುವಾದ

ರಮಾ ನರಸಿಂಹಾಚಾರ್

ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ

ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು

MARADA ELE NĪLI - Kannada translation of a Bengali novel **Gachēr Pataa Neel** by **Ashapoorna Devi** ; Kannada Translation by **Rama Narasimhachar** ; Editor-in-Chief : **Dr. Pradhan Gurudatta** ; Published by **Registrar, Karnataka Anuvada Sahitya Academy** ; Kannada Bhavana, J.C. Road, Bangalore - 560 002, 2007 ; Pp - xiii + 250, Price : Rs. 100/-

ಮುದ್ರಣ : ೨೦೦೭
ಪುಟಗಳು : xiii + ೨೫೦
ಬೆಲೆ : ರೂ. ೧೦೦/-
ಪ್ರತಿಗಳು : ೧೨೦೦

ಪ್ರಕಾಶಕರು :
ಪಿ. ನಾರಾಯಣಸ್ವಾಮಿ
ರಿಜಿಸ್ಟ್ರಾರ್
ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು
ದೂ : ೨೨೧೦೭೭೮೦

ಸಹಕಾರ :
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಬೆಂಗಳೂರು

ಮುಖಪುಟ ವಿನ್ಯಾಸ ಮತ್ತು ಚಿತ್ರ : **ವಿಶ್ವನಾಥ್**

ISBN : 978-81-906101-1-7

ಮುದ್ರಕರು :
ಮೆ॥ ಮಯೂರ ಪ್ರಿಂಟ್ ಆಡ್ಸ್
ನಂ. ೬೯, ಸುಭೇದಾರ್‌ಛತ್ರಂ ರೋಡ್
ಬೆಂಗಳೂರು – ೫೬೦೦೨೦ ದೂ : ೨೩೩೪೨೭೨೪

ಹೆಚ್.ಡಿ. ಕುಮಾರಸ್ವಾಮಿ
ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು - ೫೬೦ ೦೦೧

ದಿನಾಂಕ : ೧೫.೦೩.೨೦೦೭

ಮುನ್ನುಡಿ

ಕರ್ನಾಟಕ ರಾಜ್ಯ ಪುನರ್ ಘಟನೆಯ ಐವತ್ತು ವರ್ಷಗಳ ನೆನಪಿಗಾಗಿ ಕರ್ನಾಟಕ ಸರ್ಕಾರ 'ಸುವರ್ಣ ಕರ್ನಾಟಕ'ದ ಸಂಭ್ರಮಪೂರ್ಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂದು ನಿರ್ಧರಿಸಿತು. ಈ ಹೊತ್ತಿಗೆ ಸರಿಯಾಗಿ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯ ಸ್ಥಾಪನೆಯ ಮೂಲಕ ಕರ್ನಾಟಕ ಸರ್ಕಾರ ಇನ್ನೊಂದು ಹೊಸ ಹೆಜ್ಜೆಯನ್ನೂ ಇಟ್ಟಿತ್ತು. ಭಾರತೀಯ ಭಾಷೆಗಳ ನಡುವಣ ಪಾರಸ್ಪರಿಕ ಅರಿವನ್ನು ಹೆಚ್ಚಿಸುವುದರ ಜೊತೆಗೆ, ನಮ್ಮ ನಾಡು-ನುಡಿಗಳ ಹಿರಿಮೆಯನ್ನು ಇತರ ಭಾಷಾ-ಬಾಂಧವರಿಗೆ ಹಾಗೂ ಜಾಗತಿಕ ನೆಲೆಯಲ್ಲಿ ಪರಿಚಯಿಸಿ ಕೊಡುವುದು ಮತ್ತು ಜಗತ್ತಿನ ಇತರ ಭಾಷೆಗಳ ಶ್ರೇಷ್ಠ ಸಾಹಿತ್ಯವನ್ನು ಕನ್ನಡಿಗರಿಗೆ ಒದಗಿಸುವುದು ಇದರ ಮುಖ್ಯ ಉದ್ದೇಶಗಳಲ್ಲಿ ಒಂದಾಗಿದೆ. ಅನುವಾದ ಸಾಹಿತ್ಯ ಈ ಹೊತ್ತು ಸಾಹಿತ್ಯ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿಲ್ಲದಿರುವುದರಿಂದ, ಜ್ಞಾನ-ವಿಜ್ಞಾನ-ತಂತ್ರಜ್ಞಾನಗಳ ಕ್ಷೇತ್ರಗಳನ್ನು ಒಳಗೊಂಡಂತೆ ವಿವಿಧ ಕ್ಷೇತ್ರಗಳಲ್ಲಿನ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದೂ ಇದರಲ್ಲಿ ಸೇರಿದೆ. ಇದರಿಂದ ಐತಿಹಾಸಿಕ ಹಿರಿಮೆಯ ಜೊತೆಗೆ, ಕನ್ನಡದ ಸಾಮರ್ಥ್ಯ, ವೈಶಿಷ್ಟ್ಯ, ಹಿರಿಮೆಗಳು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟಗಳಲ್ಲಿ ಕಂಗೊಳಿಸುವಂತಾಗುತ್ತದೆ.

'ಸುವರ್ಣ ಕರ್ನಾಟಕ' ಸಂಭ್ರಮದ ಸಂದರ್ಭದಲ್ಲಿ, ಈ ಹಿಂದೆ ನಾಡು ನುಡಿಗೆ ಸೇವೆಯನ್ನು ಸಲ್ಲಿಸಿರುವ ಹಿರಿಯ ಚೇತನಗಳು ಸ್ವಪ್ರೇರಣೆಯಿಂದ ಕನ್ನಡಕ್ಕೆ ತಂದುಕೊಟ್ಟಿರುವ ಶ್ರೇಷ್ಠ ಕೃತಿಗಳಲ್ಲಿ ಆಯ್ದ ಗ್ರಂಥಗಳನ್ನು 'ಸುವರ್ಣ ಅನುವಾದ ಮಾಲೆಯ' ಅಂಗವಾಗಿ ಹೊರತರಲಾಗುತ್ತಿದೆ. ಅಂತೆಯೇ, ಇತರ ಭಾಷೆಗಳಲ್ಲಿನ ಹಾಗೂ ವಿಶ್ವದಲ್ಲಿನ ಶ್ರೇಷ್ಠ ಕೃತಿಗಳನ್ನೂ ಪರಿಚಯಿಸಿ ಕೊಡಲಾಗುತ್ತಿದೆ. ಇವು ಕನ್ನಡಿಗರಿಗೆ ಪ್ರಿಯವಾಗುತ್ತವೆಂದು ನಂಬಿದ್ದೇನೆ. ಈ ಕೃತಿಗಳನ್ನು ಸಹೃದಯತೆಯಿಂದ ಸ್ವಾಗತಿಸುವ ಮೂಲಕ, ಅನುವಾದ ಸಾಹಿತ್ಯ ಅಕಾಡೆಮಿಯ ಇಂಥ ಕೆಲಸಗಳಿಗೆ ಕನ್ನಡ ನಾಡಿನ ಜನತೆ ಪ್ರೋತ್ಸಾಹ ನೀಡುತ್ತದೆ ಎಂದು ಭಾವಿಸಿದ್ದೇನೆ.

(ಹೆಚ್.ಡಿ. ಕುಮಾರಸ್ವಾಮಿ)

ಹೆಚ್.ಎಸ್. ಮಹದೇವ ಪ್ರಸಾದ್
ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕರ್ನಾಟಕ ಸರ್ಕಾರ

ನಂ. ೩೩೦, ೩ನೇ ಮಹಡಿ,
ವಿಧಾನಸೌಧ,
ಬೆಂಗಳೂರು – ೫೬೦ ೦೦೧

ದಿನಾಂಕ : ೦೮-೦೨-೨೦೦೭

ಶುಭಾಕಾಂಕ್ಷೆ

ಕರ್ನಾಟಕ ರಾಜ್ಯದಲ್ಲಿ ಮೊಟ್ಟಮೊದಲ ಬಾರಿಗೆ ಅಸ್ತಿತ್ವಕ್ಕೆ ಬಂದಿರುವ ಅನುವಾದ ಸಾಹಿತ್ಯ ಅಕಾಡೆಮಿ, ರಾಷ್ಟ್ರದಲ್ಲಿಯೇ ಇಂಥ ಆದ್ಯ ಸಂಸ್ಥೆಯಾಗಿದ್ದು ಅನೇಕ ಮಹತ್ವಪೂರ್ಣ ಯೋಜನೆಗಳನ್ನು ಕೈಗೊಂಡು, ಕನ್ನಡ ಸಾಹಿತ್ಯ ಮತ್ತು ಜ್ಞಾನ-ವಿಜ್ಞಾನ ಕ್ಷೇತ್ರಕ್ಕೆ ಅರ್ಥಪೂರ್ಣವಾದ ಕೊಡುಗೆಗಳನ್ನು ನೀಡುವ ಹಂಬಲವನ್ನು ಹೊಂದಿದೆ. ಇದರ ಸ್ಥಾಪನೆಯ ತರುಣದಲ್ಲಿಯೇ ಕರ್ನಾಟಕ ರಾಜ್ಯದ ಸುವರ್ಣ ಸಂಭ್ರಮದ ಉತ್ಸವವೂ ಕೂಡಿಬಂದಿರುವ ಕಾರಣದಿಂದಾಗಿ, ಅನುವಾದ ಸಾಹಿತ್ಯ ಅಕಾಡೆಮಿ ಗಾಂಧೀಜಿ, ನೆಹರೂ ಇಂಥ ಶ್ರೇಷ್ಠ ವ್ಯಕ್ತಿಗಳನ್ನು ಕುರಿತ ಮಹತ್ವದ ಕೃತಿಗಳನ್ನೇ ಅಲ್ಲದೆ, ವಿವಿಧ ಭಾಷೆಗಳಲ್ಲಿನ ಅತ್ಯುತ್ತಮ ಸಾಹಿತ್ಯ ಗ್ರಂಥಗಳನ್ನು ಮತ್ತು ಇತರ ಕೃತಿಗಳನ್ನು ಕನ್ನಡಿಗರಿಗೆ ಒದಗಿಸುವ ಕಾರ್ಯವನ್ನು ಹಮ್ಮಿಕೊಂಡಿರುವುದು ನನಗೆ ತುಂಬಾ ಸಂತೋಷವನ್ನು ಉಂಟುಮಾಡಿದೆ. ಇದರಲ್ಲಿ ದೇಶ-ವಿದೇಶಗಳ ಕಥೆ-ಕಾದಂಬರಿಗಳೂ, ನಾಟಕಗಳೂ, ಮಕ್ಕಳ ಸಾಹಿತ್ಯ, ವಿಜ್ಞಾನ ಸಾಹಿತ್ಯ ಮುಂತಾದ ಹಲವು ಕ್ಷೇತ್ರಗಳ ಕೃತಿಗಳೂ ಸೇರಿದ್ದು, ಕನ್ನಡಿಗರಿಗೆ ವೈವಿಧ್ಯಮಯ ಅನುಭವವನ್ನು ತಂದುಕೊಡುವಲ್ಲಿ ನೆರವಾಗುತ್ತವೆ ಎಂದು ನಂಬಿದ್ದೇನೆ. ಈ ಮಾಲೆಯಲ್ಲಿ ಈ ಬಗೆಯ ಇನ್ನೂ ಅನೇಕ ಕೃತಿಗಳು ಮುಂದಿನ ದಿನಗಳಲ್ಲಿ ಕನ್ನಡಿಗರಿಗೆ ದೊರೆಯಲಿವೆ ಎಂಬ ವಿಚಾರ ನನಗೆ ಹೆಚ್ಚಿನ ಸಂತೋಷವನ್ನು ಉಂಟುಮಾಡಿದೆ. ಇದೇ ರೀತಿ ಕನ್ನಡದ ಶ್ರೇಷ್ಠ ಕೃತಿಗಳನ್ನು ಇತರ ಭಾರತೀಯ ಭಾಷೆಗಳಿಗೆ ಹಾಗೂ ವಿದೇಶೀ ಭಾಷೆಗಳಿಗೆ ಅನುವಾದಿಸಿ ಕೊಡುವ ಕಾರ್ಯಗಳೂ ಸಾಕಷ್ಟು ಪ್ರಮಾಣದಲ್ಲಿ ನಡೆದು ಕನ್ನಡಿಗರ ಸಾಧನೆ ಜಗತ್ತಿಗೆ ಚೆನ್ನಾಗಿ ತಿಳಿದು ಬರುವಂಥ ಸಾರ್ಥಕ ಪ್ರಯತ್ನಗಳು ನಡೆಯಲಿ ಎಂದು ಹಾರೈಸುತ್ತೇನೆ.

ಈಗ ಹೊರಬರುತ್ತಿರುವ ಕೃತಿಗಳಿಗೆ ಕನ್ನಡ ವಾಚಕಲೋಕದ ಸಹೃದಯಪೂರ್ಣ ಸ್ವಾಗತ ದೊರೆಯುತ್ತದೆಂದು ನಂಬಿದ್ದೇನೆ. ಇಂಥ ಸ್ವಾಗತ ಮತ್ತು ಪ್ರೋತ್ಸಾಹಗಳು ಅಕಾಡೆಮಿಯ ಮುಂದಿನ ಕಾರ್ಯಚಟುವಟಿಕೆಗಳಿಗೆ ಪ್ರೇರಣೆಯನ್ನೊದಗಿಸಲಿ ಎಂದು ಹಾರೈಸುತ್ತೇನೆ.

(ಹೆಚ್.ಎಸ್. ಮಹದೇವ ಪ್ರಸಾದ್)

ಕರ್ನಾಟಕ ಸರ್ಕಾರ

ಐ.ಎಂ. ವಿಠ್ಠಲಮೂರ್ತಿ, ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿ
ಕನ್ನಡ ಮತ್ತು ಸಂಸ್ಕೃತಿ, ವಾರ್ತಾ
ಹಾಗೂ ಪ್ರವಾಸೋದ್ಯಮ ಇಲಾಖೆ

ಕಛೇರಿ : ೨೨೨೫೫೪೮೨
೨೨೦೩೪೦೦೭
ಕರ್ನಾಟಕ ಸರ್ಕಾರದ ಸಚಿವಾಲಯ
ಕೊ.ನಂ.೫, ನೆಲಮಹಡಿ, ವಿಕಾಸಸೌಧ,
ಬೆಂಗಳೂರು-೫೬೦ ೦೦೧

ಹೊಸ ಹೆಜ್ಜೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿಸಲಾಗುತ್ತಿರುವ 'ಶ್ರೀ ಕುವೆಂಪು ಭಾಷಾಭಾರತೀ' ಎಂಬ ರಾಷ್ಟ್ರೀಯ ಸಂಸ್ಥೆಯ ಒಂದು ಸ್ವತಂತ್ರ ವಿಭಾಗವಾಗಿ ಕರ್ನಾಟಕ ಸರ್ಕಾರ 'ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ'ಯನ್ನು ಈಗಾಗಲೇ (೨೦೦೬ರಲ್ಲಿ) ಅಸ್ತಿತ್ವಕ್ಕೆ ತಂದಿದೆ. ಇಂಥ ಉಪಕ್ರಮವನ್ನು ಮೆರೆಯುವಲ್ಲಿ ಕರ್ನಾಟಕವೇ ಮೊದಲನೆಯ ರಾಜ್ಯವಾಗಿದೆ ಎಂಬುದು ಹೆಮ್ಮೆಯ ಸಂಗತಿಯೇ ಆಗಿದೆ. ಈ ಅನುವಾದ ಅಕಾಡೆಮಿ, ಪ್ರಾರಂಭಗೊಂಡ ತರುಣದಲ್ಲಿಯೇ ಕರ್ನಾಟಕ ರಾಜ್ಯದ ಪುನರ್-ರಚನೆಯ ಸುವರ್ಣ ಮಹೋತ್ಸವದ ಸಂದರ್ಭ ಕೂಡಿ ಬಂದದ್ದು ಒಂದು ವಿಶಿಷ್ಟ ಯೋಗಾಯೋಗವೇ ಆಗಿದೆ. ಈ ಸುವರ್ಣ ಮಹೋತ್ಸವದ ಸಂದರ್ಭದ ಆಚರಣೆಯ ಅಂಗವಾಗಿ ಅನುವಾದ ಅಕಾಡೆಮಿ ಅನೇಕ ಮಹತ್ವಪೂರ್ಣ ಯೋಜನೆಗಳನ್ನು ಕೈಗೊಂಡಿದೆ. ಈ ಮೊದಲೇ ವಿಭಿನ್ನ ಭಾಷೆಗಳಲ್ಲಿನ ಹಲವು ಶ್ರೇಷ್ಠ ಲೇಖಕರ ಹಲವಾರು ಶ್ರೇಷ್ಠ ಕೃತಿಗಳು ನಮ್ಮ ಸಾಹಿತಿಗಳ ಗಮನವನ್ನು ಸೆಳೆದಿದ್ದು, ಅವುಗಳ ಯಥಾವತ್ತಾದ, ಸಂಗ್ರಹರೂಪವಾದ, ಅಳವಡಿಕೆಯಂತಿರುವ ಅನುವಾದಗಳನ್ನು ಅವರು ನಮಗೆ ಕೊಡಮಾಡಿದ್ದಾರೆ. 'ಒಬ್ಬನೇ ಉಂಡ ಊಟ ಹಬ್ಬವಲ್ಲ; ಒಬ್ಬನೇ ಸವಿದ ರುಚಿ ರುಚಿಯಲ್ಲ' ಎಂಬ ಗಾದೆ ಮಾತನ್ನು ಸಾರ್ಥಕಗೊಳಿಸುವಂತೆ, ಅವರು ಈ ಕೆಲಸವನ್ನು ಮಾಡಿದ್ದಾರೆ. ಇಂಥ ಪ್ರಸಿದ್ಧ, ಜನಪ್ರಿಯ, ಅಲಭ್ಯ ಕೃತಿಗಳನ್ನು 'ಸುವರ್ಣ ಕರ್ನಾಟಕ' ಯೋಜನೆಯ ಅಂಗವಾಗಿ ಹೊರತರಲಾಗುತ್ತಿದೆ. ಅಂತೆಯೇ, ಇತರ ಭಾಷೆಗಳಲ್ಲಿನ ಹೊಸ ಶ್ರೇಷ್ಠ ಗ್ರಂಥಗಳನ್ನು ಕನ್ನಡಿಗರಿಗೆ ಪರಿಚಯಿಸಿಕೊಡುವ ಪ್ರಯತ್ನವನ್ನೂ ಮಾಡಲಾಗುತ್ತಿದೆ. ಹೀಗೆ, ದೇಶ-ವಿದೇಶಗಳ ಉತ್ಕೃಷ್ಟ ಕೃತಿಗಳಿಂದ ಕನ್ನಡ ಭಾಷೆ-ಸಾಹಿತ್ಯಗಳನ್ನು ಸಮೃದ್ಧಗೊಳಿಸುವ ದಿಕ್ಕಿನಲ್ಲಿ ಅನುವಾದ ಅಕಾಡೆಮಿ ಮಹತ್ತರವಾದ ಪಾತ್ರವನ್ನು ನಿರ್ವಹಿಸಬೇಕಾಗಿದೆ.

ಅನುವಾದ ಇಂದು ತನ್ನ ಆಯಾಮವನ್ನು ಬಹುವಾಗಿ ವಿಸ್ತರಿಸಿಕೊಂಡು ಜ್ಞಾನ-ವಿಜ್ಞಾನ-ತಂತ್ರಜ್ಞಾನ ಕ್ಷೇತ್ರಗಳನ್ನು ತನ್ನ ತೆಕ್ಕೆಗೆ ಒಳಪಡಿಸಿಕೊಂಡಿದೆ. ಹೀಗಾಗಿ. ಈ ದಿಕ್ಕಿನಲ್ಲಿಯೂ ಕನ್ನಡವನ್ನು ಸಮೃದ್ಧಗೊಳಿಸುವತ್ತ ನಮ್ಮ ಗಮನ ಹರಿಯಬೇಕಾಗಿದೆ. ಅಕಾಡೆಮಿ ಈ ದಿಕ್ಕಿನಲ್ಲಿಯೂ ಕಾರ್ಯೋನ್ಮುಖವಾಗಿರುವುದು ಸಂತೋಷದ ವಿಚಾರವೇ ಆಗಿದೆ. ಈ

ಬಗೆಯ ಬಹುಮುಖೀ ಕಾರ್ಯಚಟುವಟಿಕೆಗಳಿಂದ ಭಾರತೀಯ ಭಾಷೆಗಳಲ್ಲಿ ಈಗಾಗಲೇ ತನ್ನದೇ ಆದ ಹಿರಿಮೆಯನ್ನು ಮೆರೆದಿರುವ, ಮೆರೆಯುತ್ತಿರುವ ಕನ್ನಡ ಭಾಷೆ-ಸಾಹಿತ್ಯ ಮತ್ತಷ್ಟು ಕಂಗೊಳಿಸುವಂತಾಗುತ್ತದೆ. ಅನೇಕ ಮಹತ್ವದ ಗ್ರಂಥಗಳು ದೊರೆಯುವಂತಾಗುತ್ತಿರುವುದು ವೈಯಕ್ತಿಕವಾಗಿಯೂ ನನಗೆ ಸಂತೋಷವನ್ನು ಉಂಟುಮಾಡುತ್ತಿದೆ. ಇಂಥ ಕಾರ್ಯಗಳಿಗೆ ಸರ್ಕಾರದ ಬೆಂಬಲದ ಜೊತೆಗೆ, ಜನತೆಯ ಹೃತ್ಪೂರ್ವಕ ಪ್ರೋತ್ಸಾಹವೂ ಅಗತ್ಯವಾಗುತ್ತದೆ. ವಿವೇಚನಾಶೀಲರೂ, ಸಹೃದಯರೂ ಆದ ಕನ್ನಡಿಗರು ಇಂಥ ಪ್ರೋತ್ಸಾಹ ನೀಡುವಲ್ಲಿ ಮುಂದಾಗುತ್ತಾರೆ ಎಂದು ನಂಬಿದ್ದೇನೆ. ಅಕಾಡೆಮಿಯ ಕಾರ್ಯಚಟುವಟಿಕೆಗಳು ಇತೋಪ್ಯತಿಶಯವಾಗಿ ಮುಂದುವರಿಯಲಿ ; ಕರ್ನಾಟಕದ ಜನತೆಗೆ ಹೊಸ ಅನುಭವಗಳ ಲೋಕವನ್ನು ತೆರೆದು ತೋರುವ ಕಾರ್ಯಗಳು ಅವಿಚ್ಛಿನ್ನವಾಗಿ ನಡೆಯಲಿ ಎಂದು ಈ ಸಂದರ್ಭದಲ್ಲಿ ಹಾರೈಸಬಯಸುತ್ತೇನೆ.

(ಐ.ಎಂ. ವಿಠ್ಠಲಮೂರ್ತಿ)

ಪ್ರಸ್ತಾವನೆ

ಭಾರತದಲ್ಲಿ ಯಾವುದೇ ರಾಜ್ಯವೊಂದರಲ್ಲಿ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಮೊಟ್ಟಮೊದಲ ಬಾರಿಗೆ ಸ್ಥಾಪಿಸಿದ ಹಿರಿಮೆ ಕರ್ನಾಟಕ ಸರ್ಕಾರದ್ದಾಗಿದೆ. ಜನವರಿ ೬ ೨೦೦೬ರಂದು ಅಂದಿನ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಶ್ರೀ ಧರ್ಮಸಿಂಗ್ ಅವರು ವಿಧ್ಯುಕ್ತವಾಗಿ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಉದ್ಘಾಟಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ಮಾಜಿ ಕುಲಪತಿಗಳೂ ಹಾಗೂ ಭಾಷಾಂತರವನ್ನು ವಿಶ್ವವಿದ್ಯಾಲಯದ ಹಂತದಲ್ಲಿ ಶಿಕ್ಷಣ ವಿಷಯವಾಗಿ ಅಳವಡಿಸಿದ ಭಾಷಾಂತರ ಕ್ಷೇತ್ರದ ಭೀಷ್ಮಾಚಾರ್ಯರೂ ಆದ ಪ್ರೊ|ದೇ. ಜವರೇಗೌಡ ಅವರೂ, ಹಿರಿಯ ವಿದ್ವಾಂಸರಾದ ಪ್ರೊ| ಎಲ್.ಎಸ್. ಶೇಷಗಿರಿರಾವ್ ಅವರೂ ಅಕಾಡೆಮಿಯ ಕಾರ್ಯಚಟುವಟಿಕೆಗಳ ದಿಕ್ಕು-ದೆಸೆಗಳನ್ನು ನಿರ್ದೇಶಿಸಿದರು.

ನಮ್ಮ ನಾಡಿನಲ್ಲಿರುವ ವಿಚಿತ್ರ ಪರಿಸ್ಥಿತಿ ಎಂದರೆ ವಿದೇಶೀಯ ಭಾಷಾಸಾಹಿತ್ಯಗಳ ಅಷ್ಟಿಷ್ಟು ಪರಿಚಯವಾದರೂ ಇರುವ ನಮಗೆ ನಮ್ಮ ನಾಡಿನ ನೆರೆಹೊರೆಯ ಭಾಷೆಗಳಲ್ಲಿನ ಶ್ರೇಷ್ಠ ಸಾಹಿತ್ಯದ, ಶ್ರೇಷ್ಠ ಸಾಹಿತಿಗಳ ಪರಿಚಯ ಬಹುಮಂದಿಗೆ ಇಲ್ಲವೇ ಇಲ್ಲದಂತಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿ ಮತ್ತು ಇತರ ಕೆಲವು ರಾಷ್ಟ್ರೀಯ ಸಂಸ್ಥೆಗಳು ತಮ್ಮ ಕಾರ್ಯಚಟುವಟಿಕೆಗಳಲ್ಲಿ ಅನುವಾದಗಳನ್ನು ಹೊರತರುವ ಕೆಲವು ಯೋಜನೆಗಳನ್ನು ಕೈಗೊಳ್ಳುತ್ತಿರುವುದುಂಟು. ಆದರೆ, ಈ ಕಾರ್ಯಗಳು ಅಪೇಕ್ಷಣೀಯ ಪ್ರಮಾಣದಲ್ಲಿ ಹಾಗೂ ಪರಸ್ಪರ ಪೂರಕವಾಗುವ ರೀತಿಯಲ್ಲಿ ಆಗುತ್ತಿಲ್ಲ. ಮೇಲಾಗಿ ಈ ಕಾರ್ಯಕ್ರಮಗಳು ಬಹುಮಟ್ಟಿಗೆ ಸಾಹಿತ್ಯ ಕ್ಷೇತ್ರಕ್ಕೆ ಮಾತ್ರವೇ ಸೀಮಿತವಾಗಿವೆ. ಹೀಗಾಗಿ, ಪರಸ್ಪರ ಕೊಳು-ಕೊಡೆಯ ಕಾರ್ಯಕ್ರಮಗಳು ಹೆಚ್ಚು-ಹೆಚ್ಚಾಗಿ ಹಾಗೂ ವೈವಿಧ್ಯಮಯವಾಗಿ ಆಗಬೇಕಾದ ಅಗತ್ಯವೂ ಇದೆ.

ಭಾರತೀಯ ಭಾಷಾಸಾಹಿತ್ಯಗಳು ಸಮೃದ್ಧವಾಗಿ ಬೆಳೆಯಬೇಕಾದರೆ, ಎರಡು ಮುಖಗಳಲ್ಲಿ ಕಾರ್ಯಗಳು ಆಗಬೇಕಾಗಿವೆ: (೧) ರಾಷ್ಟ್ರೀಯ ಮಟ್ಟದಲ್ಲಿ; (೨) ಅಂತಾರಾಷ್ಟ್ರೀಯ ಮಟ್ಟದಲ್ಲಿ. ರಾಷ್ಟ್ರೀಯ ಸ್ತರದಲ್ಲಿ ನಮ್ಮ ಭಾಷಾ ಸಾಹಿತ್ಯವನ್ನು ಬಿಂಬಿಸುವ ಕೆಲಸ ಎಷ್ಟು ಮುಖ್ಯವೋ, ಇತರ ಭಾಷೆಗಳಲ್ಲಿನ ಶ್ರೇಷ್ಠ ಸಾಹಿತ್ಯವನ್ನು ಕನ್ನಡಕ್ಕೆ ತಂದುಕೊಳ್ಳುವುದು ಅಷ್ಟೇ ಮುಖ್ಯ. ರಾಷ್ಟ್ರೀಯ ಅಂತಾರಾಷ್ಟ್ರೀಯ ಮಹತ್ವದ ಸಾಹಿತ್ಯವನ್ನು ಕನ್ನಡಕ್ಕೆ ತಂದುಕೊಳ್ಳುವುದು ಹಾಗೂ ಕನ್ನಡ ಸಾಹಿತ್ಯವನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಬಿಂಬಿಸುವುದೂ ಅಷ್ಟೇ ಮುಖ್ಯ. ಈ ದೃಷ್ಟಿಯಿಂದ ನೊಬೆಲ್ ಪ್ರಶಸ್ತಿ, ಬೂಕರ್ ಪ್ರಶಸ್ತಿ, ಜ್ಞಾನಪೀಠ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪ ಪ್ರಶಸ್ತಿ ಮೊದಲಾದ ಪ್ರಶಸ್ತಿ ಪುರಸ್ಕಾರಗಳನ್ನು ಪಡೆದುಕೊಂಡಿರುವ ಲೇಖಕರ ಮಹತ್ವದ ಕೃತಿಗಳನ್ನು ಇತರ ಭಾಷೆಗಳಲ್ಲಿ ಹೊರತರುವ ಯೋಜನೆಗಳನ್ನು ಅನುವಾದ ಸಾಹಿತ್ಯ ಅಕಾಡೆಮಿ

ತಮ್ಮ ಮುಂದಿರಿಸಿಕೊಂಡಿದೆ. ಅಷ್ಟೇ ಅಲ್ಲದೆ, ವಿಜ್ಞಾನ–ತಂತ್ರಜ್ಞಾನ, ವೈದ್ಯಕೀಯ, ಮಾನಸಿಕ ಮೊದಲಾದ ಕ್ಷೇತ್ರಗಳಲ್ಲಿನ ಶ್ರೇಷ್ಠ ಕೃತಿಗಳನ್ನು ಕನ್ನಡದಲ್ಲಿ ತರುವ ಯೋಜನೆಗಳೂ ಅಕಾಡೆಮಿಯ ಮುಂದಿವೆ. ಇತರ ರಾಜ್ಯ ಸರ್ಕಾರಗಳೊಂದಿಗೆ ಸಮಾಲೋಚಿಸಿ, ಅಂತೆಯೇ, ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ವಿಭಾಗ, ಕೇಂದ್ರೀಯ ಹಿಂದೀ ನಿರ್ದೇಶನಾಲಯ, ವೈಜ್ಞಾನಿಕ ಮತ್ತು ತಾಂತ್ರಿಕ ಪಾರಿಭಾಷಿಕ ಪದಾವಲಿ ಆಯೋಗ ಇತ್ಯಾದಿ ಸಂಸ್ಥೆಗಳೊಂದಿಗೆ ಸಂಪರ್ಕಿಸಿ ಈ ದಿಕ್ಕಿನಲ್ಲಿ ಸಹಕಾರವನ್ನು ಪಡೆದುಕೊಳ್ಳುವ ಆಲೋಚನೆಯನ್ನೂ ಅಕಾಡೆಮಿ ಇರಿಸಿಕೊಂಡಿದೆ.

ಅಕಾಡೆಮಿಯ ಕಾರ್ಯಚಟುವಟಿಕೆಗಳ ಅಂಗವಾಗಿ ಕಾರ್ಯಶಿಬಿರಗಳನ್ನು ಆಯೋಜಿಸಿ. ಅನುವಾದದ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸುವ, ಸಮರ್ಥ ಭಾಷಾಂತರಕಾರರನ್ನು ಗುರುತಿಸುವ ಪ್ರಯತ್ನಗಳನ್ನು ಅಕಾಡೆಮಿ ಮಾಡುತ್ತಿದೆ. ಈಗಾಗಲೇ ಕನ್ನಡ–ತೆಲುಗು, ಕನ್ನಡ–ಹಿಂದೀ, ಯಂತ್ರಾನುವಾದ, ವಿಜ್ಞಾನ ಸಾಹಿತ್ಯ ಅನುವಾದ ಇವುಗಳಿಗೆ ಸಂಬಂಧಿಸಿದಂತೆ ರಾಜ್ಯದ ಬೇರೆ–ಬೇರೆ ಕೇಂದ್ರಗಳಲ್ಲಿ ಹಾಗೂ ಹೊರ ರಾಜ್ಯಗಳಲ್ಲಿ ಕಾರ್ಯಶಿಬಿರಗಳನ್ನೂ, ವಿಚಾರಗೋಷ್ಠಿಗಳನ್ನೂ ನಡೆಸಲಾಗಿದೆ. ಉರ್ದೂ ಮತ್ತು ತಮಿಳು ಭಾಷೆಗಳ ಕಾರ್ಯಶಿಬಿರಗಳನ್ನು ಆಯೋಜಿಸಲಾಗುತ್ತಿದೆ.

ಭಾಷಾಂತರ ಕ್ಷೇತ್ರದಲ್ಲಿನ ಇತ್ತೀಚಿನ ಬೆಳವಣಿಗೆಗಳನ್ನು ಗಮನಕ್ಕೆ ತೆಗೆದುಕೊಂಡು ಆ ದಿಕ್ಕಿನಲ್ಲಿ ಅಗತ್ಯವಾದ ಕ್ರಮಗಳನ್ನು ಕೈಗೊಳ್ಳುವ ಆಲೋಚನೆಯೂ ಇದೆ. ಇತ್ತೀಚೆಗೆ ಸ್ಯಾಮ್ ಪಿಟ್ರೋಡಾ ಅವರು 'ರಾಷ್ಟ್ರೀಯ ಅನುವಾದ ಮಿಷನ್' (National Translation Mission) ಅನ್ನು ಸ್ಥಾಪಿಸುವ ಬಗ್ಗೆ ಕೇಂದ್ರ ಸರ್ಕಾರಕ್ಕೆ ಯೋಜನೆಯೊಂದನ್ನು ಸಲ್ಲಿಸಿದ್ದು, ಕೇಂದ್ರ ಸರ್ಕಾರ ಆ ಯೋಜನೆಯನ್ನು ಒಪ್ಪಿಕೊಂಡಿರುವ ವಿಚಾರ ಪತ್ರಿಕೆಗಳಲ್ಲಿ ವರದಿಯಾಗಿದೆ. ಈ ಯೋಜನೆ ಕಾರ್ಯರೂಪಕ್ಕೆ ಬಂದಲ್ಲಿ, ಜ್ಞಾನ–ವಿಜ್ಞಾನ–ತಂತ್ರಜ್ಞಾನಗಳು ಜನಸಾಮಾನ್ಯರವರೆಗೂ ಯಶಸ್ವಿಯಾಗಿ ಮುಟ್ಟುವುದು ಸಾಧ್ಯವಾಗುತ್ತದೆ ಹಾಗೂ ರಾಷ್ಟ್ರದ ಪ್ರಗತಿಯೂ ಅಭೂತಪೂರ್ವ ರೀತಿಯಲ್ಲಿ ಆಗುತ್ತದೆ ಎಂದು ಆಶಿಸಲಾಗಿದೆ. ಈ ಯೋಜನೆ ಉದ್ಯೋಗಸೃಷ್ಟಿಯ ಮಹತ್ತರ ಯೋಜನೆಯೂ ಆಗಲಿದೆ. ಇಂಥ ಸಂದರ್ಭದಲ್ಲಿ ಅಗತ್ಯವಾಗುವ ಲಕ್ಷಾಂತರ ಮಂದಿ ಅನುವಾದಕರ ಪಡೆಯನ್ನು ಸಿದ್ಧಪಡಿಸುವುದು ಇಂಥ ಸಂಸ್ಥೆಗಳ ಮತ್ತು ವಿಶ್ವವಿದ್ಯಾನಿಲಯಗಳ ಹೊಣೆಯೇ ಆಗಿರುತ್ತದೆ. ರಾಜ್ಯದ ಹಾಗೂ ಹೊರಗಿನ ವಿಶ್ವವಿದ್ಯಾನಿಲಯಗಳಲ್ಲಿ ಈಗಾಗಲೇ ಭಾಷಾಂತರ ವಿಭಾಗಗಳು ಸ್ಥಾಪಿತವಾಗಿದ್ದು, ಅವು ಕಾರ್ಯಶೀಲವಾಗುತ್ತಿರುವುದು ಶುಭಸೂಚಕವಾಗಿದೆ.

ಇದುವರೆಗೆ ವಿದ್ವಾಂಸರ ವೈಯಕ್ತಿಕ ಪಾಂಡಿತ್ಯ, ವ್ಯುತ್ಪತ್ತಿ ಮತ್ತು ಒಲವನ್ನು ಆಧರಿಸಿ ಅನುವಾದ ಕಾರ್ಯಗಳು ನಡೆಯುತ್ತಾ ಬಂದಿವೆ. ಆದರೆ ಇಂಥ ಕಾರ್ಯಗಳು ವ್ಯವಸ್ಥಿತವಾಗಿ ಹಾಗೂ ಉತ್ತಮ ಗುಣಮಟ್ಟದೊಂದಿಗೆ ನಡೆಯಬೇಕಾದ್ದು ಅಪೇಕ್ಷಣೀಯವಾಗಿರುವ ಹಿನ್ನೆಲೆಯಲ್ಲಿ, ಭಾಷಾಂತರ ಸಂಬಂಧವಾದ ಶಿಕ್ಷಣ–ಕ್ರಮಗಳನ್ನು ರೂಪಿಸುವುದು ಹಾಗೂ ದ್ವಿಭಾಷಾ ಮತ್ತು ಬಹುಭಾಷಾ ನಿಘಂಟುಗಳನ್ನು, ನುಡಿಗಟ್ಟುಗಳ ಮತ್ತು ಗಾದೆಗಳ ಕೋಶಗಳು, ಸಮಾನಾರ್ಥಕ ಮತ್ತು ಭಿನ್ನಾರ್ಥಕ ಕೋಶಗಳು ಹಾಗೂ ವಾಕ್ಯರಚನಾ ಕೈಪಿಡಿಗಳನ್ನು

ಹೊರತರುವುದು – ಇವೇ ಮೊದಲಾದ ಕಾರ್ಯಗಳು ಆದ್ಯತೆಯ ಮೇರೆಗೆ ನಡೆಯಬೇಕಾಗಿವೆ. ಅನುವಾದ ಅಕಾಡೆಮಿ ಸ್ಥಾಪಿತವಾದ ಅತ್ಯಲ್ಪ ಅವಧಿಯಲ್ಲಿಯೇ ಇತರ ಸಂಘ–ಸಂಸ್ಥೆಗಳ ಗಮನವನ್ನು ಸೆಳೆದಿದ್ದು, ಅಂತರರಾಷ್ಟ್ರೀಯ ಕನಕದಾಸ ಮಿಷನ್‌ನಂತಹ ಸಂಸ್ಥೆ ಅನುವಾದ ಅಕಾಡೆಮಿಯೊಂದಿಗೆ ಸಹಕರಿಸಲು ಮುಂದೆ ಬಂದಿರುವುದು ಗಮನಾರ್ಹವಾದ ವಿಚಾರವೇ ಆಗಿದೆ. ಅಂತೆಯೇ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಸಹಕಾರದೊಂದಿಗೆ ಇಂಜಿನಿಯರಿಂಗ್ ವಿಷಯಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಕನ್ನಡದಲ್ಲಿ ಹೊರತರುವ ಬಗ್ಗೆಯೂ ಆಲೋಚನೆ ಮಾಡಲಾಗುತ್ತಿದೆ. ಹೀಗೆ ಅನುವಾದ ಅಕಾಡೆಮಿ ಅನೇಕ ದಿಕ್ಕುಗಳಲ್ಲಿ ಮುಂದುವರಿದು ಸಾಧನೆ ಮಾಡಬೇಕಾಗಿದೆ.

ಕರ್ನಾಟಕ ಸರ್ಕಾರ ಅನುವಾದ ಅಕಾಡೆಮಿಯ ವಿಷಯದಲ್ಲಿ ವಿಶೇಷವಾದ ಆಸಕ್ತಿಯನ್ನು ತೋರಿ ಅಗತ್ಯವಾದ ನೆರವನ್ನು ನೀಡಲು ಮುಂದೆ ಬಂದಿರುವುದು ಅಕಾಡೆಮಿಗೆ ವಿಶೇಷ ಸಂತೋಷದ ವಿಚಾರವೇ ಆಗಿದೆ. ಅದರಲ್ಲಿಯೂ ಈ ಬಾರಿ ಸುವರ್ಣ ಕರ್ನಾಟಕ ಕಾರ್ಯಕ್ರಮಗಳ ಅಂಗವಾಗಿ ವಿಶೇಷ ಧನಸಹಾಯ ನೀಡಿರುವುದರಿಂದ ಪ್ರಸಿದ್ಧ/ಅಲಭ್ಯ ಅನುವಾದಗಳ ಮರುಪ್ರಕಟಣೆ ಕಾರ್ಯವನ್ನು ಕೈಗೊಳ್ಳುವುದು, ಮತ್ತಿತರ ಮಹತ್ವದ ಪ್ರಕಟಣೆಗಳನ್ನು ಕೈಗೊಳ್ಳುವುದು ಸಾಧ್ಯವಾಗಿದೆ. ಈ ದಿಕ್ಕಿನಲ್ಲಿ ನಾಡಿನ ವಿದ್ವಾಂಸರು ವಿಶೇಷವಾದ ಸಹಾಯ–ಸಹಕಾರಗಳನ್ನು ನೀಡಲು ಮುಂದೆ ಬಂದಿರುವುದು ಅಕಾಡೆಮಿಗೆ ಗೌರವದ, ಸಂತೋಷದ ಹಾಗೂ ಹೆಮ್ಮೆಯ ವಿಚಾರವೇ ಆಗಿದೆ. ಈ ಸಂದರ್ಭದಲ್ಲಿ ವಿಲ್ ಡ್ಯೂರಾಂಟ್ ಅವರ ಜಗತ್‌–ಪ್ರಸಿದ್ಧವಾಗಿರುವ ಹಾಗೂ ಭಾರತದ ಬೇರಾವ ಭಾಷೆಯಲ್ಲೂ ಇನ್ನೂ ಬೆಳಕು ಕಾಣದಿರುವ 'ದಿ ಸ್ಟೋರಿ ಆಫ್ ಸಿವಿಲಿಜೇಷನ್' ಸಂಪುಟಗಳ ಕನ್ನಡ ಅನುವಾದವನ್ನು ಹೊರತರುವಲ್ಲಿ ಪ್ರೊ॥ ಎಲ್.ಎಸ್. ಶೇಷಗಿರಿರಾವ್ ಅವರೂ, ಬಹಳ ಹಿಂದೆಯೇ ಇಂಗ್ಲಿಷ್‌ನಲ್ಲಿ ೧೦ ಸಂಪುಟಗಳಲ್ಲಿ ಪ್ರಕಟಣೆಗೊಂಡಿರುವ ಸಂಸ್ಕೃತ ಸಾಹಿತ್ಯದ ವಿಶಿಷ್ಟ ಕೃತಿಯಾದ ಸೋಮದೇವನ 'ಕಥಾಸರಿತ್ಸಾಗರ'ದ ಕನ್ನಡ ಅನುವಾದವನ್ನು ನೇರವಾಗಿ ಸಂಸ್ಕೃತದಿಂದ ಅನುವಾದಿಸಿ ಹೊರತರುವಲ್ಲಿ ಡಾ॥ಪಿ.ಎಸ್.ರಾಮಾನುಜಮ್ ಅವರೂ ನೆರವು ನೀಡುತ್ತಿರುವುದು ವಿಶೇಷವಾಗಿ ಸ್ಮರಣೀಯವಾಗಿದೆ. ಕನ್ನಡ ಸಹೃದಯ ಲೋಕ ಅಕಾಡೆಮಿಯ ಈ ಕಾರ್ಯಚಟುವಟಿಕೆಗಳ ವಿಷಯದಲ್ಲಿ ತನ್ನ ಸಹೃದಯತೆಯನ್ನು ಮೆರೆಯುತ್ತದೆ ಎಂದು ಆಶಿಸಿದ್ದೇನೆ.

ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯ ಸ್ಥಾಪನೆಗೆ ಕಾರಣರಾದ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಧರ್ಮಸಿಂಗ್ ಅವರಿಗೂ, ಅಕಾಡೆಮಿಯ ಕಾರ್ಯಚಟುವಟಿಕೆಗಳ ವಿಷಯದಲ್ಲಿ ವಿಶೇಷ ಆಸಕ್ತಿಯನ್ನು ತೋರಿ, ಎಲ್ಲ ನೆರವನ್ನು ನೀಡುತ್ತಿರುವ ಇಂದಿನ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ.ಕುಮಾರಸ್ವಾಮಿ ಅವರಿಗೂ, ಮಾನ್ಯ ಉಪಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪನವರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ಮಾನ್ಯ ಶ್ರೀ ಮಹದೇವ ಪ್ರಸಾದ್ ಅವರಿಗೂ ಅಕಾಡೆಮಿ ವಿಶೇಷ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತದೆ. ಅಕಾಡೆಮಿಯ ಕಾರ್ಯಚಟುವಟಿಕೆಗಳಿಗೆ ಎಲ್ಲ ಬಗೆಯ ಸಹಾಯ–ಸಹಕಾರ–ಮಾರ್ಗದರ್ಶನ ನೀಡುತ್ತಾ ಬಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಧಾನ

ಕಾರ್ಯದರ್ಶಿಗಳಾಗಿದ್ದ ಶ್ರೀಮತಿ ಉಷಾ ಗಣೇಶ್ ಅವರಿಗೂ, ಚೈತನ್ಯಶೀಲರೂ, ದೂರಗಾಮಿ ದೃಷ್ಟಿಯುಳ್ಳವರೂ ಆದ ಇಂದಿನ ಕಾರ್ಯದರ್ಶಿಗಳಾದ ಶ್ರೀ ಐ.ಎಂ.ವಿಠ್ಠಲಮೂರ್ತಿ ಅವರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಹಿಂದಿನ ಆಯುಕ್ತರುಗಳಾಗಿದ್ದ ಶ್ರೀ ಕೆ.ಆರ್.ನಿರಂಜನ್ ಮತ್ತು ಶ್ರೀ ಎಸ್.ಎಫ್. ಯೋಗಪ್ಪನವರ್ ಅವರಿಗೂ, ನಿರ್ದೇಶಕರಾಗಿರುವ ಶ್ರೀ ಕಾ.ತ. ಚಿಕ್ಕಣ್ಣ ಅವರಿಗೂ ಅಕಾಡೆಮಿ ವಿಶೇಷ ವಂದನೆಗಳನ್ನು ಸೂಚಿಸಬಯಸುತ್ತದೆ.

ಅಕಾಡೆಮಿಯ ಕಾರ್ಯಚಟುವಟಿಕೆಗಳಿಗೆ ಎಲ್ಲ ಸಹಾಯ ಸಹಕಾರ ಮತ್ತು ಮಾರ್ಗದರ್ಶನ ಮಾಡುತ್ತಿರುವ ಅಕಾಡೆಮಿಯ ಎಲ್ಲ ಗೌರವಾನ್ವಿತ ಸದಸ್ಯರಿಗೂ ನಮ್ಮ ವಂದನೆಗಳು ಸಲ್ಲುತ್ತವೆ.

ಬಂಗಾಳಿ ಭಾಷೆಯ ಸುಪ್ರಸಿದ್ಧ ಸಾಹಿತಿಗಳೆನಿಸಿಕೊಂಡಿರುವ ಶ್ರೀಮತಿ ಆಶಾಪೂರ್ಣ ದೇವಿ ಅವರು ಶಾಲಾ-ಕಾಲೇಜುಗಳಲ್ಲಿ ಓದಿರದಿದ್ದರೂ, ಸಾಂಪ್ರದಾಯಿಕ ವಾತಾವರಣದಲ್ಲೇ ಬೆಳೆದುಬಂದಿದ್ದರೂ ಬಂಡಾಯ ಸ್ವರೂಪದ ಕಾದಂಬರಿಗಳನ್ನು ಬರೆದರು; ಹೊಸ ಮೌಲ್ಯಗಳನ್ನು ಸ್ವೀಕರಿಸಿದ ವ್ಯವಸ್ಥೆಯ ವಿರುದ್ಧ ಸಿಡಿದೆದ್ದು ಬರೆದ ಕಾದಂಬರಿ 'ಪ್ರಥಮ ಪ್ರತಿಶ್ರುತಿ'ಗೆ ಭಾರತೀಯ ಜ್ಞಾನಪೀಠ ಪ್ರಶಸ್ತಿಯನ್ನು ಪಡೆದುಕೊಂಡರು. ಅವರ ಕೆಲವು ಕಾದಂಬರಿಗಳು ಈಗಾಗಲೇ ಕನ್ನಡಕ್ಕೆ ಬಂದಿವೆ. "ಸಮಾಜದ ಕಟ್ಟುಪಾಡುಗಳು, ಮೂಢನಂಬಿಕೆಗಳು ಅರ್ಥವಿಲ್ಲದ ಪರಂಪರೆ ಹೆಣ್ಣಿಗೆ ಗಂಡಿನಿಂದ ಸಮಾಜದಿಂದ ಮತ್ತು ಹೆಂಗಸರಿಂದಲೇ ಆಗುತ್ತ ಇರುವ ಅಪಮಾನಗಳ ವಿರುದ್ಧ ಪ್ರತಿಭಟಿಸಬೇಕು" ಎಂದು ಕರೆನೀಡಿದವರು. ಅವರ 'ಗಾಛೇರ್ ಪಾತಾ ನೀಲ್' ಕಾದಂಬರಿಯ ಕನ್ನಡ ಅನುವಾದವನ್ನು ಓದುಗರಿಗೆ ಅರ್ಪಿಸುವುದು ಅನುವಾದ ಸಾಹಿತ್ಯ ಅಕಾಡೆಮಿಗೆ ಸಂತೋಷದ ಸಂಗತಿಯಾಗಿದೆ. ಇದಕ್ಕೆ ಅವಕಾಶ ಮಾಡಿಕೊಟ್ಟಿರುವ ಆಶಾಪೂರ್ಣ ದೇವಿಯವರ ಸೊಸೆ ಶ್ರೀಮತಿ ನೂಪುರ್ ಗುಪ್ತ ಅವರಿಗೆ ಅಕಾಡೆಮಿ ಕೃತಜ್ಞವಾಗಿದೆ. ಸುವರ್ಣ ಕರ್ನಾಟಕ ಸಾಹಿತ್ಯ ಮಾಲೆಯ ಅಂಗವಾಗಿ ಹೊರತರಲಾಗುತ್ತಿರುವ ಬಂಗಾಳಿಯ ಈ ಕೃತಿ ಕನ್ನಡ ಓದುಗರಿಗೆ ವಿಶಿಷ್ಟಾನುಭವವನ್ನು ತಂದು ಕೊಡಲಿದೆ ಎಂದು ನಂಬಿದ್ದೇವೆ. ಇದನ್ನು ಸುಂದರವಾಗಿ ಅನುವಾದಿಸಿಕೊಟ್ಟಿರುವ ಹಿರಿಯ ಲೇಖಕಿ ಶ್ರೀಮತಿ ರಮಾ ನರಸಿಂಹಾಚಾರ್ ಅವರಿಗೂ ನಮ್ಮ ವಂದನೆಗಳು ಸಲ್ಲುತ್ತವೆ.

ಅನುವಾದ ಅಕಾಡೆಮಿಯ ಕೆಲಸ-ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಅಕಾಡೆಮಿಯ ರಿಜಿಸ್ಟ್ರಾರ್ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿವರ್ಗದವರಿಗೂ, ತಮ್ಮ ಅನೇಕ ಕಾರ್ಯಗಳ ನಡುವೆಯೂ ಬಿಡುವು ಮಾಡಿಕೊಂಡು ತಾಳ್ಮೆಯಿಂದ ಕರಡು ಪರಿಶೀಲನೆಯಲ್ಲಿ ನಮಗೆ ನೆರವಾಗಿರುವ ಶ್ರೀ ಜಿ.ಕೆ. ವಾಸು ಅವರಿಗೂ, ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ. ಮಂಜೂರ್ ಪ್ರಿಂಟ್ ಆ್ಯಡ್ಸ್‌ನ ಶ್ರೀ ಜಿ.ಎಲ್. ಶ್ರೀನಿವಾಸ ಮತ್ತು ಅವರ ಸಿಬ್ಬಂದಿವರ್ಗದವರಿಗೂ ನಮ್ಮ ವಂದನೆಗಳು.

ಪ್ರಧಾನ್ ಗುರುದತ್ತ
ಅಧ್ಯಕ್ಷ

ಪರಿವಿಡಿ

ಮರದ ಎಲೆ ನೀಲಿ

(ಗಾಛೇರ್ ಪಾತಾ ನೀಲ್)

ಮರದ ಎಲೆ ನೀಲಿ
(ಗಾಛೇರ್ ಪಾತಾ ನೀಲ್)

ಕಾದಂಬರಿಯ ಸಾರಾಂಶ :

ಇದು 1960ರ ದಶಕದಲ್ಲಿ ಎಲ್ಲಾ ಕಡೆಯೂ, ಮುಖ್ಯವಾಗಿ ಪೂರ್ವದ ರಾಜ್ಯಗಳಲ್ಲಿ ತಲೆಯೆತ್ತಿದ ಉಗ್ರವಾದಿಗಳ ಆಂದೋಳನದ ಸಮಯದ ಒಂದು ಸನ್ನಿವೇಶ.

ಕಾದಂಬರಿಯ ನಾಯಕರಾದ ಪ್ರೊಫೆಸರ್ ಸರೋಜಾಕ್ಷ ಮೈತ್ರಾ, ಮೃದು ಸ್ವಭಾವದ ಕಟ್ಟುನಿಟ್ಟಿನ ಮನುಷ್ಯರು. ತಮ್ಮ ವಿದ್ಯಾರ್ಥಿಗಳಿಂದ ಘೇರಾವ್ ಆಗಿ, ಆ ಅವಮಾನದ ಕಾರಣದಿಂದ ಕೆಲಸಕ್ಕೆ ರಾಜೀನಾಮೆ ಕೊಡಲು ಯೋಚಿಸುತ್ತಿರುವ ಸಂದರ್ಭದಿಂದ ಕತೆ ಪ್ರಾರಂಭವಾಗುತ್ತದೆ. ಅವರ ಧರ್ಮಪತ್ನಿ ವಿಜಯಾ, ಯಜಮಾನರ ಅಂತರಂಗ, ಮನೋಭಾವಗಳನ್ನು ನಿಜವಾಗಿ ಅರಿಯಲು ಎಂದೂ ಪ್ರಯತ್ನಿಸಿದವರಲ್ಲ. ಲೌಕಿಕ ನಂಬಿಕೆಗಳಲ್ಲಿ ಮುಳುಗಿದವರು. ಇವರಿಗೆ ಇಬ್ಬರು ಗಂಡು ಮಕ್ಕಳು, ನೀಲಾಕ್ಷ ಮತ್ತು ಕಮಲಾಕ್ಷ. ನೀಲಾಕ್ಷ, ಅವನ ಹೆಂಡತಿ ಸುನಂದಾ ಮತ್ತು ಇವರ ಗಂಡು ಮಗು, ಎಲ್ಲರೂ ಒಟ್ಟಿಗೆ ಸರೋಜಾಕ್ಷರೊಂದಿಗೆ ಇದ್ದಾರೆ. ಮಧ್ಯಮ ವರ್ಗದ ಕುಟುಂಬದಿಂದ ಬಂದ ಸುನಂದಾಳನ್ನು, ನವನಾಗರಿಕತೆಯ ಮೋಹದಲ್ಲಿರುವ, ಸ್ವಾರ್ಥಿ, ನೀಲಾಕ್ಷ, ಹೊಸ ವ್ಯಕ್ತಿಯಾಗಿಸಿದ್ದಾನೆ. ಚಿಕ್ಕಮಗ ಕಮಲಾಕ್ಷ ಖರಗ್‌ಪೂರ್ IITಯಲ್ಲಿ ಓದುತ್ತಿರುವ, ಉಗ್ರ ರಾಜಕೀಯದ, ಒಡಿತದಲ್ಲಿ ಸಿಕ್ಕಿಕೊಂಡಿರುವ ವಿದ್ಯಾರ್ಥಿ. ಸರೋಜಾಕ್ಷರ ತಂದೆಯ ಕಾಲದಿಂದಲೂ ಈ ಮನೆಯಲ್ಲಿ ಇರುವ ಇನ್ನೊಬ್ಬ ವ್ಯಕ್ತಿ, ಶಾರದಾ ಪ್ರಸಾದ್. ಸರೋಜಾಕ್ಷರ ತಂಗಿಯ ಗಂಡ, ಹೆಂಡತಿ ಯಾವಾಗಲೋ ಪರಲೋಕವನ್ನೈದಿದ್ದರೂ, ಅಮಾಯಕರಾದ ಮೈದುನನ ಮನೆಯಲ್ಲೇ ಇದ್ದರು. ಇವರಿಗೆ ನಮ್ಮ ಹಳೆಯ ಕಾಲದ ಯೋಗ-ಶಕ್ತಿ, ಆಧುನಿಕ ವಿಜ್ಞಾನಕ್ಕಿಂತ ಮೇಲಾಗಿತ್ತು ಎಂದು ದೃಢವಾದ ನಂಬಿಕೆ. ಮನೆಯ ಅವಾಂತರದ ಸಮಯದಲ್ಲಿ ಹೊರಬಿದ್ದು ತಾವು ಹುಟ್ಟಿದ ಹಳ್ಳಿಗೆ ಹೋಗಿ ಸೇರಿಕೊಳ್ಳುತ್ತಾರೆ.

ಸರೋಜಾಕ್ಷ – ವಿಜಯಾರವರಿಗೆ ಇಬ್ಬರು ಹೆಣ್ಣುಮಕ್ಕಳೂ ಇದ್ದಾರೆ. ದೊಡ್ಡವಳು ಮಯೂರಾಕ್ಷಿ ಮದುವೆಯಾಗಿ ಗಂಡನ ಮನೆಯಲ್ಲಿದ್ದಾಳೆ. ಆಗಾಗ್ಗೆ ತಾಯಿ ತಂದೆಯರನ್ನು ನೋಡಲು ಬರುತ್ತಿರುತ್ತಾಳೆ. ಕಡೆಯವಳಾದ ಮೀನಾಕ್ಷಿ, ಬಿ.ಎ. ಓದುತ್ತಿರುವ ವಿದ್ಯಾರ್ಥಿನಿ. ಶಿಸ್ತು ಮತ್ತು ನೀತಿಯ ವಾತಾವರಣದಲ್ಲಿ ಬೆಳೆದಿರುವ ಇವಳಿಗೆ, ಹಳೆಯ ಕಂದಾಚಾರದ, ಪದ್ಧತಿಗಳ ಸಂಕೋಲೆಯಿಂದ ತನ್ನನ್ನು ಬಿಡಿಸಿಕೊಳ್ಳಬೇಕೆಂಬ ಕಾತರ ಇದೆ. ಅದಕ್ಕೇ ಏನೋ

ಇವಳು, ಕರ್ಕಶ, ಪಾಶವಿಕ ಶಕ್ತಿ ತೋರುವ, ಒರಟ, ದಿವಾಕರನಲ್ಲಿ ಆಕರ್ಷಿತಳಾಗುತ್ತಾಳೆ. ಇದರ ಪರಿಣಾಮವಾಗಿ ಜೀವನದಲ್ಲಿ ಸೋಲನ್ನು ಕಾಣುತ್ತಾಳೆ.

ರಾಜೀನಾಮೆ ಕೊಟ್ಟು, ಹೊಸ ಕೆಲಸಕ್ಕೆ ಸೇರಲು ಬೇರೆ ಊರಿಗೆ ಹೊರಟ ಸರೋಜಾಕ್ಷರನ್ನು, ಪರಿಸ್ಥಿತಿಗಳ ಪರಿಣಾಮಗಳಿಂದ ಬೆರಗಾದ, ಸಂಸಾರದ ಎಲ್ಲಾ ವ್ಯಕ್ತಿಗಳೂ ಹಿಂಬಾಲಿಸಲು ಉದ್ಯುಕ್ತರಾಗುತ್ತಾರೆ. ಸಮಾಜದಲ್ಲಿ ಹಸಿರು ಹರಡಿಕೊಂಡಿರಬೇಕಾದ ಮರಗಳ ಎಲೆಗಳು ಪರಿಸ್ಥಿತಿಗಳ ಪರಿಣಾಮವಾಗಿ ವಿಷವೇರಿ ನೀಲಿಯಾಗಿದೆ ಎನ್ನುತ್ತಾರೆ ಕತೆಗಾರ್ತಿ ಶ್ರೀಮತಿ ಆಶಾಪೂರ್ಣಾದೇವಿ.

******

ಅಧ್ಯಾಯ ಒಂದು

ಪ್ರೊಫೆಸರ್ ಸರೋಜಾಕ್ಷ ಮೈತ್ರಾ. ಯಾವ ಕಡೆಯೂ ತಿರುಗದ ತಲೆಯನ್ನು ತಗ್ಗಿಸಿಕೊಂಡು ಹೋಗಿ ತಮ್ಮ ಗಾಡಿಯನ್ನು ಹತ್ತಿದರು. ಬಡವನು, ತನ್ನ ಧನವಂತನಾದ ಬಳಗದವನು, ಅಸಡ್ಡೆಯಿಂದ ನೀಡುವ ದಾನವನ್ನು ಪಡೆದು, ತಲೆತಗ್ಗಿಸಿಕೊಂಡು ಬರುವ ಹಾಗೆಯೇ ಇತ್ತು ಮೈತ್ರಾರವರ ಮುಖಭಾವ.

ಆಗಿದ್ದೇನೋ ಅವನಮಾನವೇ. ಮನುಷ್ಯನನ್ನು ಅವರುಗಳು ಅವಮಾನ ಮಾಡಿಯೇ ಕಡೆಗೆ ಹೊರಗೆ ಬರಲು ಬಿಟ್ಟರು. ಅಧ್ಯಾಪಕರ ಕಂಗೆಟ್ಟ ಮುಖವನ್ನು ನೋಡಿ ಅವರಲ್ಲಿ ಕೆಲವರಿಗೆ ಕರುಣೆಯೂ ಆಯಿತೇನೋ! ಅದಕ್ಕೇ ಕೆಲವರು ಹೇಳಿದರು :

"ಹೋಗಲಿ ಬಿಡಿ, ನೀವು ಹೋಗಿ"

ಅವರು ಗಾಡಿಯನ್ನು ಹತ್ತಿ ಕುಳಿತುಕೊಳ್ಳುತ್ತಿರುವಾಗ ಗುಂಪಿನ ಕಡೆಯಿಂದ ನರಿ ಕೂಗು ಕೇಳಿಸಿತು! ಇದುವರೆವಿಗೂ ಅವರುಗಳ ಪ್ರೀತಿಗೆ ಪಾತ್ರರಾದ ಮತ್ತು ಮಾನ್ಯರಾಗಿದ್ದ ಅಧ್ಯಾಪಕರ ದುರವಸ್ಥೆಯನ್ನು ನೋಡಿಯೇ ಹೀಗೆ ಮಾಡಿದರೇ! ಅಷ್ಟೇ ಅಲ್ಲದ ಅಶ್ಲೀಲವಾದ ಸಿಳ್ಳುಗಳೂ ಕೇಳಿಸಿತು.

ಆದರ ಇದೇನೂ ವಿಶೇಷವೇ ಅಲ್ಲ ಎಂದುಕೊಳ್ಳಬೇಕು. ಮಧ್ಯ ವಯಸ್ಸಿನ ಮನುಷ್ಯನನ್ನು ಇನ್ನೇನಾದರೂ ಮಾಡಿ ಆಸ್ಪತ್ರೆಗೆ ಕಳುಹಿಸದೆ, ಇಷ್ಟಕ್ಕೇ ಬಿಟ್ಟರಲ್ಲಾ! ಅದೇ ಹೆಚ್ಚು. ಒಂದು ಗುದ್ದು ಹಾಕಿ ಮೂಗು ಮುರಿಯಬಹುದಾಗಿತ್ತು, ಅಥವಾ ಕಪಾಲಕ್ಕೆ ಹೊಡೆದು ಹಲ್ಲು ಉದುರಿಸಬಹುದಾಗಿತ್ತು! ಸದ್ಯ ಅದೆಲ್ಲಾ ಏನೂ ಮಾಡಲಿಲ್ಲವಲ್ಲಾ! ಆದ್ದರಿಂದ ಆ ಹುಡುಗರನ್ನು ತಕ್ಕಮಟ್ಟಿಗೆ ಮರ್ಯಾದಸ್ಥರೆಂದೇ ಹೇಳಬೇಕು! ಸುಮ್ಮನೆ ಸಿಳ್ಳು ಹೊಡೆದು, ಕೂಗಾಡಿ, ಬಿಟ್ಟುಬಿಟ್ಟರಲ್ಲಾ! ಹುಕ್ಕಾಹುವಾ, ಹುಕ್ಕಾಹುವಾ ಎಂಬ ನರಿ ಕೂಗುಗಳು, ನಡೆಯುತ್ತಿದ್ದ ಅಧ್ಯಾಪಕರನ್ನು ಹಿಂಬಾಲಿಸಿತು. ಅವರು ಕೈಯಿಂದ ತಮ್ಮ ಕಿವಿಗಳನ್ನು ಮುಚ್ಚಿಕೊಳ್ಳಲೂ ಇಲ್ಲ, ಅಥವಾ ಹಿಂದಿರುಗಿ ಅವರುಗಳನ್ನು ಶಪಿಸಲೂ ಇಲ್ಲ. ಅನುಭೂತಿಯೇ ಮರಗಟ್ಟಿ ಹೋಗಿರುವ ಹಾಗಿದೆ ಅವರಿಗೆ. ಎದೆಯ ಮೇಲೆ ಯಾವುದೋ ಒಂದು ದೊಡ್ಡ ಕಲ್ಲು ಚಪ್ಪಡಿಯನ್ನು ಹೇರಿರುವ ಹಾಗೆ ಒಂದು ಭಾರದ ಅನುಭವ. ಹೃದಯ ಯಂತ್ರಕ್ಕೆ ಏನಾದರೂ ರೋಗ ಬರುವ ಮುನ್ಸೂಚನೆಯೋ! ಅಥವಾ ಭಯಂಕರವಾದ ಉತ್ತೇಜನೆಯಿಂದಾದ ಭಾರವೋ!

ಈ ಭಾರದ ಅನುಭವ ಮೊದಲು, ಕ್ಲಾಸಿನಲ್ಲೇ ಆಗಿತ್ತು. ಲೆಕ್ಚರ್ ಟೈಮಲ್ಲಿ ಅವರ ಕ್ಲಾಸಿನ ಹುಡುಗರು ಜೋರಾಗಿ, ರಾಜನೀತಿಯ ಬಗ್ಗೆ ಚರ್ಚೆ ಮಾಡಲು ಶುರುಮಾಡಿದ್ದರು.

ಅವರು ಹಲವು ಸಲ ನಿಷೇಧಿಸಿದರೂ, ಅವರುಗಳು ಚರ್ಚೆಯನ್ನು ನಿಲ್ಲಿಸುವುದಿರಲಿ, ಬದಲಾಗಿ ಜೋರಾಗಿ ಹೇಳಿದ್ದರು : "ಇದೋ, ಇಲ್ಲೊಬ್ಬರು, ಪಕ್ಕಾ ಬುರ್ಜೋವಾ, ಇವರಿಗೆ ನಿಜವನ್ನು ಕೇಳಿಸಿಕೊಳ್ಳುವಷ್ಟು ಧೈರ್ಯವೂ ಇಲ್ಲ!"

ಆಗಲೇ ಅವರಿಗೆ ಈ ಭಾರದ ಅನುಭವ ಆಗಿದ್ದು, ಜೊತೆಗೆ ತಮ್ಮ ಕೋಪದ ಮೇಲಿನ ಹತೋಟಿಯನ್ನು ಕಳೆದುಕೊಂಡಿದ್ದರು. ಕೂಗಿ ಹೇಳಿದ್ದರು–"ಗೆಟ್ ಅವುಟ್, ಯಾರು ಯಾರು ಗಲಾಟೆ ಮಾಡುತ್ತಿದ್ದೀರೋ ನನ್ನ ಕ್ಲಾಸಿನಿಂದ ಹೊರಗೆ ಹೋಗಿ" ಪ್ರೊಫೆಸರ್ ಮೈತ್ರಾರವರ ದೀರ್ಘವಾದ ಅಧ್ಯಾಪನೆಯ ಕಾಲದಲ್ಲಿ ಇಂತಹ ಘಟನೆ ನಡೆದಿರುವುದು ಇದೇ ಮೊದಲು ಎನ್ನಬೇಕು. ಅವರ ಗಂಟಲಿನಿಂದ ಇಂತಹ ರೂಕ್ಷಸ್ವರ ಹೊರಬರುವುದು ಸಾಧ್ಯ ಎಂಬುದು ಬೇರೆಯವರಿಗೆ ತಿಳಿಯುವುದಿರಲಿ, ಅವರಿಗೇ ತಿಳಿದಿರಲಿಲ್ಲವೇನೋ!

"ಕ್ಲಾಸಿನಿಂದ ಹೊರಗೆ ಹೋಗಿ", ಎಂಬ ಒಂದು ಮಾತನ್ನು ಅವರು ಕನಸಿನಲ್ಲಿಯೂ ಸಹ ಎಣಿಸಿರಲಿಲ್ಲವೇನೋ! ಏಕೆಂದರೆ ಇಂತಹ ಪರಿಸ್ಥಿತಿಯೇ ಎಂದೂ ಬಂದಿರಲಿಲ್ಲ. ಮೈತ್ರಾರವರು ಪಾಠ ಹೇಳುವ ರೀತಿಯಿಂದಲೂ, ನಡವಳಿಕೆ ಮತ್ತು ಗುಣಗಳಿಂದಲೂ ಎಲ್ಲರಿಗೂ ಶ್ರದ್ಧೆಯ ಮತ್ತು ಪ್ರೀತಿಯ ಪಾತ್ರರಾಗಿದ್ದರು.

ಹಾಗೆಂದರೆ ಕೋಪಿಸಿಕೊಳ್ಳುವಂತಹ ಪರಿಸ್ಥಿತಿಯೇ ಬಂದಿರಲಿಲ್ಲವೇ? ಕಾಲೇಜುಗಳಲ್ಲಿಯೂ ಇದ್ದೇ ಇರುತ್ತಾರಲ್ಲ ಕೆಲವು ವಿದ್ಯಾರ್ಥಿಗಳು! ವಿದ್ಯಾರ್ಥಿ ಎಂಬ ಪದಕ್ಕೆ ಅಯೋಗ್ಯ, ಅಸಭ್ಯ ಮತ್ತು ಅವಿಧೇಯ ಎಂಬ ಅರ್ಥ ತೋರುವ ಹಾಗೆ! ಗದರಿಸಿ ಹೇಳಬೇಕಾದ ಸಂದರ್ಭವೂ ಬಂದಿದೆ. ಆದರೆ ಪ್ರೊಫೆಸರ್ ಮೈತ್ರಾ ತನ್ನದೇ ಆದ ಒಂದು ಮೃದು ಮತ್ತು ದೃಢವಾದ ರೀತಿಯಿಂದ ಅದನ್ನು ಮಾಡಿದ್ದಾರೆ. ಅದು ಎಷ್ಟೋ ಸಲ ಕೋಪಿಸಿಕೊಂಡು ಹೇಳುವುದಕ್ಕಿಂತಲೂ ಫಲಪ್ರದವಾಗಿ ಇದ್ದಿದೆ. ಅವರು ಹೇಳುವ ರೀತಿಯ ಮುಂದೆ, ಅವಿಧೇಯತೆ, ಅಸಭ್ಯತೆ ನಾಚಿ ತಲೆ ತಗ್ಗಿಸಿದೆ.

ಆದರೆ ಇಂದು ಏನೋ ಬೇರೆ ತರಹ ನಡೆದುಹೋಯಿತು. ಇಂದು ಅಧ್ಯಾಪಕರೇ ತಲೆ ತಗ್ಗಿಸಿಕೊಂಡು ಬರಬೇಕಾಯಿತು.

ಪ್ರೊಫೆಸರ್ ಮೈತ್ರಾ ತಮ್ಮ ಕೋಪದ ಮೇಲಿನ ಹತೋಟಿಯನ್ನು ಕಳೆದುಕೊಂಡ ಆ ಕ್ಷಣವೇ ಇಷ್ಟು ವರ್ಷಗಳ ಸಾಧನೆಯಿಂದ ಗಳಿಸಿದ್ದ ಮರ್ಯಾದೆಯ ಪೀಠವನ್ನು ಕಳೆದುಕೊಂಡರು. ಒಂದು ಕ್ಷಣದಲ್ಲಿ ಏನೇನೋ ನಡೆದುಹೋಯಿತು.

ಅವರ ಸುತ್ತಲೂ ಅಡ್ಡ ಕಟ್ಟಿ ನಿಂತಿದ್ದ ಸಭ್ಯ ವೇಷಧಾರಿಗಳಾದ. ಸಭ್ಯ ಚಹರೆಗಳಲ್ಲಿ ಬದಲಾವಣೆಯಾಗಿತ್ತು. ಹಠಾತ್ತನೆ ಅವರಿಗೆ, ತಾವು ಗೂಂಡಾಗಳಿಂದ ಘೆರಾವ್ ಆಗಿದ್ದೇನೆ ಎಂಬ ಅರಿವು ಆಯಿತು. ಆಗ ಅವರಿಗೆ ಹಿಂದೆ ಒಮ್ಮೆ ತಮಗೆ ಆದ ಒಂದು ಅನುಭವದ ನೆನಪಾಯಿತು. ಅವರು ತಮ್ಮ ದೂರದ ನೆಂಟರೊಬ್ಬರ ಮಗಳ ಮದುವೆಯ ಆಹ್ವಾನವನ್ನು ಸ್ವೀಕರಿಸಿ ಅಲ್ಲಿಗೆ ಹೋಗಿ, ರಾತ್ರಿ ಬಹಳ ಹೊತ್ತಾದ ಮೇಲೆ ಮನೆಗೆ ಹಿಂದಿರುಗುತ್ತಿದ್ದರು.

ಆ ನಂಟರ ಮನೆಯಿಂದ, ದೊಡ್ಡ ರಸ್ತೆಗೆ ಬರಬೇಕಾದರೆ ಸುಮಾರು ದೂರವೇ ನಡೆಯಬೇಕಾಗಿತ್ತು. ರಸ್ತೆಯಲ್ಲಿ ಜನಸಂಚಾರ ಕಡಿಮೆಯಾಗಿತ್ತು. ಅದರ ಬಗ್ಗೆ ಅವರಿಗೆ ಭಯವೇನೂ ತೋರಲಿಲ್ಲ. ವಾತಾವರಣ ಶಾಂತವಾಗಿದೆಯೆಂದುಕೊಂಡು ನಾನಾ ವಿಷಯಗಳ ಬಗ್ಗೆ ಯೋಚಿಸುತ್ತಾ ನಡೆದಿದ್ದರು. ತಾವು ಆಗತಾನೆ ಹೋಗಿ ಬಂದ ಮದುವೆ ಮನೆಯ ವಿಷಯವಾಗಿ ಯೋಚನೆ ಹೊರಳಿತು. ನೆಂಟರಾದ 'ನಸು' ಮಾವ ಅವರು, ಅಂತಹ ಧನವಂತರೇನೂ ಅಲ್ಲದಿದ್ದರೂ, ಹೆಣ್ಣಿಗೆ ಕೊಟ್ಟಿದ್ದ ಬಳುವಳಿಗಳು ಒಳ್ಳೆಯ ಧನವಂತ ದರ್ಜೆಯಲ್ಲಿತ್ತು! ಈ ಮದುವೆ ನಡೆಯಬೇಕಾದರೆ, ಕೂಡಲೇ ಬೇಕಾಯಿತಂತೆ! ಇಲ್ಲದಿದ್ದರೆ ಇಷ್ಟು ಒಳ್ಳೆಯ ಗಂಡು ಕೈಬಿಟ್ಟು ಹೋಗುತ್ತಿತ್ತಂತೆ! ಆದ್ದರಿಂದ ತುಂಬಾ ಸಾಲ ಸೋಲ ಮಾಡಿ ನಸು ಮಾವನವರು, ಒಳ್ಳೆಯ ಗಂಡಿಗೆ ತಕ್ಕ ಹಾಗೆ ಒಳ್ಳೆಯ ದಕ್ಷಿಣೆಯನ್ನೇ ಕೊಟ್ಟಿದ್ದರು.

ಒಳ್ಳೆಯ ಗಂಡು! ಈ 'ಒಳ್ಳೆಯ'ದರ ಲಕ್ಷಣಗಳೇನು?!... ಸರೋಜಾಕ್ಷರು ಯೋಚಿಸುತ್ತಾ ಬರುತ್ತಿದ್ದರು. ಪಠಾತ್ತನೆ ನೆಲವನ್ನೇ ಭೇದಿಸಿಕೊಂಡು ಬಂದಂತೆ ಏಳೆಂಟು ಮಂದಿ ಅವರ ಸುತ್ತಲು ಮುತ್ತಿಗೆ ಹಾಕಿ ನಿಂತುಕೊಂಡರು. ಮತ್ತು ತಾವು ಸೆರೆಹಿಡಿದ ವ್ಯಕ್ತಿಯನ್ನು ಮೂದಲಿಸುವಂತ ಶಾಂತಸ್ವರದಲ್ಲಿ ಹೇಳಿದರು: "ಹುಂ. ಹತ್ತಿರ ಏನೇನಿದೆಯೋ ಅದೆಲ್ಲವನ್ನೂ ಸ್ವಲ್ಪ ತೆಗೆದು ಕೊಟ್ಟುಬಿಡು ಕಂದ!

ಅದೇ ತರಹದ ಧ್ವನಿಯಲ್ಲೇ ಸ್ವಲ್ಪ ಮುಂಚೆ ಅವರ ವಿದ್ಯಾರ್ಥಿಗಳು ಹೇಳಿದ್ದರು:–
'ಎಲ್ಲಿ, ಮತ್ತೆ, ಸರಸರನೆ ಅಪೊಲಜಿ ಕೇಳಿಕೊಂಡುಬಿಡಿ ಸಾರ್.'

ವಿದ್ಯಾರ್ಥಿಗಳ ಡಿಮ್ಯಾಂಡ್ ಅದೇ ಆಗಿತ್ತು. ಅದಕ್ಕೇ ಅವರುಗಳು ಅವರನ್ನು ಘೆರಾವ್ ಮಾಡಿದ ಅವರ ಬಿರುಸಿನ ಮಾತಿಗಾಗಿ ಅವರು ಕ್ಷಮೆ ಕೇಳಬೇಕಂತೆ!

ಹಿಂದಿನ ಸಂದರ್ಭದಲ್ಲಿ ಆ ಕಳ್ಳರು ಮುತ್ತಿಗೆ ಹಾಕಿ ಕೇಳಿದಾಗ, ಅವರ ಕೋರಿಕೆಯನ್ನು ಸರೋಜಾಕ್ಷರು ಸುಲಭವಾಗಿಯೇ ನೆರವೇರಿಸಿದ್ದರು. ಆಗ ಕೈಯಲ್ಲಿ ದುಡ್ಡು ಕಾಸೇನೂ ಹೆಚ್ಚಿಗೆ ಇಲ್ಲದಿದ್ದರೂ, ಬೆಲೆ ಬಾಳುವ ಕೈಗಡಿಯಾರ, ಉಂಗುರ ಮತ್ತು ಜುಬ್ಬಾದಲ್ಲಿ ಚಿನ್ನದ ಗುಂಡಿಗಳು ಇದ್ದುವು. ಅವರ ಮದುವೆ ಆಗಿಯೇ ಅಷ್ಟೊಂದು ವರ್ಷಗಳೇನೂ ಆಗಿರಲಿಲ್ಲ. ಆದ್ದರಿಂದ ಮದುವೆಯ ಬಳುವಳಿಗಳಾದ ಈ ವಸ್ತುಗಳು ಇದ್ದುವು. ಸರೋಜಾಕ್ಷರ ಮಾವನವರು ಒಳ್ಳೆಯ ಸ್ಥಿತಿವಂತರಾದ್ದರಿಂದ ಜಾಸ್ತಿ ಬೆಲೆ ಬಾಳುವ ಸಾಮಾನುಗಳನ್ನೇ ಕೊಟ್ಟಿದ್ದರು. ಆದರೆ ಆಗಿನ ಸಂದರ್ಭದ, ಪರಿಸ್ಥಿತಿಯ ಗಂಭೀರತೆಯನ್ನು ಅರಿತು. ಈ ಬೆಲೆಬಾಳುವ ಸಾಮಾನುಗಳನ್ನು ಉಳಿಸಿಕೊಳ್ಳುವ ಗೋಜಿಗೆ ಹೋಗದೆ. ಮರುಮಾತಾಡದೆ, ಗಡಿಯಾರ, ಉಂಗುರ, ಗುಂಡಿಗಳು, ಮೈ ಮೇಲಿದ್ದ ಶಾಲು, ಎಲ್ಲವನ್ನೂ ತೆಗೆದು ಕೊಟ್ಟಿದ್ದರು. ಜೇಬಿನಲ್ಲಿದ್ದ ಪರ್ಸನ್ನೂ ಸಹ. ಅವರು ಮೃದುವಾಗಿ ನಕ್ಕು ಅವರನ್ನು ಕೇಳಿದ್ದರು: "ರಾತ್ರಿ ಇಷ್ಟು ಹೊತ್ತಿನಲ್ಲಿ ಐದು ಮೈಲಿ ರಸ್ತೆ ನಡೆದು. ಮನೆಗೆ ಹೋಗುವುದು.

ಕಷ್ಟ" ಎಂದು, ಮತ್ತೆ ಅವರನ್ನೇ ಕೇಳಿ ಬಸ್ ಛಾರ್ಜಿಗೆ ಬೇಕಾದ ಏಳು ಪೈಸೆಗಳನ್ನು ತೆಗೆದು ಕೊಂಡಿದ್ದರು!

ಆದರೆ ಇಂದು ! ಮಾತಾಡದೆ ಆ ವಿದ್ಯಾರ್ಥಿಗಳ ಕೋರಿಕೆಯನ್ನು ಒಪ್ಪಿಕೊಳ್ಳಲು ಆಗಲಿಲ್ಲ. ಗಡಿಯಾರ ಮತ್ತು ಉಂಗುರ ಇತ್ಯಾದಿಗಳಿಗಿಂತ ಬೆಲೆ ಬಾಳುವ ಒಂದು ವಸ್ತುವನ್ನು ಕಾಪಾಡಿಕೊಳ್ಳಲು ಪ್ರಯತ್ನಿಸಿದರು. ಅವರುಗಳು, "ತಾವು ಕ್ಷಮೆಕೇಳಬೇಕು ಸಾರ್, ಕ್ಷಮೆ ಕೇಳಿಕೊಂಡು ನೀವು ಆಡಿದ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು" ಎಂದಾಗ ಸರೋಜಾಕ್ಷರೂ ಶಾಂತವಾಗಿಯೇ ಹೇಳಿದ್ದರು– 'ನಾನು ಅನ್ಯಾಯವಾಗಿ ಏನಾದರೂ ಹೇಳಿದ್ದರೆ ನಾನೇ ವಾಪಸ್ಸು ತೆಗೆದುಕೊಳ್ಳುತ್ತಿದ್ದೆ. ನಾನು ಕ್ಷಮೆ ಕೇಳಿಕೊಳ್ಳುತ್ತಿದ್ದೆ' ಎಂದು.

ಅಧ್ಯಾಪಕರಲ್ಲಿ ಗೌರವ ಮತ್ತು ಸಹಾನುಭೂತಿ ಇರುವಂತಹ ಹುಡುಗರೇ ಇಲ್ಲವೆಂದೂ ಹೇಳುವುದಕ್ಕಾಗುವುದಿಲ್ಲ. ಅನೇಕ ಮಂದಿ ಇದ್ದರು. ಇವರುಗಳ ಸಂಖ್ಯೆಯೇ ಹೆಚ್ಚಾಗಿಯೂ ಇರಬಹುದು. ಆದರೂ ಅವರುಗಳಿಗೆ, ಕೆಲವು ಮಂದಿ ಸಹಪಾಠಿಗಳು ನಡೆಸುತ್ತಿರುವ ಅಕ್ರಮವಾದ ಕೆಲಸವನ್ನು ಎದುರಿಸುವ ಧೈರ್ಯ ಇರಲಿಲ್ಲ. ಏಕೆಂದರೆ ಮುಂದಕ್ಕೆ ಈ 'ಕೆಲವೇ' ಮಂದಿಯಾದ 'ಗ್ಯಾಂಗ್'ನ ಆಕ್ರೋಷಕ್ಕೆ ತಾವು ಗುರಿಯಾಗುತ್ತೇವೆ ಮತ್ತು ಬಂದೂಕಿನ ಗುರಿ ತಮ್ಮ ಕಡೆಗೇ ತಿರುಗುತ್ತೆ ಎಂಬುದು ಗೊತ್ತು. ಮೆಲ್ಲಗೆ ಒಬ್ಬರಿಗೊಬ್ಬರು ಹೀಗೆ ಮಾಡಿದ್ದು ಸರಿಯಲ್ಲ, ಇಷ್ಟೆಲ್ಲಾ ಮಾಡಿದ್ದು ತಪ್ಪು ಎಂದುಕೊಂಡರು.

ಆದರೆ ಅವರುಗಳ ಮಾತು ಗಾಳಿಗೆ ಹಾರಿ ಹೋಗಿತ್ತು. ಹೌದು, ಸಂಖ್ಯೆಯಲ್ಲಿ ಇಂತಹ ಭಾವ, ಇರುವವರೇ ಹೆಚ್ಚು ಮಂದಿ ಇದ್ದರೂ ಸೋಲು ಇವರುಗಳಿಗೇನೆ ! 'ಗ್ಯಾಂಗಿ'ನ ಎದುರು ಸೋಲು ಇವರಿಗೇನೇ! ಸ್ವತಂತ್ರ ಚಿಂತನೆಯ ಸ್ವಂತ ಮತವನ್ನು ಸ್ವಾತಂತ್ರ್ಯದಿಂದ ವ್ಯಕ್ತಪಡಿಸುವ ಧೈರ್ಯ ಮತ್ತು ಶಕ್ತಿ ಇವರುಗಳಿಗಿಲ್ಲ. ವ್ಯಕ್ತಿ ಸ್ವಾತಂತ್ರ್ಯದ, ಚಿನ್ನದ ಮುಲಾಮಿನ ಮುಸುಕಿನಲ್ಲಿ ಅಡಗಿರುವ, ಅಮೋಘವಾದ ದಾಸ್ಯದ, ಬಲಿಪೀಠದ ಬಲಿಪಶುಗಳು ಇವರುಗಳು. ಅದಕ್ಕೇ, ಇವರ ಪೈಕಿ ಒಬ್ಬ ಬಂದು ಪ್ರೊಫೆಸರರ ಹತ್ತಿರ ಬಂದು ಸಲಹೆ ನೀಡುವ ಧ್ವನಿಯಲ್ಲಿ ಹೇಳಿದ – "ಏನಾದರೂ ಎರಡು ಮಾತು ಹೇಳಿ ಅವರನ್ನು ಶಾಂತಗೊಳಿಸಿ ಸಾರ್ ಬಹಳ ಭಯಂಕರರಾದ ಹುಡುಗರು ಅವರುಗಳು ಚಾಕು ಹೊರತೆಗೆಯುವುದಕ್ಕೂ ಹಿಂದೇಟು ಹಾಕುವುದಿಲ್ಲ."

ಆದರೆ ಈಗ ಸರೋಜಾಕ್ಷರಿಗೆ, ತಮ್ಮ ಹುದ್ದೆಯೋ ಅಥವಾ ಆತ್ಮಗೌರವವೋ? ಇವೆರಡರಲ್ಲಿ ಯಾವುದಕ್ಕೆ ಹೆಚ್ಚು ಬೆಲೆ ಕಟ್ಟುವುದೆಂದು ನಿರ್ಧರಿಸಲು ಆಗಿರಲಿಲ್ಲ. ಅವರ ಮನಸ್ಸು ಒಂದು ನಿರ್ಧಾರಕ್ಕೆ ಬಂದಿರಲಿಲ್ಲ. ಆದ್ದರಿಂದ – ಎಷ್ಟರ ಮಟ್ಟಿಗೆ ಹೋಗುತ್ತಾರೆ, ನೋಡೋಣ ಎಂದಿದ್ದರು.

ಅವರು ಹಾಗೆ ಹೇಳಲು ಇನ್ನೂ ಒಂದು ಕಾರಣವಿತ್ತು. ಎಷ್ಟು ದಿನ ಹೀಗೆ ಘೆರಾವ್ ಮಾಡಿ ಇಟ್ಟುಕೊಳ್ಳುತ್ತಾರೆ ನೋಡೋಣ, ಎಷ್ಟು ದಿನ ಈ ನಾಟಕ ನಡೆದೀತು! ನನ್ನನ್ನು ಈ ನಾಟಕದ ಪ್ರೇಕ್ಷಕನೆಂದುಕೊಳ್ಳುತ್ತೇನೆ ಅಷ್ಟೇ ಎಂದುಕೊಂಡಿದ್ದರು.

ಅವರಲ್ಲಿ ಮರ್ಯಾದೆ ಇಟ್ಟಿದ್ದ ಆ ಹುಡುಗ ಹೇಳಿದ – "ಸಾಧಾರಣವಾದ ಒಂದು ವಿಷಯಕ್ಕಾಗಿ ಭಯಂಕರವಾದ ವಿಪತ್ತಿಗೊಳಗಾಗುತ್ತೀರಿ ಸಾರ್."

ಸರೋಜಾಕ್ಷರು ತಮ್ಮ ನಿರ್ಧಾರದಿಂದ ಅಲುಗದೆ– "ಸಾಧಾರಣವಾದ ವಿಷಯವೋ ಅಥವಾ ಅಲ್ಲವೋ ಲೆಕ್ಕ ಹಾಕುತ್ತಿದ್ದೇನೆ" ಎಂದರು.

ಸಂಖ್ಯೆಗಳೆಲ್ಲಾ ಛಿನ್ನಾ–ಭಿನ್ನವಾಗಿ ಹೋಯಿತೇನೋ!

ಕೆಲವು ಗಂಟೆಗಳೇ ಕಳೆದಿರಬೇಕು.

ಕ್ಲಾಸ್ ರೂಮಿನ ಪಕ್ಕದಲ್ಲಿದ ಹಾಲ್‌ನಲ್ಲಿಟ್ಟಿದ್ದ ಫೋನ್ ಗಂಟೆ ಬಾರಿಸಿತು. ತಕ್ಷಣವೇ ಒಬ್ಬ ಹುಡುಗ ರಿಸೀವರ್ ತೆಗೆದುಕೊಂಡು ಜವಾಬು ಹೇಳತೊಡಗಿದ– "ಓಹೋ, ಸಾರ್‌ರವರ ಮನೆಯಿಂದ ಮಾತಾಡ್ತಾ ಇದ್ದೀರಾ! ನೋಡಿ, ಅವರು ಮನೆಗೆ ಬರುವುದಕ್ಕೆ ಸ್ವಲ್ಪ ಹೊತ್ತಾಗುತ್ತೆ. ವಿಶೇಷವಾಗಿ ಒಂದು ಕೆಲಸದಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ.... ಯಾವಾಗ ಮುಗಿಯುವುದೊ....... ಅದು ಹೇಳುವುದಕ್ಕಾಗುವುದಿಲ್ಲ. ಅದು ಅವರ ಕೈಯಲ್ಲೇ ಇದೆ.... ಇಲ್ಲ ಕ್ಷಮಿಸಿ, ಅವರನ್ನು ಕರೆಯುವುದಕ್ಕಾಗುವುದಿಲ್ಲ"–

ಅವರುಗಳು ಟೆಲಿಫೋನನ್ನೂ ಘೆರಾವ್ ಮಾಡಿಟ್ಟಿದ್ದರು (ಅದಕ್ಕೇ ಯಾರಿಗೂ ಅದನ್ನು ಉಪಯೋಗಿಸಲು ಸಾಧ್ಯವಾಗಿರಲಿಲ್ಲ). ಬೇರೆ ಪ್ರೊಫೆಸರುಗಳಿಗಾಗಲೀ, ಸದ್ಬುದ್ಧಿಯುಳ್ಳ ಕ್ಲರ್ಕ್ ದರ್‌ವಾನ್‌ರಾಗಲಿ ಯಾರಿಗೂ ಸಾಧ್ಯವಾಗಿರಲಿಲ್ಲ. ಅಂತೂ ಎಲ್ಲರೂ ಒಮ್ಮೆ ಪೊಲೀಸಿನ ಬಗ್ಗೆ ಯೋಚಿಸಿದ್ದರು.

ಪ್ರೊಫೆಸರ್ ಮೈತ್ರಾರವರು, ಯಾವುದೋ ಒಂದು ಮತ್ತಿನ ಔಷಧಿಯ ಪ್ರಭಾವದಿಂದ ಆವರಿಸಿದವರಂತೆ ಕುಳಿತಿದ್ದರು. ಕ್ರಮೇಣ ಹುಡುಗರ ಮಾತಿನ ಮೃದುಧ್ವನಿ, ಬಿಸಿಯಾದ ತರ್ಕ–ವಿತರ್ಕಕ್ಕೆ ತಿರುಗಿ, ಕೂಗಾಡತೊಡಗಿದ್ದರು. "ಆಗೋದೇ ಇಲ್ಲ, ಎಪೋಲಜಿ ಕೇಳಿಕೊಳ್ಳದಿದ್ದರೆ ಒಂದು ಹೆಜ್ಜೆಯೂ ಆಚೆ ಹೋಗಲು ಬಿಡುವುದಿಲ್ಲ. "ತೋಳ ಮಹಾಶಯ ಯಾವಾಗಲೂ ಕುರಿಗಳನ್ನೇ ಅಟ್ಟಿಸಿದ್ದಾರೆ. ಈಗ ಹಳ್ಳ ಇರೋದನ್ನೂ ತಿಳಿದುಕೊಳ್ಳಲಿ", "ಪೊಲೀಸನ್ನು ಕರೀತಾರಾ?..... ಯಾರು ಕರೀತಾರೆ?.. ಪ್ರಿನ್ಸಿಪಾಲರೇ? ಕರೆಯಲಿ ನೋಡೋಣ ಎಷ್ಟು ಗಂಡಸ್ತಿಕೆ ಇದೆ ಅಂತಾ....."

ಸರೋಜಾಕ್ಷರು ಆಶ್ಚರ್ಯದಿಂದ ಅವರುಗಳ ಮಾತನ್ನು ಆಲೈಸುತ್ತಿದ್ದರು. ಇವರುಗಳೇನಾ ತಮ್ಮ ಹತ್ತಿರ ಪಾಠ ಕೇಳುತ್ತಿದ್ದವರು! ಸಭ್ಯ ಚಹರೆಯನ್ನು ಹೊತ್ತು ಕುಳಿತುಕೊಳ್ಳುತ್ತಿದ್ದವರು! ಎನ್ನಿಸಿ ಅವರಿಗೆ ದಿಗ್ಭ್ರಮೆ ಜಾಸ್ತಿಯಾಗತೊಡಗಿತ್ತು.

ಫೋನಿನಲ್ಲಿ ನಡೆದ ಮಾತುಕತೆ ಕೇಳಿದ ಮೇಲೆ ಎಚ್ಚರಿಕೆಯಾಯಿತು. ಚಿಂತೆಯ ಪರದೆಯ ಮೇಲೆ ದೃಶ್ಯಗಳು ಒಂದೊಂದಾಗಿ ಬಂದುವು. ಮನೆಯವರ ಕಳವಳ. ಒಬ್ಬರಿಂದೊಬ್ಬರಿಗೆ ಸಮಾಚಾರದ ತಿಳುವಳಿಕೆ, ಪೊಲೀಸರ ಸಹಾಯ ಬೇಡಿಕೆಯೊಂದಿಗೆ ಉದ್ಧಾರ, ಆಶ್ವಾಸನೆಯನ್ನು ನೀಡುವ ವ್ಯಾನಿನಲ್ಲಿ ಕುಳಿತು ಮನೆಗೆ ಓಟ! ಮಾರನೆಯ ದಿನ ಪತ್ರಿಕೆಯಲ್ಲಿ ಇದರ ಬಗ್ಗೆ ಹೆಡ್‌ಲೈನ್, ಬಂಧು–ಬಳಗ ಮತ್ತು ಹಿತೈಷಿವರ್ಗದ ವಿಸ್ಮಯದ

ಪ್ರಶ್ನೆಗಳು ಮತ್ತು ವೇದಾಂತವಾದ, ಅದರ ಜೊತೆ ಸಹಾನುಭೂತಿಯ ಸುರಿಮಳೆ, ... ಎಷ್ಟು ನಾಚಿಕೆಗೇಡು! ಎಷ್ಟು ನಾಚಿಕೆಗೇಡು!!

ಆಮೇಲೆ ಜ್ಞಾಪಕಕ್ಕೆ ಬಂತು. ಬಾಗಿಲಲ್ಲಿ ಕೆಲವು ಪರಿಚಿತವಾದ ಮುಖಗಳನ್ನೂ ಕಂಡಂತಿತ್ತು. ಅವುಗಳಲ್ಲಿ ಉದ್ವಿಗ್ನತೆ, ಭಯ, ನಿರುಪಾಯತೆ, ಹತಾಶರಾದಂತಹ ಭಾವಗಳು ಕಂಡಿತ್ತು. ಇವರುಗಳು, ಆ ಹುಚ್ಚು ಹುಡುಗರಿಗೆ ಏನಾದರೂ ಹೇಳಲು ಹೋಗಿ, ಸೋತು ಹಿಂದಕ್ಕೆ ಸರಿದಿರಬಹುದು. ಅವರುಗಳ ಪೈಕಿ ಅಧ್ಯಕ್ಷರ ಮುಖವನ್ನೂ ಕಂಡರೇ? ಜ್ಞಾಪಕ ಬರುತ್ತಿಲ್ಲ. ಅದರಲ್ಲಿ ಸ್ವಲ್ಪ ಜಿಗುಪ್ಸೆಯ ಭಾವವೂ ಇತ್ತೇನೋ! ಅದು ಒಂದು ಆಪಾದನೆಯ ಭಾವವನ್ನೂ ತೋರಿತ್ತೇ? 'ಇದೇನು ಮಾಡಿಕೊಂಡೆಯೋಪ್ಪಾ, ಗೊತ್ತೇ ಇದೆಯಲ್ಲಾ ನಾವು ವಿಷಸರ್ಪಗಳ ಜೊತೆ ವಾಸ ಮಾಡುತ್ತಿದ್ದೇವೆ ಅಂತ, ಯಾಕೆ ಅದರ ಬಾಲ ತುಳಿಯಲು ಹೋದೆ?' ಎಂಬುವ ಹಾಗಿತ್ತೇ!

ಅಂದರೆ, ಇದರ ಹೊಣೆಯನ್ನು ಯಾರೂ ಹೊರಲು ತಯಾರಾಗಿಲ್ಲ! ಸಂಕಲ್ಪದಲ್ಲಿ ಸ್ವಲ್ಪ ಬಿರುಕು ಬಿಟ್ಟುಕೊಂಡಿತು. ಅವಾಂತರದ ದೃಶ್ಯಗಳು ಕಣ್ಣು ಮುಂದೆ ಹಾಯ್ದು ಹೋದುವು.

ಒಂದು ಒಪ್ಪಂದಕ್ಕೆ ಬರಲೇಬೇಕಾಯಿತು. ಬೇರೆ ಯಾರೊಂದಿಗೂ ಅಲ್ಲ. ತಮ್ಮೊಂದಿಗೆಯೇ! ಮುಂದೆ ತಮ್ಮ ನಡೆವಳಿಕೆಯ ಬಗ್ಗೆ ಯೋಚಿಸುವುದು ಆಮೇಲೆ ಆಗಲಿ, ಈಗ ಸದ್ಯಕ್ಕೆ ಈ ಪರಿಸ್ಥಿತಿಯನ್ನು ಅಂತ್ಯಗೊಳಿಸುವುದು ಮೊದಲ ಕೆಲಸ. ಇಲ್ಲದಿದ್ದರೆ ಇನ್ನು ಸ್ವಲ್ಪ ಹೊತ್ತಿಗೆಲ್ಲಾ ಅವರ ದೊಡ್ಡ ಮಗ ಘಟನೆ ನಡೆದ ಸ್ಥಳಕ್ಕೆ ಬಂದು, 'ನೋಡೋಣ, ಅಪ್ಪ ಅದೆಂತಹ ತೊಡಕಿನಲ್ಲಿ ಸಿಕ್ಕಿಬಿದ್ದಿದ್ದಾರೆ' ಎಂದು ಬರಬಹುದು. ಜಿದ್ದು ಸ್ವಭಾವದವ, ಪೊಲೀಸು ಠಾಣೆ ಎಂದು ಪರಿಸ್ಥಿತಿಯನ್ನು ಇನ್ನೂ ನರಕ ಮಾಡಿಬಿಡಬಹುದು.

ತಮ್ಮ ಸಂಕಲ್ಪವನ್ನು ಕೈಬಿಟ್ಟರು.

ಕ್ಷಮೆ ಬೇಡಿದರು.

ಎದ್ದು ನಿಂತು, ಗಂಟಲನ್ನು ಸರಿಪಡಿಸಿಕೊಂಡು ಹೇಳಿದರು : "ನೀವುಗಳು ನನ್ನನ್ನು ಕ್ಷಮೆ ಬೇಡಲು ಹೇಳಿದಿರಿ. ಇಷ್ಟು ಹೊತ್ತು ಯೋಚಿಸುತ್ತಿದ್ದೆ, ಕ್ಷಮೆ ಕೇಳಬೇಕಾದಂತಹ ಕೆಲಸವನ್ನು ನಾನು ಮಾಡಿದ್ದೇನೆಯೇ ಎಂದು......"

ಗುಂಪಿನಲ್ಲಿ ಗುಂಜನ ಧ್ವ ನಿ ಕೇಳಿಸಿತು–"ಹೂಂ. ಹಾಗೆ ಬಾಪ್ಪಾ ದಾರಿಗೆ........"

ಅಧ್ಯಾಪಕ ಮೈತ್ರಾ ಮಾತು ಮುಂದುವರಿಸಿದರು: ನೋಡಿದೆ. ಕ್ಷಮೆ ಕೇಳುವುದೇ ಸರಿ ಎನ್ನಿಸಿತು. ಬರೀ ನಾನು ಮಾತ್ರ ಅಲ್ಲ, ಈ ಇಡೀ ಕೇಂದ್ರವೇ ಕ್ಷಮೆ ಕೇಳಬೇಕು. ಏಕೆಂದರೆ ಪ್ರತಿನಿತ್ಯವೂ ನಿಮ್ಮನ್ನು ನಾವು ಮೋಸಗೊಳಿಸುತ್ತಿದ್ದೇವೆ. ನಿಮಗೆ ನಾವು, ಶಿಕ್ಷಣ, ಸಂಸ್ಕೃತಿ, ಸಭ್ಯತೆ, ನಮ್ರತೆ, ಇವುಗಳನ್ನು ಕಲಿಸುವುದಾಗಿ ಹೇಳಿಕೊಂಡು ನಿಮ್ಮಿಂದ ರಾಶಿರಾಶಿ ದುಡ್ಡನ್ನು ತೆಗೆದುಕೊಳ್ಳುತ್ತಿದ್ದೇವೆಯೇ ಹೊರತು ಅವನ್ನು ಕಲಿಸಲು ಸಾಧ್ಯವಾಗಿಲ್ಲ.

ಕಲಿಸುತ್ತಿದ್ದೇವೆಯೇ ಎಂದು ನಾವು ಒಂದು ಸಲ ಯೋಚಿಸಿಯೂ ನೋಡಿಲ್ಲ. ಈ ಮೋಸಗಾರಿಕೆಗಾಗಿ ಕ್ಷಮೆ ಕೇಳಿಕೊಳ್ಳುತ್ತೇನೆ........"

ಅವರು ಇನ್ನೂ ಏನಾದರೂ ಹೇಳುತ್ತಿದ್ದರೋ ಏನೋ, ಘೆರಾವ್ ಮಾಡಿ ನಿಂತಿದ್ದ ಗುಂಪಿನ ಹಿಂದಿನಿಂದ ಕೋಳಿ ಕೂಗುಗಳು ಕೇಳಿಸಿತು. ಆ ಮೇಲೆ ಅನೇಕ ಮಂದಿಯ ಕೇಕೆಯ ನಗು–'ಸೆಂಟಿಮೆಂಟ್ ಮೇಲೆ ಹೊಡೆದು ಮಾತಾಡ್ತಾ ಇದೆ ಕಣೋ! ಅದೆಲ್ಲಾ ಏನೂ ಪ್ರಯೋಜನವಿಲ್ಲಮ್ಮಾ, ಆ ಕಾಲ ಹೊರಟುಹೋಯಿತು.' ಸರೋಜಾಕ್ಷರಿಗೆ, ಪಕ್ಕದಲ್ಲೇ ಒಂದು 'ಫರ್ನೆಸ್' ಉರಿಯುತ್ತಿರುವಂತೆ ಭಾಸವಾಯಿತು. ಅದರ ಬಿಸಿಗಾಳಿ, ಅವರ ಮುಖ–ಕಿವಿ ಮತ್ತೆ ತಲೆಯ ಮೇಲೆ ಬೀಸುವ ಹಾಗಿತ್ತು. ಆದರೂ ಕಷ್ಟಪಟ್ಟು ಹೇಳಿದರು– "ಹೌದು, ಇದು ಸುಮ್ಮನೆ ಜೋಡಿಸಿದ ಮಾತಲ್ಲ. ಈ ಕ್ಷಣದಲ್ಲಿ ಖಂಡಿತವಾಗಿಯೂ ಸತ್ಯವೆನಿಸುತ್ತದೆ. ನಾವು, ನಿಮ್ಮನ್ನು ಮೋಸ ಮಾಡಿಕೊಂಡು ಬರುತ್ತಿದ್ದೇವೆ. ನಿಮ್ಮ ಗಾರ್ಡಿಯನ್ನರು ನೆತ್ತಿ ಬೆವರು ಕಾಲ ಮೇಲೆ ಸುರಿಸಿಕೊಂಡು ದುಡಿದು ಸಂಪಾದಿಸಿದ ದುಡ್ಡನ್ನು ದುರುಪಯೋಗಪಡಿಸಿದ್ದೇವೆ. ಅವರ ನಂಬಿಕೆಗೆ ದ್ರೋಹ ಮಾಡಿದ್ದೇವೆ. ನಮ್ಮ ಮನಸ್ಸಾಕ್ಷಿಗೆ ಹೇಳುವುದಕ್ಕೇ ನಮ್ಮ ಹತ್ತಿರ ಜವಾಬು ಇಲ್ಲ. ಇನ್ನು ನಿಮಗೆ ಏನು ಹೇಳಲಿ. ಹೀಗೆ ಇದ್ದಕ್ಕಿದ್ದಂತೆ ಒಂದು ದಿನ ನಿಮ್ಮನ್ನು ಶಿಕ್ಷಿಸಲು ಹೋದುದು ನನ್ನದೇ ತಪ್ಪು. ಅದಕ್ಕಾಗಿ ನಾನು ಕ್ಷಮೆ ಕೇಳಲೇಬೇಕು."

ಗುಜುಗುಜು ಮಾತಿನ ಧ್ವನಿ ಇನ್ನೂ ಜೋರಾಯಿತು.

ಅಧ್ಯಾಪಕರು ಕ್ಷಮೆ ಕೇಳುವ ರೀತಿಯಲ್ಲಿ ಇನ್ನೂ ಏನೋ ಒಂದು ಅರ್ಥ ಅಡಗಿರುವ ಹಾಗಿದೆ! ಆದರೂ, ಮಾಡಿದ ಅನ್ಯಾಯಕ್ಕಾಗಿ ಕ್ಷಮೆ ಕೇಳಿದುದೂ ಆಗಿದೆ! ಈಗ ಏನು ಮಾಡುವುದು!?

'ಬಿಟ್ಟುಬಿಡಪ್ಪಾ, ಬಿಟ್ಟುಬಿಡು' ಎಂದಿತು ಒಂದು ಅಶ್ಲೀಲ ಧ್ವನಿ.

ಆಮೇಲೆ ಯಾರೋ, ಯಾರನ್ನೋ, ಏನೋ ಕೇಳಿದರು ಪ್ರಶ್ನೆ, ಪ್ರತ್ಯುತ್ತರಗಳು,– 'ಹಾಗೆಯೇ ಇಟ್ಟುಕೋ, ಇದು ಮೊದಲನೆಯ ಸಲದ ತಪ್ಪು, ಇದನ್ನೇ ತೆಗೆದುಕೊಂಡು ಇನ್ನು ಗಲಾಟೆ ಮಾಡಬೇಡಿ. ಕ್ಷಮೆ ಕೇಳಿದ್ದು ಖಚಿತವಾಯಿತು. ಅದೇ ರೆಕಾರ್ಡ್ ಆಗಿರುತ್ತೆ'– ಇತ್ಯಾದಿಗಳು.

ಅಂತೂ ಅವರುಗಳು ಘೆರಾವ್ ಮಾಡಿದ್ದ ಗೋಡೆಯನ್ನು ಚದುರಿಸಿ ಸರಿದು ಹೋದರು. ಕರುಣೆಯ ಧ್ವನಿಯಲ್ಲಿ ಹೇಳಿದರು. ಸರಿ, ಮತ್ತೆ ನೀವು ಹೋಗಿ: ಯಾವುದೋ ಅಪರಾಧದ ನಾಟಕದಲ್ಲಿ ಸಿಕ್ಕಿಬಿದ್ದ ನಾಯಕನಂತೆ ಸರೋಜಾಕ್ಷರು ತಲೆ ತಗ್ಗಿಸಿಕೊಂಡು ನಿಧಾನವಾಗಿ ಹೋಗಿ ಅವರ ಗಾಡಿಯನ್ನು ಹತ್ತಿದರು. ಕದಲಿದ ಘೆರಾವ್ ಗೋಡೆಯ ಒಂದು ಭಾಗದ ಗುಂಪು: 'ಇದಿಷ್ಟನ್ನು ಇನ್ನೂ ಮುಂಚೆಯೇ ಹೇಳಬಹುದಾಗಿತು, ಸುಮ್ಮನೆ ಗೋಳು ಹುಯ್ಕೊಂಡ್ರಿ'; ಎಂದಿತು.

ಆಮೇಲೆ ಕೇಳಿಸಿದ ನರಿಕೂಗುಗಳ ಧ್ವನಿ ತಮ್ಮನ್ನು ಅಟ್ಟಿಸಿಕೊಂಡು ಬಂದಂತಾಯಿತು ಮೈತ್ರಾರವರಿಗೆ, 'ನಾನು ಸೋತುಹೋದೆ' ಎನ್ನಿಸಿತು.

ಮನಸ್ಸಿನ ಆಳದಲ್ಲಿ ನಿಶ್ಯಬ್ದವಾದ ನಿಟ್ಟುಸಿರಿನೊಂದಿಗೆ ಅವರು ಹೇಳಿಕೊಂಡರು- 'ಹೀಗೆ ನಡೆಯಬಹುದೆಂದು ಕನಸಿನಲ್ಲೂ ಎಣಿಸಿರಲಿಲ್ಲ! ನನ್ನದೇ ತಪ್ಪು ಇದ್ದಿರಬಹುದೇ? ರಾಜನೀತಿಯ ವಿಷಯ ಮಾತಾಡಿಕೊಂಡು ಉತ್ತೇಜನಗೊಳಗಾಗುವುದು ಸ್ವಾಭಾವಿಕವೇ. ನಾವುಗಳೂ ಆಗುತ್ತಿದ್ದೆವು, ನಿಜ. ಆದರೆ ಹೀಗೆ ಅಸಭ್ಯತೆಯಿಂದ, ನಾಚಿಕೆಗೇಡಿತನದಿಂದ ನಡೆದುಕೊಳ್ಳುತ್ತಿದ್ದೆವೆ? ಇವರುಗಳು ಯಾವುದೋ ಒಂದು ಅವ್ಯಕ್ತ ಶಕ್ತಿಯ ಆಟದ ಗೊಂಬೆಗಳಾಗಿ, ಬೇಕೆಂತಲೇ, ತಿಳಿದೇ ಈ ತರಹ ಉತ್ತೇಜಿತರಾಗುವ ತರಹ ಇದೆ. ತಾವು ಹೀಗಿರಲಿಲ್ಲ. ಶಾಸಕವರ್ಗದ ಅತ್ಯಾಚಾರ, ಅನಾಚಾರಗಳನ್ನು ನೋಡಿ, ದೇಶದ ಜನರ ಅಸಹಾಯತೆ ಮತ್ತು ಉದಾಸೀನತೆಯನ್ನು ನೋಡಿ ಉತ್ತೇಜನೆಯನ್ನು ಹೊಂದಿದ್ದೇವೆ. ಆದರೆ ಇವರುಗಳ ರಾಜನೀತಿಯೇ ಬೇರೆ.

ಇವರುಗಳ ಉತ್ತೇಜನೆಯ, ಉನ್ಮತ್ತತೆಯ ಮೂಲ ಕಾರಣವೇ ಬೇರೆ. ಇವರುಗಳು ಮೂಢರು ಕುರುಡರು. ಇವರುಗಳು ಯಾವುದೋ ಒಂದು ಸಿದ್ಧಾಂತದ ಬಲಿಪಶುಗಳಷ್ಟೇ! ಆದ್ದರಿಂದ ಇವರು ತಾವಾಗಿ ಉತ್ತೇಜನಗೊಳ್ಳುವುದಿಲ್ಲ. ಬೇಕೆಂದೇ ಗೊಂದಲಗಳನ್ನುಂಟು ಮಾಡುತ್ತಾರೆ. ವಿದ್ಯಾರ್ಥಿಯ ವೇಷದಲ್ಲಿ ಬಂದು ನಿಜವಾದ ವಿದ್ಯಾರ್ಥಿಗಳಿಗೇ ಅನಿಷ್ಟವನ್ನು ಮಾಡಲು ಬಂದಿದ್ದಾರೆ. ಅದಕ್ಕಾಗಿಯೇ ಆಗಿದೆ ಈ ಅಗ್ನಿ ನಾಟಕದ ಸೃಷ್ಟಿ.

ಸರೋಜಾಕ್ಷರಿಗೆ ಇವರುಗಳ ಬಗ್ಗೆ ಗೊತ್ತಿಲ್ಲದೆ ಇಲ್ಲ. ಆದರೆ ಅವರು, ತಮ್ಮಿಂದ ಎರಡು ಮಾರು ದೂರದಲ್ಲೇ ಕೂತು ಗುಂಡು-ಮದ್ದು ತಯಾರಿಸುತ್ತಾರೆ ಮತ್ತು ತಾನೇ ಅದರ, ಮೊದಲ ಬಲಿಪಶುವಾಗುತ್ತೇನೆ ಎಂದು ಅವರು ಕನಸಿನಲ್ಲೂ ಎಣಿಸಿರಲಿಲ್ಲ.

ಇನ್ನು ಮೇಲೆ ಅಧ್ಯಯನ, ಮತ್ತು ಅಧ್ಯಾಪನೆಯ ಶಾಂತ ವಾತಾವರಣವನ್ನು ಈ ಬಿರುಗಾಳಿ ಕಲೆಸಬಹುದು. ಮಂಗಳ ಮಂತ್ರವನ್ನು ಹೇಳುವಂತೆ ನಟಿಸಿಕೊಂಡು ಹಿತ್ತಲ ಬಾಗಿಲಿನಿಂದ ಅಮಂಗಳ ನುಗ್ಗಿ ಬರುತ್ತಿದೆ! ಶಾಂತಿಯ ಮಾರುವೇಷದಲ್ಲಿ ಅಶಾಂತಿ ಮುಂದುವರಿಯುತ್ತಿದೆ. ಸರ್ವನಾಶವನ್ನು ಬಯಸುವ, ಅಶುಭ ಬುದ್ಧಿಯ, ಸಾರಾಯಿಯ ಮದದಿಂದ ಕೊಬ್ಬಿದ ಒಂದು ಶಕ್ತಿ, ಜೀವನದಲ್ಲಿ ಅನಾದಿಯಾಗಿ ಬೆಳೆದು ಬಂದಿರುವ, ಶ್ರದ್ಧೆ, ಸನ್ಮಾನ, ಆಶ್ವಾಸನೆ, ವಿಶ್ವಾಸ, ಪ್ರೀತಿ ಮುಂತಾದುದರ ಬೆಲೆಗಳನ್ನೆಲ್ಲಾ ಕಿತ್ತೊಗೆದು, ತುಳಿದುಹಾಕುತ್ತಿದೆ! ಸರೋಜಾಕ್ಷರು ಈಗ ಏನು ಮಾಡಬೇಕು? ಕೆಲಸಕ್ಕೆ ರಾಜೀನಾಮೆ ಕೊಡುವುದೇ? ಅಥವಾ ತಲೆ ತಗ್ಗಿಸಿಕೊಂಡು ನಮ್ರತೆಯಿಂದ ದಾಸ್ಯವನ್ನು ಸ್ವೀಕರಿಸುವುದೇ?

ಹೌದು, ರಾಜೀನಾಮೆ ಕೊಡುವ ಪ್ರಶ್ನೆಯೂ ಮನಸ್ಸಿನಲ್ಲಿ ಏಳುತ್ತದೆ.

ಇದು ಕೇವಲ ಕೆಲವು ಹುಡುಗರ ಉದ್ಧಟತನದ ವಿಷಯ ಮಾತ್ರವೇ ಅಲ್ಲ. ಇದರ ಹಿಂದೆ ಸರೋಜಾಕ್ಷರಂತಹ ಅಸಹಾಯಕರಾದಂತಹ ವ್ಯಕ್ತಿಗಳೂ ಕಾರಣರಾಗಿ ಕಾಣುತ್ತಾರೆ. ಇದು, ಇವರ ಕಾಲ ಮುಗಿಯಿತೆಂಬ ನೋಟೀಸೇನೋ! ಅವ್ಯಕ್ತ ಚಿತ್ರಗಳು ಕಣ್ಣು ಮುಂದೆ

ಹಾಯ್ದು ಹೋಗುತ್ತಿದೆ! ಅವರುಗಳು ಹೇಳುವಂತಿದೆ– ‘ಇದುವರೆಗೆ ನೀವುಗಳು ನೀತಿಪಾಠವ ಮಾಲೆಯನ್ನು ನಮ್ಮ ಕೊರಳಿಗೆ ಹಾಕಿ ಅಲಂಕರಿಸಿ ಕೂಡಿಸಿ, ಕೇಳುವವರಿಲ್ಲದೆ, ಶ್ರದ್ಧೆಯ, ಸನ್ಮಾನದ ಆಸನವನ್ನು ಆಕ್ರಮಿಸಿಕೊಂಡಿದ್ದಿರಿ. ಬೇಕಾದ ಸಲಿಗೆಗಳನ್ನು ಪಡೆದುಕೊಂಡು ಬಂದಿರಿ. ಇನ್ನು ಮುಂದೆ ಇದೆಲ್ಲಾ ನಡೆಯುವುದಿಲ್ಲ.

‘ಈ ಪ್ರಪಂಚಕ್ಕೆ ನೀವುಗಳು ಬಂದು ಕೆಲ ಕಾಲಾನಂತರ ನಾವು ಬಂದೆವು ಎಂದು, ಯಾವಾಗಲೂ ನಿಮ್ಮ ಪಾದಪೂಜೆ ಮಾಡಿಕೊಂಡಿರಬೇಕು ಎಂದು ತಿಳಿದುಕೊಂಡಿರುವ ಮೂರ್ಖತೆಯ ಕಾಲ ಹೊರಟುಹೋಯಿತು. ನಿಮ್ಮಿಂದ ಬರೆಯಲ್ಪಟ್ಟ ಈ ಸುಳ್ಳು ಭವ್ಯತೆಯ ಮುಖವಾಡವನ್ನು ಕಿತ್ತೊಗೆದು, ಯಾವುದು ನಗ್ನ ಸತ್ಯವಾಗಿದೆಯೋ, ಅಪ್ಪಟವಾಗಿದೆಯೋ, ಆ ಆದಿ ಮಾನವನ ವಂಶಜನೆನಿಸಿಕೊಳ್ಳಲು ತಿರುಗಿ ಕಾಡು ಮೃಗಗಳಾಗುತ್ತೇವೆ. ಪಶುತ್ವಕ್ಕೆ ಹಿಂದಿರುಗುತ್ತೇವೆ.”

ಅವರುಗಳ ನರಿಕೂಗು, ಕೋಳಿ ಕೂಗು ಮತ್ತು ಸಿಳ್ಳುಗಳಲ್ಲಿ ಈ ಭಾವನೆಯ ಭಾಸವೇ ತೋರಿತು. ಈ ಭಾವನೆಯ ಹಿಂದೆ ಅಡಗಿದೆ ಒಂದು ಪ್ರಬಲ ದೈತ್ಯ ಶಕ್ತಿ.

ಸರೋಜಾಕ್ಷರ ಚಿಂತನೆಯ ಓಟ ಸ್ಥಿಮಿತದಲ್ಲಿರಲಿಲ್ಲ. ಅವರು ಸರಿಯಾಗಿ ಯೋಚಿಸಲು ಶಕ್ತರಾಗಿರಲಿಲ್ಲ. ಅವರು ತಮ್ಮ ತರಗತಿಯ ಹುಡುಗರ ಕಣ್ಣಲ್ಲಿ ಈ ಭಾಸವನ್ನು ಇಂದೇ ಮೊದಲು ನೋಡಿದರೇ? ಅವರ ಚಿಂತನಾಸಾಗರದಲ್ಲಿ ಅಲೆಗಳು ಸುಮ್ಮನೆ ಎದ್ದು ಬೀಳುತ್ತಿದ್ದುವು.

ಅವರು ತಮ್ಮ ಸಂಸಾರದ ಆವರಣದೊಳಗೆಯೇ ಇದರ ಛಾಯೆಯನ್ನು ಕಂಡಿಲ್ಲವೇ? ಮಧ್ಯೆ ಮಧ್ಯೆ ಹಠಾತ್ತನೆ ಯಾವುದಾದರೊಂದು ಘಟನೆಯ ಮೂಲಕ, ತಮಗೆ ಪರಿಚಿತವಾದಂತಹ ಜಗತ್ತಿನ ಪರಿಧಿಯೊಳಗೆಯೇ ನೋಡಿಲ್ಲವೇ? ಆದರೆ ಈವತ್ತು ಮಾತ್ರ ಏಕೆ ಇಷ್ಟು ಕಳವಳಗೊಂಡರು? ಏಕೆ ಹೀಗೆ ಕಣ್ಣಿಗೆ ಕಾಣದ ಒಂದು ಕತ್ತಲಾದ ಮೂಲೆಯಿಂದ, ಒಂದು ಗುಂಪು ಬಾವಲಿಗಳು ಮುಖದ ಮುಂದೆ ಹತ್ತಿರ ಬಂದು ಹಾರಿ ಹೋದ ಹಾಗಾಯಿತು?

ಏಕೆ ಒಂದು ಕರಿಯ ಹದ್ದು ತನ್ನ ರೆಕ್ಕೆಯನ್ನು ಬಡಿಯುತ್ತಾ ಕಣ್ಣು ಮುಂದೆ ಹಾದು ಹೋದಹಾಗಾಯಿತು?! ಸರೋಜಾಕ್ಷರು ಕ್ಷಮೆ ಬೇಡಲು ಸ್ವಲ್ಪ ಹಿಂದು ಮುಂದು ನೋಡುತ್ತಿದ್ದರು. ಆದರೆ ಕ್ಷಮೆ ಕೇಳಿದುದೇ ಸರಿ ಎನಿಸಿತು. ಇಷ್ಟು ಅಲ್ಪವಾದ ವಿಷಯಕ್ಕೇ ಅವರು ಮನಸೋಲುವುದೇ? ಮುಂದೆ ಬರುವ ಕಾಲದ ಛಾಯೆ ಅವರ ಕಣ್ಣಿಗೆ ಕಾಣುತ್ತಿಲ್ಲವೇ? ಅದಕ್ಕಾಗಿ ಅವರು ತಮ್ಮನ್ನು ತಯಾರು ಮಾಡಿಕೊಂಡಿಲ್ಲದಿದ್ದರೆ ಅದು ಅವರದೇ ತಪ್ಪು.

ಗಾಡಿಯನ್ನು ಅವರು ಮೆಲ್ಲಗೆ ನಡೆಸುತ್ತಿದ್ದರು. ಮೆಲ್ಲ ಮೆಲ್ಲನೆ ಚಿಂತನೆಯ ಮಡಿಕೆಗಳು ಬಿಚ್ಚಿಕೊಳ್ಳಲಾರಂಭಿಸಿತು. ನಾನೇನು ಈವತ್ತೇ ಸೋತೆನೇ? ನಾವೇನು ಆಕಸ್ಮಿಕವಾಗಿ ಸೋಲುತ್ತೇವೆಯೆ ಜನ್ಮತಾಳಿದಂದಿನಿಂದಲೇ ಸೋಲುತ್ತಾ ಬರುತ್ತಿಲ್ಲವೇ?

ಜೀವನದ ಯಾವುದೊಂದು ಕಿಡಿಯನ್ನು ಹಿಡಿಯಲು ನಾವು ಇಷ್ಟೊಂದು ಎಗರಾಡುತ್ತೇವೋ ಅದು ಪೂರ್ಣವಾಗಿ ನಮ್ಮ ಶಕ್ತಿಯ, ಹಿಡಿತದ ಆಚೆ ಇದೆ. ಅನಾದಿ ಕಾಲದಿಂದ ಇದನ್ನು ಆಕ್ಷೇಪಿಸುತ್ತಾ ಮನುಷ್ಯ ತಲೆ ಚಚ್ಚಿಕೊಳ್ಳುತ್ತಾನೆ!

ಎಲ್ಲಿದ್ದೆ, ಏತಕ್ಕೆ ಬಂದೆ,
ತಿಳಿಯಬೇಕು ಈ ಮಾತು,
ಬರುವ ಕಾಲದಿ ಎನ್ನ ಇಚ್ಛೆಯ,
ಕೇಳಲಿಲ್ಲ ಯಾರೂ.
ಅಂದರೆ ? ಅಂದರೆ ಇಷ್ಟೇ_

ನಮ್ಮ ಜನ್ಮ ನಮ್ಮ ಇಚ್ಛೆಯ ಅಧೀನದಲ್ಲಿಲ್ಲ. ನಮ್ಮ ಜೀವನದಲ್ಲಿ ಬರುವ ಪರಿಸ್ಥಿತಿಗಳೂ ನಮ್ಮ ಅಧೀನದಲ್ಲಿಲ್ಲ. ಮತ್ತೆ ಈ ಜಗತ್ತಿನ ಲೀಲೆಗಳು ನಮ್ಮ ಇಷ್ಟದಂತೆ ನಡೆಯಬೇಕೆಂದು ಬಯಸುವುದು ಏಕೆ? ಬಯಸಿದರೂ ಉಪಯೋಗವೇನೂ ಇಲ್ಲ. ಅದನ್ನು ಹೆಜ್ಜೆ ಹೆಜ್ಜೆಗೂ ಅನುಭವಿಸುತ್ತಲೇ ಈಗ ಪ್ರೌಢವ್ಯಕ್ತಿ ಎನಿಸಿಕೊಳ್ಳುವ ಎಲ್ಲೆಗೆ ಕಾಲಿಟ್ಟಿದ್ದೇನೆ. ಆದರೂ ಹಠಾತ್ತನೆ ಮನಸ್ಸು ಚಲಿಸಿತು. ಮನಸ್ಸಿನ ಜಾಗರೂಕತೆಯನ್ನು, ಭಾರಸಾಮ್ಯವನ್ನು ಕಳೆದುಕೊಂಡೆ!

ಬೇಸರದಿಂದ ಮನಸ್ಸು ತುಂಬಿಹೋಯಿತು.

ಸಾಧಾರಣವಾಗಿಯೇ ಅವರು ನಿಧಾನವಾಗಿ ನಡೆಸುವ ಗಾಡಿಯ ಓಟ ಈಗ ಇನ್ನೂ ನಿಧಾನವಾಗಿಹೋಗಿದೆ. ಎಲ್ಲಿ ಹೋಗಬೇಕೆಂಬುದೇ ಮರೆತುಹೋದ ಹಾಗಿದೆ.

ಸರೋಜಾಕ್ಷರು ಗಾಡಿಯನ್ನು, ಎಲ್ಲರೂ ಹಾಸ್ಯಮಾಡಿ ಹೇಳುವ ಹಾಗೆ ಬಹಳ ಮೆಲ್ಲಗೆಯೇ ನಡೆಸುತ್ತಾರೆ. ಅವರ ದೊಡ್ಡ ಮಗ ಯಾವಾಗಲೂ ಹೇಳುತ್ತಾನೆ– 'ಅಪ್ಪನ ಬಾಳೆಯ– ದೊನ್ನೆಯ ಕಾರು. ಅದಕ್ಕೆ ಎತ್ತಿನ ಗಾಡಿಯಷ್ಟು ಸ್ಪೀಡ್ ಇದೆ!' ಎಂದು.

ಆದರೆ ಸರೋಜಾಕ್ಷರು ಗಾಡಿಯನ್ನು ಕೊಂಡುಕೊಂಡಿದ್ದರೇ? ಇಲ್ಲ. ಅಧ್ಯಾಪಕ ಮನುಷ್ಯ. ಅದೂ ಶಾಂತ, ಸಂಯಮದಿಂದಿರುವ ಮನುಷ್ಯ. ಗಾಡಿ ಕೊಳ್ಳುವ ಆಸೆ ಅವರಿಗೆ ಎಂದೂ ಇರಲಿಲ್ಲ. ಅದು ಸಾಧ್ಯವೂ ಇರಲಿಲ್ಲ. ಅದೂ ಅಲ್ಲದೆ, ಗಾಡಿಯಲ್ಲಿ ಹೋಗಿ ಕಾಲೇಜಿನ ಮುಂದೆ ಇಳಿಯಲು ಸ್ವಲ್ಪ ನಾಚಿಕೆಯೇ ಪಟ್ಟುಕೊಳ್ಳುತ್ತಿದ್ದರು. ಸ್ವಲ್ಪ ದೂರದಲ್ಲೇ ಗಾಡಿಯನ್ನು ನಿಲ್ಲಿಸಿ, ನಡೆದುಕೊಂಡೇ ಬಂದು ಒಳಗೆ ಹೋಗುವರು. ಆದರೂ ಅವರಿಗೆ ಈ ಗಾಡಿಯನ್ನು ಹತ್ತಲೇಬೇಕಾದಂತಹ ನಿರ್ಬಂಧ! ಕಾಲೇಜಿಗೂ ಅದರಲ್ಲೇ ಬರಬೇಕಾಗಿದೆ. ಇದೂ ಒಂದು ತರಹದ ಸೋಲೇ ಅಲ್ಲವೇ? ಪ್ರೀತಿ, ಮಮತೆ ಪಾಶದ ಕಟ್ಟುಗಳಿಂದಾದ ಸೋಲು.

ಸಂತತಿಯಿಲ್ಲದ ಅವರ ಚಿಕ್ಕಪ್ಪ ಮತ್ತು ಚಿಕ್ಕಮ್ಮನಿಗೆ ಅವರು ಬಹಳವೇ ಪ್ರೀತಿ ಪಾತ್ರರಾಗಿದ್ದರು. ಅವರುಗಳ ಮನೋ–ಜಗತ್ತಿನಲ್ಲಿ ಮಗನ ಸ್ಥಾನವು ಇವರಿಗೇ ಮೀಸಲಾಗಿತ್ತು. ಎರಡು ವರ್ಷಗಳ ಹಿಂದೆ ಚಿಕ್ಕಪ್ಪನವರು ಪರಲೋಕವನ್ನೈದಿದರು. ಆ ಸಂದರ್ಭದಲ್ಲೇ

ಬಂತು. ಈ ಸೋಲನ್ನು ಒಪ್ಪಿಕೊಳ್ಳಬೇಕಾದಂತಹ ಪರಿಸ್ಥಿತಿ, ಚಿಕ್ಕಮ್ಮ ಹೇಳಿದರು – 'ಅವರು ಗಾಡಿಯನ್ನು ನಿನಗೇ ಕೊಡಬೇಕೆಂದು ಹೇಳಿಬಿಟ್ಟು ಹೋಗಿದ್ದಾರೆ' ಎಂದು.

ಸರೋಜಾಕ್ಷರು ಸ್ವಲ್ಪ ಕಕ್ಕಾಬಿಕ್ಕಿಯಾಗಿ, ಕೇಳಿದ್ದರು – "ನನಗೆ ಕೊಡಬೇಕು ಅಂದರೇ? ಗಾಡಿಯನ್ನು ಇಟ್ಟುಕೊಂಡು ನಾನೇನು ಮಾಡಲಿ?"

"ಕಾಲೇಜಿಗೆ ಹೋಗಲು ಗಾಡಿಯನ್ನು ಉಪಯೋಗಿಸು. ಅವರಿಗೆ ಬಹಳ ಮೋಹವಿತ್ತು ಈ ಗಾಡಿಯ ಮೇಲೆ. ನಾನು ಹೋದ ಮೇಲೆ ಗಾಡಿಯನ್ನು ಇನ್ನು ಯಾರು ನಡೆಸುತ್ತಾರೆ ಅಂತ ಮಾರಿಬಿಡಬೇಡ. ಅದನ್ನು ಸರೋಜನಿಗೇ ಕೊಡು" ಎಂದಿದ್ದಾರೆ.

ಅಷ್ಟಕ್ಕೇ ಸರೋಜಾಕ್ಷರು ಒಪ್ಪಿಕೊಳ್ಳಲಿಲ್ಲ. ಈ ಪ್ರಸ್ತಾಪಕ್ಕೆ ಎದುರಾಗಿ ತಾವು ಒಂದು ಯುಕ್ತಿಯನ್ನೂ ಮುಂದಿರಿಸಿದ್ದರು –'ಎಲ್ಲರೂ ನಗುತ್ತಾರೆ! ಡ್ರೈವರನಿಗೆ ಕೊಡಲು ಕಾಸೆಲ್ಲಿದೆ? ನನಗೆ ನಡೆಸಿ ಅಭ್ಯಾಸವಿಲ್ಲ' ಮುಂತಾಗಿ. ಆದರೆ ಚಿಕ್ಕಮ್ಮ ಅದನ್ನೆಲ್ಲಾ ಕಿವಿಗೇ ಹಾಕಿಕೊಳ್ಳಲಿಲ್ಲ.

"ನಿನಗೆ ಸ್ವಲ್ಪ ಡ್ರೈವಿಂಗ್ ಬರುತ್ತಲ್ಲಾ, ಚೆನ್ನಾಗಿ ಕಲಿತುಕೊಂಡುಬಿಡು. ನಿಮ್ಮ ಚಿಕ್ಕಪ್ಪನಿಗೂ, ಗಾಡಿಯನ್ನು ಕೊಂಡುಕೊಂಡಾಗ ಏನೂ ಗೊತ್ತೇ ಇರಲಿಲ್ಲ. ಆಮೇಲೆ ಕಲಿತುಕೊಂಡುಬಿಟ್ಟರು. ಅವರು ಹೇಳುವರು ಇದೇನೂ ಅಂತಹ ಕಷ್ಟದ ಕೆಲಸವಲ್ಲ. ಸ್ವಲ್ಪ ಕಣ್ಣು, ಕಿವಿಗಳನ್ನು ತೆರೆದಿಟ್ಟುಕೊಂಡು ತಲೆಯನ್ನು ತಂಪಾಗಿಟ್ಟುಕೊಂಡು, ಚಕ್ರವನ್ನು ಹಿಡಿಯಲು ಬಂದರೆ ಸರಿ. ಅಷ್ಟೇ ಅಂತ. ನೀನು ಇದನ್ನು ಉಪಯೋಗಿಸಿದರೆ ಪರಲೋಕದಲ್ಲೂ ಅವರು ತೃಪ್ತಿಪಟ್ಟುಕೊಳ್ಳುತ್ತಾರೆ. ಗಾಡಿಯಲ್ಲೇ ಕಾಲೇಜಿಗೆ ಹೋಗಿ ಬಾ."

ಏನು ಮಾಡಬೇಕು ಎಂದು ಗೊತ್ತಾಗಲಿಲ್ಲ ಸರೋಜಾಕ್ಷರಿಗೆ?

ಚಿಕ್ಕಮ್ಮನ ಕಣ್ಣಲ್ಲಿ ನೀರು!

ಪರಲೋಕವನ್ನೈದಿದ ಚಿಕ್ಕಪ್ಪನ ಆತ್ಮವನ್ನು ತೃಪ್ತಿಪಡಿಸಬೇಕಾದ ಜವಾಬ್ದಾರಿ ಅವರ ಮೇಲಿದೆ. ಕಡೆಗೆ ಆ 'ಅಚ್ಚು ಮರೂನ್' ರಂಗಿನ ಚಿಕ್ಕ ಪುಟ್ಟಗಾಡಿಯನ್ನು ಅವರು ಇಟ್ಟುಕೊಳ್ಳಲೇಬೇಕಾಯಿತು. ಖಂಡಿತವಾಗಿಯೂ ಉಪಯೋಗಿಸುತ್ತೇನೆ ಎಂದು ಮಾತೂ ಕೊಡಬೇಕಾಯಿತು. ಚಿಕ್ಕಮ್ಮ ಹಲವು ಬಾರಿ 'ಯಾರಿಗೂ ಕೊಟ್ಟುಗಿಟ್ಟು ಬಿಡಬೇಡಪ್ಪಾ, ನೀನೇ ಉಪಯೋಗಿಸಿದರೇನೇ ಅವರ ಆತ್ಮಕ್ಕೆ ತೃಪ್ತಿಯಾಗುವುದು' ಎಂದೂ ಹೇಳಿದ್ದರು.

ಪರಲೋಕವನ್ನೈದಿದ ಆತ್ಮಕ್ಕೆ ತೃಪ್ತಿಪಡುವ ಶಕ್ತಿ ಇದೆಯೋ–ಇಲ್ಲವೋ, ಅಥವಾ ಅವಶ್ಯಕತೆ ಇದೆಯೋ ಇಲ್ಲವೋ, ಮತ್ತೆ ಈ ತುಚ್ಛವಾದ ಭೌತಿಕ ವಸ್ತುವಿನಿಂದ ಆ ತೃಪ್ತಿಯನ್ನು ಒದಗಿಸಲು ಸಾಧ್ಯವೋ ಇಲ್ಲವೋ – ಇಂತಹ ಇಕ್ಕಟ್ಟಾದ ಪ್ರಶ್ನೆಗಳನ್ನು ಕೇಳುವಂತಹ ಸ್ವಭಾವದವರಲ್ಲವಾದ್ದರಿಂದ, ಸರೋಜಾಕ್ಷರಿಗೆ, ತಮ್ಮ ಸಮವಯಸ್ಕರಾದ, ಆದರೆ ಪ್ರೀತಿ–ಮಮತೆಯಲ್ಲಿ ಮಾತೃ ಸ್ಥಾನದಲ್ಲಿರುವ ಚಿಕ್ಕಮ್ಮನ ಮಾತನ್ನು ಮೀರಲಾಗಲಿಲ್ಲ.

ಆವಾಗಿನಿಂದ ಉಪಯೋಗಿಸುತ್ತಿದ್ದಾರೆ ಈ ಗಾಡಿಯನ್ನು. ನಿಧಾನವಾಗಿ ನಡೆಸುತ್ತಾರೆ, ಜಾಗರೂಕತೆಯಿಂದ ಅದನ್ನು ಕಾಪಾಡುತ್ತಾರೆ. ಯಾರದೋ ವಸ್ತು ಅದು, ಅವರು ಬಂದು ಅದನ್ನು ಒಂತಿರುಗಿ ತೆಗೆದುಕೊಂಡು ಹೋಗುತ್ತಾರೆ ಎಂಬಂತೆ ನೋಡಿಕೊಳ್ಳುತ್ತಾರೆ.

ಈ ಗಾಡಿ ಬಂದಾಗಿನಿಂದಲೇ ಎನಿಸುತ್ತೆ, ಅವರ ಸಹೋದ್ಯೋಗಿಗಳಿಗೆ ಅವರಲ್ಲಿ ಅಷ್ಟೊಂದು ಸಹಾನುಭೂತಿ ಇಲ್ಲ! ತಮ್ಮ ಕಣ್ಣಿಗೆ ಮಣ್ಣೆರಚಿ, ಯಾವುದೋ ಒಂದು ಉಚ್ಚಸ್ಥಾನಕ್ಕೆ ಏರಲು ಸರೋಜಾಕ್ಷರು ಪ್ರಯತ್ನಿಸುತ್ತಿದ್ದಾರೆ ಎಂಬ ಭಾವನೆ ಇದೆ ಅವರುಗಳಿಗೆ! ಸರೋಜಾಕ್ಷರ ಈಗಿನ ಕಷ್ಟದ ಸ್ಥಿತಿಯನ್ನು ನೋಡಿ ಯಾರಿಗೂ ಮರುಕವಾಗಲಿಲ್ಲ. ಕಡಿಮೆಯಾಗಲಿ, ಅಹಂಕಾರ ಸ್ವಲ್ಪ ಕಡಿಮೆಯಾಗಲಿ ಅಂದುಕೊಂಡರೇನೋ! ಗಾಡಿ ಬಂದಾಗಿನಿಂದ ಅವರಿಗೆ ಮನೆಯಲ್ಲೂ ಸ್ವಲ್ಪ ಕಸಿವಿಸಿಯಾಗಿರುವ ಹಾಗಿದೆ ಅಲ್ಲವೇ? ಅವರ ಹೆಂಡತಿ ವಿಜಯಾ ಹೇಳುವುದಿಲ್ಲವೆ!–ಇಂತಹ ಗಾಡಿಗೆ ನೇಣು ಹಾಕಬೇಕು, ಇಬ್ಬರಲ್ಲದೆ ಮೂರನೇಯವರಿಗೆ ಅದರಲ್ಲಿ ಜಾಗವಿಲ್ಲ, ಅಂಥಾದ್ದನ್ನ ಗಾಡಿ ಅಂತ ಹೇಳೋದೊಂದು ಕೇಡು. ಅದೆಲ್ಲಾ ಆ ಬಂಜೆಗಳಿಗೇ ಸರಿ, ಮಕ್ಕಳು ಮರಿ ಇರೋ ಮನೆಯಲ್ಲಿ ಅದಕ್ಕೆ ತಕ್ಕ ಗಾಡಿ ಇಲ್ಲದಿದ್ದರೆ ಒಪ್ಪುತ್ತೆಯೇ? ಛೀ ಛೀ!

ಬಹಳ ಬಲವಂತದಿಂದ ಅದನ್ನು ಒಪ್ಪಿಕೊಂಡು ಗಾಡಿಯನ್ನು ತಂದದ್ದನ್ನೇ ಮರೆತು, ಏನೋ ತಾವೇ ಅದನ್ನು ಕದ್ದು ತಂದಂತೆ ಸರೋಜಾಕ್ಷರು ಪೇಚಾಡುವರು.

ಆದರೆ ವಿಜಯಾ ತನ್ನ ಅಭಿಪ್ರಾಯವನ್ನು ಹೇಳುವ ವಿಧಾನವೇ ಹೀಗೆ. ನಿರಾವರಣ ಮತ್ತು ತೀಕ್ಷ್ಣ. ಬಹುಶಃ, ಸರೋಜಾಕ್ಷರು ತಮ್ಮ ಹೆಂಡತಿಯನ್ನು ಆ ಗಾಡಿಯಲ್ಲಿ ಕೂಡಿಸಿಕೊಂಡು, ಕಾಳಿಯ ಮಂದಿರಕ್ಕೋ ಅಥವಾ ಗಂಗೆಯ ಘಟ್ಟಕ್ಕೋ ಕರೆದುಕೊಂಡು ಹೋಗಿದ್ದಿದ್ದರೆ, ಒಂದು ವೇಳೆ ವಿಜಯಾಗೆ ಆ ಗಾಡಿಯ ಮೇಲೆ ಹೀಗೆ 'ಸವತಿಯ ದ್ವೇಷ' ಇರುತ್ತಿರಲಿಲ್ಲವೇನೋ!

ಆದರೆ ಆಶ್ಚರ್ಯ! ಸರೋಜಾಕ್ಷರು ಹೀಗೆ ಕರೆದುಕೊಂಡು ಹೋಗುವ ಪ್ರಸ್ತಾಪವನ್ನು ಒಂದು ಸಲವೂ ಮಾಡಿಲ್ಲ. ವಿಜಯಾ ಏನು, ಮೌನವನ್ನು ಬಿಟ್ಟು ತಾವೇ ಕೇಳುವವರೇ?

ಆದರೂ ಸುತ್ತಿ ಬಳಸಿ ಈ ಮಾತನ್ನು ಅವರ ಕಿವಿಗೆ ಮುಟ್ಟಿಸಿಲ್ಲವೇ? ಯಾರನ್ನಾದರೂ ನೆಪವಾಗಿಟ್ಟುಕೊಂಡು ಹೇಳಿಲ್ಲವೇ? ಹೌದು, ಹೇಳದೇ ಬಿಟ್ಟಿಲ್ಲ. "ಕಾಳಿ–ಗಂಗೆಯೇ ? ಹೂಂ ಆ ಚಿಕ್ಕಮ್ಮನ ಹಾಗೆ ಮುದಿ ವಯಸ್ಸಿನಲ್ಲೂ, ಸೆರಗು ಬಿಟ್ಟು, ಟೈಟ್–ಬ್ಲೌಸ್ ಹಾಕ್ಕೊಂಡು ಗಂಗೆಯ ತೀರದಲ್ಲಿ, ಸಾಯಂಕಾಲದ ಹೊತ್ತು ವಾಕಿಂಗ್ ಹೋಗ್ತಾ ಇದ್ದಿದ್ದರೆ ನನಗೂ ಅದೃಷ್ಟ ಕುಲಾಯಿಸುತ್ತಿತ್ತೋ ಏನೋ. ನೋಡ್ತಾ ಇದ್ದೀನಲ್ಲಾ ಆ ಚಿಕ್ಕಮ್ಮನ್ನ ಇಷ್ಟು ದಿನದಿಂದ. ಯಾರು ಹೇಳ್ತಾರೆ ನನಗಿಂತ ಎಂಟೊಂಭತ್ತು ವರ್ಷ ದೊಡ್ಡವಳು ಎಂದು ಚಿಕ್ಕ ಹುಡುಗಿ ಹಾಗೆ ಸಿಂಗರಿಸಿಕೊಂಡು, ಗಂಡನ ಪಕ್ಕದಲ್ಲಿ ಕೂತು, ಸಿನಿಮಾಗೆ ಹೋಗ್ತಾರೆ, ನ್ಯೂ ಮಾರ್ಕೆಟ್ಟಿಗೆ ಹೋಗ್ತಾರೆ. ನಾನು ಕೇಳ್ತೇನೆ. ಕಡೆಗೆ ಅವರನ್ನು ಕಾಪಾಡಿಕೊಂಡರೇ?"

ಸರೋಜಾಕ್ಷರು ಕೇಳಿಸಿಕೊಂಡರು.

ಆದರೆ ಕಿವಿಗೆ ಹತ್ತಿಯನ್ನು ಇಟ್ಟುಕೊಂಡಿರುವವರಂತೆ ಇರುವುದೇ ಅವರ ಅಭ್ಯಾಸ, ಎಂದೋ ಪ್ರಾರಂಭಿಸಿದ್ದ ಅಭ್ಯಾಸ ಅದು.

ಆದ್ದರಿಂದ ವಿಜಯ ಆಡುವ ಮಾತು, ಗಾಳಿಯಲ್ಲಿ, ಶೂನ್ಯದಲ್ಲಿ ಬೀಸಿದ ಗದೆಯಂತೆ ಆಗುತ್ತೆ. ಈ ಸೋಲಿನ ಉರಿಯಿಂದಲೇ ಇರಬಹುದೇನೋ, ವಿಜಯಾರ ಮಾತು ತೀಕ್ಷ್ಣತೆಯಿಂದ ಇನ್ನೂ ತೀಕ್ಷ್ಣವಾಗುತ್ತೆ ನಾಲಿಗೆ ಇನ್ನೂ ಚೂಪಾಗುತ್ತೆ ಆದರೆ ಸರೋಜಾಕ್ಷರು ತಮ್ಮ ಮೂಕರಾಗಿರುವ ಸಾಧನೆಯಲ್ಲಿ ನಿಷ್ಫಲರಾಗಿರುತ್ತಾರೆ. ಆದ್ದರಿಂದಲೇ ಅವರು ತಿರುಗಿ, "ನೀನು ಸೀರೆಯ ಬದಲು ತುಂಡು ಬಟ್ಟೆ ಸುತ್ತಿಕೊಂಡು, ಸಗಣಿ–ಗಂಗೆಯ ನೀರು ಚಿಮುಕಿಸಿ ಪುಣ್ಯಗಳಿಸುವುದರಿಂದ ಕಡೆಗೆ ಮುತ್ತೈದೆತನ ಕಾಪಾಡಿಕೊಳ್ಳುವ ಗ್ಯಾರಂಟಿ ಇದೆಯೇ?" ಎಂದು ಅವಳನ್ನು ಕೇಳಿಲ್ಲ. ಮೂಕರಾಗಿರುತ್ತಾರೆ.

ಇಂದು ಮಾತ್ರ ತಮ್ಮ ಎಂದಿನ ಸಾಧನೆಯನ್ನು ಮರೆತು, ಅದರ ಬಗ್ಗೆ ಚಿಂತನೆಯನ್ನು ಹೊರಳಿಸಿದರು. ಮನೆಯಲ್ಲೂ, ಹೊರಗೂ ತಮ್ಮ ರಾಜಿನಾಮೆಯ ಪ್ರತಿಕ್ರಿಯೆ ಏನಾಗಬಹುದು? ಹೊರಗೆ ಸಾವಿರ ಪ್ರಶ್ನೆಗಳು, ಮತ್ತು ಮನೆಯಲ್ಲಿ ಸಾವಿರ, ಮಾತಿನ ಬಾಣಗಳು, ಪುರುಷನು ಕೋಪಿಸಿಕೊಂಡು ಸಂಪಾದನೆಯನ್ನು ಬಿಟ್ಟರೆ, ಸಂಸಾರದಲ್ಲಿ ಅವನನ್ನು ಯಾರು ಕ್ಷಮಿಸುತ್ತಾರೆ? 'ನೀನು ಮಾಡಿದ್ದು ಸರಿಯೇ. ನಿಜವಾಗಿಯೂ ಇಂತಹ ಅವಮಾನವನ್ನು ಸೈರಿಸಿಕೊಂಡಿರುವುದು ಸಾಧ್ಯವೇ, ಇದೇನೂ ಒಂದು ದಿನದ ಮಾತಲ್ಲವಲ್ಲ. ತಲೆ ತಗ್ಗಿಸಿಕೊಂಡು ಹೋದರೆ ಪ್ರತಿಸಲವೂ ಹೀಗೆಯೇ ಮಾಡುತ್ತಾರೆ. ಆದ್ದರಿಂದ ನೀವು ಮಾಡಿದುದೇ ಸರಿ' ಎಂದು ಯಾರಾದರೂ ಹೇಳುತ್ತಾರೆಯೇ?

ಊಹುಂ!

ಖಂಡಿತ ಹೇಳುವುದಿಲ್ಲ. ಎಲ್ಲಾ ಸಂಬಂಧಗಳೂ ಸ್ವಾರ್ಥದಿಂದಾದ ಸರಪಳಿಗಳು. ಅದರಲ್ಲಿ ಒಂದಿಷ್ಟು ಎಳೆತ ಬಂದರೂ ಅದು ಕರ್ಣ–ಕರ್ಕಶವಾಗಿ ಶಬ್ದ ಮಾಡುತ್ತದೆ. ಮತ್ತೆ ತಮ್ಮ ಸಂಕಲ್ಪವನ್ನು ಹೇಳಿದ ತಕ್ಷಣವೇ ಒಂದು ದೊಡ್ಡ ಬಿರುಗಾಳಿಯನ್ನೇ ಅವರು ಎದುರಿಸಬೇಕಾಗುತ್ತದೆ! ಕಾಲೇಜಿನಲ್ಲೂ ಬಹುಶಃ ಮೇಲಿನವರು ಅವರ ರಾಜಿನಾಮೆಯನ್ನು ಅಷ್ಟು ಸುಲಭವಾಗಿ ಅಂಗೀಕರಿಸಲಾರರು. ಆಡಳಿತ ಗೋಷ್ಠಿಯವರು ಅವರ ಮಾನಾಪಮಾನದ ಬಗ್ಗೆ ಯೋಚಿಸದಿದ್ದರೂ ಅವರನ್ನು ಕೆಲಸ ಬಿಡಬೇಡಿ ಎಂದು ಬೇಡದೆ ಇರುವುದಿಲ್ಲ. ಅದೂ ತಮ್ಮ ಸ್ವಾರ್ಥಕ್ಕಾಗಿಯೇ! ಪಾಠ ಹೇಳುವ ವಿಧಾನದಲ್ಲಿ ಸರೋಜಾಕ್ಷರಿಗೆ ಒಳ್ಳೆಯ ಹೆಸರಿದೆ. ಹೀಗೆ ಯೋಚನೆ ಬಂದ ತಕ್ಷಣವೇ ಅವರ ಮನ ನಾಚಿತು. ಕೇವಲ ತಮ್ಮ ಸ್ವಾರ್ಥಕ್ಕಾಗಿಯೇ ಏನು? ಸರೋಜಾಕ್ಷರನ್ನು ಎಲ್ಲರೂ ಪ್ರೀತಿ ಮತ್ತು ವಿಶ್ವಾಸದಿಂದ ನೋಡುತ್ತಿರಲಿಲ್ಲವೇ? ಬೇರೆ ಪ್ರೊಫೆಸರುಗಳಾಗಲಿ, ಅಧ್ಯಕ್ಷರೇ ಆಗಲಿ ಈ ಬಗ್ಗೆ ಜವಾಬ್ದಾರಿ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಏಕೆಂದರೆ ಅವರಿಗೆ ತಾವುಗಳೇ ಇಂತಹ ಅವಮಾನಕ್ಕೆ ಇಂದಲ್ಲದಿದ್ದರೆ ನಾಳೆ ಒಳಗಾಗಬಹುದೆಂಬ ಭಯ ಇದೆ.

ಆ ಪರಿಸ್ಥಿತಿಯಲ್ಲೂ ಅವರಿಗೆ ಒಂದು ತಮಾಷೆಯ ವಿಷಯ ಜ್ಞಾಪಕಕ್ಕೆ ಬಂತು. ಚಿಕ್ಕ ಮಕ್ಕಳ ಪುಸ್ತಕದಲ್ಲಿ ಬರುವ ಕತೆಯ ಹಾಗೆ, ಬೆಕ್ಕು ಓಡಿತು. ಸುಂಡಿಲಿಗಳ ನೋಡಿ. ಎಂಬುವ ತಲೆ–ಕೆಳಕ ಪ್ರಪಂಚದಲ್ಲಿದ್ದೇವೆಯೇ?!

ಮತ್ತೆ ಇನ್ನೇನನ್ನಬೇಕು!

ಮನೆಯಲ್ಲಿ, ಹೊರಗೆ, ಕೆಲಸದ ಕ್ಷೇತ್ರ, ಮನಸ್ಸಿನ ವಿಚಾರಕ್ಷೇತ್ರ ಎಲ್ಲಾ ಕಡೆಯೂ ಈ ತಮಾಷೆಯ ದೇಶದ ರೀತಿ ನೀತಿಯೇ ಕಾಣಬಹುದಲ್ಲಾ!

ರಾಜೀನಾಮೆಯ ಬಗ್ಗೆ ಅವರಿಗೆ ಸಲಹೆ ಅಥವಾ ಮಾತುಕತೆಯಾಡಲು ಯಾರೂ ಇಲ್ಲ. ತಾವೇ ಯೋಚಿಸಬೇಕು. ವಿಜಯಾ ಯಾವಾಗಲೂ ಅವರ ಮನಸ್ಸನ್ನು ತಿಳಿದುಕೊಳ್ಳುವ ಗೋಜಿಗೆ ಹೋಗಿಲ್ಲ. ಇಬ್ಬರ ಮಧ್ಯೆ ದೂರದ ಗ್ರಹಗಳ ಅಂತರ ವಿಜಯಾ ಎಂದೂ, ಸರೋಜಾಕ್ಷರ ಅಭಿರುಚಿ, ಯೋಚನೆ, ಭಾವನೆಗಳನ್ನು ತಿಳಿದುಕೊಳ್ಳುವ ಪ್ರಯತ್ನಕ್ಕೇ ಹೋಗಿಲ್ಲ. ಆಕೆ, ತನ್ನ ಸ್ಥೂಲವಸ್ತುಗಳ ಪ್ರಪಂಚದಲ್ಲೇ ಮುಳುಗಿದ್ದಾರೆ. ಮನಸ್ಸಿನ ಹೊಂದಾಣಿಕೆಯ ಬಗ್ಗೆ ತಮ್ಮಿಬ್ಬರಲ್ಲಿ ಇರುವ ಈ ದೊಡ್ಡ ಕಣಿವೆಯ ಅರಿವು ವಿಜಯಾಗೆ ಆಗದೇ ಇಲ್ಲ. ಸರೋಜಾಕ್ಷರ. ಶಾಂತ, ಸೌಜನ್ಯ ಮತ್ತು ಸಭ್ಯ ನಡೆವಳಿಕೆ ಆಕೆಯನ್ನು ಅವರಲ್ಲಿ ಗೌರವದಿಂದ ನಡೆಯುವ ಹಾಗೆ ಮಾಡಿಲ್ಲ. ಬದಲಾಗಿ ಇನ್ನೂ ಆಕ್ರೋಷದಿಂದ ನಡೆಯುವ ಹಾಗೆ ಮಾಡಿದೆ. ಆಕೆ ಮತ್ತಷ್ಟು ಕ್ರೂರಿಯಾಗಿ ಒರಟಾಗಿಹೋಗುತ್ತಾರೆ.

ಇದು ಬೇಕೆಂತಲೇ ಏನು?

ಈ ಗುಣಗಳನ್ನು ಬಿಟ್ಟು ವಿಜಯಾರಲ್ಲಿ ಇನ್ನೇನಿದೆ? ಏನು ತಾನೆ ಇತ್ತು?

ಆದರೆ ಸರೋಜಾಕ್ಷರ ಭಾವನೆಗಳನ್ನೂ, ಕಲ್ಪನೆಗಳನ್ನೂ ಆವರಿಸಿಕೊಂಡು ಮೂರ್ತಿವೆತ್ತಿದಂತಹ, ನಿಜವೆನಿಸಿದವಳು ಒಮ್ಮೆ ಅವರ ಕಣ್ಣಿಗೆ ಕಾಣಿಸಿದ್ದಳು. ಆಗ ಅವರಿಗೆ 'ಮಾನಸೀ' ಎಂಬ ಶಬ್ದದ ನಿಜವಾದ ಅರ್ಥ ತಿಳಿಯಿತು ಎಂದೆನಿಸಿತು. ಆದರೆ ಅದು ಇಂದಿನ ಕಾಲವಲ್ಲ!

ಸರೋಜಾಕ್ಷರು ಆಗ ಇನ್ನೂ ತರುಣರು, ಆಗ ತಾನೆ ಎಂ.ಎಸ್‌ಸಿ. ಪಾಸು ಮಾಡಿದ್ದರು. ಆ ಹುಡುಗಿ ಬಿ.ಎ. ಪಾಸು ಮಾಡಿ, ಎಂ.ಎ. ಓದಬೇಕೆಂದು ತನ್ನ ಅಧ್ಯಾಪಕ ತಂದೆಯ ಹತ್ತಿರ ಹೇಳಿ ಹಠ ಮಾಡುತ್ತಿದ್ದಳು. ಅವರು ಸರೋಜಾಕ್ಷರಿಗೂ ಅಧ್ಯಾಪಕರಾಗಿದ್ದರು.

ಸರೋಜಾಕ್ಷರು ಇನ್ನೂ ಸಂಪಾದನೆ–ಗಿಂಪಾದನೆಯಲ್ಲಿ ನೆಲೆಯಾಗಿರಲಿಲ್ಲ. ಆದರೂ ನಾಚಿಕೆಯನ್ನು ಹಿಂದೂಡ್ಡಿ, ತಮ್ಮ ತಂದೆಯ ಹತ್ತಿರ ಪ್ರಸ್ತಾಪವನ್ನು ಎತ್ತಿದರು. ಬಹುಶಃ ಅವರ ಮನೋಸಂಚಾರಿಣಿ ಪಲ್ಲವಿನಿ ಆ ಶ್ಯಾಮಲಾಂಗಳ ಕಪ್ಪು ಕಣ್ಣುಗಳಲ್ಲಿ, ಅವರು ಈ ಪ್ರಸ್ತಾಪವನ್ನು ಎತ್ತಲೆಂಬ ಸಮ್ಮತಿಯ ಸೂಚನೆ ಇತ್ತೇನೋ! ಆದರೆ ಸರೋಜಾಕ್ಷರು ನಾಚಿಕೆಗೆಟ್ಟಿದ್ದೊಂದೇ ಲಾಭ!

ಅವರ ತಂದೆ ನಳಿನಾಕ್ಷರು ಹೇಳಿಬಿಟ್ಟರು– 'ಅವರುಗಳು ಗಂಗುಲಿ* ಅಲ್ಲವೇ? ಅಂದರೆ ರಾಢೀ ಬ್ರಾಹ್ಮಣರು ಮತ್ತೇ?'

---

* ಬ್ರಾಹ್ಮಣರಲ್ಲಿ ಮತ್ತೊಂದು ಜಾತಿಯವರು (ಬಂಗಾಳದವರು).

ಆ 'ಮತ್ತೇ'ಗೆ ಏನು ಹೇಳುವುದೆಂಬ ಸಾವಿರ ಜವಾಬುಗಳು ಸರೋಜಾಕ್ಷರ ಮನಸ್ಸಿನಲ್ಲಿ ಇತ್ತು. ಆದರೆ ಆ ಗಂಟಿಕ್ಕಿದ ಹುಬ್ಬನ್ನು ನೋಡಿ, ಅದರ ಮುಂದೆ ತಲೆ ಎತ್ತಲಾಗಲಿಲ್ಲ. ಸರೋಜಾಕ್ಷರ ತಾಯಿ ಕೇಳಿದಾಗ 'ಬಿ.ಎ., ಎಂ.ಎ. ಓದಿದ ಹುಡುಗಿ ನಮ್ಮ ಮನೆಗೆ ಸೊಸೆಯಾಗಿ ಬರುವುದೇ? ಅಂದರೆ ಮದುವೆಯಾದ ತಕ್ಷಣ ಬೇರೆ ಮನೆ ಮಾಡ್ಬೇಕು ಅಂತ ನಿನ್ನ ಅಭಿಪ್ರಾಯವೇ?'

ಸರೋಜಾಕ್ಷರು ಹೇಳಿದ್ದರು, 'ಏಕೇ. ಈಗ ಬೇರೆ ಹೋಗುವ ವಿಚಾರ ಎಲ್ಲಿ ಬಂತು? ಓದಿದ ಹುಡುಗಿ ಏನು ಹುಲಿಯೇ ಅಥವಾ ಕರಡಿಯೇ?'

ಅಮ್ಮ ಜೋರಿನಿಂದ ಹೇಳಿದ್ದರು, 'ನಮ್ಮ ಮಟ್ಟಿಗೆ ಹಾಗೆಯೇ.'

'ಯಾಕೇ. ನಾನೂ ಎಂ.ಎ. ಪಾಸು ಮಾಡಿದವ ತಾನೇ?'

'ಆ ಮಾತು ಬಿಡು, ಗಂಡೂ, ಹೆಣ್ಣೂ ಒಂದೇ ಸಮವೇನು?'

ಹೌದು. ಆಗ ಇನ್ನೂ ವೀರದರ್ಪದಿಂದ ಹೇಳಲಾಗುತ್ತಿತ್ತು, 'ಗಂಡೂ-ಹೆಣ್ಣು ಒಂದೇ ಸಮವೇನು' ಎಂದು ಅಮ್ಮನ ಮಾತಿಗೆ ಕಾರಣ ಏನೂ ಇರಲಿಲ್ಲ. ಕೇವಲ ಅವರ ಅಭಿಪ್ರಾಯವೇ ಕೊನೆಯ ಮಾತಾಗಿತ್ತು, ಅಷ್ಟೆ ಅವರು ಯಾರ ಅಭಿಪ್ರಾಯವನ್ನೂ ಒಪ್ಪುತ್ತಿರಲಿಲ್ಲ. ಏಕೆಂದರೆ ಅವರ ಅಭಿಪ್ರಾಯವೇ ಯಾವಾಗಲೂ ನಡೆಯುತ್ತಿತ್ತು. ಅದಕ್ಕೇ ಸರೋಜಾಕ್ಷರು 'ಮಾನಸೀ'ಯನ್ನು ಎಟುಕದ ವಸ್ತು ಎಂದು ತಮ್ಮ ಆಸೆಯ ಜಗತ್ತಿನಿಂದ ಬೀಳ್ಕೊಟ್ಟಿದ್ದರು. ಆಮೇಲೆ ಅವರ ಅತ್ತಿಗೆ ಮತ್ತು ಚಿಕ್ಕ ತಂಗಿ 'ಅಬ್ಬಾ, ಒಂದು ಕಪ್ಪು ಹುಡುಗಿಯ ವಿರಹದಿಂದ, ನೀನೇ ಕಪ್ಪಾಗಿಹೋಗ್ತಾ ಇದ್ದೀಯಲ್ಲಾ,' ಎಂದು ಹಂಗಿಸಲು ಪ್ರಾರಂಭಿಸಿದಾಗ, ಕೆಲವು ದಿನಗಳಿಗಾಗಿ ಅಲಹಾಬಾದ್‌ನಲ್ಲಿರುವ ತಮ್ಮ ಸೋದರತ್ತೆಯ ಮನೆಗೆ ಹೊರಟುಹೋದರು. ಅಲ್ಲೇ ಆ ಮಾತಿಗೆ ಇತಿಯಾಯಿತು. ಮ್ಲಾನ-ಗಂಭೀರವದನರಾಗಿ ಹಿಂದಿರುಗಿದರು.

ಸರೋಜಾಕ್ಷರಿಗೆ ಗೊತ್ತಿತ್ತು, ತಮ್ಮದು ಪ್ರೇಮವೂ ಅಲ್ಲ ವಿರಹವೂ ಅಲ್ಲ ಎಂದು. ಇದು ಕೇವಲ ಒಂದು ಆಶಾ-ಭಂಗದ ವ್ಯಥೆ ಅಷ್ಟೆ ಎಂದು. ಆ ಅಧ್ಯಾಪಕರ ಮಗಳನ್ನು ಅವರು ನೋಡಿರುವುದು ಬೆಟ್ಟೆಣಿಸಿ ಹೇಳುವ ಹಾಗೆ ಕೆಲವು ದಿನಗಳೇ, ಆದರೂ ಮನಸ್ಸಿಗೆ ವ್ಯಥೆಯಾಗಿತ್ತು. ಅವಳ ಬಗ್ಗೆ ಮುಂದಿನ ಸಮಾಚಾರವೂ ಏನೂ ಅವರಿಗೆ ತಿಳಿಯಲಿಲ್ಲ.

ಆದರೆ ಸರೋಜಾಕ್ಷರು ಹುಚ್ಚರೂ ಅಲ್ಲ. ಮೂರ್ಖರೂ ಅಲ್ಲ. ಕೇವಲ ಒಂದು ವ್ಯಥೆಯನ್ನೇ ಆಧಾರವಾಗಿಟ್ಟುಕೊಂಡು ಇಡೀ ಜೀವಮಾನವನ್ನು ಕಳೆಯುವ ಛಲವನ್ನೂ ಮಾಡಲಿಲ್ಲ. ಆದರೆ ಮಾತ್ರ ದೃಢವಾಗಿ ಹೇಳಿದರು. 'ಸಂಪಾದಿಸುವುದಕ್ಕೆ ಪ್ರಾರಂಭಿಸುವ ತನಕ ಮದುವೆಯಾಗುವುದಿಲ್ಲ' ಎಂದು.

ಆಗ ನಳಿನಾಕ್ಷರು ಕೋಪದಿಂದ ಕೇಳಿದ್ದರು-'ನನ್ನ ಏಕಪುತ್ರನ ಹೆಂಡತಿಗೆ ಒಂದು ತುತ್ತು ಅನ್ನ ಒದಗಿಸುವ ಯೋಗ್ಯತೆ ನನಗಿಲ್ಲವೇ?' ಎಂದು.

ಸರೋಜಾಕ್ಷರು ಆಗ ಹೇಳಿದ್ದರು–'ಹಾಗೇನಿಲ್ಲ, ಇದು ನನ್ನದೊಂದು ಛಲ ಎಂತಲೇ ಇಟ್ಟುಕೊಳ್ಳಿ,' ಛಲವೂ ಇರಬಹುದು, ಅಥವಾ ಒಂದು ನೀತಿಯೂ ಆಗಿರಬಹುದು, ಅಥವಾ ಇನ್ನೂ ಕೆಲಕಾಲ ಹೀಗೆಯೇ ತಳ್ಳಲು ಒಂದು ನೆಪವಾಗಿಯೂ ಇರಬಹುದು. ಅಂತೂ ತಾಯಿ–ತಂದೆಯರು ಇನ್ನು ಜಾಸ್ತಿ ಒತ್ತಾಯಪಡಿಸಲಿಲ್ಲ. ಅವರಿಗೂ ಒಂದು ವೇಳೆ ಎನಿಸಿರಬಹುದು, ದೊಡ್ಡ ಮೀನನ್ನು ಹಿಡಿಯಬೇಕಾದರೆ ದಾರವನ್ನು ಸ್ವಲ್ಪ ಸಡಿಲ ಬಿಡಲೇಬೇಕು, ತಕ್ಷಣ ಎಳೆದರೆ ದಾರ ಕಿತ್ತುಹೋಗಬಹುದು.

ಆದರೆ ಅವರುಗಳು ತೀರಾ ಜಾಲಿಸಿ ಜಾಲಿಸಿ ಪರಮ ಸುಂದರಿಯಾದ ಹುಡುಗಿಯನ್ನು ಹುಡುಕತೊಡಗಿದರು. ಜೊತೆಗೆ ಸ್ಥಿತಿವಂತರೂ ಆಗಿರಬೇಕು. ಬರಿಗೈಯಲ್ಲಿ ಮೊಳಹಾಕುವಂತಹ ಮನೆಯೂ ಅವರಿಗೆ ಹಿಡಿಸದು.

ಕಡೆಗೆ ಸರೋಜಾಕ್ಷರ ತಾಯಿ–ತಂದೆಯರು ತಮ್ಮ ಮಾನಸ–ಕನ್ಯೆಯನ್ನು ಕಂಡು ಹಿಡಿಯುವುದರಲ್ಲಿ ಸಫಲರಾದರು. ಹುಡುಗಿಯ ತಂದೆ ಸ್ಥಿತಿವಂತರು. ಕನ್ಯೆಯೇನೂ ವಿದ್ಯಾವಂತೆಯಲ್ಲ. ಆದರೆ ರೂಪ? ಹೌದು, ಈಗ ನೋಡಿದರೆ ನಂಬಲಾಗದಿದ್ದರೂ, ಒಂದು ಕಾಲದಲ್ಲಿ ವಿಜಯಾ ರೂಪವತಿ ಎಂದೇ ಎನಿಸಿಕೊಂಡಿದ್ದರು. ರೂಪವತಿ. ಒಳ್ಳೆಯ ಮೈ ಕಟ್ಟು, ನವಯುವತಿ, ಇಂತಹ ಕನ್ಯೆಯನ್ನು ಹುಡುಗನ ಮುಂದೆ ತಂದು ನಿಲ್ಲಿಸಿಬಿಟ್ಟು, ಮರೆಯಲ್ಲಿ ತಾಯಿ ತಂದೆಯರು ಅರ್ಥಗರ್ಭಿತವಾದ ನಗೆ ನಕ್ಕಿದ್ದರು.

*****

ಅಧ್ಯಾಯ ಎರಡು

ಯಾವ ದಾರಿಯಾಗಲಿ ಒಮ್ಮೆ ಕೊನೆಗೊಳ್ಳಲೇಬೇಕಷ್ಟೆ. ಎತ್ತಿನ ಗಾಡಿಯೂ ಕೂಡ ತಾನು ಹೋಗಬೇಕಾದ ಸ್ಥಳಕ್ಕೆ ಹೊತ್ತಾಗಿಯಾದರೂ ಹೋಗಿ ತಲುಪುತ್ತೆ. ಸರೋಜಾಕ್ಷರು ಬಹಳ ಅನ್ಯಮನಸ್ಕರಾಗಿ ನಡೆಸಿದರೂ, ಅಭ್ಯಾಸದ ಬಲದಿಂದ ಕೈ ಗಾಡಿಯನ್ನು ಸರಿಯಾದ ರಸ್ತೆಯಲ್ಲೇ ನಡೆಸಿಕೊಂಡು ಹೋಗುತ್ತೆ.

ಜೇಬಿನಿಂದ ಬೀಗದ ಕೈಯನ್ನು ತೆಗೆದು, ಮನೆಯ ಪಕ್ಕದಲ್ಲಿದ್ದ ಖಾಲಿ ಜಾಗದಲ್ಲಿ ಷೆಡ್ ಹಾಕಿ ಮಾಡಿಕೊಂಡಿದ್ದ ಗ್ಯಾರೇಜಿನ ಬೀಗವನ್ನು ತೆಗೆದು, ಗಾಡಿಯನ್ನು ಒಳಗೆ ಇಟ್ಟು ತಿರುಗಿ ಬೀಗ ಹಾಕಿ ಸಾವಧಾನವಾಗಿ ಮನೆಯೊಳಗೆ ಬಂದರು ಸರೋಜಾಕ್ಷರು.

ಅವರ ದೊಡ್ಡ ಮಗ ನೀಲಾಕ್ಷ ಈ ಗಾಡಿಯನ್ನು ಬಾಳೆಯ ದೊನ್ನೆ ಎಂದು ಹೇಳಲು ಅವರ ಸ್ವಾರ್ಥ ನಡೆವಳಿಕೆಯೂ ಒಂದು ಕಾರಣವಾಗಿರಬಹುದು. ಗಾಡಿಯನ್ನು ಉಪಯೋಗಿಸಲು ಯಾರಿಗೂ ಕೊಡದೆ, ತಮ್ಮ ಕೆಲಸವಾದ ತಕ್ಷಣ ಅದನ್ನು ಒಳಗೆ ಇಟ್ಟು ಅವರು ಬೀಗ ಹಾಕುತ್ತಿದ್ದರು. ನೀಲಾಕ್ಷನಿಗೆ ಕೈ ತುರಿಯುತ್ತಿರಲಿಲ್ಲವೇ ಅದರ ಮೇಲೆ ಒಂದು ಕೈ ತೋರಿಸೋಣವೆಂದು?! ಆದರೆ ಆತ್ಮಗೌರವವನ್ನು ಬಿಟ್ಟು ಕೇಳಲು ಯಾರು ತಾನೆ ಇಷ್ಟಪಡುತ್ತಾರೆ!

ಆದರೆ ಸರೋಜಾಕ್ಷರದು ಇದೇನೋ ಒಂದು ಆಶ್ಚರ್ಯಕರವಾದ ಮನೋಭಾವ. 'ನೀವುಗಳು ಯಾವಾಗ ನನ್ನ ಮನೋಭಾವನೆಗೆ ಬೆಲೆ ಕೊಟ್ಟಿಲ್ಲವೋ. ಮತ್ತು ನಾನು ಅದನ್ನು ಚಿಕ್ಕಪ್ಪನ ಪ್ರೀತಿಯ ಮೂರ್ತಿಯಂತೆ ಭಾವಿಸಿರುವುದನ್ನು ತಿಳಿದುಕೊಳ್ಳದೆ ಹಾಸ್ಯ ಮಾಡುತ್ತೀರೋ, ಸಣ್ಣದು ಎಂದು ತಮಾಷೆ ಮಾಡುವಿರೋ, ಪುಕ್ಕಟೆ ಮಾಲು ಎನ್ನುವಿರೋ ಆಗ ಬೇಡವೇ ಬೇಡ, ನೀವುಗಳು ಯಾರೂ ಈ ಗಾಡಿ ಹತ್ತಲೇಬೇಡಿ,' ಎಂದೇನೋ!

ಸರೋಜಾಕ್ಷರು ಮನೆಯೊಳಗೆ ಬಂದರು.

ತಂದೆಯ ಕಾಲದ ಮನೆ. ಹಳೆಯ ಮಾದರಿಯದು. ಮಧ್ಯಕ್ಕೆ ಅಂಗಳ, ಅದರ ಸುತ್ತಲೂ ಕೋಣೆಗಳು ಒಂದು ಕಡೆ, ಬಂದ ಅತಿಥಿಗಳು ಕುಳಿತುಕೊಳ್ಳಲು ಎರಡು ಕೋಣೆಗಳು ಒಂದು ಕಡೆ. ಅಡಿಗೆ ಮನೆ, ಉಗ್ರಾಣ, ಊಟದ ಮನೆ, ಹೆಚ್ಚಿನ ಸಾಮಾನುಗಳನ್ನು ಹಾಕಿಡಲು ಒಂದು ಕೋಣೆ, ಅದರ ಪಕ್ಕದಲ್ಲಿ ಬಚ್ಚಲು ಮನೆ. ಇನ್ನೊಂದು ಕಡೆ ವರಾಂಡಾದ ಮಧ್ಯೆ ಮಹಡಿಗೆ ಹೋಗುವ ಮೆಟ್ಟಲು.

ಎಲ್ಲಾ ಕಡೆಯೂ ನಿಶ್ಶಬ್ದವಾಗಿದೆ. ಕಾರಣ, ವಿಜಯಾ ಇನ್ನೂ ದೇವರ ಮನೆಯಿಂದ ಇಳಿದು ಬಂದಿಲ್ಲ. ಇಳಿದ ತಕ್ಷಣವೇ ಕುರುಕ್ಷೇತ್ರ ಪರ್ವ ಪ್ರಾರಂಭವಾಗುತ್ತೆ. ಅಡಿಗೆಯವನು

ಕೆಲಸದ ಆಳು ಇವರುಗಳು ಇಷ್ಟು ಹೊತ್ತು ಮಾಡಿರುವ ತಪ್ಪು-ನೆಪ್ಪುಗಳು, ಸೊಸೆಯ ಗೈರುಹಾಜರಿ, ಮಗನ ಅಸಡ್ಡೆ ಮತ್ತು ಸರೋಜಾಕ್ಷರ ಉದಾಸೀನತೆ, ಎಲ್ಲಾ ವಿಷಯವನ್ನೂ ಝಾಡಿಸಿ ಕೂಗಾಡಲು ಪ್ರಾರಂಭಿಸುತ್ತಾರೆ. ತನ್ನ ಆಡಳಿತದ ಸಾಮ್ರಾಜ್ಯವನ್ನು ಒಂದು ಕುಲುಕು, ಕುಲುಕುತ್ತಾರೆ. ಆದರೆ ಈಗ ಮನೆ ಗುಮ್ ಅಂತಿದೆ. ಸರೋಜಾಕ್ಷರು ಅನುಮಾನಿಸಿದರು. ನೀಲಾಕ್ಷ ಆಗ ಒಂದು ಸಲ ಫೋನ್ ಮಾಡಿಬಿಟ್ಟು ತನ್ನ ಕೆಲಸ ಆಯಿತೆಂದು ನಿಶ್ಚಿತೆಯಿಂದ ಹೊರಗೆ ಹೋಗಿರಬೇಕು. ವಿಜಯಾರ ಚಿಂತೆ, ನಿಶ್ಚಿಂತೆಯಿಂದ ಪ್ರಶ್ನೆಯೇ ಇಲ್ಲಿ ಏಳುವುದಿಲ್ಲ. ಅಥವಾ ಯಜಮಾನರು ಬರುವುದು ಹೊತ್ತಾಗುತ್ತಿರುವುದನ್ನು ನೋಡಿ ಸ್ವಲ್ಪ ಚಿಂತೆಯಾಗಿದ್ದರೂ, ದೇವರಿಗೆ ಏನಾದರೂ ಒಂದಿಷ್ಟು ಕಾಣಿಕೆ, ನೈವೇದ್ಯದ ಹರಕೆ, ಏನಾದರೂ ಮಾಡಿಕೊಂಡುಬಿಟ್ಟು ನೆಮ್ಮದಿಯಾಗಿ ಇದ್ದಿರಬೇಕು.

ಸರೋಜಾಕ್ಷರು ನಿಧಾನವಾಗಿ ಮೆಟ್ಟಲನ್ನು ಹತ್ತಿದರು.

ಮೆಟ್ಟಿಲುಗಳು ಮೊದಲನೇ ಮಹಡಿಗೆ ಹೋಗಿ ಮಹಡಿಯ ವರಾಂಡದಲ್ಲಿ ವಿರಾಮ ತೆಗೆದುಕೊಂಡು, ಒಂದು ತಿರುವು ತಿರುಗಿ ಮೂರನೆಯ ಅಂತಸ್ತು ಇರುವಂತೆ ತೋರುತ್ತೆ. ಆದರೆ ಮೆಟ್ಟಲು ಹತ್ತಿ ಹೋದರೆ ಹಾಗಿಲ್ಲ. ಅದು ಬರಿದಾದ ಬಿಸಿಲುಮಚ್ಚಿಗೆ ತಲುಪಿಸುತ್ತೆ ಎಂದು ಗೊತ್ತಾಗುತ್ತೆ. ಬಿಸಿಲು ಮಚ್ಚಿನಲ್ಲಿ ಮಳೆಯ ನೀರು ಬಿದ್ದು ಪಾಚಿ ಕಟ್ಟುತ್ತೆ, ತಿರುಗಿ ಬಿಸಿಲಿನ ತಾಪಕ್ಕೆ ಒಣಗಿ ಅವು ಬೇಳೆಯ ಹೊಟ್ಟಿನಂತೆ ಪುಡಿಪುಡಿಯಾಗಿ ಮೂಲೆಗಳಲ್ಲಿ ಬಂದು ಸೇರಿ ರಾಶಿಯಾಗುತ್ತೆ. ಅದರ ಮಧ್ಯೆ ಕಾಡುಗಿಡಗಳು ಬೆಳೆದುಕೊಳ್ಳುತ್ತವೆ. ದೈವವಶಾತ್ ಎಂದಾದರೊಂದು ದಿನ ಗುಡಿಸಲ್ಪಟ್ಟು ನಿರ್ಮೂಲನವಾಗಿಯೂ ಹೋಗುತ್ತೆ. ಆದರೆ ಇದು ಅಪರೂಪವೇ. ಏಕೆಂದರೆ ಬಿಸಿಲುಮಚ್ಚಿನ ಒಂದು ತುದಿಯಲ್ಲಿ ಮೆಟ್ಟಿಲುಗಳ ಮೇಲಿರುವ ಕೋಣೆಯನ್ನೇ ವಿಜಯಾ ದೇವರ ಮನೆಯಾಗಿ ಇಟ್ಟುಕೊಂಡಿದ್ದರು. ತಮ್ಮ ಇಷ್ಟಕ್ಕೆ ಕೆಲಸದವರು ಪರಕೆಯನ್ನು ಹಿಡಿದುಕೊಂಡು ಸರಕ್ಕನೆ ಮಹಡಿಗೆ ಬಂದು ಅವರ ಪೂಜಾ ಪಾಠಕ್ಕೆ ಅಡ್ಡಿ ತರುವುದು ವಿಜಯಾಗೆ ಹಿಡಿಸದು. ಅದೂ ಅಲ್ಲದೆ ಅವಶ್ಯಕತೆತಾನೆ ಏನಿದೆ? ಅಲ್ಲಿ ಯಾರು ಬಂದು ನೋಡುತ್ತಾರೆ? ಯಾವಾಗ ಈ ಕಸ ಒಂದು ಕಾರ್ಕಿನಂತೆ, ಮಳೆ ನೀರು ಹೋಗುವ ಪೈಪನ್ನು ಮುಚ್ಚಿಬಿಡುತ್ತೋ ಆಗ ತೀರದೆ. ಯಜಮಾನಿಯ ಹುಕುಮ್ ಕೆಳಗೆ ಹೋಗುತ್ತೆ ಮತ್ತು ಯಾರಾದರೊಬ್ಬ ಪರಕೆಧಾರಿ. ಅವರ ಹದ್ದುಗಣ್ಣಿನ ಉಸ್ತುವಾರಿಯಲ್ಲಿ ಅದನ್ನು ಗುಡಿಸಿಬಿಟ್ಟು ಹೋಗುತ್ತಾನೆ.

ಇಲ್ಲದಿದ್ದರೆ ತಿಂಗಳುಗಟ್ಟಲೆ ಆ ಕಸದ ರಾಶಿ ತುಂಬಿದ. ಬರಿದಾದ ಆ ಬಿಸಿಲು ಮಚ್ಚನ್ನು ನೋಡಿಕೊಂಡು ಆ 'ಎಲ್' ಆಕಾರದ ತಮ್ಮ ಕೋಣೆಯಲ್ಲೇ ವಿಜಯಾ ಕುಳಿತಿರುತ್ತಾರೆ. ಯಾರಿಗೆ ಗೊತ್ತು. ಧ್ಯಾನಮಗ್ನರಾಗಿಯೋ. ಜಪಮಾಲೆಯನ್ನು ಎಣಿಸಿಕೊಂಡೋ?

ಮೆಟ್ಟಿಲು ಹತ್ತಿ ಬಂದ ಕೂಡಲೇ ಇರುವುದು ದೊಡ್ಡ ವರಾಂಡಾ. ಅದರ ಎರಡು ಸಾಲಿನಲ್ಲೂ ಕೋಣೆಗಳು. ಬಲಗಡೆಯ ಸಾಲಿನಲ್ಲಿ ಮೊದಲನೆಯದೇ ಸರೋಜಾಕ್ಷರ ಕೋಣೆ. ಅದರ ಪಕ್ಕವಲ್ಲಿರುವುದು ಅವರ ಚಿಕ್ಕಮಗ ಕಮಲಾಕ್ಷನದು. ಅವನು ಇನ್ನೂ ಅವಿವಾಹಿತ ಯುವಕ. ಈಗ ಖರಗ್‌ಪೂರಿನಲ್ಲಿ ಓದುತ್ತಿದ್ದಾನೆ. ಆದ್ದರಿಂದ ಈಗ ಆ ಕೋಣೆ ಖಾಲಿಯಾಗಿದೆ. ಅವನ ಕೋಣೆಯ ಪಕ್ಕದ್ದು ಸರೋಜಾಕ್ಷರ ಇಬ್ಬರು ಹೆಣ್ಣು ಮಕ್ಕಳದು, ಅದರಲ್ಲಿ ಒಬ್ಬಳು ಆಗಲೇ ವಿವಾಹ ಬಂಧನದಲ್ಲಿ ಸಿಲುಕಿ ಹೊರಟುಹೋಗಿದ್ದಾಳೆ. ಇನ್ನೊಬ್ಬಳೂ ಇನ್ನೇನೂ ಹೋಗುವುದರಲ್ಲಿದ್ದಾಳೆ. ಆದರೆ ಈಗ ಸದ್ಯಕ್ಕೆ ಕೋಣೆಯನ್ನು ಭದ್ರವಾಗಿ ಹಿಡಿದಿಟ್ಟುಕೊಂಡಿದ್ದಾಳೆ. ಅಲ್ಲಿ ತನ್ನ ಸಾಮಾನುಗಳ ಹೊರತು ಇನ್ನೊಬ್ಬರ ಕರ್ಚೀಫಿಗೂ ಸಹ ಪ್ರವೇಶ ಮಾಡಲು ಅವಳು ಅನುಮತಿ ಕೊಡುವುದಿಲ್ಲ. ಒಂದು ದಿನ ಹೇಗೂ ಬಿಟ್ಟು ಹೋಗ ಬೇಕಲ್ಲಾ, ಎಂದೇ ಅವಳು ಹೀಗೆ ಬಿಗಿಹಿಡಿದು ಕುಳಿತಿದ್ದಾಳೋ ಏನೋ ಉಮೇದುವಾರರಿಗೆ ಎಲ್ಲಿ ಬೆಂಬಲವಿಲ್ಲವೋ ಅಲ್ಲೇ ತಾನೇ ಮಾತುಗಾರಿಕೆ ಹೆಚ್ಚು!

ಅಕ್ಕ ಬಂದಾಗ ಮಾತ್ರ ಮೀನಾಕ್ಷಿ ತನ್ನ ಕೋಣೆಯನ್ನು ಬಿಟ್ಟುಕೊಟ್ಟು ಅಮ್ಮನ ಕೋಣೆಗೆ ಮಲಗಲು ಹೋಗುತ್ತಾಳೆ. ಏಕೆಂದರೆ ಅಕ್ಕನಿಗೆ ಅಂದರೆ ಜೊತೆಯಲ್ಲಿ ಭಾವನನ್ನೂ ಸೇರಿಸಿಕೊಂಡು ತಾನೆ ಲೆಕ್ಕ. ಕಮಲಾಕ್ಷನ ಕೋಣೆಯಲ್ಲಿ ಯಾರೂ ಮಲಗಲು ಇಷ್ಟಪಡುವುದಿಲ್ಲ. ಆ ಕೋಣೆಯ ಕುಂದು ಏನೆಂದರೆ, ಸರೋಜಾಕ್ಷರ ಕೋಣೆಗೂ ಇದಕ್ಕೂ ಮಧ್ಯೆ ಗೋಡೆ ಎನಿಸಿಕೊಂಡಿರುವಂಥಾದ್ದು, ಮರದಲ್ಲಾದ ಪಾರ್ಟಿಷನ್ ಮಾತ್ರವೇ. ಮಾತಾಡಿದರೆ ಕೇಳಿಸುತ್ತೆ. ಸ್ವಲ್ಪ ಹಾಡೇನಾದರೂ ಹಮ್ ಮಾಡಿದರೆ ಕೇಳಿಸುತ್ತೆ. ರಾತ್ರಿ ಲೈಟ್ ಹಾಕಿಕೊಂಡು ಓದಿದರೆ ಗೊತ್ತಾಗುತ್ತೆ. ಅವಶ್ಯಕತೆಯಿಲ್ಲದಿದ್ದಲ್ಲಿ ತಮ್ಮ ಕಾರ್ಯಕಲಾಪಗಳನ್ನು ತಮ್ಮ ತಂದೆಗೆ ತಿಳಿಯುವಂತೆ ಮಾಡುವುದು ಅವರ ಮಕ್ಕಳಿಗೆ ಇಷ್ಟವಿಲ್ಲ.

ಮೀನಾಕ್ಷಿಯ ಕೋಣೆಯ ಪಕ್ಕದ್ದು, ಮುಂದುಗಡೆ ಬಾಲ್ಕನಿ ಇರುವ, ಎಲ್ಲಕ್ಕಿಂತ ದೊಡ್ಡ ಕೋಣೆ ಸರೋಜಾಕ್ಷರ ದೊಡ್ಡ ಮಗ ನೀಲಾಕ್ಷನದು. ತನ್ನ ಪತ್ನಿ ಪುತ್ರರೊಂದಿಗೆ ಅಲ್ಲಿ ಅವನ ಆವಾಸ. ಮೀನಾಕ್ಷಿಯ ಕೋಣೆಗೂ, ಇದಕ್ಕೂ ಮಧ್ಯೆ ಇದ್ದ ಬಾಗಿಲನ್ನು ಮುಚ್ಚಿ ಅದಕ್ಕೆ ಅಡ್ಡವಾಗಿ ಒಂದು ಬೀರೂವನ್ನು ಇಟ್ಟು ನೀಲಾಕ್ಷ ತನ್ನದೇ ಆದ ಜಗತ್ತನ್ನು ರಚಿಸಿಕೊಂಡಿದ್ದಾನೆ.

ಎಡಗಡೆಯ ಸಾಲಿನಲ್ಲಿ ಸ್ವಲ್ಪ ಜಾಗ ವರಾಂಡಾಗೆ ಸೇರಿಬಿಟ್ಟಿದ್ದರಿಂದ ಬಲಗಡೆಯ ಸಾಲಿನ ಹಾಗೆ ನಾಲ್ಕು ಕೋಣೆಗಳಿಗೆ ಬದಲು ಮೂರೇ ಕೋಣೆಗಳಿವೆ. ಇದರಲ್ಲಿ ಎರಡು ಯಜಮಾನಿಯ ವಶದಲ್ಲಿದೆ. ಒಂದರಲ್ಲಿ ಅವರು ರಾತ್ರಿಯ ಹೊತ್ತು ಮಾತ್ರ ತಮ್ಮ ದೇಹ ರಕ್ಷಣೆಗೆ ಉಪಯೋಗಿಸುತ್ತಾರೆ (ಪುರುಸೊತ್ತು ತಾನೆ ಎಲ್ಲಿದೆ ಅವರಿಗೆ!) ಇನ್ನೊಂದರಲ್ಲಿ ಅವರ ಸಂಸಾರದ ಸಾಮಾನು ಸರಂಜಾಮುಗಳನ್ನು ಭದ್ರವಾಗಿಟ್ಟಿದ್ದಾರೆ. ಅಲ್ಲಿ ಇಲ್ಲವಂತಹ

ಸಾಮಾನೇ ಇಲ್ಲ. ಪಾತ್ರೆಯ ದೊಡ್ಡ ಪೆಟ್ಟಿಗೆಯಿಂದ ಹಿಡಿದು, ಮುರುಕಲು ಕಬ್ಬಿಣದ ತುಂಡಿನವರೆಗೂ, ಹೆಚ್ಚಿನ ಹಾಸಿಗೆ ಮೊದಲು ಚಿಂದಿಯ ಬಟ್ಟೆಯವರೆಗೂ ಎಲ್ಲಾ ರಾಶಿ ಇದೆ. ಇದಲ್ಲದೆ ಖಾಲಿ ಟಿನ್ನು, ಬಾಟಲುಗಳು, ಖಾಲಿ ಬೆಂಕಿಪೊಟ್ಟಣ, ಅಂಗಡಿಯಲ್ಲಿ ಸಾಮಾನು ಕಟ್ಟಿದ್ದ ದಾರ, ಹಳೆಯ ಪೇಪರು, ಇತ್ಯಾದಿ ಇನ್ನೂ ಏನೇನೋ ಇದೆ. ಎಲ್ಲಾ ಹಳೇಬಾಗಿನ ಕಂಬಿ ವ್ಯಾಪಾರಕ್ಕೆ ಕೊಡುವಂತಹ ಸಾಮಾನುಗಳು. ಅವರ ಮಟ್ಟಿಗೆ ಇವೆಲ್ಲಾ ಬಹಳ ಅವಶ್ಯಕತೆಯಿರುವ, ಮುಖ್ಯವಾದ ಸಾಮಾನುಗಳು ತಾವು ಧ್ಯಾನಮಗ್ನರಾಗಿರುವಾಗ ಯಾರಾದರೂ ಮುಟ್ಟಿ ಅವುಗಳ 'ಮಡಿ'ಯನ್ನು ಕೆಡಿಸುತ್ತಾರೋ ಎಂದು ವಿಜಯಾ ಯಾವಾಗಲೂ ಅದಕ್ಕೆ ಬೀಗ ಹಾಕಿಟ್ಟಿರುತ್ತಾರೆ.

ಜನರು ವಾಸ ಮಾಡುತ್ತಿರುವ ಮನೆಯಲ್ಲಿ ಒಂದು ಕೋಣೆಯ ಬಾಗಿಲಿಗೆ ಬೀಗ ಹಾಕಿರುವುದನ್ನು ನೋಡಲು ಅಸಹ್ಯವಾಗಿದೆ ಎಂದು ಸರೋಜಾಕ್ಷರು ಮುಂಚೆ ಹೇಳುತ್ತಿದ್ದರು. ಈಗೆಲ್ಲಾ ಏನೂ ಹೇಳುವುದಿಲ್ಲ. ಏಕೆಂದರೆ ಹಿಂದೆ ಇದಕ್ಕೆ ಉತ್ತರವಾಗಿ ವಿಜಯಾ ಹೇಳಿದ್ದಾರೆ: 'ನಿಮ್ಮ ಸಂಸಾರದಲ್ಲಿ ನಾನೂ ಒಂದು ಹೊಂದಾಣಿಕೆ ಇಲ್ಲದ ಅಸಹ್ಯ ವ್ಯಕ್ತಿಯೇ ಆದರೂ ಇದ್ದೀನಲ್ಲಾ ಕಣ್ಣಿಗೆ ಮುಳ್ಳಾಗಿ' ಎಂದು.

ವಿಜಯಾ ಮಾತಾಡುವ ವಿಧಾನವೇ ಹೀಗೆ.

ವಿಜಯಾರ ಮಕ್ಕಳೂ ಒಂದು ಧೋರಣೆಯಿಂದಲೇ ಮಾತಾಡುತ್ತಾರೆ. ಅವರ ಸಾಮಾನಿರುವ ಕೋಣೆಯನ್ನು ಕಮಲಾಕ್ಷ ಅಮ್ಮನ ಮ್ಯುಜಿಯಮ್ ಎನ್ನುತ್ತಾನೆ. ದೊಡ್ಡ ಮಗಳು ಮಯೂರಾಕ್ಷಿ, 'ಅಮ್ಮನ ವೈರಾಗ್ಯದ ನಿದರ್ಶನ' ಎನ್ನುತ್ತಾಳೆ ಮತ್ತು ಮೀನಾಕ್ಷಿ, 'ಮೂವತ್ತೆರಡು ಮಸಾಲೆಗಳು ತುಂಬಿದ ಬೀಡಾ' ಎಂದು ಹೇಳುತ್ತಾಳೆ. ನೀಲಾಕ್ಷನ ಮಾತು ಈ ರೀತಿಯದಲ್ಲ. ಅವನು ಅದುಮಿದ ಕೋಪದೊಂದಿಗೆ ಬಿಗಿದ ಧ್ವನಿಯಲ್ಲಿ ಹೇಳಿದ್ದಾನೆ: 'ಇದೊಂದು ಕೇವಲ ನಾಚಿಕೆಗೇಡಾದ ಅಧಿಕಾರದ ಒಂದು ನಮೂನೆ. ನಾನು ಒಂದೇ ಕೋಣೆಯಲ್ಲಿದ್ದುಕೊಂಡು ಕಷ್ಟಪಡ್ತಾ ಇದ್ದೇನೆ. ಈ ಕಡೆ ಇವರು ಕಸ ತುಂಬಿಡೋವಕ್ಕೆ ಒಂದು ಇಡೀ ಕೋಣೆಯೇ ಇಟ್ಟುಕೊಂಡಿದ್ದಾರೆ.'

ಇನ್ನೂ ಒಂದು ದಂಡವಾಗಿರುವ ಕೋಣೆಯ ಬಗ್ಗೆ ಅದುಮಿದ ಧ್ವನಿಯಲ್ಲಿ ಎಲ್ಲರೂ ಟೀಕೆ ಟಿಪ್ಪಣಿ ಮಾಡುತ್ತಾರೆ. ಆದರೆ ಆ ಬಿರುಗಾಳಿ ಸರೋಜಾಕ್ಷರ ಎದುರಿಗೆ ಬಂದು ಬೀಸುವುದಿಲ್ಲ. ಅದರ ಬಗ್ಗೆ ಸರೋಜಾಕ್ಷರ ಅಭಿಪ್ರಾಯ ಬದಲಾವಣೆಗೊಳ್ಳುವುದಿಲ್ಲ ಎಂಬುದು ಎಲ್ಲರಿಗೂ ಗೊತ್ತಿತ್ತು. ಆ ಕೋಣೆ ಇರುವುದು ಮೆಟ್ಟಲು ಹತ್ತಿ ಬಂದ ಕೂಡಲೆ ಎಡಗಡೆಗೆ. ಎಂದರೆ ಸರಿಯಾಗಿ ಸರೋಜಾಕ್ಷರ ಕೋಣೆಯ ಎದುರುಗಡೆಗೆ. ಅದರ ಬಾಗಿಲಿಗೆ ಒಂದು ಚೀಟಿಯ ಪರದೆಯೇನೋ ಹಾಕಿದೆ. ಆದರೆ ಅದನ್ನು ಇಳಿಯಬಿಟ್ಟಿರುವುದೇ ಅಪರೂಪ. ಯಾವಾಗಲೂ ಬಾಗಿಲ ಮೇಲೆ ಮುದುಡಿ ಹಾಕಿರುತ್ತೆ. ಆದ್ದರಿಂದ ಕೋಣೆಯ ಯಜಮಾನನನ್ನು ಯಾವಾಗಲೂ ಅಲ್ಲಿ ನೋಡಬಹುದು.

ನೀಲಾಕ್ಷನ ಅಭಿಪ್ರಾಯದಲ್ಲಿ ಅದೂ ಒಂದು ಅಸಹ್ಯವಾದ ದೃಶ್ಯವೇ. ಆದರೆ ಅದರ ಬಗ್ಗೆ ಅವನು ಏನೂ ಮಾಡುವ ಹಾಗಿಲ್ಲ. ಆ ಕೋಣೆಯಲ್ಲಿರುವ ವ್ಯಕ್ತಿ ಆ ಕೋಣೆಯ ಯಜಮಾನ, ನೀಲಾಕ್ಷನ ತಾತನ ಅಳಿಯ. ಈ ಸಂಸಾರದೊಂದಿಗೆ ತಾತನ ಕಾಲದಿಂದ ಇದ್ದಾರೆ. ತಲೆ ಸ್ವಲ್ಪ ಲೂಸ್ ಎನಿಸಿಕೊಂಡಿದ್ದ ಈ ಅಳಿಯನನ್ನು ಅವರು ತಕ್ಕ ಆದರ, ಮರ್ಯಾದೆ ಕೊಟ್ಟು ನೆಮ್ಮದಿಯಾಗಿ ಮನೆಯಲ್ಲಿ ಇಟ್ಟುಕೊಂಡಿದ್ದರು. ಆಮೇಲೆ ಸರೋಜಾಕ್ಷರೂ ಅವರನ್ನು ಹೊರದೂಡಲಿಲ್ಲ. ತಂಗಿ ಯಾವಾಗಲೋ ಪರಲೋಕವನ್ನೈದಿದರೂ, ತಂಗಿಯ ಗಂಡ ಇಲ್ಲೇ ಉಳಿದುಕೊಂಡರು. ಈಗಲೂ ಅವರಿಗಾಗಿ ಆಗಾಗ್ಗೆ ರಾಬ್ಡಿ (ಒಂದು ಬಗೆಯ ಸಿಹಿ) ಬರುತ್ತೆ. ರಾಜಭೋಗ ಬರುತ್ತೆ. ಚಿಂಗ್ಡಿ ಎನ್ನುವ ಮೀನು ಮತ್ತು ರುಯಿ ಮೀನಿನ ತಲೆ ತರಲಾಗುತ್ತೆ. ಅವರಿಗಾಸೆಯಾಯಿತೆಂದರೆ ಬರುತ್ತೆ. ಈ 'ದೃಷ್ಟಿಶೂಲ'ವನ್ನೂ ಸರೋಜಾಕ್ಷರ ಮನೆಯವರು ಸಹಿಸಿಕೊಂಡಿರಬೇಕಾಗಿದೆ. ಏಕೆಂದರೆ ಈ 'ಸ್ಪೆಷಲ್' ಖರ್ಚನ್ನು ಮಾಡುವವರು ಸರೋಜಾಕ್ಷರೇ!

ಹುಡುಗರು ಈ ಅತಿಶಯವಾದ ಅಪವ್ಯಯವನ್ನು ನೋಡಿ ಬೇಸರಪಡುವುದು ಸಹಜವೇ. ಇತರ ಬಳಗದವರೂ 'ಇದೇನು ವಿಚಿತ್ರವೋ' ಎನ್ನುವರು. ಆದರೂ ಸೈರಿಸಿಕೊಂಡೇ ಹೋಗಬೇಕಾಗಿತ್ತು.

ಸೋದರತ್ತೆ ಇಲ್ಲದ ಈ ಮಾವ, ಹುಡುಗರಿಗೆ ಅವರ ಚಿಕ್ಕ ವಯಸ್ಸಿನಲ್ಲಿ ತಕ್ಕಮಟ್ಟಿಗೆ ಆಕರ್ಷಣೀಯ ವ್ಯಕ್ತಿಯೇ ಆಗಿದ್ದರು. ಏಕೆಂದರೆ ಮಕ್ಕಳನ್ನು ಆಡಿಸಲು, ಎಲ್ಲಾ ತರಹದ ಕುಶಲ ಕಲೆಗಳು ಅವರಿಗೆ ತಿಳಿದಿತ್ತು. ಅಷ್ಟೇಕೆ, ಮಕ್ಕಳೊಂದಿಗೆ ಆಡುವಾಗ ಅವರು ತಾವೂ ಮಗುವಾಗಿ ಹೋಗುತ್ತಿದ್ದರು, ಸಮ ವಯಸ್ಕರಾಗಿ ಹೋಗುತ್ತಿದ್ದರು.

ಆದರೆ ಯಾರೂ ಯಾವಾಗಲೂ ಮಗುವಾಗಿರುವುದಿಲ್ಲವಲ್ಲಾ. ಅವರುಗಳ ಬಾಲ್ಯವೂ ತಕ್ಕ ತಕ್ಕ ಸಮಯದಲ್ಲೇ ಮುಗಿಯಿತು, ಮತ್ತು ತಾವುಗಳು ಆಗತಾನೆ ಕಲಿತ ತಮ್ಮ ಜ್ಞಾನದ ಕಣ್ಣನ್ನು ತೆರೆದು ನೋಡಿದರು. ಎಷ್ಟೊಂದು ಅಪವ್ಯಯದ ಧಾರೆ ತಡೆಯಿಲ್ಲದೆ ಹರಿದುಹೋಗುತ್ತಿದೆ ಎಂದು. ಆದರೂ ಪ್ರತಿನಿತ್ಯವೂ ಸರೋಜಾಕ್ಷರು ತಮ್ಮ ದಣಿದ ದೇಹವನ್ನು ಹೊತ್ತು ಮೆಟ್ಟಲುಗಳನ್ನು ಹತ್ತಿ ಬಂದ ಕೂಡಲೇ ಮೊದಲು ವಿಚಾರಿಸುವುದು, ವಿಧುರನಾದ ಈ ಭಾವ ಮೈದುನನನ್ನೇ! ಮೆಟ್ಟಲು ಹತ್ತಿದೊಡನೆಯೇ ಎಡಗಡೆ ತಿರುಗಿ ಕೇಳುತ್ತಾರೆ: 'ಏನು ಶಾರದಾ, ಏನು ಸಮಾಚಾರ? ಈವತ್ತೇನಾದರೂ ಹೊಸ ವಿಷಯ ಕಂಡು ಹಿಡಿದೆಯೇನು?'

ಶಾರದಾಪ್ರಸಾದ್, ಒಂದು ಮರದ ಮಂಚದ ಮೇಲೆ ಕುಳಿತು, ಹಿಂದೆ ಮುಂದೆ ಪಕ್ಕದಲ್ಲಿ ಮತ್ತು ಮಡಿಲಲ್ಲಿ, ಹಳೆಯ, ಹರಿದುಹೋದ, ಹಳೆಯದಾದ ಪುಸ್ತಕಗಳ ಗೋಣೀಚೀಲಗಳನ್ನು ಹರಡಿಕೊಂಡಿರುವರು. ಮಾತು ಕೇಳಿ, ತಲೆಯೆತ್ತಿ ನೋಡುತ್ತಾರೆ ಅಥವಾ ಕೆಲವು ಬಾರಿ ನೋಡದೆಯೇ 'ಕಂಡುಹಿಡಿಯುವುದೇನಣ್ಣಾ, ಅದು ಇದ್ದೇ

ಇದೆಯಲ್ಲಾ. ಚಂದ್ರ–ಸೂರ್ಯರಂತೆ ಸತ್ಯವಾಗಿ ! ನಾವೇ, ಕಣ್ಣಿದ್ದುಕೊಂಡೇ ಕುರುಡರು. ನಾನು ಕೇವಲ ಇವನ್ನು ಕಣ್ಣು ಮುಂದೆ ಎತ್ತಿ ಹಿಡಿದು ತೋರಿಸಲು ಪ್ರಯತ್ನಪಡುತ್ತಿದ್ದೇನೆ' ಎನ್ನುವರು.

ಜನರ ಜ್ಞಾನದ ಕಣ್ಣನ್ನು ತೆರೆಯಲು ಪ್ರಯತ್ನಪಡುತ್ತಿದ್ದಾರೆ ಶಾರದಾಪ್ರಸಾದ್. ಒಂದು ದೊಡ್ಡ ಸಂಶೋಧನೆಯ ಪುಸ್ತಕವನ್ನು ಬರೆಯುತ್ತಿದ್ದಾರೆ.

ಅದರ ಸಂಶೋಧನೆಯ ವಿಷಯ ವಸ್ತು, ಆಧುನಿಕ ವಿಜ್ಞಾನ ಮತ್ತು ಪುರಾತನ ಯೋಗಶಾಸ್ತ್ರ, ಯೋಗ–ಶಕ್ತಿ. ಆಧುನಿಕ ವಿಜ್ಞಾನ ಇದುವರೆಗೆ ಈ ಪ್ರಪಂಚಕ್ಕೆ ಕೊಟ್ಟಿರುವ, ಮತ್ತೆ ನಿತ್ಯವೂ ಹೊಸ ರೀತಿಯಲ್ಲಿ ಕೊಡಲು ಹೊರಟಿರುವ ವಿಷಯವೆಲ್ಲಾ, ಪ್ರಾಚೀನ ಭಾರತದ ಋಷಿ–ಯೋಗಿಗಳಿಗೆ ಕೇವಲ ಮಕ್ಕಳಾಟವಾಗಿತ್ತು. ಸಾವಿರಾರು ವರ್ಷಗಳ ಹಿಂದೆ ಈ ಭಾರತ ದೇಶವೇ ವಿಜ್ಞಾನದ ಕೊನೆಯ ಮಾತನ್ನು ಹೇಳಿಕೊಂಡು ಬಂದಿದೆ. ಈ ಸತ್ಯವನ್ನು ನಿರೂಪಿಸುವುದಕ್ಕಾಗಿಯೇ ತನ್ನ ಜೀವನವನ್ನು ಮೀಸಲಿಟ್ಟಿದ್ದಾರೆ ಶಾರದಾಪ್ರಸಾದ್. ತನ್ನ ಜೀವನದ ಆದಿಯಿಂದ ಇದರ ವಿಷಯುವಾಗಿ ಸಮಾಚಾರಗಳನ್ನು ಶೇಖರಿಸುತ್ತಾ ಬಂದಿದ್ದಾರೆ. ತತ್ವಗಳನ್ನನುಸರಿಸಿ ಉಪಮಾನ–ಉಪಮೇಯಗಳನ್ನು ಲಿಪಿಗಳಾಗಿ ಇಳಿಸುತ್ತಾ ಬಂದಿದ್ದಾರೆ. ಎಲ್ಲವನ್ನೂ ಒಂದು ಕಡೆ ಶೇಖರಿಸಿ ಇಟ್ಟುಕೊಂಡುಬಿಟ್ಟರೆ ಆಮೇಲೆ ಥೀಸೀಸ್ ಬರೆಯಲು ಪ್ರಾರಂಭಿಸಬಹುದು, ಎಂಬುದು ಅವರ ಯೋಚನೆ.

ಸರೋಜಾಕ್ಷರು ಆಗಾಗ ವಿಚಾರಿಸುತ್ತಾರೆ, 'ಏನು ಶಾರದಾ? ಥೀಸೀಸ್ ಎಷ್ಟು ದೂರ ಮುಂದುವರಿಯಿತು?' ಎಂದು.

ಶಾರದಾನೂ ಮಹೋತ್ಸಾಹದಿಂದ ಹೇಳುತ್ತಾರೆ. 'ಇದೋ, ಇನ್ನೇನು ಮುಗಿಯಿತು ಅಣ್ಣಾ. ಈಗ ಶುರು ಮಾಡಬೇಕು. ಇನ್ನೂ ಸ್ವಲ್ಪ ವಿಷಯ ಶೇಖರಣೆ ಬಾಕಿ ಇದೆ.'

ಸರೋಜಾಕ್ಷರು ಕೆಲವು ವೇಳೆ ನಕ್ಕು, ಹೊರಟುಹೋಗುವರು. ಕೆಲವು ಸಮಯ ಹೇಳುವರು. 'ಊಂ, ಪ್ರಾರಂಭ ಮಾಡಿಯೇಬಿಡು. ಕೈ ಹಾಕದಿದ್ದರೆ ಮುಂದುವರಿಯುವುದಿಲ್ಲ' ಎನ್ನುವರು. 'ಇಲ್ಲ, ಅಣ್ಣಾ.' ಶಾರದಾ ಪ್ರಸಾದ್ ತನ್ನಷ್ಟಕ್ಕೇ ಹೇಳಿಕೊಳ್ಳುವರು. 'ಎಲ್ಲಾ ಕಡೆಗಳಿಂದಲೂ ವಿಷಯಗಳನ್ನು ಜೋಡಿಸಿಕೊಳ್ಳದೆ ಕೈ ಹಾಕುವುದು ಸರಿಯಲ್ಲ.' ಜೋಡಿಸಿಕೊಂಡಾದ ಮೇಲೆ ನಗುತ್ತಾ ಹೇಳಿಕೊಳ್ಳುವರು 'ಕೈ ಹಾಕುತ್ತೇನೆ, ಮತ್ತು...... ಸಾಯುತ್ತೇನೆ'.

ಶಾರದಾ ಪ್ರಸಾದ್‌ಗೆ ಅವರ ಪಿತ್ರಾರ್ಜಿತ ಆಸ್ತಿಯ ಭಾಗದಿಂದ ತಿಂಗಳು ತಿಂಗಳೂ ಸ್ವಲ್ಪ ಹಣ ಬರುತ್ತಿತ್ತು. ದಾಯಾದಿ, ಸೋದರಳಿಯ, ಕರುಣೆಯಿಂದಲೋ, ಅಥವಾ ಲೋಕಾಪವಾದಕ್ಕೆ ಹೆದರಿಯೋ ಏನೋ, ಅಂತೂ ದುಡ್ಡನ್ನು ಕಳುಹಿಸಿಕೊಡುತ್ತಾನೆ. ತಾನೇ ಹೊಡೆದುಕೊಳ್ಳುವುದಿಲ್ಲ. ಶಾರದಾಪ್ರಸಾದ್ ಆ ದುಡ್ಡಿನಿಂದ ರಾಜ್ಯದಲ್ಲಿನ ಹಳೆಯ ಪುಸ್ತಗಳನ್ನೂ ಕ್ಷಯರುಗಟ್ಟಲೆ ಕಾಗದವನ್ನೂ ಕೊಂಡುಕೊಳ್ಳುವರು. ಇವನ್ನು ಅವರು ಜೋಡಿಸಿ ಇಡುವುದರಲ್ಲೂ ಒಂದು ವೈಶಿಷ್ಟ್ಯವಿತ್ತು. ಬೇರೆ ಬೇರೆ ಅಧ್ಯಾಯಗಳನ್ನು ಲೆಕ್ಕ ಮಾಡಿ.

ಪಂಚ್ ಮಾಡಿ ಅವುಗಳನ್ನು ದಾರದಿಂದ ಕಟ್ಟಿ, ರಟ್ಟು ಹಾಕಿ, ಅಕ್ಕರೆಯಿಂದ ಇಡುತ್ತಿದ್ದರು. ಅದಲು ಬದಲಾಗದಿರಲು ಹಾಳೆಗಳಿಗೆ ನಂಬರು ಹಾಕಿಯೂ ಇಡುವರು.

ವಿಜಯಾ ಕೆಲವೊಮ್ಮೆ ಮಾಡುವ ಟೀಕೆ ತೀಕ್ಷ್ಣ, ಚೇಳಿನ ಕೊಂಡಿಯಂತಹುದು. 'ಕಾಲಾಕಾಲಕ್ಕೆ ಸರಿಯಾಗಿ, ಸರಿಯಾದ ಕೆಲಸ ಮಾಡುವ ಹಾಗೆ ಬಡಿದು ಹೇಳುವವರಿಲ್ಲವಾದ್ದರಿಂದಲೇ ನಾವು ಈಗ ಒದೆ ತಿನ್ನುತ್ತಿರುವುದು.'

ಕಮಲಾಕ್ಷ ರಜೆಯಲ್ಲಿ ಬಂದಾಗ ಆಗಾಗ ಹೇಳುತ್ತಿದ್ದ 'ಮಾವಯ್ಯನ ಥೀಸೀಸ್ ನಮ್ಮ ಜೀವಮಾನದಲ್ಲೇ ಆಗಿದ್ದಿದ್ದರೆ ನೋಡಿಬಿಟ್ಟು ಹೋಗಬಹುದಾಗಿತ್ತು.'

ಮಯೂರಾಕ್ಷಿ ಬರುವುದೇ ಅಪರೂಪ.

ಆದರೆ ಬಂದಾಗ ಕಟುವಾಗಿಯೇ ಟೀಕಿಸುತ್ತಾಳೆ, "ಅದೇನೋಪ್ಪ, ನಾನು ಹೇಳ್ಳೋದು. ಈ ಥೀಸೀಸ್ ಎಲ್ಲಾ ಬರೀ ಒಂದು ಟೊಳ್ಳುಮಾತು. ಹೆಂಡತಿ ಇಲ್ಲ. ಮಾವನ ಮನೆಯಲ್ಲಿ ಭೇರೂರಿ ಕುಳಿತಿದ್ದೇನಲ್ಲಾ ಅನ್ನುವ ನಾಚಿಕೆಗೇಡನ್ನು ಮರೆಮಾಚಲು ಒಂದು ನೆಪ ಈ ಥೀಸೀಸ್. ಅದನ್ನು ಅವರು ಎಂದೂ ಬರೆಯುವುದಿಲ್ಲ. ನೀವುಗಳು ಬೇಕಾದರೆ ನೋಡಿ. ಇದು ಹುಚ್ಚೂ ಅಲ್ಲ, ಬೆಪ್ಪೂ ಅಲ್ಲ. ಬರೀ ಆಷಾಡಭೂತಿ."

ಮುಂಚೆಯಲ್ಲಾ ಮಯೂರಾಕ್ಷಿ ಇಷ್ಟೊಂದು ಆಕ್ರೋಷದೊಡನೆ ಹೇಳುತ್ತಿರಲಿಲ್ಲ. ಈಗೆಲ್ಲಾ ಹೇಳುತ್ತಾಳೆ. ಅವಳ ಅಪ್ಪ, ಅಣ್ಣ, ತಮ್ಮಂದಿರನ್ನು, ಅವಳ ಗಂಡ, ಗುಗ್ಗು, ಮೊದ್ದು, ಪೆದ್ದು ಎಂದು ಹಾಸ್ಯ ಮಾಡುವುದರಿಂದ ನಾಚಿಕೆಯಿಂದ, ಅವಮಾನದಿಂದ ಅವಳಿಗೆ ಒಂದು ತರಹ ಆಕ್ರೋಷ ಬಂದುಬಿಟ್ಟಿದೆ. ಇಲ್ಲದಿದ್ದರೆ, ಈ ಮಾವಯ್ಯ ಇವರುಗಳ ಸಂಸಾರದಲ್ಲಿ ಒಬ್ಬ, ಬೇಡದ, ಪರರನ್ನಂಟ ಬಾಳುವ ಜೀವಿ ಎಂಬ ಭಾವನೆಗಳು ಅವಳ ತಲೆಗೆ ಹತ್ತಿರಲಿಲ್ಲ. ಆದರೆ ಈಗ ಮಯೂರಾಕ್ಷಿ ತನ್ನ ಗಂಡನ ಮನೋಭಾವದಂತೆ, ಅವನ ದೃಷ್ಟಿಯಲ್ಲೇ ನೋಡಲು ತೊಡಗಿದ್ದಾಳೆ. ಮೀನಾಕ್ಷಿಗೆ ಇನ್ನೂ ಇಂತಹ ಯೋಚನೆಗಳು ಬಂದಿಲ್ಲ. ಕಾರಣ, ಅವಳಿಗಿನ್ನೂ ಗಂಡ ಬಂದಿಲ್ಲ. ಆದರೆ ಅವಳು ತಾನೇ ಪ್ರಪಂಚವನ್ನು ಅರಿಯಲು ಕಲಿತಿದ್ದಾಳೆ. ಆದ್ದರಿಂದ ಅವಳಿಗೂ ಮಾವಯ್ಯನ ಈ ನಿಶ್ಚಿಂತೆಯ ಜೀವನ ಕಂಡರೆ ಅಸಹ್ಯ. ಅದಕ್ಕೇ ಅವಳೂ ಹೇಳುತ್ತಾಳೆ. "ನಾವೂ ಸತ್ತು ಮನುಷ್ಯನಾಗಿ, ಮನೆ ಅಳಿಯನಾಗಿ ಹುಟ್ಟಬೇಕು! ಅಬ್ಬಾ, ಯಾರ ಅಳಿಯ, ಯಾರು ಸಾಕುತ್ತಾರೆ ನೋಡು!"

ಹೇಳುತ್ತಾಳೆ ಆದರೆ ಸರೋಜಾಕ್ಷರ ಎದುರಿಗಲ್ಲ!

ಅವರು ಬಯ್ಯುತ್ತಾರೆ ಎಂದಲ್ಲ, ಏನೋ ಒಂದು ವಿಧವಾದ ಧಿಕ್ಕಾರದಿಂದ ಹೇಳುತ್ತಾರೆ, ಇಂತಹ ಮಾತಿನ ಒಂದು ತುಣುಕನ್ನು ಕೇಳಿದರೂ ಸಹ. ಒಂದು ಸಲ ಕಣ್ಣೆತ್ತಿ ನೋಡಿ ಹೇಳುತ್ತಾರೆ. 'ಇಂತಹ ತುಚ್ಛವಾದ ಮಾತುಗಳು ಹೇಗೆ ನಿಮ್ಮ ತಲೆಗೆ ಹೊಳೆಯುತ್ತೆ? ಹೇಳಿ ನೋಡೋಣ ?' ಆದ್ದರಿಂದ ಅವರ ಎದುರಿಗೆ ಯಾರೂ ಹೇಳುವುದಿಲ್ಲ.

ಅಂತೂ ಅವರು ಮೆಟ್ಟಲು ಹತ್ತಿ ಬಂದ ತಕ್ಷಣ ಮೊದಲು ಮಾತನಾಡಿಸುವುದು ಈ ಅವಾಂತರದ ವ್ಯಕ್ತಿಯನ್ನೇ! "ಏನು ಶಾರದಾ, ಪೇಪರು, ಗೀಪರು ಇದೆ ತಾನೇ?"–

"ಏನು ಶಾರದಾ ಸಾಯಂಕಾಲದ ಹೊತ್ತು, ಸ್ವಲ್ಪ ಹೊರಗಡೆ ತಿರುಗಾಡಿಕೊಂಡು ಬರುವುದಿಲ್ಲವೇ? ಮೈ ಹೇಗೆ ಸರಿಯಾಗಿರುತ್ತೆ ಮತ್ತೆ?"–"ಶಾರದಾ, ಬಂಗಾಳಿ ಟೈಪ್‌ರೈಟರ್ ಇದ್ದಿದ್ದರೆ ನಿನಗೆ ಅನುಕೂಲವಾಗುತ್ತಿತ್ತು ಅಲ್ಲವೇ?" ಮುಂತಾಗಿ ವಿಚಾರಿಸುವರು.

ಮಿಕ್ಕವರ ಕಿವಿಗೆ ಬಿದ್ದರೆ, ಅವರುಗಳು ಕುಳಿತ ಕಡೆಯೇ ಹಲ್ಲು ಕಡಿಯುತ್ತಾ ಹೇಳುವರು, "ಅದಕ್ಕೇನಂತೆ? ನೀವೇ ಒಂದನ್ನು ತೆಗೆದು ಕೊಡಿ, ಅಷ್ಟು ಪ್ರೀತಿ ಇದೆಯಲ್ಲಾ!– ಮೈಗೇನಾಗಿದೆ ಧಾಡಿ, ಏನೂ ಕೊರತೆ ಕಾಣುವುದಿಲ್ಲ, ಊಟ ಮಾಡುವುದನ್ನು ನೋಡಿದರೆ!– ಓಹೋ, ಕಾಗದದ ಬಗ್ಗೆ ವಿಚಾರಣೆ ನಡೆಯುತ್ತಿದೆಯೇ! ಸರಿ, ಮತ್ತೆ ಇನ್ನು ಕ್ವಯರ್‌ಗಟ್ಟಲೆ ಕಾಗದ ಬಂದು ಬೀಳುತ್ತೇ," ಮುಂತಾದ ಟೀಕೆಗಳನ್ನು ಮಾಡಿಕೊಳ್ಳುತ್ತಾರೆ.

ಆದರೆ ಆ ಪ್ರಶ್ನೆಗಳನ್ನು ಕೇಳಿಸಿಕೊಂಡವರಿಗೆ ಗೊತ್ತು, ಇದು ಪ್ರಶ್ನೆಯಲ್ಲ, ಮಾತಿಗೋಸ್ಕರ ಮಾತಾಡಲು ಒಂದು ನೆಪಕ್ಕಾಗಿ, ಎಂದು. ಅದಕ್ಕೇ ಅವರೂ ತನ್ನ ಪಾಡಿಗೆ ಹೇಳಿಕೊಳ್ಳುವಂತೆ– "ನೀವೂ ಎಂತಹವರಣ್ಣಾ, ಟೈಪ್ ಮೆಷಿನಂತೆ! ದೇವರು ಐದೈದು ಬೆರಳುಗಳನ್ನು ಏತಕ್ಕೆ ಕೊಟ್ಟಿದ್ದಾನೆ?–ಈ ಶರೀರವೇ? ಈ ಶರೀರ ದಧೀಚಿಯ ಮೂಳೆಗಳಿಂದ ತಯಾರಾದದ್ದು, ಗೊತ್ತೇ! ಇದು ವಜ್ರ, ವಜ್ರ!– ಕಾಗದವೇ? ಇಲ್ಲದೇ ಹೋಗಲು ನಾನು ಬಿಟ್ಟರೆ ತಾನೇ? ಮುಗಿಯುವುದರೊಳಗೆಯೇ ತಂದು ಹಾಕಿಕೊಂಡು ಬಿಡುತ್ತೇನಲ್ಲಾ!– ಎನ್ನುವರು. ಸರೋಜಾಕ್ಷರು ಬಹುಶಃ ಅಷ್ಟರೊಳಗೆ ತಮ್ಮ ಕೋಣೆಯೊಳಗೆ ಹೋಗಿ ಬಿಟ್ಟಿರುವರು. ಆದರೆ ಇಂದು ಸರೋಜಾಕ್ಷರು ಮಾತನಾಡಿಸುವುದನ್ನೇ ಮರೆತುಬಿಟ್ಟರು. ಮೆಟ್ಟಿಲುಗಳನ್ನು ಹತ್ತಿ ನೆಟ್ಟಗೆ, ನಿಶ್ಶಬ್ದದಿಂದ ತಮ್ಮ ಕೋಣೆಯೊಳಗೆ ಹೊರಟುಹೋದರು. ಭಯಂಕರವಾದಂತಹ ಒಂದು ಬಳಲಿಕೆ ತೋರುತ್ತಿತ್ತು. ಆದ್ದರಿಂದಲೇ ಎಂದೂ ಮಾಡದಿದ್ದುದನ್ನು ಇಂದು ಮಾಡಿದರು. ಕೈ ಕಾಲು ತೊಳೆದುಕೊಳದೆ, ಬಟ್ಟೆಗಳನ್ನೂ ಬದಲಾಯಿಸಿಕೊಳ್ಳದೆ, ಹಾಗೆಯೇ ಹಾಸಿಗೆಯ ಮೇಲೆ ಮಲಗಿಕೊಂಡರು. ಸರೋಜಾಕ್ಷರ ವಿಷಯದಲ್ಲಿ ಇದೊಂದು ಎಂದೂ ನಡೆದಿಲ್ಲದ ನಿಯಮದ ಉಲ್ಲಂಘನೆ!

ಮಲಗಿರುವ ಸರೋಜಾಕ್ಷರಿಗೆ ಮೇಲಿನ ಮೆಟ್ಟಿಲುಗಳ ತುದಿಯಲ್ಲಿ ನಿಂತು ಗಟ್ಟಿಯಾಗಿ ಕೂಗಾಡುವ ವಿಜಯಾರ ಧ್ವನಿ ಕೇಳಿಸಿತು–"ಅದೇನು ಸುಡುಗಾಡು ಕಾಲೇಜಿನಲ್ಲಿ ದಿನಾಲೂ ಮೀಟಿಂಗೇ? ಇಷ್ಟು ರಾತ್ರಿಯಾಯಿತಲ್ಲಾ. ಇನ್ನೂ ಮೀಟಿಂಗು ನಡೆಯುತ್ತಾ ಇದೆಯೇ? ಧನ್ಯವಾದ. ಧನ್ಯವಾದ!" ಧನ್ಯವಾದವನ್ನು ವಿಜಯಾ ಯಾರಿಗೆ ಅರ್ಪಿಸಿದರು ಎಂದು ಗೊತ್ತಾಗಲಿಲ್ಲ. ಸರೋಜಾಕ್ಷರಿಗೋ ಅಥವಾ ಕಾಲೇಜು ಆಡಳಿತಕ್ಕೋ. ಯಾರಿಗೆ ಗೊತ್ತು.

ಆದರೂ ಸರೋಜಾಕ್ಷರು ಎದ್ದು ಬಂದು ತನ್ನ ಆಗಮನವನ್ನು ಸೂಚಿಸಲಿಲ್ಲ. ಹೇಗೆ ಹೋಗಿ ಬಿದ್ದುಕೊಂಡರೋ ಹಾಗೆಯೇ ಇದ್ದರು. ಆದರೆ ಸ್ವಲ್ಪ ಹೊತ್ತಿಗೆಲ್ಲಾ ಕೋಣೆಯೊಳಗೆ ಕಾಲ ಸಪ್ಪಳ ಕೇಳಿಸಿತು. ಅದರ ಜೊತೆಗೆ ಒಂದು ಉದ್ವಿಗ್ನ ಕಂಠದ ಪ್ರಶ್ನೆ ಕೇಳಿಸಿತು.– "ಅಣ್ಣಾ. ಬಂದು ಮಲಗಿಬಿಟ್ಟರಲ್ಲಾ. ಮೈ ಸರಿಯಿಲ್ಲವೇ?"

ಸರೋಜಾಕ್ಷರು ಮುಚ್ಚಿದ್ದ ಕಣ್ಣುಗಳನ್ನು ತೆರೆದು ನೋಡಿದರು. ಏಕೋ ಏನೋ, ಕಣ್ಣುಗಳು ಉರಿಯಲಾರಂಭಿಸಿತು. ಹಠಾತ್ತನೆ ಎದ್ದು ಕುಳಿತುಕೊಂಡರು.

ಸಾಧಾರಣವಾಗಿಯೇ ಹೇಳಿದರು, "ಇಲ್ಲ, ಇಲ್ಲ, ಮೈಯೆಲ್ಲಾ ಸರಿಯಾಗಿದೆ."

"ತುಂಬಾ ಹೊತ್ತಾಯಿತಲ್ಲಾ, ಮೀಟಂಗು ಇತ್ತೇನೋ?"

ಸರೋಜಾಕ್ಷರು ಈಗ ಅವರ ಕಡೆ ನೋಡಿದರು. ಒಂದು ತರಹವಾಗಿ ನಕ್ಕು 'ಇಲ್ಲ, ಅವರುಗಳು ನನ್ನನ್ನು ಘೆರಾವ್ ಮಾಡಿದ್ದರು' ಎಂದರು.

"ಘೆರಾವೇ? ಅವರುಗಳೆಂದರೆ? ಯಾರು?" ಶಾರದಾ ಪ್ರಸಾದ್ ಬೆರಗುಗಣ್ಣಿನಿಂದ ನೋಡುತ್ತಿದ್ದರು. ಸರೋಜಾಕ್ಷರು ಮೃದು ನಕ್ಕು ಹೇಳಿದರು–"ಹುಡುಗರು, ನನ್ನ ವಿದ್ಯಾರ್ಥಿಗಳು ಘೆರಾವ್ ಮಾಡಿದ್ದರು. ನನ್ನ ಕೈಯಲ್ಲಿ ಕ್ಷಮೆ ಬೇಡಿಸಿಯೇ ಕಡೆಗೆ ಬಿಟ್ಟರು."

ಶಾರದಾನೂ ನಕ್ಕು ಹೇಳಿದರು– "ಥತ್, ಏನು ಹೇಳುತ್ತಿರೋ, ತಮಾಷೆ ಮಾಡುತ್ತೀರಾ? ತಮಾಷೆ ಅಲ್ಲವಯ್ಯಾ, ನಿಜವಾಗಿಯೂ."

"ನಿಜವಾಗಿಯೂ? ಕ್ಷಮೆ ನೀವು ಕೇಳಿದರಾ? ಇದನ್ನು ನನ್ನನ್ನು ನಂಬು ಅನ್ನುತ್ತೀರಾ?" ಸರೋಜಾಕ್ಷರು ಮೃದು ನಕ್ಕು ಹೇಳಿದರು–"ಈಗಿನ ಪ್ರಪಂಚದಲ್ಲಿ ನಂಬಲಾಗದಂತಹ ಮಾತೇ ಇಲ್ಲ ಶಾರದಾ. ಅದು ಹಳೆಯ ಕಾಲದ ವಿಷಯವಾಗಿಹೋಗಿದೆ."

ಶಾರದಾ ಹಠಾತ್ತನೆ ಉತ್ತೇಜನೆಗೊಳ್ಳುತ್ತಾರೆ. "ಅದು ಹಳೆಯ ಕಾಲದ ಮಾತಾಗಿ ಹೋಯಿತೇ? ತುಂಬಾ ಜಂಭ, ಈಗಿನ ಕಾಲಕ್ಕೆ! ನಾನು ಕೇಳುತ್ತೇನೆ, ಯಾತರ ಜಂಭ? ಚಂದ್ರನನ್ನು ಗುದ್ದಿ ಬಿಟ್ಟು ಬಂದರು ಎಂತಲೇ? ಪ್ರಾಚೀನ ಕಾಲದ ಪುರಾಣ, ಉಪಪುರಾಣ, ರಾಮಾಯಣ, ಮಹಾಭಾರತ ಇವೆಲ್ಲವನ್ನೂ ತೆರೆದು ನೋಡಿದೆಯಾ, ಈಗಿನ ಕಾಲವೇ? ನೀನು ನೋಡಿಲ್ಲ. ನೋಡುವುದೂ ಇಲ್ಲ. ನೋಡಿದ್ದರೆ ನಿನಗೆ ಗೊತ್ತಾಗುತ್ತಿತ್ತು. ಚಂದ್ರಲೋಕ ಮಾತ್ರವೇ ಅಲ್ಲ, ಆಗ ಮನುಷ್ಯರು ಇಂದ್ರಲೋಕ, ವರುಣ ಲೋಕ, ವಾಯುಲೋಕ, ಅಷ್ಟೇಕೆ ಗೋಲೋಕದವರೆಗೂ ಅನಾಯಾಸ– ಆದರೆ ಹರ, ನರ, ಯದು ಮಧುಗಳೇ? ಈ ಕಾಲ ಆಗಿನ ಕಾಲ, ನಾಲ್ಕು ಕಾಲಗಳಲ್ಲೂ ಅವರುಗಳೆಲ್ಲಾ ಒಂದೇ ತರಹದವರೇ. ಹೋಗುತ್ತಿದ್ದವರು ಯೋಗಸಿದ್ಧರು. ಯೋಗಸಿದ್ಧರು ಹೋಗುತ್ತಿದ್ದವರು. ಯೋಗ–ಸಿದ್ಧರು ಎಂಬುದರ ಅರ್ಥವೇನು? ವಿಜ್ಞಾನ–ಸಿದ್ಧರು ಎಂಬುದೇ. ಬರೀ ಹೆಸರಿನಲ್ಲಿ ವ್ಯತ್ಯಾಸ ಅಷ್ಟೇ.

ಈ ಕಾಲ ವಿಜ್ಞಾನ ಎಂದು ಹೇಳುತ್ತೆ. ಆ ಕಾಲ ಯೋಗ ಎಂದು ಹೇಳುತ್ತಿತ್ತು. ಯೋಗ ಎಂಬುದೇ ಅದರ ಸರಿಯಾದ ಅರ್ಥ ಮತ್ತು ಹೆಸರು. ಯೋಗದ ಅರ್ಥ ಮನಃಸಂಯೋಗ, ಮನಃ ಸಂಯೋಗದ ಫಲವಾಗಿಯೇ ವಸ್ತುವು ಹುಟ್ಟುವುದು. ವಸ್ತುವಿಗೆ ರಾಸಾಯನಿಕ ಸಂಯೋಗ, ದೂರದೊಂದಿಗೆ ಹತ್ತಿರದ ಸಂಯೋಗ."

ಈ ಮಾತೆಲ್ಲಾ ಸರೋಜಾಕ್ಷರು ನೂರೆಂಟು ಸಲ ಕೇಳಿದ್ದೇ. ಆದರೂ ಉತ್ಸಾಹದಿಂದ ಹೊಳೆಯುತ್ತಿರುವ ಆ ಮುಖವನ್ನು ನೋಡಿ, "ಹೌದು, ಅದೇನೋ ನಿಜವೇ" ಎಂದರು.

. "ನಿಜವೆಂದು ಒಪ್ಪಲೇಬೇಕು." ಉತ್ಸಾಹ ಉಕ್ಕುತ್ತಿರುವ ಮುಖ ಮತ್ತಷ್ಟು ಉಜ್ವಲಗೊಳ್ಳುತ್ತೆ. "ಮತ್ತೇ ಕೇಳುತ್ತೇನೆ, ಯಾತರ ದೊಡ್ಡಸ್ತಿಕೆ ನಿನಗೆ? ನೋಡಪ್ಪಾ, ಈಗಿನ ಯುಗ ಇನ್ನೂ ವಿಜ್ಞಾನದ ಅಆಇಈ ಕಲಿಯುತ್ತಾ ಇದೆ. ಆದರೆ ಆ ಕಾಲದ ಋಷಿಮುನಿಗಳೋ? ಅವರುಗಳು ಅದರ ಕೊನೆಯವರೆಗೂ ಎಲ್ಲಾ ಕಲಿತು ಮುಗಿಸಿಬಿಟ್ಟಿದ್ದರು. ನಾರದ ಮುನಿಗಳು ಒಂದು ಕೊಟ್ಟಣದ ಮೇಲೆ ಹತ್ತಿ ತ್ರಿಭುವನವನ್ನೇ ಸುತ್ತಿ ಬರುತ್ತಿದ್ದರು. ಆ ಕೊಟ್ಟಣ ಅನ್ನುವುದು ಏನು?" ಒಂದು ರಹಸ್ಯ ಸೂಚಕ ನಗು ನಕ್ಕು ಹೇಳಿದರು, "ಇದರ ವಿಷಯವಾಗಿ ಬರೆಯುತ್ತೇನೆ, ಆ ಕೊಟ್ಟಣ ಇನ್ನೇನೂ ಅಲ್ಲ, ಒಂದು ಪವರ್‌ಫುಲ್ ಹೆಲಿಕಾಪ್ಟರ್. ಅವರು ಅದರಲ್ಲಿ ಹತ್ತಿಕೊಂಡು ಬ್ರಹ್ಮಾಂಡವೆಲ್ಲಾ ಸುತ್ತುತ್ತಿದ್ದರು. ಕೆಳಗಿನಿಂದ ನೋಡುವಾಗ ಅದು ಗಾಲಿಯಂತೆ ಇದೆ ಎಂದು) ಅದೇ ಹೆಸರು ನಿಂತುಹೋಗಿದೆ. ಮನೋರಥ ಎಂದರೇನು? ಇದೇ ವಸ್ತು, ಅಬ್ಬಾ ಯೋಚನೆ ಮಾಡಲು ಶುರು ಮಾಡಿದರೆ ತಲೆಕೆಟ್ಟು ಹೋಗುತ್ತೆ, ಅಣ್ಣಾ." ಶಾರದಾ ಹೇಳುತ್ತಾರೆ, "ಆಧುನಿಕ ವಿಜ್ಞಾನ ಒಂದೊಂದು ರಾಕೆಟ್ಟನ್ನು ಕಳುಹಿಸಿದಾಗಲೂ, ದೊಡ್ಡ ಶಹಬಾಸ್‌ಗಿರಿಯ ಕೆಲಸ ಮಾಡಿದೆ ಎಂದುಕೊಳ್ಳುತ್ತೆ. ಆದರೆ ಆಗ? ಗ್ರಹದಿಂದ ಗ್ರಹಕ್ಕೆ ಓಡಾಟ ಸಾಮಾನು ಕೊಳ್ಳುವುದು. ಮಾರುವುದು, ಇವೆಲ್ಲಾ ಏನೂ ವಿಶೇಷದ ಮಾತೇ ಆಗಿರಲಿಲ್ಲ. ಒಂದು ಮಾತಿಗೆ ಹೇಳುತ್ತೇನೆ. ಬೃಹಸ್ಪತಿಗ್ರಹದ ಒಬ್ಬ ಹುಡುಗ, ಶುಕ್ರ ಗ್ರಹಕ್ಕೆ ಹೋಗಿ ಅಲ್ಲಿ ವಿದ್ಯಾಭ್ಯಾಸ ಮಾಡಿದ, ಪ್ರೇಮಿಸಿದ, ಕೀರ್ತಿಗಳಿಸಿದ ಎಂದರೆ ವಿಜ್ಞಾನ ಎಷ್ಟರ ಮಟ್ಟಿಗೆ ಮುಂದುವರಿದಿದ್ದಿರಬಹುದು ಆಗ. ಹೇಳಿ ನೋಡೋಣ? ಈಗ ಒಂದು ಮಾರಣಾಸ್ತ್ರವನ್ನು ಕಂಡು ಹಿಡಿದು ಬಿಟ್ಟು ಹೆಮ್ಮೆಪಡುತ್ತೆ ಈ ಯುಗ, ಆದರೆ ಆಗಲೋ? ಮೃತಸಂಜೀವಿನಿ. ವಿಶಲ್ಯಕರಣಿ. ಅಮರರಾಗುವ ಮಂತ್ರ ಏನೆಲ್ಲಾ ತಿಳಿದುಕೊಂಡಿದ್ದರು. ಶಾರದಾ ಶತಪಥ ನಡೆಯುತ್ತಾರೆ. ತಲೆಯ ಕೂದಲನ್ನು ಮುಷ್ಟಿಯಲ್ಲಿ ಹಿಡಿದುಕೊಳ್ಳುತ್ತಾರೆ. "ತಲೆಯೆಲ್ಲಾ ಕೆಟ್ಟುಹೋಗುತ್ತೆ. ಅಲ್ಲವೇ? ಹೇಳಿ?"

ಸರೋಜಾಕ್ಷರಿಗೆ ಬಹಳ ಬಳಲಿಕೆಯಾಗಿತ್ತು. ಆದರೂ ಮೃದುವಾಗಿ ನಕ್ಕು ಹೇಳಿದರು: "ಇಲ್ಲ, ತಲೆಯನ್ನು ಸರಿಯಾಗಿಟ್ಟುಕೊಂಡಿರಬೇಕು. ಜ್ಞಾನವನ್ನು ಕಳೆದುಕೊಳ್ಳಬಾರದು."

"ಅದು ಗೊತ್ತು. ಆದರೆ ಎಲ್ಲಿ ಇರುತ್ತೇ ಹೇಳಿ? ಯೋಚಿಸಲು ಶುರು ಮಾಡಿದರೆ ತಲೆಯೊಳಗೆ ಬೆಂಕಿ ಹತ್ತಿಕೊಳ್ಳುತ್ತೆ."

"ಅದೇ ಭಾರತವರ್ಷದ ಜನರಾದ ನಾವು ಇಂದು. ತಿರುಪೆಯವರಂತಾಗಿದ್ದೇವೆ. ನಮಗೆ ಏನೂ ಇರಲಿಲ್ಲ. ಏನೂ ಇಲ್ಲ. ನಾವು ಮೂರ್ಖರು. ಅಜ್ಞರು ಅನ್ನುವ ಹಾಗಿದ್ದೇವೆ. ಆದರೆ ನಮಗೆ ಎಲ್ಲವೂ ಇತ್ತು."

ಸರೋಜಾಕ್ಷರು ವಿಷಾದವಾದ ಧ್ವನಿಯಿಂದ ಹೇಳಿದರು. "ಏನಿತ್ತೋ ಗೊತ್ತಿಲ್ಲ ಶಾರದಾ. ಆದರೆ ಈಗ ಏನೂ ಇಲ್ಲ ಎಂಬುದನ್ನು ಅರಿಯುತ್ತಿದ್ದೇನೆ."

ಶಾರದಾ ದೃಢವಾಗಿ ಹೇಳಿದರು: "ಕೇವಲ ಅರಿತುಕೊಂಡರೆ ಮಾತ್ರ ಸಾಲದು. ಅದಕ್ಕೆ ಪ್ರತೀಕಾರವನ್ನು ಮಾಡಬೇಕು. ಜಗತ್ತಿನ ಸಮಕ್ಷಮದಲ್ಲಿ ಇದರ ಪ್ರಮಾಣಗಳನ್ನೆಲ್ಲಾ

ಎತ್ತಿ ತೋರಿಸಿ, ಎಲ್ಲರನ್ನೂ ಆಶ್ಚರ್ಯಗೊಳಿಸಬೇಕು. ಏನು ಮಾಡುತ್ತಿದ್ದಾರೆ ರಾಷ್ಟ್ರದೂತರುಗಳು? ದೇಶದ ದುಡ್ಡನ್ನು ಖರ್ಚು ಮಾಡಿಕೊಂಡು ವಿದೇಶಗಳಲ್ಲಿದ್ದುಕೊಂಡು, ವಿಲಾಸ-ಕೇಳಿಗಳಲ್ಲಿ ಮುಳುಗಿದ್ದು, ದೇಶದ ಹೆಸರನ್ನು ಕೆಡಿಸುತ್ತಿದ್ದಾರೆ. ಏಕೆ ಈ ಪ್ರಮಾಣಗಳನ್ನು ತೆಗೆದು ತೋರಿಸಿ, ದೇಶದ ಕೀರ್ತಿಯನ್ನು ಬೆಳಗಲು ಏಕೆ ಪ್ರಯತ್ನಿಸುವುದಿಲ್ಲ? ನಾವು ಕೇಳುವುದಕ್ಕಾಗುವುದಿಲ್ಲವೇ, ಹೊರದೇಶಕ್ಕೆ ಹೋಗಿ ಅಲ್ಲಿ ದೇಶದ ಹಣವನ್ನು ಅಪವ್ಯಯ ಮಾಡಿ, ಸಾರಾಯಿ ಕುಡಿದು ಮತ್ತಾಗಿ ಬಿದ್ದಿರುವುದಕ್ಕೆಂತಲೇ ಹೋಗಿರುವುದು? ಕೇಳುವುದಕ್ಕೇನು ರಾಮಾಯಣದ ವಿಮಾನ ಯುದ್ಧ, ಪುಷ್ಪಕ ವಿಮಾನ ಇವುಗಳ ವಿಷಯ ಕೇಳಿದ್ದೀರಾ" ಸರೋಜಾಕ್ಷರಿಗೆ ತಲೆ ನೋಯುತ್ತಿತ್ತು. ಇನ್ನು ಮಾತಾಡಲು ಇಷ್ಟವಿರಲಿಲ್ಲ. ಆದರೂ ಹೇಳಿದರು– "ಇದನ್ನಿಟ್ಟುಕೊಂಡು ಒಂದು ಅಧ್ಯಾಯ ಬರೆದುಬಿಡು ಶಾರದಾ."

"ನೀವು ಹೇಳಬೇಕೆ? ಅದೆಲ್ಲಾ ರೆಡಿಯಾಗಿದೆ. ತುಂಬಾ ಕಡೆ ಚೆತ್ತಾಗಿದೆ. ಇಲ್ಲದಿದ್ದರೆ ನಿಮಗೆ ತೋರಿಸುತ್ತಿದ್ದೆ, ಹೇಗೆ ಇವರನ್ನೆಲ್ಲಾ ಅಲ್ಲಗಳೆದಿದ್ದೇನ ಎಂದು. ನಮ್ಮ ದೇಶದ ವ್ಯಾಪಾರಿಗಳನ್ನು ಕಪ್ಪು ಹಣ ಮಾಡುವವರನ್ನು ನಾವು ಸೂಚಿಸುತ್ತೇವೆ. ಆದರೆ ನಾನು ಕೇಳುತ್ತೇನೆ, ಈ ನಮ್ಮ ದೇಶದ ಮುಖಂಡರುಗಳು, ರಾಷ್ಟ್ರದೂತರುಗಳು ಅವರಿಗಿಂತ ಅನಿಷ್ಟಕಾರಿಗಳು. ಕಪ್ಪು ಹಣ ಮಾಡುವವರ ಕೆಲಸಕ್ಕೆ ಒಂದು ಕಾರಣ ಇದೆ. ವ್ಯಾಪಾರಕ್ಕೆ ಹೇಗೂ ಇಳಿದಿದ್ದಾರೆ, ಅವಕಾಶ ಸಿಕ್ಕಾಗ ಇನ್ನೆರಡು ಕಾಸು ಲೂಟಿ ಮಾಡುತ್ತಾರೆ. ಆದರೆ ಇವರುಗಳು? ದೇಶದ ವಿದ್ಯಾವಂತ, ಸಭ್ಯ ಎಂದೆನಿಸಿಕೊಂಡಿರುವ ಈ ಅಸಭ್ಯ, ಅವಿವೇಕಿಗಳು ಮಾಡುವುದು ಎಂತಹದ್ದು? ಒಂದು ಕೈಯಲ್ಲಿ ಭಿಕ್ಷೆಯ ಪಾತ್ರೆಯನ್ನು ಹಿಡಿದುಕೊಂಡು, ಇನ್ನೊಂದು ಕೈಯಲ್ಲಿ ಕಾಸಿನ ಕಾಣಿಕೆ ಕೊಡುತ್ತೀರಿ, ಅವರ ದೇಶದ ಚಿಂದಿಯನ್ನ ಆರಿಸಿಕೊಂಡು, ಮೈಗೆ ಸುತ್ತಿಕೊಂಡು, ಹೇಳುತ್ತೀರಿ, ನೋಡು ನಾನು ಎಷ್ಟು ಚೆನ್ನಾಗಿ ಅಲಂಕರಿಸಿಕೊಂಡಿದ್ದೇನೆ ಎಂದು, ಅದೂ ಅವರ ಹತ್ತಿರವೇ! ತಿಳಿಯುತ್ತಿಲ್ಲ, ಎಷ್ಟು ಹಾಸ್ಯಾಸ್ಪದರಾಗುತ್ತೀರಿ ಎಂದು ಈ ಕಡೆ ನಿನ್ನ ಮನೆಯೇ ಲಕ್ಷ್ಮಿಯ ಖಜಾನೆ!"

ಕೇಳಿ ಕೇಳಿ ಸರೋಜಾಕ್ಷರಿಗೆ ಕಂಠಪಾಠವಾಗಿ ಹೋಗಿದೆ ಇವೆಲ್ಲಾ. ಏಕೆಂದರೆ ಶಾರದಾಪ್ರಸಾದರ ತಲೆಯಲ್ಲಿ ಈ ಜ್ವಾಲೆ ಹತ್ತಿಕೊಂಡ ಕ್ಷಣವೇ ಅವರ ಬಾಯಿಂದ ಜ್ವಾಲಾಮುಖಿಯಂತೆ ಈ ಮಾತುಗಳು ಹೊರಬೀಳುತ್ತಿರುತ್ತದೆ. ಈ ಜ್ವಾಲೆಯನ್ನು ತಡೆಯುವ ಒಂದೇ ಒಂದು ಔಷಧ.

ಹೊಸದಾಗಿ ಒಂದು ಅಧ್ಯಾಯವನ್ನು ಬರೆಯುವ ಕೋರಿಕೆ.

ಸರೋಜಾಕ್ಷರು ಆ ಕೋರಿಕೆಯನ್ನೇ ಮಾಡಿದರು.

ಶಾರದಾನೂ ಗಂಭೀರವಾಗಿ ಹೇಳಿದರು, ಇದೋ ಹೊರಟೆ ಅಣ್ಣಾ, ವಿಷಯ ಬಿಸಿ ಬಿಸಿಯಾಗಿರುವಾಗಲೇ ಬರೆದುಬಿಡುವುದು ಒಳ್ಳೆಯದು.

"ಅದೇ ಒಳ್ಳೆಯದು" ಎಂದು ಹೇಳಿ ಸರೋಜಾಕ್ಷರು ತಿರುಗ ಮಲಗಿಕೊಂಡರು. ಕೋಣೆಯಿಂದ ಹೊರಗೆ ಬಂದು, ತಿರುಗ ಆ ಕಡೆ ತಿರುಗಿ ಪುನಃ ಶಾರದಾ ಹೇಳುತ್ತಿದ್ದರು:

"ನಾನು ಎರಡು ಪುಸ್ತಕ ಬರೆಯಬೇಕಾಗುತ್ತೆ ಅಣ್ಣಾ, ಒಂದು ಆಧುನಿಕ ವಿಜ್ಞಾನ ಮತ್ತು ಪ್ರಾಚೀನ ಯೋಗ ಶಾಸ್ತ್ರದ ಉಪಮಾನಗಳೊಂದಿಗೆ ವ್ಯಾಖ್ಯಾನ, ಇನ್ನೊಂದು ಈಗ ಅಧೋಗತಿಗೆ ಇಳಿದಿರುವ ಭಾರತದ........."

ಅವರ ಮಾತಿನ ಮಳೆಗೆ ಅಡ್ಡಿಯಾಗಿ ವಿಜಯಾರ ಧ್ವನಿ ಮೆಟ್ಟಿಲುಗಳ ಮೇಲಿನಿಂದ ಕೇಳಿಸಿತು. "ಇಷ್ಟು ಹರಟೆ ಯಾರ ಜೊತೆಯಲ್ಲಿ ನಡೆಯುತ್ತಿದೆ ಅಳಿಯಂದಿರೆ? ಮಹಾರಾಜರು ಭಾವಮೈದುನರು ಬಂದಿದ್ದಾರೇನೋ?"

"ಸರಿಹೋಯಿತು! ಅತ್ತಿಗೆ!!" ಎಂದು ಚಿಕ್ಕ ಹುಡುಗನಂತೆ ತಮ್ಮ ಕೋಣೆಗೆ ಓಡಿದರು, ಶಾರದಾ. ವಿಜಯ್ ಬಾಗಿಲ ಹತ್ತಿರ ಬಂದು ನಿಂತರು. ಗಟ್ಟಿಯಾಗಿ ತಮ್ಮಷ್ಟಕ್ಕೆ ಹೇಳಿಕೊಂಡರು "ಓಡಿ ಹೋಗುವುದನ್ನು ನೋಡು, ಎಲ್ಲೋ ಕಳ್ಳ-ಗಿಳ್ಳ ಎಂಬಂತೆ!" ಆಮೇಲೆ ಧ್ವನಿಯನ್ನು ಸ್ವಲ್ಪ ಏರಿಸಿ – "ನನಗಿನ್ನೂ ಪೂಜೆ-ಪಾಠ ಮುಗಿದಿಲ್ಲ" ಎಂದರು.

ಸರೋಜಾಕ್ಷರಿಗೆ ಈ ಮಾತಿನ ಇಂಗಿತ ಗೊತ್ತು. ಸದ್ದಿಲ್ಲದೆ ಎದ್ದು ಹೋಗಿ ಬಾಗಿಲ ಪರದೆಯನ್ನು ಒಂದು ಕಡೆಗೆ ತಳ್ಳಿ, ಮೇಲಕ್ಕೆ ಹಾಕಿ ಬಂದು ಕುಳಿತುಕೊಂಡರು. ತಿರುಗಿ ಮಲಗಿಕೊಳ್ಳದೆ ತಲೆ ಬಾಗಿ ಕುಳಿತುಕೊಂಡರು. ವಿಜಯಾ, 'ಒಂದು ಕಾಲು ನೀರಿನಲ್ಲಿ, ಇನ್ನೊಂದು ಕಾಲು ದಡದಲ್ಲಿ' ಎಂಬಂತೆ ನಿಂತುಕೊಂಡು, ಕಟು ಧ್ವನಿಯಲ್ಲಿ ಕೇಳಿದರು: "ದಿನವೂ ಏನದು ಅಷ್ಟು ಹೊತ್ತು ಮೀಟಿಂಗು?"

ಸರೋಜಾಕ್ಷರು ಒಂದು ಸಲ ತಲೆ ಎತ್ತಿ ಆ ತೀಕ್ಷ್ಣ ಧ್ವನಿ ಬಂದ ಕಡೆ ನೋಡುತ್ತಾರೆ. ಇಷ್ಟು ಅನಾದರ, ಅಸಡ್ಡೆಯಲ್ಲೂ ಅವಳ ಶರೀರ ಕಾಂತಿ ಕುಂದಿಲ್ಲ. ಹಳದಿಯೇರಿದ ಹಣೆಯಲ್ಲಿ ಕುಂಕುಮ ನಿತ್ಯದಂತೆಯೇ ಹೊಳೆಯುತ್ತಿದೆ. ನಿತ್ಯದಂತೆಯೇ ನಾರುಮಡಿಯ ಅಗಲವಾದ ಕೆಂಪು ಅಂಚು ಜ್ವಲಿಸುತ್ತಿದೆ. ಮೈ ಮೇಲೆ ರವಿಕೆ-ಗಿವಿಕೆ ಹಾಕುವ ಗೋಜೇ ಇಲ್ಲದಿರುವುದರಿಂದ ಬಲಗಡೆಯ ಬರಿಯ ಭುಜವು ಕಾಣುತ್ತಿದೆ. ಅದೂ ಅಷ್ಟೇ ಹೊಳಪನಿಂದ ಕೂಡಿದೆ, ಪುಷ್ಟಿಯಾಗಿಲ್ಲ ಅಷ್ಟೇ.

ಈ ಜ್ವಲಿಸುವ ಮೂರ್ತಿಯನ್ನು ನೋಡಿ ಹಠಾತ್ತನೆ ಅವರ ಮನಸ್ಸಿನಲ್ಲಿ ಒಂದು ಕ್ರೂರವಾದ ಕಲ್ಪನೆ ತಲೆಯೆತ್ತಿತು, ಶಾಂತ ಸ್ವಭಾವದ ಸರೋಜಾಕ್ಷರ ಮನಸ್ಸಿನಲ್ಲಿ! ಅವರು ಯೋಚಿಸಿದರು, ಇವಳು ವಿಧವೆಯಾದರೆ ಹೇಗೆ ಕಾಣುತ್ತಾಳೆ ಎಂದು! ಮನಸ್ಸಿನಲ್ಲೇ ಆಕೆಯ ಹಣೆಯ, ಸೀರೆಯ, ಕೆಂಪು ರೇಖೆಗಳನ್ನು ಅಳಿಸಿದರು. ಕೈಯ ಬಳೆಯ ಕೆಂಪನ್ನೂ ಸಹ ಅಳಿಸಿ ಅಂದುಕೊಂಡರು. 'ಬರೀ ಹಳದಿ ಬಣ್ಣದ ಮರದ ಗೊಂಬೆಯಂತೆ ಕಾಣುತ್ತಾಳೆ.'

ಮನಸ್ಸಿನಲ್ಲೇ ಆ ಬಣ್ಣವನ್ನು ಅಳಿಸುತ್ತಾರೆ.

ವಿಜಯಾ ಈ ಅವಕಾಶದಲ್ಲಿ ಅಸಹನೆಯಿಂದ ತಿರುಗಿ ಕೇಳಿದರು: "ಸ್ಕೂಲು, ಕಾಲೇಜುಗಳಲ್ಲಿ ಮೀಟಿಂಗ್ ನಡುರಾತ್ರಿವರೆಗೂ ನಡೆಯುತ್ತದೆಯೇ?"

ಸರೋಜಾಕ್ಷರು ಅಸಡ್ಡೆಯಿಂದ, ನಿಧಾನವಾಗಿ ಹೇಳಿದರು. "ಮೀಟಿಂಗ್ ಇರಲಿಲ್ಲ?"

"ಮೀಟಿಂಗ್ ಇರಲಿಲ್ಲವೇ?" ಸಂದೇಹದಿಂದ ಕೂಡಿ ಆಕೆಯ ಧ್ವನಿ ಇನ್ನೂ ತೀಕ್ಷ್ಣವಾಗಿ ಕೇಳಿಸುತ್ತೆ.

"ಮತ್ತೇ ನೀಲು ಹೇಳಿದ, ಟೆಲಿಫೋನಿನಲ್ಲಿ ಹೇಳಿದರು ಮೀಟಿಂಗ್ ಇದೆ ಅಂತ?"
"ಅಂದಿರಬಹುದು."

"ಅಂದಿರಬಹುದು? ಚೆನ್ನಾಗಿದೆ, ಎಷ್ಟೊಂದು ನಿಶ್ಚಿಂತೆ! ಮನೆಯವರಿಗೆ ಕಳವಳವಿರುತ್ತೆ ಅನ್ನುವ ಯೋಚನೆ ಇರುವುದಿಲ್ಲವೇನೋ?"

"ಕಳವಳ?"

ಸರೋಜಾಕ್ಷರು ಮತ್ತೊಮ್ಮೆ ಕಾವಲಿಗಿರುವ ಕೆಂಪುಗಳನ್ನು ನೋಡುತ್ತಾರೆ. 'ಯಮನಿಗೆಲ್ಲಿ ಸಾಧ್ಯ, ನಿನ್ನ ಈ ಕೆಂಪು ಕಾವಲುಗಾರರನ್ನು ಅತಿಕ್ರಮಿಸಿಕೊಂಡು ಹೋಗಿ, ನಿನಗೆ ವೈಧವ್ಯವನ್ನು ಉಂಟು ಮಾಡಲು!' ಎಂದುಕೊಳ್ಳುತ್ತಾರೆ.

"ಕಳವಳವೇತಕ್ಕೆ?"

"ಹೂಂ, ಅದೂ ಸರಿಯೇ" ವಿಜಯಾರ ವ್ಯಕ್ತಿತ್ವಕ್ಕೆ ವಿಶೇಷವೆನಿಸಿರುವುದು ಅವರ ಕಡೆದಂತಹ ಮುಖ. ಅದು ಇನ್ನೂ ಭಾವಹೀನ ಮರದಂತೆ ಕಾಣುತ್ತೆ. ಅವರ ಕಟುಕಂಠದಿಂದ ಹೊರಬಿತ್ತು. "ಹೇಳಿದ್ದೇ ನನ್ನ ತಪ್ಪು."

ಸರೋಜಾಕ್ಷರು ಅಷ್ಟರಲ್ಲೇ ಎದ್ದು ಮೈಮೇಲಿನ ಷರ್ಟನ್ನು ತೆಗೆದು ಸ್ಟಾಂಡಿನಲ್ಲಿ ತೂಗುಹಾಕುತ್ತಾ ಕೇಳಿದರು. "ನೀಲು ಮನೆಯಲ್ಲಿದಾನೆಯೇ?"

ನೀಲುವೇ? ವಿಜಯಾ ಅಸಡ್ಡೆಯನ್ನು ಸೂಚಿಸುವ ಹಾಗೆ ತುಟಿಯನ್ನು ಮಡಿಸಿ ಕೇಳಿದರು, "ಏಕೆ? ಅಪ್ಪನು ಮನೆಗೆ ಬರಲು ಹೊತ್ತಾಗುತ್ತಾ ಇದೆ ಅಂತಲೇ?" ಕಳವಳದಿಂದಲೇ ಸರೋಜಾಕ್ಷರು ಸ್ವಲ್ಪ ವ್ಯಂಗ್ಯವಾಗಿಯೇ ಕೇಳಿದರು. "ಆಶ್ಚರ್ಯವೇನಿದೆ ಅದರಲ್ಲಿ? ಈಗತಾನೆ ಹೇಳಿದೆ, ಮನೆಯವರೆಲ್ಲಾ ಕಳವಳದಿಂದ ಕಂಗಾಲಾಗಿದ್ದಾರೆ ಎಂದು?"

"ಹೂಂ, ಹಾಗಿದ್ದಿದ್ದರೆ ಉದ್ಧಾರವಾದ ಹಾಗಾಗಿರುತ್ತಿತ್ತು! ಮಗ ಒಂದು ಸಲ ಟೆಲಿಫೋನ್ ಮಾಡಿಬಿಟ್ಟು ತನ್ನ ಕರ್ತವ್ಯ ಮುಗಿಯಿತೆಂದು ಹೊರಗೆ ಹೊರಟರು. ಸೊಸೆಯೂ ಅವರ ಜೊತೆಯಲ್ಲಿ ಕುಣಿಯುತ್ತಾ ಹೊರಟುಬಿಟ್ಟರು. ಆಯಿತು. ಮತ್ತೆ ಇನ್ನೇನಾಗಬೇಕಾಗಿದೆ! ಅಲಂಕಾರದ ಠೀವಿಯೇನು! ಮುಂದೆ ಕತ್ತರಿಸಿದ, ಹಿಂದೆ ಕತ್ತರಿಸಿದ ಒಂದು ಗೇಣುದ್ದದ ರವಿಕೆ, ಗಾಳಿಪಟದಂತಹ ತೆಳ್ಳಗಿನ ಸೀರೆ, ತುಟಿಗೆ ರಂಗು, ಉಗುರಿಗೆ ರಂಗು, ನೋಡಿದರೆ ತಲೆ ಕತ್ತರಿಸಿಕೊಳ್ಳುವ ಹಾಗಾಗುತ್ತೆ. ಒಂದು ರೂಮಿನ ಬಾಡಿಗೆ ಕೊಠಡಿಯಲ್ಲಿದ್ದವರ ಮಗಳು! ಸ್ವಲ್ಪ ನಯ, ನಮ್ರತೆಯ ವೇಷವೂ ಇತ್ತು. ಈಗ ಬಣ್ಣ ಬೆಳಕಾಯಿತು" ವಿಜಯಾ ಮುಖವನು ತಿರುವಿದರು. ಸರೋಜಾಕ್ಷರು ಯೋಚಿಸಿದರು. ಅನ್ಯಾಯವಾದ ಮಾತನ್ನು ತಾನು ಆಡುವುದಿಲ್ಲ. ಆದರೆ ಇದೊಂದೇ ತನ್ನ ಸಭ್ಯ ನಡವಳಿಕೆಯ ಕೊನೆಯ ನೀತಿಯೇ? ಅನ್ಯಾಯವನ್ನು ಪ್ರತಿಭಟಿಸದೆ ಇರುವುದೂ, ಅನ್ಯಾಯವನ್ನು ಮಾಡಿದಂತೆಯೇ ಅಲ್ಲವೇ? ಆದರೆ ಸರೋಜಾಕ್ಷರು ಯಾವಾಗಲೂ ತಾವು ಅನ್ಯಾಯವಾಗಿ ಆಡುವುದಿಲ್ಲ ಎಂಬ

ನೀತಿಯನ್ನು ಭದ್ರವಾಗಿ ಹಿಡಿದು, ತಮ್ಮನ್ನು, ಸಭ್ಯ, ವಿದ್ವಾಂಸನೆಂದು ತಿಳಿದುಕೊಂಡು ನೆಮ್ಮದಿಯಿಂದ ಇದುವರೆಗೂ ಇದ್ದಿದ್ದಾರೆ. ಹಾಗಾದರೆ ಈ ದುರ್ಬಲ ನೀತಿಯೇ ಅವರನ್ನು ತಪ್ಪು ದಾರಿಯಲ್ಲಿ ಕರೆದೊಯ್ಯುತ್ತದೆಯೇ? ಕಠಿಣವಾದ ಶಿಸ್ತಿನ ನೀತಿಯನ್ನು ಅನುಸರಿಸಿಕೊಂಡು, ಅನ್ಯಾಯವನ್ನು ಪ್ರತಿಭಟಿಸುತ್ತಾ ಬಂದಿದ್ದರೆ, ಇಂದಿನ ಕತೆಯೇ ಬೇರೆಯ ತರಹವಾಗಿರುತ್ತಿತ್ತೇನೋ! ಮನೆಯ ಒಳಗೆ ಹಾಗೂ ಹೊರಗೆಯೂ?!

ಆದರೆ ಸರೋಜಾಕ್ಷರು ಎಂದೂ ಅಧಿಕಾರವನ್ನು ಮಾಡುವುದಾಗಲಿ, ಪ್ರತಿಭಟನೆಯನ್ನು ಮಾಡುವುದಿರಲಿ, ಯೋಚಿಸುವವರೂ ಅಲ್ಲ. ನಿರ್ಲಿಪ್ತತೆಯಿಂದಿರುವ ಸಾಧನೆಯನ್ನೇ ನಡೆಸಿಕೊಂಡು ಬಂದಿದ್ದಾರೆ.

ತಪ್ಪು ಮಾಡಿದರೋ, ಸರಿಯೇ ಮಾಡಿದರೋ, ಅದರ ಜಮಾ-ಬಂದಿಯನ್ನು ನೋಡಲು ಹೋಗದೆ, ತಮಗೆ ಅಭ್ಯಾಸವಾಗಿರುವ ಈ ಸಾಧನೆಯನ್ನು ಇಂದು ಮರೆತು ಹೇಳಿದರು, “ಈ ಮೂರ್ತಿಯನ್ನು ಅವರು ತಾವೇ ಎತ್ತಿಲ್ಲ. ಅವರ ಗುಣವಂತ ಯಜಮಾನರು ಅವರ ಈ ಹೊಸ ಮೂರ್ತಿಯನ್ನು ರೂಪಿಸಿದ್ದಾರೆ.”

ಈ ಮಾತೇನೋ ನಿಜವೆ.

ನೀಲಾಕ್ಷನ ಹೆಂಡತಿ ಸುನಂದಾ, ಬಹಳ ಸಾಧಾರಣ ಮನೆತನದವರ ಮಗಳೇ ಆಗಿದ್ದಳು. ಅವಳು ಚಿಕ್ಕಂದಿನಲ್ಲಿ, ಅವಳ ಅಪ್ಪನ ಒಂದೇ ಕೊಠಡಿಯ ಮನೆಯ ಬಡತನದ ಸಂಸಾರದಲ್ಲೂ, ಒಂದು ಮೂಲೆಯಲ್ಲಿ ಕುಳಿತು, ಶಿವಪೂಜೆ, ವ್ರತಾದಿಗಳನ್ನು ಮಾಡಿದ್ದಾಳೆ. ತರುಣಿಯಾದ ಮೇಲೂ ಅವಳಿಗೆ, ಈ ವಾರ, ವ್ರತಗಳನ್ನು ಆಚರಿಸುವ ಆಸಕ್ತಿ ಇತ್ತು. ದೊಡ್ಡವರನ್ನು ನೋಡಿದರೆ ತಲೆ ಬಾಗಿಕೊಂಡು, ತಲೆಯ ಮೇಲೆ ಸೆರಗನ್ನೂ ಎಳೆದುಕೊಳ್ಳುತ್ತಿದ್ದಳು. ಕಾಲಿಗೆ ಆಲ್ತಾ* ಹಚ್ಚಿಕೊಳ್ಳುತ್ತಿದ್ದಳು. ಸ್ನಾನ ಮಾಡಿ ಬಂದು, ಕುಂಕುಮವನ್ನಿಟ್ಟುಕೊಳ್ಳದೆ ಒಂದು ತೊಟ್ಟು ನೀರೂ ಕುಡಿಯುತ್ತಿರಲಿಲ್ಲ. ಅಂತಹ ಸುನಂದಾಳ ಹಳೆಯ ಮೂರ್ತಿಯನ್ನು ಒಡೆದುಹಾಕಿ, ಹೊಸ ಮೂರ್ತಿಯನ್ನಾಗಿ ಮಾಡಿದ್ದಾನೆ ನೀಲಾಕ್ಷ. ಆದರೆ ಅದು ಒಡೆಯುವುದು ಬಹಳ ಸುಲಭವಾಗಿತ್ತೇ? ಅದಕ್ಕಾಗಿ ನೀಲಾಕ್ಷ ಸಾಕಷ್ಟು ಕ್ರೂರ, ಚತುರನಾಗಬೇಕಾಗಲಿಲ್ಲವೇ? ಒಂದು ದಿನದಲ್ಲಿ ಒಡೆಯಲಾಗಲಿಲ್ಲವಲ್ಲಾ! ಅಣು ಅಣುವಾಗಿ ದಿನವೂ ಎಷ್ಟೋ ಅನಿಚ್ಛೆ, ಕಣ್ಣೀರು, ಪ್ರತಿಭಟನೆ, ಹಠಗಳನ್ನು ಮುರಿದು, ಆ ಸಾಧಾರಣವಾದ ಹುಡುಗಿಯನ್ನು ಗುರುತಿಲ್ಲದೆ ಮಾಡಿದ್ದಾನೆ ನೀಲಾಕ್ಷ!

ಆಮೇಲೆ? ಆಮೇಲೆ ಆಗಿದೆ ಈಗಿನ ಈ ಹೊಸ ಮೂರ್ತಿ!

ಈ ಹೊಸ ಮೂರ್ತಿವೆತ್ತಿದ ಸುನಂದಾಳನ್ನು ನೋಡಲು ನೀಲಾಕ್ಷನಿಗೇ ಒಂದೊಂದು ಸಲ ಭಯವಾಗುತ್ತೆ. ಈಗ ಸುನಂದಾ, ಬೆನ್ನು ಕತ್ತರಿಸಿದ, ಹೊಟ್ಟೆ ಕತ್ತರಿಸಿದ ರವಿಕೆಯನ್ನು

---

* ಕಾಲಿಗೆ ಹಚ್ಚಿಕೊಳ್ಳುವ ರಂಗು, ಬಂಗಾಳಿಯರ ಪದ್ಧತಿ.

ತೊಟ್ಟು, ಅತ್ಯಾಧುನಿಕ ಲಲನೆಯ ಮುದ್ರೆಯನ್ನು, ವೇಷವನ್ನು ಹಾಕಿಕೊಂಡು ಪಾರ್ಟಿಗಳಿಗೆ, ನೀಲಾಕ್ಷನ ಸಲುವಾಗಿ ಮಾತ್ರವಲ್ಲದೇ, ತಾನೇ ಗಳಿಸಿದ ಆಮಂತ್ರಣ-ಪತ್ರಗಳನ್ನಿಟ್ಟುಕೊಂಡು ಪಾರ್ಟಿಗಳಿಗೆ ಹೋಗಿ ಬರುತ್ತಾಳೆ. ಹಿಹೀ ಎಂದು ಜೋರಾಗಿ ನಗುತ್ತಾಳೆ. ಕೀಚುದನಿಯಲ್ಲಿ ಮಾತಾಡುತ್ತಾಳೆ. ಹುಟ್ಟದಂದಿನಿಂದ ಇಂತಹ ಜೀವನದಲ್ಲೇ ಇದ್ದು ಪಳಗಿದವಳಂತೆ ನಟಿಸುತ್ತಾಳೆ.

ನೀಲಾಕ್ಷನು ತನ್ನ ಹೆಂಡತಿಯನ್ನು ತನ್ನ ಡೀಲರುಗಳೊಂದಿಗೆ ಸ್ವಲ್ಪ ನಗುತ್ತಾ ಮಾತ್ರ ಮಾತಾಡ ಹೇಳಿದರೆ, ಅವಳು ಅವರ ಮೈಯೊರಗಿ ಕುಳಿತು ಅಟ್ಟಹಾಸದೊಂದಿಗೆ ಅವರ ಮೈ ಮೇಲೆಯೇ ಬೀಳುತ್ತಾಳೆ. ನೀಲಾಕ್ಷ ತನ್ನ ಹೆಂಡತಿಯನ್ನು ಗಾಳವಾಗಿಟ್ಟುಕೊಂಡು ಆಳವಾದ ನೀರಿನ ದೊಡ್ಡ ಮೀನುಗಳನ್ನು ಹಿಡಿಯಲು ಪ್ರಯತ್ನ ನಡೆಸಿದ್ದ. ನೀಲಾಕ್ಷನ ಹೆಂಡತಿ ತನ್ನ ಗಂಡನಿಗೆ ಇಂತಹ ಹತ್ತಾರು ಮೀನುಗಳನ್ನು ಹಿಡಿದುಕೊಟ್ಟು, ಯಾವ ಸಂದಿಯಲ್ಲೋ ತಾನೇ ಆಳವಾದ ನೀರಿನ ಮೀನಾಗಿ ಹೋಗಿದ್ದಳು.

ಇವರುಗಳ ಒಬ್ಬನೇ ಮಗ ಉಜ್ವಲಾಕ್ಷ. ಎಲ್ಲರು ಅವನನ್ನ ಕರೆಯುವುದು ವಿಚ್ಚು ಎಂದು. ಮುಂಚೆಯೆಲ್ಲಾ ಸುನಂದಾಗೆ ಮಗ ಎಂದರೆ ಪ್ರಾಣ ಎನ್ನುವಂತಿತ್ತು. ಈಗ ಒಂದು ತೊಡಕೇನೋ! ಅಂತೂ ಅವಳ ಮಾತುಕತೆ, ನಡೆವಳಿಕೆಯಲ್ಲಿ ಅಂತಹ ಭಾವನೆಯೇ ತೋರುತ್ತೆ. ಆಗಾಗ ಹೇಳುತ್ತಿರುತ್ತಾಳೆ- 'ಇನ್ನೊಂದು ವರ್ಷ ಕಳೆದ ಮೇಲೆ ಅದನ್ನು ಬೋರ್ಡಿಂಗಿನಲ್ಲಿ ಬಿಟ್ಟುಬಿಡುತ್ತೇನೆ' ಎಂದು.

ಸರೋಜಾಕ್ಷರ ಕಿವಿಗೂ ಇದು ಬಿದ್ದಿದೆ. ಆದರೂ ಅವರು ಅವಳನ್ನು ಕರೆದು, ಕೇಳಿ, ತಮ್ಮ ಅಭಿಪ್ರಾಯವನ್ನು ಹೇಳಲು ಹೋಗಿಲ್ಲ. ಒಮ್ಮೊಮ್ಮೆ ಅವರ ಮನಸ್ಸಿಗೆ ಅದೂ ಒಳ್ಳೆಯದೇ ಎನಿಸಿದೆ. ಹುಡುಗನಿಗೆ ಬುದ್ಧಿ ತಿಳಿದಾಗ ಕಡೆಯ ಪಕ್ಷ, ತಾನು ಅಮ್ಮ-ಅಪ್ಪಾಗೆ ಒಂದು ತೊಡಕು, ಅವರ ಸ್ವೇಚ್ಛಾಚಾರಕ್ಕೆ ತೊಡಕಾಗಿದ್ದೇನೆ ಎಂಬುದು ತಿಳಿಯದಿರಲಿ.

ಆದರೆ ಆ ಮಾತು ಕಿವಿಗೆ ಬಿದ್ದರೆ ವಿಜಯಾ ಸುಮ್ಮನೆ ಇರುವವರಲ್ಲ, "ಹೌದು ಮತ್ತೆ, ಬೋರ್ಡಿಂಗಿನಲ್ಲಿ ಬಿಡದೇ ಹೋದರೆ ಅಮ್ಮ ಅಪ್ಪ ಸಾಹೇಬರಾಗೋದು ಹೇಗೆ? ಮಗನಿಗೆ ಐದು ವರ್ಷವಾಗುವುದಕ್ಕೇ ಕಾದಿದ್ದು ಅದನ್ನ ಮನೆಯ ಹೊರಗೆ ತಳ್ತೀನಿ ಅಂತ ಹೇಳೋಕೆ ನಿನಗೆ ನಾಚಿಕೆಯಾಗೋದಿಲ್ಲವೇ? ದಯೆ, ಮಮತೆ ಅನ್ನೋದನ್ನ ದೇವರು ನಿನ್ನ ಮನಸ್ಸಿಗೆ ಕೊಟ್ಟೇ ಇಲ್ಲವೇ?"

ಯಾವ ಸುನಂದಾ ಮದುವೆಯಾದ ಕೆಲವು ವರ್ಷಗಳವರೆಗೂ ಅತ್ತೆಯೊಂದಿಗೆ ತಲೆಯೆತ್ತಿ ಮಾತಾಡುವುದಕ್ಕೂ ಅಂಜುತ್ತಿದ್ದಳೋ, ಅದೇ ಸುನಂದಾ ಈಗ, ತನ್ನ ಮೋಟಾಗಿ ಕತ್ತರಿಸಿದ ಕೂದಲಿನ ತಲೆಯನ್ನು ಅಲ್ಲಾಡಿಸುತ್ತಾ, ನಯವಾಗಿಯೇ ಹೇಳುತ್ತಾಳೆ-"ಅದೇನೋ ಕೊಟ್ಟೇ ಇಲ್ಲವೇನೋ! ನಿಮಗೆ ಹಾಗೆ ಮನಸ್ಸಿಗೆ ಕಷ್ಟವಾದರೆ, ನೀವೇ ಆ ಜವಾಬ್ದಾರಿ ತೆಗೆದುಕೊಳ್ಳಿ. ನನಗೆ ಅವಕಾಶವೇ ಬಹಳ ಕಡಿಮೆ. ಸರಿಯಾಗಿ ನೋಡಿ-ಮಾಡಿ ಮಾಡುವುದಕ್ಕಾಗೋದಿಲ್ಲ. ಅದಕ್ಕೇ ತಾನೇ"-

ವಿಜಯಾಗೆ ಕೋಪ ಇದೆ, ಆದರೆ ರೋಷ ಇಲ್ಲ. ಅಹಂಕಾರ ಇದೆ ಆತ್ಮಗೌರವ ಇಲ್ಲ. ಅದಕ್ಕೇ ವಿಜಯಾ ಉತ್ತರ ಕೊಡುತ್ತಾರೆ, "ಹೂಂ. ನನಗೆ ಇನ್ನೇನೂ ಬೇರೆ ಕೆಲಸವಿಲ್ಲ, ನನ್ನ ಪೂಜೆ–ಪುನಸ್ಕಾರ ಎಲ್ಲವನ್ನೂ ಮೂಲೆಗೆ ಹಾಕಿಬಿಟ್ಟು ಆ ವಿಚ್ಚು ತುಂಟನ ಭಾರವನ್ನು ಹೆಗಲ ಮೇಲೆ ಹೇರಿಕೊಳ್ತೇನೆ!"

"ಮತ್ತೆ ಇನ್ನೇನು ಮಾಡೋದು?" ಸುನಂದಾ ಹುಬ್ಬು ಕುಣಿಸುತ್ತಾ ಹೇಳುವಳು, ಅವನ ಹಣೆಯಲ್ಲಿ ಬರೆದಿರೋದು ಬೋರ್ಡಿಂಗೇ. ಅಮ್ಮ–ಅಪ್ಪನಿಗೆ ದಯೆ ಇಲ್ಲ, ಅಜ್ಜಿಗೆ ಬಿಡುವಿಲ್ಲ, ಸೋದರತ್ತೆಗೆ ಅಕ್ಕರೆಯಿಲ್ಲ ಎಂದಮೇಲೇ.........."

ತುಂಡು ತುಂಡಾಗಿ ಕತ್ತರಿಸಿದಂತೆ ಮಾತುಗಳು, ಮತ್ತೆ ದಿನಗಳನ್ನೂ ಎಣಿಸುತ್ತಿರುತ್ತಾಳೇನೋ ಹುಡುಗ ಯಾವಾಗ ಮನೆಯಿಂದ ಹೋಗುವಷ್ಟು ದೊಡ್ಡವನಾಗುತ್ತಾನೆ ಎಂದು! ಸುನಂದಾಗೆ, ಅವಳ ಗಂಡ ಕೈ ಹಿಡಿದು ತಿದ್ದಿಸಿರುವ ಈ ಜೀವನದಲ್ಲಿ ಒಂದು ಮಗು ಇರುವುದು ಒಂದು ತೊಡಕೇ! ಈಗಲೇ ಮನೆಯಿಂದ ಹೊರದೂಡುವುದು ಸಾಧ್ಯವಾಗಿಲ್ಲ. ಆದ್ದರಿಂದ ಪ್ರತಿನಿತ್ಯವೂ ತಾವುಗಳು ಹೊರಗೆ ಹೋಗುವಾಗ ಹುಡುಗನನ್ನು ಅವನ ಸೋದರ ಮಾವನ ಮನೆಯಲ್ಲಿ ಬಿಟ್ಟಿದ್ದು ಮತ್ತೆ ಮನೆಗೆ ಹಿಂತಿರುಗುವಾಗ ಒಳ್ಳೆಯ ನಿದ್ರೆಯಲ್ಲಿರುವ ಹುಡುಗನನ್ನು ಎಬ್ಬಿಸಿ ಎಳೆದುಕೊಂಡು ಬರುತ್ತಾರೆ. ಅಜ್ಜಿ ಊಟ ಮಾಡಿಸಿ ಮಲಗಿಸಿರುತ್ತಾರೆ. ಬರೀ ಮೊಮ್ಮಗನಂತಲ್ಲ. ಮನೆಗೆ ಬಂದಿರುವ ರಾಜಕುಮಾರನೋ ಎಂಬಂತೆ! ಕಾರಣವೇನೆಂದರೆ ಅಳಿಯನ ಧೋರಣೆ ರಾಜನಂತಿದೆ. ಈ ಬಡ ಜನರ ಕುಟೀರದಲ್ಲಿ ಅವರ ಜೀರ್ಣವಾದ ಹಾಸುಗೆಯಲ್ಲಿ ಹುಡುಗನನ್ನು ಮಲಗಲು ಅವರು ಬಿಟ್ಟು ಹೋಗುವುದೇ ಅವರ ಮೇಲೆ ಕರುಣೆ ತೋರಿದ ಹಾಗೆ! ಒಂದೊಂದು ಸಲ ಹಾಗೂ ತಡೆಯಲಾರದೆ ಅಜ್ಜಿ ಹೇಳಿದ್ದಾರೆ, "ಪಾಪ, ನಿದ್ದೆ ಬಂದು ಬಿಟ್ಟಿದೆಯಲ್ಲಾ, ಇರಲಿ ಬಿಡಿ, ನಾಳೆ ಅವರ ಅಜ್ಜ ಕರೆದುಕೊಂಡು ಬಂದು ಬಿಡುತ್ತಾರೆ."

ಆದರೆ ಆ ಕೋರಿಕೆಗೇನೂ ಬೆಲೆ ಕೊಟ್ಟಿಲ್ಲ ಇವರುಗಳು. ಮಗಳೇ ಪಟಕ್ಕನೆ ಹೇಳಿ ಬಿಡುತ್ತಿದ್ದಳು, "ಬೇಡಾಪ್ಪಾ, ಒಂದು ದಿನ ಹೀಗೆ ಮುದ್ದಿನ ರುಚಿ ಕಂಡುಬಿಟ್ಟರೆ ಆಮೇಲೆ ಏನು ಗತಿ? ದಿನಾ ಅಜ್ಜಿ ಮನೆಯಲ್ಲೇ ಮಲಗ್ತೀನಿಂತ ಹೇಳ್ತಾನೆ. ಇದರಿಂದ ಸ್ಕೂಲಿಗೆ ಚಕ್ಕರ್!" ಮಾತೇನೋ ನಿಜವೇ.

ನಾಲ್ಕು ವರ್ಷದ ವಿಚ್ಚು ಈಗ ಎರಡು ವರ್ಷಗಳಿಂದಲೇ ಸ್ಕೂಲಿಗೆ ಹೋಗುತ್ತಾನೆ. ಮನೆಯಲ್ಲಿ ಬೆಳಿಗ್ಗೆ ನಾಲ್ಕನೇ ಜಾಮದಿಂದಲೇ ಅವನನ್ನು ಹೊಡೆದು, ಬಡಿದು ಎಬ್ಬಿಸಿ ಸ್ಕೂಲಿಗೆ ಕಳುಹಿಸುವ ಸಂಭ್ರಮ ಶುರುವಾಗಿಬಿಡುತ್ತದೆ. ನಿದ್ದೆಗಣ್ಣಿನ ಹುಡುಗನೂ ಹೇಗಾದರೂ ಮಾಡಿ ಸ್ಕೂಲಿಗೆ ಹೋಗುವುದನ್ನು ತಪ್ಪಿಸಿಕೊಳ್ಳಲು, ಕೈಯಲ್ಲಾದಷ್ಟೂ ಗಲಾಟೆ ಮಾಡಿ ನೋಡುತ್ತಾನೆ. ಆಗ ಯುದ್ಧದ ಒಂದು ಪರ್ವವೇ ನಡೆದುಹೋಗುತ್ತೆ.

ಮೊದ ಮೊದಲು ಸರೋಜಾಕ್ಷರು ಒಂದೆರಡು ಸಲ ಹೇಳಿದ್ದರು: "ಇಷ್ಟು ಚಿಕ್ಕ ವಯಸ್ಸಿಗೇ ಅದು ಸ್ಕೂಲಿಗೆ ಹೋಗಬೇಕೆ? ಅಷ್ಟು ಚಿಕ್ಕಮಗು, ಚೆನ್ನಾಗಿ ನಿದ್ರೆ ಮಾಡದೆ ಹೋದರೆ, ಬೆಳಗಿನ ಹೊತ್ತು ಆಟವಾಡಿಕೊಂಡಿರದಿದ್ದರೆ ಮೈ ಪುಷ್ಟಿಯಾಗಿ ಬೆಳೆಯುತ್ತದೆಯೇ? ಮನಸ್ಸೂ ಅದರಿಂದ ಬಿಗಡಾಯಿಸುತ್ತೆ" ಎಂದು.

ನೀಲಾಕ್ಷ ಹೇಳಿದ್ದ, "ನಿಯಮಗಳನ್ನು ಅನುಸರಿಸುವುದರಿಂದಲೇ ಮೈ ಸರಿಯಾಗಿರುತ್ತೆ" ಎಂದು.

ಸರೋಜಾಕ್ಷರು ಇನ್ನೇನೂ ಹೇಳುವುದಿಲ್ಲ.

ಅದಷ್ಟಕ್ಕೇ ಅವರಿಗೆ ತಾವು ಹದ್ದನ್ನು ಮೀರಿದೆನೆಂದು ಭಾವನೆ ತೋರುವುದು. ಅವರ ಮಗು, ಅದರ ಒಳ್ಳೆಯಿದು ಕೆಟ್ಟದ್ದು ಅವರಿಗೆ ಗೊತ್ತು. ತಾವು ಹೇಳುವುದಕ್ಕಾಗುತ್ತದೆಯೇ? ಕೇವಲ ಯಾವುದಾದರೂ ಒಂದು ಸಮಯ ಮಾತ್ರ ನಿಯಮವನ್ನು ಅನುಸರಿಸಿದರೆ ಸಾಕೇ? ಅದನ್ನು ಯಾವಾಗಲೂ ಕಡೆ ಹಿಡಿದ ಹೊರತು ಅದು ಫಲಕಾರಿಯಲ್ಲ ಎಂಬುದನ್ನು ಇವರುಗಳು ತಿಳಿದುಕೊಳ್ಳುವುದಿಲ್ಲವಲ್ಲ! ಎರಡು ವರ್ಷದ ಮಗುವನ್ನು ಸ್ಕೂಲಿಗೆ ಕಳುಹಿಸ ಬೇಕಾದರೆ ಕಡೆಯ ಪಕ್ಷ ಅದನ್ನು ರಾತ್ರಿ ಎಂಟು ಗಂಟೆಯೊಳಗೆ ಮಲಗಿಸಬೇಕು. ಆದರೆ ಆಗ ಮಾತ್ರ ನೀವು ನಿಯಮದ ಬಗ್ಗೆ ಕಣ್ಣು ಮುಚ್ಚಿಕೊಂಡಿರುತ್ತೀರಿ. ನಿಮ್ಮ ಸ್ವೇಚ್ಛಾವಿಹಾರದ ತಾಳಕ್ಕೆ ಸರಿಯಾಗಿ ಅವನ ಜೀವನವು ನಡೆಯಬೇಕು. ಅವನು ಸಾಯಂಕಾಲವೆಲ್ಲಾ ಅವನ ಅಜ್ಜಿಯನ್ನು ಕಾಡಿ, ಇಷ್ಟ ಬಂದಂತೆ ಆಡಿ, ಇಷ್ಟ ಬಂದಂತೆ ತಿಂದು, ರಾತ್ರಿ ಎಷ್ಟೋ ಹೊತ್ತಿನವರೆಗೂ ಎಚ್ಚರವಾಗಿದ್ದು ಕೊನೆಗೆ ತೀರದೆ ನಿದ್ದೆಯಿಂದ ತೂಕಡಿಸಿ ಬೀಳುವಾಗ, ನೀವುಗಳು ಅವನನ್ನು ಹಸಿನಿದ್ದೆಯಿಂದ ಎಬ್ಬಿಸಿ, ಒಂದು ರೋಡಿನಿಂದ ಇನ್ನೊಂದು ರೋಡಿಗೆ ಎಳೆದುಕೊಂಡು ಬಂದು, ಮತ್ತೆ ಕೆಲವೇ ಗಂಟೆಗಳಾದ ಮೇಲೆ ಅವನನ್ನು ಎಬ್ಬಿಸಿ, ನಿಯಮದ ಪಾಠ ಹೇಳಿಕೊಡಲು ಹೋದರೆ, ಅದರಿಂದ ನಿಯಮವೂ ಬರುವುದಿಲ್ಲ, ಮೈ ಪುಷ್ಟಿಯೂ ಬರುವುದಿಲ್ಲ. ಆದರೆ ಇದನ್ನೆಲ್ಲಾ ಸರೋಜಾಕ್ಷರು ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಅವರು ಹೇಳಲು ಹೋಗಿ, ಅವರುಗಳು ಒಂದು ವೇಳೆ, "ಸರಿ, ಹಾಗಾದರೆ ಅಮ್ಮ ಅವನನ್ನು ನೋಡಿಕೊಳ್ಳಲಿ, ಸಮಯಕ್ಕೆ ಸರಿಯಾಗಿ ಊಟ, ನಿದ್ದೆ ಎಲ್ಲಾ ಆಗುತ್ತೆ," ಎಂದರೆ! ಹೇಳಿಯೇ ಹೇಳುತ್ತಾರೆ. ಒಂದು ಅವಕಾಶ ಸಿಕ್ಕಿದರೇ ಸಾಕು. ಅವರುಗಳು ಇಂತಹ ಮನೋಭಾವದೊಂದಿಗೇ ಇರುತ್ತಾರೆ. ಏಕೆಂಬುದು ಅವರಿಗೇ ಗೊತ್ತಿಲ್ಲ. ಆದರೆ ಹಾಗಿರುತ್ತಾರೆ ಎಂಬುದು ಮಾತ್ರ ಗೊತ್ತು. ವಿಜಯಾ ಎಂದಿಗೂ ತಮ್ಮ ಮಾತಿಗೆ ಬೆಲೆಕೊಡುವುದಿಲ್ಲ ಎಂಬುದೂ ಅವರಿಗೆ ಗೊತ್ತು. ಮೊಮ್ಮಗನನ್ನು ನೋಡಿಕೊಳ್ಳಲು ವಿಜಯಾಗೆ ಸಮಯ ಎಲ್ಲಿದೆ?

ವಿಜಯಾ ಪೋಷಣೆ ಮಾಡಬೇಕಾಗಿರುವಂತಹವರು ಒಂದು ಡಜನ್ ಮಂದಿ ಇಲ್ಲವೇ! ವಿಜಯಾ ಅವರಿಗೆ ಉಣಿಸಬೇಡವೇ, ಮಲಗಿಸಬೇಡವೇ? ಅವರುಗಳ ಸೇವೆಗಾಗಿ ಆಕೆ ಶುದ್ಧ, ಶುಚಿಯಾಗಿ, ಮಡಿಯಾಗಿ ಇರಬೇಕಾಗಿದೆಯಲ್ಲವೇ?

ಸರೋಜಾಕ್ಷರಿಗೆ ಗೊತ್ತು, ಪ್ರಪಂಚದ ಯಾವ ಮಹಾಶಕ್ತಿಗೂ ವಿಜಯಾರನ್ನು ಅವರ ಆಸನದಿಂದ ಕದಲಿಸುವುದು ಸಾಧ್ಯವಿಲ್ಲ. ಬೇರೆಯವರಿಗೆ, ನೋಡುವವರಿಗೆ ಇದು ಒಂದು ವಿಚಿತ್ರ ಎಂದು ತೋರುತ್ತದೆಯೋ ಏನೋ. ಆ ಬಗ್ಗೆ ಅವರಿಗೆ ಅಸಡ್ಡೆ. ಅದಕ್ಕೇ ಸರೋಜಾಕ್ಷರು ಈ ಬಗ್ಗೆ ಅವರಿಗೆ ಹೇಳಲು ಹೋಗುವುದಿಲ್ಲ. ವಿಜಯಾ ಏನು ಹೇಳುತ್ತಾರೆ ಎಂಬುದೂ ಅವರು ಅರಿತ ವಿಷಯ, "ಯಾಕೆ? ದಿನಾ ಅಜ್ಜಿಯ ಮನೆಗೆ ಕರೆದುಕೊಂಡು ಹೋಗಿ ಬಿಡುವುದು ನಾಚಿಕೆಗೇಡು ಎಂತಲೇ? ಹಾಗಾದರ ಇಷ್ಟು ಚಿಕ್ಕ ಮಗುವನ್ನು ಬಿಟ್ಟು ಬಿಟ್ಟು ಅಮ್ಮ-ಅಪ್ಪ, ಥೈ ಥೈ ಅಂತ ಕುಣಿಯುತ್ತಾ ಹೊರಗೆ ಹೋಗೋದು ಇನ್ನೂ ನಾಚಿಕೆಗೇಡು. ಅದರಿಂದ ಅವರ ಮೂಗೇ ಕುಯ್ದ್ಕೊಂಡ ಹಾಗಾಗುತ್ತೆ ನನಗೇನಂತೆ?"

ಮೊದ ಮೊದಲು ಸರೋಜಾಕ್ಷರಿಗೆ ಹೆಂಡತಿಯ ನಿರಾವರಣ ಹಕ್ಕಿನ ಮಾತನ್ನು ಕೇಳಿ ಮನಸ್ಸು ಕುಸಿದುಹೋಗುತ್ತಿತ್ತು. ಅವರ ಗ್ರಾಮ್ಯ ನಡೆವಳಿಕೆಯನ್ನು ನೋಡಿ ಕುಗ್ಗಿಹೋಗುತ್ತಿದ್ದರು. ಕ್ರಮೇಣ ಈಗ ಸಹಿಸಿಹೋಗಿದೆಯೇನೋ, ಅಥವಾ ಹೋಗಿಲ್ಲದೆಯೂ ಇರಬಹುದು. ಸಹಿಸುವುದು ಸಾಧ್ಯವಿಲ್ಲ. ಕೇವಲ ಸುಮ್ಮನಿದ್ದುಬಿಟ್ಟದ್ದಾರೆ ಅಷ್ಟೆ.

ಯಾವುದೋ ಕಾಲದಲ್ಲಿ ಮದುವೆಯಾದ ಹೊಸದರಲ್ಲಿ ತಿದ್ದಲು ಪ್ರಯತ್ನ ಮಾಡುತ್ತಿದ್ದರು. ನವ-ವಧುವಿನ ನಡೆ-ನುಡಿ, ಭಾಷೆ-ಮಾತು ಎಲ್ಲಾದರ ಮೇಲೂ ಸಂಸ್ಕಾರದ ಒಂದು ಮೆರುಗನ್ನು ಕೊಡಬೇಕೆಂಬ ವ್ರತವನ್ನು ಕೈಗೊಂಡಿದ್ದರು. ಅವರ ಪ್ರಯತ್ನವನ್ನು ವಿಜಯಾ ಮಣ್ಣುಪಾಲು ಮಾಡಿದರು.

ಹದಿನೈದರ ತರುಣಿ ವಿಜಯಾ ತನ್ನ ಭವ್ಯ, ವಿದ್ಯಾವಂತ, ನಾಜೂಕಾದ ಕಲಾಭಿರುಚಿಯುಳ್ಳ ಹೊಸ ಮದು-ಮಗನ ಎದುರಿಗೆ, ಹಾಯಾಗಿ ಕರ್, ಕರ್ ಅಂತ ಮೈ ಕೆರೆಯುತ್ತಾ ಹೇಳಿದ್ದಳು- "ನಿಮ್ಮ ಬಾಲಿಗಂಜಿನ ಕಾಲಿಗೆ ಒಂದು ನಮಸ್ಕಾರಪ್ಪ. ಸೊಳ್ಳೆ ಕಚ್ಚಿ ಕಚ್ಚಿ ಬಾಸುಂಡೆಗಳಾಗಿ ಹೋಯಿತು. ಇಂತಹ ಸೊಳ್ಳೆಗಳನ್ನಿಟ್ಟುಕೊಂಡು ಹೇಗೆ ತಾನೆ ಇದ್ದೀರಿ ನೀವುಗಳು? ಮೈ ಮೇಲೆ ಏನು ಇರೋದು ಘೇಂಡಾಮೃಗದ ಚರ್ಮವೇ?" ಎಂದು.

ಸರೋಜಾಕ್ಷರು ಮರ್ಮಾಹತರಾಗಿದ್ದರು.

ಆಗ ಅವರು ಹೇಳಿದ್ದರು, "ಯಾಕೆ ಹೀಗೆ ಮಾತಾಡುತ್ತೀಯೆ? ಸರಿಯಾಗಿ ಮಾತಾಡುವುದಕ್ಕೆ ಬರುವುದಿಲ್ಲವೇ?"

ವಿಜಯಾ ತನ್ನ ಸುಂದರವಾದ ಮುಖವನ್ನು ತಿರುಗಿಸಿ ಕಿಲಕಿಲನೇ ನಕ್ಕು ಹೇಳಿದ್ದಾಳೆ- "ಮಾತಾಡುವುದರಲ್ಲಿ ಸರಿಯೇನು, ತಪ್ಪು ಏನು? ನಾನೇನು ಸೊಳ್ಳೆಗಳನ್ನು ಬೈದೆನಾ? ರಕ್ತವನ್ನೆಲ್ಲಾ ಹೀರಿಕೊಂಡುಬಿಡ್ತವಲ್ಲಾ, ಇದನ್ನ ಹೇಳಕೂಡದಾ?"

ಆದರೆ ಕೆಟ್ಟ ಮಾತು ತಾನೇ ಆಗಲಿ, ವಿಜಯಾರ ಬಾಯಲ್ಲಿ ನಿಲ್ಲುತ್ತಾ? ಇಲ್ಲ, ನಿಲ್ಲುತ್ತಿರಲಿಲ್ಲ. ಆದರೂ ಎಲ್ಲಾ ತರಹದ ಜಿಗುಪ್ಸೆಗಳನ್ನೂ ಮೀರಿ ಆ ಸುಂದರವಾದ

ಮುಖಕ್ಕೇ ಜಯವಾಗುತ್ತಿತ್ತು. ಅಹುದು, ಅದಕ್ಕೆ ಕಾರಣ ಆಗ ಸರೋಜಾಕ್ಷರಿಗೆ ವಯಸ್ಸು ಇಪ್ಪತ್ತೈದರ ಕೆಳಗೆ ಇತ್ತು. ಆ ಪ್ರಾಯಕ್ಕೆ ಸೋಲಲೇಬೇಕಾಗುತ್ತಿತ್ತು. ವಿಜಯಾರ ಸುಂದರ ಮುಖಕ್ಕೂ, ಆಗ ಅಂಗ–ಸೌಷ್ಠವಯ್ಯದ ಮುಂದೆಯೂ ಅವರು ಸೋಲಬೇಕಾಗುತ್ತಿತ್ತು. ಆ ಸಂಪಿಗೆಯ ಬಣ್ಣದ ದೇಹ–ಬಳ್ಳಿಯ ಹತ್ತಿರ ಸೋಲಬೇಕಾಗಬೇಕೆನಿಸುತ್ತಿತ್ತು. ಅದೂ. ತಮ್ಮ ಈ ಅಸಹಾಯಕತೆಯ ಆತ್ಮಸಮರ್ಪಣವನ್ನು ವಿಜಯಾ ಕೂಲಂಕಷವಾಗಿ ಅನುಭವಿಸುವುದನ್ನು ನೋಡಿದರೆ ಈ ಧಿಕ್ಕಾರ ಇಮ್ಮಡಿಯಾಗುತ್ತಿತ್ತು.

ಹದಿನಾರರ ಹರೆಯದ ವಿಜಯಾ ಸರೋಜಾಕ್ಷರಿಗೆ ಕೇಳಿಸುವಂತೆ, ತನ್ನ ಸಮವಯಸ್ಕಳಾದ ನಾದಿನಿಯ ಹತ್ತಿರ ಹೇಳುವಳು, "ಗಂಡಸು ಜಾತಿಯೇ ಒಂದು ಪೋಲಿ ಜಾತಿ ಗೊತ್ತೇನ? ಮದುವೆಯಾದರೆ ನಿನಗೇ ಗೊತ್ತಾಗುತ್ತೆ. ಏನೋ ಮಹಾ ಸಾಧು ಪುರುಷ, ಉದಾಸೀನರಾಗಿರುವವರಂತೆ ಮುಖದಲ್ಲಿ ತೋರಿಕೆ ಇರುತ್ತೆ, ಏನೋ ಹೆಂಗಸನ್ನ ಕಂಡರೆ ಅಸಹ್ಯ ಅನ್ನೋಹಾಗೆ, ಆದರೆ........ ಹಿ, ಹಿ, ಹಿ,............. ರಾತ್ರಿಯ ಕತ್ತಲೆಯಲ್ಲಿ ಗೊತ್ತಾ? ಗೊತ್ತಾಗುತ್ತೆ, ನಿನಗೆ ಮದುವೆಯಾದರೆ ಗೊತ್ತಾಗುತ್ತೆ." ಬೇಕೆಂದೇ, ಅವರ ಕಿವಿಗೆ ಬೀಳಲಿ ಎಂದೇ. ಅವರಿಗೆ ಕೇಳಿಸುವಂತೆಯೇ ಈ ವಿಷಯದ ಬಗ್ಗೆ ಟೀಕೆ ನಡೆಯುತ್ತಿತ್ತು. ವಿಜಯಾ ಯೋಚಿಸುತ್ತಿರಲೇ ಇಲ್ಲ, ಅವಳ ಈ ಮಾತಿನ ಸಂಗಾತಿ ಸರೋಜಾಕ್ಷರದೇ ಚಿಕ್ಕ ತಂಗಿ, ಮತ್ತೆ ಯಾವ ತಂಗಿಗೆ ಅಣ್ಣನೆಂದರೆ ಎಷ್ಟು ಮರ್ಯಾದೆ ಎಂದರೆ ತಲೆಯೆತ್ತಿ ಕೂಡ ಮಾತಾಡುತ್ತಿರಲಿಲ್ಲ. ಅಂತಹ ತಂಗಿಯೊಂದಿಗೇ ಇಂತಹ ಮಾತು. ಕೇಳಿ, ಅವಮಾನದಿಂದ, ಧಿಕ್ಕಾರದಿಂದ ಸರೋಜಾಕ್ಷರಿಗೆ ಕಿವಿಯೆಲ್ಲಾ ಕೆಂಪೇರುತ್ತಿತ್ತು. ಪ್ರತಿಜ್ಞೆ ಮಾಡಿಕೊಳ್ಳುತ್ತಿದ್ದರು. ಈ ಜೀವನದಲ್ಲಿ ಇನ್ನಿಲ್ಲ ಎಂದು ಆದರೆ ಆ ಪ್ರತಿಜ್ಞೆ ನಿಲ್ಲುತ್ತಿರಲಿಲ್ಲ. ಆ ಬಜಾರಿ ಹುಡುಗಿಯೇ ತಿರುಗಿ ಮೇಲೆ ಬಿದ್ದು, ಅಥವಾ ಅತ್ತು–ಕರೆದು ಎಲ್ಲಾ ಸರಿಮಾಡಿಕೊಂಡು...

ಹೋಗಲಿ ಆ ಮಾತು.

ಅಂತಹ ಜೀವನಕ್ಕೆ ಇತಿಯಾಗಿ ಹೋಗಿದೆ.

ವಿಜಯಾ ಈ ನಶ್ವರ ಲೋಕದ ಮಲಿನತೆಗಳಿಂದ ಮೇಲಕ್ಕೆ ಹತ್ತಿ ಹೋಗಿದ್ದಾರೆ.

ಸರೋಜಾಕ್ಷರು ಕೆಳಗಿನ ಲೋಕದಲ್ಲಿ ತಮ್ಮ ಕೆಲಸದಲ್ಲಿ ಮಗ್ನರಾಗಿದ್ದಾರೆ. ವಿಜಯಾರ ಈ ಊರ್ಧ್ವಮುಖಿರಾಗುವ ಕಾರಣ ಸರೋಜಾಕ್ಷರಿಗೆ ಅವರಿಗಿರಲಿಲ್ಲ.

ಆದರೂ ಅದರ ಪ್ರತೀಕಾರ ಮಾಡುವ ಶಕ್ತಿ ತಿಳಿಯದ್ದಲ್ಲ.

ಅದಕ್ಕೆ ಸರೋಜಾಕ್ಷರು ಈ ನಾರುಮುಡಿಯುಟ್ಟ ನಾರೀಮಣಿಯ ಸಂಪರ್ಕದಿಂದ ತಮ್ಮನ್ನು ಆದಷ್ಟೂ ದೂರದಲ್ಲಿಟ್ಟುಕೊಳ್ಳಲು ಪ್ರಯತ್ನಪಡುತ್ತಾರೆ. ಆದಷ್ಟು ಕಡಿಮೆ ಮಾಡುತ್ತಾರೆ. ಆದರೂ ಇಂದು ಮಾತಾಡಿದರು.

ಆದರೆ ವಿಜಯಾ ಏನು ಸುಮ್ಮನೆ ಇರುವವರೇ?

ವಿಜಯಾ ತನ್ನ ಜೀವಮಾನದಲ್ಲೇ ಯಾವಾಗಲಾದರೂ ಸುಮ್ಮನಿದ್ದು ರಾಜಿಯಾಗುವಂತಹವರೇ? ಇಲ್ಲ. ಈಗಲೂ ಆಗಲಿಲ್ಲ. ಹೇಳಿದರು, "ಹೂಂ, ಗಂಡನೇ? ಹೆಂಗಸು ಘಟ್ಟಿಗಳಾಗಿದ್ದರೆ ಗಂಡನಿಗೆಲ್ಲಿ ಸಾಧ್ಯವಾಗುತ್ತೆ ಅವಳನ್ನು ಬದಲಾಯಿಸಲು?

ಸರೋಜಾಕ್ಷರು ಅಂದುಕೊಂಡರು, ಅದೂ ಸರಿಯೇ!

ಅವರು ತಿರುಗಿ ಮಾತಾಡಲಿಲ್ಲ. ಟವಲನ್ನು ತೆಗೆದುಕೊಂಡು ಬಚ್ಚಲು ಮನೆಗೆ ಹೊರಟುಹೋದರು. ಯೋಚಿಸಲಾರಂಭಿಸಿದರು. ಇನ್ನು ನಾಳೆಯ ದಿನಪತ್ರಿಕೆಗಳಲ್ಲಿ ತನ್ನ ಇಂದಿನ ಅವಮಾನದ ಕತೆ ಹೊರಬರುವುದಿಲ್ಲ ತಾನೇ! ಒಂದು ಜತೆ ಜ್ವಲಿಸುವ ಕಣ್ಣುಗಳು, ತನ್ನ ಸೋಲಿನಿಂದಾದ ಆಕ್ರೋಷದೊಂದಿಗೆ ಅವರನ್ನು ನೋಡುತ್ತಾ ಕಿಡಿಯನ್ನು ಹಾರಿಸಿ, 'ತನ್ನ ಮುಗಿಸದೆ ಬಂದಿರುವ' ಪೂಜೆ-ಪಾಠಗಳನ್ನುದ್ದೇಶಿಸಿ ಹೊರಟುಹೋದುದನ್ನು ಸರೋಜಾಕ್ಷರು ನೋಡಲಿಲ್ಲ.

*****

ಅಧ್ಯಾಯ ಮೂರು

ರಸ್ತೆಯ ಮೂಲೆಯಲ್ಲಿಯೇ ಅಗಲಿಕೆಯಾಗುತ್ತೆ. ಮನೆಯ ಮುಂದುಗಡೆವರೆಗೂ ಬರುವಷ್ಟು ಧೈರ್ಯ ಬರುವುದಿಲ್ಲ. ಯಾರಿಗೆ ಗೊತ್ತು, ಯಾರಾದರೂ ನೋಡಿದರೆ! ಈ ವಿಷಯವಾಗಿ ದಿವಾಕರ ಯಾವಾಗಲೂ ಚುಡಾಯಿಸುತ್ತಿರುತ್ತಾನೆ. ಹೇಳುತ್ತಾನೆ, "ನಿಜವಾಗಲೂ ಎಷ್ಟು ವಿಚಿತ್ರವಾಗಿದೆ ನಿಮ್ಮ ಮನೆ. ನೀವೆಲ್ಲಾ ಒಳ್ಳೆ ವಿದ್ಯಾವಂತ ಕುಟುಂಬದವರು. ನಿಮ್ಮಪ್ಪ ಒಬ್ಬ ಅಧ್ಯಾಪಕರು, ಹುಡುಗಿಯನ್ನು ಕಾಲೇಜಿಗೆ ಓದಲು ಕಳುಹಿಸುತ್ತಾರೆ ಮತ್ತು ಕಲ್ಕತ್ತಾದಲ್ಲಿ ಆಧುನಿಕ ಸಮಾಜದಲ್ಲಿ ವಾಸ ಮಾಡುತ್ತೀರಿ ನೀವುಗಳು ಎಂಬುದನ್ನು ನಂಬುವುದಕ್ಕೇ ಆಗುವುದಿಲ್ಲ" ಎನ್ನುತ್ತಾನೆ.

ಈ ವ್ಯಂಗ್ಯದ ಮಾತನ್ನು ಕೇಳಿ ಮೀನಾಕ್ಷಿ, ಅವ್ಯಕ್ತ ಕೋಪದಿಂದ ಬಿಸಿ ನಿಟ್ಟುಸಿರು ಬಿಡುತ್ತಾಳೆ ಕೇಳುತ್ತಾಳೆ, "ಯಾಕೆ ನಂಬಲಾಗುವುದಿಲ್ಲ? ನನ್ನ ಶ್ರೀಮಾನ್ ಅಣ್ಣನನ್ನು ನೋಡಿದರೆ ನಂಬಿಕೆ ಬರುತ್ತೆ. ನಡುರಾತ್ರಿಯಲ್ಲಿ ಹೆಂಡತಿಯನ್ನು ಕರೆದುಕೊಂಡು ಪಾರ್ಟಿಯಿಂದ ಬರುತ್ತಾರೆ. ಕಣ್ಣು ಕೆಂಪು, ನಡೆ ಸರಿಯಿಲ್ಲ, ಇಂಗ್ಲೀಷಿನಲ್ಲಿ ಹೊರತು ಬೇರೆ ಭಾಷೆಯಲ್ಲಿ ಮಾತಾಡುವುದಿಲ್ಲ, ಅಮ್ಮನ ಮುಂದೆ ಅತ್ತಿಗೆಯ ಭುಜದ ಮೇಲೆ ಕೈ ಹಾಕುತ್ತಾರೆ, ಸೊಂಟ ಹಿಡಿಯುತ್ತಾರೆ. ಯಾರು ಹೇಳುತ್ತಾರೆ ನಾವು ಮುಂದುವರಿದಿಲ್ಲವೆಂದು?"

ದಿವಾಕರದಾಸನ ಊರು ಒಂದು ಕುಗ್ರಾಮ. ಅವನ ಅತ್ತಿಗೆಯರು ಇನ್ನೂ, ತಲೆಯ ಮೇಲೆ ಮುಖ ಮುಚ್ಚುವಂತೆ ಸೆರಗು ಎಳೆದುಕೊಳ್ಳದೆ ಒಬ್ಬರ ಎದುರಿಗೆ ಬರುವುದಿಲ್ಲ. ಅವನ ಚಿಕ್ಕ ತಂಗಿಯ ಅತ್ತೆಯ ಮನೆಯಲ್ಲಿ ಈಗಲೂ, ಬೆಳಿಗ್ಗೆ, ಮಧ್ಯಾಹ್ನ ಗಂಡ-ಹೆಂಡತಿ ಒಬ್ಬರನ್ನೊಬ್ಬರು ನೋಡುವುದು, ಮಾತಾಡುವುದು, ಒಂದು ತಪ್ಪು ಕೆಲಸ ಮಾಡಿದಂತೆ ನೋಡಲ್ಪಡುತ್ತೆ ಅದಕ್ಕೇ ಇರಬೇಕು, ದಿವಾಕರನ ಸಮಾಜ ಸುಧಾರಣೆಯ ಚಿಂತೆ ಇಷ್ಟೊಂದು ಆಧುನಿಕತೆಯ ದಾರಿಯಲ್ಲಿ ಮುನ್ನುಗ್ಗಲು ಹೊರಟಿದೆ. ಅವನು ಮಾತು ಮಾತಿಗೂ ಮೀನಾಕ್ಷಿಯನ್ನು ಹಳೆಯ ಕಂದಾಚಾರದವಳೆಂದು ಹಳಿಯುತ್ತಾನೆ. ಪುಕ್ಕಲು, ಕು-ಸಂಸ್ಕಾರದಲ್ಲಿ ಮುಳುಗಿರುವವಳು ಎಂದೆಲ್ಲಾ ಹಾಸ್ಯ ಮಾಡುತ್ತಾನೆ. "ನಿನ್ನ ಗಾರ್ಡಿಯನ್ನರನ್ನು ಮಾತ್ರ ಏಕೆ ಹೇಳಬೇಕು, ನೀನೇನು ಕಡಿಮೆ ಕನ್‌ಸರ್ವೇಟಿವ್ವೇ? ಇಲ್ಲದಿದ್ದರೆ ಇಷ್ಟು ದಿನವಾದರೂ ಒಂದು ದಿನ ಸ್ವಲ್ಪ ಫ್ರೀಯಾಗಿ ಇರಲು ನಿನ್ನನ್ನು ಒಪ್ಪಿಸುವುದಕ್ಕೆ ಆಗಿಲ್ಲ!" ಎನ್ನುವನು.

ಮೀನಾಕ್ಷಿ ಕೆಂಪಾಗುತ್ತಾಳೆ. ಪ್ರತಿಭಟಿಸಿ ಹೇಳುತ್ತಾಳೆ, "ಥೂ, ಬಹಳ ಪೋಲಿ ನೀನು".

ದಿವಾಕರ ದಾಸ್ ಹೇಳುವನು, "ಇದೋ ಇದನ್ನೇ ಕು-ಸಂಸ್ಕಾರ ಎನ್ನುವುದು.

ಯಾವುದು ಚಿರಸತ್ಯವೋ ಯಾವುದನ್ನು ಪರಿಹಾರ ಮಾಡಲಾಗುವುದಿಲ್ಲವೋ, ಒಪ್ಪಿಕೊಳ್ಳಲೇಬೇಕೋ ಅಂತಹದ್ದನ್ನು ಒಪ್ಪದಿರುವುದು, ಅದರ ಬಗ್ಗೆ ಕಣ್ಣು ಮುಚ್ಚಿಕೊಂಡಿರುವುದು, ಅದಕ್ಕೆ ಒಂದು ಪಾಪದ ಮುದ್ರೆಯನ್ನು ಹಾಕುವುದು, ಇದಕ್ಕೇನಾದರೂ ಅರ್ಥವಿದೆಯೇ?"

ದಿವಾಕರನ ದೊಡ್ಡದಾಗಿ ತೆರೆದಿರುವ ಕಣ್ಣುಗುಡ್ಡೆಗಳು ಕೆಂಡದಂತೆ ಕಾಣುತ್ತೆ ಮೀನಾಕ್ಷಿಯ ಎದೆಯಲ್ಲಿ ನಡುಕ, ಕಾಲ ಕೆಳಗೆ ನೆಲ ಕುಸಿದುಹೋಗುತ್ತಿರುವ ಅನುಭವ ಆಗುತ್ತೆ. ಅದಕ್ಕೇ ಮೀನಾಕ್ಷಿ ಮಾತು ಬದಲಾಯಿಸುತ್ತಾಳೆ, "ಅಬ್ಬ! ಮಾತೃಭಾಷೆಯಲ್ಲಿ ಎಷ್ಟೊಂದು ವಾಚಾಲತೆ! ನೀನು ಯಾಕೆ ಇಕನಾಮಿಕ್ಸ್ ತೆಗೆದುಕೊಂಡೆ? ಲ್ಯಾಂಗ್ವೇಜ್ ತೆಗೆದುಕೊಳ್ಳಬೇಕಾಗಿತ್ತು! ಮಾತು ಬದಲಾಯಿಸುತ್ತೀಯಾ? ಅಂದರೆ ನಿನಗೆ ಹೆದರಿಕೆ, ಅಲ್ಲವೇ?"

ದಿವಾಕರನ ದಪ್ಪ ತುಟಿಗಳು ವ್ಯಂಗ್ಯದಿಂದ ಕೆಳಗೆ ಬಾಗಿದೆ. "ಆಶ್ಚರ್ಯ! ನನಗೆ ಆಶ್ಚರ್ಯವಾಗಿದೆ ನೀನು ಸುಳ್ಳು ಸುಳ್ಳೇ ಹೀಗೆ ಭಯಪಡುವುದನ್ನು ನೋಡಿ, ಇದರಿಂದ ನಿನಗೆ ನಷ್ಟವೇ! ಜೀವನದಲ್ಲೇ ಬಹಳ ಬೆಲೆಯುಳ್ಳ ದಿನಗಳನ್ನು ವ್ಯರ್ಥವಾಗಿ ಕಳೆದುಕೊಳ್ಳುತ್ತಿರುವೆ."

ಆದರೂ ಮೀನಾಕ್ಷಿ ಮಾತನ್ನು ಹಗುರವಾಗಿಸಲು ಪ್ರಯತ್ನಪಡುತ್ತಾಳೆ. ದಿವಾಕರನ ಜ್ವಲಿಸುವ ಕಣ್ಣುಗಳನ್ನು ನೋಡದೇ ಬೇರೆ ಕಡೇ ನೋಡುತ್ತಾ ಅಸಡ್ಡೆಯಿಂದ ಹೇಳುತ್ತಾಳೆ. ಎಲ್ಲಾ ಪೊಳ್ಳು ಮಾತು. ನಷ್ಟ ಏನು ಬಂತು! ತುಚ್ಛವಾದ ವಿಷಯದಲ್ಲಿ ಲಾಭ-ನಷ್ಟದ ಮಾತೇನು ಬಂತು?"

ದಿವಾಕರ ಉತ್ತೇಜನಗೊಳ್ಳುತ್ತಾನೆ "ತುಚ್ಛವೇ? ತುಚ್ಛವಲ್ಲ ಎಂಬುದನ್ನು ಕೋಟಿ ಕೋಟಿ ವರ್ಷದ ಇತಿಹಾಸವೇ ಸಾಕ್ಷಿ ಹೇಳುತ್ತಿದೆ. ಹೌದೋ. ಅಲ್ಲವೋ ಎಂಬುವನ್ನು ನಿನ್ನನ್ನೇ ಒಂದು ಸಲ ಸರಿಯಾಗಿ ನೀನು ನೋಡಿಕೊಂಡರೆ ಗೊತ್ತಾಗುತ್ತೆ. ಊಹುಂ. ಆ ಧೈರ್ಯ ಇಲ್ಲ, ನೀವುಗಳು ಹೆಣ್ಣು ಹುಡುಗಿಯರೇ ಹೀಗೆ. ಉಷ್ಟ್ರಪಕ್ಷಿಯಂತೆ ತಲೆಯನ್ನೇ ಮರಳಲ್ಲಿ ಹುದುಗಿಸಿಟ್ಟುಕೊಂಡಿರುತ್ತೀರಿ.

ದಿವಾಕರನ ಮೈ ಬಣ್ಣ ಕಪ್ಪು. ಬೆಳವಣಿಗೆ ನೋಡಿದರೆ ಕುಳ್ಳ ಎನ್ನಬೇಕು. ಆದರೆ ಬಲಿಷ್ಠವಾದ ಮೈ, ದಪ್ಪನಾದ ತುಟಿಗಳು. ದಪ್ಪ ಮೂಗು. ಅಗಲವಾದ ಭುಜ. ಚಿಕ್ಕದಾಗಿ ಕತ್ತರಿಸಿದ ತಲೆಯ ಕೂದಲು. ಸೊಂಟದಲ್ಲಿ ಬಿಳಿಯ ಟ್ರವುಜರ್ ಮತ್ತು ಅಗಲವಾದ ಬೆಲ್ಟ್. ಉದ್ದವಾದ ಕೈಯಿನ ಲೂಜಾದ ಖಾಕಿಯ ಕೋಟು. ಎಲ್ಲಾ ಸೇರಿ ಒಟ್ಟನಲ್ಲಿ ನೋಡಿದರೆ ಏನೋ ಒಂದು ಒರಟು. ಮತ್ತು ಕ್ರೂರವಾಗಿರುವಂತಹ ಭಾವವನ್ನು ಸೂಚಿಸುತ್ತದೆ.

ಮೀನಾಕ್ಷಿಯ ತಂದೆ ಸರೋಜಾಕ್ಷರು ದಿವಾಕರನನ್ನು ನೋಡಿದರೆ ಇವನನ್ನು ಕಾಡುಮನುಷ್ಯ ಎಂದೇ ಬಹುಶಃ ಹೇಳುತ್ತಿದ್ದರು. ಆದರೆ ಮೀನಾಕ್ಷಿಗೆ ಈ ಒರಟುತನದಲ್ಲಿ ಏನೋ ಒಂದು ಆಕರ್ಷಣೆ. ಪುರುಷನಿಗೆ ಸ್ನಿಗ್ಧ, ಸೌಮ್ಯ ರೂಪವಿರುವುದು ಅವಳಿಗೆ

ಒಪ್ಪಿಗೆಯಾಗುವುದಿಲ್ಲ. ಅದಕ್ಕೇ ಅಕ್ಕನ ಗಂಡನನ್ನು ನೋಡಿದರ ಅವಳಿಗ ನಗು, ಒಂದು ಅಸಡ್ಡೆಯ ಭಾವನೆ ಅದನ್ನು ಅಕ್ಕನಿಗೆ ಹೇಳಿಯೂ ಇದ್ದಾಳೆ.

"ನೀನೇನಾದರೂ ಹೇಳಕ್ಕಾ, ಗಂಡಸು ನೋಡಲು ನಯವಾಗಿ, ಮೃದುವಾಗಿದ್ದರೆ ಚೆನ್ನಾಗಿಲ್ಲ. ಸ್ವಲ್ಪ ಬಲ ತೋರುವ, ಒರಟುತನ ಇದ್ದರೇನೇ ಶೋಭಿಸುತ್ತೆ" ಎಂದಿದ್ದಾಳೆ.

ಅಕ್ಕನಿಗೆ ಮನಸ್ಸಿನಲ್ಲಿ ಏನಿದೆಯೋ ಏನೋ, ಆದರೆ ಮಾತಿನಲ್ಲಿ ಸೋಲಲು ಇಷ್ಟವಿಲ್ಲ. ಅದಕ್ಕೇ ಅವಳು ಹೇಳುತ್ತಾಳೆ, "ಸರಿ, ಮತ್ತೆ ನಿನ್ನನ್ನು ಒಬ್ಬ ನೀಗ್ರೋ ಯುವಕನಿಗೆ ಕೊಟ್ಟು ಮದುವೆ ಮಾಡೋಣ."

ಮೀನಾಕ್ಷಿ ನಗುತ್ತಾಳೆ. ಮೀನಾಕ್ಷಿ ದಿವಾಕರನಂತೆಯೇ ಭುಜವನ್ನು ಕುಣಿಸುತ್ತಾಳೆ, ತುಟಿಯನ್ನು ಮಡಿಸುತ್ತಾಳೆ: "ಮದುವೆ ಮಾಡಿಸುತ್ತೀರಾ? ಅದಕ್ಕಾಗಿ ಕಾದುಕೊಂಡಿರ್‍ತೀನಾ ನಿನ್ನ ಹಾಗೆ?" ಎನ್ನುತ್ತಾಳೆ. "ನೀನೇ ನೋಡಿ ಮಾಡ್ಕೋತೀಯಾ?"

"ಖಂಡಿತವಾಗಿಯೂ"

ಮೀನಾಕ್ಷಿಯ ಅಕ್ಕ ತನ್ನ ಈ ಅವಿವಾಹಿತ ತಂಗಿಯನ್ನು ಸ್ವಲ್ಪ ಅಸೂಯೆಯಿಂದ ನೋಡುತ್ತಾಳೆ. ಅವಳ ನೋಟದಲ್ಲಿ, ತನಗೆ ಸಿಕ್ಕಬೇಕಾಗಿದ್ದ ವಸ್ತುವನ್ನು, ತನ್ನನ್ನು ವಂಚಿಸಿ ತಂಗಿ ಅನುಭವಿಸುತ್ತಿದ್ದಾಳಲ್ಲಾ ಎನ್ನುವ ಹಾಗಿದೆ. ಅದಕ್ಕೇ ಹಠಾತ್ತನೆ ಕೇಳುತ್ತಾಳೆ. "ಒಳಗೊಳಗೆ ಏನಾದರೂ ನಡೆಸುತ್ತಿದ್ದೀಯಾ?"

ಮೀನಾಕ್ಷಿ ತನ್ನನ್ನು ಸಾವರಿಸಿಕೊಳ್ಳುತ್ತಾಳೆ. ನಗುತ್ತಾ, ಅಕ್ಕನ ಕೊರಳನ್ನು ಬಳಸಿ ಕೈ ಹಾಕಿ ಹೇಳುತ್ತಾಳೆ: "ನಿನಗೆ ಕೋಪ ಬಂದರೆ ನೀನು ಎಷ್ಟು ಚೆನ್ನಾಗಿ ಕಾಣುತ್ತೀಯಕ್ಕಾ!"

ಮೀನಾಕ್ಷಿಗೆ ಅಕ್ಕನನ್ನು ಕಂಡರೆ ಅಷ್ಟಕ್ಕಷ್ಟೇ. ಯಾವಾಗಲೂ ಅವಳಿಗೆ ತೋರುತ್ತೆ, ಚಿಕ್ಕಂದಿನಿಂದಲೂ ತೋರುತ್ತಿತ್ತು. ಅಕ್ಕನಿಗೆ ತನ್ನನ್ನು ಕಂಡರೆ ಅಸೂಯೆ ಎಂದು. ಆದರೂ ಮೀನಾಕ್ಷಿ ಆಗಾಗ ಅಕ್ಕನ ಮನೆಗೆ ಹೋಗಬೇಕಾಗುತ್ತೆ, ಇಲ್ಲದಿದ್ದರೆ ಕಾಲೇಜು ಬಿಟ್ಟ ಮೇಲೆ ಮನೆಗೆ ಹಿಂದಿರುಗಲು ನಿಧಾನವಾಗುವ ವೇಳೆಯಲ್ಲಿ ಹೇಗಾದರೂ ಮ್ಯಾನೇಜ್ ಮಾಡಬೇಕಲ್ಲಾ!

ಬಾಯಲ್ಲಿ ಎಷ್ಟೇ ದೊಡ್ಡ ದೊಡ್ಡ ಮಾತುಗಳನ್ನಾಡಿದರೂ, ಮೀನಾಕ್ಷಿಗೆ ಒಳಗೊಳಗೇ ಭಯ ಇದೆ. ಅಪ್ಪನ ಕಣ್ಣಮುಂದೆ ವಿಷಯ ಹೊರಬಂದರೇ? ಎಂಬ ಭಯ ಇದೆ. ಅದಕ್ಕೇ ರೋಡಿನ ಮೂಲೆಯಲ್ಲೇ ದಿವಾಕರನನ್ನು ಬೀಳ್ಕೊಡಬೇಕಾಗುತ್ತೆ ಮತ್ತು ದಿವಾಕರ ತನ್ನ ಅಗಲವಾದ ಭುಜವನ್ನೆತ್ತಿ ಕುಣಿಸಿ, ವ್ಯಂಗ್ಯವಾದ ನಗೆ ನಕ್ಕು ಹೊರಟುಹೋಗುತ್ತಾನೆ.

ದಿವಾಕರನ ಪರಿವಾರದಲ್ಲೇ ಅವನು ಬಿ.ಎ. ಓದುವಂತಹ ಮೊಟ್ಟ ಮೊದಲ ಹುಡುಗ. ಆದ್ದರಿಂದ ಅವನಿಗೆ ಜಗತ್ತನ್ನೇ ತುಚ್ಛವಾಗಿ ಕಾಣುವ ಒಂದು ಮನೋಭಾವ ಮೂಡಿದೆ. ದಿವಾಕರ ಮನೋ-ವಾಕ್-ಕಾಯದಿಂದಾಗಿ, ಎಲ್ಲಾ ವಿಧದಲ್ಲೂ ಮುಂದುವರಿದಿರುವವನೆಂದೆನಿಸಿಕೊಳ್ಳಲು ಪ್ರಯತ್ನ ಮಾಡುತ್ತಿದ್ದಾನೆ. ಅದಕ್ಕೇ ಮೀನಾಕ್ಷಿ

ಬೆರಗಾಗಿ ಸ್ತಂಭಿಸಿ ಹೋಗುವ ಹಾಗೆ ಮಾತುಗಳನ್ನಾಡುತ್ತಾನೆ. ಆಡಿ ಆತ್ಮತೃಪ್ತಿ ಪಟ್ಟುಕೊಳ್ಳುತ್ತಾನೆ.

ದಿವಾಕರನಿಗೆ ತನ್ನ ನಡವಳಿಕೆಯ ಬಗ್ಗೆ ನಾಚಿಕೆಯೇನೂ ಇರಲಿಲ್ಲ. ಇನ್ನೂ ವೇಷ, ನಡೆ ನುಡಿಗಳಿಂದ ಅದು ಇನ್ನೂ ಸಾಣೆ ಹಿಡಿದಂತೆ ಚೂಪಾಗಿಸಿಕೊಳ್ಳುವುದೇ ಅವನ ಧ್ಯೇಯವಾಗಿತ್ತು. ಮೀನಾಕ್ಷಿಯ ಆಕರ್ಷಣೆಯೂ ಅಲ್ಲೇ ಇದ್ದಿದ್ದು. ಅವಳು ಈ ಒರಟು ಕಾಡು ಮನುಷ್ಯನ ಮೇಲೆಯೇ ಸಮ್ಮೋಹಿತಳಾಗಿದ್ದಾಳೆ.

ದಿವಾಕರ ಅವಳನ್ನು ಎತ್ತಿಕೊಂಡು ಹೋಗಿದ್ದರೂ ಮೀನಾಕ್ಷಿ ಒಪ್ಪಿಕೊಂಡೇ ಹೋಗುತ್ತಿದ್ದಳೋ ಏನೋ. ಅವನ ಕಣ್ಣುಗಳು ಮಾತ್ರ ಜ್ವಲಿಸುತ್ತಿರುತ್ತೆ. ದಪ್ಪ ತುಟಿಗಳಲ್ಲಿ ಸಿಕ್ಕಿದ್ದನ್ನೆಲ್ಲಾ ನುಂಗುವಂತಹ ಹಸಿವು ಕಾಣಿಸುತ್ತೆ. ಆದರೂ ಹೇಗೋ ಆ ಮೂಲೆಯಲ್ಲೇ ಬೀಳ್ಕೊಡುತ್ತಾನೆ.

ಮತ್ತೆ ಹೇಗಾದರೂ ಒಂದು ದಿನವಾದರೂ ಒಂದು ಅವಕಾಶವನ್ನು ಒದಗಿಸಿಕೊಳ್ಳಲು ಅವಳನ್ನು ಕಾಡುತ್ತಿರುತ್ತಾನೆ.

ಮೀನಾಕ್ಷಿಗೆ ಎದೆ ಬಡಿದುಕೊಳ್ಳುತ್ತೆ. ಕಾಲ ಕೆಳಗೆ ನೆಲ ಕುಸಿದಂತಾಗುತ್ತೆ. ಅವಳು ಹೇಳುತ್ತಾಳೆ "ಸ್ವಲ್ಪ ನಿಧಾನವಿರಲಪ್ಪಾ, ಸ್ವಲ್ಪ ತಡಿ."

ಈ ಕಾಯುವುದನ್ನು ಮೀನಾಕ್ಷಿ ಯಾವುದೋ ಒಂದು ಶುಭ ಲಗ್ನದವರೆಗೂ ತಳ್ಳಿ ಹಾಕಿಡಲು ಪ್ರಯತ್ನಿಸುತ್ತಾಳೆ.

ತಾವುಗಳು 'ಹಿಂದುಳಿದಿರುವುದಿಲ್ಲ' ಎಂದು ತುಂಬಾ ಮುಂದಕ್ಕೆ ಕೊರಳನ್ನು ನೀಡಿ, ಧರ್ಮ, ಸತ್ಯ, ಸಭ್ಯತೆ, ಸತೀತ್ವ, ಇವೆಲ್ಲಾ ಕೇವಲ ಮೂಢನಂಬಿಕೆ, ಕುಸಂಸ್ಕಾರ ಎಂದು ಅಸಡ್ಡೆಯಿಂದ ನೋಡುವಂತೆ ಯಾರು ನಟಿಸುತ್ತಾರೋ ಅವರ ಬಗ್ಗೆ ಮೀನಾಕ್ಷಿಗೆ ಗೊತ್ತಿಲ್ಲ. ಆದರೆ ತನ್ನ ಭಾವನೆಗಳಿಗಾಗಿ ನಾಚುತ್ತಾಳೆ. ತನ್ನ ಸಭ್ಯ, ಸತೀತ್ವ, ಧರ್ಮದ ಭಾವನೆಗಳಿಂದಾಗಿ ತನ್ನ ಬಗ್ಗೇ ನಾಚಿಕೆಯಾಗುತ್ತೆ. ಇದೆಲ್ಲಾ ತನ್ನ ರಕ್ತದಲ್ಲೇ ಬೇರೂರಿರುವುದನ್ನು ಬಿಡಲಾಗುತ್ತಿಲ್ಲ. ಮೀನಾಕ್ಷಿ ಅದಕ್ಕೇ ಬೆಳಕಿನ ಹುಳುವಿನಂತೆ ಬೆಂಕಿಯ ಸುತ್ತಲೂ ಹೋಗಿ ಹೋಗಿ ಸಾಯುತ್ತಿದ್ದಾಳೆ.

* * *

ಸರೋಜಾಕ್ಷರಿಗೆ, ಹೀಗೆ ಮನಸೋತಿರುವ ಮಗಳ ವ್ಯಾಕುಲತೆಯ ಅರಿವು ಆಗಿಲ್ಲ. ಅವರಿಗೆ ತನ್ನ ಮೇಧಾವಿ ಮಗಳ ಪರೀಕ್ಷೆಯ ರಿಸಲ್ಟ್ ಮಾತ್ರ ಗೊತ್ತು. ಆ ವಿಷಯದಲ್ಲಿ ಅಪ್ಪನನ್ನು ಎಂದೂ ಅವಳು ನಿರಾಶರಾಗಲು ಅವಕಾಶ ಕೊಟ್ಟಿಲ್ಲ. ಆದ್ದರಿಂದ ಮಗಳ ವಿಷಯವಾಗಿ ಇನ್ನೇನನ್ನೂ ಅರಿಯಲು ಅವರು ಪ್ರಯತ್ನಪಟ್ಟಿಲ್ಲ.

ಆದರೆ ಈಚೀಚೆಗೆ ಅವರು ಪ್ರಯತ್ನಪಡದೆಯೇ ಮೀನಾಕ್ಷಿಗೆ ಸ್ನೇಹಿತರುಗಳು ಹೆಚ್ಚುತ್ತಿದ್ದಾರೆ ಮತ್ತು ಅವಳು ದಿನಾ ಯಾರಾದರೂ ಒಬ್ಬ ಸ್ನೇಹಿತರ ಮನೆಗೆ ಹೋಗಿಬಿಟ್ಟು ಹೊತ್ತು ಮೀರಿ ಮನೆಗೆ ಬರುತ್ತಿದ್ದಾಳೆ ಎಂಬ ಸಮಾಚಾರಗಳು ಅವರ ಕಿವಿಗೆ ಬೀಳುತ್ತಿತ್ತು.

ಮಗಳು ಹೀಗೆ ತಡಮಾಡಿ ಮನೆಗೆ ಬರುವುದು ಅವರಿಗೆ ಸುತರಾಂ ಇಷ್ಟವಿಲ್ಲ. ಆದರೆ ಈ 'ಇಷ್ಟವಿಲ್ಲ' ಎಂಬ ವಿಷಯವನ್ನು ಅವರು ವ್ಯಕ್ತ ಪಡಿಸುವ ರೀತಿ, ಕೇವಲ ಮುಖವನ್ನು ಸ್ವಲ್ಪ ಸಿಂಡರಿಸಿ, ಅಷ್ಟೇ. ಅದಕ್ಕಿಂತ ಹೆಚ್ಚಾಗಿ ಇನ್ನೇನು ಮಾಡಲು ಸಾಧ್ಯ ಅವರಿಂದ?

ಆದರೂ ಅದಷ್ಟಕ್ಕೇ ಬೆಲೆ ಇರುತ್ತೆ.

ಅದಷ್ಟಕ್ಕೇ ಮೀನಾಕ್ಷಿ ಹೆದರುತ್ತಾಳೆ. ಅದಕ್ಕಾಗಿ ತನ್ನ ಫ್ರೆಂಡನ್ನು ರಸ್ತೆಯ ಮೂಲೆಯಲ್ಲೇ ಬೀಳ್ಕೊಡುತ್ತಾಳೆ. ಅದಕ್ಕೇ ಫ್ರೆಂಡನ್ನು ಒಂದು ಸಲವೂ ಮನೆಗೆ ಕರೆದಿಲ್ಲ. ಸಾವಿರ ಸುಳ್ಳಿನ ಬಲೆಯನ್ನು ನಿತ್ಯವೂ ನೇಯುತ್ತಿದ್ದಾಳೆ.

ಅದರ ಪ್ರಭಾವವನ್ನು ದಾಟಲು ಅವಳಿಂದ ಆಗಿಲ್ಲ.

ರಸ್ತೆಯ ಮೂಲೆಯಿಂದ ತಿರುಗಿ, ಬೇಗ ಹೆಜ್ಜೆ ಹಾಕಿದಳು ಮೀನಾಕ್ಷಿ.

ತನ್ನ ತಾತನ ಕಾಲದ ಆ ಮನೆಯ ಮುಂದೆ ಬಂದು ಒಂದು ನಿಮಿಷ ನಿಂತು, ತಲೆಯೆತ್ತಿ ನೋಡಿದಳು.

ಮಹಡಿಯಲ್ಲಿ ತಂದೆಯ ರೂಮಿನಲ್ಲಿ ದೀಪ ಉರಿಯುತ್ತಿರುವುದು ಕಿಟಕಿಯಿಂದ ಕಾಣಿಸಿತು. ತುಟಿಯನ್ನು ಒಂದು ಸಲ ಕಚ್ಚಿಕೊಂಡಳು. ಇದು ದಿವಾಕರನಿಂದ ಕಲಿತದ್ದಲ್ಲ.

ಚಿಕ್ಕಂದಿನಿಂದಲೇ ಯಾವುದಾದರೂ ಒಂದು ವಿಷಯ ತನಗೆ ಇಷ್ಟವಾಗದೆ ಹೋದರೆ ಹೀಗೆ ತುಟಿ ಕಚ್ಚುತ್ತಿದ್ದಳು. ಈಗಲೂ ಆ ಅಭ್ಯಾಸ ನಿಂತುಬಿಟ್ಟಿದೆ. ತುಟಿ ಕಚ್ಚುತ್ತಾ ಯೋಚಿಸಿದಳು. ಏನಾಶ್ಚರ್ಯ, ಒಬ್ಬ ಗಂಡಸು, ಇಡೀ ದಿನದ ಕೆಲಸವಾದ ಮೇಲೆ ಸಾಯಂಕಾಲ ಸ್ವಲ್ಪ ಏನಾದರೂ ಆಟ–ಪಾಟ, ಮನೋರಂಜನೆಯ ಗೋಜಿಗೆ ಹೋಗುವುದಿಲ್ಲ. ಸ್ವಲ್ಪ ಹೊರಗೆ ನಡೆಯಲೂ ಹೋಗುವುದಿಲ್ಲ. ಸುಮ್ಮನೆ ಮನೆಯಲ್ಲೇ ಕೂತಿರುತ್ತಾರೆ! ಆದರೆ ದಿವಾಕರ .... ಕೂಡುವುದು, ಏಳುವುದು ಯಾವುದೇ ವಿಷಯವಾಗಲೀ ಎಲ್ಲರನ್ನೂ ದಿವಾಕರನೊಂದಿಗೆ ಹೋಲಿಸಿ ನೋಡುವುದೇ ಒಂದು ಕೆಲಸವಾಗಿದೆ ಮೀನಾಕ್ಷಿಗೆ, ಬಹುಶಃ ಈ ಅಸಾಧಾರಣ ವ್ಯಕ್ತಿ ದಿವಾಕರನೇ ಅವಳ ಮನಸ್ಸಿಗೆ ಆದರ್ಶ ಪುರುಷನಾಗಿ ಕಾಣುತ್ತಾನೋ! ಅದಕ್ಕೇ ಅವಳಿಗೆ, ದಿವಾಕರನ, ರಾತ್ರಿ ಹೊತ್ತುಗೊತ್ತು ಇಲ್ಲದ ಓಡಾಡುವ ವಿಷಯವಾದ ಕತೆಗಳು ಜ್ಞಾಪಕ ಬರುತ್ತೆ, ತನ್ನ ತಂದೆ ಹೀಗೆ ಸಾಯಂಕಾಲದ ಹೊತ್ತು ಮನೆಯಲ್ಲಿ ಕೂತಿರುವುದನ್ನು ನೋಡಿ ಹೋಲಿಸಿ ನೋಡುತ್ತಾಳೆ.

ಎಂತಹ ವಿಷಯವಾದರೂ ಅದನ್ನು ಒಂದು ಅಲಕ್ಷ್ಯ ಭಾವದಿಂದ ನೋಡುವ ತನ್ನ ಕತೆಗಳನ್ನು ದಿವಾಕರ ಬೇಕಾದಷ್ಟು ಅಳೆದಿದ್ದಾನೆ. ಹೇಳಬೇಕಾದರೆ ಅದೇ ಅವನ ಮಾತುಕತೆಯ ಮುಖ್ಯ ವಸ್ತು. 'ನಾನು! ನನ್ನ'ನ್ನು ಕೇಂದ್ರವಾಗಿಟ್ಟುಕೊಂಡೇ ಅವನ ಅಷ್ಟು ಮಾತೂ!

ದಿವಾಕರನು ಅವನ 'ಒಬ್ಬ ದೊಡ್ಡ ಮನುಷ್ಯ ದೊಡ್ಡ ಬಿಸಿನೆಸ್‌ಮನ್' ಸೋದರ ಮಾವನ ಮನೆಯಲ್ಲಿ ವಾಸವಾಗಿದ್ದಾನೆ. ಅವನ ಮನೆ ಇರುವುದು ಅವನ ಊರಲ್ಲಿ, ಅವರುಗಳ

ಜಹಗೀರಿನಲ್ಲಿ. ಸೋದರ ಮಾವನವರು ದಿವಾಕರನನ್ನು ಖಂಡಿಸುವ ವಿಷಯವನ್ನು ಕಲ್ಪಿಸಿ ಕೂಡ ನೋಡುವವರಲ್ಲ. ಹಾಗೇನಾದರೂ ಖಂಡಿಸಲು ಬಂದರೆ ದಿವಾಕರ ನಗುತ್ತಲೇ ಅವರ ಮಾತನ್ನು ಉಡಾಯಿಸಿಬಿಡುತ್ತಾನಂತೆ. ಆ ಪರಮ ಸತ್ಯವನ್ನು ಒತ್ತಿ ಹೇಳಿ ಅವರನ್ನು ಸುಮ್ಮನಾಗುವಂತೆ ಮಾಡಿಬಿಡುತ್ತಾನಂತೆ.

ಸುತ್ತಾಡಿಕೊಂಡು ಬರುವಾಗ ರಾತ್ರಿ ಹೊತ್ತಾದರೆ ಗಾಬರಿಯಿಂದ ತನ್ನ ಎದೆ ಹೊಡೆದು ಕೊಳ್ಳುವಾಗ ಮೀನಾಕ್ಷಿಗೆ ಆ ಮಾತುಗಳ ನೆನಪಾಗಿ ಅವಳು ನಿಟ್ಟುಸಿರು ಬಿಡುತ್ತಾಳೆ.

ಮೀನಾಕ್ಷಿ ತಾನೇ ತನ್ನ ತಾಯಿಯ ಹತ್ತಿರ, ಈಗ ಕಾಲವು ಬದಲಾಗುತ್ತಿದೆಯೆಂದು ಜಯಘೋಷದಿಂದ ಹೇಳುವುದಿಲ್ಲವೇ? ಅದು ಅಮ್ಮನ ಹತ್ತಿರ ಮಾತ್ರ ಎಷ್ಟೋ ಹೇಳುತ್ತಾಳೆ, "ನೀನು ನಿನ್ನ ಆ ಮಾಂಧಾತನ ಕಾಲದ ದೇವರ ಮನೆಯಲ್ಲಿ ಅಡಗಿಕೊಂಡಿರಮ್ಮಾ, ನಮ್ಮ ಈಗಿನ ಕಾಲದ ನಡೆ-ನುಡಿಗಳು ನಿನಗೊಂದೂ ಅರ್ಥವಾಗುವುದಿಲ್ಲ. ಪ್ರಪಂಚದ ಜನ ಹೋಗಿ ಚಂದ್ರನನ್ನು ಮುಟ್ಟಿದೆ. ನೀವುಗಳು, ಆ ಹಳೇ ಗೂಟಕ್ಕೆ ಕಟ್ಟಿಹಾಕಿದ ಹಸುವಿನಂತೆ ಹಳೆಯ ವಿಷಯವನ್ನೇ ಮೆಲುಕುಹಾಕುತ್ತಿದ್ದೀರಿ."

ಈ ತರಹದ ಇನ್ನೂ ಏನೇನೋ ಮಾತಾಡುತ್ತಾಳೆ ಮೀನಾಕ್ಷಿ.

ಆದರೆ ಅಮ್ಮನಿಗೆ ಹೇಳಿ ತಾನೆ ಏನು ಪ್ರಯೋಜನ? ಅಪ್ಪನನ್ನ ನೋಡಿದರೇನೇ ದುಗುಡದಿಂದ ಮನಸ್ಸು ಭಾರವಾಗುತ್ತದಲ್ಲಾ! ಮೆಟ್ಟಿಲ ಕೆಳಗೆ ಚಪ್ಪಲಿಯನ್ನು ತೆಗೆದಿಟ್ಟು ಬಿಟ್ಟು ಮಹಡಿಯನ್ನು ಹತ್ತಬೇಕಾಗುತ್ತೆ. ಇದರಿಂದ ಮೀನಾಕ್ಷಿಗೆ ತನಗೇ ತನ್ನನ್ನು ಹೇಯವಾಗಿ ತೋರುತ್ತೆ. ಬಲವಾದ ಪ್ರತಿಭಟನೆಯನ್ನು ಎದುರಿಸಿದರೇನೇ ಮನಸ್ಸಿನ ಕಳವಳಕೆ ತೃಪ್ತಿಯಾಗುತ್ತೋ ಏನೋ!

ಆದರೆ ಸರೋಜಾಕ್ಷರು ಅದಕ್ಕೆ ಅವಕಾಶವೇ ಕೊಡುವುದಿಲ್ಲವಲ್ಲಾ. ಅವರು ಏನಾದರೂ ಕೋಪಿಸಿಕೊಂಡು ಕೇಳಿದ್ದಾರಾ, 'ರಾತ್ರಿ ಯಾಕೆ ಇಷ್ಟು ಹೊತ್ತು ಮಾಡಿಕೊಂಡು ಮನೆಗೆ ಬರುತ್ತೀಯೆ' ಎಂದು? ಇಲ್ಲ, ಅವರು ಕೇಳುವುದಿಲ್ಲ.

ಅವಳು ಅವರ ಕೋಣೆಯನ್ನು ದಾಟಿ ಹೋಗುವಾಗ ಕೇವಲ ಒಂದು ಸಲ ಕಣ್ಣೆತ್ತಿ ನೋಡುತ್ತಾರೆ. ಅವರು ನೋಡಿದುದನ್ನು ಅವಳೂ ನೋಡುತ್ತಾಳೆ ಮತ್ತು ಅವಳಿಗೆ ಅನಿಸುತ್ತೆ, ಆ ಕಣ್ಣುಗಳಲ್ಲಿ ಒಂದು ಅಸಂತುಷ್ಟಿಯ ಕಪ್ಪು ಛಾಯೆ ಇದೆ, ಹುಬ್ಬುಗಳು ಗಂಟಾಗಿದೆ.

ಈ ಅನುಭವವೇ ಅವಳ ಮನಸ್ಸಿನಲ್ಲಿ ಅವಮಾನದ ಜ್ವಾಲೆಯನ್ನು ಎಬ್ಬಿಸುತ್ತೆ. ತನ್ನ ಕೋಣೆಯೊಳಗೆ ಹೋಗಿ ಒಂದು, ಕಾರಣವಿಲ್ಲದ ಕೋಪದಿಂದ ಕುದಿಯುತ್ತಿರುತ್ತೆ ಅವಳ ಮನಸ್ಸು. ತನ್ನ ನಡತೆಯ ಸ್ವಪಕ್ಷಕ್ಕೆ ಬೇಕಾದಷ್ಟು ಯುಕ್ತಿಗಳನ್ನು ಕಲ್ಪಿಸಿಕೊಂಡು ನಿಲ್ಲಿಸಿಕೊಂಡು ಅವರನ್ನೇ ಆಪಾದಿತನ ಸ್ಥಾನದಲ್ಲಿ ನಿಲ್ಲಿಸುತ್ತಾಳೆ.

ನೀಲಾಕ್ಷನೇ ಈಗ ಅವಳ ಯುಕ್ತಿಗಳಿಗೆ ಕಾರಣನಾಗುತ್ತಾನೆ. ಮಗನ ವಿಷಯದಲ್ಲಿ ಮಾತ್ರ ಸುಮ್ಮನಿರುತ್ತಾರೆ. ಸಹಿಸಿಕೊಂಡು ಹೋಗುತ್ತಾರೆ. ಆದರೆ ಮಗಳ ವಿಷಯದಲ್ಲಿ

ಮಾತ್ರ ಮುಖವನ್ನು ಸಿಂಡರಿಸುತ್ತಾರೆ! ಈ ವಿಷಯವನ್ನೇ ಮನಸ್ಸಿನಲ್ಲಿ ತಿರುವಿಹಾಕುತ್ತಾ ಜವಾಬನ್ನು ತಯಾರು ಮಾಡಿಕೊಳ್ಳುತ್ತಾಳೆ.

ಹೋಗಲಿ, ಈ ಜವಾಬು ತಯಾರು ಮಾಡಿಕೊಳ್ಳುವುದು ಆಮೇಲೆ ಆಗಲಿ. ಮೊದಲು ಸದ್ದಿಲ್ಲದೇ ಹತ್ತುವ ನೆಪದಿಂದ ಎರಡನೆಯ ಮಹಡಿಗೆ ಹತ್ತಿ ಅಮ್ಮನ ದೇವರ ಮನೆ ಮುಂದೆ ಹೋಗಬೇಕು. ತಾನು ಬಂದಿರುವುದನ್ನು ಅಮ್ಮನಿಗೆ ಎಷ್ಟು ಬೇಗ ತಿಳಿಯಪಡಿಸಿದರೆ ಅಷ್ಟೂ ಒಳ್ಳೆಯದು. ಅಮ್ಮ 'ಈಗತಾನೆ ಬಂದೆಯೇನೆ?' ಎಂದು ಕೇಳಿದರೆ ಪಟ್ಟೆಂದು ಹೇಳಬಹುದು. "ಏಕೆ, ಬಹಳ ಹೊತ್ತಾಗಿಹೋಯಿತೇ? ನಿಮಗೆಲ್ಲಾ ಊಟವೂ ಆಯಿತೇ? ನಿನ್ನ ಮಗ–ಸೊಸೆ ಹಿಂದಿರುಗಿ ಬಂದಾಯಿತೇನೋ?"

ದಿವಾಕರನ ಮುಂದೆ ತಾನು ಹೇಯವಾಗಿ ಹೋದ ಕೋಪವನ್ನು ಅಮ್ಮನ ಮೇಲೆ ತಿರುಗಿಸುತ್ತಾಳೆ. ವಿಜಯಾ ಕೇಳುತ್ತಾರೆ, "ಅಣ್ಣನದು ಬಹಳ ಒಳ್ಳೆಯ ಉದಾಹರಣೆ ಅಲ್ಲವೇ? ನಿನಗೆ ಹೇಳಿ ಕೇಳಿಸಿ ಏನು ಪ್ರಯೋಜನ? ನಿಮ್ಮಗಳ ಸಂಸಾರದಲ್ಲಿ ನಾನು ಯಾರು? ಈ ಸಂಸಾರದಲ್ಲಿ ನಾನೊಂದು ಕಳಪೆ, ಕಸ, ನನ್ನ ಹತ್ತಿರ ಬರುವುದಾದರೂ ಏಕೆ? ಹಿಂತಿರುಗಿ ಮನೆಗೆ ಬಂದೆಯೋ ಇಲ್ಲವೋ? ಒಳ್ಳೆಯ ಕೆಲಸ ಮಾಡಿದೆ. ನಿಮ್ಮಪ್ಪ ಉದ್ಧಾರವಾದರು. ಈಗ ಹೋಗಿ ಮಂಚದ ಮೇಲೆ ಬಿದ್ದು ಕೊಂಡು ಕಾಲು ಕುಣಿಸು!"

ವಿಜಯಾ ಮಾತಾಡುವುದೇ ಹೀಗೆ.

ಆದರೆ ಇಂದು ವಿಜಯಾ ಬೇರೆ ತರಹ ಮಾತಾಡಿದರು. ಮಗಳು ಬಂದು ಬಾಗಿಲಲ್ಲಿ ನಿಂತುಕೊಂಡಾಗ ಮೆಲುದನಿಯಲ್ಲಿ ಕೇಳಿದರು, "ನೆಟ್ಟಗೇ ಬಂದೆಯಾ? ಅಥವಾ ಅಪ್ಪನ್ನ ನೋಡಿಬಿಟ್ಟು ಬಂದೆಯಾ?"

"ನೆಟ್ಟಗೇ ಬಂದೆ."

"ಸರಿ ಹಾಗಾದರೆ, ಹೊತ್ತಾದದ್ದನ್ನು ನೋಡಿ ಅವರೇನಾದರೂ ಅಂದರೆ, 'ಆಗಲೇ ಬಂದೆ. ಅಮ್ಮನ ಹತ್ತಿರ ಮಾತಾಡುತ್ತಾ ಇದ್ದೆ' ಎಂದು ಹೇಳು."

ಮೀನಾಕ್ಷಿ ಈಗ ಎದೆಗಾರಿಕೆಯಿಂದ, "ಯಾಕೆ, ಸುಮ್ಮನೆ ಸುಳ್ಳು ಸುಳ್ಳಾಗಿ ಯಾಕೆ ಅನ್ನಬೇಕು?" ಎಂದಳು.

"ಹೇಳಿದರೆ ಏನು ಮಹಾಭಾರತಕ್ಕೆ ಕೆಸರಂಟುವುದಿಲ್ಲ" ಎಂದು ಹೇಳಿ ಮುಖಭಂಗ ಮಾಡಿ, ಅಣಕಿಸಿ ಹೇಳುತ್ತಾರೆ ವಿಜಯಾ, "ಹೂಂ, ಸುಳ್ಳು ಮಾತು ಎಂದಾದರೂ ಆಡಿದ್ದೀಯಾ?!"

"ಹೇಳುವುದನ್ನು ನೀನು ಯಾವಾಗ ಕೇಳಿದ್ದೀಯಾ?"

ವಿಜಯಾ ಮಗಳ ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಾರೆ. ಆಮೇಲೆ ತಗ್ಗಿದ ಗಡಸುಧ್ವನಿಯಲ್ಲಿ ಹೇಳುತ್ತಾರೆ, "ನೋಡು ಮೀನಾ, ನನ್ನ ಹೊಟ್ಟೆಯಲ್ಲಿ ನೀನು ಹುಟ್ಟಿದ್ದೀಯೇ ಹೊರತು ನಿನ್ನ ಹೊಟ್ಟೆಯಲ್ಲಿ ನಾನು ಹುಟ್ಟಲಿಲ್ಲ. ನಿನ್ನ ಯಾವ ಮಾತು ನಿಜ, ಯಾವ ಮಾತು ಸುಳ್ಳು ಅನ್ನುವುದನ್ನು ನಿನ್ನ ಕಣ್ಣು ನೋಡಿದರೆಯೇ ನನಗೆ ಗೊತ್ತಾಗುತ್ತೆ. ನೀನು ಹೀಗೆ

ರಾತ್ರಿ ಎಂಟು–ಎಂಟೂವರೆವರೆಗೂ ಯಾವ ಸ್ನೇಹಿತೆ ಮನೆಗೆ ಹೋಗುತ್ತೀಯೆ. ಯಾವ ಲೈಬ್ರರಿಗೆ ಹೋಗುತ್ತೀಯೆ ಅನ್ನುವುದು ನನಗೆ ತಿಳಿಯದೆ ಇಲ್ಲ. ನಾನು ಹೇಳುವುದು ನಿನ್ನ ಒಳ್ಳೆಯದಕ್ಕೆ."

ಮೀನಾಕ್ಷಿ ಕಣ್ಣನ್ನು ತಿರುಗಿಸಿಕೊಳ್ಳುತ್ತಾಳೆ. ಆದರೆ ಧ್ವನಿಯಲ್ಲಿ ಮಾತ್ರ ಜೋರನ್ನು ಬಿಡದೇ "ಅಮ್ಮಾ ನನಗೆ ಎಲ್ಲಾದಕ್ಕಿಂತ ಒಳ್ಳೆಯದು, ಒಂದು ಕಬ್ಬಿಣದ ಪಂಜರವನ್ನು ಮಾಡಿ ಅದರಲ್ಲಿ ನನ್ನನ್ನು ಇಡುವುದು" ಎನ್ನುತ್ತಾಳೆ.

"ಪಂಜರವೇ? ನೀವೆಲ್ಲಾ ಪಂಜರದಲ್ಲಿದ್ದೀರಾ? ಈ ಕಾಲದ ಹುಡುಗಿಯರು?" ವಿಜಯಾ ತೀವ್ರತೆಯಿಂದ ಕೇಳುತ್ತಾರೆ. "ಅಬ್ಬ, ಎಷ್ಟೊಂದು ಮೋಸಗಾರರು ನೀವುಗಳು? ಇನ್ನು ಮೇಲೆ ನಿನ್ನ ಅತ್ತಿಗೆಯೂ ಹೇಳಬಹುದು ತಾನು ಪಂಜರದಲ್ಲಿದ್ದೇನೆ ಎಂದು."

"ಅತ್ತಿಗೆಯೊಂದಿಗೆ ನನ್ನನ್ನು ಹೋಲಿಸಬೇಡ." ಮೀನಾಕ್ಷಿ ಕೋಪದಿಂದ ಹೇಳುತ್ತಾಳೆ, "ನೋಡುತ್ತಿರು ನಿನ್ನ ಆ ಸೊಸೆಯೂ ಒಂದು ದಿನ ಸಾರಾಯಿ ಕುಡಿದು ತಡವರಿಸುತ್ತಾ ಬರುತ್ತಾಳೆ."

"ನೀನೇನು ನನಗೆ ಹೇಳಬೇಕಾ? ನನ್ನ ಕಣ್ಣಿಗೇ ಅದು ಕಾಣುತ್ತಿದೆ." .

"ಹೂಂ, ಇರೋ ತಪ್ಪೆಲ್ಲಾ ಮಗಳ ವಿಷಯದಲ್ಲಿ ಮಾತ್ರ."

"ಮಗಳನ್ನು ಬೇರೆಯವರ ಮನೆಗೆ ರವಾನಿಸಬೇಕಲ್ಲಾ."

"ಅವಶ್ಯಕವಿಲ್ಲ, ನನಗಾಗಿ ನೀವು ಯಾರೂ ತಲೆಕೆಡಿಸಿಕೊಳ್ಳಬೇಕಾಗಿಲ್ಲ."

"ಅದು ಗೊತ್ತು," ವಿಜಯಾ ಕಟು ಸ್ವರದಲ್ಲಿ ಹೇಳಿದರು. "ಆ ವಿಷಯವಾಗಿ ನೀನೇ ನಿನ್ನ ತಲೆ ಕೆಡಿಸಿಕೊಳ್ಳುತ್ತಿರುವುದು ನನಗೆ ತಿಳಿಯದೇ ಇಲ್ಲ. ಈ ಹೋಗು. ಏನಾದರೂ ತಿನ್ನು. ಇಷ್ಟು ಹೊತ್ತು ಅದೆಲ್ಲಿಗೆ ಹೋಗಿ ಹರಟೆ ಹೊಡೆಯುತ್ತಿದ್ದೆಯೋ ಅಲ್ಲಿ ಯಾರೂ. ಹಸಿವಾದಾಗ ತಿನ್ನುವುದಕ್ಕೆ ಏನೂ ಕೊಡುವುದಿಲ್ಲವಲ್ಲ."

"ನನಗೆ ಹಸಿವಿಲ್ಲ," ಮೀನಾಕ್ಷಿ ಮೈ ಮುರಿಯುತ್ತಾ ಹೇಳಿದಳು. "ಈಗ ಹೋಗುತ್ತೇನೆ ಅಪ್ಪನ ಹತ್ತಿರ. ಅವರ ಅಮ್ಮನ ಕಾಲವೇ ಇನ್ನೂ ಇದೆಯೇ ಎಂದು ಅವರನ್ನು ಕೇಳುತ್ತೇನೆ. ಕೇಳುತ್ತೇನೆ ಈಗ ಸಾಯಂಕಾಲದಲ್ಲಿ ಕಲ್ಕತ್ತಾ ಷಹರಿನ ರಸ್ತೆಗಳಲ್ಲಿ ಹೆಂಗಸರು ಓಡಾಡುವುದೇ ಇಲ್ಲವೇ ಎಂದು "ಯಾಕೆ" ಈಗ ಸುಮ್ಮನೆಯಾದರೂ ಮಣ್ಣುಕತ್ತಿ ಹುಳು ತೆಗೆಯುತ್ತೀಯೆ?"

ಸುಮ್ಮ ಸುಮ್ಮನೆಯಾದರೂ ಹೆದರುವುದಕ್ಕೆ ಕಾರಣ ತಾನೆ ಏನಿದೆ ಎಂದುಕೊಳ್ಳುತ್ತಾಳೆ ಮೀನಾಕ್ಷಿ. ಏನಾದರೂ ಆಗಲಿ. ಈವತ್ತು ತನ್ನ ಮತ್ತು ದಿವಾಕರನ ಬಗ್ಗೆ ಹೇಳಿಯೇಬಿಡುತ್ತೇನೆ. ಯಾವುದೇ ಒಂದು ನಿರ್ಧಾರ ಆಗಿಯೇಬಿಡಲಿ. ಎಂದುಕೊಳ್ಳುತ್ತಾಳೆ.

ಆದರೆ ಪಠಾತ್ತನೇ ಧೈರ್ಯವೆಲ್ಲಾ ಹೊರಟುಹೋಗುತ್ತೆ. ಅದಕ್ಕೆ ಮೀನಾಕ್ಷಿ ಇನ್ನು ಮುಂದುವರಿಸದೆ. "ಹೋಗಲಿ. ನನ್ನ ಮಾತು ಕೇಳಿ ನಿಮಗೆ ಏನೂ ಆಗಬೇಕಾದ್ದಿಲ್ಲ. ನೀನು ಇರು ನಿನ್ನ ಸ್ವರ್ಗ ಲೋಕದಲ್ಲಿ. ಅಪ್ಪ ಅವರ ಉಚ್ಚನೀತಿಯ ಚಿಂತನೆಯ ದಂತದ ಉಪ್ಪರಿಗೆಯಲ್ಲಿರಲಿ. ಅಣ್ಣನಂತೂ ಅವನ ಸ್ವರ್ಗ ಅವನೇ ರಚಿಸಿಕೊಂಡಿದ್ದಾನೆ. ನನ್ನ ವಿಚಾರ

ನಾನೇ ಯೋಚಿಸಿಕೊಳ್ಳುತ್ತೇನೆ," ಎಂದು ಹೇಳಿ ಸರಸರನೆ ಮೆಟ್ಟಲಿಳಿದು ಬಂದು, ಅಪ್ಪನ ಕೋಣೆ ಕಡೆ ಒಂದು ನೋಟವನ್ನು ಬೀರಿ, ಎಡಗಡೆಯ ಶಾರದಾಪ್ರಸಾದರ ಕೋಣೆಗೆ ಬಂದಳು. ಆಶ್ಚರ್ಯಕರವಾದ ಕುಶಲತೆಯೊಂದಿಗೆ ಮುಖದ ಮೇಲೆ ಒಂದು ನಸುನಗೆಯ ತೆರೆಯನ್ನೆಳೆದು ಕೇಳಿದಳು, "ಏನು ಮಾವಯ್ಯಾ, ಹೊಸದಾಗಿ ಏನು ಕಂಡುಹಿಡಿದಿರಿ?"

ಮಾವಯ್ಯನನ್ನು ಸ್ವಲ್ಪ ತಮಾಷೆ ಮಾಡುವ ಉದ್ದೇಶದಿಂದ ಮೀನಾಕ್ಷಿ ಆಗಾಗ್ಗೆ ಅವರ ಕೋಣೆಗೆ ಬರುವುದುಂಟು. ಈಗ ತಮಾಷೆ ಮಾಡುವ ಉದ್ದೇಶ್ಯ ಒಂದೇ ಅಲ್ಲದೆ ಇನ್ನೂ ಒಂದು ಉದ್ದೇಶ್ಯವೂ ಅಡಗಿದೆ. ಮನಸ್ಸಿನಲ್ಲೇ ಯಾವುದೋ ಒಂದು ಕಣ್ಣಿಗೆ ಕಾಣದಂತಹ ಬರೆವಣಿಗೆಯನ್ನು ಮೀನಾಕ್ಷಿ ಓದಿಕೊಂಡ ಹಾಗಿದೆ. ಮಾವಯ್ಯನಲ್ಲಿ ಸ್ವಲ್ಪ ಆತ್ಮೀಯತೆಯ ಮರ್ಯಾದೆಯನ್ನು ತೋರಿಸಿದರೆ ಬಹುಶಃ ಅಪ್ಪನನ್ನು ಸ್ವಲ್ಪ ತೃಪ್ತಿಪಡಿಸಬಹುದು. ಮತ್ತೆ ತಾನಾಗಿಯೇ ಹೋಗಿ ಮಾತಾಡಿಸಿದರೆ ಅದು ಆತ್ಮೀಯತೆಯನ್ನು ತೋರಿದಹಾಗಲ್ಲವೇ! ಅಕ್ಕಾ ಎಲ್ಲಿ ತೋರಿಸುತ್ತಾಳೆ ಈ ಮರ್ಯಾದೆಯನ್ನು?!

ಬರುತ್ತಾಳೆ ಕೆಲಗಂಟೆಗಳ ಕಾಲ ಇದ್ದು ಹೋಗುತ್ತಾಳೆ. ಮಾವಯ್ಯನ ಕೋಣೆಯನ್ನು ಇಣಿಕಿಯೂ ನೋಡುವುದಿಲ್ಲ. ಮೀನಾಕ್ಷಿ ಬಂದು ಇಣಿಕಿ ನೋಡುತ್ತಾಳೆ. ಮುಖ್ಯವಾಗಿ ಎಂದು ದಿವಾಕರನ ಸಂಗ ಬಿಡಿಸಿಕೊಂಡು ಬರಲು ಸ್ವಲ್ಪ ಜಾಸ್ತಿ ಹೊತ್ತಾಗಿಹೋಗುತ್ತೋ ಮತ್ತೆ ಕಾಲ ಕೆಳಗೆ ನೆಲ ಕುಸಿದುಹೋದಂತೆ ಭಾಸವಾಗಿ, ಒಂದು ಅತಲ ಪಾತಾಳದ ಸಂಕೇತವನ್ನು ತೋರಿಸಿದಂತಾಗಿ ಭಯವಾಗುತ್ತೋ, ಅಂದು ಬಂದು ಇಣಿಕಿ ನೋಡುತ್ತಾಳೆ. ಅಂದು ನೆಟ್ಟಗೆ ಹೋಗಿ ಅಮ್ಮನ ಮುಂದೆ ನಿಲ್ಲಲು ಏನೋ ಒಂದು ಕಳವಳ ತೋರುತ್ತೆ. ಅಮ್ಮನ ಕಣ್ಣುಗಳೆರಡು ಎರಡು ಸರ್ಚ್‌ಲೈಟ್‌ಗಳಂತೆ ತನ್ನ ಮನಸ್ಸನ್ನೂ ಕೊರೆದುಕೊಂಡು ಈ ಅತಲ ಪಾತಾಳದ ಸಂಕೇತವನ್ನೂ ನೋಡಿಬಿಡುತ್ತೋ! ನೋಡಿ ಅಮ್ಮ ಒಂದು ವೇಳೆ ವ್ಯಂಗ್ಯವಾಗಿ ನಕ್ಕು, "ಏನು, ನೀವುಗಳು ಈಗಿನ ಕಾಲದ ಹುಡುಗಿಯರು ನಮ್ಮ ಸಂದೇಹದ ಬುದ್ಧಿಯನ್ನು ಧಿಕ್ಕರಿಸುತ್ತೀರಲ್ಲಾ, ಈಗ ಏನಾಗುತ್ತಿದೆ? ತುಪ್ಪ ಮತ್ತು ಅಗ್ನಿಯ ವಿಷಯದಲ್ಲಿ ನಾವು ಹೇಳುವ ನಾಣ್ಣುಡಿ ಸರಿಯಲ್ಲವೇ ಅಂದರೆ?"

ಆದರೆ ಯಾರು ಅಗ್ನಿ, ಯಾರು ತುಪ್ಪ?

ಮೀನಾಕ್ಷಿಯೇ ಕರಗಿ ಹೋಗುತ್ತಿದ್ದಾಳೆ. ಅವಳೇ ಈಗ ಹೋಗಿ ಹೋಗಿ ಅಗ್ನಿಯಲ್ಲಿ ತನ್ನ ರೆಕ್ಕೆಯನ್ನು ಸುಟ್ಟುಕೊಳ್ಳಲು ಓಡುತ್ತಿದ್ದಾಳೆ.

ಎಂತಹ ತೀವ್ರ ಆಕರ್ಷಣೆ! ಆ ಪಶುತ್ವವೇ ಮೂರ್ತಿಮಾನಾದ ಮನುಷ್ಯನಲ್ಲಿ! ಆ ದಪ್ಪ ತುಟಿಗಳಲ್ಲಿ ಎಷ್ಟು ಮಾದಕತೆ! ಆ ಜ್ವಲಿಸುವ ಕಣ್ಣುಗಳೋ!

ಆದರೆ ಆಕರ್ಷಣೆಯ ಅಂತರಾಳದಲ್ಲಿ ತಾನೇ ಇರಲು ಭಯ!

ಆದ್ದರಿಂದ ದಿವಾಕರನ ಸಾನ್ನಿಧ್ಯದಿಂದ ಸರಿದು ಬಂದ ತಕ್ಷಣ ಅಪ್ಪನ ಮುಂದೆ ಹೋಗಿ ನಿಲ್ಲುವುದಂತೂ ಸಾಧ್ಯವೇ ಇಲ್ಲ. ತನ್ನಲ್ಲಿ ಏನೋ ಒಂದು ತರಹ ಅಶುಚಿ ಭಾವ ಇರುವ ಹಾಗೆ ತೋರುತ್ತೆ. ಅಪ್ಪನ ಕಣ್ಣಲ್ಲಿ ಒಂದು ಅಸಹ್ಯ ಮತ್ತು ನಿರಾಶೆಯ ರೇಖೆ

ಕಂಡಂತಾಗುತ್ತೆ. ಆ ದೃಷ್ಟಿಯೇ ತನ್ನನ್ನು ಕೇಳುವಂತೆ ತೋರುತ್ತೆ, “ಛೀ, ಛೀ, ಮೀನಾಕ್ಷಿ! ಇಷ್ಟೇನೇ ನಿನ್ನ ಅಭಿರುಚಿ?”

ಆದ್ದರಿಂದ ಈ ಹುಚ್ಚು ಮಾವಯ್ಯನ ಕೋಣೆಯೊಳಗೆ ನುಗ್ಗುವುದೇ ಶ್ರೇಯಸ್ಕರ.

ಆತ್ಮ ಚಿಂತನೆಯಲ್ಲಿರುವ ಈ ಹುಚ್ಚು ಮನುಷ್ಯ ತಲೆಯೆತ್ತಿ ನೋಡುವುದಿಲ್ಲ. ಮೀನಾಕ್ಷಿಯಲ್ಲಿ ಎಲ್ಲೆಲ್ಲಿ ಒಂದು ಪಾಶವಿಕ ಸುಖದ ಸೋಂಕು ಅಂಟಿಕೊಂಡಿದೆ ಎಂದು ನೋಡುವುದಿಲ್ಲ. ಅವರ ಹೊಸ ಆವಿಷ್ಕಾರದ ವಿಷಯ ಕೇಳಿದರೇನೇ ಶಾರದಾ ಪ್ರಸಾದರಿಗೆ ಸಂತೋಷವಾಗುತ್ತೆ. ಉತ್ತೇಜನಗೊಳ್ಳುತ್ತಾರೆ. ಈ ದಿನವೂ ಅವರು ಹೇಳಲಾರಂಭಿಸಿದರು–“ಆವಿಷ್ಕಾರ ಎಂಥದ್ದು? ಎಲ್ಲಾ ಸೂರ್ಯನ ಬೆಳಕಿನಂತೆ ಬೆಚ್ಚು ಬೆಳಕಾಗಿದೆಯಲ್ಲಾ, ಕೇವಲ ಸರಿಯಾಗಿ ನೋಡಬೇಕು. ಪೂರ್ವಜರ ಮಾತಿಗೆ ಸ್ವಲ್ಪ ಬೆಲೆಕೊಟ್ಟು ವಿಚಾರ ಮಾಡಬೇಕು. ಆದರೆ ನೀವುಗಳು ಮೊದಲೇ ನಿರ್ಧಾರಮಾಡಿ ಕೂತಿದ್ದೀರಿ. ನಿಮ್ಮ ಹಿಂದಿನ ‘ಜೆನರೇಷನ್ನಿ’ನವರೆಲ್ಲಾ ಮೂರ್ಖರು ಎಂದು! ಅಣ್ಣನ ಹತ್ತಿರವೂ ಅದೇ ಮಾತಾಡುತ್ತಾ ಇದ್ದೆ. ಒಂದು ಸಾಧಾರಣ ವಿಷಯವೇ ಇಟ್ಟುಕೊ–ಇದೇ ಈ ತಿನ್ನಬಹುದು–ತಿನ್ನಬಾರದ್ದು ಎಂಬುದರ ಬಗ್ಗೆ, ಈ ವಾರ, ತಿಥಿ ನಕ್ಷತ್ರದಿಂದ ಆಹಾರ ಪದಾರ್ಥದ ಗುಣಗಳನ್ನು ನಿರ್ಧರಿಸಿ ಲೆಕ್ಕಗಳನ್ನು ಮಾಡಿಟ್ಟಿದ್ದಾರಲ್ಲಾ ಹಿಂದಿನ ಕಾಲದ ಪಂಡಿತರುಗಳು, ಅದರ ಬಗ್ಗೆ ಶ್ರದ್ಧೆಯಿಂದ ಯೋಚನೆಮಾಡಿ ನೋಡಿದ್ದೀಯಾ ಎಂದಾದರೂ? ನೋಡಿಲ್ಲ. ಕೇವಲ ನಕ್ಕು ಉಡಾಯಿಸಿಬಿಡುತ್ತೀರಿ. ಹಿಂದಿನ ಕಾಲದ ಜನರಿಗೆ ಮಾಡುವುದಕ್ಕೆ ಕೆಲಸವಿರಲಿಲ್ಲ ಆದ್ದರಿಂದ ಕೂತುಕೊಂಡು ಬರೆದಿಟ್ಟಿದ್ದಾರೆ ಎಂದುಕೊಂಡಿದ್ದೀಯಾ? ತ್ರಯೋದಶಿಯ ದಿನ ಬದನೇಕಾಯಿ ತಿಂದರೆ ಮಹಾಪಾತಕ, ಪ್ರಥಮೆಯ ದಿನ ಕೂಷ್ಮಾಂಡವನ್ನು ತಿಂದರೆ ಜಾತಿ ಹೋಗುತ್ತೇಂತ, ಸುಮ್ಮನೆ ಬರೆದಿದ್ದಾರಯೇ? ಮಹಾರಾಯಿತಿ, ವಿಷಯವನ್ನು ಅಪ್ಪಟ ‘ಹೈಜಿಯನಿಕ್’ ಕೋಣದಿಂದ ಹೇಳಲ್ಪಟ್ಟಿದೆ ಎಂಬುದನ್ನು ಯಾರಾದರೂ ಯೋಚಿಸಿದ್ದೀರಾ?

ಅದು ಯಾಕೆ ನೋಡುತ್ತೀರಿ? ನಿಮ್ಮ ಲೆಕ್ಕದಲ್ಲಿ ಇದೆಲ್ಲಾ ಮೂರ್ಖರು ಮಾಡಿರುವುದು ತಾನೇ! ಈಗ ನಿಮ್ಮ ಸ್ವರ್ಗಭೂಮಿಯಾದ ವಿದೇಶದಿಂದ ಒಂದು ಸುದ್ದಿ ಬರಲಿ, ಫೆಬ್ರವರಿ ತಿಂಗಳು ಮೂಲಂಗಿ ತಿಂದರೆ ಕ್ಯಾನ್ಸರ್ ಬರುತ್ತೆ, ನವಂಬರಿನಲ್ಲಿ ಚೂರ್ಣಗೆಡ್ಡೆ ತಿಂದರೆ ಕುಷ್ಠರೋಗ ಬರುತ್ತೆ ಅಂತ ಆಗ ಧನ್ಯ, ಧನ್ಯರೆನ್ನುತ್ತೀರಿ. ಓ, ವಿಜ್ಞಾನದಿಂದಾಗಿ ಎಷ್ಟು ಮುಂದುವರಿದಿದ್ದಾರೆ, ಎಷ್ಟೆಲ್ಲಾ ತಿಳಿದುಕೊಂಡಿದ್ದಾರೆ ಎನ್ನುತ್ತೀರಿ. ಶಾರದಾ ಒಂದು ತುಚ್ಛಭಾವದಿಂದ ಹೇಳುತ್ತಾರೆ, ಅದೇ ನಿಮ್ಮ ದೇಶ ಯಾವ ಕಾಲದಲ್ಲೋ, ಜನ್ಮದಲ್ಲೋ ಸ್ಥಾವರ ಜಗತ್ತಿನ ಎಲ್ಲಾ ರಹಸ್ಯವನ್ನೂ ಉದ್ಘಾಟನೆ ಮಾಡಿ ಬಿಟ್ಟು ಕುಳಿತಿದೆ.”

ಮೀನಾಕ್ಷಿಗೆ ಇದೆಲ್ಲಾ ಹೊಸ ಮಾತೇನಲ್ಲ. ಆದರೆ ಉತ್ತೇಜನಗೊಂಡ ಶಾರದಾ ಯಾವಾಗಲೂ ಅದನ್ನು ಹೊಸದೆಂಬಂತೆ ಹೇಳುತ್ತಾರೆ. ಅದಕ್ಕೇ ಮೀನಾಕ್ಷಿಯು ಅದನ್ನು

ಹೊಸದಾಗಿ ಕೇಳಿದವಳಂತೆ ಪುನಃ ಕೇಳುತ್ತಾಳೆ, "ಹೋಗಲಿ ಮಾವಯ್ಯ, ಅವರುಗಳು ಎಲ್ಲಾ ತಿಳಿದುಕೊಂಡು ಬರೆದಿಟ್ಟು ಹೋದರು ಎಂದೇ ಇಟ್ಟುಕೊಳ್ಳೋಣ, ಆದರೆ ಯಾಕೆ ಜೊತೆಗೆ ಈ ಧರ್ಮದ ಬೆದರಿಕೆ ಬೇರೆ?"

"ಏಕೇ?" ಶಾರದಾ ಪ್ರಸಾದರ ಮುಖವನ್ನು ಒಂದು ಅಲೌಕಿಕ ನಗು ಆವರಿಸುತ್ತೆ. "ಏಕೆ ಎಂಬುದು ತಿಳಿಯುತ್ತಿಲ್ಲವೇ? ಮನುಷ್ಯ ಜಾತಿಯೇ ಒಂದು ತನ್ನ ಕಾಲ ಮೇಲೆ ತಾನೇ ಕೊಡಲಿಪೆಟ್ಟು ಹಾಕಿಕೊಳ್ಳುವ ಜಾತಿ. ಅದಕ್ಕೆ ತನ್ನ ಹಿತ–ಅಹಿತದ ಜ್ಞಾನವೇ ಇಲ್ಲ. ವಿಶೇಷವಾಗಿ ಈ ಜನತೆಗೆ, ಅಂದರೆ, ನಿಮ್ಮ ಗಣದೇವತೆಗಳಿಗೆ ಯಾತರಿಂದ ಕೇಡೋ ಅನಿಷ್ಟವೋ ಅದರ ಮೇಲೆಯೇ ಆಸಕ್ತಿ ಹೆಚ್ಚು. ಪ್ರಾಣಿಗಳ ಜಗತ್ತಿನಲ್ಲಿ ಏನಾದರೂ ಈ ಪ್ರಕೃತಿ ನಿಯಮವನ್ನು ಉಲ್ಲಂಘಿಸುತ್ತದೆಯೇ ನೋಡು? ಇಲ್ಲವೇ ಇಲ್ಲ. ತಮಗೆ ಕೇಡಾಗುವಂತಹ ಕೆಲಸವನ್ನೇನಾದರೂ ಮಾಡುತ್ತವೆಯೇ ಅವು? ಖಂಡಿತವಾಗಿಯೂ ಇಲ್ಲ. ಆದರೆ ಮನುಷ್ಯ! ತನಗೆ ಕೇಡನ್ನು ತಾನೇ ಆಮಂತ್ರಿಸಿಕೊಳ್ಳುತ್ತಾನೆ.

ಮೀನಾಕ್ಷಿಗೆ ನಡುಕ ಬರುತ್ತೆ.

ಅವಳಿಗೆ ಶಾರದಾಪ್ರಸಾದರು ತನ್ನನ್ನು ಉದ್ದೇಶಿಸಿಯೇ ಈ ಮಾತನ್ನು ಹೇಳಿದರೋ ಎನಿಸುತ್ತೆ. ಆದರೆ ಅವರ ಆಪಾದನೆ ಯಾವ ಒಬ್ಬ ವ್ಯಕ್ತಿಯನ್ನು ಉದ್ದೇಶಿಸಿ ಹೇಳಿದುದಲ್ಲ. ಇಡೀ ಜನ ಸಮೂಹವನ್ನೇ ಕುರಿತು ಹೇಳುವಂತಹುದು. ಅವರು ಕೈ ತಿರುವಿ ಹೇಳುತ್ತಾರೆ. "ಅದಕ್ಕೇ, ಅವರ ಹಿತಕ್ಕಾಗಿಯೇ, ಈ ಪಾಪ–ಪುಣ್ಯ, ಧರ್ಮ–ಅಧರ್ಮ, ಒಳ್ಳೆಯದಾಗುವುದು–ಕೆಟ್ಟದಾಗುವುದು ಎಂಬಂತಹ 'ಕೋಟಿಂಗ್'ಗಳನ್ನು ಕೊಟ್ಟು ಔಷಧಿಯ ಗುಳಿಗೆಯನ್ನು ತಯಾರು ಮಾಡಿದ್ದಾರೆ. ಚಿಂತನೆಯನ್ನು ಮಾಡುವಂತಹವರಾದ, ಸಮಾಜದ ಹಿತ–ಚಿಂತಕರು ತಮ್ಮ ಬುದ್ಧಿಯ ಬಲದಿಂದ ಎಲ್ಲಾದರ ಮೇಲೂ ಈ 'ಮಾಡಬಾರದು'. 'ಮಾಡಬಹುದು' ಎಂಬ ಮುದ್ರೆಯನ್ನು ಹಾಕಿಟ್ಟಿದ್ದಾರೆ."

"ಆದರೆ ಮನುಷ್ಯ ಯಾವಾಗಲೂ ತಿಳುವಳಿಕೆ ಇಲ್ಲದವನಾಗಿಯೇ ಇರುವುದಿಲ್ಲ. ಇರಲು ಒಪ್ಪಿಕೊಳ್ಳುವುದೂ ಇಲ್ಲ" ಎಂದು ಹೇಳಿ ಮೀನಾಕ್ಷಿ ತನ್ನ ಮನಸ್ಸನ್ನು ಹಗುರವಾಗಿಸಲು ಪ್ರಯತ್ನಿಸುತ್ತಾಳೆ. ಅವಳ ಮಾತು ಕೇಳಿ ಶಾರದಾ ಪ್ರಸಾದರು ಒಂದು ತಮಾಷೆಯ ನಗು ನಕ್ಕು ಹೇಳಿದರು, "ತಿಳುವಳಿಕೆ ಇಲ್ಲದ ಮೂಢನಾಗಿರುವುದಿಲ್ಲವೇ? ಇರಲು ಒಪ್ಪುವುದಿಲ್ಲವೇ? ಆಗಲಿ, ಈ ಕಾಲದ ಎಲ್ಲಾ ತಿಳಿದ ಹುಡುಗಿಯೇ ಹೇಳು, ಡಾಕ್ಟರು ನಿನಗೆ ಪ್ರಿಸ್‌ಕ್ರಿಪ್ಷನ್ ಬರೆದು ಕೊಟ್ಟರೆ, ಅದರಲ್ಲಿರುವ ಎಲ್ಲಾ ಉಪಾದಾನಗಳನ್ನೂ, ಅವುಗಳ ಒಳ್ಳೆಯದು ಕೆಟ್ಟದ್ದುಗಳನ್ನೂ ತಿಳಿದುಕೊಂಡು ಆ ಔಷಧಿಯನ್ನು ನುಂಗುತ್ತೀಯೋ ಅಥವಾ ಮನುಷ್ಯ ಒಬ್ಬ ಒಳ್ಳೆಯ ಡಾಕ್ಟರು. ಅವನ ವಿದ್ಯೆಯನ್ನು ಅವನು ಚೆನ್ನಾಗಿ ಕಲಿತಿದ್ದಾನೆ. ಡಾಕ್ಟರು ನಿನಗೆ ಯಾವುದರಲ್ಲಿ ಏನಿದೆ ಎಂದು ಹೇಳುತ್ತಾ ಕುಳಿತುಕೊಂಡರೆ ನಿನಗೆ ಅರ್ಥ ಮಾಡಿಕೊಳ್ಳುವುದಕ್ಕಾಗುತ್ತದೆಯೇ? ಆ ಕಾಲದ ಡಾಕ್ಟರುಗಳೂ ಹೀಗೆಯೇ ಈ 'ಧರ್ಮದ' ಮುದ್ರೆಯನ್ನು ಹಾಕಿ ಜನರ ಹಿತ ಸಾಧನೆ ಮಾಡುತ್ತಿದ್ದರು. ಪಾಪ–ಪುಣ್ಯಗಳನ್ನು ಹೇಳಿಯೇ

ಶಾರೀರಿಕ ಶಿಕ್ಷಣ, ಸಮಾಜ–ಶಿಕ್ಷಣ ಮತ್ತು ಸರಿಯಾದ ನಡತೆಯ ಶಿಕ್ಷಣಗಳನ್ನು ಕೊಡುತ್ತಿದ್ದರು. ಶಾಸ್ತ್ರ ಎಂದರೆ ಅದನ್ನು ಲಾ–ಬುಕ್ ಎನ್ನಬಹುದು. ನೀವುಗಳು ಈ ಲಾವನ್ನು ಅಸಡ್ಡೆ ಮಾಡಿ, ಇಷ್ಟ ಬಂದಂತೆ ನಡೆಯುವ ದಾರಿಯನ್ನು ಹಿಡಿದಿದ್ದೀರಿ. ಅದರಿಂದ ಏನಾಗುತ್ತಾ ಇದೆ? ಹೇಳಿ, ಎಷ್ಟು ಲಾಭವಾಗಿದೆ ಅದರಿಂದ ಅಂತ? ಏನೂ ಇಲ್ಲ. ಅದರಿಂದ ಇಡೀ ಸಮಾಜವೇ ಫ್ರಸ್ಟ್ರೇಷನ್‌ನ್ನಿನ ಹಿಡಿತದಲ್ಲಿ ಸಿಕ್ಕಿಕೊಂಡಿದೆ.

ಮೀನಾಕ್ಷಿ, ಈ ಹುಚ್ಚು ಮನುಷ್ಯನ ಮಾತನ್ನು, ನಕ್ಕು ಉಡಾಯಿಸಿಬಿಡಬಹುದಾಗಿತ್ತು. ಅವಳು ಯಾವಾಗಲೂ ಮಾಡುತ್ತಿದ್ದುದೂ ಹಾಗೆಯೇ. ಆದರೆ ಇಂದು ಏಕೋ ಅವಳಿಗೆ, ಈ ಹಾಸ್ಯಕರವಾದ ತತ್ವದಲ್ಲೂ, ತನ್ನ ಯುಕ್ತಿಗಳನ್ನು ಪುಷ್ಟೀಕರಿಸಲು, ಶಕ್ತಿಯನ್ನು ಹುಡುಕುವಂತಿತ್ತು. ಅದಕ್ಕೇ ಅವಳು, "ಬುದ್ಧಿಯಿಲ್ಲದ ಶಾಂತಿಗಿಂತ ಫ್ರಸ್ಟ್ರೇಷನ್ನೇ ಒಳ್ಳೆಯದು ಮಾವಯ್ಯ" ಎಂದಳು.

"ಒಳ್ಳೆಯದೇ?" ಶಾರದಾ ಪ್ರಸಾದರು ಬೇಜಾರುಪಟ್ಟುಕೊಂಡರು. "ಆಮೇಲೆ? ಇದರ ಪರಿಣಾಮ ಏನಾಗುತ್ತೆ?" ಅಕಸ್ಮಾತ್ ಹೂಂಕರಿಸಿ ಹೇಳಿದರು. "ಏನಾಗುತ್ತೆ ಗೊತ್ತೇ? ಈ 'ಫ್ರಸ್ಟ್ರೇಷನ್' ವ್ಯಾಧಿಪೀಡಿತವಾದ ಜಗತ್ತು ಕೆಲಸ ಮಾಡುವುದಿಲ್ಲ. ಬದುಕಿರಲು ಬೇಕಾದ ಯೋಜನೆಗಳಲ್ಲಿ ಪರಾಮುಖವಾಗುತ್ತೆ. ಆಗುತ್ತಾ ಹಾಗೆಯೇ ಸ್ವಲ್ಪ ಸ್ವಲ್ಪವಾಗಿ ಬಟ್ಟೆ–ಬರೆಗಳನ್ನೂ ಹಾಕಿಕೊಳ್ಳುವುದನ್ನು ಬಿಟ್ಟು, ಹಸಿ–ಮಾಂಸವನ್ನು ತಿನ್ನುತ್ತಾ, ಕಾಡು ಮನುಷ್ಯನಾಗಿ ಕೋಟಿ–ಕೋಟಿ ವರ್ಷಗಳ ಸಾಧನೆಯನ್ನು ನೆಲ–ಸಮ ಮಾಡಿಬಿಟ್ಟು, ಹಿಂದಿನ ಗುಹೆಯ ಜೀವನಕ್ಕೆ ಹಿಂತಿರುಗಿ ಹೋಗುತ್ತೆ."

ಉತ್ತೇಜನೆಯಿಂದಾಗಿ ಮೇಲುಸಿರು ಬಿಡುತ್ತಿರುತ್ತಾರೆ ಶಾರದಾ ಪ್ರಸಾದರು. ಅವರ ಈ ಉತ್ತೇಜನೆಯಿಂದ ಕೆಂಪಾದ ಮುಖವನ್ನು ನೋಡಿ ಮೀನಾಕ್ಷಿಗೆ ಇನ್ನು ನಗೆಯನ್ನು ತಡೆಯಲಾಗಲಿಲ್ಲ. ನಗುತ್ತಾ ಹೇಳಿದಳು. "ಅದು. ನಿಮ್ಮ ನಮ್ಮ ಜೀವಮಾನಕಾಲದಲ್ಲಿ ನಡೆಯುವುದಿಲ್ಲವೆಂದು ನಂಬುತ್ತೇನೆ."

ಅಕಸ್ಮಾತ್ ಈ ವ್ಯಂಗ್ಯವಾದ ಮಾತನ್ನು ಕೇಳಿ ಶಾರದಾ ಪ್ರಸಾದರು ಚಕಿತರಾದರು.

ಆಮೇಲೆ ಗದರುವ ಧ್ವನಿಯಲ್ಲಿ ಹೇಳಿದರು. "ನಿಮ್ಮಂತಹ ತಲೆಹರಟೆ ಹುಡುಗರ ಜೊತೆ ಮಾತಾಡುವುದೇ ದಂಡ. ಹೋಗು, ನಿನ್ನ ಕೆಲಸ ಮಾಡಿಕೋ ಹೋಗು."

ಅಂದರೆ, ಕೋಣೆಯಿಂದ ತೊಲಗು! ಮೀನಾಕ್ಷಿಗೆ ಅವಮಾನದಿಂದ ಮುಖವೆಲ್ಲಾ ಕೆಂಪಾಯಿತು. ಅವಳೂ ಭಾರವಾದ ಧ್ವನಿಯಿಂದ ಹೇಳಿದಳು, "ಹೋಗುತ್ತೇನೆ."

ಶಾರಾದ ಪ್ರಸಾದರು ತಮ್ಮ ಅಧಿಕಾರದ ಎಲ್ಲೆಯ ಬಗ್ಗೆ ಚಿಂತಿಸುವವರಲ್ಲ. ಹೇಳಿದರು.– "ಹೌದು. ಹೋಗು. ನನಗೆ ಕೆಲಸವಿದೆ." ಅವಳನ್ನು ಹೊರದೂಡಿದಂತೆ ಮಾಡಿ ಬಾಗಿಲನ್ನು ಜೋರಾಗಿ ಹಾಕಿಕೊಂಡರು.

ಹೌದು. ಅವರಿಗೆ ಹೀಗೆ ಕೋಪ ಬರುತ್ತೆ, ಆದರೆ ಅದು ಶರತ್ಕಾಲದ ಮೋಡದಂತೆ. ಒಂದು ವೇಳೆ ನಾಳೆಯೇ ಅವಳನ್ನು ಕರೆದು ಹೇಳಬಹುದು. 'ಏನಮ್ಮಾ, ನವನಾಗರಿಕ

ಮಹಿಳೆಯೇ. ಕೇಳು ನಮ್ಮ ಈಗಿನ ಭಾಗ್ಯಹೀನ ಭಾರತದಲ್ಲಿ ಏನು ನಡೆಯುತ್ತಿದೆ ಆ ಕಾಲದಲ್ಲಿ ಹೇಗಿತ್ತು ಅಂದರೆ.........'

ಮೀನಾಕ್ಷಿಯೂ ಮಾವಯ್ಯನನ್ನು ಹುಚ್ಚು, ಬೆಪ್ಪು ಎಂದೆಲ್ಲಾ ತಮಾಷೆಯೆಲ್ಲಾ ಮಾಡಿದರೂ ಅಕ್ಕ, ಅಣ್ಣಂದಿರ ಹಾಗೆ ಕೋಪವನ್ನು ಬೆಳೆಸಿಕೊಂಡು ಹೋಗುವುದಿಲ್ಲ. ಆದರೆ ಅವಳಿಗೆ ಇಂದು ಬಹಳ ಕೋಪ ಬಂದಿದೆ. ಕೋಪದ ಮೂಲದಲ್ಲಿ ಅನೇಕ ಕಾರಣಗಳಿರಬಹುದು. ವಿಜಯಾ ಹೇಳಿದುದೂ ಒಂದು ಕಾರಣವಿರಬಹುದು. ಅವರು ಹೇಳಿದಂತೆ ಹರಟೆಯಲ್ಲಿ ಹರಟೆ ಮಾತ್ರ ಆಗುತ್ತದೆಯೇ ಹೊರತು, ಹೊಟ್ಟೆ ತುಂಬುವುದಿಲ್ಲ. ಹೊಟ್ಟೆಗೆ ಉಪಚಾರ ಏನೂ ಆಗುವುದೇ ಇಲ್ಲ ಎಂದೂ ಹೇಳುವುದಕ್ಕಾಗುವುದಿಲ್ಲ. ಒಂದು ಟೀಯೋ, ಕಾಫಿಯೋ ಅಥವಾ ಅದರ ಜೊತೆ ಒಂದು 'ಆಮ್ಲೆಟ್' ಅಷ್ಟೇ. ಜಾಸ್ತಿ ತಿನ್ನುವುದಕ್ಕೆ ದುಡ್ಡೆಲ್ಲಿರುತ್ತೆ? ಇಬ್ಬರೂ ವಿದ್ಯಾರ್ಥಿಗಳು. ದಿವಾಕರ, ತನ್ನ ಊರಿನ ದೊಡ್ಡ ಮನುಷ್ಯ ಮಾವನ ಕತೆ ಹೇಳಿದರೂ ಮುಕ್ಕಾಲು ಪಾಲು ದಿನ ಪರ್ಸ್‌ನ್ನು ಮರೆತು ಬಂದಿರುತ್ತಾನೆ, ಅಥವಾ ತುಂಬಿಕೊಂಡು ಬರಲು ಮರೆತಿರುತ್ತಾನೆ. ಅದಲ್ಲದೆ ಇನ್ನೊಂದು ಹಸಿವಿನಿಂದ ಹಸಿದ ದಿವಾಕರನಿಗೆ ಈ ಹೊಟ್ಟೆಯ ಹಸಿವಿನ ಪರಿವೆಯೇ ಇರುವುದಿಲ್ಲವೇನೋ! ಹಿಂದಿನ, ಮೊದಲ ಪರಿಚಯದ ಕಾಲದಲ್ಲಿ ಕಾಫಿ ಹೌಸ್‌ನಲ್ಲಿ ಒಂದು ಗಂಟೆ ಕಾಲ ಹರಟೆ, ಅಥವಾ ಗಂಗೆಯ ತೀರದಲ್ಲಿ ನಿಂತು ಮುಕ್ಕಾಲು ಗಂಟೆ ಕಾಲ ಹರಟುವ ಸುಖವನ್ನೇ ಮರೆತಂತಾಗಿದೆ ಮೀನಾಕ್ಷಿಗೆ. ಈಗ ಇಬ್ಬರೂ ವಾದಿ–ಪ್ರತಿವಾದಿಗಳಾಗಿ ನಿಂತಿದ್ದಾರೆ. ಮೀನಾಕ್ಷಿ ಅವಳ ಕುರುಡು–ಸಂಸ್ಕಾರದಲ್ಲಿ ಮುಳುಗಿದ್ದಾಳೆ ಮತ್ತು ದಿವಾಕರ ವಾದಿ–ಪಕ್ಷದ ವಕೀಲಾಗಿ ನಿಂತಿದ್ದಾನೆ. ಅದಕ್ಕೇ ಯಾವಾಗಲೂ ಅವಳ ಹಳೇ ಕಂದಾಚಾರದ ಬಗ್ಗೆ ತೀವ್ರವಾಗಿ ಟೀಕಿಸುತ್ತಾನೆ. ಅಸಹನೆಯಿಂದ ಕುದಿಯುತ್ತಿದ್ದಾನೆ ದಿವಾಕರ. ಮೀನಾಕ್ಷಿಗೆ ಪ್ರೇಮದ ಮಧುರ–ಸ್ವಾದವು ಹೇಗಿರುತ್ತದೆಂಬುದು ಗೊತ್ತಿಲ್ಲ. ಸ್ನಿಗ್ಧ, ಸರಸ ಪೂರ್ಣತ್ವದ ಸ್ವಾದ ಅವಳಿಗೆ ಗೊತ್ತಿಲ್ಲ. ಅವಳ ಪ್ರೇಮಕ್ಕೆ ಪಾತ್ರನಾದವನು ಅವಳಿಗೆ ನೀಡುತ್ತಿರುವುದು ಬರೀ ಒಂದು ಜ್ವಾಲೆಯ ಅನುಭವ. ಅದಕ್ಕೇ ಪ್ರತಿಕ್ಷಣವೂ ತಾನು ನಿರುಪಾಯಳು ಕಟ್ಟಿನಲ್ಲಿರುವವಳು. ಒಂದು ಕಠೋರವಾದ ನೀತಿಯ ಬಂಧನ ತನ್ನನ್ನು ಬಿಗಿಯುತ್ತಿದೆ ಎಂಬ ಭಾವನೆ ಮನಸ್ಸಿನಲ್ಲಿ ತೋರುತ್ತೆ. ಅವಳಿಗೆ ಇದು ಅನ್ಯಾಯ ಎನಿಸುತ್ತೆ. ಎಲ್ಲಾ ಸೇರಿ ಅವಳು ತನ್ನ ಮನಸ್ಸಿನ ಸಮತೋಲನವನ್ನು ಕಳೆದುಕೊಳ್ಳುತ್ತಾಳೆ.

ಅದಕ್ಕೇ, ಶಾರದಾ ಪ್ರಸಾದರ ಕೋಣೆಯಿಂದ ಹೊರಗೆ ಬಂದ ಮೀನಾಕ್ಷಿ ನೆಟ್ಟಗೆ ಅಪ್ಪನ ಕೋಣೆಯೊಳಗೆ ನುಗ್ಗಿ, ಯಾವ ತರಹದ ಪೀಠಿಕೆಯೂ ಇಲ್ಲದೆ ಕೇಳಿದಳು: "ಅಪ್ಪಾ ನಿಮಗೇನು ತೋರುತ್ತೆ? ನೀವು ಈ ಪ್ರಪಂಚಕ್ಕೆ ನಮಗಿಂತ ಕೆಲಕಾಲಗಳ ಮುಂಚೆ ಬಂದಿರುವ ಅಧಿಕಾರದಿಂದ ಯಾರನ್ನಾದರೂ, ಏನು ಬೇಕಾದರೂ ಅಂದು ಅವಮಾನಗೊಳಿಸಬಹುದೇ?"

ಅಧ್ಯಾಯ ನಾಲ್ಕು

ಅರ್ಧ ನಿದ್ರೆಯಲ್ಲಿದ್ದ ಹುಡುಗನನ್ನು ಎಳೆದುಕೊಂಡು ಸುನಂದಾ ತನ್ನ ಕೋಣೆಗೆ ಪ್ರವೇಶಿಸಿದಳು. ಟ್ಯಾಕ್ಸಿಗೆ ದುಡ್ಡು ಕೊಟ್ಟುಬಿಟ್ಟು, ತೂರಾಡುತ್ತಾ ಮಹಡಿಯ ಮೆಟ್ಟಲುಗಳನ್ನು ಹತ್ತುತ್ತಾ ನೀಲಾಕ್ಷ, ತೊದಲು ಧ್ವನಿಯಲ್ಲಿ ಹೇಳಿಕೊಂಡ: 'ಏನು ಸಮಾಚಾರ? ಡಾಕ್ಟರು ಬಂದು ಹೋಗುತ್ತಿದ್ದ ಹಾಗಿತ್ತು? ಬರಿಯ ಹಜಾರವನ್ನುದ್ದೇಶಿಸಿ ಕೇಳಿದ್ದರಿಂದ ಆ ಪ್ರಶ್ನೆಗಳಿಗೆ ಉತ್ತರವೇನೂ ಸಿಗಲಿಲ್ಲ. ಆಮೇಲೆ ಅಪ್ಪನ ಕೋಣೆಯ ಪರದೆಯನ್ನು ಸರಿಸಿ ತಿರುಗಿ ಅದೇ ಪ್ರಶ್ನೆಗಳನ್ನೇ ಕೇಳಿದ. ಅಪ್ಪನ ಮಂಚದ ಪಕ್ಕದಲ್ಲೇ ಒಂದು ಕುರ್ಚಿಯಲ್ಲಿ ಮೀನಾಕ್ಷಿ ಕುಳಿತಿದ್ದಳು. ಮಂಚದ ಮೇಲೆ ಮಲಗಿರುವ ಸರೋಜಾಕ್ಷರ ಕಣ್ಣುಗಳು ಮುಚ್ಚಿವೆ. ಎಚ್ಚರವೋ ನಿದ್ದೆಯೋ ಗೊತ್ತಾಗುತ್ತಿಲ್ಲ. ಬರಿದಾದ ಹಜಾರದ ಹಾಗೆಯೇ ಅವಳೂ ಮಾರುತ್ತರವಿಲ್ಲದೆ ಸುಮ್ಮನಿದ್ದಳು. ಕೇವಲ ಕಣ್ಣೆತ್ತಿ ಒಂದು ಸಲ ನೋಡಿದಳು. ಅದರಲ್ಲಿ ಒಂದು ಅಸಹ್ಯ ಮೂಡಿತ್ತು. ಸಾರಾಯಿಯ ಮತ್ತಿನಿಂದ ತೂರಾಡುತ್ತಿರುವ ಮನುಷ್ಯನನ್ನು ನೋಡಿದರೆ ಅಸಹ್ಯದ ಹೊರತು ಇನ್ನೇನು ಭಾವನೆ ತೋರುತ್ತೆ? 'ಓಹೋ, ಹಾಗಾದರೆ ಮೈ ಹುಷಾರಿಲ್ಲದಿರುವುದು ಅಪ್ಪನಿಗೆಯೇ?'

ನೀಲಾಕ್ಷ ಹಾಗೆಯೇ ತೊದಲು ಧ್ವನಿಯಲ್ಲೇ ಹೇಳುತ್ತಾನೆ, "ಆಗೋದು ಸಹಜವೇ ಕಾಲೇಜಿನಲ್ಲಿ ಈವತ್ತು ಒಂದು ಒಳ್ಳೇ ನಾಟಕವೇ ನಡೆದು ಹೋಗಿದೆ: ಘೆರಾವ್ ನಾಟಕ. ಅಬ್ಬಬ್ಬಾ, ಕಾಲೇಜೇನೂ ಮನೆ ಅಲ್ಲವಲ್ಲಾ ಯಾರನ್ನಾದರೂ ಏನು ಬೇಕಾದರೂ ಅನ್ನುವುದಕ್ಕೆ! ಅದು ಕರಿನಾಗರದ ಮರಿಗಳ ಹುತ್ತ. ಅಲ್ಲಿ ಹೋದೆ ನೀನು, ಅವರುಗಳ ಬಾಲ ತುಳಿಯಲು!!"

ರೋಗಿಯ ಕೋಣೆಯಲ್ಲಿ ಇಂತಹ ವಾಚಾಲತೆಯನ್ನು ಮೀನಾಕ್ಷಿ ಖಂಡಿಸಿರುತ್ತಿದ್ದಳು. ಆದರೆ ಈಗ ಇದು ಒಂದು ಆಶ್ಚರ್ಯಕರವಾದ ಸುದ್ದಿಯಾಗಿದ್ದುದರಿಂದ ಖಂಡಿಸಲು ತೋರಲಿಲ್ಲ. ನೀಲಾಕ್ಷ ಸ್ಫೂರ್ತಿಯಿಂದ ಹೇಳುತ್ತಿದ್ದ. "ಹೌದಪ್ಪಾ, ಇದು ಘೆರಾವ್ ಯುಗ. ಮಾತಾಡಿದೆಯೋ ಘೆರಾವ್. ಈಗ ಗೊತ್ತಾಯಿತೇ ಅದರ ಪರಿಣಾಮ! ಕೈ ಮುಗಿಸಿ, ಕ್ಷಮೆ ಬೇಡಿಸಿ ಆಮೇಲೆ–"

ಸರೋಜಾಕ್ಷರಿಗೆ ನಿದ್ದೆಯ ಔಷಧಿ ಕೊಡಲಾಗಿತ್ತು. ಅದರ ಪ್ರತಿಕ್ರಿಯೆ ಇನ್ನೂ ಇದ್ದೇ ಇತ್ತೇನೋ. ಆದರೂ ಹಾಸಿಗೆಯಲ್ಲಿ ಮಲಗಿದ್ದವರ ಹುಬ್ಬು ಗಂಟಾದಂತೆ ಮೀನಾಕ್ಷಿಗೆ ತೋರಿತು. ನಿಜವಾಗಿ ಒಂದು ವೇಳೆ ಇರಲಾರದು. ಮನಸ್ಸಿನ ಭ್ರಮೆಯಿರಬಹುದು ಎನ್ನಿಸಿತು. ಆದರೂ. ಕೆಳದನಿಯಲ್ಲಿ ಹೇಳಿದಳು: "ಆ ಕೋಣೆಗೆ ಹೋಗಿ ಮಾತಾಡು."

"ಆ ಕೋಣೆಗೆ ಹೋಗಿ ಮಾತಾಡಬೇಕೇ? ಓಹೋ. ರೋಗ ಎಂತಹದ್ದು? ಮನೋರೋಗವೇ? ಅಥವಾ ಬ್ಲಡ್‌ಪ್ರೆಷರ್? ಸ್ಟ್ರೋಕ್? ಎಂತಹದ್ದು?"

ತಡವರಿಸುವ ನಡೆಯೊಂದಿಗೆ ತನ್ನ ಕೋಣೆಗೆ ಹೋಗುತ್ತಾನೆ. ಮೀನಾಕ್ಷಿ ನೋಡುತ್ತಿರುತ್ತಾಳೆ. ಮನಸ್ಸಿನಲ್ಲಿ ಅಲ್ಲಿಯ ನೆರಳು ಇನ್ನೂ ಕಪ್ಪಗಾಗುತ್ತೆ. ಆ ಅಸಹ್ಯ ಅಲ್ಲಿ ಒಳಗಿರುವವಳ ಮೇಲೆ ನೆಲೆಸುತ್ತೆ.

ಹೆಂಡತಿ ಗಟ್, ಮಟ್ ಅಂತ ನಡೆದು ಕೋಣೆಯೊಳಗೆ ಹೊರಟುಹೋದಳು. ಒಂದು ಸಲ ವಿಚಾರಿಸಲೂ ಇಲ್ಲ. ಡಾಕ್ಟರ್ ಯಾಕೆ ಬಂದಿದ್ದರು ಎಂತ! ಆಕೆಗೂ ಪ್ರಜ್ಞೆ ಸರಿಯಿಲ್ಲವೇನೋ, ಅದನ್ನು ಮರೆಮಾಚುವುದಕ್ಕೇ ಬೇಗ........

ಆದರೆ ಇದೇ ಹುಡುಗಿಯೇ ಹೇಗೆ ಒದ್ದೆ ಬೆಕ್ಕಿನ ಹಾಗೆ ಇದ್ದಳು!

ಮೀನಾಕ್ಷಿಯ ಮನಸ್ಸಿನ ಚಿಂತನೆಯ ಧಾರೆ, ಹಿಂದಿನ, ಸುನಂದಾಳ ಮದುವೆಯಾದ ಹೊಸದರಲ್ಲಿನ ಕಾಲಕ್ಕೆ ಓಡಿತು. ಎಂತಹ ಒದ್ದೆ ಬೆಕ್ಕು ನಿಜವಾಗಲೂ! ಮೆಲ್ಲ ಮೆಲ್ಲನೆಯ ಮಾತು, ಮಾತು ಮಾತಿಗೂ ತಲೆಯ ಮೇಲೆ ಸೆರಗನ್ನು ಎಳೆದುಕೊಳ್ಳುವಳು. ಅತ್ತೆ, ನಾದಿನಿಯರ ಮನವನ್ನೊಲಿಸಲು ಎಷ್ಟೊಂದು ಪಾಡು ಪಡುತ್ತಿದ್ದಳು. ಎಷ್ಟೊಂದು ಕಪಟ ವರ್ತನೆ! ಅದೂ ಎಂತಹ ಮನೆಯ ಹುಡುಗಿ! ತನ್ನ ಅರಿವಿಲ್ಲದೆಯೇ ಮೀನಾಕ್ಷಿ ಮೂಗನ್ನು ಸಿಂಡರಿಸುತ್ತಾಳೆ. ಅದೇ ಬಡತನದ ಸಂಸಾರ. ಅವಳ ತಾಯಿ ಈಗಲೂ ಇದ್ದಿಲು ಪುಡಿಯನ್ನು ಉಂಡೆ ಮಾಡಿ ಒಲೆಯನ್ನು ಉರಿಸುತ್ತಾಳೆ. ಬಟ್ಟೆಗಳನ್ನು ಉಬ್ಬೆಗೆ ಹಾಕುತ್ತಾಳೆ. ಅವಳ ಅಪ್ಪನೂ ಇದಕ್ಕೆ ಕಡಿಮೆ ಏನಿಲ್ಲ. ಒಳ್ಳೇ ಗಮಾರ, ಈಗಲೂ ಗೋಣಿಯ ಚೀಲವನ್ನು ಹಿಡಿದುಕೊಂಡು ಮಾರ್ಕೆಟ್ಟಿಗೆ ಹೋಗುತ್ತಾರೆ. ರೇಷನ್ ಸಾಮಾನನ್ನು ತಾವೇ ಹೋಗಿ ತರುತ್ತಾರೆ. ಅವಳ ಅಮ್ಮನ ಮೈ ಮೇಲ ರವಿಕೆ, ಗಿವಿಕೆಯ ಗೋಜಿಲ್ಲ (ತನ್ನ ಅಮ್ಮನೂ ಹಾಗೆಯೇ ಎನ್ನುವುದು ಮೀನಾಕ್ಷಿಗೆ ಮರೆತುಹೋಗುತ್ತೆ) ಸುನಂದಾಳ ಅಮ್ಮನ ರೂಪವೇ ಕಣ್ಣು ಮುಂದೆ ಬಂದು ನಿಲ್ಲುತ್ತೆ ದಿನ ಬೆಳಗಾದರೆ ಲಕ್ಷ್ಮೀ–ಷಷ್ಠಿ ಗೌರಿ–ಗಣೇಶ ವ್ರತಗಳೆಂದು ಉಪವಾಸ ಬಿದ್ದಿರುತ್ತಾರೆ. ಅತ್ತಿಗೆ ಮಾತ್ರ ಏನು, ಮನೆಗೆ ಬಂದ ಹೊಸದರಲ್ಲಿ ಎಷ್ಟೊಂದು ವ್ರತ–ಪೂಜೆ ಎಲ್ಲಾ ಮಾಡುತ್ತಾ ಇದ್ದಳು. 'ಷುರು ಮಾಡಿದ ವ್ರತ ನಾಲ್ಕು ವರ್ಷ ಮಾಡಲೇ ಬೇಕು ಇಲ್ಲದಿದ್ದರೆ ಪಾಪ ಅಂಟುತ್ತೆ' ಎನ್ನುತ್ತಿದ್ದಳು.

ಆಗೆಲ್ಲಾ ಅಕ್ಕ–ತಂಗಿಯರಿಬ್ಬರೂ ಅವಳ ಮಾತುಗಳನ್ನು ಕೇಳಿ ಬಿದ್ದು ಬಿದ್ದು ನಗುತ್ತಿದ್ದರು. "ಸ್ವಲ್ಪ ಈಗಿನ ಕಾಲಕ್ಕೆ ಬಾಮ್ಮಾ, ತೀರ ಹಿಂದಿನ ಕಾಲದಲ್ಲೇ ಇರಬೇಡ" ಎನ್ನುತ್ತಿದ್ದರು. ಆದರೂ ಸುನಂದಾ ವರ್ಷಪೂರ್ತಿ ವ್ರತಗಳನ್ನು ಆಚರಿಸಿದ್ದಳು. ಆಗ ಅವಳ ವೇಷ ಹೇಗಿತ್ತು? ಅಚ್ಚ ಬೆಂಗಾಲಿ ಪದ್ಧತಿಯಲ್ಲಿ ಸೀರೆಯನ್ನು ಉಡುತ್ತಿದ್ದಳು. ಬೈತಲೆ ತುಂಬ ಕುಂಕುಮ. ಎಣ್ಣೆ ಮೆತ್ತಿದ ತಲೆಯ ಕೂದಲು ದೊಡ್ಡ ಗಂಟಾಗಿರುತ್ತಿತ್ತು. ಕುತ್ತಿಗೆಯಲ್ಲಿ ದಪ್ಪ ಮಣಿಯ ಚಿನ್ನದ ಸರ, ಒಟ್ಟಿನಲ್ಲಿ ನೋಡಿದರೆ ಹಳ್ಳಿಯ ಹುಡುಗಿ ನಂಬರ್–ಒನ್. ನೀಲಾಕ್ಷ ಏನಾದರೂ ಸಿನಿಮಾಗೆ ಹೋಗಲು ಕರೆದರೆ, ಭಯ–ನಾಚಿಕೆಗಳಿಂದ ಮುದುಡಿ ಹೋಗುತ್ತಿದ್ದಳು. 'ಒಬ್ಬಳೇ ಬರುವುದೇ, ಅಕ್ಕ–ತಂಗಿಯರೂ ಬರಲಿ' ಎನ್ನುವಳು.

ಆಗ ಅಕ್ಕ ಕೇಳಿದ್ದಳು, 'ಭಯವೇ? ಏಕೆ? ಅವನೇನು ಪರ-ಪುರುಷನೇ?' ಹಾಗಿದ್ದವಳು !!

ಅಕ್ಕನೇ ತಾನೆ ಅವಳನ್ನು ವೇಷ-ಭೂಷಣಾದಿಗಳಲ್ಲಿ ನಾಗರಿಕ ಮಹಿಳೆ ಎನ್ನುವಂತೆ ಯೋಗ್ಯಳಾಗುವ ಹಾಗೆ ತರಪೇತು ಮಾಡಿದವಳು. ಈಗ ನೋಡಿದರೆ ಅಕ್ಕನನ್ನೇ ಸೋಲಿಸುತ್ತಾಳೆ. ಪೊಲೀಸರು ಎಲ್ಲಿ ಹಿಡಿಯುತ್ತಾರೋ ಎಂಬ ಭಯವಿರುವುದರಿಂದ ನಿರ್ವಾಣವಾಗಿ ತಿರುಗುತ್ತಿಲ್ಲ. ಇಲ್ಲದಿದ್ದರೆ ಅದೂ ಮಾಡುತ್ತಿದ್ದಳೇನೋ! ಮೊದಲೆಲ್ಲಾ ಅಣ್ಣ ಅವಳನ್ನು ಸ್ವಲ್ಪ ಫೇಷನೇಬಲ್ ಆಗಿ ಇರು ಎಂದು ತಲೆ ಚಚ್ಚಿಕೊಳ್ಳುತ್ತಿದ್ದ. ಈಗ ಅವಳು ಅಭ್ಯಾಸ ಮಾಡಿಕೊಂಡಿರುವ ನಯವಾದ ಧ್ವನಿಯ ಮಾತು. ಗಾಜು ಒಡೆದಂತಹ ಕೃತಕ ನಗು, ಅವಳ ನಡೆ-ನುಡಿ, ಎಲ್ಲವನ್ನೂ ನೋಡಿ ತಲೆ ಚಚ್ಚಿಕೊಳ್ಳುತ್ತಿರಬೇಕು. ಕಂಬಳಿ ಹುಳು ಒಂದು ದಿನ ಬಣ್ಣದ ಚಿಟ್ಟೆಯಾಗುತ್ತೆ ಅನ್ನುವುದಕ್ಕೆ ಇವಳೇ ಒಂದು ಒಳ್ಳೆಯ ಉದಾಹರಣೆ..... ಈಗೆಲ್ಲಾ ಅಣ್ಣನ ಬಿಸಿನೆಸ್ ಬಹಳ ಮುನ್ನೇರುತ್ತಿದೆಯೆಂದೂ ಅದಕ್ಕೆ ಕಾರಣ ಸುಂದರಿಯಾದ ಪತ್ನಿಯೇ ಎಂದೂ ಕೇಳಿದೆ. ಯಾರಿಗೆ ಗೊತ್ತು, ಸ್ವಭಾವ, ನಡತೆ ಎಂತಹ..........

ಚಿಂತನೆಯ ಓಟವನ್ನು ಅಲ್ಲೇ ತಡೆದು ನಿಲ್ಲಿಸುತ್ತಾಳೆ. ಹೋಗಲಿ ನನಗೇನು. ಅಣ್ಣನಿಗೇ ಗೊತ್ತಾಗುತ್ತೆ. ಮನೆಯ ವಾತಾವರಣವನ್ನೇ ಬದಲಾಯಿಸಿದ್ದಾಳೆ ಈ ಸೊಸೆ ಎಂಬುದು ಮೊದಲೆಲ್ಲಾ ಅಷ್ಟೊಂದು; 'ಅಪ್ಪಾ, ಅಪ್ಪಾ' ಎಂದು ಮರ್ಯಾದೆಯಿಂದ ಹೇಳುತ್ತಿದ್ದವಳು. ಈಗ ಮಾವ-ನಾದಿನಿ ಇವರುಗಳ ಎದುರಿಗೂ ಬರುವುದಿಲ್ಲ. ಮಾತಾಡಿದರೂ, ಅಣಕುವ ಧ್ವನಿಯಲ್ಲಿ ಏನೋ ಹಾಸ್ಯಾಸ್ಪದವಾದ ಮಾತನ್ನು ಕೇಳಿದಂತ ಜವಾಬು ಕೊಡುತ್ತಾಳೆ.

ಮನುಷ್ಯ ಎಷ್ಟು ಬದಲಾವಣೆ ಹೊಂದುತ್ತಾನೆ. ಮುಖ್ಯವಾಗಿ ಹೆಂಗಸು! ಮೀನಾಕ್ಷಿ ಸ್ವಲ್ಪ ನೆಟ್ಟಗಾಗಿ ಕುಳಿತುಕೊಳ್ಳುತ್ತಾಳೆ. ಆದರೆ ಒಳಗೆ, ಮನಸ್ಸಿನ ದೃಢತೆ ಇಲ್ಲದವರೇ ಹೀಗೆ ಬದಲಾವಣೆ ಹೊಂದುವುದು ಸಾಧ್ಯ. ಹೀಗೆ ದೇವಿಯಿಂದ ದಾನವಿಯಾಗಿಯೂ ಮತ್ತು ಕಂಬಳಿ ಹುಳುವಿನಿಂದ ಚಿಟ್ಟೆಯಾಗುವುದಕ್ಕೂ ಅಣ್ಣನು ಆಸ್ಪದ ಕೊಟ್ಟಿದ್ದೇ ಕಾರಣ. ಅವನೇ ಇದಕ್ಕೆ ಅವಕಾಶ ಮಾಡಿಕೊಟ್ಟವನು. ಆದರೆ ಅವನು ಮಾಡೆಂದಿದ್ದೆಲ್ಲಾ ನೀನು ಮಾಡಬೇಕೇ? ನಿನಗೇಯೇ ಎಂದು ಒಂದು ಪರ್ಸನಾಲಿಟಿ ಇಲ್ಲವೇ? ಈ ಮನೆಯ ಸೊಸೆ ಬಣ್ಣದ ಚಿಟ್ಟೆಯಾಗಿರುವ ವಿಷಯವನ್ನು ಯೋಚಿಸುತ್ತಾ. ತನ್ನ ವಿಷಯವನ್ನೇ ಮೀನಾಕ್ಷಿ ಮರೆತು ಹೋಗುತ್ತಾಳೆ. ಆ ದಿವಾಕರ ದಾಸ್ ಎಂಬ ಉಬ್ಬು ಹಲ್ಲಿನ ಒಂದು ಕ್ರೂರ ಪ್ರಾಣಿ ಅವಳ 'ಪರ್ಸನಾಲಿಟಿ'ಯನ್ನೇ ನುಂಗುವುದಕ್ಕೆ ಕಾದಿದೆ ಎಂಬುದನ್ನೂ ಮರೆಯುತ್ತಾಳೆ.

ಹೊರಗೆ ಹೋಗುವಾಗ ಹಾಕಿಕೊಂಡಿದ್ದ ವೇಷ-ಭೂಷಣಗಳನ್ನು ಕಳೆದಿರಿಸಿ, ಒಂದು 'ಲೈಟ್' ಬಾಡಿ, ಮತ್ತು ಲಂಗದೊಂದಿಗೆ ಕೋಣೆಯಲ್ಲಿ ಸುನಂದಾ ಓಡಾಡುತ್ತಿದ್ದಳು. ತಲೆಯ ಕೂದಲನ್ನು ರಾತ್ರಿ ಮಲಗುವುದಕ್ಕೆ ಆಯತ್ತವಾಗಿ ಎಳೆದು ಕಟ್ಟಿದ್ದಳು. ಮುಖ, ಮೈ, ಕೈಗಳಿಗೆಲ್ಲಾ 'ಕ್ರೀಂ' ಹಚ್ಚಿಕೊಳ್ಳುತ್ತಿದ್ದಳು. ಮತ್ತೇರಿದ ಆನೆಯಂತೆ ಬಿದ್ದುಕೊಂಡಿದ್ದ ನೀಲಾಕ್ಷ ಬಾಗಿಲ

ಆಚೆ ಮೆಲ್ಲನೆಯ ಧ್ವನಿ ಕೇಳಿಸಿತು. ಸುನಂದಾ ಗಲ್ಲಕ್ಕೆ ಕ್ರೀಮನ್ನು ತಿಕ್ಕುತ್ತಾ ಪರದೆಯನ್ನು ಸ್ವಲ್ಪ ಸರಿಸಿ, "ನಾವು ಈಗ ಊಟ ಮಾಡುವುದಿಲ್ಲ, ಊಟ ಆಯಿತು" ಎಂದಳು. ಹೇಳಿ ತಿರುಗಿ ಒಳಗೆ ಬಂದು ಮೈಗೆಲ್ಲಾ ಕ್ರೀಂ ಹಚ್ಚಿಕೊಳ್ಳಲಾರಂಭಿಸಿದಳು. ನೀಲಾಕ್ಷ ಎದ್ದು ಕೂತುಕೊಂಡು: "ಯಾರು ಮಾತಾಡಿದ್ದು!" ಎಂದು ಕೇಳಿದ. ಸುನಂದ ಅಸಡ್ಡೆಯಿಂದ "ನಿತಾಯ್ ಕೇಳಲು ಬಂದಿದ್ದ ಈಗ ಊಟಕ್ಕೆ ಬರುತ್ತೇವೆಯೇ ಎಂದು, ಇಲ್ಲ ಎಂದು ಹೇಳಿದೆ" ಎಂದಳು.

ನೀಲಾಕ್ಷ ಸ್ವಲ್ಪ ಬಿರುಸಾಗಿ "ನೀನು ಅವನ ಎದುರಿಗೆ ಹೀಗೆಯೇ ಹೊದೆಯಾ?" ಎಂದ.

ಚಲನೆಯಿಲ್ಲದ ಧ್ವನಿಯಿಂದ ಸುನಂದಾ ಹೇಳಿದಳು. "ಅಯ್ಯೋ! ಹೌದೇ! ಬಹಳ ಅನ್ಯಾಯವಾಯಿತಲ್ಲಾ ತಲೆಯ ಮೇಲೆ ಸೆರಗನ್ನು ಎಳೆದುಕೊಳ್ಳಬೇಕಾಗಿತ್ತು!"

"ತಲೆಯ ಮೇಲೆ ಸೆರಗನ್ನು ಎಳೆದುಕೊಳ್ಳುವ ವಿಷಯವಲ್ಲ," ನೀಲಾಕ್ಷ ಸ್ವಲ್ಪ ಬಿರುಸಾಗಿಯೇ ಹೇಳಿದ. "ಆಳು, ಕಾಳುಗಳ ಮುಂದೆ ಸ್ವಲ್ಪ ಪ್ರೆಸ್‌ಟೀಜ್ ಇಟ್ಟುಕೊಂಡಿರಬೇಕು."

"ಇಟ್ಟುಕೊಂಡಿರಬೇಕೇ?" ಕತ್ತು, ಬೆನ್ನುಗಳ ಮೇಲೆ ಕೈ ತುಂಬಾ ಪೌಡರನ್ನು ಮೆತ್ತಿಕೊಳ್ಳುತ್ತಾ ಸುನಂದಾ ಹೇಳಿದಳು: "ನಿಮ್ಮ ಕಾಲುಗಳು ತಡವರಿಸುತ್ತಿದ್ದರೂ, 'ಬ್ರೆಯಿನು' ಸರಿಯಾದ ಕಡೆಯೇ ಇದೆ ಎನ್ನಬೇಕು. ಸರಿಯಾಗಿ 'ಕರೆಕ್ಟ್' ಆಗಿ ನಡೆಯುತ್ತಿದೆ."

"ಹಾಗೆಂದರೆ ಏನರ್ಥ?"

"ಬಹಳ ಸುಲಭವಾದ ಅರ್ಥ. ಸ್ವಲ್ಪ ಯೋಚಿಸಿದರೆ ಅರ್ಥವಾಗುತ್ತೆ."

ನೀಲಾಕ್ಷ ಅದೇ ಬಿರುಸು ಧ್ವನಿಯಿಂದಲೇ ಕೇಳಿದ: "ಸಭ್ಯತೆ, ಶೀಲ ಎಂದು ಒಂದು ಇಲ್ಲವೇ?"

"ಸಭ್ಯತೆ, ಶೀಲ! ಅಬ್ಬಬ್ಬಾ, ಏನೋ ದೊಡ್ಡ ದೊಡ್ಡ ಮಾತುಗಳನ್ನೆಲ್ಲಾ ಆಡುತ್ತೀರಲ್ಲಾ, ಸಾಹಿತ್ಯ, ಕವನ ಏನಾದರೂ ಓದುವುದಕ್ಕೆ ಪ್ರಾರಂಭಿಸಿದ್ದೀರಾ?"

"ನನ್ನನ್ನು 'ಡೌನ್' ಮಾಡುವುದಕ್ಕಾದರೆ ಸಾಕು ನಿನಗೆ. ಇನ್ನೇನೂ ಬೇಡ. ಆದರೆ ನನ್ನ ಶೀಲದ ಅಳತೆಗೋಲಲ್ಲಿ ನಿನ್ನನ್ನು ಅಳೆದುಕೊಳ್ಳುವುದು ನಡೆಯುವ ವಿಷಯವಲ್ಲ."

ಸುನಂದಾ ಪೌಡರ್ ಹಾಕಿಕೊಳ್ಳುವುದನ್ನು ನಿಲ್ಲಿಸಿ, ರಾಜ ಹಂಸದಂತೆ ಕತ್ತನ್ನು ಬಾಗಿಸಿ ಕೇಳಿದಳು, "ಯಾಕಂತೆ?"

"ನಡೆಯುವುದಿಲ್ಲವೆಂದರೆ, ನಡೆಯುವುದಿಲ್ಲ ಅಷ್ಟೇ." ಬಲವಿಲ್ಲದ ಧ್ವನಿಯಲ್ಲಿ ಹೇಳಿದ ನೀಲಾಕ್ಷ.

"ನಾನೆಲ್ಲಾದರೂ ಚರಂಡಿಯಲ್ಲಿ ಬಿದ್ದರೆ, ಹೆಚ್ಚೆಗೆ ಹೇಳಬೇಕಾದರೆ ಜನ ನಗುತ್ತಾರೆ, ಆದರೆ– ನನ್ನ ವಿಷಯದಲ್ಲೂ ಅಷ್ಟೇ ಮತ್ತೆ." ಒಂದೊಂದು ಕಾಲಾಗಿ ಎತ್ತಿ ಕ್ರೀಂ ತಿಕ್ಕುತ್ತಾ ಸುನಂದಾ ಎಂದಳು, "ಜನ ನಗುತ್ತಾರೆ. ಇನ್ನೇನು ಮತ್ತೆ. ಆದರೆ ನಗುವಂತಹ ಮಾತು

ಎಲ್ಲಿ ಬಂತು? ಜನ ಧನ್ಯರು, ಧನ್ಯರೆನ್ನುತ್ತಾರೆ. ಎಂತಹ ಹಳೆಯ ಕಂದಾಚಾರದ ಬಂಧನದಿಂದ ಮುಕ್ತರಾದವರು ಪ್ರಗತಿಶೀಲರು ಎನ್ನುತ್ತಾರೆ." ಹೇಳುತ್ತಾ ಸ್ಟಾಂಡಿನಿಂದ ಒಂದು ಸೀರೆಯನ್ನು ಎಳೆದು ಸುತ್ತಿಕೊಂಡಳು.

ನೀಲಾಕ್ಷ ಜಿಗುಪ್ಸೆಯಿಂದ, "ನಿನ್ನ ಮಾತುಕತೆ ಬರಬರುತ್ತಾ ಕಟುವಾಗುತ್ತಾ ಇದೆ" ಎಂದ. ಸುನಂದಾ ಕಿಲಕಿಲನೇ ನಗಲಾರಂಭಿಸಿದಳು.

ಈ ಗಾಜು ಒಡೆದಂತಹ ನಗುವನ್ನು ಅವಳು ಈಗೆಲ್ಲಾ ಚೆನ್ನಾಗಿ ಪಳಗಿಕೊಂಡಿದ್ದಳು. "ಅಯ್ಯೋ ಪಾಪ, ಯಾಕೆ? ಯಾವಾಗಿನಿಂದ ನನ್ನ ಮಾತು ಕಟುವಾಗಿ ಕೇಳಿಸುತ್ತಾ ಇದೆ? ಮಿಸೆಸ್ ಸಿನ್ಹಾ ಪರಿಚಯ ಆದಾಗಿನಿಂದಲೇ?"

"ಮಿಸೆಸ್ ಸಿನ್ಹಾ? ಮಿಸೆಸ್ ಸಿನ್ಹಾ ಎಂದರೆ? ಇದರಲ್ಲಿ 'ಥರ್ಡ್' ಪಾರ್ಟಿಯ ಮಾತು. ಎಲ್ಲಿಂದ ಬಂತು?"

"ಮೂರನೇ ವ್ಯಕ್ತಿಯ ಪ್ರವೇಶವಾದರೇನೇ ಮತ್ತೆ, ಇಬ್ಬರ ಮಧ್ಯೆ, ಕಟು, ಕಹಿಗಳು ಬರುವುದು. ಫ್ಯಾನಿನ ರೆಗ್ಯುಲೇಟರನ್ನು ಕಡೆಯವರೆಗೆ ತಿರುಗಿಸಿಬಿಟ್ಟು ಬಂದು, ಮಂಚದ ಪಕ್ಕದಲ್ಲಿದ್ದ ಸೋಫಾದ ಮೇಲೆ ಕೈ ಕಾಲುಗಳನ್ನು ಹರವಿಕೊಂಡು ಸುನಂದ ಕುಳಿತುಕೊಂಡಳು. ನೀಲಾಕ್ಷ ಎದ್ದು ಕೂತುಕೊಂಡು ಕೋಪದಿಂದ ಹೇಳಿದ – "ಹಾಗೆ ಹೇಳಲು ಹೊರಟರೆ ಬೇಕಾದಷ್ಟಿದೆ. ನೀನು ಸ್ವಲ್ಪ ಮುಂಚೆಯೇ ಬರಬಹುದಾಗಿತ್ತು. ಮಿಸ್ಟರ್ ಮೆಹರಾನೊಂದಿಗೆ ನೀನು ಹೇಗೆ ಮೈಮೇಲೆ ಒರಗಿಕೊಂಡು ಮಾತಾಡುತ್ತೀಯೋ ಅದಕ್ಕೆ–"

ನೀಲಾಕ್ಷ ಮಾತು ಮುಗಿಸಲಾಗುವುದಿಲ್ಲ. ತಿರುಗಿ ಆ ಗಾಜು ಒಡೆದಂತಹ ಧ್ವನಿಯ ನಗು ಕೋಣೆಯನ್ನೆಲ್ಲಾ ಆವರಿಸುತ್ತದೆ. ಅದರಲ್ಲಿ ಅವನ ಮಾತು ಮುಳುಗಿಹೋಗುತ್ತೆ. ನಗುತ್ತಾ ಕಡೆಗೆ ಅನ್ನುತ್ತಾಳೆ– "ಅದಕ್ಕೇ, ಅದನ್ನು ನೋಡಿದರೆ ಯಾವ ಗಂಡನಿಗಾದರೂ ಮೈಯಲ್ಲಿನ ರಕ್ತ ಕುದಿದೇಳುತ್ತಿತ್ತು, ಅಲ್ಲವೇ? ಆದರೆ ಇಲ್ಲಿ ಕೇವಲ ಐಸ್ ನೀರಿದೆ, ರಕ್ತದ ಬದಲು, ಅದಕ್ಕೇ ಕುದಿದೇಳುವುದಿಲ್ಲ."

ಈ ಕಟು, ಕಹಿ ಮಾತುಗಳಿಗೆ ನೀಲಾಕ್ಷ ಏನು ಉತ್ತರ ಕೊಡುತ್ತಿದ್ದನೋ ಯಾರಿಗೆ ಗೊತ್ತು? ಆದರೆ ಅಷ್ಟರಲ್ಲೇ ಪರದೆಯ ಆ ಕಡೆ ಮನೆಯ ಯಜಮಾನಿಯ ಗಂಟಲು ಘಂಟಾ ಘೋಷವಾಗಿ ಕೇಳಿಸಿತು– "ಆರು ಗಂಟೆಯ ಕಾಲ ಹೆಂಡತಿಯನ್ನು ಕರೆದುಕೊಂಡು ಊರೆಲ್ಲಾ ಸುತ್ತಿಕೊಂಡು ಬಂದು, ಇನ್ನೂ ತಿರುಗಿ ಕೋಣೆಯಲ್ಲಿ ಕುಳಿತುಕೊಂಡು ಲಲ್ಲೇಯೇನೋ ನೀಲು? ಈ ಕಡೆ ಅಪ್ಪ ಸಾಯುತ್ತಾ ಬಿದ್ದಿದ್ದಾರೆ!"

ಸುನಂದ ಸದ್ದಿಲ್ಲದೆ ಎದ್ದು ಕುಳಿತುಕೊಳ್ಳುತ್ತಾಳೆ. ಹಣೆ ಮಾತ್ರ ಗಂಟಾಯಿತು. ನೀಲಾಕ್ಷ ಮಾತ್ರ ಬಾಗಿಲ ಹತ್ತಿರ ಬಂದು ನಿಂತುಕೊಳ್ಳುತ್ತಾನೆ. ಅವನಿಗೆ ಬಹುಶಃ ನಶೆಯು ಇಳಿಮುಖವಾಗಿರಬೇಕು. ಅದಕ್ಕೇ ಸ್ವಲ್ಪ ಬಿಕ್ಕಟ್ಟಿನಿಂದ ಸಾವರಿಸಿಕೊಳ್ಳಲು ಹೇಳಿದ, "ಮನೆಗೆ ಬಂದ ತಕ್ಷಣವೇ ಕೇಳಿದೆ. ಡಾಕ್ಟರ್ ಬಂದಿದ್ದರಲ್ಲಾ..... ಯಾರಿಗೆ ಏನಾಗಿದೆ, ಎಂದು ಯಾರು ಜವಾಬೇ ಕೊಡಲಿಲ್ಲ."

ಪ್ರಪಂಚದ ಧಿಕ್ಕಾರವನ್ನೆಲ್ಲಾ ತನ್ನ ಧ್ವನಿಯಲ್ಲಿಳಿಸಿ ವಿಜಯಾ ಎಂದರು, "ಅಪ್ಪಾ ಜ್ಞಾನತಪ್ಪಿ ಬಿದ್ದಿರುವುದನ್ನು ನೋಡಲಿಲ್ಲವಾ?"

ಕಣ್ಣು ಮರೆಯಲ್ಲಿ ಏನೇನೋ ಮಾಡುತ್ತಾನೆ. ಸನಾತನ ಧರ್ಮದ ಮನೆತನದ ಹುಡುಗನಾಗಿದ್ದೂ ಸಾರಾಯಿ ಕುಡಿಯಲು ಅಭ್ಯಾಸ ಮಾಡಿಕೊಂಡಿದ್ದಾನೆ. ಹೆಂಡತಿಯನ್ನು ಕ್ಲಬ್ಬಿನಲ್ಲಿ ಕುಣಿಸುತ್ತಾನೆ. ಆದರೆ ಅಮ್ಮನ ಆಚಾರದ ಮುಂದೆ ಏನೋ ಒಂದು ಅಸಹಾಯಕತೆ ಭಾಸವಾಗುತ್ತೆ. ವಿಜಯಾರದು ಎಲ್ಲಾ ವಿಷಯದಲ್ಲೂ ತೀವ್ರಭಾವವೇ.

ವಿಜಯಾರ ಆತ್ಮಗೌರವದ ಅಳತೆಗೋಲು, ಸರೋಜಾಕ್ಷರದ್ದಕ್ಕಿಂತ ತೀರ ಬೇರೆಯಾದಂತಹುದ್ದು. ಅವರ ಅಭಿಪ್ರಾಯದಲ್ಲಿ ಈ ಕಾಲವೇ ಒಳ್ಳೆಯವರ ಕಾಲವಲ್ಲ. ನಿನ್ನ ಒಳ್ಳೆಯತನದಿಂದ ಎದುರಾಳಿ ಒಳ್ಳೆಯವನಾಗುವುದಿಲ್ಲ. ಇನ್ನೂ ಹದಿನೆಂಟಾಣೆ ಲಾಭವನ್ನೇ ಪಡೆಯುತ್ತಾನೆ. ಅಂದಮೇಲೆ ಒಳ್ಳೆಯತನದಿಂದ ಏನು ಲಾಭ ?

'ಲಾಭಕ್ಕಾಗಿ ಒಳ್ಳೆಯವನಾಗುವುದಿಲ್ಲ, ಒಳ್ಳೆಯತನಕ್ಕಾಗಿಯೇ ಒಳ್ಳೆಯತನ' ಎಂಬ ಸರೋಜಾಕ್ಷರ ವಾದವನ್ನು ವಿಜಯಾ ಒಪ್ಪುವವರಲ್ಲ. ಅವರ ವಾದ, "ಇನ್ನೇನಾಗದಿದ್ದರೂ ಎರಡು ಮಾತು ಅಂದುಬಿಡುವ ಒಂದು ಅವಕಾಶವನ್ನು ಯಾಕೆ ಬಿಡಲಿ? ಇಷ್ಟ ಬಂದ ಹಾಗೆ ಎಲ್ಲರನ್ನೂ ಅಂದೇ ಅನ್ನುತ್ತೇನೆ. ಮಗಳು-ಅಳಿಯ, ಮಗ-ಸೊಸೆ, ಬಳಗ-ನೆಂಟರು ಯಾರನ್ನೂ ಬಿಡುವುದಿಲ್ಲ. ನನ್ನ ಹಕ್ಕನ್ನು ನಾನು ಯಾಕೆ ಬಿಡಲಿ, ಯಾರಿಗೆ ಹೆದರಬೇಕು?"

ಎದುರಾಳಿ ಜೋರಾದರೆ ವಿಜಯಾ ಇನ್ನೂ ಜೋರಾಗುತ್ತಾರೆ. ವಿಜಯಾ ಯಾವಾಗಲೂ ವಿಜಯಿಯಾಗಿಯೇ ಹಿಂತಿರುಗುವವರು.

ನೀಲಾಕ್ಷ ಹೇಳಿದ: "ನೋಡದೇ ಏನು? ನಿನ್ನ ಕಡೇಮಗಳು ಜವಾಬೇ ಕೊಡಲಿಲ್ಲ. ಹೇಗೆ ಗೊತ್ತಾಗಬೇಕು ಏನಾಗಿದೆಯೆಂದು?"

"ಆಗಿದೆ, ಹೆಚ್ಚಾದ ಬ್ಲಡ್ ಪ್ರೆಷರ್!" ವಿಜಯಾ ನಿಷ್ಠೂರವಾಗಿ ನುಡಿದರು. "ಸ್ಟ್ರೋಕ್ ಆಗುವುದರಲ್ಲಿದ್ದು ಆಗಲಿಲ್ಲ ಅಷ್ಟೆ!"

ನೀಲಾಕ್ಷನ ಧ್ವನಿಯಲ್ಲಿ ಇನ್ನೂ ನಶೆಯ, ಅಮಲಿನ ಬೇಗೆ ಇದ್ದರೂ ಬುದ್ಧಿ ಕೆಲಸ ಮಾಡುತ್ತಿತ್ತು. ಅಮ್ಮನ ಮಾತ್ನು ಕೇಳಿ ಹೇಳಿದ – "ಆಗಿದ್ದರೂ ಆಶ್ಚರ್ಯವೇನಿಲ್ಲ ಆಗ್ತಾ ಇತ್ತು. ಅಪ್ಪನಂತಹ ಮರ್ಯಾದಸ್ಥ ಮನುಷ್ಯರ ಕೈಯಲ್ಲಿ ಅಪ್ಪೊ...... ಅಂದರೆ ಕ್ಷಮೆ ಬೇಡಿಸಿ ಕಳಿಸಿದ್ದಾರೆ. ಸಾಮಾನ್ಯವೇ?!"

ವಿಜಯಾರ ಹುಬ್ಬು ಗಂಟಿಕ್ಕಿತು– "ಏನು ಬೇಡಿಸಿದರು?"

"ಕ್ಷಮೆ ಕೈಮುಗಿದು ಕೇಳಿಸಿ..."

"ಯಾರು?" ವಿಜಯಾಗೆ ಆಶ್ಚರ್ಯ, "ಯಾರು ಕೇಳಿಸಿದರು?"

"ಯಾರೇ? ಅಪ್ಪನ ಪ್ರೀತಿಯ ಶಿಷ್ಯರು! ಘೇರಾವ್ ಮಾಡಿ ಹಿಡಿದಿಟ್ಟಿದ್ದರು. ಕ್ಷಮೆ ಬೇಡದಿದ್ದರೆ ಅಲ್ಲೇ 'ಕ್ಲೋಸ್' ಮಾಡುತ್ತಿದ್ದರು!"

ವಿಜಯಾ ಈಗ ಸ್ಥಿರ ಧ್ವನಿಯಲ್ಲಿ ಕೇಳಿದರು– "ಇದೆಲ್ಲಾ ಯಾವಾಗ ನಡೆಯಿತು? ಎಲ್ಲಿ? ಅವರು ಏನೂ........"

"ಅಬ್ಬ, ತಾವೇ ಅವರು ಎಲ್ಲಾದರೂ ಹೇಳುತ್ತಾರೆಯೇ? ಯಾವಾಗಲಾದರೂ ಹೇಳುತ್ತಾರೆಯೇ? ನನ್ನ ಮೈದುನನ ಬಾಯಿಂದ ಕೇಳಿದೆ. ಅವನ ಸೋದರಳಿಯ ಆ ಕಾಲೇಜಿನಲ್ಲೇ ಓದುತ್ತಾನಂತೆ. ಅವನು ಬಂದು ಕತೆ ಕತೆಯಾಗಿ ಹೇಳಿದ. ಹೇಳದೆ ಬಿಡುತ್ತಾರಾ ಇಂತಹ ತಮಾಷೆಯಾದ ಕತೆಯನ್ನು? ಆದರೆ ಏನು ಒಳ್ಳೆಯ ಬುದ್ಧಿ ಬಂತೋ ಕ್ಷಮೆ ಕೇಳಿದರು. ಜಿದ್ದು ಮಾಡಿದ್ದರೆ ಪರಿಸ್ಥಿತಿ ವಿಪರೀತಕ್ಕೆ ಹೋಗುತ್ತಿತ್ತು."

ಕೋಪದೊಂದಿಗೆ ವಿಜಯಾ ಕೇಳಿದರು–"ಅದರ ಕಾರಣವೇನು? ಸುಮ್ಮಸುಮ್ಮನೆ"– ಕಾರಣ ಇನ್ನೇನು, ನೀಲಾಕ್ಷ ನಿಧಾನವಾಗಿ ಹೇಳಿದ,–"ಮಧ್ಯಕಾಲದ ಈ ಜಮೀನುದಾರರ ಮನೋಭಾವವೇ. ಹುಡುಗರೆಲ್ಲ ಇವರ ಪ್ರಜೆಗಳೆಂದು ತಿಳಿದು ತಮ್ಮ ಅಧಿಕಾರ ತೋರಿಸಿದ್ದಾರೆ. ಈಗಿನ ಕಾಲದಲ್ಲಿ ಅದು ನಡೆಯುವುದಿಲ್ಲವೆಂಬ ತಿಳುವಳಿಕೆ ಬೇಡವೇ?"

"ಯಾಕೆ ನಡೆಯುವುದಿಲ್ಲ? ನಡೆದೇ ನಡೆಯುತ್ತೆ." ವಿಜಯಾ ಘಂಟಾಘೋಷವಾಗಿ ಹೇಳಿದರು:

"ಯುಗ ಮಹಾತ್ಮೆಯಿಂದ ಆ ಅಧಿಕಾರ ರಾಜನಿಂದ ಪ್ರಜೆಗೆ ಹೋಗಿದೆ ಅಷ್ಟೆ. ಇಲ್ಲದಿದ್ದರೆ ಮನೆಯ ಸೊಸೆ ಸಾಯಂಕಾಲವಾದರೆ ಥೈ ಥೈ ಅಂತ ಕುಣಿದುಕೊಂಡು ಊರು ಸುತ್ತಿಕೊಂಡು ನಡುರಾತ್ರಿ ಮನೆಗೆ ಬಂದು, ಕೈ ಕಾಲು ಚಾಚಿಕೊಂಡು ಆಳು–ಕಾಳುಗಳಿಗೆ ಹುಕುಂ ಹಾಕುತ್ತಾಳೆಯೇ? ಇಲ್ಲಿ ಮುದಿ ಅತ್ತೆ ಸಂಸಾರದ ಭಾರ ಹೊತ್ತುಕೊಂಡು ಸಾಯುತ್ತಾ ಇದೆ. ಇವೆಲ್ಲಾ ಈ ಯುಗ ಮಹಾತ್ಮೆಯಿಂದಲೇ ಮತ್ತೆ ನಡೆಯೋದು. ಹೇಳಿದರೆ ಮಾತ್ರ." ಈಗ ಬಾಗಿಲ ಹತ್ತಿರ ನೆರಳು ಬೀಳುತ್ತೆ ಮತ್ತು ಶಾಂತವಾದ ಸ್ವರ ಕೇಳಿಸುತ್ತೆ.– "ಸಂಸಾರದ ಜ್ವಾಲೆ ಮೆಟ್ಟಲು ಹತ್ತಿ ಮೂರನೇ ಮಹಡಿಗೂ ಹೋಗುತ್ತದೆಯೇನಮ್ಮಾ?"

ಈ ಶಾಂತಿ ಸ್ವರದ ಜ್ವಾಲೆಯಿಂದ ಚಡಪಡಿಸುತ್ತಾರೆ ವಿಜಯಾ. ಗಟ್ಟಿಯಾಗಿ ಕೂಗಿ ಹೇಳಿದ್ದರೆ ಅದಕ್ಕೂ ಮೇಲೆ ಧ್ವನಿಯೇರಿಸಿ, ಹೂಂಕರಿಸಿ ವಿಜಯಿಯಾಗಬಹುದಾಗಿತ್ತು. ಈ ಶಾಂತತೆ. ಯುದ್ಧದಲ್ಲಿ ಆಯುಧವನ್ನು ಕಿತ್ತುಕೊಂಡಂತೆ! ಆದ್ದರಿಂದ ಯುದ್ಧಕುಶಲತೆಯ ದಾರಿಯನ್ನು ಬದಲಾಯಿಸಿದರು. "ತಾಯಿ–ಮಗನ ಮಧ್ಯೆ ಮಾತು ನಡೆಯುತ್ತಿತ್ತು. ಮಧ್ಯೆ ನೀನು ಯಾಕೆ ತಲೆಹಾಕಿದೆ?"

"ತಾಯಿ–ಮಗನ ಮಾತು ಮಾತ್ರ ಆಗಿದ್ದಿದ್ದರೆ ಖಂಡಿತ ಬರುತ್ತಿರಲಿಲ್ಲ. ಆದರೆ ಮನೆಯ ಸೊಸೆಯ ನಡೆ–ನುಡಿಯ ವಿಚಾರವಾಗಿ ಮಾತು ಬಂದುದರಿಂದ....."

ವಿಜಯಾ ಹೌಹಾರಿದರು. "ಬಂದೇ ಬರುತ್ತೆ. ಖಂಡಿತ ಬರುತ್ತೆ. ಆರು ಗಂಟೆ ಕಾಲ ಹೊರಗೆ ಸುತ್ತಿಬಿಟ್ಟು ಬಂದು ಬಿದ್ದುಕೊಂಡಿದ್ದೀಯೆ. ಅಲ್ಲಿ ಮಾವನವರು ಸಾಯುವುದರಲ್ಲಿದ್ದಾರೆ. ಒಂದು ಸಲ ಇಣಿಕಿಯೂ ನೋಡಲಿಲ್ಲ. ದೊಡ್ಡದಾಗಿ ಮಾತಾಡುವುದಕ್ಕೆ ಬರುವುದಕ್ಕೆ ನಾಚಿಕೆಯಾಗುವುದಿಲ್ಲವೇ?"

ಸುನಂದಾಗೆ ಮಾವನವರಲ್ಲಿ, ಸ್ವಂತ ತಂದೆಯಂತೆಯೇ, ಗೌರವ, ಮಮತೆ ಮತ್ತು ಪ್ರೀತಿ–ವಿಶ್ವಾಸಗಳಿದೆ. ಮೈ ಸರಿಯಾಗಿಲ್ಲವೆಂದು ಕೇಳಿ ಮನಸ್ಸು ಕಳವಳಗೊಳ್ಳದೆಯೂ ಇಲ್ಲ ಆದರೆ ಅದಕ್ಕಾಗಿ ಅವರ ಹತ್ತಿರ ಹೋಗಿ ಕುಳಿತುಕೊಳ್ಳುವಂತಹ ಧೃಷ್ಟತೆಯೂ ಇಲ್ಲ. ಅವಳು ತನ್ನ ಸ್ವರೂಪ ಹೀಗೆ ಬದಲಾವಣೆಯಾದಾಗಿನಿಂದ ಆದಷ್ಟೂ ಅವರ ಎದುರಿಗೆ ಬರುವುದನ್ನು ನಿಲ್ಲಿಸಿದ್ದಳು. ಆದರೆ ಈ ಹೆಂಗಸನ್ನು ಮಾತ್ರ ಸಹಿಸಿಕೊಳ್ಳುವುದು ಕಷ್ಟ. ಮನುಷ್ಯನಲ್ಲಿರುವ ಅವನ ಮನಸ್ಸಿನಲ್ಲಿರುವ ಕೋಮಲತೆಯನ್ನೆಲ್ಲಾ ಹೊರತಂದು ಹಿಸುಕಿ ಹಾಕುವುದರಲ್ಲೇ ಆನಂದ ಈಕೆಗೆ! ಅದಕ್ಕೇ, ಅದಕ್ಕನುಗುಣವಾಗಿಯೇ ಮಾತಾಡುತ್ತಾಳೆ ಸುನಂದ. ಧ್ವನಿ ಮಾತ್ರ ಶಾಂತವಾಗಿಯೇ ಇರುತ್ತೆ.

"ಅಪ್ಪಾ, ಖಾಯಿಲೆ ಇಷ್ಟು ಬಲವಾದದ್ದು ಎಂದು ಹೇಗೆ ಗೊತ್ತಾಗುತ್ತೆ ಹೇಳಿ? ಹಾಗಾಗಿದ್ದರೆ ನೀವು ನಿಮ್ಮ ಪೂಜೆ–ಪಾಠಗಳನ್ನು ಬಿಟ್ಟು ಬಂದು ಅವರ ತಲೆಮಾಡಿನಲ್ಲಿ ಕುಳಿತಿರುತ್ತಿದ್ದಿರಿ ಎಂದುಕೊಂಡೆ.

"ಪೂಜೆ–ಪಾಠ ಬಿಟ್ಟೇ? ಹತ್ತಿರ ಕೂತಿರುತ್ತಿದ್ದೇನೆ?" ಕೂಗಿ ಕೊಂಡರು ವಿಜಯಾ, "ನಿಮ್ಮಗಳ ಹಾಗೆ ನಾವು ಕಲಿತಿಲ್ಲ. ಇಪ್ಪತ್ತುನಾಲ್ಕು ಗಂಟೆ ಕಾಲ ಗಂಡನ ಮೈಯೊರಗಿ ಕೂಡುವ ಅಭ್ಯಾಸವೂ ಇಲ್ಲಾ. ರೋಗ ಬಂದರೆ ಡಾಕ್ಟರನ್ನು ಕರೆಯಬೇಕು. ದೇವರ ಹತ್ತಿರ ಬೇಡಿಕೊಳ್ಳಬೇಕು. ಇದೇ ನಮಗೆ ತಿಳಿದಿರುವುದು. ತಲೆ ಮಾಡಿನಲ್ಲಿ ಹೋಗಿ ಕುಳಿತುಕೊಳ್ಳದಿದ್ದರೆ ಕರ್ತವ್ಯ ಪೂರೈಸಿದ ಹಾಗಲ್ಲವೆಂಬುದು ಗೊತ್ತಿಲ್ಲ. ಆದರೆ ನೀನು ಮಗನ ಹೆಂಡತಿಯಾಗಿ...."

ತಂದೆಯ ಕೋಣೆಯಿಂದ ಎದ್ದು ಬಂದ ಮೀನಾಕ್ಷಿ ಅದುಮಿದ ಕೋಪದಿಂದ ಹೇಳಿದರು–"ಅಮ್ಮಾ, ನೀವುಗಳು ಏನು ತಿಳಿದುಕೊಂಡಿದ್ದೀರಿ? ನಿಮ್ಮ ಕೂಗಾಟದಲ್ಲಿ ಅಪ್ಪನಿಗೆ ನಿದ್ರೆಯ ಔಷಧಿಯಿಂದ ಬರುತ್ತಿರುವ ನಿದ್ರೆಯೂ ಕೆಟ್ಟು ಎಚ್ಚರವಾಗುತ್ತಿದೆ. ಆಶ್ಚರ್ಯ!"

ಮೀನಾಕ್ಷಿ ಒಂದು ಅಸಹನೆಯ ನೋಟವನ್ನು ಬೀರಿ ಹೊರಟುಹೋದಳು.

ವಿಜಯಾ ಸರಿದು ಹೋದರು. ಈಗಾಗಲೇ ಅವರು ಬೇಕಾದಷ್ಟು ಹರಕೆ–ಗಿರಕೆಗಳನ್ನು ಮಾಡಿಕೊಂಡಿದ್ದಾರೆ. ಇನ್ನು ಭಯವಿಲ್ಲ. ನೀಲಾಕ್ಷನ ಮಾತು ಕೇಳಿ ಭಯ ಇಳಿದೂ ಹೋಯಿತು. ರೋಗ ಆಕಸ್ಮಿಕವಾದದ್ದಲ್ಲವೆಂದೂ ಕಾರಣ ಇತ್ತು ಎಂದೂ ತಿಳಿಯಿತಲ್ಲ! ಮಾನಕ್ಕೆ ಹೆಚ್ಚು ಬೆಲೆ ಕೊಡುವ ಮನುಷ್ಯರು. ಮನಸ್ಸಿಗೆ ಪೆಟ್ಟಾಗಿದೆ. ಅದಕ್ಕೇ ಹಠಾತ್ತನೆ ಹೀಗಾಯಿತು.

ಆದರೆ ವಿಜಯಾಗೇನೋ ಒಂದು ಉಲ್ಲಾಸದ ಅನುಭೂತಿಯೇ ಆಯಿತು. ಪರೋಕ್ಷವಾಗಿರುವ ಪ್ರತಿವಾದಿಯನ್ನು ಎದುರಿಗೆ ನಿಲ್ಲಿಸಿಕೊಂಡು ಮನಸ್ಸಿನಲ್ಲೇ ಕೇಳುತ್ತಿದ್ದರು– 'ಅವಮಾನದ ಜ್ವಾಲೆ ಹೇಗಿರುತ್ತೆ ಎಂಬುದು ಈಗ ತಿಳಿಯಿತೇ? ಜೀವನಾದ್ಯಂತವೂ ಒಂದು ಹೆಂಗಸನ್ನು ಅವಮಾನಪಡಿಸಿಕೊಂಡೇ ಬಂದೆಯಲ್ಲಾ' ಅವಳಿಗೆ ಎಷ್ಟು ನೋವಾಗಿರಬೇಕು ಎಂದು ನೋಡಿದೆಯಾ? ಮಾವನನ್ನು ಕಾಪಾಡಿಕೊಳ್ಳುವುದು ನಮ್ಮ ಕೈಯಲ್ಲಿದೆ.

ಇಟ್ಟುಕೊಳ್ಳಲು ತಿಳಿದಿದ್ದರೆ ಅದನ್ನು ಕಿತ್ತುಕೊಳ್ಳುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ!' ಎನ್ನುತ್ತಿದ್ದೆಯಲ್ಲ, ಈಗ ತಿಳಿಯಿತೇ? ಅದರ ಸಜಾ ಅನುಭವಿಸಬೇಡವೇ? ದೇವರಿಲ್ಲವೇ?!"

ಕಣ್ಣೆದುರಿಗೆ ಇಲ್ಲದ ಪ್ರತಿವಾದಿ ಜವಾಬು ಕೊಡದಿದ್ದರೂ ವಿಜಯಾರ ಮನಸ್ಸು ಓಡುತ್ತಿರುತ್ತೆ. ಮೀನಾಕ್ಷಿ ತಂದೆಯ ಕೋಣೆಗೆ ಹೋಗಿ ಕುಳಿತುಕೊಳ್ಳುತ್ತಾಳೆ, ಯೋಚಿಸುತ್ತಾಳೆ. ಅಪ್ಪನು ಹೀಗೆ ಕುಸಿದು ಬೀಳುವುದಕ್ಕೆ ಅವರ ವಿದ್ಯಾರ್ಥಿಗಳು ಮಾತ್ರ ಕಾರಣವೇ? ಅವರ ಮಕ್ಕಳ ನಡವಳಿಕೆಯಲ್ಲಿ ಏನೂ ಕುಂದಿಲ್ಲವೇ? ಕೊರತೆಯಿಲ್ಲವೇ? ಗಡಿಯಾರದ ಪೆಂಡುಲಂ ತರಹ ಮೀನಾಕ್ಷಿಯ ಮನಸ್ಸು ಓಲಾಡುತ್ತಿದೆ. ಒಂದು ಕಡೆ, ಅಪ್ಪನ ತರಹ ನ್ಯಾಯವಾದಿಯಾದ ಮನುಷ್ಯನಿಗೆ, ಮನೆಯ ಹೊರಗೆ ಒಳಗೆ, ಎಲ್ಲಾ ಕಡೆಯೂ, ಅಸಭ್ಯ, ಉದ್ಧಂಡ, ಅಶ್ಲೀಲ ನಡತೆಗಳ ಭಾರವನ್ನು ಸಹಿಸಿ, ಸಹಿಸಿ ಅವರ ನರಗಳು ಕಿತ್ತುಹೋಗುವಂತಾಗುವುದು ಸಹಜವೇ ಎನ್ನಿಸಿತು. ಇನ್ನೊಂದು ಕಡೆ, ಅವರು ವಿಮುಖರಾಗಿ ಪರಾಮುಖರಾಗಿ ಯಾವುದೋ ಹಿಂದಿನ ಕಾಲದ ಸ್ವಪ್ನದಲ್ಲಿ ಮುಳುಗಿ, ಈಗ ನಡೆಯುವ ಕಾಲದ ವಾಸ್ತವಿಕತೆಯನ್ನು ನೋಡದೆ ಇರುವ ಮನೋಭಾವವನ್ನು ನೋಡಿ ಕೋಪವೂ ಬಂತು.

"ಹೊರಗೆ ಇಂದು ಕೈಜೋಡಿಸಿ ಕ್ಷಮೆ ಕೇಳಿ ಬಂದಿದ್ದೇನೆ. ಈಗ ನಿಮ್ಮಗಳ ಹತ್ತಿರವೂ ಕೇಳಿಕೊಳ್ಳುತ್ತೇನೆ. ದಯವಿಟ್ಟು ನೀನು ಕೋಣೆಯಿಂದ ಹೊರಗೆ ಹೋಗು."

ಅಂದರೆ ಕೋಣೆಯಿಂದ ತೊಲಗು ಆಚೆಗೆ!

ಅವರ ದಬ್ಬಾಳಿಕೆ ಆಗ ಮನಸ್ಸಿಗೆ ಅರಿವಾಗಲಿಲ್ಲ.

ಆಗ ಮೀನಾಕ್ಷಿಯ ಮನಸ್ಸಿನೊಂದಿಗೆ ದೇಹವೂ ಕಲ್ಲಾಗಿ ಹೋಗಿತ್ತು. ಒಂದು ಸಲ ಮೈ ಮುರಿದುಕೊಂಡು ಹೊರಡಲನುವಾಗಿದ್ದಳು. ಆದರೆ ಹೋಗಲಾಗಲಿಲ್ಲ.

ಅಷ್ಟರೊಳಗೆ ಸರೋಜಾಕ್ಷರ ತಲೆ ಅವರ ಎದೆಯ ಮೇಲೆ ಬಾಗಿತು. ಆ ಕ್ಷಣದಲ್ಲೇ ಆವಾಗಲೇ ಮೀನಾಕ್ಷಿಗೆ, ತಾನು ದಿವಾಕರನ ವಿಷಯವಾಗಿ ತಾನು ಮಾತು ಎತ್ತಲೇ ಇಲ್ಲ. ಆದರೆ ಅದಕ್ಕಾಗಿಯೇ ತಾನು ಬಂದಿದ್ದುದು ಎಂಬುದು ಜ್ಞಾಪಕಕ್ಕೆ ಬಂತು.

* * *

ಶಾರದಾ ಪ್ರಸಾದರಿಗೆ ವಯಸ್ಸೇನೂ ಕಡಿಮೆಯಾಗಿರಲಿಲ್ಲ. ಆದರೆ ಆಕೃತಿ ಮತ್ತು ಪ್ರಕೃತಿ ಇಬ್ಬರೂ ಸೇರಿಕೊಂಡು ಅವರನ್ನು ಎಲ್ಲೋ ಒಂದು ಮಧ್ಯ ಸ್ಥಳದಲ್ಲಿ ತಂದು ನಿಲ್ಲಿಸಿಬಿಟ್ಟು ಹೊರಟುಹೋದಂತಿದೆ. ಅದಕ್ಕೇ ಅವರನ್ನು ನೋಡಿದರೆ, ಚಟುವಟಿಕೆಯಿಂದ ಕೂಡಿದ ಒಬ್ಬ ಯುವಕನಂತಿದೆ. ಮಾತುಗಳನ್ನು ಕೇಳಿದರೆ ಕಿಶೋರ ಪ್ರಾಯವನ್ನು ದಾಟಿಲ್ಲ ಎನಿಸುತ್ತೆ.

ಔಷಧಿಯನ್ನು ತೆಗೆದುಕೊಂಡು ಅವರು ಬರುವ ವೇಗವನ್ನು ನೋಡಿದರೆ ಓಟದ ಪಂದ್ಯದಲ್ಲಿ ಓಡುತ್ತಿದ್ದಂತಿತ್ತು. ಅದೇ ಮನುಷ್ಯ ಮನೆಯೊಳಗೆ ಕಾಲಿಟ್ಟ ತಕ್ಷಣವೇ ಅತಿ ಸಾವಧಾನದಿಂದ ಚಪ್ಪಲಿಯನ್ನು ತೆಗೆದಿಟ್ಟು ಸದ್ದಿಲ್ಲದೆ ಮೆಟ್ಟಲು ಹತ್ತುತ್ತಿದ್ದರು. ಊಟದ

ವಿಷಯವಾಗಿ ಕೇಳಿ ಅಡಿಗೆಯ ಭಟ್ಟ ಅವರಿಂದ ಬೈಯಿಸಿಕೊಂಡ. 'ಬಾಯಿನ ತುತ್ತನ್ನು ಬಿಟ್ಟು ಮನೆಯ ಯಜಮಾನ ಹಾಸಿಗೆ ಹಿಡಿದಿರುವಾಗ, ಮನೆಯ ಬಾಕಿ ಜನರು ಊಟಕ್ಕೆ ಕುಳಿತುಕೊಳ್ಳುವುದಕ್ಕಿಂತ ನಾಚಿಕೆಗೇಡಾದ ವಿಷಯ ಇನ್ನೇನಾದರೂ ಉಂಟೇ!?' ಅವನು ಬೈಯಿಸಿ ಕೊಂಡುದೂ ಸಹಜವೇ.

"ಊಟವೇ? ನಾಚಿಕೆಯಾಗುವುದಿಲ್ಲವೇ ಕೇಳುವುದಕ್ಕೇ, ಬಿಸಾಕು ಎಲ್ಲವನ್ನೂ!" ಎಂದಿದ್ದರು. ಮೆಲ್ಲನೆ ಹೋಗಿ ಯಾವ ಟೇಬಲ್ಲಿನ ಮುಂದೆ ಮೀನಾಕ್ಷಿ ಕುಳಿತಿದ್ದಳೋ ಆ ಟೇಬಲ್ಲಿನ ಮೇಲೆ ಔಷಧಿಗಳನ್ನು ಇಟ್ಟುಬಿಟ್ಟು ಹೋದರು. ಮೀನಾಕ್ಷಿ ಯಾವುದೋ ಎರಡು ಜ್ವಲಿಸುವ ಕಣ್ಣುಗಳನ್ನು ನೆನೆದು ಯೋಚಿಸುತ್ತಿದ್ದಳು. ತಾನು ದಿವಾಕರನ ವಿಷಯವಾಗಿ ಯಾವುದಾದರೂ ಒಂದು ಇತ್ಯರ್ಥ ಮಾಡಿಯೇ ತೀರಬೇಕೆಂದು ಬಂದಿದ್ದಳು. ಆದರೆ ಆಗಲಿಲ್ಲ. ಅಷ್ಟರೊಳಗೆ ತಂದೆಗೆ ಮೈಸ್ವಸ್ಥವಿಲ್ಲದೆ ಹೋಯಿತು. ಸರಿಯಾಗಿದ್ದಿದ್ದರೆ ಮಾತ್ರ ಆಗುತ್ತಿತ್ತೇ? ಇಲ್ಲ ಅನಿಸಿತು ಮೀನಾಕ್ಷಿಗೆ. ಆಗಲೂ ಆಗುತ್ತಿರಲಿಲ್ಲ. ದಿವಾಕರ ಹೇಳುವ ಹಾಗೆ ನಾನು ಪುಕ್ಕಲಿ, ನಾನು ಧೈರ್ಯಶಾಲಿಯಾಗಬೇಕು.

'ಕಾಮನ್' ರೂಮಿನಲ್ಲಿ ಬಲವಾದ ಚರ್ಚೆ ನಡೆಯುತ್ತಿತ್ತು. ಚರ್ಚೆಗೆ ಕಾರಣವಾಗಿದ್ದವರು ಪ್ರೊಫೆಸರ್ ಮೈತ್ರಾರವರೇ. ಹಿಂದಿನ ದಿನ ನಡೆದ ಘೆರಾವ್ ವಿಷಯದಲ್ಲಿ, ಅವರ ಪರವಾಗಿಯೂ ಎದುರಾಗಿಯೂ, ಎರಡು ಪಕ್ಷಗಳಾಗಿದ್ದು, ಇವರಲ್ಲಿ ವಾಗ್ಯುದ್ಧ ನಡೆಯುತ್ತಿತ್ತು. ವಿದ್ಯಾರ್ಥಿಗಳ ಈ ಪಂಗಡ ಭೇದಗಳು, ಅಧ್ಯಾಪಕರ ಅವಮರ್ಯಾದೆಯನ್ನು ಮಾತ್ರವೇ ಕಾರಣವಾಗಿಟ್ಟುಕೊಂಡು ಹುಟ್ಟಿತೆಂದು ಹೇಳುವುದಕ್ಕಾಗುವುದಿಲ್ಲ. ಸುಮ್ಮನೆಯೇ ರಾಜನೈತಿಕ ಮತವಾದಗಳ ಭೇದಗಳಿಂದ ಅದು ಅನೇಕ ಶಿಬಿರಗಳಾಗಿ ಭಾಗ ಹೊಂದಿದೆ.

ವಾಮ-ಪಂಗಡ, ದಕ್ಷಿಣ-ಪಂಗಡ, ವಾಮ-ದಕ್ಷಿಣ ಪಂಗಡ, ದಕ್ಷಿಣ-ವಾಮ ಪಂಗಡ, ವಾಮ-ಉಗ್ರ ಪಂಗಡ, ದಕ್ಷಿಣ-ಉಗ್ರಪಂಗಡ, ವಾಮೇತರ-ದಕ್ಷಿಣ, ದಕ್ಷಿಣೇತರ-ವಾಮ ಹೀಗೆಯೇ ಎಷ್ಟೆಷ್ಟೋ ಸೂಕ್ಷ್ಮದಿಂದ ಸೂಕ್ಷ್ಮ ಶಾಖೆಗಳಾಗಿ ಭಾಗಗಳಾಗಿದೆ.

ಇವರುಗಳಲ್ಲಿ ಒಂದು ಶಾಖೆಗೆ ಸೇರಿದವನು, ಇನ್ನೊಂದು ಶಾಖೆಯವನ ಜೊತೆಯಲ್ಲಿ ಕೂತು ನೀರು ಸಹ ಕುಡಿಯುವುದಿಲ್ಲ. ಒಬ್ಬರು ಇನ್ನೊಬ್ಬರ ಜೊತೆ ಆಟಗಳಾಡುವುದಿಲ್ಲ. ಒಬ್ಬರು ಇನ್ನೊಬ್ಬರಿಗೆ ಅಸ್ಪೃಶ್ಯರಷ್ಟೇ ಅಲ್ಲ, ವ್ಯಂಗ್ಯ ಮತ್ತು ತಿರಸ್ಕಾರಕ್ಕೆ ಅರ್ಹರಾದವರು ಕೂಡ. ಇಂತಹವರೊಳಗೆ ಬಲಶಾಲಿಯಾದ ಗುಂಪು ಸ್ವಲ್ಪ ಬಲ ಕಡಿಮೆಯಾದ ಗುಂಪನ್ನು ಹೆದರಿಸಿ ಬೆದರಿಸಿ ತಮ್ಮ ಗುಂಪಿಗೆ ಸೇರಿಸಿಕೊಳ್ಳುವ ಪ್ರಯತ್ನವನ್ನು ಮಾಡುವುದಕ್ಕೂ ಹಿಂದೇಟು ಹಾಕುವುದಿಲ್ಲ.

ಇದು ಸ್ವಾಭಾವಿಕವೇ.

ನನ್ನ ಮತವಾದದಲ್ಲಿ ಆಸಕ್ತಿ ಇಲ್ಲದವನು ಒಬ್ಬ ಮನುಷ್ಯ ಎನಿಸಿಕೊಳ್ಳಲು ಯೋಗ್ಯನೇನು? ಈ ಮನೋಭಾವವಲ್ಲವೇ ಪ್ರತಿಯೊಬ್ಬನಿಗೂ? ಆದ್ದರಿಂದ ಅವನನ್ನು

ನನ್ನ ಮತವಾದವನ್ನು ಒಪ್ಪಿಕೊಳ್ಳುವಂತೆ ಮಾಡಿ, ಮನುಷ್ಯನೆನಿಸಿಕೊಳ್ಳಲು ಯೋಗ್ಯನಾಗುವಂತೆ ಮಾಡುತ್ತೇನೆ, ಇಲ್ಲದಿದ್ದರೆ ಅವನನ್ನು ತೆಗಳುತ್ತೇನೆ, ತಿರಸ್ಕರಿಸುತ್ತೇನೆ!

ಸ್ನೇಹವೇ?

ಎಂದಿಗೂ ಇಲ್ಲ.

ನಮ್ಮ ಮತವಾದವನ್ನು ಒಪ್ಪುಕೊಳ್ಳದ ಒಬ್ಬನಲ್ಲಿ ಸ್ನೇಹ ಎಲ್ಲಿಂದ ಬರುತ್ತೆ? ಒಂದು ಒಳ್ಳೆಯ ಹೃದಯವನ್ನು ಪಡೆದಿದ್ದಾನೆ ಎಂದು ಸ್ನೇಹ ಬೆಳಸುವುದೇ? ಥತ್ತೇರಿ, ರಬಿಷ್! ಹೃದಯವೂ ಒಂದು ವಸ್ತುವೇ? ಹೃದಯಕ್ಕೂ, ಹೃದಯಕ್ಕೂ ಸ್ನೇಹ! ಈ ಹಳೇ ಕಂತೆ ಪುರಾಣದ ಮಾತುಗಳನ್ನು ಇಂದಿನ ಯುಗದವರು ನಂಬುವುದಿಲ್ಲ.

ಈ ಯುಗದಲ್ಲಿ ಒಂದು ಮತವಾದವನ್ನು ನಂಬುವವರಲ್ಲಿ ಮಾತ್ರ ಸ್ನೇಹ ಬೆಳೆಯುವುದು ಸಾಧ್ಯ. ಒಂದೇ ಶಿಬಿರದಲ್ಲಿದ್ದರೆ ಮಾತ್ರವೇ ಸ್ನೇಹಕ್ಕೆ ಆಸ್ಪದ ಉಂಟು. ಇಲ್ಲಿ ಹೃದಯಕ್ಕೆ ಮಹತ್ವ ಕೊಡುವುದು ಹಾಸ್ಯಾಸ್ಪದವಾದ ಮಾತು.

ಆದರೆ ಇವರೆಲ್ಲಾ ಒಂದೇ ಶಿಬಿರದವರು, ಅಸೀತ್, ದಿಲೀಪ್, ಅನಿಲ್, ಕುಮಾರೇಶ್, ವಿಮಲ್, ಶಿವೇಂದು, ಅವನೀಶ್, ಇಂದ್ರಜಿತ್, ಪರಾಶರ್, ಇನ್ನೂ ಅನೇಕರು.

ಆದರೆ ಈಗ ಪ್ರೊಫೆಸರ್ ಮೈತ್ರಾರವರ ನಡತೆಯ ವಿಷಯ ಕುರಿತು ಅವರಲ್ಲೂ ಮತಭೇದ ಉಂಟಾಗಿ ಎರಡು ಪಂಗಡಗಳಾಯಿತು. ಇನ್ನೂ ಒಂದು ಶಿಬಿರ ಜಾಸ್ತಿಯಾಯಿತು. ಇವರಲ್ಲಿ ಒಂದು ಪಂಗಡದವರು ನೆನ್ನೆಯ ಘಟನೆಯಿಂದಾಗಿ, ಲಜ್ಜಿತರು, ದುಃಖದಿಂದ ಮರ್ಮಾಹತರಾಗಿದ್ದಾರೆ. ಇವರ ಎದುರು ಪಕ್ಷದವರು ಉಲ್ಲಾಸದಿಂದ ಉಬ್ಬಿ. ತಮ್ಮ ವೀರತ್ವವನ್ನು ನೆನೆದು ಎದೆ ತಟ್ಟಿ ಜಂಭ ಕೊಚ್ಚಿಕೊಳ್ಳುತ್ತಿದ್ದಾರೆ.

ಇನ್ನೂ ಚಿಕ್ಕವರಾಗಿರುವಾಗ, ಸ್ಕೂಲಿನಲ್ಲಿರುವಾಗಲೇ ಇದು ಶುರುವಾಗುತ್ತಿತ್ತು. ಇಬ್ಬರು ಹುಡುಗರಲ್ಲಿ ಜಗಳ ಶುರುವಾದರೆ, ಮಿಕ್ಕ ಹುಡುಗರೂ ಎರಡು ಪಂಗಡಗಳಾಗಿ ಆಗುತ್ತಿದ್ದರು. ಇದರ ಹೆಸರು ಗ್ಯಾಂಗ್. ಜಗಳವಾಡುವ ಒಂದೊಂದು ಹುಡುಗನನ್ನು ಒಂದೊಂದು ಗ್ಯಾಂಗ್ ತಮ್ಮ ಸಮರ್ಥನೆಯನ್ನು ನೀಡಿ, ತಮ್ಮ ದುಷ್ಟತನದಿಂದ ಕಲಹದ ಅಗ್ನಿಗೆ ಇಂಧನವನ್ನು ಒದಗಿಸುತ್ತಿದ್ದರು. ಜಗಳವಾಡಿದ ಹುಡುಗರಿಬ್ಬರೂ ಪಶ್ಚಾತ್ತಾಪಪಟ್ಟು ಅವರ ಜಗಳದ ಕಾರಣವನ್ನು ಬಗೆಹರಿಸಿಕೊಳ್ಳೋಣವೆಂದರೂ, ಅದು ಸಾಧ್ಯವಾಗುತ್ತಿರಲಿಲ್ಲ. ಅದು ಅವರ ಕೈಯಲ್ಲಿರಲಿಲ್ಲ.

ಈಗ ಇವರುಗಳು ತಮ್ಮನ್ನು ಒಂದು ಗ್ಯಾಂಗ್ ಎಂದು ಹೇಳಿಕೊಳ್ಳುವುದಿಲ್ಲವಾದರೂ ಆ ಮನೋಭಾವ ಮಾತ್ರ ಬದಲಾಯಿಸಿಲ್ಲ. ಸಹಪಾಠಿಗಳು ಬೇರೆ, ಸಂದರ್ಭಗಳು ಬೇರೆ, ಕಾರಣಗಳು ಬೇರೆ ಆದರೂ ಆ ಮನೋಭಾವ ಮಾತ್ರ ಬದಲಾಗಿಲ್ಲ.

ಅದಕ್ಕೇ, ಒಂದು ಪಂಗಡ "ನೆನ್ನೆ ಮಾಡಿದ ಕೆಲಸ ಸರಿಯಿಲ್ಲ" ಎಂದರೆ, ಇನ್ನೊಂದು ಪಂಗಡ, "ಸುಮ್ಮನೆ ಒಂದು ಕಡೆ ಕಟ್ಟಿಡು ನಿನ್ನ ಹೆಣ್ಣಿಗತನವನ್ನು! ಸರಿಯಾಗಿಯೇ ಆಯಿತು. ಮುಖಕ್ಕೆ ತಕ್ಕ ಹಾಗೆ ಇತ್ತು ಜೋಡು. ನಾಯಿಗೆ ಸರಿಯಾದ ದೊಣ್ಣೆ. ಸೊ..... ಸರಿಯಾದ

ತರಹ 'ಟ್ರೈಟ್' ಕೊಟ್ಟ ಹಾಗಾಯಿತು. ಇನ್ನು ಮೇಲೆ ಚಾ.ಚೂ ಎನ್ನುವುದಿಲ್ಲ. *ಬರೀಪಾರಿವಾಳವನ್ನು ಮಾತ್ರವೇ ನೋಡಿದ್ದಾರೆ, ಬಲೆಯನ್ನು ನೋಡಿಲ್ಲ. ಈಗ ತಿಳಿದುಕೊಳ್ಳಲಿ. ಹಾವಿನ ಬಾಲ ಮೆಟ್ಟಿದರೆ ಏನಾಗುತ್ತೆ ಎಂತ!"

ಅಂತೂ, ಚರ್ಚೆಗೆ ಅಂತ್ಯವಿಲ್ಲ.

"ಈ ತರಹ ಮಾತಾಡಿದ್ದು ನಮಗೇ ಅವಮಾನ."

"ಓ, ಹೊ, ಹೊ,ಹೊ! ತ್ಸೊ, ತ್ಸೊ ಹಾಗೇನು? ಇದು ಬೈಬಲ್ಲಿನ ಯಾವ ಅಧ್ಯಾಯದಲ್ಲಿದೆ ಬ್ರದರ್? ನೀವೇನು ಬೇಕಾದರೂ ಹೇಳಿ, ನಾನು ಹೇಳುತ್ತೇನೆ, ಪ್ರೊಫೆಸರ್ ಮೈತ್ರಾ ನಿಜವಾಗಿಯೂ ಒಳ್ಳೆಯವರು.

"ಈ ಒಳ್ಳೆಯದರ ವ್ಯಾಖ್ಯಾನವೇನಮ್ಮಾ! ಮನುಷ್ಯ ಒಬ್ಬ ಒಳ್ಳೆ 'ಬುರ್ಜೋವಾ' ತಿಳಿಯಿತೇ? ಖಾಸ್ 'ಬುರ್ಜೋವಾ!' ಅದೂ ಕಾರಿನಲ್ಲಿ ಬೇರೆ ಬರುತ್ತಾನೆ. ಸಂಬಳ ಏನು ದೊಡ್ಡದು ಮಹಾ? ಅದರಲ್ಲಿ ಸಂಸಾರ ನಡೆಸಿ ಗಾಡಿ ಇಟ್ಟುಕೊಳ್ಳುವುದಕ್ಕಾಗುತ್ತದೆಯೇ? ಹೂಂ, ಬೇರೆ ಸಂಪಾದನೆ ಇದೆ ಗೊತ್ತೇ?

"ಅದು ಅವರ ವ್ಯಕ್ತಿಗತವಾದ ವಿಚಾರ, ಆದರೆ ಖಂಡಿತ ಹೇಳುತ್ತೇನೆ. ಅವರಂತೆ ಪಾಠ ಹೇಳಿ ಕೊಡುವಂತವರು ಇನ್ನೊಬ್ಬರಿಲ್ಲ."

"ಎಲ್ಲರೂ ಮತ್ತೆ ಮೋಸಗಾರರು. ಅವರ ಮುಖ್ಯವಾದ ಕೆಲಸ ಪೇಪರ್ ಕರೆಕ್ಷನ್ ಮತ್ತು ಟ್ಯೂಷನ್ ಕ್ಲಾಸು ತೆಗೆದುಕೊಳ್ಳುವುದು ಎರಡನೆಯ ಪಕ್ಷ 'ಸೈಡ್ ಬಿಸಿನೆಸ್'."

"ಆದರೆ ಪ್ರೊಫೆಸರ್ ಮೈತ್ರಾಗೆ......"

"ಅಪ್ಪಾ ಕೆಪಾಸಿಟಿ ಇದ್ದರೆ ತಾನೇ? ಆ ಓದಿಸೋದೊಂದೇ ಅವರ ಕೆಪಾಸಿಟಿಯ ಗಡಿ."

"ಮತ್ತೆ ನಮಗೆ ಬೇಕಾಗಿರುವುದೂ ಅಷ್ಟೇ ತಾನೆ?"

"ಇರಬಹುದು. ಸ್ವಲ್ಪ ಪಾಠ ಹೇಳಿಕೊಡಲು ಬರುತ್ತೆ ಅಂತ ಪ್ರಪಂಚವನ್ನೇ ತೃಣವಾಗಿ ಭಾವಿಸುವುದು ಇಷ್ಟ ಬಂದಂತೆ ಅನ್ನುವುದೇ ? ಗೆಟ್-ಅವುಟ್ ಅನ್ನುವುದೇ? ಯಾಕಷ್ಟು ಜೋರು? ಆಯಿತು. ಚೆನ್ನಾಗಿ 'ಟ್ರೈಟ್' ಕೊಟ್ಟಾಯಿತು. ಇನ್ನೇನೂ ಹೇಳಬೇಕಾದ್ದಿಲ್ಲ. ತಲೆ ಬಗ್ಗಿಸಿಕೊಂಡು ಬಾ, ಹೋಗು, ಅಷ್ಟೇ. ಅದೆಲ್ಲಾ ಮಧ್ಯಕಾಲದ ಜಮೀನುದಾರರ ಮನೋಭಾವ ಇಟ್ಟುಕೊಂಡು ಹಲಿ ಮೇಯಿಸಲು ಬರುವುದು ಸಾಧ್ಯವಿಲ್ಲ. ಸ್ಟೂಡೆಂಟರು ನಿನ್ನ ಖಾಸ್ ತಾಲ್ಲೂಕಿನ ಪ್ರಜೆಗಳಲ್ಲ. ಪ್ರತಿಪಕ್ಷ ವಾದಿಸುತ್ತೆ, "ನೀವುಗಳು ಬಹಳ ಹೆಚ್ಚಿಸುತ್ತಿದ್ದೀರಿ. ಅವರು ಅಂತಹವರೇ ಅಲ್ಲ."

"ಏನು, ಏನು ಮಹಾರಾಯರೇ? ಮೈತ್ರಾ ಏನಾದರೂ ನಿಮ್ಮನ್ನು ವಕೀಲರನ್ನಾಗಿ ನೇಮಿಸಿಕೊಂಡಿದ್ದಾರೆಯೇ? ಅವರು ಯಾರು, ಎಂತಹವರು ಅನ್ನುವುದು ನಿಮಗಿಂತ

---

* ಒಂದು ಬೆಂಗಾಲಿ ನಾಣ್ನುಡಿ.

ಚೆನ್ನಾಗಿ ನಾನು ಬಲ್ಲೆ. ಒಂದು ದಿನ ಈ ಶಿವೇಂದು ಕೈಯಿಂದ ಒಂದು ಪುಸ್ತಕ ಕಸಿದುಕೊಂಡು ಹರಿದು ಹಾಕಿದ್ದ ಗೊತ್ತೇ?"

"ಹರಿದುಬಿಟ್ಟರೇ? ಯಾಕೇ? ಎಂತಹ ಪುಸ್ತಕ?"

"ಹೆಸರು ಎಂಥಾದ್ದೋ ಜ್ಞಾಪಕ ಇಲ್ಲ. ಒಂದು ಸ್ವಲ್ಪ 'ಇದರ' ವಿಷಯ ಅಷ್ಟೆ-ಸಿಂಪಲ್ ಆಗಿ ಹೇಳುತ್ತೇನೆ. ಒಂದು ಖಾರ-ಸಾರವಾದ ಸೆಕ್ಸ್ ಪುಸ್ತಕ. ಎಷ್ಟೋ ಕಷ್ಟಪಟ್ಟು ಸಂಗ್ರಹಿಸಿದ್ದ ಪಾಪ-ಮತ್ತೆ ಅದನ್ನು ಕ್ಲಾಸಿಗೆ ತಂದು ಪ್ರೊಫೆಸರ ಮುಂದೆ ತಂದು ಓದದಿದ್ದರೆ ಆಗುತ್ತಿರಲಿಲ್ಲವೇ?" ಹಠಾತ್ತನೆ ಆ ಪಂಗಡದಲ್ಲಿ ಒಂದು ದೊಡ್ಡದಾದ ಹಾಸ್ಯಧ್ವನಿ ಏಳುತ್ತೇ, ಧ್ವನಿಗಳು ಮೊಳಗುತ್ತೆ.

"ಸದಾಚಾರ-ಸಮಿತಿಯಲ್ಲಿ ಹೋಗಿ ಹೆಸರು ಬರೆಸಿಕೊಳ್ಳಿಯಪ್ಪಾ, ಹೋಗಿ ಅದೇ ನಿಮಗೆ ಸರಿಯಾದ ಜಾಗ-"

"ನೀವುಗಳು ಹಾಸ್ಯ ಮಾಡಿ, ಆದರೂ ಹೇಳುತ್ತೇನೆ, ಹೀಗೆ ಅಧ್ಯಾಪಕರನ್ನು ಅವಮಾನ ಮಾಡಿದರೆ ನಮಗೇನೂ ಮರ್ಯಾದೆ ಇಲ್ಲ. ನಮ್ಮ ತಾಯಿ-ತಂದೆಯರನ್ನೇ ನಾವು ಅವಮಾನಗೊಳಿಸಿದರೆ ಅದು ನಮಗೇ ಅವಮರ್ಯಾದೆ"- ಮಾತು ಮುಗಿಯುವುದರೊಳಗೆ ನರಿಕೂಗುಗಳಿಂದ ಆ ಮಾತಾಡುತ್ತಿದ್ದ ಧ್ವನಿ ಮುಳುಗಿಹೋಗುತ್ತೆ. ಇವರೆಲ್ಲಾ ನರಿ ಕೂಗು ಕೂಗಿ ಟೇಬಲ್ಲು ಗುದ್ದಿ, ನಗುತ್ತಾ ಹೇಳುತ್ತಾರೆ, "ತ್ಸೂ, ತ್ಸೂ, ಪಾಪ, ದೇಶದಲ್ಲಿ ಎಲ್ಲೂ ಧರ್ಮೋಪದೇಶಕರ ಪೋಸ್ಟ್ ಖಾಲಿ ಇಲ್ಲವೇ? ಹೋಗಿ, ಹೋಗಿ. ಅದೇ ನಿಮಗೆ ಸರಿಯಾದ ಜಾಗ."

ಆಮೇಲೆ ನಾನಾ ಮೃಗಗಳ ಕೂಗುಗಳನ್ನು ಅನುಕರಿಸಿ ಕೂಗಿ, ತಮ್ಮ ಮಾತುಗಾರಿಕೆಯನ್ನು ತಾವೇ ಮೆಚ್ಚಿಕೊಳ್ಳುತ್ತಾ ಘಟ್ಟಿಯಾಗಿ ಕೂಗಾಡಲು ಪ್ರಾರಂಭಿಸುತ್ತಾರೆ.

ಆಗ ಎದುರು ಪಕ್ಷ ಹೊರಗೆ ಹೊರಟು ಹೋಗುತ್ತೆ. ಇನ್ನೇನು ಮಾಡುತ್ತಾರೆ? ಯಾವಾಗಲೂ ಅಷ್ಟೆ. ಬರ್ಬರತೆಯ ಆರ್ಭಟನೆಯ ಮುಂದೆ ಸಭ್ಯತೆ, ನಮ್ರತೆ ಅದುಮಿ ಹೋಗುತ್ತೆ. ಗದ್ದಲದ ಮುಂದೆ ಮೃದುತ್ವ ಮುಳುಗಿಹೋಗುತ್ತೆ.

ಅವರುಗಳು ಹೊರಟುಹೋದುದನ್ನು ನೋಡಿ ಇವರುಗಳು ಇನ್ನೂ ಒಂದಷ್ಟು ಗೊಂದಲವೆಬ್ಬಿಸಿದರು.

"ಈವತ್ತು ಕಾಲೇಜಿಗೇ ಬಂದಿಲ್ಲ. ಅವಮಾನದಿಂದ ಮನೆಯಲ್ಲಿ ಸತ್ತು ಬಿದ್ದಿದ್ದರೂ ಬಿದ್ದಿರಬಹುದು. ಎಷ್ಟು ದಿನ ಬರದೇ ಇರುತ್ತೇ? ಇಲ್ಲೇ ತಾನೇ ಇರೋದು ಅನ್ನ-ನೀರು? ಮಾಡಿದ ಕೆಲಸ ಸರಿಯಿಲ್ಲವಂತೆ! ಹೂಂ, ಸರಿಯಾಗೇ ಆಯಿತು. ಒಳ್ಳೆಯದಾಯಿತು. ಬಹಳ ಒಳ್ಳೆಯದಾಯಿತು. ಆ ಒಬ್ಬನಿಗೆ ಕೊಟ್ಟ 'ಟ್ರೈಟ್'ನಿಂದ ಈಗ ಎಲ್ಲರೂ ಸ್ತಂಭಿತರಾಗಿರುತ್ತಾರೆ. ಇದು ಶಾಯಿಸ್ತಾ ಖಾನನ ಆಳಿಗೆಯ ಕಾಲ. ಹೂಂ, ತಿಳಿದುಕೊಳ್ಳಲಿ." ಇನ್ನೂ ಏನೇನೋ ಹೀಗೆಯೇ ಮಾತುಗಳು. ಯಾವನು ಎಷ್ಟು ಒರಟಾಗಿ, ಅಶ್ಲೀಲವಾಗಿ

ಮಾತಾಡಬಲ್ಲನೋ ಅಷ್ಟೇ ಅವನ ಎದೆಗಾರಿಕೆ ಎನ್ನುವಂತಿದೆ ಅವರ ಮಾತು ಜೊತೆಗೆ ಅಶ್ಲೀಲ ನಗು.

ಆದರೆ ಇವರೆಲ್ಲಾ ಒಂದು ವಿಶಿಷ್ಟವಾದ ಕಾಲೇಜಿನ ವಿದ್ಯಾರ್ಥಿಗಳೇ! ವಿದ್ಯಾಭ್ಯಾಸದಲ್ಲಿ ಮಟ್ಟವಾಗಿಲ್ಲದೆಯೂ ಇರಬಹುದು. ಶಿಲ್ಪಕಲೆ, ಸಾಹಿತ್ಯ, ಸಮಾಜ ನೀತಿ, ರಾಜನೀತಿ ಮುಂತಾದ ವಿಷಯವಾಗಿ ಅವರುಗಳ ಚರ್ಚೆಯನ್ನು ಕೇಳಿದರೆ, ಎಷ್ಟು ಬುದ್ಧಿವಂತರು. ಚಿಂತನೆಯುಳ್ಳ ಸರ್ವಜ್ಞರು ಎಂದು ತಿಳಿದುಕೊಳ್ಳಬೇಕು! ಆದರೆ ಯಾವುದಾದರೊಂದು ಕಾರಣದಿಂದ ಮೇಲಿನ ಈ ಮುಖವಾಡ ಕಳಚಿಬಿದ್ದರೆ, ಹೊರಬೀಳುತ್ತೆ. ಆದಿಕಾಲದ ಮನುಷ್ಯನ ಬರ್ಬರತೆ! ಯಾವ ಬರ್ಬರತೆ. ಶ್ರದ್ಧೆ, ಸನ್ಮಾನ, ಸ್ನೇಹ, ಮಮತೆ, ಒಳ್ಳೆಯ ನಡೆವಳಿಕೆ ಎಲ್ಲವನ್ನೂ ಹಿಸುಕಿ, ಅಪ್ಪಳಿಸಿ ಒಂದು ಪಶುತ್ವದ ಸುಖದಿಂದ ಉಲ್ಲಾಸಗೊಳ್ಳುತ್ತೋ ಅಂತಹುದು!

ಯಾರಿಗೆ ಗೊತ್ತು, ಇವರುಗಳು ನಿಜವಾಗಿಯೂ ಮೂಲದಿಂದ ಈ ತರಹದ ಅಸಭ್ಯ ಜನರೇ ಆಗಿದ್ದಾರೆಯೋ, ಅಥವಾ ಇದು ಈ ಯುಗದ ಫ್ಯಾಷನ್ನೋ. ಇವರು ಯಾವುದಕ್ಕೂ ಬೆಲೆ ಕೊಡುವುದಿಲ್ಲ. ಈ ಫ್ಯಾಷನ್ನಿಗಾಗಿಯೇ ತಮ್ಮನ್ನು ನಿರ್ಪ್ರಾಣರನ್ನಾಗಿ ಮಾಡಿಕೊಂಡು ಉನ್ಮಾದ-ನೃತ್ಯ ಮಾಡುತ್ತಿರುತ್ತಾರೆ. ತಾವುಗಳೇ ಬಹಳ ಗಟ್ಟಿಗರೆಂದು ತಿಳಿದುಕೊಂಡಿರುತ್ತಾರೆ. ಈ ಯುಗವು ಇವರನ್ನು ನೋಡಿ ನಗುತ್ತಿರುವುದು ಇವರಿಗೆ ಗೊತ್ತೇ ಇಲ್ಲ. ಇವರಿಗೆ ಗೊತ್ತಿಲ್ಲ ಈ ಯುಗದ ಮೊದಲ ಬಲಿಪಶುಗಳು ತಾವೇ ಎಂಬುದು! ಯುಗವು ಇವರ ಜೀವನವನ್ನೇ ಕಾಲಿಂದ ಒದ್ದು ಆಡುತ್ತಿದೆ! ಇವರಲ್ಲಿರುವ, ಒಳ್ಳೆಯತನ, ಸುಂದರವಾದದ್ದು ಎಲ್ಲವನ್ನೂ, ನಿಃಸಾರವಾಗಿ ಹಿಂಡಿ, ಆ ಒಣಗಿದ ತೊಗಲಲ್ಲಿ ಜಯಭೇರಿಯನ್ನು ಬಾರಿಸಲು ತಯಾರಾಗಿದೆ ಎಂಬುದು ಇವರಿಗೆ ಗೊತ್ತಿಲ್ಲ!

ಯುಗಮಹಿಮೆ ಅವರ ಬಾಯಿಂದ ಹೊಲಸು ಮಾತನ್ನು ಹೊರಡಿಸುತ್ತಿದೆ. ಹೊಲಸು ಚಿಂತನೆ ಬರಿಸುತ್ತಿದೆ. ಅವರಲ್ಲಿರುವ ಮೃದುತ್ವವೆಲ್ಲವನ್ನೂ ಕಿತ್ತುಕೊಂಡು ಅವರನ್ನು ನೀರಸಗೊಳಿಸುತ್ತಿದೆ. ಅದಕ್ಕೇ ಅವರುಗಳು ಮರ್ಯಾದೆ, ನಮ್ರತೆ, ಶೀಲ ಎಲ್ಲಾ ಶಬ್ದಗಳನ್ನೂ 'ಓಲ್ಡ್ ಮಾಡಲ್' ಎಂದು ಹೀಯಾಳಿಸಿ ನಗುತ್ತಾರೆ. ಪ್ರೇಮ, ಪಾಶ ಈ ಶಬ್ದಗಳನ್ನು ಹೀಯಾಳಿಸುತ್ತಾರೆ. ಗುರು ಮತ್ತು ಗೌರವಕ್ಕೆ ಪಾತ್ರರಾದವರನ್ನು 'ಟೈಟ್' ಕೊಟ್ಟು ಹಿರಿಮೆ ಪಡುತ್ತಾರೆ. ಅದೇ ನಾಗರಿಕತೆಯೆಂದು ತಿಳಿದಿದ್ದಾರೆ. ಮನುಷ್ಯನೆಂಬ ಈ ಜೀವ ಯುಗಾಂತರದಿಂದ ಗಳಿಸಿರುವ ಸಭ್ಯತೆಯ, ರುಚಿಯ, ಸಂಸ್ಕೃತಿಯ ಸಾಧನೆಯನ್ನು ಅಳಿಸಿ, ಧ್ವಂಸ ಮಾಡುವುದೇ ನಾಗರಿಕತೆಯ ನಿದರ್ಶನವೆಂದು ತಿಳಿದಿದ್ದಾರೆ. ಆದಿಕಾಲದಿಂದ ಬಂದಿರುವ ಆಚರಣೆಯನ್ನು ಇನ್ನಿಲ್ಲವಾಗಿ ಮಾಡುವುದೇ ಆಧುನಿಕ ನಡೆವಳಿಕೆಯೆಂದು ತಿಳಿದಿದ್ದಾರೆ. ಧೈರ್ಯವೂ, ಪುಂಡತನವೂ ಒಂದೇ ಅಲ್ಲ ಎಂಬುದನ್ನು ಯೋಚಿಸಿಯೂ ನೋಡುವುದಿಲ್ಲ. ಅಧ್ಯಾಪಕರ ವಿಷಯ ಹಳಸಿದರೆ, ಮಾಡರ್ನ್ ಕವಿತೆ ಅಥವಾ ಆರ್ಟನ್ನು

ಅಳೆದು ವಿವಾದಿಸುತ್ತಾರೆ. ಮಾತು ಕೇಳಿದರೆ ಒಬ್ಬೊಬ್ಬರೂ 'ಮಾಡರ್ನ್‌ಆರ್ಟ್'ಯ ರಹಸ್ಯವನ್ನೆಲ್ಲಾ ಅರೆದು ಕುಡಿದವರಂತೆ ತೋರುತ್ತೆ.

ಚರ್ಚೆ ಅಷ್ಟು ತೀವ್ರವಾಗಿರುತ್ತೆ.

ಎಲ್ಲರೂ 'ಇಂತಹ'ವರೇಯೇ?

ಇಲ್ಲ. ಎಲ್ಲರೂ ಇಂತಹವರಲ್ಲ.

ಆ 'ಇಂತಹ'ವರೇ ಕಡಿಮೆ ಸಂಖ್ಯೆಯವರಾಗಿರಬಹುದು. ಆದರೂ ಇವರುಗಳೇ ಯುವ ಸಮಾಜದ ಪ್ರತಿನಿಧಿಗಳೆಂಬಂತೆ ಬಡಬಡಾಯಿಸುತ್ತಾರೆ. ಇವರುಗಳ ಕೂಗಾಟದಲ್ಲಿ ಸಂಸ್ಕೃತಿಯ ಕ್ಷೀಣಸ್ವರ ಅದುಮಿಹೋಗುತ್ತಿದೆ. ಭಯವಾಗುತ್ತದೆ, ಇವರುಗಳೇ ಸಂಖ್ಯೆಯಲ್ಲಿ ಹೆಚ್ಚಿ ಬಿಡುತ್ತಾರೋ ಎಂದು! ಕಾರಣ... ತೀವ್ರವಾದದಲ್ಲಿ ಒಂದು ಆಕರ್ಷಣೆ ಇದೆ. ಬಲದ, ಮತ್ತಿನ ಪ್ರಭಾವವಿದೆ ಮತ್ತು ಒಳ್ಳೆಯ ಹುಡುಗ ಎಂಬ ಹೆಸರಿನ ಧಿಕ್ಕಾರವಾಣಿ ಬಹಳ ಭಯಂಕರವಾದುದು. ಅದು ಒಳ್ಳೆಯ ಹುಡುಗರನ್ನು ನಾಚುವಂತೆ ಮಾಡಿ ಎಲ್ಲೋ ಎಳೆದುಕೊಂಡು ಹೋಗುತ್ತೆ.

* * *

ದಿವಾಕರ ಒಳ್ಳೆಯ ಹುಡುಗನಲ್ಲ. ಇನ್ನೂ ಪಶುತ್ವಕ್ಕೆ ಉದಾಹರಣೆಯಂತೆ ಜೀವಂತ ಮೂರ್ತಿಯಾಗಿದ್ದಾನೆ. ಅದಕ್ಕೇ ಅವನ ಪ್ರೇಮ, ಪ್ರೀತಿ, ಆಸಕ್ತಿ ಇಷ್ಟು ಉಗ್ರವಾಗಿದೆ, ಅಸಹನೆಯಿಂದ ಕೂಡಿದೆ. ಅದರಲ್ಲಿ ಮೃದುತ್ವಕ್ಕೆ ಆಸ್ಪದವೇ ಇಲ್ಲ.

ಆದ್ದರಿಂದಲೇ, ಮೀನಾಕ್ಷಿ ಮನೆಯೊಳಗೆ ಹೋದ ಮೇಲೆ ಆ ಕಡೆಯೇ ಕ್ರೂರದೃಷ್ಟಿಯಿಂದ ದಿವಾಕರ ನೋಡುತ್ತಿರುತ್ತಾನೆ. ಅವಳ ಆ ನಿಶ್ಚಿಂತೆಯ ಆಶ್ರಯವನ್ನು, ಮನೆಯ ಸೌಖ್ಯವನ್ನು ಆರಾಮವನ್ನು ತುಳಿದು ಚೂರು ಚೂರಾಗಿ ಮಾಡಿಬಿಟ್ಟರೆಯೇ ಅವನ ಮನಸ್ಸಿನ ಜ್ವಾಲೆ ಶಾಂತವಾಗುವುದು.

ಏಕೆಂದರೆ, ದಿವಾಕರನಿಗೆ ಅದೆಲ್ಲಾ ಇಲ್ಲ.

ಅವನಿಗೆ ಗೊತ್ತು. ಇಲ್ಲಿಂದ ಹಿಂದಿರುಗಿದೊಡನೆ, ಜನ ತುಂಬಿ ಹರಿಯುತ್ತಿರುವ ಬಸ್ಸನ್ನು ಹಿಡಿದು ತಾನು ಹೋಗಬೇಕಾದ ಸ್ಥಳಕ್ಕೆ ಬಂದು, ಯಾವ ದೊಡ್ಡ ಗೇಟಿನ ಮುಂದೆ ನಿಲ್ಲುತ್ತಾನೋ ಆ ಮನೆಯಲ್ಲಿ ಅವನಿಗೆ ಯಾವ ಅಧಿಕಾರವೂ ಇಲ್ಲ.

ತನ್ನ ಹಳ್ಳಿಯ, ಬಹಳವೇ ದೂರದ ಒಬ್ಬ ಮಾವನ ಆಶ್ರಯದಲ್ಲಿ ಅವನ ವಾಸ. ಈ ಅರಮನೆಯಂತಹ ಮನೆಯ ಕೆಳಗಿನ ಭಾಗದ ಒಂದು ಕತ್ತಲಾದ ಕೋಣೆ ಅವನ ವಾಸಸ್ಥಳ. ಆ ಕೋಣೆಯ ಅರ್ಧಭಾಗ ಆ ಮನೆಯಲ್ಲಿ ಕೆಲಸ ಮಾಡುವ ನವೀನನಿಗೆ ಸೇರಿದ್ದು. ಆ ಕೋಣೆ, ಅಡಿಗೆಯ ಮನೆ, ಉಗ್ರಾಣ, ಇದ್ದಲು-ಸೌದೆ ಇಡುವ ಕೋಣೆಗಳ ಮಧ್ಯದಲ್ಲಿ ಇರುವಂತಹದ್ದು. ಗಾಳಿ-ಬೆಳಕು ಬರಲು ಇರುವುದು, ಗಲ್ಲಿಯ ಕಡೆಗಿರುವ ಒಂದು ಕಿಟಕಿ. ಅದರ ಮುಂದೆಯೇ ಇದೆ ನವೀನ ಮಲಗುವ ಬೆಂಚು, ಇನ್ನೊಂದು ಕಡೆ ಕತ್ತಲು ಕವಿದ ಗೋಡೆಯ ಕಡೆ ದಿವಾಕರನ ಬೆಂಚು ಇದೆ.

ಬೆಂಚಿನ ಪಕ್ಕದಲ್ಲೇ ಗೋಡೆಯಲ್ಲಿ ಮೊಳೆಗೆ ಕಟ್ಟಿದ ಹಗ್ಗದ ಮೇಲೆ ಅವನ ಷರಾಯಿ. ಬುಷ್-ಷರ್ಟ್ ಲುಂಗಿ, ಬನಿಯನ್ನು, ಟವಲ್ಲು ಇದೆ. ಇನ್ನೊಂದು ಕಡೆ ನವೀನನ ಪೈಜಾಮಾ, ಷರ್ಟು, ಪಂಚೆ, ಟವಲ್ಲು ಇದೆ. ನವೀನನ ಕಡೆಯ ಗೋಡೆಯ ಬೀರೋವಿನಲ್ಲಿ ಗುಲಾಬಿ ಹೂವು ಹಾಕಿದ ಟಿನ್ನಿನ ಟ್ರಂಕು, ಕ್ಯಾಲೆಂಡರುಗಳಿಂದ ತೆಗೆದಿಟ್ಟ ನಾನಾ ದೇವ-ದೇವಿಯ ಮತ್ತು ಸಿನಿಮಾ ತಾರೆಯರ ಫೋಟೋಗಳು. ಒಂದು ದೊಡ್ಡ ಕನ್ನಡಿ, ಪ್ಲಾಸ್ಟಿಕ್ ಬಾಚಣಿಗೆ, ಕುಂತಲ ಬಹಾರ್ ಎಣ್ಣೆಯ ಸೀಸೆ, ಮಲಯ ಸೋಪು, ರೇಣುಕ ಪೌಡರ್ ಮತ್ತು ಒಂದು ಕಟ್ಟು ಬೇವಿನ ಕಡ್ಡಿ ಇದೆ.

ದಿವಾಕರನ ತಲೆದಿಂಬಿನ ಕಡೆಯ ಗೋಡೆಯ ಬೀರುವಿನಲ್ಲಿ ಅವನ ಆರ್ಟಿಫಿಷಿಯಲ್ ತೊಗಲಿನ ಸೂಟ್‌ಕೇಸ್ ಹಿಡಿಸುವುದಿಲ್ಲವಾದ್ದರಿಂದ ಅದನ್ನು ಬೆಂಚಿನ ಕೆಳಗೆ ತೂರಿಸಿಟ್ಟಿದೆ. ಅದನ್ನು ಆಗಾಗ ತೆಗೆದು ನೋಡಿ, ಏನೂ ಕಳುವು ಹೋಗಿಲ್ಲವಷ್ಟೆ ಎಂದು ಖಚಿತ ಮಾಡಿಕೊಳ್ಳುತ್ತಾನೆ. ಬೀರುವಿನಲ್ಲಿ, ನವೀನನ ಸಾಮಾನಿಗಿಂತಲೂ ಅಗ್ಗವಾದ, ಸೋಪು, ಎಣ್ಣೆ, ಕನ್ನಡಿ, ಬಾಚಣಿಗೆ ಟೂತ್-ಪೇಸ್ಟ್, ಬ್ರಷ್ ಮತ್ತು ಷೇವಿಂಗ್-ಸೆಟ್ ಇದೆ. ಇದೆಲ್ಲದರ ಪಕ್ಕದಲ್ಲೇ ಅವನ ಪಠ್ಯಪುಸ್ತಕಗಳು, ನೋಟ್‌ಬುಕ್ಕುಗಳೂ ಪೆನ್ನೂ ಇದೆ. ವ್ಯತ್ಯಾಸ ಇಷ್ಟೆ

ದಿವಾಕರ ಈಗ ಹೋಗಿ ತಾನು ಹಾಕಿಕೊಂಡಿದ್ದ ಬಟ್ಟೆಗಳನ್ನು ತೆಗೆದು, ಲುಂಗಿ ಉಟ್ಟುಕೊಂಡು ತೆಗೆದ ಬಟ್ಟೆಗಳನ್ನು ಜೋಪಾನವಾಗಿ ಮಡಿಸಿಟ್ಟು, ಬೀಸಣಿಗೆಯನ್ನು ತೆಗೆದು ಬೀಸಿಕೊಂಡು ಸ್ವಲ್ಪ ಬೆವರು ಆರಿಸಿಕೊಂಡ. ಅಂಗಳದಲ್ಲಿದ್ದ ತೊಟ್ಟಿಯಲ್ಲಿ ಬಗ್ಗಿ ನೋಡುತ್ತಾನೆ. ಅಲ್ಲಿ ಸ್ವಲ್ಪ ನೀರಿದ್ದರೆ ಮುಖ ಸ್ವಲ್ಪ ಅರಳುತ್ತೆ. ವ್ಯತಿರಿಕ್ತವಾಗಿದ್ದರೆ ಮುದುಡಿದ್ದ ಮುಖ ಇನ್ನೂ ಗಂಟಾಗುತ್ತೆ. ಮಗ್ಗನ್ನು ತೆಗೆದುಕೊಂಡು ಕುಟ್ಟಿ, ಕುಟ್ಟಿ ನೀರು ತೆಗೆದು ಹೇಗೋ ಸ್ನಾನವನ್ನು ಮುಗಿಸಿ ಬಂದು, ತನ್ನ ಮೋಟಾದ ತಲೆಕೂದಲನ್ನು ಒದರಿ ಅವನು ತಲೆ ಬಾಚಿಕೊಳ್ಳುವಾಗಲೂ ಮುಖದ ಗಂಟು ಹಾಗೆಯೇ ಇರುತ್ತೆ. ಇನ್ನೂ ಸ್ವಲ್ಪ ಜಾಸ್ತಿಯೇ ಆಗುತ್ತೆ, ಆ ಮನೆಯ ಎರಡನೆಯ ಮತ್ತು ಮೂರನೆಯ ಮಹಡಿಯ ಜಾಜ್ವಲ್ಯಮಾನವಾದ ಕೋಣೆ, ವರಾಂಡಾಗಳನ್ನು ನೋಡಿದರೆ, ನೆನೆಸಿಕೊಂಡರೆ!

ಆ ಮಹಡಿಯ ಕೋಣೆಯನ್ನು ನೋಡುವ ಅವಕಾಶ ಅವನಿಗೆ ಕೆಲವು ಬಾರಿ ಸಿಕ್ಕಿದೆ. ಸೋದರತ್ತೆ, ಯಾವಾಗಲಾದರೂ ಬಹಳ 'ಕಾನ್‌ಫಿಡೆನ್‌ಷಿಯಲ್' ಕೆಲಸಗಳಾಗಬೇಕಾದರೆ "ಆ ನವೀನನಿಗೆ ಇದೆಲ್ಲಾ ಬರುವುದಿಲ್ಲ. ನೀನು ಸ್ವಲ್ಪ ಮಾಡಪ್ಪಾ" ಎಂದು ಹೇಳುತ್ತಾರೆ. "ಮಾಡೋ" ಎಂದು ಅವರು ಯಾವಾಗಲೂ ಹೇಳುವುದಿಲ್ಲ. ಆತ್ಮೀಯತೆಯನ್ನು ಬೆಳೆಸಿ ಸದರವನ್ನು ತೋರುವ ಅಭಿಪ್ರಾಯ ಅವರಿಗೆ ಇರುವಂತೆಯೂ ತೋರುವುದಿಲ್ಲ. ದಿವಾಕರ ಹೋಗಿ ಕೋಣೆಯ ಬಾಗಿಲಲ್ಲಿ ನಿಂತುಕೊಳ್ಳುತ್ತಾನೆ. ಅತ್ತೆಗೆ ಏನಾದರೂ ಸಾಮಾನು ಬೇಕಾದರೆ ಅದನ್ನು ತರಲು ದುಡ್ಡು ಕೊಡುತ್ತಾರೆ, ಅಥವಾ

ಎಲ್ಲಿಗಾದರೂ ಏನಾದರೂ ಹೇಳಿ ಕಳುಹಿಸಬೇಕಾದರೆ, ಅಥವಾ ತಿಳಿದು ಬರಬೇಕಾದರೆ ಅಡ್ರಸ್ಸು ಕೊಟ್ಟು ಬಸ್ಸಿಗೆ ಚಾರ್ಜ್ ಕೊಡುತ್ತಾರೆ.

ಈ ತರಹದ ಕೆಲಸಗಳು ಅವನಿಗೆ ಪರೀಕ್ಷೆ ಇರುವ ಸಮಯದಲ್ಲೂ ಬರಬಹುದು. ಆದರೆ ಹಾಗೆಂದು ಹೇಳಲು ಅವನಿಗೆ ಧೈರ್ಯವಿರುವುದಿಲ್ಲ. ಕಾರಣ, ಈ ಅತ್ತೆಯ ದಯೆಯಿಂದಲೇ ಈ ನವೀನನ ಕೋಣೆಯ ಅರ್ಧ ಜಾಗವೂ ಮತ್ತು ಎರಡು ಹೊತ್ತಿನ ನಿಶ್ಚಿಂತೆಯ ಊಟ–ತಿಂಡಿಯೂ ಸಿಗುತ್ತಿರುವುದು!

ಮೊದಲು ಈ ದೂರದ ಸಂಬಂಧದ ಮಾವನ ಮೇಲಿನ ಭರವಸೆಯೊಂದನ್ನೇ ಬೆಂಬಲವಾಗಿಟ್ಟುಕೊಂಡು ಅವನು ಊರಿನಿಂದ ಹೊರಟು ಬಂದಾಗ ಮಾವ ಪ್ರಕಾಶ್ ಮಂಡಲ್ ಮನೆ ಬಾಗಿಲಲ್ಲೇ ನಿಂತು ಅವನನ್ನು ಓಡಿಸುವುದರಲ್ಲಿದ್ದರು, "ಇಲ್ಲಿ ಎಲ್ಲಿ ಜಾಗ ಇದೆ?" ಎಂದು. ಆಗ ಈ ಅತ್ತೆಯೇ ಸ್ವಲ್ಪ ಕನಿಕರಪಟ್ಟು ಹೇಳಿದ್ದರು. "ಅವನೇನು ನಿಮ್ಮ ಉಪ್ಪರಿಗೆಯ ಮೇಲೆ ಹತ್ತಬೇಕೆನ್ನುತ್ತಾನೆಯೇ, ನವೀನನ ರೂಮಿನಲ್ಲೇ ಒಂದು ಬೆಂಚಿನ ಮೇಲೆ ಬಿದ್ದುಕೊಂಡಿರುತ್ತಾನೆ. ಇರೋದಕ್ಕೆ ಜಾಗವಿಲ್ಲದೆ ಪಾಪ ಬಡವರ ಹುಡುಗನಿಗೆ ಓದಲಾಗದೆ ಹೋಗುತ್ತೆ..."

ಪ್ರಕಾಶ್ ಮಂಡಲ್ ಸ್ವಲ್ಪ ಬೇಜಾರು ಪಟ್ಟುಕೊಂಡಿದ್ದರು– "ಈ ಬಳಗದ ಬಂಧುಗಳೆಲ್ಲಾ ವಿಷದ ಹಾವಿನಂತೆ. ಹಾಲು ಹಣ್ಣು ಕೊಟ್ಟು ಸಾಕಿದೆಯೋ ಸತ್ತೆ!"

ಹಾಗೂ ಅತ್ತೆ ದಯೆಯಿಂದ ಹೇಳಿದ್ದರು–ಹಾಲು–ಹಣ್ಣು ಬೇಕು ಅಂತ ಯಾರು ಕೇಳುತ್ತಾರೆ ಅಂದರೆ? ಸಿಬ್ಬಂದಿಗಳಿಗಾಗಿ ಆಗುವಂತಹ ಎರಡು ರೊಟ್ಟಿ–ಬೆಲ್ಲ. ಬೇಳೆ–ಅನ್ನ ತಿಂದು ಕೊಂಡು ಬಿದ್ದಿರುತ್ತೆ. ತನ್ನ ಕಾಲಿನ ಮೇಲೆ ತಾನು ನಿಂತುಕೊಳ್ಳುತ್ತೆ. ನೀವು ಬೇಡ ಅನ್ನಬೇಡಿ. ಒಂದು ಹೊಟ್ಟೆ ತಾನೆ. ಮಹಾಲಕ್ಷ್ಮಿಯ ಕಟಾಕ್ಷದಿಂದ ನಿಮ್ಮ ಮನೆಯಲ್ಲಿ ಯಾವುದಕ್ಕೂ ಕಡಿಮೆ ಇಲ್ಲವಲ್ಲಾ."

ಆಗತಾನೇ ಸ್ಕೂಲ್ ಫೈನಲ್ ಪಾಸು ಮಾಡಿ. ದೊಡ್ಡ ಆಸೆಯನ್ನು ಮಾತ್ರ ಭರವಸೆಯಾಗಿಟ್ಟುಕೊಂಡು. ಕಲ್ಕತ್ತಾದಲ್ಲಿ ಓದಬೇಕು ಎಂದು ಬಂದುಬಿಟ್ಟಿದ್ದ ದಿವಾಕರನಿಗೆ ಈ ಕನಿಕರದ ಮಾತುಗಳನ್ನಾಡಿದ ಹೆಂಗಸು ಸರ್ವಾಲಂಕಾರಭೂಷಿತೆಯಾದ ದೇವಿಯಂತೆಯೇ ಕಂಡಿದ್ದರು. ಏಕೆಂದರೆ ಅವನಿಗೆ ಹಾಸ್ಟಲ್‌ನಲ್ಲಿದ್ದು ಓದುವಷ್ಟು ಧನ ಸಹಾಯವಿರಲಿಲ್ಲ. ಹಾಳಾಗಿಹೋಗು ಎಂದು ಅಣ್ಣಂದಿರು ಫೀಸಿನ ಖರ್ಚನ್ನು ಮಾತ್ರ ಕಳುಹಿಸಲು ಒಪ್ಪಿದ್ದರು. ಈ ಅತ್ತೆಯ ಕರುಣೆಯಿಂದ. ಇರುವುದಕ್ಕೆ ಜಾಗ ಮತ್ತು ಹೊಟ್ಟೆಯ ಪಾಡಿನ ಏರ್ಪಾಟೂ ಆಗಿಹೋಯಿತು.

ಎಲ್ಲಿಂದಲೋ 'ಲೊಡಕಾಸಾ'ದ ಅಗಲವಾದ ಒಂದು ಬೆಂಚು ಬಂತು. ಯಜಮಾನಿಯ ಮುಖ್ಯದಾಸಿಯಾದ ಅಬಲಾ ಬಂದು ಎಲ್ಲಾ ಏರ್ಪಾಟನ್ನೂ ಮಾಡಿಬಿಟ್ಟು ಹೋದಳು. "ಅವರು ಓದುವವರು. ಕಿಟಕಿಯ ಕಡೆ ಅವರ ಜಾಗ ಇರಲಿ" ಎಂದು ತನ್ನ ಅಭಿಪ್ರಾಯವನ್ನು ಸೂಚಿಸಿದ್ದಳು. ಆದರೆ ನವೀನನ ಹಟದಿಂದ ಅದು ನಡೆಯಲಿಲ್ಲ. ಗೋಡೆ

ಕಡೆಗೇ ದಿವಾಕರನ ಜಾಗ ಆಯಿತು. ಪ್ರಕಾಶ್ ಮಂಡಲ್‌ರವರ ಅಂಗಡಿಯ ಸಿಬ್ಬಂದಿಗಳಿಗಾಗಿ ಆಗುವ ಅಡಿಗೆಯಲ್ಲಿ ಬೇಳೆ-ಅನ್ನ, ಬೆಲ್ಲ-ರೊಟ್ಟಿಯ ಏರ್ಪಾಡಾಯಿತು. ಅಬಲಾ ಇವರ ಗುಂಪಿಗೆ ಸೇರಿದವಳಲ್ಲ. ಯಜಮಾನ-ಯಜಮಾನಿಯರಿಗೆ ಆಗುವ ಪದಾರ್ಥಗಳಲ್ಲಿ ಮಿಕ್ಕಿದ್ದರಲ್ಲೇ ಅವಳ ಹೊಟ್ಟೆಗೆ ಸಾಕಾಗುತ್ತಿತ್ತು. ಮಾವನಿಗೆ ಆಗ ಹದಿನಾಲ್ಕು ವರ್ಷದ ಒಬ್ಬ ಮಗಳಿದ್ದಳು. ಹೆಸರು ವ್ರಜಬಾಲಾ. ನೆಂಟಸ್ತಿಕೆಯನ್ನು ಕೇಳಿ ಹುಡುಗಿ ದಿವಾಕರನನ್ನು ಅಣ್ಣ ಎಂದು ಕರೆಯಲು ಷುರು ಮಾಡಿ, ತನ್ನ ಭಾಗದ ತಿಂಡಿ-ಪದಾರ್ಥಗಳನ್ನು ಯಾರಿಗೂ ಕಾಣದೆ ಆಗಾಗ ತಂದು ಕೊಡಲು ಷುರು ಮಾಡಿತ್ತು. ಆದರೆ ನವೀನನ ವಿಶ್ವಾಸ ದ್ರೋಹದಿಂದ ಅದು ಕಂಡುಹಿಡಿಯಲ್ಪಟ್ಟು, ವ್ರಜಬಾಲಾ ಕೆಳಗೆ ಇಳಿದು ಬರುವುದು, ಮಾತಾಡುವುದು ನಿಂತಿತು. ಕೋಣೆಯಲ್ಲಿ ಜಾಗ ಕೊಡಬೇಕಾಗಿ ಬಂದಾಗಿನಿಂದಲೇ ಸ್ವಲ್ಪ ದ್ವೇಷ ಇತ್ತು ನವೀನನಿಗೆ. ಇದಾದ ಮೇಲಂತೂ ದಿವಾಕರನಿಗೆ ಮರುಭೂಮಿಯಂತಿದ್ದ ಜೀವನದಲ್ಲಿ ಇದ್ದ ಆ ಒಂದು ಒಯೆಸಿಸ್ಸೂ ಒಣಗಿಹೋದಂತಾಯಿತು.

ಆಮೇಲೆ ವ್ರಜಬಾಲಾಗೆ ಮದುವೆಯೇ ಆಗಿಹೋಯಿತು.

ಬೆಲ್ಲದ ಕಾರುಬಾರು ಮಾಡಿ ಲಕ್ಷಾಧಿಪತಿಯಾದವ ಅವಳ ಮಾವ. ಮಾವನ ಮನೆಯಿಂದ ಚಿನ್ನದ ಗೊಂಬೆಯಂತೆ ಬಂದು ಹೋಗುವ ವ್ರಜಬಾಲಾಗೆ ದಿವಾಕರನೆಂಬ ಒಂದು ಪ್ರಾಣಿ ಇರುವ ಜ್ಞಾಪಕವಾದರೂ ಇದೆಯೋ ಇಲ್ಲವೋ! ನೋಡಿ ಕೋಪದಿಂದ ಬುಸುಗರೆಯುತ್ತಿತ್ತು ದಿವಾಕರನ ಮನಸ್ಸು.

ಆದರೆ ತಲೆಯ ಮೇಲೆ ಒಂದು ಛಾವಣಿ.

ವೇಳಾವೇಳೆಗೆ ತಟ್ಟೆಯಲ್ಲಿ ಅನ್ನ.

ಆದ್ದರಿಂದ ದಿವಾಕರ ಇಲ್ಲೇ ಬಿದ್ದಿದ್ದಾನೆ.

ಇರುವುದರಲ್ಲಿ ಇನ್ನೊಂದು ಅನುಕೂಲವೂ ಇದೆ.

ಹೊರಗಿನಿಂದ ಒಳಗೆ ಬರುವಾಗ ಆ ದೊಡ್ಡ ಗೇಟನ್ನು ತಳ್ಳಿಕೊಂಡು ಬರುತ್ತಾನೆ. ಸೋಪು ಹಾಕಿ ಒಗೆದು ಇಸ್ತ್ರಿ ಮಾಡಿದ ಬಟ್ಟೆಗಳನ್ನು ಹಾಕಿಕೊಂಡು ಕೈಯಲ್ಲಿ ಪುಸ್ತಕ ಹಿಡಿದುಕೊಂಡು ಬರುವುದೂ ಆ ದೊಡ್ಡಗೇಟನ್ನು ತಳ್ಳಿಕೊಂಡೇ ತಾನೆ! ದೊಡ್ಡ ಮನುಷ್ಯ ಮಾವನ ನೆಚ್ಚಿನ ಸೋದರಳಿಯ ಎಂದು ಹೊರಗೆ ಹೇಳಿಕೊಳ್ಳಬಹುದಲ್ಲಾ! ಸ್ನೇಹಿತರೇನೂ ಒಳಗೆ ನೋಡಲು ಬರುವುದಿಲ್ಲ. ಅವನು ಮನೆಗೆ ಯಾರನ್ನೂ ಕರೆಯುವುದಿಲ್ಲ. ಹೇಳುವ ಕಾರಣ-'ಮಾವನವರು, ಓದುವ ಹುಡುಗರು ಹಾಗೆ ಹರಟುವುದನ್ನು ಒಪ್ಪುವವರಲ್ಲ.'

ಈ ಮರಳಿನ ಕೋಟೆಯಲ್ಲಿ ದಿವಾಕರನ ವಾಸ.

ಅದಕ್ಕೇ ಅವನ ಒಳಗೆ ಇಷ್ಟೊಂದು ದಾಹ.

ಆದ್ದರಿಂದಲೇ, ತನ್ನ ಪ್ರೇಯಸಿ ಅವಳ ಕಲ್ಲಿನ ಕೋಟೆಯೊಳಗೆ ಹೋಗುವುದನ್ನು ನೋಡಿ ದಿವಾಕರನಿಗೆ ಅಷ್ಟೊಂದು ಆಕ್ರೋಷ.

ಬೆಳಿಗ್ಗೆ ತೆಗೆದಿಟ್ಟು ಹೋಗಿದ್ದ ಲುಂಗಿಯನ್ನುಟ್ಟು, ಬೀಸಣಿಗೆಯನ್ನು ತಿರುಗಿಸುತ್ತಾ ಎರಡನೆಯ ಮಹಡಿಯ ವರಾಂಡಾ ಕಡೆ ನೋಡುತ್ತಿದ್ದ ದಿವಾಕರ.

ಜಗಜಗಿಸುವ ಕಟ್ಟಡ, ಕೆಳಗಡೆಯಿಂದ ಮೇಲಿನವರೆಗೂ ನೋಡಬಹುದು. ನೋಡಿದರೆ ಕಾಣುವುದು ಗೋಡೆಯ ಬಣ್ಣದ ಹೊಳಪು. ಕಣ್ಣು ಕೋರೈಸುವಂತಹ ದೀಪಗಳು. ತಿರುಗುತ್ತಿರುವ ಫ್ಯಾನಿನ ಗಾಳಿ ನಾಲ್ಕು ಕಡೆಗೂ ಗಾಳಿಯನ್ನು ಬೀಸುತ್ತಿದೆ. ಮೊದಲನೆಯ ಮಹಡಿ ಮತ್ತು ಎರಡನೆಯ ಮಹಡಿಗಳಲ್ಲಿ ಮೊದಲನೆಯದು. ಮಾವ-ಅತ್ತೆಯವರ ಅಂತಃಪುರ, ಎರಡನೆಯ ಮಹಡಿಯಲ್ಲಿ ಅತ್ತೆಯ ತಮ್ಮ-ತಮ್ಮನ ಹೆಂಡತಿ ಇದ್ದಾರೆ. ಮನೆಯಲ್ಲಿ ಅವರಿಗೂ ಸಮವಾದ ಹಕ್ಕುಂಟು. ಬೇಕಾದಷ್ಟು ಜಾಗ ಇದೆ ಮೇಲೆ. ಅವರ ಕೋಣೆಯ ಒಂದು ಮೂಲೆಯಲ್ಲಿ ಹೋಗಿ ಕೂತುಕೊಂಡರೆ ಬೇರೆಯಾಗಿ ಏನೂ ಕರೆಂಟ್ ಖರ್ಚಾಗುವುದಿಲ್ಲ. ಆದರೂ ದಿವಾಕರನಿಗೆ ಈ ಚಾಕರನ ರೂಮಿನಲ್ಲಿ ಕೂತು ಮುರುಕಲು ಬೀಸಣಿಗೆಯ ಗಾಳಿಯನ್ನು ಸೇವಿಸಬೇಕಾಗಿದೆ.

ಆದ್ದರಿಂದ, ಅನ್ನದಾತಾ, ಆಶ್ರಯದಾತಾ ಎಂದು ಪ್ರಕಾಶ್ ಮಂಡಲ್‌ನ ವಿಷಯವಾಗಿ ಹೇಗೆ ಕೃತಜ್ಞನಾಗಿರುವುದಕ್ಕಾಗುತ್ತೆ?

ದಿವಾಕರ ಹೇಗೆ ಮತ್ತೆ ಅನವರತವೂ ಯೋಚಿಸದೆ ಇರಲು ಸಾಧ್ಯ? ಯಾವ ರೀತಿಯಿಂದ ಈ ಮನುಷ್ಯನಿಗೆ ಏನಾದರೂ ಕೆಡಕು ಮಾಡೋಣ ಎಂದು?

ಯೋಚಿಸುತ್ತಾನೆ, ಆದರೆ ಸಂದರ್ಭ ಒದಗಿಲ್ಲ.

ಇನ್ನೂ ತಿಳುವಳಿಕೆ ಇಲ್ಲದ ವ್ರಜಬಾಲಾ ಮೇಲೆ ತನ್ನ ಸೇಡನ್ನು ತೀರಿಸಿಕೊಳ್ಳ ಬೇಕೆಂದಿದ್ದ. ಆದರೆ ಗೂಬೆ-ಗಣ್ಣಿನ ನವೀನನಿಂದಾಗಿ ಅದಕ್ಕೆ ಸಂದರ್ಭ ಒದಗಲಿಲ್ಲ.

ಆಮೇಲೆ ವ್ರಜಬಾಲಾ ವ್ರಜಧಾಮದಲ್ಲೇ ಹೋಗಿ ನೆಲೆಸಿದಳು.

ಈವತ್ತು ದೊಡ್ಡ ಗಾಡಿಯಲ್ಲಿ ಗಂಡನ ಜೊತೆಯಲ್ಲೇ ಬಂದಿದ್ದಾಳಂತೆ.

ಗೇಟಿನ ಮುಂದೆ ಗಾಡಿ ನೋಡಿಯೇ ಗೊತ್ತಾಯಿತು. ನೋಡಿದರೇನೇ ಮನಸ್ಸಿನಲ್ಲಿ ವಿಷ ತುಂಬಿ ಹೋಗುತ್ತೆ. ಅಳಿಯ ಒಂದು 'ಪ್ಯಾಸು' ಮಾಡಿದವನಂತೆ. ಜಾಮಾತಾ. ದೇವತಾ ಎಂಬಂತೆ ಹಿಗ್ಗುತ್ತಾರೆ ಅತ್ತೆ.

ಇಂತಹ ಪ್ರಪಂಚದಲ್ಲಿ ಇರಬೇಕಾಗಿದೆ ದಿವಾಕರ.

ಅಡಿಗೆಯ ಭಟ್ಟ ಒಂದು ಹಿತ್ತಾಳೆಯ ತಟ್ಟೆಯಲ್ಲಿ ರೊಟ್ಟಿ. ಒಂದು ತುಂಡು ಬದನೇಕಾಯಿ ಪಲ್ಯ, ಬೆಲ್ಲ ಇಟ್ಟುಬಿಟ್ಟು ಹೋದ.

ಇವನಿಗೂ ನವೀನನಿಗೂ ಇದಿಷ್ಟೇ ವ್ಯತ್ಯಾಸ. ಖುದ್ದಾಗಿ ತಿಂಡಿಯನ್ನು ಕೋಣೆಗೆ ತಂದುಕೊಟ್ಟುಬಿಟ್ಟು ಹೋಗುತ್ತಾನೆ. ಅಡಿಗೆ ಮನೆಯ ಬಾಗಿಲಿಗೆ ಹೋಗಿ ನಿಂತು ಕೇಳಬೇಕಾಗಿಲ್ಲ.

ಆದರೂ ಆ ತಟ್ಟೆಯನ್ನು ನೋಡಿದರೆ ಏನೋ ಒಂದು ಉರಿ. ಆದರೂ ಬಿಸಾಕುವುದಕ್ಕಾಗುವುದಿಲ್ಲ. ಹಸಿವಾಗಿರುವ ಸಮಯದಲ್ಲಿ ಅಯಾಚಿತವಾಗಿ ಬಂದಿರುವ

ಬಿಸಿರೊಟ್ಟಿಯ ಬೆಲೆ ಏನು ಕಡಿಮೆಯೇ? ಊರಿನ ಮನೆಯಲ್ಲಿ ಇದೂ ಕೂಡ ದುರ್ಲಭವಾಗಿತ್ತಲ್ಲಾ! ಕಡಲೇಪುರಿ ಇದೆ. ತಿನ್ನೋದಾದರೆ ತಿನ್ನು! ಈಗೆಲ್ಲಾ ಊರಿಗೆ ಹೋದರೂ ಬೇಜಾರು ದಿವಾಕರನಿಗೆ. ಈ ಕಲ್ಕತ್ತೆಯ ಮೋಹ–ಮಾಧುರ್ಯ ಅವನನ್ನು ಆವರಿಸಿಕೊಂಡಿದೆ. ಬೇಕಾಬಿಟ್ಟಿಯಾಗಲಿ, ಅವಮಾನವಾಗಲಿ, ಅನ್ನವಾದರೂ ಸಿಗುತ್ತಲ್ಲಾ ಇದೇ ಸಾರಾಯಿಯ ಹಾಗೆ ಮಧುರ!

ಕಲ್ಕತ್ತೆಯ ಹವೆಯಲ್ಲೆಲ್ಲಾ ಈ ಮದಿರಾಸ್ವಾದನೆ ಇದೆ.

ಅದಕ್ಕೇ ವರ್ಷಾನುಗಟ್ಟಲೆ ಫುಟ್‌ಪಾತಿನಲ್ಲಿ, ಸ್ಟೇಷನ್ನಿನ ಪ್ಲಾಟ್‌ಫಾರಂಗಳಲ್ಲಿ ತಮ್ಮ ಜನ್ಮ, ಮೃತ್ಯು, ವಿವಾಹಾದಿ ಲೀಲೆಗಳಲ್ಲಿ ಮುಳುಗಿ, ಮನುಷ್ಯ ದೇಹದ ಪಶುತ್ವದ ಜೀವನವನ್ನು ನಿರ್ವಹಿಸುವ ನಿರ್ಬಂಧಕ್ಕೊಳಗಾದ ಜನರಿಗೂ ಕಲ್ಕತ್ತಾ ಬಿಟ್ಟು ಹೋಗುವದಕ್ಕಾಗುವುದಿಲ್ಲ.

ಕಲ್ಕತ್ತಾ ತನ್ನ ಆಕ್ಟೋಪಾಸಿನ ಬಾಹುಪಾಶದಲ್ಲಿ ಹಿಡಿದಿಟ್ಟಿದೆ ಎಲ್ಲರನ್ನೂ.

ದಿವಾಕರನೂ ಈ ಬಂಧನದಲ್ಲಿ ಸಿಕ್ಕಿಬಿದ್ದಿದ್ದಾನೆ.

ದಿವಾಕರನ ಅಣ್ಣಂದಿರು ಹೇಳಿದರು– "ಒಂದು ಪ್ಯಾಸು ಮಾಡಿದ್ದೀ. ಇನ್ನೆರಡು ಪ್ಯಾಸುಗಳನ್ನು ಮಾಡಿಕೊಂಡು ಬಂದು ಹಳ್ಳಿಯ ಸ್ಕೂಲಿನಲ್ಲೇ ಮಾಸ್ತರನಾಗು. ನಿನಗೂ ಒಳ್ಳೆಯದು, ಹಳ್ಳಿಗೂ ಒಳ್ಳೆಯದು."

ಆದರೆ ದಿವಾಕರನಿಗೆ ಹಳ್ಳಿಯ ಜೀವನಕ್ಕೆ ಹಿಂದಿರುಗಿ ಹೋಗುವುದು ಸಾಧ್ಯವೇ ಇಲ್ಲ. ಈ ನಾಲ್ಕು ವರ್ಷದಲ್ಲೇ ದಿವಾಕರ ಕಲ್ಕತ್ತೆಯ ಜೀವನದಲ್ಲಿ ತರಪೇತಾಗಿದ್ದಾನೆ. ಕಲ್ಕತ್ತೆಯ ಜನರೊಂದಿಗೆ ಸಮ ಎನಿಸಿಕೊಳ್ಳಲು ಓಡುವ ಓಟದಲ್ಲಿ ದಿವಾಕರ ಅವರಿಗಿಂತಲೂ ಮುಂದುವರಿದಿದ್ದಾನೆ. ಅದಕ್ಕೇ ತನ್ನ ನೀಗ್ರೋನಂತಹ ರೂಪವನ್ನಿಟ್ಟುಕೊಂಡೂ ಅಧ್ಯಾಪಕರ ಮಗಳ ಕಣ್ಣಿಗೆ ಅವನು ಹೀರೋ.

ಅವನ ರೂಪದ ಈ ವರ್ಣನೆ ಸ್ಪಷ್ಟವಾಗಿ ಕಿವಿಗೆ ಬಿತ್ತು ದಿವಾಕರನಿಗೆ.

ಅವಸರವಾಗಿ ತಿಂದು ಅಂಗಳದ ನಲ್ಲಿಯಲ್ಲಿ ನೀರು ಕುಡಿಯಲು ಹೋಗುತ್ತಿದ್ದ ದಿವಾಕರ (ಕಾರಣ ಅಡಿಗೆಯವನು ನೀರು ತಂದು ಕೊಡುವುದಿಲ್ಲ.) ನೋಡಿದ, ಮೆಟ್ಟಲಿಳಿದು ಬರುತ್ತಿದ್ದ ಮನೆ ಅಳಿಯ, ಹಿಂದೆ ಪ್ರಜಬಾಲಾ. ಅವಳನ್ನು ನೋಡಿದರೆ ಅವಳು, ಜೊತೆಯಲ್ಲೇ ಹೋಗುವವಳಂತೆ ತೋರಲಿಲ್ಲ. ಕೆಲವು ದಿನ ಇರಲು ಬಂದಿರುವ ಹಾಗಿದೆ. ಆದ್ದರಿಂದ ಗಂಡನನ್ನು ಕಳುಹಿಸಿಕೊಡಲು ಬರುತ್ತಿದ್ದಾಳೆ. ವಿದ್ಯಾವಂತೆಯಲ್ಲದಿದ್ದರೇನಂತೆ. ಅಪ್–ಟು–ಡೇಟ್ ಆಗಬಾರದೇ?!

ನಗುತ್ತಾ ಇಳಿಯುತ್ತಿದ್ದಾಳೆ.

ನೀರು ಕುಡಿಯಲಾಗಲಿಲ್ಲ. ತಕ್ಷಣ ಗಲ್ಲಿಯ ಪ್ಯಾಸೇಜನೊಳಗೆ ಹೊರಟುಹೋದ ದಿವಾಕರ. ಆಗಲೇ ಆ ಪಟಾಕಿ ಸಿಡಿದದ್ದು.

"ನೀಗ್ರೋ, ನೀಗ್ರೋ ತರಹ ಕಾಣುವ ಆ ಹುಡುಗ ಯಾರು ಹೇಳು?"

"ನೀಗ್ರೋ ತರಹವೇ?" ಎಂದು ಒಂದು ನಿಮಿಷ ಯೋಚಿಸಿ ವ್ರಜಬಾಲಾ ಹೇಳಿದಳು. ಅಯ್ಯೋ "ದಿವು ಅಣ್ಣನ ವಿಷಯವಾಗಿಯೇ ನೀವು ಕೇಳುತ್ತಿರುವುದು? ನಿಮಗಿಂತ ಡಬಲ್ ವಿದ್ವಾನ್ ಅವರು!"

"ಹೌದೇನು? ಓಹೋ!"

ಬೆಲ್ಲದ ಕಾರುಬಾರಿನ ಭಾವೀ ಮಾಲೀಕ ತನ್ನ ಮಾತಿನಲ್ಲೂ ಅದರ 'ಕೋಟಿಂಗ್' ಕೊಟ್ಟು ಮಾತಾಡುತ್ತಾನೆ.

"ಹಾಗಾದರೆ ನಿಮ್ಮಪ್ಪ ಅವನನ್ನು ಆಳಿನ ಕೋಣೆಯಲ್ಲಿಟ್ಟಿರುವುದು ಸರಿಯಲ್ಲ. ತಕ್ಕ ಮರ್ಯಾದೆಯಿಂದ........." ಮುಂದಕ್ಕೆ ಕೇಳಲಾಗಲಿಲ್ಲ. ಅಂಗಳವನ್ನು ದಾಟಿ ಗೇಟಿನ ಹೊರಗೆ, ಬೆಲ್ಲದ ವ್ಯಾಪಾರಿಯ ದೊಡ್ಡ ಕಾರು ನಿಂತಿರುವಲ್ಲಿಗೆ ಹೊರಟು ಹೋದರು ಅವರುಗಳು.

ಉರಿಯುತ್ತಾ ಕೋಣೆಯೊಳಗೆ ಬಂದ ದಿವಾಕರ, ನೀರು ಕುಡಿಯುವುದನ್ನೂ ಮರೆತು, ಮತ್ತೇ ಆ ಕ್ಷಣದಲ್ಲೇ ಒಂದು ದೃಢ ಸಂಕಲ್ಪದಿಂದ ಅವನ ಕಣ್ಣುಗಳು ಜ್ವಲಿಸತೊಡಗಿದುವು.

ಈ ಬೆಪ್ಪು ಹುಡುಗಿಯನ್ನು ನಷ್ಟಪಡಿಸುವುದು ಏನು ಕಷ್ಟವೇ?

ವಿವಾಹಿತೆ?

ಪತಿವ್ರತಾ ಸತಿ?

ಹಾಃ !

ಆ ಮಾತಿಗೆಲ್ಲಾ ಏನಾದರೂ ಬೆಲೆ ಇದೆಯೇ?

ಇನ್ನೂ, ಮದುವೆಯಾದವರಿಗೇ ಧೈರ್ಯ ಹೆಚ್ಚು ಆ ಅನುಭವ ದಿವಾಕರನಿಗೆ ಆಗಿದೆ. ಸ್ಕೂಲಿನ ಓದು ಮುಗಿಸಿ ಬರುವ ಮುನ್ನವೇ ಆ ಅನುಭವವನ್ನು ದಿವಾಕರ ಪಡೆದು ಬಂದಿದ್ದಾನೆ. ಅವನ ಅತ್ತೆಯ ಮಗಳು ಚಮೇಲಿ ಅಕ್ಕನಿಂದ. ಅವನ ವಯಸ್ಸು ಸ್ಕೂಲು ಹುಡುಗರ ವಯಸ್ಸನ್ನೇನೋ ಮೀರಿತ್ತು ಅನ್ನಿ ಆಗ.

ಚಮೇಲಿ ಅಕ್ಕನಿಗೆ ಅತ್ತೆಯ ಮನೆಯಲ್ಲಿ ಕಾಟ ಆದ್ದರಿಂದ ಅವಳು ಅಪ್ಪನ ಮನೆಯಲ್ಲಿ ಬಂದು ಕೂತಿದ್ದಾಳೆ. ವಾರವಾರವೂಗಂಡ ಬಂದು ಹೋಗುತ್ತಾನೆ.

ಆದರೆ ಈ ಹಿಡಿ ಭಿಕ್ಷೆಯಿಂದ ಅವಳಿಗೆ ಹೊಟ್ಟೆ ತುಂಬುವುದಿಲ್ಲ. ಅದಕ್ಕೇ ಅವಳು ಊಂಛವೃತ್ತಿ ಮಾಡುತ್ತಾಳೆ ಮತ್ತು ನಗುತ್ತಾ ಹೇಳುತ್ತಾಳೆ. ವಿಧವೆಯಲ್ಲ, ಕುಮಾರಿಯಲ್ಲ, ಭಯವೇನು?

ಆದ್ದರಿಂದ ಆ ಚಮೇಲಿ ಅಕ್ಕನ ಅಳತೆಗೋಲಿನಿಂದಲೇ ಎಲ್ಲಾ ಹುಡುಗಿಯರನ್ನೂ ಅಳೆಯುತ್ತಾನೆ.

ದಿವಾಕರ ಹಿಂತಿರುಗುತ್ತಿದ್ದ ವ್ರಜಬಾಲಾಳ ದಾರಿ ಅಡ್ಡಗಟ್ಟುತ್ತಾನೆ– "ದೊಡ್ಡ ಮನುಷ್ಯರ ಮನೆಗೆ ಮದುವೆಯಾಗಿ ಹೋಗಿ, ಈಗೆಲ್ಲಾ ಬಡವರು ಕಣ್ಣಿಗೆ ಕಾಣುವುದಿಲ್ಲ, ಅಲ್ಲವೇ?"

ವ್ರಜಬಾಲಾ ಅನಿರೀಕ್ಷಿತವಾದ ಈ ಅಡ್ಡಗಟ್ಟುವಿಕೆಯಿಂದಾಗಿ ಸ್ವಲ್ಪ ಸ್ತಂಭಿತಳಾಗಿ ಹೇಳುತ್ತಾಳೆ– "ಆಹಾ, ನೋಡದೇ ಏನು?"

"ಎಲ್ಲಿ ನೋಡುತ್ತೀಯ, ನೋಡುತ್ತಿರುತ್ತೇನೆ, ಬರುತ್ತೀಯ, ಹೋಗುತ್ತೀಯ, ನೀನು ಒಂದು ಸಲ ಕೂಡ ತಿರುಗಿಯೂ ನೋಡುವುದಿಲ್ಲ."

"ನಾನು ಬಂದು ಬಿಟ್ಟು ಹೊರಟುಹೋಗುತ್ತಾ ಇದ್ದೆ. ಬಂದು ನಿಂತೇ ಇರಲಿಲ್ಲ. ಆದರೆ ಈ ಸಲ ಕೆಲವು ದಿನ..... ಒಂದು ರಹಸ್ಯಮಯವಾದ ಕಟಾಕ್ಷ ಬೀರುತ್ತಾಳೆ. ಏನೋ ಈ ಸಲದ ಸಂದರ್ಭವೇ ಬೇರೆ, ಕೆಲವು ದಿನ ಇದ್ದು ಹೋಗುವ ಹಕ್ಕನ್ನು ಪಡೆದು ಬಂದಿದಾಳೆ ಎಂಬಂತೆ!

ಈ ಕಡೆ ಆ ಕಡೆ ನೋಡಿ ನವೀನ ಎಲ್ಲೂ ಸಮೀಪದಲ್ಲಿಲ್ಲವೆಂದು ಸ್ಥಿರಪಡಿಸಿಕೊಂಡು ದಿವಾಕರ ತಟ್ಟನೆ ಅವಳ ಗಲ್ಲದ ಮೇಲೆ ಒಂದು ಸಲ ತಟ್ಟಿ ಸ್ವಲ್ಪ ಮೆಲುದನಿಯಲ್ಲಿ, "ಹೌದೇ? ಹೊಸ ಸಮಾಚಾರವೇ ?" ಎಂದ.

ವ್ರಜಬಾಲಾ ಕೋಪಿಸಿಕೊಳ್ಳಲಿಲ್ಲ. ಮುಖವೆಲ್ಲಾ ಕೆಂಪಗಾಗಿ, "ಹೋಗು, ಕೆಟ್ಟವನು ನೀನು" ಎಂದಳು. ದಿವಾಕರ ಒಂದು ಅಲಕ್ಷ್ಯವಾದ ನಗು ನಕ್ಕು ಹೇಳಿದ, "ಇಷ್ಟಕ್ಕೇ ಕೆಟ್ಟವನೇ? ಅಬ್ಬಬ್ಬಾ, ಎಷ್ಟೊಂದು ಶುಚಿ, ಮಡಿ! ಕ್ಲಾಸಿನ ಹುಡುಗಿಯರೊಂದಿಗೆಲ್ಲಾ ಏನೆಲ್ಲಾ ಮಾಡುತ್ತೇನೆ ನೋಡಿದರೆ ಏನನ್ನುತ್ತೀಯೋ!"

ನೆಲಕ್ಕೆ ಅಂಟಿದಂತಾಗುತ್ತಾಳೆ ವ್ರಜಬಾಲಾ. ಆಶ್ಚರ್ಯದಿಂದ ಕಣ್ಣು ಅರಳಿಸಿ ಕೇಳುತ್ತಾಳೆ. "ನಿಮ್ಮ ಕಾಲೇಜಿನಲ್ಲಿ ಹೆಣ್ಣು ಮಕ್ಕಳೂ ಓದುತ್ತಾರೆಯೇ?"

"ಇನ್ನೇನು ಮತ್ತೆ?"

"ಅವರೊಂದಿಗೆಲ್ಲಾ ನೀನು ಹೀಗೆಲ್ಲಾ ಮಾತಾಡುತ್ತೀಯಾ?"

"ಹೀಗೆಲ್ಲಾ?" ಒಂದು ಅಸಡ್ಡೆಯ ಧ್ವನಿಯಲ್ಲಿ ಹೇಳುತ್ತಾನೆ, "ಇನ್ನೂ ಏನೇನೋ!"

"ಥತ್"

"ಥತ್ ಅಂದರೆ?"

"ಏಯ್ ದಿವು ಅಣ್ಣಾ, ನಿಜವೇ?"

"ನಿಜ ಅಲ್ಲದೆ, ಸುಳ್ಳು ಹೇಳುತ್ತೇನಾ? ನಂಬು. ನಂಬದಿದ್ದರೆ ಬಿಡು ನಿನ್ನಿಷ್ಟ."

ವ್ರಜಬಾಲಾ ತಟ್ಟನೆ ಜೋರಾಗಿ ಹೇಳಿದಳು. ಅದಕ್ಕೇ ಅವರು ಹೇಳುತ್ತಾರೆ, "ಓದು ಬರಹ ಕಲಿತರೆ ಹೆಣ್ಣುಮಕ್ಕಳು ಕೆಟ್ಟುಹೋಗುತ್ತಾರೆ ಅಂತ."

"ಅವರು ಅಂದರೆ, ನಿನ್ನ ಗಂಡನೇ?"

"ಮತ್ತೆ ಇನ್ನೇನು?"

"ಹೇಳಿಯೇ ಹೇಳುತ್ತಾರೆ. ತಾನು ಅದರ ರುಚಿ ನೋಡಿಲ್ಲವಲ್ಲ."

"ಆಹಾ, ಅವರೇನೂ ಅಂತಹವರಲ್ಲ."

"ಒಳ್ಳೆಯದು. ಇಲ್ಲದಿದ್ದರೇನೇ ಒಳ್ಳೆಯದು. ಏಕೆಂದರೆ ನೀನು ಇಷ್ಟೊಂದು ಸತಿ–ಸಾಧ್ವಿ ಆಗಿರುವಾಗ, ಹಾಗಿಲ್ಲದಿದ್ದರ ಒಳ್ಳೆಯದೇ. ಆದರೆ ಇದರಲ್ಲಿ ನನಗೇನೂ ತಪ್ಪು ಕಾಣುವುದಿಲ್ಲ."

"ತಪ್ಪು ಕಾಣುವುದಿಲ್ಲವೇ?"

"ನೀನೇ ಹೇಳು."

ವ್ರಜಬಾಲಾ ತಟಕ್ಕನೆ ಹೆದರಿದವಳಾಗಿ "ಎಲ್ಲಾ ಬರೀ ಬುರುಡೆ. ನಾನೇನೂ ನಂಬುವುದಿಲ್ಲ," ಎಂದು ಹೇಳಿ ದಡದಡನೆ ಓಡಿ ಹೊರಟುಹೋದಳು.

ಒಂದು ತೃಪ್ತಿಯ ನೋಟವನ್ನು ಬೀರುತ್ತಾನೆ ದಿವಾಕರ.

ಹೆದರಿಕೆಯಾಗಿದೆ.

ಹೆದರಲಿ, ಅದೇ ಬೇಕಾಗಿರುವುದು.

ಭಯದಲ್ಲೇ ಇರುತ್ತದೆ ಆಕರ್ಷಣೆ.

ದಿವಾಕರ ಅವನಿಗಾದ ಅವಮಾನದ ಸೇಡು ತೀರಿಸಿಕೊಳ್ಳಲೇಬೇಕು.

ದಿವಾಕರನಿಗೆ ಗೊತ್ತು. ಭಯ, ಭಯ ಎಂದಿರುವ ಆ ಭಯಂಕರವಾದ ಮಾತನ್ನು ಪೂರ್ತಿ ಕೇಳುವ ಆಸೆಯಿಂದಲೇ ಅವಳು ಒಂದು ಅವಕಾಶವನ್ನು ಒದಗಿಸುತ್ತಾಳೆ. ಏನಾದರೂ ನೆಪ ಮಾಡಿ ನವೀನನನ್ನು ಎಲ್ಲಾದರೂ ಹೊರಗೆ ಕಳುಹಿಸುತ್ತಾಳೆ! ಆಮೇಲ ನಿರ್ಜನವಾದ ಸಂದರ್ಭದಲ್ಲಿ ಬಂದು ಕುಳಿತು ಕೇಳುತ್ತಾಳೆ–"ನಿನ್ನ ಕ್ಲಾಸಿನಲ್ಲಿರುವ ಆ ಹುಡುಗಿಯರ ವಿಷಯವಾಗಿ ಹೇಳುತ್ತಿದ್ದೆಯಲ್ಲಾ, ಹೇಳು ಕೇಳೋಣ. ನನಗೇನೋ ನಂಬಿಕೆ ಇಲ್ಲ. ನೀನೇನೋ ಸುಮ್ಮನೆ ಕಲ್ಪಿಸಿ ಹೇಳುತ್ತೀಯೇನೋ!"

ಆಗ ದಿವಾಕರ ಕಲ್ಪಿಸಿಯೇ ಹೇಳುತ್ತಾನೆ.

ವ್ರಜಬಾಲಾ ಈ ಕಲ್ಪನೆಯ ಮಾತುಗಳನ್ನು ಕೇಳಿ ನಿಜವೆಂದು ನಂಬುತ್ತಾಳೆ. ಆಮೇಲೆ ಮೆಲ್ಲ ಮೆಲ್ಲನೆ ಜೇಡರ ಬಲೆಯಲ್ಲಿ ಸಿಕ್ಕಿದ ಹುಳುವಿನಂತೆ ಅವನ ಬಲೆಯಲ್ಲಿ ಸಿಕ್ಕಿ ಸೋತು. ಕಡೆಗೆ ಆತ್ಮ ಸಮರ್ಪಣೆ ಮಾಡುತ್ತಾಳೆ. ಆಮೇಲೆ ಯೋಚಿಸುತ್ತಾಳೇನೋ, ನನಗೆಂಥಾದ್ದು ಭಯ? ವಿಧವೆಯಲ್ಲ, ಕುಮಾರಿಯಲ್ಲ.

* * *

ಆದರೆ ಮೀನಾಕ್ಷಿ?

ಅವಳನ್ನು ಯಾವಾಗ ಸಂಪೂರ್ಣವಾಗಿ ಕಬಳಿಸುವುದು.

ಅದು ಅವಶ್ಯಕವಾಗಿದೆ.

ದಿವಾಕರ ತನ್ನ ಈ ಸ್ಥಿತಿಯಿಂದ ಮೇಲಕ್ಕೆ ಏರಬೇಕು. ಪ್ರೊಫೆಸರ್ ಮೈತ್ರಾರ ಮಗಳನ್ನು ಮದುವೆಯಾದರೆ ಆ ಆಸ ಪೂರ್ತಿಯಾಗಬಹುದು. ಮತ್ತೆ ಆ ಮದುವೆಗಾಗಿಯೇ ಅವಳನ್ನು ಕಬಳಿಸುವುದು ಬಹಳ ಅವಶ್ಯಕವಾದುದು.

ಈ ಹೆಣ್ಣು ಹುಡುಗಿಯರು ಬಹಳ ಪೆದ್ದುಗಳು.

ಸ್ವಲ್ಪ ಈ ಕಡೆ ಆ ಕಡೆಯಾದರೆ ತನ್ನ ಶುಚಿತ್ವ, ಸತೀತ್ವ ಹೋಯಿತು ಎಂದು ಕೊಳ್ಳುತ್ತವೆ. ಈ ಮದುವೆಯ ಹೊರತು ಬೇರೆ ದಾರಿ ಇಲ್ಲ ನನಗೆ. ಅದೂ ಈ ಮೀನಾಕ್ಷಿ ಒಂದು ಪುಕ್ಕಲು ಹುಡುಗಿ, ಖಂಡಿತ ಅಂದುಕೋತಾಳೆ ನನ್ನ ಸರ್ವಸ್ವವೂ ಹೋಯಿತು ಎಂದು. ಆಮೇಲೆ ಓಡಿ ಹೋಗಿ ಅಪ್ಪನ ಕಾಲಲ್ಲಿ ಬಿದ್ದು, ಮದುವೆಗೆ ಅರ್ಜಿ ಮಾಡಿಕೊಳ್ಳುತ್ತಾಳೆ. ದಿವಾಕರ ಏನೂ ಮಾಡಬೇಕಾಗುವುದಿಲ್ಲ. ಈ ಭರವಸೆಯಿಂದಲೇ ದಿವಾಕರ ಇರುತ್ತಿದ್ದಾನೆ.

ಅದಕ್ಕೆ ದಿವಾಕರ, ಮೀನಾಕ್ಷಿಯನ್ನು ದಂಗುಗೊಳಿಸಲು ಖಾರ–ಸಾರವಾದ ವಿದೇಶಿ ನಾವೆಲ್ಲುಗಳನ್ನು ಓದಿ, ತನ್ನ ಮಾತು, ನಡೆ–ನುಡಿ ಹೇಗಿರಬೇಕೆಂದು ರಿಹರ್ಸಲ್ ನಡೆಸುತ್ತಿದ್ದಾನೆ.

ದಿವಾಕರ ಒಳಗೆ ಒಂದು ತನ್ನ ಮಂಚದ ಮೇಲೆ ಕುಳಿತುಕೊಂಡ ನೋಡಿದ, ತಲೆಯ ದಿಂಬಿನ ಕೆಳಗೆ ಒಂದು ಪೋಸ್ಟ್‌ಕಾರ್ಡ್ ಸಿಕ್ಕಿಸಿದೆ.

ದಿವಾಕರನಿಗೆ ಅನುಮಾನ, ತಾನು ಇಲ್ಲದೇ ಇರುವಾಗ ನವೀನ ತನ್ನ ಕಾಗದಗಳನ್ನು ಬಿಸಾಕುತ್ತಾನೆ ಎಂದು. ಆದರೆ ಕಾಗದ ಎಲ್ಲಿಂದ ಬರಬೇಕು! ಅದು ಅವನಿಗೆ ಗೊತ್ತಿಲ್ಲ.

ಒಳ್ಳೆಯ ಕಾಗದ, ಆಕಾಂಕ್ಷೆಯನ್ನು ತೀರಿಸುವಂತಹ ಕಾಗದ!

ಆಗಾಗ್ಗೆ ಬರುವುದಂತೂ, ಗೀಚಿದ ಅಕ್ಷರಗಳಿರುವ ಪೋಸ್ಟ್‌ಕಾರ್ಡ್ ಮಾತ್ರವೇ. ಅದನ್ನು ಭದ್ರವಾಗಿ ತಂದು ಇಡದೇ ಹೋಗಿದ್ದೂ ನಷ್ಟವೇನಿರಲಿಲ್ಲ! ಅದರಲ್ಲೇನು ಬರೆದಿರುತ್ತೆ ಅನ್ನುವುದು ದಿವಾಕರನಿಗೆ ಗೊತ್ತು. ಅವನ ಅಣ್ಣಂದಿರು ಬರೆದಿರುತ್ತಾರೆ.

ಶ್ರೀಮಾನ್ ದಿವಾಕರನಿಗೆ,

ವಿಶೇಷವಾಗಿ ಹೇಳುವುದೇನೆಂದರೆ ಮನೆಯಲ್ಲಿ ಎಲ್ಲರೂ ಆರೋಗ್ಯ. ಮಾತೋಶ್ರೀಯವರು ವಾತರೋಗದಿಂದ ಬಹಳ ಕಷ್ಟಪಡುತ್ತಿದ್ದಾರೆ ಮತ್ತು ಮಧು, ಗೋಪಾಲ್ ಇಬ್ಬರೂ ಹೊಟ್ಟೆಯ ರೋಗ ಮತ್ತು ಜ್ವರದಿಂದ ನರಳುತ್ತಿದ್ದಾರೆ. ಪ್ರಭಾಕರನಿಗೆ ಕೆಲದಿನಗಳಿಂದ ಆಮಶಂಕೆಯಾಗಿದೆ. ನಿನ್ನ ದೊಡ್ಡತ್ತಿಗೆಯೂ 'ಕಾರ್ಬಂಕುಲಿ' ನಿಂದ ಹಾಸಿಗೆ ಹಿಡಿಯುವ ಹಾಗಿದ್ದಾಳೆ. ಇವೆಲ್ಲಾ ಕಾರಣಗಳಿಂದ ನನಗೂ ಮೈಸ್ವಸ್ಥವಿಲ್ಲ. ಮನೆಯಲ್ಲಿ ಎಲ್ಲರೂ ಆರೋಗ್ಯ ಎಂದು ಬರೆದು ಬಿಟ್ಟು ಅಣ್ಣನು ಇಷ್ಟೊಂದು ರೋಗಗಳ ಬಗ್ಗೆ ಬರೆದು, ಇನ್ನೂ ಬರೆಯುತ್ತಾರೆ. 'ಗಾಳಿಗೆ ಒಂದು ಮಾವಿನ ಮರ ಬಿದ್ದುಹೋಯಿತು. ಬುಧನಿ ಹಸುವಿನ ಒಂದು ಕರು ಸತ್ತುಹೋಯಿತು. ಬಿದಿರು ಮೆಳೆಯಿಂದ ಯಾರೋಬಿದಿರುಗಳನ್ನು ಕದ್ದುಕೊಂಡು ಹೋಗ್ತಿದ್ದಾರೆ' ಇತ್ಯಾದಿ, ಇತ್ಯಾದಿ.

ಕಡೆಯಲ್ಲಿ, 'ನಿನ್ನ ಎಗ್‌ಜಾಮಿನ್' ಯಾವಾಗ ಮುಗಿಯುತ್ತೇ? ನೀನು ಹಿಂದಿರುಗಿ ಬರುವುದನ್ನು ಕಾಯುತ್ತಾ ದಿನಗಳನ್ನು ಎಣಿಸುತ್ತಿದ್ದೇನೆ. ನೀನು ಬಂದು ಬಿಟ್ಟರೆ ಭಗವಂತನ ದಯದಿಂದ ಎಲ್ಲಾ ಸರಿಹೋಗುತ್ತೆ ಎಂದು ದೇವರಲ್ಲಿ ಪ್ರಾರ್ಥನೆ.

ಇತಿ ಆಶೀಃ

ನಿನ್ನ ದೊಡ್ಡ ಅಣ್ಣ

ಇದೇ ಕಾಗದ.

ಒಂದಾದ ಮೇಲೊಂದು ಏಳು ಕಾಗದಗಳು. ಪಕ್ಕ ಪಕ್ಕದಲ್ಲಿಟ್ಟರೆ ಒಂದರದೇ ಕಾರ್ಬನ್ ಕಾಪಿಯಂತೆ ಇರುತ್ತೆ. ಒಂದೊಂದು ಸಲ ಮಾವಿನ ಮರದ ಬದಲು ನೇರಳೆ ಮರ ಇತ್ಯಾದಿ ಅಷ್ಟೆ ವ್ಯತ್ಯಾಸ. ಅದರ ಹೊರತು ಬಾಕಿ ಎಲ್ಲಾ ಒಂದೇ.

ತೆಗೆದು ಓದಲು ಇಷ್ಟವಾಗುವುದಿಲ್ಲ. ಅದಕ್ಕೇ ದಿವಾಕರ ಅಸಡ್ಡೆಯಿಂದ ಮುಖ ಸಿಂಡರಿಸಿಕೊಂಡು ಆ ಕಡೆ ಒಂದು ಸಲ ನೋಡುತ್ತಾನೆ ಅಷ್ಟೆ.

ಆಶ್ಚರ್ಯ, ದಿವಾಕರನ ಬಗ್ಗೆ ಅವರು ಏನು ತಿಳಿದುಕೊಂಡಿದ್ದಾರೆ! ದಿವಾಕರ ಓದು ಮುಗಿಸಿ ಮನೆಗೆ ಹೋಗಿ ನಿಂತುಬಿಟ್ಟ ತಕ್ಷಣ, ಅಮ್ಮನ ವಾತರೋಗ, ಅವರ ಹುಡುಗರ ಹೊಟ್ಟೆಯ ರೋಗ, ಅತ್ತಿಗೆಯ ಹುಣ್ಣು ಎಲ್ಲಾ ವಾಸಿಯಾಗಿಹೋಗುತ್ತದೆಯೇ? ಹಳ್ಳಿಯವರು ಇನ್ನು ಬಿದಿರು ಕಡಿಯುವುದಿಲ್ಲವೇ? ಗಾಳಿಗೆ ಮಾವಿನ ಮರ ಬೀಳುವುದಿಲ್ಲವೇ? ಇತ್ಯಾದಿ, ಇತ್ಯಾದಿ. ಇರಿ, ಆ ಆಸೆ ಇಟ್ಟುಕೊಂಡು.

ನಿಮ್ಮನ್ನು ನೆಂಟರು ಎಂದು ಹೇಳಿಕೊಳ್ಳುವುದಕ್ಕೂ ನಾಚುತ್ತಾನೆ ದಿವಾಕರ.

*****

ಅಧ್ಯಾಯ ಐದು

ಸರೋಜಾಕ್ಷರು ತಮ್ಮ ಸಂಸಾರದ ತಲೆಯ ಮೇಲೆ ಒಂದು ದೊಡ್ಡ ಕಲ್ಲು ಹಾಕಿದಂತೆ ಕೆಲಸಕ್ಕೆ ರಾಜೀನಾಮೆ ಕೊಟ್ಟರು. ತಮ್ಮ ತರುಣ ಪ್ರಾಯದಲ್ಲಿ ಅವರು ತಮ್ಮ ಜೀವನೋಪಾಯಕ್ಕಾಗಿ ಈ ದಾರಿಯನ್ನು ಹಿಡಿದಾಗ, ಇದು ಸರಿಯಾದ ಕೆಲಸವಲ್ಲ ಎನಿಸಿತ್ತು ಅವರಿಗೆ. ಇದು ಅವರ ಮನಸ್ಸಿನ ಭಾವನೆ. ಈ ವಾಸ್ತವವಲ್ಲದ ಭಾವನೆಯ ಮೂಲಕ್ಕೆ ಪೆಟ್ಟು ಬೀಳುವಂತಹ ಸಂದರ್ಭವೂ ಯಾವುದೂ ಸಂಭವಿಸಿರಲಿಲ್ಲ. ಆದರೆ ಈಗ ಈ ಕ್ರಾಂತಿಕಾರಿಯಾದ ಕೆಲಸ ಆ ಭಾವನೆಯನ್ನು ನಿರ್ಮೂಲಗೊಳಿಸಿತು. ಸರೋಜಾಕ್ಷರ ಕಿವಿಗೆ ಈಗ ಅನವರತವೂ ಬೀಳುತ್ತಿರುವ ಮಾತು, 'ಕೆಲಸ ಬಿಟ್ಟುಬಿಟ್ಟೆಯಾ?–ಕೆಲಸ ಬಿಟ್ಟುಬಿಟ್ಟಿರಾ? 'ಈಗಿನ ಕಾಲದಲ್ಲಿ ಇಷ್ಟು ಅಲ್ಪವಾದ ವಿಷಯಕ್ಕೆಲ್ಲಾ ಕೆಲಸ ಬಿಡುವುದು ಎಂದರೆ–'

ಹಿತೈಷಿಯಾದವರು ಈ ಪ್ರಶ್ನೆಯನ್ನೂ ಎತ್ತಿದರು. 'ಈ ವಯಸ್ಸಿನಲ್ಲಿ ನೀನು ಹೇಗೆ ಯಂಗ್ ಗ್ರೂಪ್‌ನೊಂದಿಗೆ ಕಾಂಪಿಟಿಷನ್ನಿಗೆ ಇಳಿಯುತ್ತೀಯ? ಈಗೆಲ್ಲಾ ಡಿ.ಫಿಲ್, ಡಿ.ಎಸ್.ಸಿ. ಕಾಸಿಗೊಂದು ಅನ್ನುವ ಹಾಗೆ!–'

ಆಶ್ಚರ್ಯ, ಜಿಗುಪ್ಸೆ, ಅವಮಾನ, ಉಪದೇಶ ಆಕ್ಷೇಪಣೆ ಇತ್ಯಾದಿ ಬಹುಮುಖವಾಗಿ ಆಕ್ರಮಣವನ್ನು ಎದುರಿಸಬೇಕಾಗಿದೆ ಸರೋಜಾಕ್ಷರು. ಎಲ್ಲರೂ ಒಮ್ಮತವಾಗಿ ಹೇಳುವುದು: 'ಕೆಲಸ ಬಿಟ್ಟದ್ದು ಸರಿಯಲ್ಲ.' ಈಗ ಅವರ ಹಳೆಯ, ತಾವು ಮಾಡಿದ್ದು ತಪ್ಪು ಎಂಬ ಭಾವನೆ ಇನ್ನಿಲ್ಲ. ಇಷ್ಟು ಮಾತ್ರ ಗೊತ್ತು. ಅವರು ಕೆಲಸದಲ್ಲಿದ್ದರು, ಈಗ ಕೆಲಸ ಬಿಟ್ಟುಬಿಟ್ಟರು.

ಏಕೆ?

ಕೊಬ್ಬಿನಿಂದಲೇ? ಅಹಂಕಾರದಿಂದಲೇ?

ತಮ್ಮ ಅಧಿಕಾರವನ್ನು ಅವರು ತೋರಿಸಿದ್ದರು, ಅದಕ್ಕೇ ಹುಡುಗರು ಶಿಕ್ಷೆ ಕೊಟ್ಟು ಬಿಟ್ಟರು. ಹಾಗೂ ಅವರು ತಿಳಿದುಕೊಂಡು ದಾರಿಗೆ ಬರದೆ ಹಠದಿಂದ ಕೆಲಸವನ್ನೇ ಬಿಟ್ಟುಬಿಟ್ಟರು. ಕಾಲೇಜಿನ ಅಧಿಕಾರಿಗಳು ಅವರ ರಾಜೀನಾಮೆಯನ್ನು ಒಡನೆ ಒಪ್ಪಿಕೊಂಡಿರಲಿಲ್ಲ.

ಯೋಚಿಸಿ ಹೇಳಲು ಸಮಯ ಕೊಟ್ಟಿದ್ದರು. ಆದರೆ ಅವರೇ ಅವಕಾಶ ತೆಗೆದುಕೊಳ್ಳಲಿಲ್ಲ. 'ಯೋಚಿಸುವುದಕ್ಕೆ ಹೊಸದಾಗಿ ಇನ್ನೇನಿದೆ? ಯೋಚಿಸಿಯೇ ಕೊಟ್ಟಿದ್ದೇನೆ' ಎಂದುಬಿಟ್ಟಿದ್ದರು. ಅಂದರೆ ಸರೋಜಾಕ್ಷರು ಕೇವಲ ತಮ್ಮ ಮಾನ–ಅವಮಾನದ ವಿಷಯವಾಗಿಯೇ ಯೋಚಿಸಿದ್ದಾರೆ. ತಮಗೆ ಹೆಂಡತಿ ಇದಾಳೆ, ಇನ್ನೂ ಓದುತ್ತಿರುವ

ಮಗ ಇದಾನೆ, ಮದುವೆಗೆ ಮಗಳು ಇದಾಳೆ ಒಂದು ಅರ್ಥವಿಲ್ಲದ ಪೋಷಿಸಬೇಕಾದ ವ್ಯಕ್ತಿ ಶಾರದಾ ಇದಾನೆ, ಸಂಪಾದಿಸುವ ತಮ್ಮ ಇನ್ನೊಬ್ಬ ಮಗನನ್ನು ನಂಬಿಕೊಂಡಿರುವುದಕ್ಕಾಗುವುದಿಲ್ಲ, ತಾವು ಭವಿಷ್ಯಕ್ಕಾಗಿ ಏನೂ ಕೂಡಿಟ್ಟಿಲ್ಲ ಎನ್ನುವುದನ್ನು ಅವರು ಯೋಚಿಸಿಲ್ಲ.

ಆದರೆ? ಮತ್ತೆ?

ಮತ್ತೆ ಯಾರು ನಿನ್ನನ್ನು ಸಹಾನುಭೂತಿಯೊಂದಿಗೆ ನೋಡುತ್ತಾರೆ?

ಸಂಸಾರಿಯಾದ ಮನುಷ್ಯ ನೀನು. ಮನೆಯ ಯಜಮಾನ (ಹಾಗೆಂದು ಯಾರೂ ಮರ್ಯಾದೆ ಕೊಡದಿದ್ದರೂ) ನೀನು, ಏನೋ ಮಾನ ಹೋಯಿತು ಅಂತ ಧಿಡೀರ್ ಎಂದು ಕೆಲಸ ಬಿಟ್ಟುಬಿಟ್ಟರೆ ಹೇಗೆ? ಕರ್ತವ್ಯ, ಜವಾಬ್ದಾರಿ ಎಂದು ಒಂದು ಇಲ್ಲವೇ ದಯೆ, ಮಮತೆ ಏನೂ ಇಲ್ಲವೆ ಸಂಸಾರದ ಮೇಲೆ? ಮತ್ತೆ ಅದು ಇಲ್ಲದೇ ಹೋದರೆ ಕಹಿ ಮಾತುಗಳನ್ನು ಕೇಳಲೇಬೇಕು. ಈ ವಿಷಯದಲ್ಲಿ ಲಾಭ–ನಷ್ಟ ಇಲ್ಲದವರೇ ಎರಡು ಮಾತು ಅಂದುಬಿಟ್ಟು ಹೋಗುವಾಗ, ಸಂಬಂಧಪಟ್ಟವರು ಸುಮ್ಮನಿರುತ್ತಾರೆಯೇ?

ವಿಜಯಾ ಒಬ್ಬರೇ ಅಲ್ಲ, ಎಲ್ಲರೂ ಸರೋಜಾಕ್ಷರನ್ನು ಮೂದಲಿಸಿದ್ದಾಯಿತು. (ಅದರಿಂದ ಅವರ ಅಭಿಪ್ರಾಯ ಏನಾದರೂ ಬದಲಾಯಿಸುತ್ತೋ ಎಂದು) ಇದರಲ್ಲಿ ವಿಜಯಾದೇ ಮೊದಲ ಪ್ರಶ್ನೆ. ತಮ್ಮ ಶುಚಿ–ಮಡಿಯ ಪ್ರಾಕಾರವನ್ನೂ ಭೇದಿಸಿಕೊಂಡು ಬಂದು ಅವರ ಹಾಸಿಗೆಯ ತುದಿಯಲ್ಲಿ ಕೂತು ಕೇಳಿದರು: "ನಿಮ್ಮ ಬ್ಯಾಂಕಿನಲ್ಲಿ ಎಷ್ಟು ದುಡ್ಡಿದೆ?"

ಅವರು ಚಕಿತರಾಗಿ ಸ್ವಲ್ಪ ಆಶ್ಚರ್ಯದಿಂದ ಯೋಚಿಸಿರಬೇಕು. ಏಕೆ ಒಂದು ಮೂಢವಾದ ಪ್ರಶ್ನೆಯನ್ನು ಮಾಡಿದಳು ಎಂದು.

ಆದರೆ ವಿಜಯಾ ಎಲ್ಲಾ ವಿಷಯಗಳಲ್ಲೂ ಮೂಢರಲ್ಲ.

ವಿಜಯಾ, ಅವರ ವಿವಾಹವಾದ ಕಾಲದಿಂದಲೂ ಕೆಲವು ವಿಷಯಗಳಲ್ಲಿ ಬಹಳ ಚುರುಕು. ಅವರ ಮದುವೆಯಾದ ಹೊಸದರಲ್ಲೇ, ಸರೋಜಾಕ್ಷರು ಮನೆಯಲ್ಲಿ ಇಲ್ಲದೇ ಇರುವಾಗ, ಬೀರು, ಡ್ರಾಯರ್, ಅಷ್ಟೇಕೆ, ದಪ್ಪ ದಪ್ಪ ಪುಸ್ತಕಗಳ ಹಾಳೆಗಳನ್ನೂ ತಿರುವಿ, ಸಂದೇಹ ದೃಷ್ಟಿಯಿಂದ ಅವರ ದುರ್ಬಲತೆಯ ಸಾಕ್ಷಿಯಾಗಿ ಏನಾದರೂ ಒಂದು ಕಾಗದ, ಪತ್ರ ಸಿಗುತ್ತದೆಯೇ ಎಂದು ಹುಡುಕಿದ್ದಾರೆ.

ಸಂದೇಹಕ್ಕೆ ಕಾರಣ ಇತ್ತು. ಎಲ್ಲೋ ಏನೋ ವಿಷಯ ಇದ್ದಿರಬೇಕು ಎನ್ನಿಸಿತು. ಆಗ ತಾನೇ ಹರೆಯದ ವಯಸ್ಸನ್ನು ದಾಟಿದ ತರುಣಿಗೆ! ಇಲ್ಲದಿದ್ದರೆ ಇಂತಹ ಮೋಹಕವಾದ ವಸ್ತು ಕೈಗೆ ಸಿಕ್ಕಿಯೂ ಒಬ್ಬ ಯುವಕ. ಬೆಳಿಗ್ಗೆ, ಸಾಯಂಕಾಲ, ಮಧ್ಯಾಹ್ನ ರಾತ್ರಿ ಅದರ ಸದುಪಯೋಗಪಡಿಸಿಕೊಳ್ಳದೇ ಇರುತ್ತಾನಾ? ಎಂತಹ ನಿಧಿ ಸಿಕ್ಕಿತೆಂದು ತಲೆಯ ಮೇಲಿಟ್ಟುಕೊಂಡು ಕುಣಿಯದೆ ಇರುತ್ತಾನಾ?

ಮತ್ತೆ ಹಾಗೆ ಇಲ್ಲವಲ್ಲಾ!

ಅದಕ್ಕೇ, ಇನ್ನೇನೋ ಕಾರಣ ಇರಲೇಬೇಕು. ಇಲ್ಲದಿದ್ದರೆ ರಕ್ತಮಾಂಸಗಳಿಂದಾದ ದೇಹವನ್ನು ಹೊಂದಿದ ಯುವಕ ಗಂಡ ಹುಚ್ಚನಾಗುತ್ತಿದ್ದ ಪ್ರೀತಿಯಿಂದ!

ಎದುರು ನೋಡುತ್ತಿದ್ದ ಆ ದುರಾಶೆಯಂತೂ ಅವಳ ಗಂಡನಲ್ಲಿ ಇರಲೇ ಇಲ್ಲ. ಅದರ ಬದಲು ತಾನು ನರದೇಹದ ಸ್ವಾಭಾವಿಕ ದಾಹಕ್ಕೆ ಸ್ವಲ್ಪ ಸೋತರೂ, ಮರ್ಮಾಹತರಾಗಿ, ಲಜ್ಜಿತರಾಗಿ ನೊಂದುಹೋಗುತ್ತಿದ್ದರು. ತಿರುಗಿಯೂ ನೋಡುತ್ತಿರಲಿಲ್ಲ, ಇದರಿಂದಾಗಿ ಅವರ ರೂಪವತಿ, ಯುವತಿಯಾದ ಹೆಂಡತಿ ಎಷ್ಟೊಂದು ಅವಮಾನವನ್ನು ಅನುಭವಿಸುತ್ತಿದ್ದಳು ಎಂಬುದನ್ನೂ ಅರಿತಿರಲಿಲ್ಲ. ವಿಜಯಾಗೆ ಅವಮಾನದ ಅನುಭವವಾಗುತ್ತಿತ್ತು.

ಈ ಅವಮಾನದ ಭಾವನೆಯಿಂದಲೇ ಏಳುತ್ತಿತ್ತು ಆಕ್ರೋಶ. ಮತ್ತೆ ಆ ಆಕ್ರೋಶದಿಂದಾಗಿ ತನ್ನನ್ನು ಇನ್ನೂ ಆಕರ್ಷಣೀಯರನ್ನಾಗಿ ಮಾಡಿಕೊಳ್ಳುವುದಕ್ಕಾಗಿ ಲಜ್ಜೆ, ನಾಚಿಕೆಗಳನ್ನು ಮೂಲೆಗೆ ಸರಿಸಿ ಇಟ್ಟುದೂ ಅಲ್ಲದೇ, ಯಾವುದಾದರೊಂದು ಸಬೂಬು ಸಿಕ್ಕಿದರೆ ಅವರನ್ನು ಅಪರಾಧಿಯ ಕಟಕಟೆಯಲ್ಲಿ ನಿಲ್ಲಿಸಬಹುದೆಂದು ಅದನ್ನು ಎಲ್ಲಾ ಕಡೆಯೂ ಹುಡುಕುತ್ತಿದ್ದರು.

ಈ ತರಹದ ಭಾವನೆಯಲ್ಲೇ ಮನಸ್ಸನ್ನು ಓಡಿಸದೆ ಇದ್ದಿದ್ದರೆ, ಸರೋಜಾಕ್ಷರ ಮನಸ್ಸಿನಲ್ಲಿ ಒಂದು ಸ್ಥಾನವನ್ನು ವಿಜಯಾ ಪಡೆಯುತ್ತಿದ್ದರೋ ಏನೋ. ದೇವರನ್ನೇ ಆಧಾರವಾಗಿಟ್ಟುಕೊಂಡೂ, ಮನಸ್ಸಿನಲ್ಲಿ ಸ್ವಲ್ಪ ಸ್ಥಾನವನ್ನು ಪಡೆಯಬಹುದಾಗಿತ್ತು. ತನ್ನ ಆ ತಪ್ಪು ಭಾವನೆಯೊಳಗೆಯೇ ಮುಳುಗಿದ್ದು ಗಂಡನ ಮನಸ್ಸು ತನ್ನ ಕೈಯಿಂದ ಜಾರಿ ಬೀಳಲು ಬಿಟ್ಟುಬಿಟ್ಟರು ವಿಜಯಾ. ಫಲವಾಗಿ ಪ್ರೀತಿಯ ಬದಲು ತಾತ್ಸಾರವನ್ನೇ ಬೆಳೆಯಲು ಬಿಟ್ಟರು.

ಆ ತಾತ್ಸಾರದ ಭಾವನೆ ಮೊಟ್ಟ ಮೊದಲು ಹೊರಬಿತ್ತು ಅಂದೊಂದು ದಿನ ಮಧ್ಯಾಹ್ನದಲ್ಲಿ. ಜ್ವರ ಬಂದು, ಆವತ್ತು ಮಧ್ಯಾಹ್ನವೇ ಸರೋಜಾಕ್ಷರು ಮನೆಗೆ ಹಿಂತಿರುಗಿದ್ದರು. ಬಂದು ನೋಡಿದರೆ ಅವರ ಕೋಣೆಯಲ್ಲಿ, ಪೋಲೀಸು ಶೋಧನೆ ಮಾಡಿದ ಹಾಗೆ ಸಾಮಾನೆಲ್ಲಾ ಚೆಲ್ಲಾ ಪಿಲ್ಲಿಯಾಗಿ ಬಿದ್ದಿದೆ. ಡ್ರಾಯರ್ ತೆರೆದಿದೆ. ಟ್ರಂಕು, ಬೀರೂ ಎಲ್ಲಾ ತೆಗೆದಿದೆ, ಹಾಸಿಗೆ ಎಳೆದುಹಾಕಿದೆ. ರ್‍ಯಾಕಿನಲ್ಲಿದ್ದ ಪುಸ್ತಕಗಳೆಲ್ಲಾ ಕೆಳಗೆ ಬಿದ್ದಿದೆ. ಅವರ ಚಿಕ್ಕಪ್ಪ ಕೊಟ್ಟಿದ್ದ ಚಂದನದ ಮರದ ಪೆಟ್ಟಿಗೆಯನ್ನು ಇಟ್ಟುಕೊಂಡು ವಿಜಯಾ—

ಹೌದು, ಕೋಣೆಯೆಲ್ಲಾ ಹುಡುಕಿದರೂ ವಿಜಯಾಗೆ ಅದರ ಬೀಗದಕೈ ಸಿಗಲಿಲ್ಲ. ವಿಜಯಾಗೆ ಮನಸ್ಸಿನಲ್ಲಿ ಅನಿಸಿತ್ತು. ಇದರಲ್ಲೇ ಇದ್ದಿರಬೇಕು ಅವರ ಅಪರಾಧದ ಪ್ರಮಾಣವಾದಂತಹ ಪ್ರೇಮ ಪತ್ರಗಳು, ಫೋಟೋಗಳೂ ಇರಬಹುದು! ಹಿಂದೆ ವಿಜಯಾ ಅಲ್ಲಾಡಿಸಿ ನೋಡಿದ್ದಾರೆ ಆ ಪೆಟ್ಟಿಗೆಯನ್ನು; ಯಾವಾಗಲಾದರೂ ತೆಗೆದು ನೋಡಬೇಕು ಎಂದು ಯೋಚಿಸಿದ್ದರು. ಈವತ್ತು ತೆಗೆದು ಕೂತುಕೊಂಡರು. ಆದರೆ ಎಲ್ಲೆಲ್ಲಿ ಹುಡುಕಿಯೂ

ಬೀಗದ ಕೈ ಸಿಗಲೇ ಇಲ್ಲ. ಅಂದರೆ ಅಷ್ಟು ಭದ್ರವಾಗಿ ಎಲ್ಲೋ ಇಟ್ಟಿರಬೇಕು ಅವಳ ಈ ನೋಡಲು ಸಾಧುವಾಗಿರುವಂತಹ ಗಂಡ!

ಯಾರಿಗೆ ಗೊತ್ತು, ಸೀಲಿಂಗ್, ತೊಲ ಇಂತಹ ಜಾಗಗಳಲ್ಲೆಲ್ಲಾದರೂ ಜಾಗ ಮಾಡಿ ಬಚ್ಚಿಟ್ಟಿದ್ದರೂ ಇರಬಹುದು!

ವಿಜಯಾ ಮದುವೆಯಾಗಿ ಬಂದಾಗ ಅವರುಗಳು ಇದ್ದ ಮನೆ, ಬಾಡಿಗೆ ಮನೆ, ಹಳೆಯ ಕಾಲದ ಮನೆ. ಎರಡನೆಯ ಮಹಡಿಯಲ್ಲಿ ಇದ್ದುದ್ದು ಒಂದೇ ಕೋಣೆ. ಮದುವೆಗೆ ಮುಂಚೆ ಆ ಕೋಣೆಯ ಅಧೀಶ್ವರನಾಗಿದ್ದ ವಿದ್ಯಾರ್ಥಿ ಸರೋಜಾಕ್ಷ. ಆಮೇಲೆ ಅಧೀಶ್ವರಿಯಾಗಿ ಕೂತಳು ವಿಜಯಾ. ಬರೀ ಕೋಣೆಯ ಅಧೀಶ್ವರಿಯಾಗಿ ಏನು ಲಾಭ ವಿಜಯಾಗೆ ?

ಬೀಗದ ಕೈ ಸಿಗದೆ ನಿರಾಶಳಾಗಿ ರಿಂಗಿನಲ್ಲಿದ್ದ ಎಲ್ಲಾ ಬೀಗದ ಕೈಗಳಿಂದಲೂ ಪ್ರಯತ್ನ ಪಟ್ಟು ಅದನ್ನು ತೆಗೆಯಲು ಸಾಧ್ಯವಾಗದೆ ಹೋದಾಗ, ಒಂದು ಚಾಕುವನ್ನು ತೆಗೆದು ಅದರ ಮುಚ್ಚಳದ ಸಂದಿಯಲ್ಲಿ ಹಾಕಿ ಒಡೆಯಲು ಪ್ರಯತ್ನಿಸುತ್ತಿದ್ದಾಗಲೇ, ಜ್ವರತಾಪದಿಂದ ತೂರಾಡುತ್ತಾ ಸರೋಜಾಕ್ಷರು ಕೋಣೆಯೊಳಗೆ ಬಂದರು.

ಬಂದವರು ಸ್ತಂಭಿಸಿ ನಿಂತು ನೋಡಿದರು: ಸೂಕ್ಷ್ಮವಾದ ನಕಾಸು ಕೆಲಸ ಮಾಡಿದ ಆ ಮೈಸೂರಿನ ಚಂದನದ ಮರದ ಪೆಟ್ಟಿಗೆಯ ಮುಚ್ಚಳದ ಬಂದು ಅಂಶ ಕಿತ್ತುಹೋಗಿದೆ ಮತ್ತು ಚಾಕುವಿನಿಂದಾಗಿ ಅದು ತೆರೆದುಕೊಂಡು ಬಿಟ್ಟಿದೆ. ಒಂದು ಮಂಚದ ಮೇಲೆ ಕೂತು ಕೋಣೆಯ ಸುತ್ತಲೂ ಒಂದು ನೋಟ ಹಾಯಿಸಿ ವಿಜಯಾನ ಕೇಳಿದರು. “ಇದೆಲ್ಲಾ ಏನು?” ಇಂತಹ ಭಯಂಕರವಾದ ಸಂದರ್ಭದಲ್ಲಿ ಜೋರನ್ನು ತೋರಿಸಲಾಗಲಿಲ್ಲ. ವಿಜಯಾ ಹೇಗೋ ಸಮಾಳಿಸಿಕೊಂಡು, “ಅಯ್ಯೋ, ಇದೇನು, ಈವತ್ತು ನೀವು ಬೇಗ ಮನೆಗೆ ಬಂದಿದ್ದು? ಎಲ್ಲಾ ಸಾಮಾನುಗಳನ್ನೂ ತೆಗೆದು ಹಾಕಿ ಧೂಳು ಹೊಡೆಯುತ್ತಿದ್ದೆ.” ಎಂದಳು.

ಸರೋಜಾಕ್ಷರಿಗೆ ತಲೆ ಸಿಡಿಯುತ್ತಿತ್ತು, ಆದರೂ ಮಲಗಿಕೊಂಡು ಬಿಡದೆ ಸ್ವಲ್ಪ ಗಡುಸಾಗಿಯೇ ಕೇಳಿದರು, “ಆ ಪೆಟ್ಟಿಗೆಯೊಳಗೆ ಧೂಳು ಹೊಡೆಯುತ್ತಿದ್ದೆಯಾ?”

ಪೆಟ್ಟಿಗೆ?!

ಇದಕ್ಕೇನು ಜವಾಬು ಕೊಡುವುದೆಂದು ತೋರದೆ ಸುಮ್ಮನಿದ್ದಳು ವಿಜಯಾ. ಸಂದರ್ಭವನ್ನು ಹೇಗೆ ಸಮಾಳಿಸುವುದೆಂದು ಯೋಚಿಸುತ್ತಿದ್ದಳೋ ಏನೋ. ಸರೋಜಾಕ್ಷರು ಮಂಚದಿಂದಿಳಿದು ಬಂದು ಪೆಟ್ಟಿಗೆಯನ್ನು ಕೈಯಲ್ಲಿ ತೆಗೆದುಕೊಂಡು ಅದರ ಸ್ಥಿತಿಯನ್ನು ನೋಡಿದರು. ಆಮೇಲೆ ಅದರಿಂದ ಒಂದು ಕಂತೆ ಕಾಗದಗಳನ್ನು ತೆಗೆದು ನೀಡುತ್ತಾ, ತಿರಸ್ಕಾರ ಮತ್ತು ವ್ಯಥೆ ಮಿಶ್ರಿತ ಕಟುಸ್ವರದಿಂದ ಹೇಳಿದರು. “ಪ್ರೇಮ ಪತ್ರ ಹುಡುಕುತ್ತಿದ್ದೆಯಾ? ತೆಗೆದುಕೊ. ಓದುವ ಶಕ್ತಿ ಇದ್ದರೆ ಓದಿ ನೋಡು.”

ಅದರಲ್ಲಿದ್ದಿದ್ದು ಸರೋಜಾಕ್ಷರ ಯೂನಿವರ್ಸಿಟಿಯ ಸರ್ಟಿಫಿಕೇಟ್, ಕನ್ನಡಕದ ಪ್ರಿಸ್‌ಕ್ರಿಪ್ಷನ್, ಕ್ಯಾಮರಾದ ಗ್ಯಾರಂಟಿ ಪೇಪರ್ ಇತ್ಯಾದಿ. ನಾಜೂಕಾದ ಆ ಪೆಟ್ಟಿಗೆಯಲ್ಲಿ ಅವರು ಮೊದಲು ಆ ಸರ್ಟಿಫಿಕೇಟುಗಳನ್ನು ಮಾತ್ರ ಇಡಲು ಉದ್ದೇಶಿಸಿರಬಹುದು. ಆಮೇಲೆ ಅದು, ಇದು ಎಂದು ಕಾಗದಗಳು ಸೇರಿ ಬಿಟ್ಟಿದೆ. ಬೀಗದ ಕೈ ಎಲ್ಲಾದರೂ ಹಾಳಾದೀತು ಎಂದು ತಮ್ಮ ತಾಯಿಯ ಹತ್ತಿರ ಅದನ್ನು ಅವರು ಕೊಟ್ಟಿದ್ದರು.

ಹೊರಟುಹೋಗಿದ್ದ ಶಕ್ತಿ ಹಿಂತಿರುಗುತ್ತಿತ್ತು ವಿಜಯಾಗೆ, ಯಾವ ಶಕ್ತಿ ಕೇವಲ ಧಾರ್ಷ್ಟ್ಯದಿಂದಲೇ ಹುಟ್ಟಿದ್ದೋ ಅಂತಹುದೇ! ಧಾರ್ಷ್ಟ್ಯತೆಯಿಂದಲೇ ಹೇಳಿದ್ದಳು ವಿಜಯಾ, "ಅಬ್ಬಬ್ಬಾ, ಇಂತಹ ಸಾಮಾನುಗಳನ್ನು ಕೂಡ ಇಷ್ಟೊಂದು ಜೋಪಾನವಾಗಿ ಯಾವ ಮನುಷ್ಯನಾದರೂ ಇಡುತ್ತಾನೆ ಅನ್ನೋದು ನನಗೇನು ಗೊತ್ತು."

ಸರೋಜಾಕ್ಷರು ಮುಂದಕ್ಕೆ ಮಾತಾಡಲಿಲ್ಲ.

ಕೇವಲ ಮುಖ-ಕಣ್ಣುಗಳಲ್ಲೇ ಒಂದು ತಿರಸ್ಕಾರದ ಭಾವನೆ ಉಕ್ಕಿತ್ತು. ತಿರಸ್ಕಾರದ ಹೊರಬೀಳುವಿಕೆಗೆ ಅದೇ ಮೊದಲು. ಆಮೇಲಿನಿಂದ ಪ್ರತಿ ನಿಯತವೂ ಕಾಣುತ್ತಿದೆ ಆ ತಿರಸ್ಕಾರದ, ವ್ಯಂಗ್ಯದ ಭಾವ. ಸರೋಜಾಕ್ಷರ ತಂದೆಯು ಪರಲೋಕವನ್ನೈದಿದಾಗ ವಿಜಯಾ ಗಟ್ಟಿಯಾಗಿ ಅಳುತ್ತಾ, "ಅಯ್ಯೋ, ನನ್ನ ಅಂತಹ ರಾಜರಂತಿದ್ದ ಮಾವನವರು ಹೋಗಿ ಬಿಟ್ಟರಲ್ಲ. ನಾನು ರಾಜಕುಮಾರಿಯಂತಿದ್ದೆನಲ್ಲಾ" ಎಂದು ಆರವಾರ ಮಾಡಿದಾಗ, ಸರೋಜಾಕ್ಷರು ತಮ್ಮ ತಂದೆಯ ಹಾಸಿಗೆಯ ಪಕ್ಕದಿಂದೆದ್ದು ಬಂದು, "ನಿನ್ನ ಶೋಕವನ್ನು ಈ ತರಹ ತೋರಿಸಬೇಕಾದರೆ ಎರಡನೆಯ ಮಹಡಿಯಲ್ಲಿ ನಿನ್ನ ಕೋಣೆಗೆ ಹೋಗು" ಎಂದಿದ್ದರು.

ಸರೋಜಾಕ್ಷರ ತಾಯಿ ಅವರ ತಂದೆಗೆ ಮುಂಚೆಯೇ ದೈವಾಧೀನರಾಗಿದ್ದರು. ಆಗ ವಿಜಯಾ ತನ್ನ ಮುತ್ತೈದೆ ಅತ್ತೆಯ ಕುಂಕುಮ ಪ್ರಸಾದಕ್ಕಾಗಿ ಕಿತ್ತಾಡಿದಾಗ ಸರೋಜಾಕ್ಷರು ತೀವ್ರವಾಗಿ ಖಂಡಿಸಿ ಹೇಳಿದ್ದರು. "ನಿನ್ನ ಭಕ್ತಿಯ ನಾಟಕ ಬಹಳ ಓವರ್-ಆಕ್ಟಿಂಗ್ ಆಗುತ್ತಾ ಇದೆ ವಿಜಯಾ, ಅಸಹ್ಯವಾಗಿದೆ" ಎಂದು.

ಈ ತರಹದ ಬಹಳ ಉದಾಹರಣೆಗಳು ಅವರ ದಾಂಪತ್ಯ ಜೀವನದಲ್ಲಿ ಇದೆ. ಅವು ಹೊರಗಿನವರ ಕಣ್ಣಿಗೂ, ಇವರುಗಳ ನಿಜ ಜೀವನದ ಭಾವನೆಗಳನ್ನು ತೋರಿಸಿದೆ. ಆ ಆಕ್ರೋಶವೇ ವಿಜಯಾರನ್ನು ಉಗ್ರ ಮತ್ತು ನಿರ್ಲಜ್ಜಳನ್ನಾಗಿಸಿದೆಯೋ ಏನೋ. ಅಂತೂ ಕಡೆಗೂ ವಿಜಯಾ ವಿಜಯಿನಿಯಾಗಿದ್ದಾಳೆ.

ವಿಜಯಿನಿ ಆಗಿಯೇ ಆಗುತ್ತಾಳೆ.

ತಕ್ಕ ಪ್ರಮಾಣಗಳಾದ್ದಂತೆ ಕೈಗೆ ನಾಲ್ಕು ಮಕ್ಕಳು ಬಂದುಬಿಟ್ಟಿದ್ದಾರೆ.

ಬಹುಶಃ ಎಲ್ಲವೂ ಸರೋಜಾಕ್ಷರ ಮನೋದೌರ್ಬಲ್ಯದ ಸಾಕ್ಷಿಗಳಲ್ಲವೇನೋ, ವಿಜಯಾರ ನಿರ್ಲಜ್ಜತೆಯೇ ಕಾರಣವಾಗಿರಲೂಬಹುದು. ಅದಕ್ಕೆ ಸಾಕ್ಷಿ ಇಲ್ಲ. ಆದರೆ ಸರೋಜಾಕ್ಷರು, ವಿಜಯಾ ಹೇಳುವಂತೆ (ಅದೂ ಇನ್ನೊಬ್ಬರ ಕಿವಿಗೆ ಬೀಳಲೆಂದೇ) 'ಆಗ

ಜ್ಞಾಪಕ ಇರಲಿಲ್ಲವೇ' ಎಂದೋ, ಅಥವಾ 'ಬಹಳ ಅಸಹ್ಯ ನನ್ನನ್ನು ಕಂಡರೆ ಅಲ್ಲವೇ? ಆದರೆ ಇದೆಲ್ಲಾ ಎಲ್ಲಿಂದ ಬಂತು? ಬೀದಿಯಿಂದ ಆರಿಸಿಕೊಂಡು ಬಂದನೇ?' ಎಂದೋ? ನಗುತ್ತಾ ...... 'ಕೆಂಡವನ್ನು ಬೂದಿಯಿಂದ ಮುಚ್ಚಿಡುವುದಕ್ಕಾಗುವುದಿಲ್ಲ ಎಂಬುದು ಗೊತ್ತಿಲ್ಲವೇ?' ಎಂದೋ, ಹೇಳುವವರಲ್ಲ!

ಹೌದು, ಇಂತಹ ಮಾತುಗಳನ್ನಾಡುವುದು ವಿಜಯಾಗೆ ಅನಾಯಾಸವಾಗಿ ಬರುತ್ತಿತ್ತು. ಮತ್ತು ಸರೋಜಾಕ್ಷರು ಅಸಹಾಯಕರಾಗಿರುವುದನ್ನು ನೋಡಿ ಮನಸ್ಸಿನಲ್ಲೇ ನಗುವೂ ಬರುತ್ತಿತ್ತು. ಅದೇ ವಿಜಯಾ ಯಾವುದಾದರೊಂದು ಸಾಕ್ಷಿ ಇಲ್ಲದ ಶಾಂತವಾದ ಇರುಳನ್ನು ತನ್ನ ಉಗುರಿನಿಂದ ಬಗೆದು ಅತ್ತು ಅತ್ತು ಹೇಳುತ್ತಿದ್ದಳು, "ಒಂದು ವೇಳೆ ಕೋಪದಲ್ಲಿ ನಾನು ಒಂದು ಅನ್ಯಾಯವಾದ ಮಾತನ್ನು ಅಂದಿರಬಹುದು, ಅದಕ್ಕಾಗಿ ನೀವು ನನ್ನನ್ನು ತ್ಯಾಗ ಮಾಡುತ್ತೀರಾ? ಹಾಗಾದರೆ ಒಂದಿಷ್ಟು ವಿಷವನ್ನು ತಂದುಕೊಡಿ ತಿಂದು ಸಾಯುತ್ತೇನೆ."

ನಿರ್ಲಜ್ಜ, ಉದ್ಧತ, ಆತ್ಮಗೌರವವಿಲ್ಲದ ಸ್ತ್ರೀಯ ಹತ್ತಿರ ಗಂಡ ಎನಿಸಿಕೊಂಡಿರುವ ಜೀವ ಎಷ್ಟು ಅಸಹಾಯಕನಾಗಿರುತ್ತಾನೆ ಎಂಬುದು, ಅವನ ಸೃಷ್ಟಿಕರ್ತನೊಬ್ಬನಿಗೇ ಗೊತ್ತು.

* * *

ಆದರೆ ಈಗ ನಾಟಕದ ದೃಶ್ಯ ಬದಲಾಗಿದೆ. ಈಗ ವಿಜಯಾ ನಿಧಾನವಾಗಿ ಕೇಳಿದರು, "ಬ್ಯಾಂಕಿನಲ್ಲಿ ಎಷ್ಟು ದುಡ್ಡಿದೆ?"

ಈ ಆಕಸ್ಮಿಕ ಪ್ರಶ್ನೆ ಯಾತರದೋ ಪೀಠಿಕೆಯಾಗಿ ತೋರಿತು ಸರೋಜಾಕ್ಷರಿಗೆ. ಒಂದು ವೇಳೆ ಯಾವುದಾದರೂ ದೊಡ್ಡ ಖರ್ಚಿಗೆ ಪೀಠಿಕೆ ಹಾಕುತ್ತಿದ್ದಾಳೋ, ಯಾವುದಾದರೂ ದೊಡ್ಡ ಖರ್ಚಿನ ವ್ರತವೋ, ತೀರ್ಥಯಾತ್ರೆಯೋ! ಆದರೆ ಆ ಯೋಚನೆ ಒಂದು ಕ್ಷಣ ಮಾತ್ರವೇ.

ವಿಜಯಾರ ವ್ಯಂಗ್ಯದಿಂದ ಹುಬ್ಬೇರಿದ ಮುಖವನ್ನು ನೋಡಿದ ಕೂಡಲೇ ನಿಜವಾದ ಕಾರಣ ಗೊತ್ತಾಯಿತು. ಆದ್ದರಿಂದ ಬೇರೆ ಕಡೆಗೆ ತಿರುಗಿಕೊಂಡರು.

ವಿಜಯಾ ತಿರುಗಿ ಗಿಳ್ಳು ಧ್ವನಿಯಿಂದ ಕೇಳಿದರು. "ಜವಾಬು ಕೊಡಲಿಲ್ಲವಲ್ಲಾ?"

ಸರೋಜಾಕ್ಷರು ಗಂಭೀರ ಧ್ವನಿಯಿಂದ ನುಡಿದರು. "ಬೇಕಾದಷ್ಟು ದುಡ್ಡಿದೆ."

ವಿಜಯಾ ನೇರಾದ ದಾರಿಗೆ ಬಂದರು.

"ಹೌದು. ಅದೇನೂ ನನಗೆ ತಿಳಿಯದ್ದಲ್ಲ. ಅದಕ್ಕೇ ಹೇಳುತ್ತೇನೆ. ಭಂಡಾರದಲ್ಲಿ ಅಂಬಾಭವಾನಿ ಹಾಗಿರುವಾಗ, ಅಷ್ಟೊಂದು ಜೋರು ತೋರಿಸುವ ಅವಶ್ಯಕತೆ ಏನಿತ್ತು?"

ಸರೋಜಾಕ್ಷರಿಗೆ ಜವಾಬು ಕೊಡಲು ಮನಸ್ಸಿಲ್ಲ. ಆದರೆ ಗೊತ್ತು ಜವಾಬು ಪಡೆಯದೆ ವಿಜಯಾ ಹೋಗುವುದಿಲ್ಲವೆಂದು. ಅದಕ್ಕೇ ಗಂಭೀರವಾಗಿ ಹೇಳಿದರು. "ಅವಶ್ಯಕತೆ ಇತ್ತು ಎಂದು ನಾನು ಹೇಳಿದರೆ? ವಿಜಯಾ ತನ್ನ ಹಳದಿಯ ಬಣ್ಣದ ಮರಪಾಚಿಯಂತಹ

ಮುಖವನ್ನು ಸೊಟ್ಟಮಾಡಿಕೊಂಡು ಹೇಳಿದರು: "ಮತ್ತೆ ನಿಮ್ಮ ಕೆಲಸದ ವಿಷಯ ನೀವು ಅನಾವಶ್ಯಕವಾದದ್ದು ಎಂದು ಹೇಳುತ್ತೀರಾ? ಮತ್ತೆ ಆ ಅವಶ್ಯಕತೆ ಹೆಂಡತಿ-ಮಕ್ಕಳ ಹೊಟ್ಟೆಗಿಂತ ದೊಡ್ಡ ಅವಶ್ಯಕತೆಯಾಗಿತ್ತೇ?"

ಸರೋಜಾಕ್ಷರು ಬೇರೆ ಕಡೆ ನೋಡುತ್ತಿದ್ದರು. ಅದಕ್ಕೇ ಅನ್ಯಮನಸ್ಕರಾಗಿ ಹೇಳಿಬಿಟ್ಟರು, "ಇರಬಹುದು, ದೊಡ್ಡದಿರಬಹುದು."

ಆದರೆ ವಿಜಯಾ ಕೋಪಿಸಿಕೊಂಡು ಹೋಗುವವರೇ? ಅದಕ್ಕೇ ಹೇಳಿದರು, "ನಿಮಗೆ ಹಾಗಿರಬಹುದು. ಆದರೆ ಪ್ರಪಂಚ ಹಾಗೆ ಹೇಳುವುದಿಲ್ಲ. ನಾನು ಹೇಳುತ್ತೇನೆ, ನೀವು ಈ ಮಾನ-ಮರ್ಯಾದೆ ಇತ್ಯಾದಿ ಮಾತೆಲ್ಲಾ ಮರೆತು ತಿರುಗಿ ಹೋಗಿ ಕೆಲಸಕ್ಕೆ ಜಾಯಿನ್ ಆಗಬೇಕು."

"ಅದಾಗುವುದಿಲ್ಲ."

"ಆಗದೇ ಹೋದರೆ ಹೇಗಾದರೂ ಆಗಲಿ ಮನೆ ಖರ್ಚಿಗೆ ತಂದು ಹಾಕಿ, ಹಾಗಿಲ್ಲದಿದ್ದರೆ ನನಗೆ ಅನುಮತಿ ಕೊಡಿ, ಭಿಕ್ಷೆಯ ಜೋಳಿಗೆ ಹಿಡಿದುಕೊಂಡು ಭಿಕ್ಷೆಗೆ ಹೋಗುತ್ತೇನೆ."

ಸರೋಜಾಕ್ಷರು ಆಗ ಕೈಮುಗಿದು ಹೇಳಿಗರು, "ಈಗ ನೀನು ಕೋಣೆಯಿಂದ ಹೋಗು". ಇದೊಂದೇ ಅಸ್ತ್ರ ಅವರ ಹತ್ತಿರ ಇಚುವುದು.

ಇದಾದ ಮೇಲೆ ಅಲ್ಲಿರುವುದಿಲ್ಲ ವಿಜಯಾ.

ಕಣ್ಣಿಂದ ಕೆಂಡವನ್ನು ಕಾರುತ್ತಾ ಹೊರಟುಹೋಗುವರು. ಇಂದು ಹೋಗಲಿಲ್ಲ. ತೀಕ್ಷ್ಣವಾದ ಗಂಟಲಿನಿಂದ ಕೂಗಿಕೊಂಡರು. "ಹೊರದೂಡಿಬಿಟ್ಟು ಬಚಾವಾಗಲೂ ನೋಡಬೇಡಿ. ಅದೆಲ್ಲಾ ನಡೆಯುವುದಿಲ್ಲ. ತಿಂಗಳು, ತಿಂಗಳು ಎಷ್ಟು ದುಡ್ಡು ಸಂಸಾರಕ್ಕೆ ಬೇಕಾಗುತ್ತಿತ್ತೋ ಅದನ್ನು ತಂದು ಕೊಡುತ್ತೇನೆ ಎಂದು ಭಾಷೆ ಕೊಡಿ, ಆಗಲೇ ನಾನು ಕದಲೋದು ಇಲ್ಲಿಂದ."

ಆ ಕೂಗಾಟ ಕೇಳಿ ಶಾರದಾ ಪ್ರಸಾದ್ ಓಡಿ ಬಂದಿದ್ದರು. ಹೇಳಿದ್ದರು, "ಇದೇನು ಅತ್ತಿಗೆ? ಇದೇ ತಾನೆ ಸಾಯೋ ಅಂತಹ ರೋಗದಿಂದ ಎದ್ದಿದ್ದಾರೆ ಮನುಷ್ಯ, ತಿರುಗ ಇದೆಲ್ಲದರಿಂದ ಒಂದು ಸ್ಟ್ರೋಕ್-ಗೀಕ್ ಆಗಿಹೋದರೆ? ಹೋಗಿ, ಹೋಗಿ, ನಿಮ್ಮ ಪೂಜೆಯ ಕೋಣೆಗೆ ಹೋಗಿ." ವಿಜಯಾನೂ ಈ ಸು-ಸಂದರ್ಭವನ್ನು ಬಿಡಲಿಲ್ಲ.

ಮುಖ, ಮೈ, ಕೈಯೆಲ್ಲಾ ಆಡಿಸಿಕೊಂಡು ಹೇಳಿದ್ದರು, "ಬಾಯಲ್ಲಿ ಹಿತೈಷಿ ಎಲ್ಲರೂ ಆಗಬಹುದು ಅಳಿಯಂದಿರೇ, ಕೇಳುತ್ತೇನೆ, ಇಷ್ಟೊಂದು ಜನರ ಹೊಟ್ಟೆ ತುಂಬುವುದು ಹೇಗೆ?"

ಆಗ ಒಂದು ಅದ್ಭುತವೇ ನಡೆದುಹೋಯಿತು. ವ್ಯಂಗ್ಯ ಗೇಲಿಗಳನ್ನರಿಯದ ಶಾರದಾಪ್ರಸಾದ್ ಅದೇ ಧ್ವನಿಯಿಂದಲೇ ಕೇಳಿದರು. "ಯಾಕೆ, ನಿಮ್ಮ ದೇವರು ಏನು ಮಾಡುತ್ತಾರೆ? ತಾನು ಮಾತ್ರ ಕೂತುಕೊಂಡು, ಬೆಣ್ಣೆ-ಹಾಲಿನ ನೈವೇದ್ಯವನ್ನು ತೆಗೆದು

ಕೊಳ್ಳುತ್ತಾರೆಯೇ? ಅವರಿಗಾಗುವುದಿಲ್ಲವೇ ಈ ಹೊಟ್ಟೆಗಳನ್ನು ಹೊರೆಯುವ ಭಾರವನ್ನು ತೆಗೆದುಕೊಳ್ಳುವುದಕ್ಕೆ?"

ಆಕಸ್ಮಿಕವಾದ ಈ ಪ್ರಶ್ನೆಗೆ ಉತ್ತರ ಸಿಗಲಿಲ್ಲ ವಿಜಯಾಗೆ, ಅದಕ್ಕೇ 'ಎಲ್ಲಾ ಭಂಡಾಟ' ಎಂದು ಹೇಳಿ ಕೋಣೆಯಿಂದ ಎದ್ದು ಹೋದರು. ಆಕೆ ಇನ್ನೂ ಮೆಟ್ಟಲು ಹತ್ತುತ್ತಿರುವಾಗಲೇ ಶಾರದಾಪ್ರಸಾದ್ ಗಟ್ಟಿಯಾಗಿಯೇ ಹೇಳಿದರು, "ಹೌದು, ಹಾಗೇ ಹೋಗಿ, ಹೋಗಿ ಅವರನ್ನೇ ತೊಂದರೆ ಮಾಡಿ. ಚಿರಕಾಲವೂ ಅವರನ್ನು ಕಟ್ಟಿಕೊಂಡೇ ಬಿದ್ದಿದ್ದಿರಿ. ಈಗ ಆಪತ್ಕಾಲದಲ್ಲಿ ಮನುಷ್ಯನ ಮೇಲೆ ಭರವಸೆ ಏಕೆ?"

ಇಷ್ಟು ಅವಾಂತರದ ಮಧ್ಯದಲ್ಲೂ ಹಠಾತ್ತನೆ ಸರೋಜಾಕ್ಷರ ಮುಖದ ಮೇಲೆ ಒಂದು ಕೌತುಕದ ನಗೆ ಮೂಡಿತು. ಹೇಳಿದರು, "ನಿನಗೆ ಈಗೆಲ್ಲಾ ಧೈರ್ಯ ಜಾಸ್ತಿಯಾಗಿದೆಯಲ್ಲಾ!"

ಶಾರದಾಪ್ರಸಾದ್ ಸ್ವಲ್ಪ ಲಜ್ಜಿತರಾಗಿ ಹೇಳಿದರು, "ಏನು ಮಾಡಲಿ ಅಣ್ಣಾ, ಹಠಾತ್ತಾಗಿ ಒಂದು ತರಹ ರೇಗಿಹೋಯಿತು. ಹಳ್ಳಿಗಮಾರನಲ್ಲವೇ!"

ಆಮೇಲೆ ತಾನೇ ಕೇಳಿದರು, "ಆಮೇಲೆ ಈಗ ಏನು ಮಾಡಬೇಕೆಂದು ನಿಶ್ಚಯಿಸಿದ್ದೀರಿ? ಏನಾದರೂ ಮಾಡಲೇಬೇಕಲ್ಲವೇ?"

"ಅದೇನೋ ಹೌದು."

ಶಾರದಾಪ್ರಸಾದ್ ಸ್ವಲ್ಪ ಖಿನ್ನರಾಗಿ ಹೇಳಿದರು, "ನನ್ನ ಪುಸ್ತಕ ಮುಗಿದಿದ್ದರೆ ಇಷ್ಟು ಯೋಚಿಸುತ್ತಿರಲಿಲ್ಲ. ಏನು ಮಾಡಲಿ? ಆಗಲಿಲ್ಲವಲ್ಲ. ಒಂದಷ್ಟು ದಿನಗಳು ಹೇಗಾದರೂ ನಡೆಸಿ ಆಮೇಲೆ ಬುಕ್ ಪಬ್ಲಿಷ್ ಆದ ಕೂಡಲೇ ಹಾಟ್‌ಕೇಕ್ ತರಹ ಮಾರಾಟವಾಗುತ್ತೆ. ಬೆಲೆಯೂ ಏನು ಕಡಿಮೆ ಇರುವುದಿಲ್ಲ. ಇಪ್ಪತ್ತು ರೂಪಾಯಿಗೆ ಏನೂ ಕಮ್ಮಿ ಇರುವುದಿಲ್ಲ. ಅಂದಾಜಾಗಿ ಇಟ್ಟುಕೊಳ್ಳಿ. ಫರ್ಸ್ಟ್ ಎಡಿಷನ್ನಿನಲ್ಲಿ, ಒಂದು ಎರಡು ಸಾವಿರ ಪ್ರಿಂಟ್ ಆಯಿತು ಅಂತ ಇಟ್ಟು ಕೊಳ್ಳಿ. ಸಾಮಾನ್ಯವಾಗಿ ಇಂತಹ ರೀಸರ್ಚಿನ ಪುಸ್ತಕಗಳು ಐದು ಆರು ಸಾವಿರ ಆಗುತ್ತೆ, ಆದರೂ ಎರಡೇ ಇಟ್ಟುಕೊಳ್ಳೋಣ. ಹಾಗಾದರೂ ನಿಮಗೆ ಒಂದು ನಲವತ್ತು ಸಾವಿರ ಬಂದುಬಿಡುತ್ತೆ. ಇನ್ನೇನು ಯೋಚನೆ? ಅಷ್ಟರಲ್ಲಿ ಮುಂದಿನ ಪಾರ್ಟನ್ನು ಬರೆಯುವ ಕೆಲಸವೂ ನಡೆಯುತ್ತಿರುತ್ತೆ." ಶಾರದಾಪ್ರಸಾದನ ಮುಖ ಸಂತೋಷದಿಂದ ಅರಳುತ್ತೆ. ಆ 'ಯೋಚನೆಯಿಲ್ಲದೆ ಕಳೆಯುವ' ದಿನಗಳ ಬಗ್ಗೆ ಕಲ್ಪನೆಯಲ್ಲಿ ಮಗ್ನನಾಗಿ ತನ್ನ ಬರೆಯುವ ಕೆಲಸಕ್ಕೆ ಹೋಗುತ್ತಾನೆ. ಸರೋಜಾಕ್ಷರು ಒಂದು ಬಗೆಯ, ಶ್ರದ್ಧೆಯಿಂದ ಕೂಡಿದ ಸ್ನೇಹಭಾವದಿಂದ ಆ ಕಡೆ ನೋಡುತ್ತಿರುತ್ತಾರೆ.

ಸರೋಜಾಕ್ಷರ ಮನೋಭಾವವೇ ಹೀಗೆ. ಸ್ವಲ್ಪ ಹಿಂದು–ಮುಂದು! ಹಾಗಿಲ್ಲದಿದ್ದರೆ ಇವರ ಮೇಲೆ ಶ್ರದ್ಧೆ, ಗೌರವ ಮರ್ಯಾದೆ ಎಂದರೆ ಏನರ್ಥ? ದಯೆ, ಮಮತೆ ಎಂದರೂ, ಏನೋ ಪಾಪ ಹೋಗಲಿ ಎಂದು ಒಪ್ಪಬಹುದು. ಶ್ರದ್ಧೆ, ಮರ್ಯಾದೆ ಎಂದರೆ? ಮಕ್ಕಳು ಕೇಳಿದರೆ ಬಿದ್ದೂ ಬಿದ್ದು ನಗುತ್ತಾರೆ ಅಷ್ಟೆ.

ಆದರೆ ಅವರುಗಳು ಯಾರಿಗೂ ಈಗ ನಗುವ ಮೂಡ್ ಇಲ್ಲ. ಅಪ್ಪಾ ಕೆಲಸ ಬಿಟ್ಟಿದ್ದು ಎಲ್ಲರಿಗೂ ಒಂದು ದೊಡ್ಡ ಪೆಟ್ಟು.

ದೊಡ್ಡ ಮಗ ಸ್ಪಷ್ಟವಾಗಿಯೇ ಹೇಳಿಬಿಟ್ಟ: "ಅವರ ಕೆಲಸಗಳಿಗೆ ಅವರೇ ಜವಾಬ್ದಾರರು. ಸಂಸಾರ ನನ್ನಿಂದ ಏನೊಂದೂ ಎದುರುನೋಡುವುದು ವ್ಯರ್ಥ. ಆದರೆ ನನ್ನ ಫ್ಯಾಮಿಲಿ ನನ್ನ ಜವಾಬ್ದಾರಿ. ಸ್ಪಷ್ಟವಾಗಿ ಬೇಕಾದರೆ ಹೇಳಿಬಿಡಿ. ನನ್ನ ಫ್ಯಾಮಿಲಿಯನ್ನು ಕರೆದುಕೊಂಡು ಹೋರಟುಹೋಗುತ್ತೇನೆ" ಎಂದು ಹೇಗೆ ನಿಂತಿದ್ದ ಎಂದರೆ, ಏನೋ ಆರ್ಡರ್ ಸಿಕ್ಕಿದರೆ ತಕ್ಷಣವೇ ಹೊರಡುತ್ತಾನೆ ಎಂಬಂತೆ! ಯಾವಾಗ ಏನೂ ಜವಾಬು ಬರಲಿಲ್ಲವೋ ಆಗ ಸ್ವಲ್ಪ ಮೈಮುರಿದು, "ಸರಿ, ಯಾವಾಗ ತೊಂದರೆ ಆಗುತ್ತೋ ಆಗ ಹೇಳಿಬಿಡಿ" ಎಂದು ಹೇಳಿ ಹೊರಟುಹೋದ.

ಸಾಯಂಕಾಲ ಮಯೂರಾಕ್ಷಿ ಬಂದಳು. ಅತ್ತಿಗೆಯನ್ನೂ ಮೀರುವಂತಹ ಸಜ್ಜಿನಲ್ಲಿ ಬಂದಳು. ಬಂದ ಕೂಡಲೇ ಫ್ಯಾನಿನ ಸ್ಪೀಡನ್ನು ಜಾಸ್ತಿ ಮಾಡಿದಳು. ಆಮೇಲೆ ಹೇಳಿದಳು, "ನೀವು ಹೀಗೆ ಈ ಸಣ್ಣ ವಿಷಯವನ್ನು ದೊಡ್ಡದು ಮಾಡಿ, ಹೀಗೆ ಮಾಡುತ್ತೀರೆಂದು ಎಣಿಸಿಯೇ ಇರಲಿಲ್ಲ. ಆಶ್ಚರ್ಯ, ಈ ಕಾಲದಲ್ಲಿ ಘೆರಾವ್ ಆಗದೆ ಇರುವವರು ಯಾರು? ಪ್ರೈಮ್ ಮಿನಿಸ್ಟರಿಂದ ಹಿಡಿದು ಹೈಕೋರ್ಟ್ ಜಡ್ಜ್‌ವರೆಗೂ ಬಾಕಿ ಇದಾರೆಯೇ ಯಾರಾದರೂ? ಎಲ್ಲರೂ, ಕೆಲಸ, ಕಾರ್ಯ ಬಿಟ್ಟು ಬಿಡುತ್ತಾರೆಯೇ?"

ಸರೋಜಾಕ್ಷರು ಸ್ವಲ್ಪ ನಕ್ಕು ಹೇಳಿದರು, "ನೀನು ನನಗೆ ಹಿತೋಪದೇಶ ಮಾಡಲು ಬಂದಿದ್ದೀಯೋ? ಅಥವಾ ಕಾರಣ ಕೇಳಲೋ?"

"ಹಿತೋಪದೇಶ!" ಗಂಡನ ಎದುರಿಗೆ ಇದರಿಂದಾದ ಅವಮಾನದಿಂದ ಕೆಂಪಾದ ಮಯೂರಾಕ್ಷಿ ನಿಮಗೆ ಹಿತೋಪದೇಶ ಹೇಳಲು ಬರುವಷ್ಟು ಮೂರ್ಖಳಲ್ಲ ನಾನು, ಅಪ್ಪಾ, ಅಥವಾ ಕಾರಣ ತಾನೆ ಏಕೆ ಕೇಳಲಿ, ನೀವು ಕೆಲಸ ಬಿಟ್ಟರೆ ನನ್ನ ಸಂಸಾರವೇನೂ ನಡೆಯದೆ ಹೋಗುವುದಿಲ್ಲವಲ್ಲ. ಸುಮ್ಮನೆ ಮಾತಿಗೆ ಹೇಳಿದೆ. ನೀವು ಮಕ್ಕಳು ಎನ್ನುವ ಮರ್ಯಾದೆಯನ್ನು ನಮಗೆ ಕೊಡದಿದ್ದರೂ, ಸಂಬಂಧವನ್ನು ನಾವು ಮರೆಯುವುದಕ್ಕಾಗುವುದಿಲ್ಲವಲ್ಲ!" ಎಂದಳು.

ದೊಡ್ಡ ಮಗಳ ವಾಗ್ಬಾಣದಿಂದ ಸ್ವಲ್ಪ ಚುಚ್ಚಿದ, ನೊಂದ ಧ್ವನಿಯಿಂದ ಸರೋಜಾಕ್ಷರು ಹೇಳಿದರು: "ಈ ಮಾತೆಲ್ಲಾ ಯಾಕೆ ಆಡುತ್ತೀಯ? ಕೆಲಸ ಬಿಟ್ಟಿದ್ದರಿಂದ ಸಂಸಾರಕ್ಕೆ ಸ್ವಲ್ಪ ಕಷ್ಟವಾಗಬಹುದು. ಆದರೆ ನನ್ನ ಮನಃಸಾಕ್ಷಿ ಬಾಧಿಸುತ್ತಿದೆ. ತೋರುತ್ತಿದೆ, ಇಷ್ಟು ದಿನವೂ ಅವರುಗಳನ್ನು ವಂಚಿಸಿ ದುಡ್ಡು ಸಂಪಾದಿಸುತ್ತಿದ್ದೆ ಎಂದು. ಅವರಿಗೆ ಶಿಕ್ಷಣವನ್ನು ನೀಡುವುದಾಗಿ ಅಂದುಕೊಂಡಿದ್ದೇವೆ. ಆದರೆ ಶಿಕ್ಷಣವನ್ನು ಕೊಡಲಿಲ್ಲ. ಕದಡಿದ ಹಿಟ್ಟಿನ ನೀರನ್ನು ಕುಡಿಸಿ, ಹಾಲು ಕುಡಿಸುವುದಾಗಿ, ಸುಳ್ಳು ಆತ್ಮತೃಪ್ತಿಯನ್ನು ಪಟ್ಟುಕೊಂಡಿದ್ದೇವೆ. ಆಮೇಲೆ ಅವರುಗಳು ಶಿಕ್ಷಣವನ್ನು ಪಡೆದಿಲ್ಲವೆಂಬುದನ್ನು ನೋಡಿ ಮನಸ್ಸಿನ ಭಾರ–ಸಾಮ್ಯವನ್ನು ಕಳೆದುಕೊಂಡಿದ್ದೇವೆ. ಇಷ್ಟು ದಿನ, ಹೊಳೆದಿರಲಿಲ್ಲವಾದ್ದರಿಂದ ನಡೆಸಿಕೊಂಡು ಬರುತ್ತಿದ್ದೆ. ಇನ್ನು........"

ಅವರ ಅಳಿಯ ಅವರ ಮುಂದೆ ಮಾತಾಡುವುದು ಕಡಿಮೆ. ಏನಿದ್ದರೂ ಮರೆಯಲ್ಲಿ ಟೀಕೆ ಮಾಡುತ್ತಾನೆ. ಆದರೆ ಇಂದು ಮಾತಾಡಿದ. ಸ್ವಲ್ಪ ಕಳ್ಳನಗು ನಕ್ಕು ಹೇಳಿದ, "ಹಾಗಾದರೆ ವಿದ್ಯಾರ್ಥಿಗಳೇ ನಿಮ್ಮ ಜ್ಞಾನದ ಕಣ್ಣನ್ನು ತೆರೆದರು ಅನ್ನಿ."

ಸರೋಜಾಕ್ಷರು ಆ ಸಂತೃಪ್ತ ಮುಖವನ್ನು ನೋಡುತ್ತಾ ಸ್ಪಷ್ಟವಾಗಿ, "ಹಾಗೆಂದೇ ಹೇಳಬೇಕು" ಎಂದರು. ಮಯೂರಾಕ್ಷಿಗೆ ತನ್ನದೇ ಆದ ಅಭಿಪ್ರಾಯ ಯಾವುದೂ ಇಲ್ಲದಿದ್ದರೂ, ಗಂಡ ಹೇಳಿದುದನ್ನು ಪ್ರತಿಭಟಿಸಲೇಬೇಕು. ತನ್ನ ಅಭಿಪ್ರಾಯವೂ ಅದೇ ಆಗಿದ್ದರೂ ಸಹ! ಅದಕ್ಕೇ, ತನ್ನ ಮಾತನ್ನೇ ಖಂಡಿಸಿ ಅವಳು, "ನೀವು ಸ್ವಲ್ಪ ಸುಮ್ಮನಿರಿ. ಈ ಕಾಲದ ಹುಡುಗರು, ನಂಬರ್ ವೊನ್ ಪುಂಡರು. ಒಂದು ಸಭ್ಯತೆ, ಭವ್ಯತೆ ಇಲ್ಲ. ಯಾತರಲ್ಲೂ ಶ್ರದ್ಧೆ ಇಲ್ಲ.

"ಸರೋಜಾಕ್ಷರು ಸ್ವಲ್ಪ ನಿಧಾನವಾಗಿ ಹೇಳಿದರು: "ಒಂದು ವೇಳೆ ಅವರ ಶ್ರದ್ಧೆಯ ಯೋಗ್ಯವಾದುದು ಯಾವುದೂ ಇಲ್ಲವೋ ಏನೋ."

"ಸರಿಯಾಗಿ ಹೇಳಿದಿರಿ." ಸರೋಜಾಕ್ಷರ ಅಳಿಯ ಉತ್ಸಾಹದಿಂದ ಹೇಳಿದ, "ಯಾವುದೂ ಇಲ್ಲ. ನೋಡುತ್ತಲೇ ಇದೀರಲ್ಲಾ, ನಾಲ್ಕು ಕಡೆಯೂ, ಬುದ್ಧಿ ತಿಳಿದಿದೆಯಲ್ಲಾ, ನೋಡುತ್ತಾ ಇದ್ದಾರೆ ಎಂತಹ ಕೆಲಸಕ್ಕೆ ಬಾರದ ಸರಕಾರವೋ, ಅಂತಹದ್ದೇ ಕೆಲಸಕ್ಕೆ ಬಾರದ ಕಾರ್ಪೊರೇಷನ್, ಅಂತಹದ್ದೇ ಕೆಲಸಕ್ಕೆ ಬಾರದ ಯೂನಿವರ್ಸಿಟಿಗಳು ಮತ್ತು ...."

"ಹೋಗಲಿಬಿಡು ಜಯಂತ, ವೃಥಾ ಯಾಕೆ ಕಷ್ಟ," ಮೆಲ್ಲಗೆ ಹೇಳಿದರು ಸರೋಜಾಕ್ಷರು, "ಈ ದೇಶದ ನತದೃಷ್ಟದ ಲಿಸ್ಟ್ ಮಾಡಲು ಕುಳಿತರೆ ಕಾಗದದಲ್ಲಿ ಹಿಡಿಸುವುದಿಲ್ಲ. ಅದಕ್ಕಿಂತ ನೀವುಗಳು ಟೀ-ಟಿಫನ್ನು ತೆಗೆದುಕೊಳ್ಳಿ ಹೋಗಿ-"

ತೆಗೆದು ಕೊಳ್ಳಿ ಹೋಗಿ!

ಅಂದರೆ ಆಚೆ ಹೋಗಿ!

ಜಯಂತ ಸ್ವಲ್ಪ ಮೃದು ನಕ್ಕು, "ಅದೇ ಸರಿ, ಏನು ಹೇಳುತ್ತೀಯ ಮಕ್ಷಿ? ಅಪ್ಪನನ್ನು ಸುಮ್ಮಸುಮ್ಮನೆ ಡಿಸ್ಟರ್ಬ್ ಮಾಡುವುದರಲ್ಲಿ ಏನೂ ಅರ್ಥವಿಲ್ಲ" ಎಂದ.

"ಇಲ್ಲ, ಇಲ್ಲ, ಡಿಸ್ಟರ್ಬ್ ಎಂತಹದ್ದು?" ಸ್ವಲ್ಪ ಕುಂಠಿತರಾಗಿ ನುಡಿದರು ಸರೋಜಾಕ್ಷರು: "ಬಂದು ಹೊತ್ತಾಯಿತಲ್ಲ. ಸ್ವಲ್ಪ ಟಿಫನ್ನು -ಟೀ ತೆಗೆದುಕೊಳ್ಳಬೇಕಲ್ಲವೆ?"

ಮಯೂರಾಕ್ಷಿಯ ಹಿತವಾದ ಹೇಳುವಿಕೆಗೆ ಅಲ್ಲೇ ಇತಿಯಾಯಿತು. ಒಳ್ಳೆಯ ಕಾಲಕ್ಕೆ ಆವತ್ತು ನೀಲಾಕ್ಷ ಮತ್ತು ಸುನಂದಾ ಇನ್ನೂ ಮನೆಯಲ್ಲೇ ಇದ್ದರು.

ಸುನಂದಾ ತನ್ನದೇ ನವೀನ ಸರಂಜಾಮುಗಳಲ್ಲಿ ಟೀ ಮಾಡಿಕೊಟ್ಟಳು. ಬಹಳ ಹೊಗಳುವ ಧ್ವನಿಯಿಂದ ಹೇಳಿದಳು, "ಬಹಳ ಚೆನ್ನಾಗಿ ಅಲಂಕಾರ ಮಾಡಿಕೊಂಡಿದ್ದೀಯಲ್ಲಾ. ಸೀರೆಯನ್ನು ಹೊಸದಾಗಿ ಕೊಂಡುಕೊಂಡಿದ್ದೀಯ ಅಲ್ಲವೇ?"

ಈ ಸರಳವಾದ ಪ್ರಶ್ನೆಯಲ್ಲಿ ಅವಮಾನದ ವಿಷಯ ಏನು ಸಿಕ್ಕಿತು ಮಯೂರಾಕ್ಷಿಗೆ? ಕೋಪ ಬಂತು ಅವಳಿಗೆ. ಹಿಂದು-ಮುಂದಾಗಿ ಮಾತಾಡಲು ಶುರು ಮಾಡಿದಳು. ಹೊಸ

ಸೀರೆಯನ್ನು ತೋರಿಸುವುದಕ್ಕಾಗಿಯೇ ಅವಳು ಬಂದಳ ಎಂಬಂತಹ ಕೀಳಾದ ಭಾವನೆ ಸುನಂದಾಗೆ ಹೇಗೆ ಬಂತು? ಏನೋ ಅಪ್ಪನ ಬ್ರೇಯಿನ್ ತೀರಾ ಕೆಟ್ಟುಹೋಗಿದೆಯೋ, ನೋಡುವುದಕ್ಕಾಗಿ ತಾನು ಬಂದಿದ್ದು. ಈ ತರಹ ಆಗುವುದುಂಟು ಹಠಾತ್ತನೆ ಅವಮಾನದಿಂದ ಮಾನಿಯಾದ ಮನುಷ್ಯರಿಗೆ ಬ್ರೇಯಿನ್ ಸ್ವಲ್ಪ ಈ ಕಡ–ಆ ಕಡೆ ಆಗಿಹೋಗುತ್ತೆ.

ಸುನಂದಾ ಇಷ್ಟು ಹೊತ್ತು ಅವರೊಂದಿಗೆ ಮಾತಿಗೆ ಸೇರಿಕೊಂಡಿರಲಿಲ್ಲ. ಸ್ಟೈಲಾದ ಭಂಗಿಯಿಂದ ಟೀ–ಬಿಸ್ಕತ್ತು, ಗೋಡಂಬಿ ಸರಬರಾಜು ಮಾಡುತ್ತಿದ್ದಳು. ಈಗ ನಕ್ಕು ಕೇಳಿದಳು, "ಹಠಾತ್ತಾಗಿಯೇ?" ಮಯೂರಾಕ್ಷಿ ಸ್ವಲ್ಪ ಹುಬ್ಬೇರಿಸಿದಳು, "ಏನು ಹೇಳುತ್ತೀಯಾ?"

"ಏನಿಲ್ಲ, ಅವಮಾನ ಹಠಾತ್ತನೆ ಆದರೆ ಈ ಕಡೆ ಆ ಕಡೆ ಆಗುತ್ತೆ ಎನ್ನುತ್ತಿದೆಯಲ್ಲಾ, ಅದಕ್ಕೇ ಕೇಳಿದೆ, ಹಠಾತ್ತನೆ ಆಯಿತೇ ಅಂತ?"

ಮಯೂರಾಕ್ಷಿ ಮುಖ ಕೆಂಪಗೆ ಮಾಡಿಕೊಂಡು ಹೇಳಿದಳು, "ಆ ಅವಮಾನ ನೀವುಗಳೇ ಮಾಡುತ್ತಾ ಹೋಗುತ್ತಿದ್ದೀರಿ. ಹೆಣ್ಣು ಮಕ್ಕಳಿಂದ ಅಪ್ಪನ ಮನಸ್ಸಿಗೆ ಏನೂ ಏಟು ಆಗಿಲ್ಲ."

"ಎಲ್ಲಿಂದ, ಏನು, ಎಂದು ನಾನು ಹೇಳಲಿಲ್ಲವಲ್ಲಮ್ಮಾ ಮಕ್ಷಿ. ಯಾಕೆ ಕೋಪಿಸಿಕೊಳ್ಳುತ್ತೀಯಾ?" ಕೈಯಲ್ಲಿಯ ಗೋಡಂಬಿಯ ತಟ್ಟೆಯನ್ನು ಮುಂದಕ್ಕೆ ನೀಡಿ ಹೇಳಿದಳು ಸುನಂದಾ, "ಇನ್ನೂ ಎರಡು ಗೋಡಂಬಿ ತೆಗೆದುಕೊ."

ನೀಲಾಕ್ಷ ಹೇಳಿದ, "ಅದು ನನ್ನ ಮೇಲಿನ ಆರೋಪ, ಗೊತ್ತಾಯಿತೆ ಮಕ್ಷಿ? ಶ್ರೀಮತಿ ಸುನಂದಾರ ಅಭಿಪ್ರಾಯ, ನನ್ನ ಅಪ್ಪನ ಮೇಲೆ ನನಗಿಂತ ಅವರಿಗೆ ಪ್ರೀತಿ ಹೆಚ್ಚು ಎಂದು!"

"ಪ್ರೀತಿ!" ಸುನಂದಾ ಒಂದು ಜೋರಾದ ನಗು ನಕ್ಕು ಹೇಳಿದಳು, "ಅದೆಂತಹ ವಸ್ತು? ಪ್ರೀತಿ, ಹಿ, ಹಿ, ಹಿ, ನಿಮ್ಮ ಅಣ್ಣ ಒಳ್ಳೆ ತಮಾಷೆ ತಮಾಷೆಯಾಗಿ ಮಾತಾಡುತ್ತಾರೆ ಮಕ್ಷಿ! ಏನು ಜಯಂತ ಬಾಬು, ಕೇಳಿ ನಿಮಗೆ ತಮಾಷೆಯಾಗಿಲ್ಲವೇ?"

ಮೀನಾಕ್ಷಿ ಅಪ್ಪನ ಮೇಲೆ ದೋಷಾರೋಪಣೆಯೇನೂ ಮಾಡಲಿಲ್ಲ. ಕೇವಲ ಹೇಳಿದ್ದಳು, "ನಿಮಗೆ ಕಾಲೇಜನ್ನು ಬಿಡುವುದು ಅನಿವಾರ್ಯವಾದರೆ ಸರಿಯೆ. ನಾನು ಏನಾದರೂ ಕೆಲಸ ಮಾಡಲು ಅನುಮತಿ ಕೊಡಿ ಅಪ್ಪ, ಕಡೆಯ ಪಕ್ಷ ನನ್ನ ಅವಶ್ಯಕತೆಗಳಿಗಾದರೂ ಸ್ವಲ್ಪ ...." ಒಂದು, ಎದುರು ನೋಡದಂತಹ ಜವಾಬನ್ನೇ ಕೊಟ್ಟರು ಸರೋಜಾಕ್ಷರು. ಹೇಳಿದರು, "ನಾನು ನಿಮ್ಮನ್ನು ಯಾವ ಕೆಲಸಕ್ಕೂ ಎಂದೂ, ಹೋಗಲು ಬೇಡ ಎಂದಿಲ್ಲವಲ್ಲ. ಹಠಾತ್ತಾಗಿ ಈಗ ಅನುಮತಿಯ ಪ್ರಶ್ನೆ ಏಕೆ?"

ಮೀನಾಕ್ಷಿ ಈ ಜವಾಬನ್ನು ನಿರೀಕ್ಷಿಸಿರಲಿಲ್ಲ. ಅಪ್ಪ ಕೋಪಿಸಿಕೊಳ್ಳುತ್ತಾರೆ, ಖಿನ್ನರಾಗುತ್ತಾರೆ ಎಂದು ತಿಳಿದಿದ್ದಳು. ಅದಕ್ಕೇ ಮನಸ್ಸು ಕಳವಳಗೊಂಡಿತು. ಹೇಳಿದಳು: "ಇಷ್ಟು ದಿನ ಆ ಯೋಚನೆ ಬಂದಿರಲಿಲ್ಲ. ಒಳ್ಳೆಯದು, ನಿಮಗೆ ಅಡ್ಡಿಯಿಲ್ಲವೆಂದ ಮೇಲೆ–"

ಮೀನಾಕ್ಷಿ ಮಾತು ನಿಲ್ಲಿಸಬೇಕಾಯಿತು.

ಅವಳ ತಂದೆ ತನ್ನ ಕನ್ನಡಕವನ್ನು ತೆಗೆದು ಒರೆಸುತ್ತಾ, ಕನ್ನಡಕವಿಲ್ಲದ, ಅದರ ಮುದ್ರೆಯೊತ್ತಿದ ಕಣ್ಣುಗಳನ್ನು ಮಗಳ ಕಣ್ಣುಗಳಲ್ಲಿಟ್ಟು ಕೇಳಿದರು. "ನನ್ನ ಇಷ್ಟವಿಲ್ಲದಿರುವಿಕೆ ಅನುಮತಿ, ಇದೆಲ್ಲದರ ಪ್ರಯೋಜನ ನಿಮ್ಮ ಜೀವನದಲ್ಲಿ ನಿಜವಾಗಲೂ ಇದೆಯೇ?"

ಮೀನಾಕ್ಷಿ ಬೆಚ್ಚಿದಳು.

ಮೀನಾಕ್ಷಿ ನಡುಗಿದಳು.

ಮೀನಾಕ್ಷಿಗೆ ಅನ್ನಿಸಿತು, ಎಲ್ಲಾ ಹೊರಬಿದ್ದಿದೆ. ಅಪ್ಪನಿಗೆ ತಿಳಿಯದೆ ಇರುವುದು ಯಾವುದೂ ಇಲ್ಲ. ಆದರೂ ಮೀನಾಕ್ಷಿಗೆ ಅನ್ನಿಸಿತು ಇದೇ ಒಳ್ಳೆಯ ಸಮಯ, ತನ್ನ ವಿಷಯ ಈಗಲೇ ಹೇಳಿಬಿಟ್ಟರೆ ಒಳ್ಳೆಯದು.

ಆದರೆ ಮೀನಾಕ್ಷಿಗೆ ಗಂಟಲು ಹಿಡಿದಂತಾಗಿದೆ.

ಅಂದಿನಂತೆಯೇ, ಇಂದೂ ಅವಳ ಪ್ರಯತ್ನ ವ್ಯರ್ಥವಾಯಿತು.

ತಲೆ ಬಗ್ಗಿಸಿಕೊಂಡು ಕೇಳಿದಳು, "ಯಾಕೆ ಹಾಗ ಕೇಳುತ್ತಿದ್ದೀರಿ?"

"ಕೇಳುತ್ತಿದ್ದೇನೆ. ಇದಕ್ಕೆ ಒಂದು ಉತ್ತರ ಬೇಕು ಎಂದು. ಇದು ನನ್ನ ಪ್ರಶ್ನೆ."

ಮೀನಾಕ್ಷಿ ತಲೆ ಬಗ್ಗಿಸಿಕೊಂಡು ಕುಳಿತಿದ್ದಳು.

ಸರೋಜಾಕ್ಷರು ಮೃದುನಕ್ಕು, "ಪ್ರಶ್ನೆ ಪತ್ರಿಕೆ ಬಹಳ ಕಷ್ಟವಾದದ್ದಾಯಿತು ಅಲ್ಲವೇ? ಇಷ್ಟು ಬೇಗ ಅದರ ಉತ್ತರ ತಯಾರಿಸುವುದು ಸಾಧ್ಯವಲ್ಲ. ಹೋಗಲಿ ಬಿಡು."

ಮೀನಾಕ್ಷಿ ಬೆಪ್ಪಾಗಿ ಸ್ವಲ್ಪ ಹೊತ್ತು ಕುಳಿತಿದ್ದು, ಆಮೇಲ ಎದ್ದು ಹೋದಳು. ತನ್ನ ಕೋಣೆಗೆ ಹೋಗಿ ಕಾಗದ ಬರೆಯಲು ಕುಳಿತಳು.

ಇಂದೇ ತಾನೆ ನೋಡಿದ್ದಾಗಿದೆಯೇ!

ಅದಕ್ಕೇನಂತೆ?

ತಿರುಗಿ ಈಗಲೇ ಎಷ್ಟೊಂದು ಮಾತುಗಳು ಜ್ಞಾಪಕಕ್ಕೆ ಬರುತ್ತಿದೆ. ಪ್ರೇಮದ ಮಾತಲ್ಲದಿದ್ದರೂ ಪ್ರಯೋಜನದ ಮಾತು. ದಿವಾಕರ ಅಂದು ಬೆಳಿಗ್ಗೆ ತಾನೆ ಹೇಳಿದ್ದ. ನಿಮ್ಮ ಅಪ್ಪನ ಮತವಾದಗಳನ್ನು ನೋಡಿದರೆ, ನನಗೇನೋ ಅದರ ಮೇಲೆ ನಂಬಿಕೆ ಇಲ್ಲ. ಈ ಯುಗದಲ್ಲೂ ಒಂದಿಷ್ಟು ಮಾನಾಪಮಾನಕ್ಕೆಲ್ಲಾ ಖಿನ್ನರಾಗುತ್ತಾರೆ. ಹುಡುಗರು ಒಳ್ಳೆಯ ಶೀಲವಂತರಾಗಬೇಕೆಂದು ಆಶಿಸುತ್ತಾರೆ ಎಂದ ಮೇಲೆ, ಮಗಳು ಸ್ವಯಂವರ ಮಾಡಿಕೊಳ್ಳಲು ಒಪ್ಪಿಕೊಳ್ಳುತ್ತಾರೆಯೇ? ಉಹುಂ. ನನಗೇನೋ ನಂಬಿಕೆ ಇಲ್ಲ.

ನಂಬಿಕೆಯೇ? ಆ ಆಸೆಯೇ ಇಟ್ಟುಕೊಳ್ಳುವುದಕ್ಕಾಗುವುದಿಲ್ಲ. ಅದೇನೋ ಸರಿಯೇ. "ಮತ್ತೆ ನನ್ನನ್ನು ಯಾಕಮ್ಮಾ 'ಹ್ಯಾಂಗ್ ಅರೌಂಡ್' ಮಾಡಿಸುತ್ತಿದ್ದೀಯಾ? ಬಿಟ್ಟುಬಿಡು. ಅಪ್ಪನ ಮಾತು ಕೇಳಿಕೊಂಡು, ಒಳ್ಳೆಯ ಹುಡುಗಿಯಾಗಿ ಹಸೆಯಲ್ಲಿ ಹೋಗಿ ಕುಳಿತುಕೋ". ಮೀನಾಕ್ಷಿಗೆ ಕೋಪ ಬಂದಿತ್ತು.

ಅದಕ್ಕೇ ಕೋಪದಿಂದ ಹೇಳಿದ್ದಳು. "ಸರಿ ಹಾಗಾದರೆ, ಅಪ್ಪನ ಪ್ರಸನ್ನ ಅನುಮತಿಯೂ ಬೇಡ ನಿನ್ನನ್ನು 'ಹ್ಯಾಂಗ್ ಅರೌಂಡ್' ಮಾಡಿಸುವುದೂ ಇಲ್ಲ. ನಾಳೆಯೇ ನಡಿ, ನೋಟೀಸ್

ಕೊಡೋಣ. ಈಗ ಹೇಳು, ಮದುವೆ ಮಾಡಿಕೊಂಡು ಹೋಗಿ ನನ್ನನ್ನು ಎಲ್ಲಿ ಇಳಿಸುತ್ತೀಯ ಎಂದು?"

ದಿವಾಕರ ಹೊಹೊಹೊ ಎಂದು ನಕ್ಕುಬಿಟ್ಟ. ಇದಕ್ಕೇ ಹೇಳುವುದು ಹೆಣ್ಣು ಹುಡುಗಿಯರು ಹೀಗೆಯೇ, ಯಾವುದರಲ್ಲೂ ಬಹಳ ವಿಷಯಾಸಕ್ತಿ.

ವಿಷಯದಲ್ಲಿ ಆಸಕ್ತಿ ಇಲ್ಲದೆ ಯಾವ ವಿಷಯದಲ್ಲಿಯೂ ಮುಂದುವರಿಯಲಾಗುವುದಿಲ್ಲ. "ದಡವನ್ನು ನೋಡದೆಯೇ ದೋಣಿಯಿಂದ ಕಾಲನ್ನು ಎಳೆದುಕೊಳ್ಳುವುದು ಬುದ್ಧಿಹೀನತೆಯ ನಿದರ್ಶನವಷ್ಟೆ."

ಅಬ್ಬ, ಏಕ್‌ದಮ್ ರೂಪಾಯಿ ಪೈಸೆಯ ಲೆಕ್ಕ.

ಮೀನಾಕ್ಷಿಗೆ ಕೋಪ ಬಂದಿತ್ತು, ಸುಮ್ಮನೆ ಕುಳಿತಿದ್ದಳು.

ಆಗ ದಿವಾಕರ ಕತೆಗೆ ಪ್ರಾರಂಭಿಸಿದ್ದ. ಹುಡುಗಿಯರು ಎಷ್ಟು ಲೆಕ್ಕ ಹಾಕುವವರು ಎಂದು ಒಂದು ನಿದರ್ಶನ ಕೊಡುವುದಾಗಿ ಹೇಳಿ, ತನ್ನ ಊರಿನ ಆ ಅಕ್ಕನ ವಿಷಯವಾಗಿ ಸಮಾಚಾರವನ್ನು, ಈ ಮಾವನ ಮಗಳು ವ್ರಜಬಾಲಾಳ ಹೆಸರಿನಲ್ಲಿ ಹೇಳಿದ.

ಮೀನಾಕ್ಷಿ ಬಿಗಿದ ಗಂಟಲಿಂದ ಕೇಳಿದಳು, "ಈ ಮಾತು ಅಂದಳೇ?"

"ಖಂಡಿತವಾಗಿಯೂ ಹೇಳಿದಳು, ಅನಾಯಾಸವಾಗಿ ಹೇಳಿದಳು."

ಎಲ್ಲವನ್ನೂ ಕಲ್ಪಿಸಿ ಕಲ್ಪಿಸಿ ಹೇಳಿದ ದಿವಾಕರ, ಎರಡನೇಯ ಮಹಡಿಯಲ್ಲಿ ಅವಳ ಕೋಣೆಯ ಪಕ್ಕದ್ದೇ ನನ್ನ ಕೋಣೆ. ಈ ಕೋಣೆಗೆ ಬಂದು ನಗುತ್ತಾ ನಗುತ್ತಾ ಹೇಳಿದಳು: "ನಿಮ್ಮ ಭಾವ ಈಗ ಒಂದು ಹತ್ತು ದಿನದಿಂದ ಬಂದಿಲ್ಲ. ಬೇಜಾರಾಯಿತು. ಅದಕ್ಕೇ ಹರಟೆಗೆ ಬಂದೆ ನಿನ್ನ ಕೋಣೆಗೆ."

ನಾನು ಭ್ರಮಿಸಿಹೋಗಿ ಕಲ್ಲಾಗಿದ್ದೆ. ಆದರೆ ಕೇಳಿದೆ, "ಇಷ್ಟು ರಾತ್ರೆಯಲ್ಲೇ?"

ಅವಳು ಅನಾಯಾಸವಾಗಿ ಧೂರ್ತ ನಗು ನಕ್ಕು ಹೇಳಿದಳು. "ಅದಕ್ಕೇನಂತೆ? ವಿಧವೆಯಲ್ಲ, ಕುಮಾರಿಯಲ್ಲ, ಭಯವೇನು? ಅಮ್ಮ, ಅಪ್ಪ ನಾಟಕಕ್ಕೆ ಹೋಗಿದ್ದಾರೆ. ಆದರೆ ಹುಷಾರು, ಹೇಳುತ್ತೇನೆ ಕೇಳು ದಿವು ಅಣ್ಣ, ನನ್ನ ಭಾಗ್ಯಹೀನ ಗಂಡ ಬಂದಾಗ ಮಾತ್ರ ತಿಳಿಯದಿರಲಿ, ನನಗೂ ನಿನಗೂ ಯಾವ ತರಹದ ಪರಿಚಯ ಇದೆ ಎಂದು. ಅವರ ಮಟ್ಟಿಗೆ, ನೀನು ಅಪ್ಪನ ಸೋದರಳಿಯ ಅಷ್ಟೆ."

ತಿಳಿದುಕೋ ಹಾಗಾದರೆ ಸುಮ್ಮನೆ ಹೇಳುತ್ತೇನೆಯೆ ಹುಡುಗಿಯರು ಬಹಳ ಲೆಕ್ಕಾ ಹಾಕುವವರು ಎಂದು? ಅವರುಗಳು ಎರಡು ದೋಣಿಯಲ್ಲೂ ಕಾಲನ್ನಿಟ್ಟುಕೊಂಡಿರುತ್ತಾರೆ. ಎರಡೂ ತಮ್ಮ ವಶದಲ್ಲಿರಲೆಂದು ನೆಲದ ಮೇಲೆ ಕಾಲೂರುವವರೆಗೂ ಅವರು ದೋಣಿಯನ್ನು ಬಿಡುವುದಿಲ್ಲ. ನೀನು ಹೇಗೆಯೋ ಹಾಗೆಯೇ."

ಮೀನಾಕ್ಷಿ ಬೇಜಾರಿನಿಂದ ಹೇಳಿದಳು, "ಗಂಡು ಹುಡುಗರಿಗೆ ನಮ್ಮ ಸ್ಥಿತಿ ತಿಳಿಯುತ್ತದೆಯೇ?"

"ಹೂಂ, ಅದೇ ಹೆಣ್ಣು ಹುಡುಗಿಯರ ಗೋಣಗಾಟ, ಈ ದೇಶದ ಉನ್ನತಿ ಆದ ಹಾಗೆಯೇ! ಹುಡುಗಿಯರು ಯಾವುದಕ್ಕೂ ಪರವಾಗಿಲ್ಲವೆಂದು ಇದ್ದರೆ ದೇಶದ ಉನ್ನತಿಗೆ ಬಹಳ ಛಾನ್ಸೇನೋ?"

"ಯಾವುದನ್ನೂ ಲಕ್ಷಿಸುವುದೇ ಇಲ್ಲ ಅಂದರೆ ಧೈರ್ಯ ಇದೆ ಎಂದರ್ಥ." ದಿವಾಕರ ಹೇಳಿದ್ದ.

"ಅದರ ಅಭಾವದಿಂದಲೇ ನಮ್ಮ ದೇಶ ಹೀಗಿರುವುದು!"

ದಿವಾಕರನ ಆ ಕಪ್ಪಾದ, ಕಟುಮಸ್ತಾದ ಮುಖ ಅಸಹ್ಯದಿಂದ ಸೊಟ್ಟಗಾಗಿತ್ತು, ಈ ದೇಶದ ಜನರ ಧೈರ್ಯದ ಅಭಾವವನ್ನು ನೆನೆದು!

ಮೀನಾಕ್ಷಿಯ ಬಾಯಿಂದ ಬೇರೆ ಮಾತೇ ಹೊರಡಲಿಲ್ಲ. ಆದರ ಹೇಳುವುದಕ್ಕೆ ಬೇಕಾದಷ್ಟು ಇತ್ತು. ಅದಕ್ಕೇ ಈಗ ಬರೆಯಲು ಕುಳಿತಳು. ಬರೆದಳು, ನೀನು ನನಗೆ ಧೈರ್ಯವಿಲ್ಲವೆಂದು ಮಾತ್ರ ಹೇಳಿದೆಯಲ್ಲ, ಎಲ್ಲಿ, ನಿನಗೆ ಮಾತ್ರ ಇದೆಯೇ? ಎಷ್ಟು ಸಲ ಹೇಳಿದ್ದೇನೆ. ನಿನ್ನ ಮಾವ, ಅಮ್ಮ ಇವರುಗಳನ್ನು ನೋಡಲು ನನ್ನನ್ನು ಕರೆದುಕೊಂಡು ಹೋಗು ಎಂದು. ಎಲ್ಲಿ, ನೀನು ಹೋಗುತ್ತಾ ಇಲ್ಲವಲ್ಲಾ, ಎಂದರೆ ಧೈರ್ಯ ಇಲ್ಲ ಎಂದು ತಾನೆ ಅರ್ಥ! ಸರಿ, ನಾನೇ ಹೋಗುತ್ತೇನೆ, ಹೋಗಿ ನೋಡುತ್ತೇನೆ ಅವರುಗಳು ಏನು ಹೇಳುತ್ತಾರೆ ಎಂಬುದನ್ನು.

ಮೀನಾಕ್ಷಿ ತನ್ನ ಬರವಣಿಗೆಯನ್ನು ನಿಲ್ಲಿಸಿ ಯೋಚಿಸತೊಡಗಿದಳು. ಹಾಗಾದರೆ ನಮ್ಮ ಹಿಂದಿನ ಕಾಲದ ಪದ್ಧತಿಯೇ ಒಳ್ಳೆಯದಾಗಿತ್ತೇ? ಸುಖಕರವಾಗಿತ್ತೇ? ಚಿಕ್ಕ ಹುಡುಗಿಯಾಗಿರುವಾಗಲೇ ತಂದೆ, ತಾಯಿ ನೋಡಿ ಒಬ್ಬರಿಗೆ ಕೊಟ್ಟು ಮದುವೆ ಮಾಡಿ ಬಿಡುತ್ತಿದ್ದರು. ತಮಗೆ ಚಿಕ್ಕಂದಿನಿಂದ ಪಳಗಿದ್ದ, ಏಕಮಾತ್ರ ಭರವಸೆಯಾಗಿದ್ದ ಆ ಗಂಡನ ಮೇಲೆಯೇ, ಭರವಸೆ, ಪ್ರೀತಿ ಬರುತ್ತಿತ್ತು. ಮೀನಾಕ್ಷಿ ಯೋಚನೆ ನಿಲ್ಲಿಸಿ ನಕ್ಕಳು. ಆದರೆ ನನ್ನ ಅಮ್ಮ-ಅಪ್ಪನ ದಾಂಪತ್ಯ ಜೀವನವೇ ನನ್ನ ಪ್ರಶ್ನೆಯ ಉತ್ತರವಾಗಿದೆಯಲ್ಲಾ!

ಮೀನಾಕ್ಷಿಗೆ ತಾನು ಇನ್ನೂ ತೀರ ಸಣ್ಣ ಮಗುವಾಗಿದ್ದಾಗಿನ ಒಂದು ಘಟನೆ ಜ್ಞಾಪಕಕ್ಕೆ ಬಂತು. ಜ್ಞಾಪಕ ಬಂತು ಅಮ್ಮನ ರುದ್ರಮೂರ್ತಿ. ಅಪ್ಪನ ತೀವ್ರ ಅಸಡ್ಡೆಯ ತಿರಸ್ಕಾರದ ಮೂರ್ತಿ. ಆದರೂ ಅವರುಗಳು ಒಟ್ಟಿಗೆಯೇ ಕಾಲ ಕಳೆದುಕೊಂಡು ಬಂದರು. ಈ ದೀರ್ಘವಾದ ಜೀವನವನ್ನು, ಅವರುಗಳು ಯಾವಾಗಲೂ ವಿವಾಹ ವಿಚ್ಛೇದನದ ಬಗ್ಗೆ ಚಿಂತಿಸಿರಲಿಲ್ಲ ಅಥವಾ ಓಡಿ ಹೋಗುವುದರ ಬಗ್ಗೆಯೋ ಆತ್ಮಹತ್ಯೆಯ ಬಗ್ಗೆಯೋ ಯೋಚಿಸಿರಲಿಲ್ಲ. ತಮ್ಮ ತೋರಿಕೆಯ ಒಲವಿನ ಬಾಳಿನ ಬಂಡವಾಳವನ್ನು ನೋಡುವವರ ಮುಂದೆ ಬಿಚ್ಚಿ ತೋರಿಸುವ ಧೈರ್ಯವನ್ನೂ ತಳೆದಿರಲಿಲ್ಲ.

ಮೀನಾಕ್ಷಿಯ ತಂದೆಯೂ ಅದೇ ಸಮಯದಲ್ಲಿ ಅದನ್ನೇ ಯೋಚಿಸುತ್ತಿದ್ದರು.

'ಅಂತೂ ಈ ವಯಸ್ಸಿನವರೆಗೂ ಹೀಗೆಯೇ ನಡೆಸಿಕೊಂಡೇ ಬಂದೆ. ಈ ತೋರಿಕೆಯನ್ನು ಕಿತ್ತೊಗೆದು ಸತ್ಯದ ಎದುರಿಗೆ ನಿಲ್ಲೋಣವೆಂದು, ಒಂದು ಸಲವೂ

ಯೋಚಿಸಿರಲಿಲ್ಲ. ನಾನು ಈ ಸಂಸಾರಕ್ಕೆ ಎರಡನೇಯ ಸ್ಥಾನವನ್ನೇ ಕೊಟ್ಟೆ. ನನ್ನ ಕಾರ್ಮಿಕ ಜೀವನಕ್ಕೆ ಮುಖ್ಯತ್ವ ಕೊಟ್ಟೆ. ಅದನ್ನೇ ನನ್ನ ಪ್ರಾಣ–ಮನಗಳಿಗೆ ಆಶ್ರಯಸ್ಥಳವಾಗಿ ಮಾಡಿ ಕುಳಿತಿದ್ದೆ.'

ಈಗ ಅಕಸ್ಮಾತ್ತಾಗಿ ಈ ನನ್ನ ಮುಖ್ಯ ಪ್ರೀತಿಯ ಆಶ್ರಯ, ಎಲ್ಲಾ ಕಡೆಯೂ ಶೂನ್ಯತೆಯನ್ನೇ ಹರಡಿಸಿ, ಗಾಳಿಯಲ್ಲಿ ಲೀನವಾಯಿತು ಎಂಬುದು ಗೊತ್ತಾಗುತ್ತಿದೆ.

ನಾನು ತಿರುಗಿ ನನ್ನ ಹಳೆಯ ಅಭ್ಯಾಸದ ಕೆಲಸಕ್ಕೆ ಇನ್ನು ಹಿಂತಿರುಗಲಾರೆ ಎನ್ನಿಸುತ್ತೆ. ಪಾಠ ಹೇಳುವುದಕ್ಕೆ ಮರೆತಿದ್ದೇನೆಂದು ತೋರುತ್ತೆ. ಹಳೆಯ ಕಲಿತ ವಿದ್ಯೆ ಮರೆತು ಹೋದಂತಿದೆ.

ಇಲ್ಲ, ಈಗ ನಾನು ನನ್ನ ವಿದ್ಯಾರ್ಥಿಯರ ಧೃಷ್ಟತೆಯಿಂದಾಗಿ ಮನೋವ್ಯಥೆಯನ್ನು ಅನುಭವಿಸುತ್ತಿಲ್ಲ. ಹೀಗೆ ಮಾಡುವುದನ್ನು ಬಿಟ್ಟು ಅವರುಗಳು ಬೇರೆ ಏನು ಮಾಡುವಂತಿರಲಿಲ್ಲ. ನಾವು ಇದುವರೆಗೆ ಬರೀ ಬರಹವನ್ನೇ ಕಲಿಸಿದ್ದೇವೆ. ವಿದ್ಯೆಯ ಧ್ಯೇಯವನ್ನು ಕಲಿಸಿಲ್ಲ. ಈ ವಿದ್ಯಾಭ್ಯಾಸ ಒಂದು ಆಯುಧ ಮಾತ್ರವೇ. ಅದು ನಮ್ಮ ಜೀವನ ಯಾತ್ರೆಗೆ ನೆರವಾಗುತ್ತೆ. ಜೀವನ–ಸಾಧನೆಗಲ್ಲ! ಪ್ರಪಂಚ ಅವರುಗಳ ಕಣ್ಣುಮುಂದೆ ಬೇಕಾದಷ್ಟು ಆಶಾಪ್ರದ ಚಿತ್ರಗಳನ್ನು ತೋರಿಸುತ್ತಿದೆ. ಆದರ್ಶಗಳ ಚಿತ್ರಗಳನ್ನು ತೋರಿಸುತ್ತಿಲ್ಲ. ಸಚ್ಚರಿತ್ರ ವ್ಯಕ್ತಿ ಎಂಬುದು ಏನು ಎಂಬುದೇ ಅವರಿಗೆ ಗೊತ್ತಿಲ್ಲ. ಅಂತಹದ್ದರಲ್ಲಿ ಸಚ್ಚರಿತ್ರನಾಗುವುದು ಎಲ್ಲಿಂದ ಬರುತ್ತೆ! ನಾವು ಅದನ್ನು ಅವರಲ್ಲಿ ಎದುರು ನೋಡುವುದು ನಡೆಯುವಂತಹದ್ದಲ್ಲ. ನಮಗೆ ನಿರಾಶೆಯಾಗುವುದು ಸಹಜವೇ.

ಊಹುಂ, ನಮ್ಮ ವಿದ್ಯಾರ್ಥಿಗಳ ಮೇಲೆ ಆಪಾದನೆಯನ್ನು ಹೊರೆಸುವುದು ಸರಿಯಲ್ಲ. ನನ್ನ ಮಕ್ಕಳ ಮೇಲೂ ಅಲ್ಲ. ನನ್ನ ಕೈಯಲ್ಲಾಗದಿರುವಿಕೆಯೇ ನನ್ನ ಮಕ್ಕಳನ್ನು ಸಾರವಿಲ್ಲದ ಮನುಷ್ಯರನ್ನಾಗಿ ಮಾಡಿದೆ. ವಿನಯವಿಲ್ಲದ ಅಸಭ್ಯರನ್ನಾಗಿ ಮಾಡಿದೆ. ನಮ್ಮ ಪ್ರೇಮವಿಲ್ಲದ ದಾಂಪತ್ಯದ ಬಲಿಪಶುಗಳು ಅವರುಗಳು. ಅವರಿಗಾಗಿ ವ್ಯಥೆಪಡಬೇಕು. ಕ್ಷಮೆ ಕೇಳಬೇಕಾಗಿದೆ ಅವರಲ್ಲಿ!

* * *

ದಿವಾಕರ ಮೀನಾಕ್ಷಿಗೆ ಯಾವಾಗಲೂ ತನ್ನ ವಾಸಸ್ಥಳವನ್ನು ತೋರಿಸಿಲ್ಲ. ಆದರೂ ಮೀನಾಕ್ಷಿ ಆ ಮನೆಯ ಬಾಗಿಲಲ್ಲಿ ಬಂದು ನಿಂತಳು.

ಮೀನಾಕ್ಷಿ ದಿವಾಕರನ ಮಾವನ ಬಿಸಿನೆಸ್ಸಿನ ವಿಷಯವಾಗಿ ಕೇಳಿದ್ದಳು. ಮತ್ತು ಅಂಗಡಿಯ ಹೆಸರೂ ಕೇಳಿದ್ದಳು. ಆ ಭರವಸೆಯಿಂದಲೇ ಬಂದು ಮನೆಯನ್ನು ಹುಡುಕಿ ಕಂಡುಹಿಡಿದಳು. ಬಂದೂ ನಿಂತಳು. ಆದರೂ ಮೂರು ಮಹಡಿಯ, ಹಳೆಯ ಕಾಲದ ಉದ್ದನೆಯ ಕಿಟಕಿಯ ಆ ಮನೆಯನ್ನು ನೋಡಿದರೆ, ತಕ್ಷಣ ಒಳಗೆ ಹೋಗಲು, ಕಾಲು ಹಿಂದೇಟು ಹಾಕಿತು. ಆ ಮನೆಯನ್ನು ತಲೆಯೆತ್ತಿ ನೋಡುತ್ತಾ ನಿಂತಳು.

ನೋಡಿ ಅಂದುಕೊಂಡಳು, ದಿವಾಕರ ಅಷ್ಟೊಂದು ಆಧುನಿಕತೆಯಲ್ಲಿ ಮುಳುಗಿದ್ದಾನೆ. ಆದರೆ ಮನೆ ನೋಡಿದರೆ ಹಳೆಯ ಕಾಲದ ವಾತಾವರಣ ಕಾಣುತ್ತಿದೆ. ಇಂತಹ ಮನೆಯಲ್ಲಿ ಪ್ರಗತಿಯ ಗಾಳಿ ಬೀಸುತ್ತದೆಯೇ? ಹೇಗೆ ಒಳಗೆ ಹೋಗುವುದು?

ಸರಿಯಾಗಿ ಆಗಲೇ ಯಾರೋ ಹಿಂದಿನಿಂದ ಬಂದು ಕೇಳಿದರು, "ಯಾರು ಬೇಕು?"

ಮೀನಾಕ್ಷಿ ಹಿಂತಿರುಗಿ ನೋಡಿದಳು.

ಮನೆಯ ಜವಾನ ಇರಬೇಕು, ಕೈಯಲ್ಲಿ ವಿಳ್ಯೆಯದೆಲೆ ಬೀಡಾ ತರಲು ಅಂಗಡಿಗೆ ಹೋಗಿದ್ದವನು ವಾಪಸ್ಸು ಬಂದು, ಮನೆಯ ಗೇಟಿನ ಬಳಿ, ಅಪರಿಚಿತ ತರುಣಿಯನ್ನು ನೋಡಿ ಬೆರಗಾಗಿದ್ದಾನೆ. ಈ ಮನೆಗೆ ನೆಂಟರು, ಬಳಗದವರನ್ನು ಬಿಟ್ಟರೆ ಬೇರೆ ಯಾರೂ ಬರುವವರಿಲ್ಲ. ಅದೂ, ಹಳಬನಾದ ಆಳು ಅವನು. ಆದ್ದರಿಂದ ಅವನಿಗೆ ತಿಳಿಯದ ಬಳಗದವರೂ ಯಾರೂ ಇಲ್ಲ. ಆಳು ನವೀನನಿಗೆ ಎಲ್ಲರ ಪರಿಚಯವೂ ಉಂಟು. ಎಲ್ಲರೊಂದಿಗೂ ಅವನು ಯಜಮಾನಿಕೆಯೊಂದಿಗೆಯೇ ಮಾತಾಡುವುದೂ !

ಆದರೆ ಇಂದಿನ ಅತಿಥಿ ನವೀನನಿಗೆ ಅಪರಿಚಿತಳು, ಆದುದರಿಂದ ಆ ಧ್ವನಿಯನ್ನು ಗಂಟಲಲ್ಲೇ ಅಡಗಿಸಿಕೊಂಡು ಸ್ವಲ್ಪ ಮೃದುವಾಗಿಯೇ ಕೇಳಿದ: "ಯಾರು ಬೇಕು?"

ಮೀನಾಕ್ಷಿಗೆ ಗೊತ್ತು ಈ ಟೈಮಿನಲ್ಲಿ ದಿವಾಕರ ಹೊರಗೆ ಹೋಗಿರುತ್ತಾನೆ ಎಂದು. ಅದಕ್ಕೇ ಅವಳು ಈ ಸಮಯದಲ್ಲಿ ಬಂದಿದ್ದುದು, ಆದುದರಿಂದ ಅವನು ಯಾರು ಬೇಕು ಎಂದು ಕೇಳಿದುದಕ್ಕೆ ಏನು ಹೇಳಬೇಕೆಂದು ತೋರದೆ ಕಕ್ಕಾಬಿಕ್ಕಿಯಾಗಿ, ಹೇಳಿಬಿಟ್ಟಳು "ದಿವಾಕರ ಬಾಬು ಇದಾರೆಯೇ?"

ದಿವಾಕರ ಬಾಬು!

ನವೀನನ ಮೃದುವಾದ ಮಾತು ಮಾಯವಾಯಿತು. ಅಸಡ್ಡೆಯ ಅಧಿಕಾರಧ್ವನಿ ಹೊರಬಂತು. ಯಾವ ಹೆಣ್ಣು ಹುಡುಗಿ ದಿವಾಕರನನ್ನು ಹುಡುಕಿಕೊಂಡು ಬರುತ್ತಾಳೋ, ಅಂತಹವಳಿಗೇನೂ ಮರ್ಯಾದೆ ತೋರಿಸಬೇಕಾದುದಿಲ್ಲವೆಂಬುದೇ ಅವನ ನಂಬಿಕೆ.

ಅಸಡ್ಡೆಯ ಧ್ವನಿಯಲ್ಲೇ ಹೇಳಿದ, "ಇಲ್ಲ. ಬೇಕಾದರೆ ಬೆಳಿಗ್ಗೆ ಬನ್ನಿ."

ವಿಳ್ಯೇದೆಲೆಯ ಬೀಡಾಗಳನ್ನು ತೆಗೆದುಕೊಂಡು, ಗೇಟನ್ನು ತಳ್ಳಿಕೊಂಡು ಒಳಹೊಕ್ಕು ಅಡ್ಡಗಟ್ಟಿದಂತೆ ನಿಂತುಕೊಂಡ ಅದನ್ನು ನೋಡಿ ಮೀನಾಕ್ಷಿಗೆ. 'ಥತ್ತೇರಿ. ಹೊರಟು ಹೋಗೋಣವೇ! ಈ ಮನೆಗೆ ಹೋಗಿ ಏನೂ ಅನುಕೂಲವಾಗುವ ಹಾಗೆ ಕಾಣೆ.' ಎನ್ನಿಸಿತು. ಆದರೆ ಸುಮ್ಮನೆ ಹಿಡಿಸಲಿಲ್ಲ ಎಂಬುವ ಒಂದು ಕಾರಣಕ್ಕಾಗಿ. ಹೊರಟು ಹೋಗುವುದಕ್ಕಾಗಿಯೇ ಅವಳು ಇಷ್ಟೊಂದು ಕಷ್ಟಪಟ್ಟು ಬಂದುದು? ಎಂದುಕೊಂಡು ಮೀನಾಕ್ಷಿ ಧೈರ್ಯ ತಂದು ಕೊಂಡು. ನಾನು ಅವರ ಅಮ್ಮನನ್ನು ನೋಡಬೇಕು. ಎಂದಳು.

ಅಮ್ಮ!

ಆಕಾಶದಿಂದ ಬಿದ್ದ ನವೀನ!

"ಅಮ್ಮಾ, ದಿವಾಕರ ಬಾಬುವಿನ ಅಮ್ಮ ಇಲ್ಲೆಲ್ಲಿದ್ದಾರೆ?"

"ಇಲ್ಲಿಲ್ಲವೇ? ಹೌದೇನು? ಎಲ್ಲಾದರೂ ಹೋಗಿದ್ದಾರೇನು?"

ನವೀನ ವ್ಯಂಗ್ಯವಾಗಿ ಹೇಳಿದ, "ಹೋಗುವುದೆಲ್ಲಿ ಬಂತು? ಯಾವಾಗಲೂ ಇಲ್ಲಿರಲಿಲ್ಲ." ಊರಲ್ಲೇ ಯಾವಾಗಲೂ ಇರುವುದು.

ಏನಾಶ್ಚರ್ಯ!

ದಿವಾಕರ ಮತ್ತೆ ಆಗಾಗ ಹೇಳುತ್ತಿರುತ್ತಾನೆ, 'ಅಮ್ಮಾ ಹೀಗೆ ಹೇಳಿದರು, ಹೀಗೆ ಉಪದೇಶಿಸಿದರು. ಅಮ್ಮನಿಗೆ ಹೀಗೆ ಹೇಳಿದೆ' ಎಂದೆಲ್ಲಾ.......!

ದಿನ ಬೆಳಗಾದರೆ ಹಾಗಾದರೆ ಅವನು ಸುಳ್ಳೇ ಹೇಳಿಕೊಂಡು ಬಂದಿದ್ದಾನೆ!

ಥತ್, ಹೀಗೆಯೂ ಉಂಟೆ ? ಅಮ್ಮನ ವಿಷಯವಾಗಿ ಅಂತಹ ಸುಳ್ಳೂ ಹೇಳುವುದು ಸಾಧ್ಯವೇ? ಎಲ್ಲೋ, ಏನೋ ತಪ್ಪಿರಬಹುದು.

ಅದಕ್ಕೇ ಮೀನಾಕ್ಷಿ ಸ್ವಲ್ಪ ಸಂದೇಹದೊಂದಿಗೆ ಕೇಳಿದಳು, "ಇದು ದಿವಾಕರ ಬಾಬುವಿನ ಮಾವನ ಮನೆ ತಾನೇ?"

ಈ ಅವಕಾಶದಲ್ಲಿ ನವೀನ ಮೀನಾಕ್ಷಿಯನ್ನು ಕಾಲಿನಿಂದ ಹಿಡಿದು ತಲೆಯವರೆಗೂ ಕಡೆಗಣ್ಣಿನಿಂದ ಒಂದು ನೋಟ ನೋಡಿ ಎಡೆ ಹಾಕುತ್ತಿದ್ದ. ಅವನ ತೀಕ್ಷ್ಣ ಬುದ್ಧಿಗೆ ಎಟುಕಲು ಬಾಕಿ ಇರಲಿಲ್ಲ, ಈ ಹುಡುಗಿ ದಿವಾಕರನ ಲವ್‌ನ ಹುಡುಗಿ ಎಂದು! ಸಿನಿಮಾ ನೋಡಿ ನೋಡಿ ಈ ವಿಷಯುಗಳೆಲ್ಲಾ ಅವನಿಗೆ ಚೆನ್ನಾಗಿ ಗೊತ್ತು. ಅವನು ನೋಡಿಲ್ಲದ ಸಿನಿಮಾ ಯಾವುದೂ ಇಲ್ಲ. ತಾನಾಗಿಯೂ ಹೋಗುತ್ತಾನೆ. ಯಜಮಾನಿಯಮ್ಮನಿಗೆ ಜೊತೆಯಾಗಿಯೂ ಹೋಗುತ್ತಾನೆ. ಪ್ರಕಾಶ್ ಮಂಡಲ್‌ಗ್, ಹೆಂಡತಿಯನ್ನು ಕರೆದುಕೊಂಡು ಸಿನಿಮಾ ನೋಡಲು ಹೋಗುವಷ್ಟು ಪುರಸೊತ್ತಿಲ್ಲ. ಆದುದರಿಂದ ಯಜಮಾನಿ ಕುಸುಮಕಾಮಿನಿಗೆ, ಜೊತೆಗೆ ಹೋಗಲು ಈ ಖಾಸ್ ಜವಾನ ನವೀನನನ್ನು ಬಿಟ್ಟರೆ ಬೇರೆ ಗತಿ ಇಲ್ಲ. ಒಬ್ಬಳೇ ಹೋಗುವುದಕ್ಕಾಗುವುದಿಲ್ಲ. ವ್ರಜಬಾಲಾ ಇದ್ದರೆ ಅವಳು, ಅಥವಾ ತಮ್ಮನ ಹೆಂಡತಿ ಬೀನಾ ಜೊತೆಗೆ ಬರುತ್ತಾರೆ. ಆದರೂ ಒಬ್ಬ ಗಂಡಸು ಜೊತೆ ಬೇಕಲ್ಲಾ, ಹತ್ತು ಜನ ಹೆಂಗಸರು ಜೊತೆಗಿದ್ದರೂ ಅದೊಂದು ಜೊತೆಯೇ? ಪುಟ್ಟ ಹುಡುಗನಾದರೂ ಸರಿ, ಶತಮೂರ್ಖ ಜವಾನನಾದರೂ ಸರಿ, ಒಬ್ಬ ಗಂಡಸು ಜೊತೆಗೆ ಇದ್ದರೆ ಭರವಸೆ ಇರುತ್ತೆ!

ಆದುದರಿಂದ ನವೀನನಿಗೆ ಸಿನಿಮಾ ನೋಡುವ ಛಾನ್ಸ್ ಬೇಕಾದಷ್ಟು ಸಿಗುತ್ತೆ. ಆ ಅನುಭವದಿಂದಲೇ ಅವನಿಗೆ ತಿಳಿಯಿತು ಈ ಹುಡುಗಿ ಯಾರು ಎಂದು. ಆದರೂ, ತಿಳಿದಿದ್ದರೂ ಉದಾಸೀನತೆಯಿಂದಲೇ ಹೇಳಿದ, "ಹೌದು, ಹಾಗೆಂತಲೇ ತಿಳಿದುಕೊಂಡಿದ್ದೇನೆ."

ಮೀನಾಕ್ಷಿಗೆ ಈ ಜವಾನನ ಅಸಡ್ಡೆಯ ಧ್ವನಿ ಗೊತ್ತಾಯಿತು. ಕೋಪದಿಂದ ಮೈಯುರಿವ ಹಾಗಾಯಿತು. ದೊಡ್ಡ ಮನುಷ್ಯರ ಮನೆಯ ಬಹಳ ಸಲುಗೆಯ ಆಳು ಎಂದು ಗೊತ್ತಾಯಿತು. ಆದರೆ (ಕಳ್ಳನ ಮೇಲಿನ ಕೋಪದಿಂದ ನೆಲದ ಮೇಲೆ

ಊಟಮಾಡುವುದಕ್ಕಾಗುವುದಿಲ್ಲವಲ್ಲಾ! ಮನೆ ಬಾಗಿಲಿಗೆ ಬಂದು ಬಿಟ್ಟು ಹಾಗೆಯೇ ಹಿಂದಿರುಗಿ ಹೋಗುವುದೇ?

ಆದರೆ ತೋರುತ್ತೆ ಒಳಗೆ ಹೋದರೂ ಆತಿಥ್ಯ ಸರಿಯಾಗಿರುವುದಿಲ್ಲವೇನೋ ಎಂದು. ಮತ್ತೆ ಏನು ಮಾಡುವುದು? ಒಂದಾದ ಮೇಲೆ, ಹೋಗಿ ನೋಡಿಕೊಂಡೇ ಹೋಗುವುದು! ಗಂಭೀರ ಧ್ವನಿಯಿಂದ ಮೀನಾಕ್ಷಿ ಕೇಳಿದಳು. "ಸರಿ, ಹಾಗಾದರೆ ಮಾವ ಮನೆಯಲ್ಲಿದಾರೆಯೇ?"

"ಇಲ್ಲವಲ್ಲ, ಈ ಸಮಯದಲ್ಲಿ ಅವರೆಲ್ಲಿ ಇರುತ್ತಾರೆ? 'ಗದ್ದೀಗೆ' ಹೋಗಿದ್ದಾರೆ."

"ಅತ್ತೆ ಇದಾರೆ ತಾನೆ? ಅಥವಾ ಅವರೂ ಗದ್ದೀಗೆ ಹೋಗಿದ್ದಾರೋ?" ಮೀನಾಕ್ಷಿಯ ಧ್ವನಿಯಲ್ಲಿ ಬೇಸರ ತೋರುತ್ತೆ.

ಆದರೆ ನವೀನ ಒಬ್ಬ ಹೆಡ್ಡ. ಅವನು ಹೆದರುವುದಿಲ್ಲ. ಅವಳಿಗೆ ಒಳಗೆ ಬರಲು ದಾರಿ ಬಿಟ್ಟು, "ಯಜಮಾನಿಯನ್ನು ನೋಡಬೇಕಾದರೆ ಮೇಲೆ ಹೋಗಬೇಕು. ಆದರೆ ಕೆಳಗೆ ಒಂದು ನಿಮಿಷ ಕುಳಿತುಕೊಳ್ಳಬೇಕಾಗುತ್ತೆ. ಏಕೆಂದರೆ ನಾನು ಹೋಗಿ ಸಮಾಚಾರ ಕೊಡಬೇಕು, ಎಂದ. ಆಶೆಯಿಂದ ಮೀನಾಕ್ಷಿ ಒಳಗೆ ಹೋಗುತ್ತಾಳೆ. ನವೀನ, ಬೇಕೆಂದೇ ಕೇಳಿದ, ದಿವಾಕರ ಬಾಬುವಿನ ಕೋಣೆಯಲ್ಲಿ ಕುಳಿತುಕೊಳ್ಳುತ್ತೀರಾ?"

ದಿವಾಕರನ ಕೋಣೆ! ಮೀನಾಕ್ಷಿಯ ಮನಸ್ಸು ಪುಳಕಗೊಳ್ಳುತ್ತೆ. ಯಾವ ಮನುಷ್ಯನನ್ನು ನೋಡುತ್ತಿರುತ್ತಾಳೋ, ಅಂತಹವನ ಕೋಣೆಯನ್ನು ನೋಡಲು ಆಸೆಯಾಗುವುದು ಸಹಜವಲ್ಲವೆ?

ಆದರೆ ಮೀನಾಕ್ಷಿ ತಿಳಿದಿದ್ದುದು, ದಿವಾಕರನ ಕೋಣೆ ಮಹಡಿಯಲ್ಲಿ ವ್ರಜಬಾಲಾಳ ಕೋಣೆಯ ಪಕ್ಕದಲ್ಲಿದೆ ಎಂದು. ಆದುದರಿಂದ, "ಇರಲಿ, ಇಲ್ಲೇ ಕೆಳಗಡೆ ಕೋಣೆಯಲ್ಲೇ ಕುಳಿತುಕೊಳ್ಳುತ್ತೇನೆ" ಎಂದಳು.

ನವೀನ ಏನು ತಿಳಿದುಕೊಂಡನೋ ಅಥವಾ ಯೋಚಿಸಿದನೋ, "ಸರಿ. ಇಲ್ಲೇ ಕುಳಿತುಕೊಳ್ಳಿ" ಎಂದ. ಅವನ ಹಿಂದೆ ಹಿಂದೆಯೇ ಮನೆಯೊಳಗೆ ಬಂದ ಮೀನಾಕ್ಷಿಯ ಕಿವಿಗೆ ವಿಷಬಾಣದಂತೆ ಕೇಳಿಸುತ್ತೆ, "ಏನೆಲೋ, ನವ್‌ನಾ, ಗೇಟಲ್ಲಿ ಯಾರೊಂದಿಗೆ ಇಷ್ಟು ಮಾತು ? ಯಾರು ಆ ಪೋರಿ?"

ನವೀನ ಮೇಲೆ ಹತ್ತಿ ಹೋಗಿದ್ದ.

ಬಹುಶಃ ಆ ಪೋರಿ ಯಾರು, ಮತ್ತೆ ಮಾತಾಡಿದ್ದು ಏನು, ಹೇಳಲು ಹೋಗಿರಬಹುದು. ಮೀನಾಕ್ಷಿ ಕುಳಿತು ಯೋಚಿಸುತ್ತಾ ಬೆವತುಹೋಗುತ್ತಿದ್ದಳು. 'ತಪ್ಪು ಮನೆಗೆ ಬಂದುಬಿಟ್ಟಿಲ್ಲ ತಾನೆ ತಾನು' ಎಂದು.

ಇಂತಹ ಮನೆಯೇ ದಿವಾಕರನದು? ಇಂತಹ ಭಾಷೆಯೇ ಅವನ ಮನೆಯವರದು? ಯಾವ ದಿವಾಕರ, ನಿಮಿಷ ನಿಮಿಷಕ್ಕೂ, ಅವಳ ಮನೆಯ ಹಳೆಯ ಕಂದಾಚಾರದ ಬಗ್ಗೆ ತಿರಸ್ಕಾರದಿಂದ ಮಾತಾಡುತ್ತಿದ್ದನೋ, ಅವನ ಮನೆಯೆ ಇದು?

ಇದೇನು ಸರಳವಾದ ಗ್ರಾಮ್ಯತೆಯೇ?

ಉಹುಂ, ಎಂತಹ ದರಗು ಧ್ವನಿ!

ಮಾತಿನಲ್ಲಿ ಎಂತಹ ಒರಟುತನ!

ಇಲ್ಲ, ಒಂದು ವೇಳೆ ಅವಳು ತಪ್ಪು ಮನೆಗೆ ಬಂದಿರಬೇಕು.

ಅಯ್ಯೋ ರಾಮ, ಆ ಜವಾನನೂ ಹೋದವನು ಇನ್ನೂ ಬರಲೇ ಇಲ್ಲ.

ಬಂದರೆ ಅವನಿಗೆ ಹೇಳಿಬಿಟ್ಟು ಹೊರಟುಹೋಗಬಹುದು. ಯಜಮಾನಿಯನ್ನು ನೋಡಲು ಇನ್ನು ಉತ್ಸಾಹವಿರಲಿಲ್ಲ ಮೀನಾಕ್ಷಿಗೆ.

ಎಷ್ಟೋ ಹೊತ್ತಾದ ಮೇಲೆ ಬಂದ ನವೀನ. ಬಹುಶಃ ಎಲ್ಲವನ್ನೂ ಯಜಮಾನಿಯ ಕರ್ಣಗೋಚರ ಮಾಡಿಬಿಟ್ಟು ಬಂದಿದ್ದಾನೆ.

ಬಂದವನೇ ನಗುತ್ತಾ, ಏನೋ ಬಹಳ ಸ್ನೇಹಭಾವವಿದ್ದಂತೆ, ಆಗಿಹೋಯಿತು, ಕ್ವೀನ್ ವಿಕ್ಟೋರಿಯಾರ ಹುಕುಂ, ಬನ್ನಿ ಮೇಲೆ" ಎಂದ.

ಮೀನಾಕ್ಷಿಗೆ ಕಾಲಿನಿಂದ ತಲೆಯವರೆಗೂ ಉರಿಯುತ್ತೆ. ಹೇಳೋಣ ಎನಿಸುತ್ತೆ, 'ಇರಲಿ, ಬೇಡ, ಈಗ ಜ್ಞಾಪಕಕ್ಕೆ ಬಂತು, ಬೇರೆ ಕೆಲಸ ಇದೆ' ಎಂದು.

ಆದರೆ ಮನಸ್ಸಿನಲ್ಲಿ ಒಂದು ಕುತೂಹಲವೂ ಎದ್ದೇಳುತ್ತೆ.

ಯಾವ ಕುತೂಹಲ ಹೆಂಗಸಿನ ಸ್ವಭಾವಧರ್ಮವೋ ಅದು ಎಂದಿತು. ಹೋಗಿಯೇ ನೋಡೋಣ, ಏನಾದರೂ ಒಂದು ನಿರ್ಧಾರವಾಗಲಿ.

ಯಾವನ ಮಾತು ಕೇಳಿ ಮೈಯೆಲ್ಲಾ ಉರಿಯುತ್ತಿತ್ತೋ ಅವನನ್ನೇ ಕೇಳಿದಳು, "ಇದು ದಿವಾಕರ ದಾಸ್‌ನ ಮನೆ ತಾನೆ?"

"ಹೌದು."

"ಮಾವನ ಹೆಸರು ?"

"ಪ್ರಕಾಶ್ ಚಂದ್ರ ಮಂಡಲ್."

ಹೌದು, ಹೆಸರು ಇದೇ ಇರಬೇಕು ಎನ್ನಿಸುತ್ತೆ. ಮೊದಲ ಸಲ ಈ ಮಂಡಲ್ ಎಂದಿದ್ದನ್ನು ಕೇಳಿ ಏನೋ ಮನಸ್ಸಿನ ಮೇಲೆ ಒಂದು ಛಾವಟಿಯ ಏಟು ಬಿದ್ದ ಹಾಗಾಗಿದ್ದುದು ಜ್ಞಾಪಕ ಬಂತು ಮೀನಾಕ್ಷಿಗೆ.

ಕೋಣೆಯನ್ನು ಸುತ್ತಲೂ ಒಂದು ಸಲ ನೋಡಿದಳು. ಆಮೇಲೆ ಮಹಡಿಯ ಮೇಲೆ ಹತ್ತಲು ಪ್ರಾರಂಭಿಸಿದಳು. ದೊಡ್ಡದಾದ ಒಂದ ರೌಂಡು ಟೇಬಲ್ಲಿನ ಸುತ್ತಲೂ ಕೆಲವು ಮರದ ಕುರ್ಚಿಗಳು. ದಪ್ಪನಾದ ಕೈಗಳಿರುವಂತಹದು. ಗೋಡೆಯ ಮೇಲೆ ನಾನಾ ದೇವ ದೇವಿಯರ ಪಟಗಳು, ಅದರ ಜೊತೆಗೆ ಒಂದು ಮೇಮ್ ಸಾಹೇಬಳ ಚಿತ್ರವಿರುವ ಕ್ಯಾಲೆಂಡರ್. ಅದೊಂದನ್ನು ಬಿಟ್ಟು ಮಿಕ್ಕೆಲ್ಲಾದರ ಮೇಲೂ ಧೂಳು ಕೂತಿದೆ.

ದುಡ್ಡಿದೆ. ಆದರೆ ಅಭಿರುಚಿಯಿಲ್ಲ.

ಏನೋ ಒಂದು ತರಹದ ಬೇಸರದೊಂದಿಗೇ ನವೀನನ ಹಿಂದೆ ಹಿಂದೆ ಹತ್ತಿದಳು ಮೀನಾಕ್ಷಿ. ಹಾಗೆಯೇ ಕೇಳಿದಳು, "ನಿನ್ನ ಹೆಸರೇನು?"

ಇದೇ ಪ್ರಶ್ನೆಯನ್ನೇ ಅವಳನ್ನು ಕೇಳಿದಳು ಕುಸುಮಕಾಮಿನಿ.

ಕುಸುಮಕಾಮಿನಿಯ ಕೋಣೆಯಲ್ಲಿ ಕುಳಿತುಕೊಳ್ಳಲು ಒಂದು ಸೋಫಾ ಇದೆ. ಹೂವು, ಎಲೆಗಳು ಮುಂತಾದ ನಕಾಸು ಮಾಡಿದ, ಹಳೆಯ ಕಾಲದ ಜೋಡಿ ಮಂಚ, ಟೇಬಲ್ಲು ಸ್ಟಾಂಡು, ಬೀರೋ ಎಲ್ಲಾ ಇಟ್ಟೂ ಬೇಕಾದಷ್ಟು ಸ್ಥಳ ಇದೆ. ಕುಸುಮಕಾಮಿನಿ, ಸೋಫಾದಿಂದ ಒಂದೆರಡು ಗೇಣು ಎತ್ತರವಾಗಿದ್ದ ಮಂಚದ ಮೇಲೆ ಒಂದು ದಿಂಬನ್ನು ಮಡಿಲಲ್ಲಿಟ್ಟುಕೊಂಡು ಕುಳಿತಿದ್ದಳು. ಪಕ್ಕದಲ್ಲಿ ಎಲ–ಪೆಟ್ಟಿಗೆಯಲ್ಲಿ ವಿಳ್ಳೆಯದೆಲೆ, ಬೀಡಾ ಇತ್ತು.

ವಯಸ್ಸಿಗೆ ಅನುಗುಣವಾಗಿ ತಲೆಯಲ್ಲಿ ಕಡಿಮೆಯಾದ ಕೂದಲು, ಮುಖದಲ್ಲಿ ಒಂದು ದೊಡ್ಡಸ್ತಿಕೆಯ ಮುದ್ರೆ. ಆಕೆಯ ಪಕ್ಕದಲ್ಲಿ ಹಾಗೆಯೇ ಬಿದ್ದುಕೊಂಡಿದ್ದಳು ವ್ರಜಬಾಲಾ. ಮೀನಾಕ್ಷಿಯನ್ನು ನೋಡಿ ಸೀರೆಯನ್ನು ಸರಿಪಡಿಸಿಕೊಂಡು ಎದ್ದು ಕುಳಿತುಕೊಂಡಳು. ಅಂದಾಜಿನಿಂದ ಮೀನಾಕ್ಷಿ ಅಂದುಕೊಂಡಳು, ಇವಳೇ ವ್ರಜಬಾಲ ಇರಬೇಕು ಎಂದು ಆದರೆ ಮುಖ ನೋಡಿದರೆ ಅಂತಹ ಧೂರ್ತತೆಯ ಕುರುಹೇನೂ ಕಾಣಲಿಲ್ಲವಲ್ಲಾ, ಇನ್ನೂ, ಮೊದ್ದು ಎನ್ನುವಂತಿದೆ, ಈ ಹುಡುಗಿ, 'ಅಂತಹ' ಮಾತು ಆಡಿದ್ದಾಳೆಯೇ?

ಹೋಗಲಿ, ಈಗ ಎಲ್ಲಾ ಸರಿಯಾಗಿ ಪರಿಶೀಲನೆ ಮಾಡಿ ನೋಡಬೇಕು. ದಿವಾಕರನ ವಿಷಯ ಸರಿಯಾಗಿ ತಿಳಿದುಕೊಳ್ಳಬೇಕು.

ಭಯಂಕರವಾದ ಒಂದು ಜ್ವಾಲೆಯ ಅನುಭವವಾಗುತ್ತಿದೆ. ಮೋಸಹೋದ, ತಿರಸ್ಕಾರದ, ಧಿಕ್ಕಾರದ ಜ್ವಾಲೆ! ಕುಸುಮಕಾಮಿನಿ ಉಟ್ಟಿರುವುದು ಒಂದು ನಯವಾದ ಮಾವಿನಕಾಯಿ ಬಾರ್ಡರಿನ ಶಾಂತಿಪೂರಿನ ಸೀರೆ, ಮೈಯಲ್ಲಿ ಜಾಕೆಟ್ಟಿನ ಗೋಜಿಲ್ಲ. ಮೀನಾಕ್ಷಿಯ ತಾಯಿಗೂ ಜಾಕೆಟ್ಟಿನ ಗೋಜಿಲ್ಲ. ಆದರೂ ಅದರಲ್ಲಿ ಏನೋ ಒಂದು ಮಡಿಯು ಭಾವನೆ ಇದೆ. ಅವರೂ ಯಾವಾಗಲೂ ಉಡುವುದು ರೇಷ್ಮೆಯ ಸೀರೆಯಾದುದರಿಂದ ಏನೋ ಒಂದು ಪೂಜೆಯ, ಪವಿತ್ರತೆಯ ಭಾವ ತೋರುತ್ತೆ. ಬರಿ ಮೈ ನೋಡಲು ಇಷ್ಟು ದೃಷ್ಟಿಶೂಲವಾಗಿ ಕಾಣುವುದಿಲ್ಲ.

ಆದರೆ ಇವಳಲ್ಲಿ ಎಲ್ಲವೂ ಒಂದು ಅಶ್ಲೀಲ, ಸ್ಥೂಲತೆಯಾಗಿ ತೋರುತ್ತೆ.

ಪೆಟ್ಟಿಗೆಯಿಂದ ಒಂದು ಬೀಡಾವನ್ನು ತೆಗೆದು ಅದರ ಕೆಳತುದಿಯನ್ನು ಕಚ್ಚಿ ಉಗಿದು, ಭಾರಿ ಧ್ವನಿಯಿಂದ ಕುಸುಮಕಾಮಿನಿ ಹೇಳಿದಳು. "ಕುಳಿತುಕೋ."

ಯಜಮಾನಿಯಿಂದ ಕೆಲವು ಗೇಣು ಕೆಳಗೆ, ಸೋಫಾವಿನ ಮೇಲೆ ಕುಳಿತುಕೊಂಡಳು ಮೀನಾಕ್ಷಿ. ಅವಳನ್ನು ಕಾಲಿನಿಂದ ತಲೆಯವರೆಗೂ ನೋಡಿಬಿಟ್ಟು ಯಜಮಾನಿ ಕೇಳಿದಳು: "ನಿನ್ನ ಹೆಸರೇನು?" ಮೀನಾಕ್ಷಿಯ ಹೆಸರು ಕೇಳಿ, 'ಒಳ್ಳೇ ಹೊಸಾ ಹೆಸರಾಗಿದೆಯಲ್ಲಾ'

ಎಂದು ತನ್ನ ಭಾರಿ ಧ್ವನಿಯಿಂದ ಹೇಳಿ, "ದಿವಾಕರನನ್ನು ಹುಡುಕಿಕೊಂಡು ಬಂದೆಯಾ?" ಎಂದಳು ಕುಸುಮಕಾಮಿನಿ.

ಮೀನಾಕ್ಷಿ ಸ್ವಲ್ಪ ತಡವರಿಸುತ್ತಾ, "ಹುಡುಕಿಕೊಂಡೇನಲ್ಲ, ಅಂದರೆ ಸ್ವಲ್ಪ ಅವಶ್ಯಕತೆ ಇತ್ತು. ಒಂದು ಪುಸ್ತಕ ಕೊಡಬೇಕಾಗಿತ್ತು." ಯಾರಿಗೆ ಯಾರೂ ಕೊಡಬೇಕಾಗಿತ್ತೆಂಬುದು ಸರಿಯಾಗಿ ಗೊತ್ತಾಗಲಿಲ್ಲ.

ಕುಸುಮ ಕಾಮಿನಿಗೆ ಗೊತ್ತಾಯಿತು. ಸ್ವಲ್ಪ ನಕ್ಕು, "ಅದೇ, ಯಾತರ ಹೆಸರು ಹುರಿದ ಅಕ್ಕಿಯೋ ಅದನ್ನೇ ಪುರಿ ಅನ್ನೋದು. ಹುಡುಕಿಕೊಂಡು ಬರಲಿಲ್ಲ. ಆದರೆ ನೋಡಬೇಕಾಗಿತ್ತು! ಅವನ ಕಾಲೇಜಲ್ಲೇ ಓದುತ್ತಿಯೇನೋ?"

"ಹೂಂ"

"ಎಷ್ಟು ದಿನಗಳಿಂದ ಸ್ನೇಹ?"

ಮೀನಾಕ್ಷಿಗೆ ಕಾಲಿನಿಂದ ತಲೆಯವರೆಗೂ ಷಾಕ್ ಹೊಡೆದ ಹಾಗಾಯಿತು. ಆದರೆ ಸ್ನೇಹ ಇಲ್ಲ ಎಂದೂ ಹೇಳಲಾಗುವುದಿಲ್ಲವಲ್ಲಾ! ಯಾಕೆ ಹಾಗಾದರೆ ಅವಳು ಬಂದಿದ್ದು ಇಲ್ಲಿಗೆ? ಮೀನಾಕ್ಷಿ ಸ್ವಲ್ಪ ಬಿರುಸಿನಿಂದ ಹೇಳಿದಳು, "ಎಷ್ಟು ದಿನಗಳಿಂದ ಜೊತೆಯಲ್ಲಿ ಓದುತ್ತಾ ಇದ್ದೇನೋ ಅಷ್ಟು ದಿನಗಳಿಂದ" ಎಂದಳು.

"ಓಹೋ, ಸರಿಮತ್ತೆ ಆದರೂ ಎಂದೂ ನೀನು ಬರುವುದನ್ನು ನೋಡಿರಲಿಲ್ಲವಲ್ಲಾ, ಇಂದೇನು ಹಠಾತ್ತಾಗಿ.........."

"ಹೇಳಿದೆನಲ್ಲಾ, ಒಂದು ಪುಸ್ತಕದ ಅವಶ್ಯಕತೆ ಇತ್ತು."

"ಮತ್ತೆ ನವ್‌ನಾ ಹೇಳುತ್ತಿದ್ದ, ಮಾವನನ್ನು ಕೇಳಿದೆ, ಅತ್ತೆಯನ್ನು ಕೇಳಿದೆ ಅಂತ?"

ತನ್ನ ಬಲೆಯಲ್ಲಿ ತಾನೇ ಸಿಕ್ಕಿಕೊಂಡಂತಾಯಿತು ಮೀನಾಕ್ಷಿಗೆ. ಆದರೆ ಬಲೆಯಲ್ಲಿ ಸಿಕ್ಕಿಕೊಂಡರೆ ಕೆಲಸ ಆಗುವುದಿಲ್ಲವಲ್ಲ, ತಾನು ಗಟ್ಟಿಯಾಗಬೇಕು ಎಂದುಕೊಂಡು ತಲೆಯೆತ್ತಿ ಹೇಳಿದಳು, "ನಾನು ಅಂದುಕೊಂಡೆ, ಮಾವನ ಮನೆ ಅಂದಮೇಲೆ ಅವರ ತಾಯಿಯೂ ಇಲ್ಲೇ ಇರುತ್ತಾರೆ ಎಂದು. ಆದರೆ ಕೇಳಿದೆ ಇಲ್ಲ ಎಂದು. ಅವರು ಎಲ್ಲಿರುತ್ತಾರೆ? ಏನು ಅಡ್ರೆಸ್ಸು? ಸ್ವಲ್ಪ ಬೇಕಾಗಿತ್ತು. ಇಷ್ಟು ಹೊತ್ತು ಆರಾಮವಾಗಿ ಕುಳಿತಿದ್ದ ಕುಸುಮಕಾಮಿನಿ ಈಗ ಜರೂರಾದಳು. ಎದ್ದು ಕುಳಿತುಕೊಂಡು ತೀಕ್ಷ್ಣ ಧ್ವನಿಯಿಂದ ಕೇಳಿದಳು, "ಯಾಕೆ, ಹೇಳು ನೋಡೋಣ ? ಇದ್ದಕ್ಕಿದ್ದಂತೆ ಯಾತಕ್ಕೆ ಅವರಮ್ಮ ಬೇಕು?"

"ಅವಶ್ಯಕತೆ ಇದೆ."

"ಯಾಕೆ? ಹೃದ ಯಾವುದೂ ಆಪತ್ತು, ವಿಪತ್ತಿನಲ್ಲಿ ಸಿಕ್ಕಿಕೊಂಡಿಲ್ಲ ತಾನೇ?"

"ಇಲ್ಲ, ವಿಪತ್ತೇಕೆ?"

"ಮತ್ತೆ ಏನು, ಲಗ್ನಾನಾ?"

ವ್ರಜಬಾಲಾ ಸ್ವಲ್ಪ ನಕ್ಕು ಹೇಳಿದಳು. "ಓ, ಅಮ್ಮಾ, ದಿವು ಅಣ್ಣನ ಮದುವೆಯ ಸಮಾಚಾರ ತಂದಿದ್ದಾರೇನೋ ಇವರು."

ಕುಸುಮ ಕಾಮಿನಿ ಸುಳ್ಳು ಕೋಪದಿಂದ ಎಂದಳು, "ನೀನು ಸುಮ್ಮನಿರೆ ವೆಜೊ."

ವೆಜೊ ಅಂದರೆ ವ್ರಜೊ ಅಂದರೆ ವ್ರಜಬಾಲಾ. ಹಾಗಾದರೆ ತಪ್ಪು ಮನೆಗೇನೂ ತಾನು ಬಂದಿಲ್ಲ.

ಅತಃ ಆಶೆಯ ಕ್ಷೀಣ ರೇಖೆಯೂ ಅಳಿಸಿಹೋಯಿತು ಮೀನಾಕ್ಷಿಗೆ. ಹೇಳಿದಳು, "ಸರಿ ನಾನು ಹೋಗುತ್ತೇನೆ."

"ಅಯ್ಯೋ, ಅದ್ಹೆಂಗೇ? ದೊಡ್ಡ ಮನಿಸರ ಮಗಳು ಮನೆಗೆ ಬಂದಿದ್ದೀ, ಸ್ವಲ್ಪ ಚಹ–ತಿಂಡಿ ಕೊಡದೆ ಕಳಿಸಿಕೊಡ್ತೀನಾ?"

ಕುಸುಮಕಾಮಿನಿ ಅಂತಹ ಅತಿಥಿ–ವತ್ಸಲೆಯೇನಲ್ಲ. ಆದರೆ ಹುಡುಗಿಯನ್ನು ಈಗಲೇ ಹೋಗಗೊಡಲು ಇಷ್ಟವಿಲ್ಲ. ಅದಕ್ಕೇ ಈ ಯುಕ್ತಿ.

ಮೀನಾಕ್ಷಿ ಈ ಬಲೆಯೊಳಗೆ ಕಾಲಿಡುವುದಿಲ್ಲವೆಂದುಕೊಂಡಳು. ಸಿಕ್ಕಿಕೊಂಡಿರುವ ಈ ಬಲೆಯಿಂದ ತಪ್ಪಿಸಿಕೊಂಡರೆ ಸಾಕು ಎನಿಸಿದೆ ಈಗ.

ಅದಕ್ಕೇ ಹೇಳಿದಳು, "ಇಲ್ಲ, ಈಗ ಕೆಲಸ ಇದೆ. ದಿವಾಕರ ಬಾಬು ಬಂದರೆ ಹೇಳಿ, ಮೀನಾಕ್ಷಿ ಮೈತ್ರಾ ಬಂದಿದ್ದಳು ಅಂತ."

ಆಹಾ, ಅದು ಹೇಳೆ ಹೇಳ್ತೆನೆ ಆದರೆ ಯಾವ ಉದ್ದೇಶದಿಂದ ಬಂದಿದ್ದೆ ಹೇಳಲಿಲ್ಲವಲ್ಲಾ?"

"ಎಷ್ಟು ಸಲ ಹೇಳುವುದು? ಹೇಳಿದೆನಲ್ಲ ಒಂದು ಪುಸ್ತಕಕ್ಕಾಗಿ–"

"ಅಯ್ಯೋ, ನನ್ನ ಮರವೆಯೇ, ಅಂದರೆ ದಿವಾ ತಾಯಿ ಹತ್ತಿರವೂ ಪುಸ್ತಕದ ಬಗ್ಗೆಯೇ ಮಾತಿತ್ತೇ? ಆಯಮ್ಮ ಯಾವಾಗ್ಲಿಂದ ಇಷ್ಟೊಂದು ವಿದ್ಯಾವಂತೆಯಾದ್ಲು? ಓ, ವೆಜೊ ಏನೇ?"

ಕುಸುಮಕಾಮಿನಿ ಹೋಹೋ ಎಂದು ನಗಲು ಪ್ರಾರಂಭಿಸಿದಳು.

ಮೀನಾಕ್ಷಿಯಂತಹ ಹುಡುಗಿಯನ್ನು ಇನ್ನೆಲ್ಲಾದರೂ ನೋಡಿದ್ದರೆ ಮರ್ಯಾದೆಯಿಂದಲೇ ನೋಡುತ್ತಿದ್ದಳು ಕುಸುಮಕಾಮಿನಿ. ಕಾಲೇಜಿನಲ್ಲಿ ಓದುವ ಹುಡುಗಿಯರೆಂದರೆ, ಭಯ, ಮರ್ಯಾದೆ ಎಲ್ಲಾ ಇದೆ ಅವಳಿಗೆ. ಆದರೆ ಈಗಿರುವ ವಿಷಯ ಬೇರೆಯ ತರಹದ್ದು. ಇದು ದಿವಾಕರನ ಲವ್‌ನ ಹುಡುಗಿ. ಆದ್ದರಿಂದ ಇವಳೊಂದಿಗೆ ಇದಕ್ಕಿಂತ ಮರ್ಯಾದೆಯೊಂದಿಗೆ ನಡೆದುಕೊಳ್ಳ ಬೇಕಾದ ಪ್ರಶ್ನೆಯೇ ಏಳುವುದಿಲ್ಲ. ಯಾವ ಹುಡುಗಿ ದಿವಾಕರನನ್ನು ಪೂಜ್ಯನಾಗಿ ಕಾಣುತ್ತಾಳೋ ಅವಳಿಗೆ ಮರ್ಯಾದೆ ಏನೂ ಬಂತು?

ಅದರ ಮೇಲೆ, ಜಾತಿಯಲ್ಲಿ ಬ್ರಾಹ್ಮಣರು ಬೇರೆ!

ಬ್ರಾಹ್ಮಣರ ಹುಡುಗಿ ಹೋಗಿ, ಸದ್‌ಗೋಪನ ಹುಡುಗನೊಂದಿಗೆ! ಛಿ, ಛಿ! ಆದರೆ, ಶಾಸ್ತ್ರದಲ್ಲೇ ಇದೆಯಲ್ಲ, ಯಾರ ಜೊತೆಯಲ್ಲಿ ಯಾರ ಮನಸ್ಸು ಸೇರುತ್ತೋ, ಎಂದು. ಆದರೆ ಕೈಗೆಟುಕುವಂತೆ ಇಂತಹ ಒಂದು ತಮಾಷೆಯಾದ ಸಮಾಚಾರ ಸಿಕ್ಕಿರುವಾಗ ಯಾರು ಬಿಡುತ್ತಾರೆ!

ಮುಖ ಕೆಂಪಗೆ ಮಾಡಿಕೊಂಡು ಎದ್ದು ನಿಂತ ಮೀನಾಕ್ಷಿ, 'ನನ್ನದೇ ತಪ್ಪು.' ಸರಿ ಎಂದು ಹೇಳಿ ಹೊರಗೆ ಬಂದಳು.

ಆದರೆ ಹಠಾತ್ತನೆ ಅವಳನ್ನು ಹಿಂಬಾಲಿಸಿ ವ್ರಜಬಾಲಾ ಬಂದಳು. ಅವಳು ಹಾಗೆ ಬರುವುದನ್ನು ನೋಡಲು ಹಿತವಾಗಿಯೇ ಇಲ್ಲ. ಶರೀರವೇ ಭಾರವಾಗಿ ಹೋಗಿದೆ ಈಗ. ಬಟ್ಟೆ, ಬರೆ ಮೈ ಮೇಲೆ ನಿಲ್ಲುತ್ತಿಲ್ಲ. ದೇಹವನ್ನು ಹೇಗಾದರೂ ಮುಚ್ಚಿಕೊಂಡಿರಬೇಕು. ಅದಕ್ಕಾಗಿ ಸೀರೆಯನ್ನು ಸುತ್ತಿಕೊಂಡಿದ್ದಾಳೆ ಆದರೂ ಬೇಗ ಬಂದಳು.

ಮೆಲ್ಲಗೆ ಹೇಳಿದಳು, "ಅಮ್ಮನ ಮಾತುಕತೆಯೇ ಹೀಗೆ. ನಯ ನಾಜೋಕಿಲ್ಲ, ಕೋಪಿಸಿಕೋಬೇಡಿ. ದಿವು ಅಣ್ಣನನ್ನು ನೀವು ಪ್ರೀತಿಸ್ತೀರಾ?"

ಮೀನಾಕ್ಷಿ ತಿರುಗಿ ನಿಂತುಕೊಂಡಳು. ತೀವ್ರತೆಯೊಂದಿಗೇ ಕೇಳಿದಳು. "ನಿಮಗೆಲ್ಲಾ ಇಂತಹ ವಿಚಿತ್ರವಾದ ಭಾವನೆ ಬರಲು ಕಾರಣವೇನು? ಪ್ರೀತಿಸದೆ ಯಾರೂ, ಯಾರನ್ನೂ ಹುಡುಕಿಕೊಂಡು ಬರುವುದಿಲ್ಲವೇ? ಯಾರೊಂದಿಗೂ ಯಾರಿಗೂ ಏನೂ ಅವಶ್ಯಕತೆ ಇರುವುದಿಲ್ಲವೇ?"

ಈ ತೀವ್ರತೆಯ ಮುಂದೆ ಕಕ್ಕಾಬಿಕ್ಕಿಯಾಗಿ ನಿಂತಳು ವ್ರಜಬಾಲಾ.

ವ್ರಜಬಾಲಾ ಅಂದುಕೊಂಡಿದ್ದಳು, ಈ ಹುಡುಗಿ ದಿವು ಅಣ್ಣ ವರ್ಣಿಸುವ 'ಆ ಎಲ್ಲಾ ಹುಡುಗಿಯರಲ್ಲಿ ಒಬ್ಬಳಾಗಿರಬೇಕು. ಯಾವಳು ಸಹಜವಾಗಿಯೇ ಮಾಡುವಂತಹ ಕೆಲಸಗಳನ್ನು ಕೇಳಿದರೆಯೇ ವ್ರಜಬಾಲಾಳ ಹೃದಯ ಕಂಪಿಸುತ್ತಿತ್ತೋ, ಅಂತಹವಳೇ ಇರಬೇಕು ಇವಳು ಎಂದುಕೊಂಡಳು. ಆದರೆ ಅಂತಹ ಹುಡುಗಿಯರಿಗೆ ಕೇವಲ ಪ್ರೀತಿಯ ವಿಷಯವಾದ ಮಾತು ಕೇಳಿಯೇ ಇಷ್ಟೊಂದು ಕೋಪ ಬರುತ್ತದೆಯೇ? ಅದಕ್ಕೇ ಅವಳು ಸ್ವಲ್ಪ ಪೆಚ್ಚು ಮೋರೆ ಹಾಕಿಕೊಂಡು ಹೇಳಿದಳು:

"ಇಲ್ಲ, ಇಲ್ಲ, ಸುಮ್ಮನೆ ತೋರಿತು.........."

"ಅಂತಹ ಯೋಚನೆ ಇನ್ನು ಮೇಲೆ ಮಾಡಬೇಡಿ."

ಕೋಪದೊಂದಿಗೇ ಮೆಟ್ಟಲಿಳಿಯಲು ಪ್ರಾರಂಭಿಸಿದಳು. ಮೀನಾಕ್ಷಿ ಮೆಟ್ಟಲುಗಳ ಪಕ್ಕದಲ್ಲೇ ಒಂದು ಕೋಣೆಯನ್ನು ನೋಡಿ ನಿಂತಳು. ಬೇಕಂದೇ, "ಇದೇನಾ ದಿವಾಕರ ಬಾಬುವಿನ ಕೋಣೆ ನೋಡುತ್ತಿದ್ದೆ. ಒಂದು ಸಲ ಪುಸ್ತಕ ಇದೆಯೇ ಎಂದು," ಎಂದಳು.

ಆ ಕೋಣೆ, ಮನೆಯಲ್ಲಿ ಒಂದು ಮೂಲೆಯದೇ ಆದರೂ, ಒಂದು ಅಗಲ ಕಡಿಮೆಯಾದ ಮಂಚ, ಸಣ್ಣ ಟೇಬಲ್ಲು, ಹಗುರವಾದ ಬುಕ್‌ಷೆಲ್ಫ್ ಮುಂತಾದ್ದನ್ನು ಕೊಂಡು, ನೋಡಿದರೆ ಒಬ್ಬ ವಿದ್ಯಾರ್ಥಿಯ ಕೋಣೆಯೆಂಬ ಮುದ್ರೆಯನ್ನು ತೋರುತ್ತೆ. ನೋಡಿ ಮನಸ್ಸು ಸ್ವಲ್ಪ ಅಳುಕಿತು. ಈ ಮನೆಯ ಪರಿಸ್ಥಿತಿ ಹೀಗೆ, ಅದಕ್ಕೇ ಒಂದು ವೇಳೆ ಅವನೂ ಹಾಗಿದ್ದಾನೆ ಅನ್ನಿಸಿತು.

ಆದರೆ ಒಂದು ಕ್ಷಣದಲ್ಲಿ ವ್ರಜಬಾಲಾಳ ಉತ್ತರ ಕೇಳಿ ಮನಸ್ಸು ಕಠಿಣವಾಯಿತು.

ವ್ರಜಬಾಲಾ ಆಶ್ಚರ್ಯದಿಂದ ಉತ್ತರ ಕೊಟ್ಟಳು: "ದಿವು ಅಣ್ಣನದೇ? ಇಲ್ಲವಲ್ಲಾ, ಈ ಕೋಣೆಯಲ್ಲಿ ನನ್ನ ಮಾವನ ಮಗ ಇರುತ್ತಾನೆ. ಎಂಟು, ಒಂಭತ್ತು ಕಳಾಸು ಓದಿದ್ದಾಯಿತು ಅವನು. ಎರಡನೇಯ ಮಹಡಿಯಲ್ಲಿ ಗಲಾಟೆ ಹೆಚ್ಚು ಅದಕ್ಕೇ ಇಲ್ಲಿ–ಭಾಳ ಚೂಟಿ ಇವನು. ಹೇಳ್ತಾನೆ ತುಂಬಾ ಓದ್ತೀನಿ, ವಿಲಾಯಿತಿಗೆ ಹೋಗ್ತೀನಿ ಅಂತಾನೆ. ದಿವು ಅಣ್ಣ"–ಸ್ವಲ್ಪ ಉಗುಳು ನುಂಗಿ ಹೇಳುತ್ತಾಳೆ, "ದಿವು ಅಣ್ಣ ಕೆಳಗೆ ಇರ್ತಾನೆ. ನವೀನನ್ನ ನೋಡಿದರಲ್ಲಾ, ಅವನ ಕೋಣೆಯಲ್ಲಿ. ನಾನು ಹೇಳಿದ್ದೆ, 'ಓದೋರು. ಅವರಿಗೆ ಸ್ವಲ್ಪ ಒಳ್ಳೆ ಜಾಗ– ಆದರೆ ಅಮ್ಮ ಹೇಳ್ತಾಳೆ, 'ಯಾವ ಬಳಗದ ಸೋದರಳಿಯನೋ, ಅವನ್ನ ರಾಜಕುಮಾರನಂತೆ ಸಾಕೋಕಾಗುತ್ಯೆ ನಾನು' ಅಂತ ನನ್ನ ಅಮ್ಮ ಇದ್ದಾಳಲ್ಲಾ, ಭಾಳ ಇದು ಗೊತ್ತೇ? ಮತ್ತೆ ಜಿಪುಣಾಗ್ರೇಸರೆ."

ಮಾತಾಡುತ್ತಾ ಇಬ್ಬರೂ ಕೆಳಗಿಳಿದು ಬಂದರು.

ಕೆಳಗಿನ ಅಂಗಳಕ್ಕೆ ಬಂದ ಮೇಲೆ ಮೀನಾಕ್ಷಿ ಎಂದಳು, "ಸರಿ, ನಮಸ್ಕಾರ. ತುಂಬಾ ಉಪಕಾರ ಮಾಡಿದಿರಿ ನನಗೆ, ಅದಕ್ಕಾಗಿ ಧನ್ಯವಾದ" ಹೇಳಿ ಹೊರಗೆ ಬಂದು ನಡೆಯಲಾರಂಭಿಸಿದಳು. ಮೈ, ಕೈಯೆಲ್ಲಾ ಒಂದು ತರಹ ಸೋತುಹೋದಂತಿದೆ.

ಪ್ರಪಂಚದಲ್ಲಿ ಗಾಳಿಯಿಲ್ಲ ಎಂಬಂತಿದೆ.

ದಿವಾಕರನನ್ನು ಎಂದೂ ಒಬ್ಬ ಮಹಾನ್ ವ್ಯಕ್ತಿ ಎಂದು ಮೀನಾಕ್ಷಿ ತಿಳಿದಿರಲಿಲ್ಲ, ಆದರೂ ಇಷ್ಟರಮಟ್ಟಿಗೆ ಮೋಸಗಾರನೇ ದಿವಾಕರ! ಎನ್ನಿಸಿತು.

"ಇದೇನು ನೀವು?"

ರಸ್ತೆಯ ತಿರುವಿನಲ್ಲಿ ದೆವ್ವವನ್ನು ನೋಡಿದಂತಾಯಿತು ದಿವಾಕರನಿಗೆ. ಇಲ್ಲಿ ಮೀನಾಕ್ಷಿ?! ಅಂದರೆ ತನ್ನ ಮನೆಗೇ ಬಂದಿರಬೇಕು. ಅಂದರೆ ತಾನು ಹೇಳಿದ್ದ ಹಾಗೆಯೇ ಮಾಡಿದ್ದಾಳೆ! 'ಸರಿ, ನೀನು ಕರೆದುಕೊಂಡು ಹೋಗದಿದ್ದರೆ ನಾನೇ ಹೋಗುತ್ತೇನೆ' ಎಂದಿದ್ದಳಲ್ಲಾ! ಆದರೂ ಅವನು, ನಿಜವಾಗಿಯೂ ಅವಳು ಹಾಗೆ ಮಾಡುತ್ತಾಳೆಂದು ತಿಳಿದಿರಲಿಲ್ಲ. ಇಲ್ಲಿ ಅವನ ಮನೆ ರಸ್ತೆಯಲ್ಲಿ, ಅವನ ಮನೆಗೆ ಅಲ್ಲದೆ ಬೇರೆ ಎಲ್ಲಿಗೆ ಬಂದಿರಬೇಕು?

ದಿವಾಕರನಿಗೆ ಕೋಪದಿಂದ ಮೈಯೆಲ್ಲಾ ಉರಿಯುತ್ತೆ. ಹೆಣ್ಣು–ಹೆಂಗಸಿಗೆ ಇಷ್ಟೊಂದು ಗಂಡಸ್ತಿಕೆಯೇ? ಅಡ್ರೆಸ್ಸು ತಾನೆ ಎಲ್ಲಿಂದ ಸಿಕ್ಕಿತು? ಬಂದು ಏನು ನೋಡಿದಳು?

ಯಾರಾದರೂ ಅವನ ರೂಮನ್ನು ತೋರಿಸಿದಬಹುದೇ? ನವೀನ ಏನಾದರೂ ಕತೆ ಕಟ್ಟಿಸಿರಬೇಕು. ಅತ್ತೆ, ವ್ರಜಬಾಲಾ ಏನಾದರೂ ಅದೂ ಇದೂ ಕೇಳಿರಬೇಕು.

ಅಂದರೆ, ದಿವಾಕರನಿಗೆ ಎಲ್ಲವೂ ಹೋದಂತೆಯೇ?

ಇನ್ನು ಯಾವ ಮರಳಿನಿಂದ ಈ ಸಮುದ್ರವನ್ನು ಕಟ್ಟಬಲ್ಲ ದಿವಾಕರ? ಯಾವ ಸೂಜಿಯಿಂದ ರಫುಮಾಡುತ್ತಾನೆ. ಈ ದುಷ್ಟಪಟದ ಬಿರುಕನ್ನು ಹೇಗೆ ಸೇರಿಸಬಲ್ಲ?!

ಅದಲ್ಲದೆ ಗೊತ್ತೂ ಇಲ್ಲವಲ್ಲಾ ಮೀನಾಕ್ಷಿ ಏನೇನು ತಿಳಿದುಕೊಂಡಿದ್ದಾಳೆ ಎಂಬುದು! ದಿವಾಕರನ ಬಗ್ಗೆ ವಿಷಯ ಎಷ್ಟೆಲ್ಲಾ ಹೊರಬಿದ್ದಿದೆ ಎಂದು!

"ಇದೇನು ನೀನು ಇಲ್ಲಿ?"

ಆಶ್ಚರ್ಯಕ್ಕಿಂತ ಕಷ್ಟಕ್ಕೆ ಸಿಕ್ಕಿಕೊಂಡಿದ್ದೇ ಎದ್ದು ಕಾಣಿಸಿತು ಧ್ವನಿಯಲ್ಲಿ. ಮೀನಾಕ್ಷಿ ಅದನ್ನು ಕಂಡುಕೊಂಡಿದ್ದು ವಿಶೇಷವೇನಲ್ಲ.

ಮೀನಾಕ್ಷಿ ನಿಂತುಬಿಟ್ಟು, "ಬಹಳ ಕಷ್ಟಕ್ಕೆ ಸಿಕ್ಕಿಸಿದೆ ಅಲ್ಲವೇ?" ಎಂದಳು ವ್ಯಂಗ್ಯದಿಂದ.

"ಇಲ್ಲ, ಇಲ್ಲಿ ನನಗೇನೂ ತೊಂದರೆ ಇಲ್ಲ, ಇನ್ನೂ ನಿನಗೇ........."

"ನನ್ನ ವಿಷಯ ಇರಲಿ," ಉರಿದುಬಿದ್ದಳು ಮೀನಾಕ್ಷಿ: ಇಷ್ಟು ದಿನದಿಂದ ಬೊಕಳೆಯ ದಾರದಿಂದ ಸುಳ್ಳಿನ ಬಲೆಯನ್ನು ನೇಯ್ದು ಇಟ್ಟಿದ್ದೆ. ಎಲ್ಲಾ ಕಿತ್ತುಹೋಯಿತು. ಸ್ವರೂಪ ಹೊರಬಿತ್ತು. ತೊಂದರೆ ಇಲ್ಲವೇ?"

ಮೊದಲು ಬಲೆಯಲ್ಲಿ ನೀರನ್ನು ಹಿಡಿಯಲು ಹೋದ ದಿವಾಕರ, ಉಪ್ಪಿನಿಂದ ನದಿಯನ್ನು ತಡೆಗಟ್ಟಲು ನೋಡಿದ. ಇನ್ನೊಂದು ಸುಳ್ಳಿನ ದಾರದಿಂದ ಬಲೆಯನ್ನು ಸರಿಪಡಿಸಲು ಹೋದ. ಏನು? ಏನಾಯಿತು? ಬಲೇ ತಲೆಹರಟೆಯ ಆಳೊಬ್ಬ ಇದಾನೆ ನಮ್ಮ ಮನೆಯಲ್ಲಿ, ಅವನೇನಾದರೂ..

"ದಿವಾಕರ, ಸುಳ್ಳಿನ ಬಲೆಗೆ ಇನ್ನು ಸುಳ್ಳು ಸೇರಿಸಬೇಡ. ಬಹಳ ಅಸಹ್ಯವಾಗುತ್ತಿದೆ. ಕೇವಲ ನಿನ್ನ ಮೇಲೆ ಮಾತ್ರವೇ ಅಲ್ಲ, ನನ್ನ ಮೇಲೂ, ಈ ಪ್ರಪಂಚದ ಮೇಲೂ."

ಹೊರಡಲು ಸಿದ್ಧವಾಗುತ್ತಾಳೆ ಮೀನಾಕ್ಷಿ.

ಆದರೆ ದಿವಾಕರ ದಾರಿ ಅಡ್ಡಗಟ್ಟುತ್ತಾನೆ.

ಹೇಗೋ ಮುಖದ ಮೇಲೆ ನಗೆಯನ್ನು ಬರೆಸಿಕೊಂಡು ಕೇಳುತ್ತಾನೆ, "ಏನಾಯಿತೆಂದು ಹೇಳಕೂಡದೇ? ನಮ್ಮ ಅತ್ತೆ ಒಂದು ತರಹದವರು, ದೂರ್ವಾಸರ ಗುಣದ ಹೆಂಗಸಿನ ಅವತಾರ, ಏನಾದರೂ ಬೈಗಳ ತಿಂದುಕೊಂಡು ಬಂದೆಯಾ?"

"ದಿವಾಕರ, ಇನ್ನು ಕಷ್ಟ ಕೊಡಬೇಡ"–ಕಣ್ಣಲ್ಲಿ ಬರುತ್ತಿದ್ದ ನೀರನ್ನು ಅಗ್ನಿಯಾಗಿಸಿಕೊಂಡು ಹೇಳಿದಳು: "ಹುಲ್ಲಿನಿಂದ ಅಗ್ನಿಯನ್ನು ಮುಚ್ಚಲು ಪ್ರಯತ್ನಿಸಬೇಡ. ಬಾಯಿಂದ ಗಾಳಿಯನ್ನು ಊದಿ ಹಿಮಾಲಯವನ್ನು ಕದಲಿಸಲಾಗುವುದಿಲ್ಲ. ನೀನು ಎಂತಹವನು ಎಂದು ನನಗೆ ಚೆನ್ನಾಗಿ ಗೊತ್ತಾಯಿತು."

ಮೀನಾಕ್ಷಿ?

ಹಠಾತ್ತನೆ ದಿವಾಕರನಲ್ಲಿ ಒಂದು ಮಾರ್ಪಾಟು. ಅವನ ಕರಡು–ಮುರಡಾದ ಮುಖ ಜೋಲು ಬಿದ್ದಿತು. ದಪ್ಪನಾದ ತುಟಿಗಳು ಜೋಲು ಬಿದ್ದಿತು. ಚಿಕ್ಕ ಚಿಕ್ಕದಾಗಿ ಕತ್ತರಿಸಿದ ಅವನ ತಲೆಯ ಕೂದಲೂ ಜೋಲು ಬಿದ್ದಿತು.

ದಿವಾಕರ ಕಂಪಿಸುವ ಧ್ವನಿಯಿಂದ ಹೇಳತೊಡಗಿದ, "ನನಗೆ ಗೊತ್ತಿತ್ತು. ನನ್ನ ಈ ಇಸ್ಪೀಟಿನ ಮಾಳಿಗೆ ನಿಲ್ಲುವುದಿಲ್ಲವೆಂದು. ಆದರೆ ಏನು ಮಾಡಲಿ ಮೀನಾಕ್ಷಿ? ನನಗೆ ಬೇರೆ

ಯಾವುದೂ ದಾರಿ ಇರಲಿಲ್ಲ. ನನಗೆ ಗೊತ್ತು ನಾನೊಬ್ಬ ದಗಾ, ಮೋಸಗಾರ ಎಂದು ಆದರೆ ಇದೆಲ್ಲಾ ಯಾತಕ್ಕೆ ಗೊತ್ತೇ ಮೀನಾಕ್ಷಿ? ನಾನು ಬಹಳ ಬಡವ, ರಸ್ತೆಯ ಭಿಕ್ಷದವನಿಗಿಂತ ಕಡೆ. ನನ್ನ ಆ ದಾರಿದ್ರ್ಯದ ಲಜ್ಜೆಯನ್ನು ನಿನ್ನ ಮುಂದೆ ಇಡಲಾಗಲಿಲ್ಲ. ಯಾವಾಗಲೂ ಅನ್ನಿಸಿದೆ ಇದನ್ನು ಒಂದಲ್ಲ ಒಂದು ದಿನ ಜಯಿಸಿಯೇ ತೀರುತ್ತೇನೆ ಎಂದೂ. ಒಬ್ಬ ಮನುಷ್ಯ ಎನ್ನಿಸಿಕೊಳ್ಳುವ ಹಾಗೆ. ಯೋಗ್ಯನಾಗುತ್ತೇನೆ ಎಂದೂ. ಅದುವರಗೆ, ಅದುವರೆಗೆ ಈ ಪರ್ಣಶಾಲೆಯ ನೆರಳಲ್ಲಿ....."

ವೇದನೆಯಿಂದ ಬಾಡಿದ ಅವನ ಮುಖವನ್ನು ನೋಡಿ ಮೀನಾಕ್ಷಿಯ ಕಬ್ಬಿಣದಂತಾಗಿದ್ದ ಮನಸ್ಸು ಸ್ವಲ್ಪ ಮೆತ್ತಗಾಯಿತು, ಸ್ಥಿರವಾಗಿ ಹೇಳಿದಳು, 'ದರಿದ್ರನಾಗಿರುವುದು ಒಂದು ಅಪರಾಧವೇನಲ್ಲ ದಿವಾಕರ!'

"ನಾನೆಣಿಸುತ್ತೇನೆ ಅಪರಾಧವೆಂದು–" ದಿವಾಕರನ ಜೋಲು ಬಿದ್ದಿದ್ದ ದೇಹ ಸ್ವಲ್ಪ ಚೇತರಿಸಿಕೊಂಡಂತೆ ತೋರುತ್ತೆ. ಕಾಲ ಕೆಳಗೆ ಸ್ವಲ್ಪ ನೆಲ ಸಿಕ್ಕಿದ ಹಾಗಿದೆ. ಆದ್ದರಿಂದ ಅದರ ಮೇಲೆ ಭದ್ರವಾಗಿ ನಿಂತುಕೊಂಡು ಅವನು ಜೋರಾಗಿ ಹೇಳಬಹುದು. "ನಾನೆಣಿಸುತ್ತೇನೆ ಅಪರಾಧವೆಂದು. ಏಕೆಂದರೆ ಕೈಯಲ್ಲಾಗದಿರುವಿಕೆಯೇ ಒಂದು ದೊಡ್ಡ ಅಪರಾಧ. ದಾರಿದ್ರ್ಯ ಈ ಕೈಯಲ್ಲಾಗದಿರುವಿಕೆಯ ಕೂಸು ತಾನೆ!

ಆದರೂ ಮೀನಾಕ್ಷಿ ವಾದಿಸುತ್ತಾಳೆ. "ಸುಳ್ಳು ಹೇಳುವುದಕ್ಕಿಂತ ದೊಡ್ಡ ಅಪರಾಧ ಇನ್ನೊಂದಿಲ್ಲ ದಿವಾಕರ. ನನಗೆ ನಂಬುವುದಕ್ಕೇ ಆಗುತ್ತಿಲ್ಲ. ಹೇಗೆ ನೀನು ದಿನ ಬೆಳಗಾದರೆ ಸುಳ್ಳಿನ ಮೇಲೆ ಸುಳ್ಳಿನ ಇಟ್ಟಿಗೆ ಇಟ್ಟು ಮಾಳಿಗೆ ಕಟ್ಟುತ್ತಿದ್ದೆಯೆಂದೂ, ನನ್ನನ್ನು ಮೋಸಗೊಳಿಸುತ್ತಿದ್ದೆಯೆಂದೂ. ನೀನು ಮಾವನ ಜವಾನನ ಜೊತೆಯಲ್ಲಿ ಇರುತ್ತಿದ್ದೀಯೆ, ನಿನ್ನ ತಾಯಿ ಯಾವಾಗಲೂ ಕಲ್ಕತ್ತಾಗೆ ಬಂದೇ ಇಲ್ಲ, ನಿನ್ನ ಬಳಗದವರು....."

ಸುಮ್ಮನಾಗುತ್ತಾಳೆ ಮೀನಾಕ್ಷಿ, ಗಂಟಲು ಕಟ್ಟುವುದರಿಂದ ಸುಮ್ಮನಾಗುತ್ತಾಳೆ. ದಿವಾಕರನ ಕಣ್ಣಲ್ಲಿ ಅದೃಶ್ಯ ಜ್ವಾಲೆ ಉರಿಯುತ್ತೆ. ಮುಖದ ಮೇಲೆ ಒಂದು ನಿರ್ಧಾರದ ಮಡಿಕೆ ಬೀಳುತ್ತೆ. ಆದರೂ ಬಿಗಿದ ಗಂಟಲಿಂದ ಹೇಳುತ್ತಾನೆ, "ಮೀನಾಕ್ಷಿ, ನೀನು ಒಂದು ಅವಕಾಶ ಕೊಟ್ಟರೆ, ನನ್ನ ಎಲ್ಲಾ ಮಾತೂ ಹೇಳುವುದಕ್ಕೆ ಸ್ವಲ್ಪ ಸಮಯ......." ಮೀನಾಕ್ಷಿ ಕೋಪ ಮತ್ತು ವ್ಯಂಗ್ಯದಿಂದ ಕೇಳಿದಳು, "ಏಕೆ? ಇನ್ನೂ ಒಂದು ಮೂಟೆ ಸುಳ್ಳಿನ ತಯಾರಿಕೆಗಾಗಿಯೇ?"

ದಿವಾಕರನ ಮುಖದ ಪ್ರಕಾಶ ಅಳಿಸಿಹೋಗುತ್ತೆ. ಅವನು ತೇರಿದ ನಟನಂತೆ. ಅದಕ್ಕನುಗುಣವಾಗಿ, ದುಃಖದ ಧ್ವನಿಯಲ್ಲಿ ಹೇಳುತ್ತಾನೆ. ಸರಿ. ನನಗೆ ಗೊತ್ತು, ನನ್ನ ಈ ದಾರಿದ್ರ್ಯದ ವಿಷಯ ಗೊತ್ತಾಗಿಬಿಟ್ಟರೆ ನೀನು ನನ್ನನ್ನು ತಿರಸ್ಕಾರದಿಂದ ನೋಡುತ್ತೀಯ ಮತ್ತು ನನ್ನನ್ನು ನಿನ್ನ ಪರಿಚಯ ಇರುವವನು ಎಂದೂ ಒಪ್ಪಿಕೊಳ್ಳುವುದಿಲ್ಲ ಎಂದು ...."

"ಇರು, ನಿಲ್ಲಿಸು ನಿನ್ನ ನಾಟಕ"– ಮೀನಾಕ್ಷಿ ಕೋಪದಿಂದ ನುಡಿದಳು. "ದುಡ್ಡಿನ ದಾರಿದ್ರ್ಯ ನಾಚುವಂತಹದ್ದಲ್ಲ, ಚರಿತ್ರೆಯ ದಾರಿದ್ರ್ಯವೇ ನಾಚುವಂತಹ ವಿಷಯ."

"ದುಡ್ಡಿಲ್ಲದಿರುವಿಕೆಯೇ ಮನುಷ್ಯನ ಚರಿತ್ರೆಯನ್ನು ವಿಕೃತಗೊಳಿಸುತ್ತೆ ಮೀನಾಕ್ಷಿ. ಇದೇ ಈ ಮಾವನ ಮನೆಯಲ್ಲಿ ಬಿದ್ದಿರುತ್ತೇನಲ್ಲಾ, ಪ್ರತಿ ಕ್ಷಣವೂ ಹೇಗೆ ಈ ದುಃಖದಿಂದ ಮುಕ್ತನಾಗಲಿ ಎಂದೆನಿಸುತ್ತಿರುವುದಿಲ್ಲವೇ? ಆದರೆ ಏನು ಮಾಡಲಿ? ಎಷ್ಟು ದಿನ ಕಾಲೇಜಿನಲ್ಲಿ ಓದುತ್ತೇನೋ ಅಷ್ಟು ದಿನ ಅಲ್ಲಿ ನಾಯಿಯಂತೆ ಬಿದ್ದಿರಲೇ ಬೇಕು."

ಮೀನಾಕ್ಷಿಗೆ ಮನಸ್ಸು ಕಹಿಯಾಗುತ್ತೆ. ಹೇಳಿದಳು–"ಗೊತ್ತು, ನಿನ್ನ ಊರಿನ ಜಮೀನು ದಾರಿಯೂ ಒಂದು ಅರೇಬಿಯನ್ ನೈಟ್ ಕತೆ ಎಂದು. ಆದರೆ ಯಾವ ವಿಧದಿಂದ ನೋಡಿದರೂ ನಾನು ಒಪ್ಪಲಾಗುತ್ತಿಲ್ಲ. ದಿವಾಕರ, ಇನ್ನು ನಿನ್ನ ಯಾವ ಮಾತನ್ನೂ ನಾನು ಹೇಗೆ ನಂಬಲಿ?" ದಿವಾಕರ ತಲೆ ಬಗ್ಗಿಸಿಕೊಳ್ಳುತ್ತಾನೆ. ಆಮೇಲೆ ಮೆಲ್ಲಗೆ ಹೇಳುತ್ತಾನೆ, "ನಿನಗೂ, ನನಗೂ ಸಾಮಾಜಿಕ ಸಮತೆ ಆಕಾಶಕ್ಕೂ, ಪಾತಾಳಕ್ಕೂ ಇರುವಂತಿದೆ. ಆದರೂ ನಿನ್ನನ್ನು ಪಡೆಯುವ ದುರ್ದಮನೀಯವಾದ ಆಸೆ. ಅದಕ್ಕೇ ಸುಳ್ಳಿನ ಈ ಮೆಟ್ಟಿಲುಗಳನ್ನು ಹಾಕಿ ಆಕಾಶಕ್ಕೆ ಹತ್ತಲು ಪ್ರಯತ್ನಿಸಿದ್ದೆ. ಹೋಗಲಿ ಬುದ್ಧಿ ಬಂತು. ಇನ್ನು ಮುಂದೆ ಈ ಜೀವನದಲ್ಲಿ ನೋಡುತ್ತೇವೋ ಇಲ್ಲವೋ, ಇದೇ ಕಡೇ ಭೇಟಿ. ಸರಿ ಹೋಗುತ್ತೇನೆ."

ಮೀನಾಕ್ಷಿ ಕೋಪದಿಂದ ನುಡಿದಳು, "ಇದೇ ಕೊನೆ, ಈ ಜೀವನದಲ್ಲಿ ಇನ್ನು ನೋಡುವುದಿಲ್ಲವೆಂದರೆ ಏನರ್ಥ? ವಿಷ ಕುಡಿಯುತ್ತೀಯಾ, ಇಲ್ಲ ನೇಣು ಹಾಕಿಕೊಳ್ಳುತ್ತೀಯೋ?"

"ಯೋಚಿಸುತ್ತಿದ್ದೇನೆ."

"ಪೆದ್ದುತನವೆಲ್ಲಾ ಒಂದು ಕಡೆ ಇಡು. ನಿನ್ನ ಆ ವಿಚಿತ್ರವಾದ ಮಾವನ ಮನೆಯಿಂದ ಹೊರ ಬರುವ ದಾರಿ ನೋಡು. ಸುಳ್ಳು ಪೊಳ್ಳಿನ ಬಾಳನ್ನು ಬಿಟ್ಟು ನಿಜವಾದ ಮನುಷ್ಯನಾಗುವ ಸಾಧನೆಯನ್ನು ಮಾಡು."

"ಅದುವರೆಗೂ ನೀನು ನನಗಾಗಿ ಕಾದಿರುತ್ತೀಯಾ ಮೀನಾಕ್ಷಿ?"

ದಿವಾಕರನ ಧ್ವನಿ ಕಾತರತೆಯಿಂದ ಕೂಡಿದೆ.

ಇದೇನೋ ಬೇರೆ ದಿವಾಕರನೆಂಬಂತೆ.

ಮೀನಾಕ್ಷಿಯ ಮನಸ್ಸು ಮಮತೆಯಿಂದ ತುಂಬುತ್ತೆ.

ಮೀನಾಕ್ಷಿಯ ಹೃದಯದ ನಾರೀತ್ವ, ಅಪರಾಧಿಯನ್ನು ಕ್ಷಮಿಸುತ್ತೆ. ಅವನ ಬಾಡಿದ ಮುಖ ಮ್ಲಾನವದನ, ಅಪರಾಧಿಯ ಭಾವನೆಯನ್ನು ನಂಬುತ್ತಾಳೆ. ಅದಕ್ಕೇ ಹೇಳುತ್ತಾಳೆ. ಅದನ್ನು ಆಮೇಲೆ ನೋಡೋಣ. ನೀನು ಮುಂಚೆ ಅಲ್ಲಿಂದ ಹೊರಗೆ ಬರುವ ಪ್ರಯತ್ನ ಮಾಡು. ಅವನು ಆ ಜಾಗವನ್ನು ಬಿಟ್ಟು ಬಂದರೇನೇ ಸುಂದರನಾಗುತ್ತಾನೆ. ಸತ್ಯಕ್ಕೆ ಮರ್ಯಾದೆ ಕೊಡಲು ಕಲಿಯುತ್ತಾನೆ ಎಂದು ತಿಳಿದು ಕೊಂಡಿದ್ದಾಳೆ ಮೀನಾಕ್ಷಿ!

"ಮೀನಾಕ್ಷಿ, ಹಾಗಾದರೆ ನೀನು ಒಂದು ಸಲ ನನ್ನ ಅಮ್ಮನನ್ನು ನೋಡಬೇಕು. ಅವರಿಗೆ ತೋರಿಸಬೇಕು ನಿನ್ನನ್ನ."

"ನಿಮ್ಮಮ್ಮಾನೇ? ಕೇಳಿದೆ, ಅವರು ಊರಲ್ಲಿರುತ್ತಾರೆ ಎಂದು? ಆದರೂ ನೀನು ದಿನ ಬೆಳಗಾದರೆ.."

"ನಾನು ಕೈ ಮುಗಿದು ಕ್ಷಮೆ ಬೇಡುತ್ತೇನೆ. ಕಿವಿ ಹಿಡಿದುಕೊಳ್ಳುತ್ತೇನೆ......"

"ಸಾಕು, ಸಾಕು. ರೋಡಿನ ಮಧ್ಯೆ ನಿಂತು ಒಂದು ಸೀನ್ ಮಾಡಬೇಡ. ದಾರಿಯಲ್ಲಿ ನಿನ್ನನ್ನು ನೋಡಿದ್ದರಿಂದ, ಇಲ್ಲದಿದ್ದರೆ, ಈ ಜೀವನದಲ್ಲಿ ಎಂದೂ ನಿನ್ನನ್ನೂ ಕ್ಷಮಿಸುತ್ತಿರಲಿಲ್ಲ."

ದಿವಾಕರನಿಗೂ ಅದರ ಅರಿವಾಗುತ್ತೆ.

ಸ್ವಲ್ಪ ಮುಂಚೆ ಎದುರಿಗೆ ಸಿಕ್ಕಿಬಿದ್ದಾಗ, ಗ್ರಹಚಾರವೇ ಎನ್ನಿಸಿದ್ದು ಈಗ ಒಂದು ವರವೆನಿಸಿತು. ತನ್ನ ಅಭಿನಯ ಚಾತುರ್ಯದ ಮೇಲೆ ಅಪಾರ ನಂಬಿಕೆ ಅವನಿಗೆ. ಹೇಗೆ ಬೇಕೋ ಸಂದರ್ಭ ನೋಡಿ ಬದಲಾಯಿಸಿಕೊಳ್ಳುತ್ತಾನೆ. ಇಷ್ಟು ದಿನ ಮೀನಾಕ್ಷಿಯನ್ನು ಹೀಯಾಳಿಸಿ ಡೌನ್ ಕೊಡುತ್ತಿದ್ದ, ಈಗ ಪೂರ್ತಿ ಎದುರು ದಾರಿ ಹಿಡಿದ.

ಈಗ ಅವಳನ್ನು ಕೈಗೆ ಹಾಕಿಕೊಳ್ಳಲು ಬೇರೆ ದಾರಿ ಹುಡುಕಲೇಬೇಕು. ಮುಖ್ಯವಾಗಿ ಒಂದು ಸಲ ಮುಗ್ಗರಿಸುವಂತೆ ಮಾಡಿದರೆ ಸಾಕು, ಈ 'ಸತಿ' 'ಪ್ಯಾಟರ್ನಿ'ನ ಹುಡುಗಿಯರನ್ನು ಕೈಯೊಳಗೆ ಹಾಕಿಕೊಳ್ಳಬಹುದು.

ರಸ್ತೆಯಲ್ಲಿ ನಿಂತುಕೊಂಡು ಹೀಗೆ ಮಾತಾಡುತ್ತಿರುವುದನ್ನೇ ಈ ಮೊಹಲ್ಲೆಯ ಜನ, ಒಂದು ತರಹವಾಗಿ ನೋಡುತ್ತಾರೆ. ಇದು ದಕ್ಷಿಣ ಕಲ್ಕತ್ತೆಯಲ್ಲ, ಹೀಗೆ ಜೋಡಿಗಳನ್ನು ಸಾಯಂಕಾಲದಿಂದ ರಾತ್ರಿವರೆಗೂ ಕಾಣುವುದಕ್ಕೆ! ಅವರುಗಳು ನಿಂತಿರುವ ರೀತಿಯನ್ನು ನೋಡಿದರೆ ಏನೋ ಒಂದೆರಡು ಮಾತಾಡಿಬಿಟ್ಟು ಹೊರಟುಹೋಗುತ್ತಾರೆ ಅನ್ನುವ ಹಾಗಿರುತ್ತೆ. ಆದರೆ ಗಂಟೆಗಟ್ಟಲೆ ಅದು ಹಾಗೆಯೇ ಮುಂದುವರಿಯುತ್ತಿರುತ್ತೆ.

ಆದರೆ ಇಲ್ಲಿ ಎಲ್ಲರೂ ತಿರುಗಿ ತಿರುಗಿ ನೋಡಿದರು.

ಆದರೂ ದಿವಾಕರನಿಗೆ ಯಾವುದೂ ಒಂದು ನಿರ್ಧಾರ ಮಾಡಿಕೊಂಡು ಬಿಡಬೇಕೆಂಬ ಆತುರ. ಅವನ ದೀನ, ದರಿದ್ರ, ಗ್ರಾಮದ, ಅದಕ್ಕಿಂತ ದೀನ, ದರಿದ್ರ ಕುಟೀರನ. ದೀನ ದಾರಿದ್ರ್ಯದಿಂದ ಬಳಲುವ ತಾಯಿಯನ್ನು ಅವನು ಮೀನಾಕ್ಷಿಗೆ ತೋರಿಸಬೇಕು. ಮೀನಾಕ್ಷಿಯ ಅವನ ದೊಡ್ಡ ಮನುಷ್ಯರಾದ ಅಹಂಕಾರಿ ಬಳಗದವರನ್ನು ಮಾತ್ರ ನೋಡಿದಳು. ಆದರೆ ಅವನ, ಪರ್ಣಕುಟೀರಲ್ಲಿರುವ ತಾಯಿಯನ್ನು ನೋಡಬೇಡವೇ?

ಇಲ್ಲ, ಇನ್ನು ತನ್ನ ಬಾಯಿಂದ ಅವರ ವಿಷಯ ಇನ್ನೇನೂ ಅವನು ಹೇಳುವುದಿಲ್ಲ. ಹೇಳಿದ್ದಾನೆ ಹಿಂದೆಲ್ಲಾ ಬೇಕಾದಷ್ಟು. ಅಮ್ಮನ ವಿಷಯ ಕತೆ ಏಕೆ ಹೇಳುತ್ತಿದ್ದ ಎಂದೂ ಹೇಳಿದ್ದಾನೆ. ಏಕೆ ಗೊತ್ತೇ ಮೀನಾಕ್ಷಿ........ ದುಃಖದಿಂದ ಹೇಳುತ್ತಾನೆ ದಿವಾಕರ. "ನಾನು ಅಮ್ಮನಿಂದ ಎಷ್ಟು ದೂರ ಬಂದಿದ್ದೇನೆ. ನನ್ನ ಮನಸ್ಸಿನ ವಿಷಯವನ್ನು ಹೇಳಿಕೊಳ್ಳಲು ಯಾರೂ ಇಲ್ಲ ಎಂದು ಭಾವಿಸಲು ಕಷ್ಟವಾಗುತ್ತೆ, ಅದಕ್ಕೇ ಹೀಗೆ......"

ಕಡೆಗೂ ಹೇಗಾದರೂ ಮಾಡಿ ಒಂದು ದಿನದ ಮಟ್ಟಿಗೆ ದಿವಾಕರನ ಗ್ರಾಮಕ್ಕೆ ಹೋಗಿ ಬರಲು ಮೀನಾಕ್ಷಿಯನ್ನು ಒಪ್ಪಿಸಿದ ದಿವಾಕರ.

"ನಮ್ಮ ದೇಶದ ಭಾಗ್ಯ-ಹೀನ ಗ್ರಾಮವನ್ನು ಒಂದು ಸಲವಾದರೂ ಕಣ್ಣಿಂದ ನೋಡಬೇಕಾದುದು ಅಗತ್ಯ ಮೀನಾಕ್ಷಿ............"

ಜೋರಾಗಿ ಹೇಳುತ್ತಾನೆ ದಿವಾಕರ, "ಆಗ ನಿಜವಾಗಲೂ ನಮ್ಮ ಸ್ಥಿತಿ ಹೇಗಿದೆ ಎಂಬುದನ್ನು ನೋಡಬಹುದು. ನಾವು ಎಲ್ಲಿ ಬಿದ್ದಿದ್ದೇವೆ ಎಂಬುದನ್ನು. ಯಾವ ಒಂದು ನಗರವನ್ನು ನೋಡಿ ನಾವು ಗರ್ವದಿಂದ ಎಷ್ಟು ಮುಂದುವರಿದಿದ್ದೇವೆ ಎಂದು ಕೊಳ್ಳುತ್ತೇವೋ ಅದು ಈ ದೊಡ್ಡ ದೇಶದ ಎಷ್ಟನೇಯ ಅಂಶ? ನಂಬುತ್ತೀಯಾ, ಈಗಲೂ ನಮ್ಮ ಗ್ರಾಮದಂತೆ ಸಾವಿರಾರು ಹಳ್ಳಿಗಳಿದೆ. ಅಲ್ಲಿಯ ಜನರಿಗೆ 'ಎಲೆಕ್ಟ್ರಿಸಿಟಿ' ಒಂದು ಕಟ್ಟು-ಕತೆ! ಮೋಟಾರು ಹೇಗಿರುತ್ತೆ ಎಂದು ಅವರು ನೋಡಿಯೇ ಇಲ್ಲ. ಲಕ್ಷಗಟ್ಟಲೆ ಜನ ರೈಲುಗಾಡಿಯಲ್ಲಿ ಪ್ರಯಾಣ ಮಾಡುವ ಆಶೆಯ ಸ್ವಪ್ನವನ್ನು ನೋಡುತ್ತಾ ಮುದುಕರಾಗಿ, ಸತ್ತೂಹೋಗುತ್ತಾರೆ. ಸ್ನಾನಕ್ಕಾಗಿ ಒಂದು ಬಾಗಿಲು ಇರುವ ಕೋಣೆ ಇರುತ್ತೆ ಎಂಬುದೇ ಅವರಿಗೆ ಗೊತ್ತಿಲ್ಲ. ಕಾಯಿಲೆ ಏನಾದರೂ ಬಂದರೆ ತಕ್ಷಣ ಡಾಕ್ಟರು ಸಿಕ್ಕುತ್ತಾರೆ ಎಂದು........"

ಸ್ವಲ್ಪ ಉಸಿರೆಳೆದು ಕೊಳ್ಳುತ್ತಾನೆ ದಿವಾಕರ.

ಕೆಲದಿನಗಳ ಹಿಂದೆ ನಿಂತು ಕೇಳಿದ, ಯಾವನೋ ಸಮಾಜ ಸೇವಕನ, ಗ್ರಾಮ್ಯಸುಧಾರಣೆಯ ಭಾಷಣದ ಸ್ವಲ್ಪ ಭಾಗ ಹೊಡೆದದ್ದು ಈಗ ಜ್ಞಾಪಕ ಇತ್ತಲ್ಲ, ಎಂದು ಪುಳಕಗೊಂಡ. ಈ ತರಹದ ಮಾತು ಅವನ ಹಿಂದಿನ ಮತವಾದಕ್ಕೆ ವಿರೋಧವಾದುದು, ಅದು ಈಗ ಅವನಿಗೆ ಜ್ಞಾಪಕಕ್ಕೆ ಬರಲಿಲ್ಲ.

ಆದರೆ ಮೀನಾಕ್ಷಿಗೆ ಜ್ಞಾಪಕ ಬಂತು.

ಅವನು ಸ್ವಲ್ಪ ಉಸಿರು ಎಳೆದುಕೊಳ್ಳುವ ಅವಕಾಶದಲ್ಲಿ ಹೇಳಿದಳು. "ಅದೇ ತಾನೇ ನಾನೂ ಹೇಳುವುದು? ನೀನೇ ತಾನೇ ಯಾವಾಗಲೂ ನಮ್ಮ ಸಮಾಜದ ಕುರುಡುತನವನ್ನೂ ಕು-ಸಂಸ್ಕಾರವನ್ನೂ ಟೀಕಿಸಿ ಹೊರದೇಶಗಳ ಉನ್ನತಿಯನ್ನು ಹೊಗಳುತ್ತಿದ್ದೆ? ನಾನು ಹೇಳುತ್ತೇನೆ, ಆ ದೇಶಗಳ ಜೊತೆ ಪೋಟಿಗೆ ಇಳಿಯಲು, ನಮ್ಮ ಹಳೆಯ ಸಂಸ್ಕಾರಗಳನ್ನೆಲ್ಲಾ ಒಡೆದು ಹಾಕುವುದರಲ್ಲಿ ಜಯಗಳಿಸಿದರೂ ಅದನ್ನು ಯಾರ ಜೊತೆಗೂಡಿ ಅನುಭವಿಸಬೇಕು? ಲಕ್ಷಕೋಟಿ, ನಿರಕ್ಷರ ಕುಕ್ಷಿಗಳಾದ, ಅಜ್ಞಾನಿಗಳಾದ, ನಿನ್ನ ದೇಶದ ಭಾಗ್ಯಹೀನ ಜನರೊಂದಿಗೆ ತಾನೆ? ಅವರಿಗೆ ಹೊಟ್ಟೆಗೆ ಅನ್ನವಿಲ್ಲದಿರುವಾಗ ಇದೆಲ್ಲಾದರ ಬಗ್ಗೆ ಅಕ್ಕರೆಗೊಳ್ಳಲು ಸಮಯ ಎಲ್ಲಿದೆ? ನೀನು ತಾನೆ ಸುಮ್ಮನೆ ನನ್ನನ್ನು ಡೌನ್ ಮಾಡಲು ನೋಡುತ್ತೀಯಾ. ನೀನೇ ತಾನೆ ಹೇಳುತ್ತಿದ್ದೆ, ಪುರುಷರ ಅಧಿಕಾರ ರಕ್ಷಣೆಗಾಗಿ ಅವರು, ಈ ಸತೀತ್ವ, ಪವಿತ್ರತೆ ಈ ಶಬ್ದಗಳನ್ನು ಸೃಷ್ಟಿಸಿದರು. ಹೆಂಗಸರಿಗೂ ತನ್ನ ವಿಷಯವಾಗಿ ಸಂಪೂರ್ಣ ಅಧಿಕಾರ ಇರಬೇಕು. ಆದರೆ ನೀನೇ ಈಗ ದೇಶದ ಈ ಕಗ್ಗತ್ತಲ ಮೂರ್ತಿಯನ್ನು ತೋರಿಸುತ್ತಿದ್ದೀಯ. ಅಧಿಕಾರವನ್ನು ಕೊಟ್ಟರೆ ಮಾತ್ರ ಪ್ರಯೋಜನವಿಲ್ಲ. ಅಧಿಕಾರದ ಜವಾಬ್ದಾರಿಯ ಶಿಕ್ಷಣ

ಪಡೆದು ಬರಬೇಕು. ಹಾಗಿಲ್ಲದೆ ಹೋದರೆ, ಅಸ್ತ್ರದ ಶಿಕ್ಷಣವಿಲ್ಲದೆ ಅಸ್ತ್ರವನ್ನು ಕೊಟ್ಟ ಹಾಗೆ. ಹೋಗಲಿ, ರಸ್ತೆಯಲ್ಲಿ ನಿಂತುಕೊಂಡು ಬೇಕಾದಷ್ಟು ಲೆಕ್ಚರ್ ಕೊಟ್ಟದ್ದಾಯಿತು. ಕಡೆಯಾಗಿ ಒಂದು ಮಾತು ಹೇಳಿಬಿಟ್ಟೇ ಹೋಗುತ್ತೇನೆ. ಬ್ಲಫ್ ಮಾಡಿ ಕಡೆ ಮಾತು ಉಳಿಸಿಕೊಳ್ಳುವುದು ಸಾಧ್ಯವಿಲ್ಲ."

ದಿವಾಕರನ ಒಳಗೆಲ್ಲಾ ಉರಿದು ಬೆಂದುಹೋಗುತ್ತಿತ್ತು.

ದಿವಾಕರನಿಗೆ ಅನಿಸುತ್ತಿತ್ತು. ಈ ಮೂಗೆತ್ತರದ ಹುಡುಗಿಯನ್ನು ಹಿಡಿದು ಕಿತ್ತು ಕೊರೆದು ಹಾಕಿಬಿಡೋಣವೆಂದು. ಹೆಣ್ಣು ಹುಡುಗಿ, ಅದಕ್ಕೆ ತಕ್ಕಂತಿರಬೇಕು. ಅದು ಬಿಟ್ಟು ತನ್ನ ಮದುವೆಯನ್ನು ತಾನೇ ಫೈನಲ್ ಮಾಡಲು ಬಂದಿದ್ದಾಳೆ! ಇಷ್ಟು ದಿನಗಳಿಂದ ಎಷ್ಟೋ ಕಷ್ಟಪಟ್ಟು ಹತ್ತು ಜನರ ಮುಂದೆ ಓಡಾಡಲು ಒಂದು ಪರಿಚಯವನ್ನು ಕೊಡುತ್ತಾ ಬಂದಿದ್ದೆ. ಅದನ್ನೆಲ್ಲಾ ನೆಲಸಮ ಮಾಡಿದಳು. ಇನ್ನೇನು, ಮದುವೆಯಾಗೋ ಯೋಚನೆ ಬಿಟ್ಟು ಹೋಯಿತಲ್ಲಾ. ಇನ್ನು ಮೇಲೆ ಎಲ್ಲರ ಹತ್ತಿರವೂ ನನ್ನ ವಿಷಯವಾಗಿ ಹೇಳಿಕೊಂಡು ಓಡಾಡಲು ಅಡ್ಡಿಯೇನು? ದರಿದ್ರನಾಗಿ ನಾನು ಎಂದೆಂದೂ ಹೀಗೆಯೇ ಇರುವುದಿಲ್ಲ. ಒಂದಲ್ಲ ಒಂದು ದಿನ ನಿಮ್ಮಂತಹ ದೊಡ್ಡ ಮನುಷ್ಯರ ತಲೆಯ ಮೇಲೆ ಹೊಡೆದು ಮೇಲಕ್ಕೆ ಹೋಗಿಯೇ ಹೋಗುತ್ತೇನೆ. ದುಡ್ಡು ಪ್ರಪಂಚದ ಧೂಳಲ್ಲೇ ಇದೆ. ಈ ಧೂಳನ್ನು ಕೈಯಲ್ಲಿ ಎತ್ತುವುದಕ್ಕಾಗಬೇಕು. ನಿಮ್ಮಗಳ ಪಂಡಿತ ಸಮಾಜದಲ್ಲಿ ಸಮನಾಗಲು ಸ್ವಲ್ಪ ವಿದ್ಯೆ ಬೇಕು. ಅದನ್ನು ಮಾಡಿಕೊಳ್ಳುವುದಕ್ಕಾಗಿ ಪ್ರಕಾಶ ಮಂಡಲ್‌ನ ನೌಕರನ ರೂಮಲ್ಲಿ ನಾಯಿಯ ಹಾಗೆ ಬಿದ್ದಿರಬೇಕಾಗಿದೆ. ಯಜಮಾನಿಯ ಸಲಿಗೆಯ ಆಳು ಅವನು. ಅದಕ್ಕೇ ಅವನಿಗೆ ಅಷ್ಟು ಕೊಬ್ಬು. ಹಾಳಾದವನು. ಅವನೇ ನನ್ನ ವಿಷಯವಾಗಿ ಏನಾದರೂ ಹೇಳಿರಬೇಕು. ಇರಲಿ, ಕಾಲ ಎಂದೆಂದೂ ಹೀಗೆಯೇ ಇರುವುದಿಲ್ಲ!

ಮನಸ್ಸಿನ ಮಾತುಗಳು ಹೊರಗೆ ಯಾರಿಗೂ ಗೊತ್ತಾಗುವುದಿಲ್ಲ ಆದ್ದರಿಂದಲೇ ಪ್ರಪಂಚ ಇಂದೂ ನಡೆಯುತ್ತಿದೆ. ಇಲ್ಲದಿದ್ದರೆ ಎಷ್ಟೋ ಧ್ವಂಸವಾಗಿಹೋಗಿರುವುದು!

ಮನಸ್ಸು ಒಂದು ವಾಯುಶೂನ್ಯವಾದ ಡಬ್ಬಿಯಲ್ಲಿ ಸುರಕ್ಷಿತವಾಗಿದೆ. ಅದಕ್ಕೇ. ಮನಸ್ಸಿನಲ್ಲಿ ಏನು ನಡೆದರೂ ದಿವಾಕರ ಬಾಯಲ್ಲಿ ನಮ್ರತೆಯಿಂದ ಹೇಳಲು ಸಾಧ್ಯವಾಯಿತು. "ಬರುತ್ತಿ ತಾನೆ ಮೀನಾಕ್ಷಿ ನಮ್ಮ ಗುಡಿಸಲಿಗೆ?"

ಮೀನಾಕ್ಷಿ ಸ್ವಲ್ಪ ಹಿಂಜರಿದು ಕೇಳುತ್ತಾಳೆ. "ಹೋಗಿ ಏನು ಉಪಯೋಗ. ಹೇಳಬಲ್ಲೆಯಾ?" ಅವನ ಬಿಟ್ಟಗಣ್ಣಲ್ಲಿ ಸ್ವಲ್ಪ ನಿರಾಶೆ ಕಾಣುತ್ತೆ. "ಏನೂ ಇಲ್ಲ. ಮೀನಾಕ್ಷಿ ಕೇವಲ ನಮ್ಮ ಅಮ್ಮನನ್ನು ಒಂದು ಸಲ ನಿನಗೆ ತೋರಿಸುತ್ತಿದ್ದೆ. ನನ್ನಂತಹ ದುರದೃಷ್ಟವಂತನಿಗೆ ಐಶ್ವರ್ಯ ಏನಾದರೂ ಇದೆ ಅಂದರೆ ಅದೊಂದೇ–"

"ಆದರೆ ಮನೆಯಲ್ಲಿ ಏನು ಹೇಳಲಿ?"

"ಏನಾದರೂ ಆಗಲಿ. ಏನಾದರೂ ಹೇಳು. ಜನ ಒಂದು ರಾತ್ರಿ ಸ್ನೇಹಿತರ ಮದುವೆಗಳಿಗಾಗಿ ಹೋಗಿ ನಿಲ್ಲುವುದಿಲ್ಲವೇ?"

"ರಾತ್ರಿ?" ಮೀನಾಕ್ಷಿ ಚಕಿತಳಾದಳು, "ರಾತ್ರಿ ಏಕೆ?"

"ಅದಲ್ಲದೆ ಬೇರೆ ಯಾವುದೂ ಸೌಕರ್ಯವಾದ ಟ್ರೈನ್ ಇಲ್ಲ. ಮಿಡ್‌ನಾಪೂರ್ ಸ್ಟೇಷನ್ನಿನಲ್ಲಿ ಇಳಿದು, ಎತ್ತಿನ ಗಾಡಿಯಲ್ಲಿ ಹದಿಮೂರು ಮೈಲಿ ದಾರಿ ಹೋಗಬೇಕು. ನಡಿ ಮೀನಾಕ್ಷಿ, ನಮ್ಮ ಅಮ್ಮನನ್ನು ಮಾತ್ರವೇ ಅಲ್ಲ. ನಮ್ಮ ದೇಶದ ನೈಜರೂಪವನ್ನೂ ನೋಡಬಹುದು."

ದಿವಾಕರನ ಧ್ವನಿಯಲ್ಲಿ ಅವನ ಸ್ವಭಾವಕ್ಕೆ ವಿರೋಧವಾದಂತಹ ಒಂದು ಆವೇಗ ಹೊರಹೊಮ್ಮುತ್ತೆ.

ಅವನ ಯಾವಾಗಲೂ ಜ್ವಲಿಸುವ ಕಣ್ಣಿಗೆ ಬದಲಾಗಿ, ಈ ನಮ್ರ ನೊಂದ ಮುಖದ ಭಾವ ಒಂದು ಹೊಸ ಆಕರ್ಷಣೆಯನ್ನು ನೀಡುತ್ತೆ.

ಮೀನಾಕ್ಷಿ ಒಪ್ಪುತ್ತಾಳೆ.

ಮೀನಾಕ್ಷಿ ಮುಂದಕ್ಕೆ ಹೋಗಿ ಬಸ್ಸನ್ನು ಹತ್ತುತ್ತಾಳೆ. ಅವಳಿಗೆ ಕಾಣದ ಎರಡು ಕಣ್ಣುಗಳು ಅವಳನ್ನು ಭಸ್ಮಮಾಡಿಬಿಡುವಂತೆ ಜ್ವಲಿಸುತ್ತದೆ.

ಈ ದುಃಸಾಹಸದ ದಾರಿಯಲ್ಲಿ ಕಾಲಿಡದೆ ಹೋಗಿದ್ದರೆ ಮೀನಾಕ್ಷಿಯ ಜೀವನ ಪೂರ್ಣವಾಗಿ ಬೇರೆ ತರಹ ಆಗುತ್ತಿತ್ತೇನೋ. ಇಂದು ಹಿಂತಿರುಗುವಾಗ ಜೀವನದ ರಾಹುವೊಂದಿಗೆ ಭೇಟಿಯಾಗದೆ ಇದ್ದಿದ್ದರೆ ಜೀವನದ ದಾರಿ ಬೇರೆಡೆಗೆ ತಿರುಗುತ್ತಿತ್ತೇನೋ ದುಃಸಾಹಸದಿಂದ, ಬುದ್ಧಿಹೀನತೆಯ ಒಂದು ಬಲೆಗೆ ಕತ್ತು ನೀಡಿದಳ್ಳು ಮೀನಾಕ್ಷಿ. ಮತ್ತೆ ದಾರಿ ನಡೆಯುತ್ತಾ ಹಿಂದೆ ತಿರುಗಿ ನೋಡಲು ಮರೆತಿದ್ದಳು ಮೀನಾಕ್ಷಿ. ನೋಡಿದ್ದಿದ್ದರೆ ಆ ಉರಿಯುವ ಗೋಲಕಗಳೆರಡೇ ಅವಳನ್ನು ಹುಷಾರುಗೊಳಿಸುತ್ತಿತ್ತೋ ಏನೋ.

*****

ಅಧ್ಯಾಯ ಆರು

ಸರೋಜಾಕ್ಷರಿಗೆ ಮೈ ಹುಷಾರಿಲ್ಲದಿರುವಾಗ ಕೆಲದಿನ ದಿನವೂ ಬಂದು ನೋಡಿಕೊಂಡು ಹೋದರು ಚಿಕ್ಕಮ್ಮ ಹೈಮವತಿ.

ಕೆಲ ದಿನಗಳಾದ ಮೇಲೆ ಅಂದು ಒಂದು ದಿನ ಬಂದರು.

ಹತ್ತಹತ್ತಿರ ಸಮ ವಯಸ್ಕರಾದ ಈ ಮಗನ ಮೇಲೆ ಅವರಿಗೆ ಪ್ರೀತಿ, ಸ್ನೇಹ, ಮರ್ಯಾದೆ ಮತ್ತು ಗೆಳೆತನದ ಸಂಬಂಧವಾದರೂ ಅವರು ಅಪರೂಪವಾಗಿಯೇ ಬರುತ್ತಿದ್ದರು.

ಹೈಮವತಿ ಸುಂದರಿಯೇನಲ್ಲದಿದ್ದರೂ ಒಳ್ಳೆಯ ಸಿರಿವಂತಿಕೆಯ ರೂಪು. ಆ ಸಿರಿವಂತಿಕೆ ಅವರ ಕಾಲಿನಿಂದ ತಲೆಯವರೆಗೂ ನೆರೆದಿತ್ತು. ಅವರನ್ನು ನೋಡಿದರೆ ಸುಷಮಾ ಶಬ್ದದ ಅರ್ಥವು ಅರಿವಾದಂತಾಗುವುದು. ಅದಕ್ಕೇ ಈ ಪ್ರೌಢ ವಯಸ್ಸಿನಲ್ಲೂ ಅವರ ಆಪಾದಮಸ್ತಕ ಒಂದು ಛಂದಸ್ಸಿನಿಂದ ಕೂಡಿದ ಸುಷಮಾ ಆಗಿತ್ತು. ನೋಡುವವರ ಮನಸ್ಸಿನಲ್ಲಿ ನೋಡುತ್ತಿರಬೇಕೆಂಬ ಹಂಬಲ, ಒಂದು ಸಂಭ್ರಮ ತೋರುತ್ತಿತ್ತು.

ತೆಳಗ್ಗೆ, ಪುಟ್ಟದಾದ ಚಹರೆ, ಅದರಲ್ಲಿ ಒಂದು ಗಾಂಭೀರ್ಯ, ಆದರೆ ಗಂಭೀರ ಎಂದು ಒಂದು ಮಾತಿನಲ್ಲಿ ಅವರನ್ನು ಅಳೆಯಲಾಗುವುದಿಲ್ಲ. ಮಾತಿನಲ್ಲಿ ಒಂದು ಚುರುಕು, ಸೌಂದರ್ಯ ಕೌತುಕ ಇದೆ.

ಹೈಮವತಿ ಬಂದು ಕೂತರೆ ಒಂದು ನಿರ್ಮಲತೆಯ, ಉಜ್ವಲ ಪ್ರತೀಕ ಬಂದು ಕುಳಿತಂತಿದೆ ಅವರಲ್ಲಿ, ವಿಜಯಾ ಒಬ್ಬರನ್ನು ಬಿಟ್ಟು ಮಿಕ್ಕೆಲ್ಲರೂ ಆಕರ್ಷಿತರಾದವರೇ.

ವಿಜಯಾ ಹೈಮವತಿಯ ಆಚಾರ-ವಿಚಾರಗಳನ್ನು ಸ್ವಲ್ಪ ಕೀಳಾಗಿ ಭಾವಿಸುವವರು. ಹೈಮವತಿ ವಿಧವೆಯಾದರೂ ಬಾಡಿ-ಬ್ಲವುಸು ಹಾಕಿಕೊಳ್ಳುತ್ತಾರೆ. ವಿಧವೆಯಾಗಿ ಕೂದಲು ಕತ್ತರಿಸಿದ್ದರೂ ಅದಕ್ಕೆ ಷಾಂಪೂ ಹಾಕಿಕೊಂಡು, ಮುಖದಲ್ಲಿ ತರುಣಿಯ ಕಾಂತಿಯನ್ನು ಸೂಸುತ್ತಾರೆ. ಅವರ ಕನ್ನಡಕ, ಚಪ್ಪಲಿ, ವ್ಯಾನಿಟಿ ಬ್ಯಾಗ್ ಎಲ್ಲವೂ ಷೋಕಿಯ ಮುದ್ರೆಯನ್ನು ತೋರಿಸುತ್ತೆ ಎಂಬುದು ವಿಜಯಾರ ಮನಸ್ಸಿನ ಒಂದು ಕಹಿಯಾದ ಅಭಿಪ್ರಾಯ. ಅದನ್ನು ಅವರು ಮುಚ್ಚಿಡುವುದೂ ಇಲ್ಲ.

ಹೈಮವತಿ ಈ ಮನೆಗೆ ಜಾಸ್ತಿ ಬರದೆ ಇರುವುದಕ್ಕೆ ಅದೇ ಕಾರಣವೇನೋ! ಆದರೆ ಗಂಡನ ಕಡೆಯ ಬಳಗ ಎಂದು ಹೇಳಿಕೊಳ್ಳಲು ಆಕೆಗೆ ಬೇರೆ ಜನರೂ ಇಲ್ಲ. ದೂರದ ಸಂಬಂಧದ ಸೋದರಳಿಯ ಒಬ್ಬ ಇದ್ದಾನೆ. ಅವನೇ ಅವರ ಕರ್ಣಧಾರ. ಅದಿರಲಿ, ಇಂದು ಹೈಮವತಿ ಗಂಡನ ಕಡೆಯ ಈ ಬಳಗದ ಮನೆಗೆ ಬಂದರು.

ಸರೋಜಾಕ್ಷರ ಮಕ್ಕಳು ಯಾರೂ ಹೈಮವತಿಯನ್ನು ಅಜ್ಜೀ ಎಂದು ಕರೆಯುವುದಿಲ್ಲ. ಚಿಕ್ಕಮ್ಮಮ್ಮ ಎನ್ನುತ್ತಾರೆ. ಇದು ಸರೋಜಾಕ್ಷರೇ ಅವರ ದೊಡ್ಡ ಮಗನ ಚಿಕ್ಕಂದಿನಲ್ಲಿ ಅಮಲು ಮಾಡಿದ ಶಬ್ದ. ಅದು ಹಾಗೆಯೇ ನಿಂತುಬಿಟ್ಟಿತು. ಆಮೇಲೆ ಮಿಕ್ಕ ಮೂರು ಜನ ಮಕ್ಕಳೂ ಹಾಗೆಯೇ ಕರೆಯಲಾರಂಭಿಸಿದರು.

ವಿಜಯಾಗೆ ಇದರಲ್ಲೂ ಒಂದು ಹುಡುಗಾಟವೇ ಎದ್ದು ತೋರುತ್ತೆ. ಸೃಷ್ಟಿಯಲ್ಲಿಲ್ಲದ ಯಾವುದೋ ಒಂದು ಶಬ್ದ. ಚಿಕ್ಕಜ್ಜಿ ಎಂದು ಕರೆದರೆ ಮುಗಿಯಿತು. ಆದರೆ ಹಾಗೆ ಕರೆದರೆ ಮುದುಕಿಯಾಗಿ ಹೋಗುತ್ತಾರಲ್ಲಾ! ಚಿರಯುವತಿಯಾಗಿರಬೇಕಲ್ಲ ಅವರು!

ಚಿಕ್ಕ-ಅತ್ತೆಯ ಮೇಲೆ ಏನೋ ಒಂದು ಸ್ವಜಾತಿ-ವಿರೋಧ ವಿಜಯಾಗೆ.

ಈಗೇನೋ ವಿಧವೆಯಾಗಿಯೂ ಅವರು ಅದಕ್ಕೆ ತಕ್ಕ ಆಚಾರಗಳನ್ನು ಇಟ್ಟುಕೊಂಡಿಲ್ಲವೆಂಬ ಕ್ರೋಧ. ಆದರೆ ಅವರು ಮುತ್ತೈದೆಯಾಗಿ ಇರುವಾಗಲೂ ಕ್ರೋಧಕ್ಕೆ ಕಡಿಮೆ ಇತ್ತೆ?

"ಚಿಕ್ಕಮ್ಮಮ್ಮ ಬಂದಿದ್ದಾರೆ." ದೇವರ ಮನೆಗೆ ಹೋಗಿ ಹೇಳಿ ಬಂದಳು ಮೀನಾಕ್ಷಿ.

ವಿಜಯಾ ಒಂದು ಸಲ ಮುಖವನ್ನು ಕೊಂಕಿಸಿ, ತಿರುಗಿ ಜಪಮಾಲೆಯನ್ನು ತಿರುಗಿಸಲಾರಂಭಿಸಿದರು. ಮೀನಾಕ್ಷಿ ತಿರುಗಿ ಹೇಳಿದಳು. "ಕೇಳಿದೆಯಾ? ಚಿಕ್ಕಮ್ಮಮ್ಮ ಬಂದಿದ್ದಾರೆ."

"ಬಂದಿದ್ದರೆ ಏನಂತೆ? ಕುಣಿಯಬೇಕಾ?" ವಿಜಯಾ ಬೇವು ತಿಂದ ಮುಖದಂತೆ ಮಾಡಿ ಮಾಲೆಯನ್ನು ತಲೆಗೆ ಮುಟ್ಟಿಸಿದರು.

"ಕುಣಿಯಬೇಕೋ, ಅಳಬೇಕೋ ನಿನಗೇ ಗೊತ್ತು" –ಮೀನಾಕ್ಷಿ ಹೇಳಿದಳು: "ಸಮಾಚಾರ ಕೊಡದಿದ್ದರೂ ಹೇಳುತ್ತೀಯ. ಕೆಳಗೆ ಎಷ್ಟೆಷ್ಟಲ್ಲಾ ಘಟನೆಗಳು ನಡೆದು ಹೋಗುತ್ತೆ, ಎಷ್ಟು ಜನ ಬರುತ್ತಾರೆ, ಹೋಗುತ್ತಾರೆ. ನನಗೆ ತಿಳಿಯುವುದೂ ಇಲ್ಲ. ದಾಸಿಯ ಹಾಗೆ ಬಿದ್ದಿರುತ್ತೇನೆ ಒಂದು ಕಡೆ. ಯಾರೂ ಒಂದು ಸಲ ಒಂದು ಹೇಳುವುದೂ ಇಲ್ಲ ಎಂದು! ನಾನು ಹೇಳಿಯಾಯಿತು. ಈಗ ಪುರಸೊತ್ತಿದ್ದರೆ ಇಳಿದು ಬಾ, ಇಲ್ಲದಿದ್ದರೆ ಬೇಡ."

ಹೊರಟುಹೋಗುತ್ತಾಳೆ ಮೀನಾಕ್ಷಿ.

ವಿಜಯಾ ಜ್ವಲಿಸುವ ಕಣ್ಣುಗಳಿಂದ ಆಕಡೆ ನೋಡಿ, ಪಿಟಿಪಿಟಿಯೆಂದು ಹೇಳುತ್ತಾರೆ. "ಮಾತು ನೋಡು ಹುಡುಗಿಯದು, ಮಿಲಿಟರಿಯಂತೆ! ಅಮ್ಮನ ಹತ್ತಿರ ಮಾತಾಡುತ್ತಾಳೋ ಅಥವಾ ಮನೆಯ ಕೆಲಸದವಳೊಂದಿಗೋ ಗೊತ್ತಾಗುವ ಹಾಗಿಲ್ಲ. ಇದೇ ನಿನ್ನ ಹಣೆಯಲ್ಲಿ. ಕೊನೆಯಿಲ್ಲದ ದುರ್ಗತಿ ಇದೆ. ಒಂದು ಬಜಾರಿ ಅತ್ತೆಯ ಕೈಯಲ್ಲಿ ಬೀಳುತ್ತೀಯ. ಅದು ಖಂಡಿತ. ಆಗ ಈ ಜೋರೆಲ್ಲಾ ಹೋಗುತ್ತೆ. ಏಳುವಾಗ, ಕೂಡುವಾಗ ಅಳಬೇಕಾಗುತ್ತೆ. ವಿಜಯಾ ತನ್ನ ತುಂಟ-ಹುಡುಗಿ ಬಜಾರಿ ಅತ್ತೆಯ ಕೈಯಲ್ಲಿ ಕಷ್ಟಪಡುವ ಸ್ವಪ್ನವನ್ನು ನೋಡುತ್ತಿರುತ್ತಾರೆ. ಆದರೆ ಅದಕ್ಕೆ ಈ ಕಾಲದಲ್ಲಿ ಎಡೆಯಿಲ್ಲ ಎಂಬುವ ಪರಿವೆಯೇ ಇಲ್ಲ

ವಿಜಯಾಗೆ. ಅದೂ ಈ ಶಾಪವನ್ನು ಯಾರನ್ನು ಉದ್ದೇಶಿಸಿ ಹೇಳಿದರೋ ಆಕೆ ತನ್ನ ಮಗಳೇ ಎಂಬ ಜ್ಞಾನವೂ ಇಲ್ಲದೆ ಹೇಳುತ್ತಾರೆ.

ಈ ಜ್ಞಾನ ಎಂಬುವ ವಸ್ತು ಸಂಸಾರದಲ್ಲಿ ದುರ್ಲಭವಾದ ವಸ್ತುವೇ! ಅಜ್ಞಾನಕ್ಕೇ– ಈ ಅಜ್ಞಾನದ ನಿದರ್ಶನವೇ ಸರೋಜಾಕ್ಷರ ಕೆಲಸ ಬಿಡುವಿಕೆ ಮತ್ತು ಅದರ ಕಾರಣ. 'ಅವಮಾನ ಸಹಿಸಿಕೊಂಡು ಇರಲಾಗಲಿಲ್ಲ' ಈ ವಾದದಲ್ಲಾದರೂ ಒಂದು ಸೂಕ್ತ ಕಾರಣ ಇದೆ. ಒಂದು ಬಲವಾದ ಪೌರುಷದ ತೋರಿಕೆ ಇದೆ. ಆದರೆ ಸರೋಜಾಕ್ಷರ ವಾದವೇ ವಿಚಿತ್ರವಾದುದು. ಈ ಅವಮಾನದ ಪೆಟ್ಟಿನಿಂದಾಗಿ ಅವರಿಗೆ ಅರಿವಾಯಿತಂತೆ, ಇಷ್ಟು ದಿವಸ ವಿದ್ಯಾರ್ಥಿಗಳನ್ನು ಮೋಸಗೊಳಿಸಿ ದುಡ್ಡು ತೆಗೆದುಕೊಂಡಿದ್ದಾರೆಂದು! ಅರಿವಾದ ಮೇಲೆ ಹಾಗೆಯೇ ನಡೆಸಿಕೊಂಡು ಹೋಗಲು ಮನಸ್ಸು ಎಡೆಕೊಡುವುದಿಲ್ಲವಂತೆ! ಇದು ಅಜ್ಞಾನದ ದೃಷ್ಟಾಂತವಲ್ಲದೆ ಬೇರೆ ಏನು?

ಕಣ್ಣೆದುರಿಗೆ ಇರುವಂತಹ ದೃಷ್ಟಾಂತ.

ಅಬ್ಬ, ಈ ಕಾಲದ ಹುಡುಗರು ಒಬ್ಬೊಬ್ಬರೂ ವಿಷ್ಣುವಿನ ಒಂದೊಂದು ಅವತಾರವೆಂಬುದನ್ನು ನೋಡುತ್ತಿಲ್ಲವೇ? ನೋಡುತ್ತಾ ಇಲ್ಲವೇ, ಕೇವಲ ನಿನ್ನ ಮೊಹಲ್ಲೆ ಮಾತ್ರವಲ್ಲ, ದೇಶ ಮಾತ್ರವಲ್ಲ, ದೇಶ–ವಿದೇಶಗಳಲ್ಲಿ ಕೂಡ, ಯಾಕೆ ಇಡೀ ಪ್ರಪಂಚದಲ್ಲೇ ಆ ಹುಡುಗರುಗಳೇ ಬೆಂಕಿ ಉರಿಸುತ್ತಾ ಓಡಾಡುತ್ತಿಲ್ಲವೇ?

ರಾವಣರುಗಳ ದುರಾಚಾರ ನೋಡಿ ಕೋಪಿಸಿಕೊಂಡು, ಲಂಕಾದಹನ ಮಾಡಬೇಕೆಂದುಕೊಂಡು ಅವರುಗಳು ತಮ್ಮ ಬಾಲಕ್ಕೇ ಬೆಂಕಿ ಹಚ್ಚಿಕೊಂಡಿದ್ದಾರೆ. ಅದರಿಂದ ರಾವಣನ ಲಂಕೆ ಧ್ವಂಸವಾಯಿತೋ ಇಲ್ಲವೋ, ಇವರುಗಳಿಗೆ ಬಾಲ ಸುಡುತ್ತಿರುವುದೇನೋ ನಿಜವೇ. ಸುಟ್ಟ ಬಾಲದಿಂದಾಗಿ ಮುಖವೂ ಸುಡುತ್ತಿದೆ ಪಾಪ!

ತಮ್ಮ ಮುಖವನ್ನು ಅವರುಗಳು ಸುಟ್ಟುಕೊಂಡೇ ಇದ್ದಾರೆ. ಜೊತೆಗೆ ಸುಡುತ್ತಿದ್ದಾರೆ. ಇನ್ನೂ ಎಲ್ಲವನ್ನೂ. ಸುಡುತ್ತಿದ್ದಾರೆ. ಸಭ್ಯತೆ. ಭವ್ಯತೆ. ಸಂಯಮ. ಆದರ್ಶ. ಮರ್ಯಾದೆ. ಮಾಯೆ–ಮಮತೆ. ಶಾಲೀನತೆ–ಸೌಕುಮಾರ್ಯ ಎಲ್ಲವನ್ನೂ! ಯಾರಿಗೆ ಗೊತ್ತು. ಈ ಧ್ವಂಸ ಸ್ತೂಪದ ಮೇಲೆ ಯಾವ ಸ್ವರ್ಗರಚನೆಯ ಸ್ವಪ್ನವನ್ನು ಕಾಣುತ್ತಿದ್ದಾರೋ!

ಹಾಗಿಲ್ಲದಿದ್ದರೆ. ಇಂತಹ ಜಾಗ. ಇಂತಹ ಪರಿಸರದ ಜ್ಞಾನವಿಲ್ಲದೆ ಹೋಗಿದೆ ಏಕೆ? ಪ್ರಯೋಜನ ಇರುವುದು. ಇಲ್ಲದಿರುವುದನ್ನು ಈ ಜನ ನೋಡುತ್ತಿಲ್ಲವೇಕೆ? ಕಾರಣವಿಲ್ಲದೆಯೇ ಎಲ್ಲೆಲ್ಲೂ ಯಾವಾಗಲೂ ಏಕೆ ಬೆಂಕಿಯನ್ನು ಹಚ್ಚುತ್ತಿದ್ದಾರೆ? ಅಂದರೆ. ಸುಡುವುದೊಂದೇ ಲಕ್ಷ್ಯ ಅವರಿಗೆ. ತಮ್ಮ ತಮ್ಮ ಹೃದಯದ ದಾಹವನ್ನು ನಿವರ್ತಿಸುವುದಕ್ಕಾಗಿಯೇ ಚಡಪಡಿಸುತ್ತಿದ್ದಾರೆ.

ಅವರುಗಳು ಮನಸ್ಸಿಗೆ ಬಂದ ಹಾಗೆ ವರ್ತಿಸುತ್ತಿರುತ್ತಾರೆ.

ಹಾಗಿಲ್ಲದಿದ್ದರೆ ಸರೋಜಾಕ್ಷರಂತಹ ಯಾವಾಗಲೂ ಸೌಮ್ಯ, ಶಾಂತರಾದ ಅಧ್ಯಾಪಕರನ್ನು ಘೆರಾವ್ ಮಾಡಿ ಅವಮಾನಗೊಳಿಸುತ್ತಾರೆಯೇ? ಆದರೆ ಮಹಾನ್‌ರಾದ

ಸರೋಜಾಕ್ಷರು ಅವರಲ್ಲಿ ದೋಷವನ್ನು ನೋಡುತ್ತಿಲ್ಲ. ತಮ್ಮಲ್ಲೇ ಅದನ್ನು ನೋಡುತ್ತಾರೆ, ಅಂದ ಮೇಲೆ ಪ್ರಪಂಚದಲ್ಲಿ ಜ್ಞಾನಕ್ಕಿಂತ ಅಜ್ಞಾನವೇ ಹೆಚ್ಚು ಎಂಬುದನ್ನು ಹೇಗೆ ಹೇಳದೆ ಇರುವುದು ಸಾಧ್ಯ?

ಹೈಮವತಿಯೂ ಮೃದುನಕ್ಕು ಹೇಳಿದರು: "ಜನರು ನಿನ್ನನ್ನು ಅಜ್ಞಾನಿ ಎಂದು ದೂರುತ್ತಿದ್ದಾರೆ." ಹೈಮವತಿ ಈ ಪ್ರಸಂಗವನ್ನು ಎತ್ತಿ ಮಾತಾಡಲು ಬಂದಿರಲಿಲ್ಲ.

ಹಾಗೆ ನೋಡಿದರೆ ಸರೋಜಾಕ್ಷರೇ ಈ ಪ್ರಸಂಗವನ್ನು ತೊಡಗಿದವರು.

ಹೈಮವತಿ ಕೋಣೆಯೊಳಗೆ ಬಂದುದನ್ನು ನೋಡಿಯೇ ಸರೋಜಾಕ್ಷರ ಮುಖವು ಸಂತೋಷದಿಂದ ಅರಳಿತು. ಹಾಗೆಯೇ ನಗುತ್ತಾ ಕೇಳಿದರು. "ಏನು, ನೀನೂ ಒಂದು ಅಧ್ಯಾಯ ಉಪದೇಶ ಹೇಳಲು ಬಂದೆಯಾ? ನಿನ್ನ ದಮ್ಮಯ್ಯಾ, ಇನ್ನು ಯಾರು ಮಾಡಿದರೂ ಮಾಡಲಿ ನೀನು ಮಾತ್ರ ಮಾಡಬೇಡ."

ಹೈಮವತಿಗೆ ಮೊದಲು ಆಶ್ಚರ್ಯವಾಯಿತು. ಕಾರಣವೇನೆಂದರೆ ಅವರಿಗೆ ಈ ವಿಷಯ ಜ್ಞಾಪಕವಿರಲಿಲ್ಲ. ಸರೋಜಾಕ್ಷರ ಮೇಲ ಒಂದು ಕೈ ಅಧಿಕಾರ ತೋರುವ ಅವಕಾಶ ಬಂದಿದೆ, ತಕ್ಷಣವೇ ಈ ಸಂದರ್ಭವನ್ನು ಆಕೆ ಗ್ರಹಿಸಿದರು ಮತ್ತು ನಗುತ್ತಾ ಕೇಳಿದರು: "ಏಕೆ? ನಾನೇಕೆ ಕೂಡದು! ನಾನು ನಿನಗೆ ಹಿರಿಯವಳಲ್ಲವೇ? ಉಪದೇಶ ಕೊಡುವ ರೈಟ್ ಖಂಡಿತ ಇದೆ."

"ಎಲ್ಲಾ ಸಮಯದಲ್ಲೂ ಎಲ್ಲಾ 'ರೈಟ್'ಗಳನ್ನೂ ಉಪಯೋಗಿಸಬಾರದು.

"ಭೇಷ್, ಅವಕಾಶ ಸಿಕ್ಕಿದರೆ ಯಾರು ಬಿಡುತ್ತಾರೆ? ಜನ ನಿನ್ನನ್ನು ಅಜ್ಞಾನಿ ಎಂದು ದೂರುತ್ತಿದ್ದಾರೆ ಗೊತ್ತೇ?"

"ಜನ ಅನ್ನುತ್ತಾರೆ, ನೀನು ಅನ್ನುತ್ತಿಲ್ಲವಲ್ಲಾ," ಮೃದು ನಕ್ಕು ಹೇಳಿದರು ಸರೋಜಾಕ್ಷರು.

"ನಾನೇಕೆ ಕೂಡದು? ಜನ ಅಂದರೆ ನಾನು ಸೇರಿಲ್ಲವೇ?" ಶಾಂತವಾಗಿಯೇ ಹೇಳುತ್ತಾರೆ ಹೈಮವತಿ ಅವರ ಮುಖದಲ್ಲಿ ಸಲಿಗೆಯ ಉಜ್ವಲ ನಗು.

"ಇಲ್ಲ, ಎದು ನನ್ನ ಅಭಿಪ್ರಾಯ," ಎನ್ನುತ್ತಾರೆ ಸರೋಜಾಕ್ಷರು.

"ತಪ್ಪು ಅಭಿಪ್ರಾಯ, ನಾನೂ 'ಜನ'ಕ್ಕೆ ಸೇರಿದವಳೇ. ನಾನು ಹೇಳುತ್ತೇನೆ ಇದು ನಿನ್ನ ಅಜ್ಞಾನ ಎಂದು. 'ನಾನು ಅವರನ್ನು ಮೋಸಗೊಳಿಸಿ ಸಂಪಾದಿಸುತ್ತಿದ್ದೆ' ಎಂಬುವ ಇಂತಹ ಒಂದು ಭಾವನೆಯನ್ನು ಇಟ್ಟುಕೊಳ್ಳುವುದೇ ನಿರರ್ಥಕ. ನೀವುಗಳೂ ಒಂದು ಕಾಲದಲ್ಲಿ ವಿದ್ಯಾರ್ಥಿಗಳಾಗಿದ್ದಿರಿ, ಮತ್ತು ನಿಮಗೆ ಅಧ್ಯಾಪಕರುಗಳಾಗಿದ್ದವರೆಲ್ಲಾ ಮಹಾಪುರುಷರೇನಾಗಿರಲಿಲ್ಲ. ಹುಡುಕಲು ಹೋದರೆ ಅವರಲ್ಲೂ ಎಷ್ಟೋ ಹುಳುಕುಗಳಿರಬಹುದು. ಆದರೂ ಈಗಲೂ ಅವರ ವಿಷಯದಲ್ಲಿ ನಿಮಗೆ ಮರ್ಯಾದೆ ಇದೆ. ಅಕಸ್ಮಾತ್ತಾಗಿ ಯಾರನ್ನಾದರೂ ಭೇಟಿಯಾದರೆ ಈಗಲೂ ಮರ್ಯಾದೆಯೊಂದಿಗೆ ನಮಸ್ಕಾರ ಮಾಡುತ್ತೀರಿ ಅಲ್ಲವೇ?"

"ನಾವು ಬಹುಶಃ ಒಂದು ನಿರ್ವಿಚಾರವಾದ ಪೂಜೆಯ ಮಂತ್ರದಿಂದ ದೀಕ್ಷಿತರಾಗಿದ್ದವು. ಈ ಯುಗದವರು ಇಂತಹ ನಿರ್ವಿಚಾರ ಪೂಜೆಯಲ್ಲಿ ನಂಬಿಕೆಯುಳ್ಳವರಲ್ಲ. ದೊಡ್ಡವರಾದ ಮಾತ್ರಕ್ಕೇ ಅವರಿಗೆ ಮರ್ಯಾದೆ ಕೊಡಬೇಕು ಎಂದು ಈ ಯುಗ ಒಪ್ಪುವುದಿಲ್ಲ."

"ವಿಚಾರ, ಚರ್ಚೆ ಮಾಡಲು ಕೂತರೆ ಇದರ ಕೊನೆ ಎಲ್ಲಿ ಹೋಗಿ ನಿಲ್ಲುತ್ತೋ, ಮೂರ್ಖರಾದ ನಮಗಿಂತ, ಪಂಡಿತರಾದ ನಿಮಗೇ ಗೊತ್ತಿರಬೇಕು, ಮತ್ತು ಕೇವಲ ಈ ಕಾಲದ ಮಾತಲ್ಲ, ಆದರೂ ವಿಚಾರ ಮಾಡದೆ ಒಪ್ಪುವುದಿಲ್ಲ ಎಂಬುದು ಸರಿಯೇ ಆದರೂ, ವಿಚಾರಣೆ ಮಾಡುವುದಕ್ಕೂ ಅಧಿಕಾರ ಇರಬೇಕಲ್ಲವೇ? ವಿಚಾರ-ಬುದ್ಧಿಯ ತಿಳುವಳಿಕೆ ಪಡೆಯುವುದಕ್ಕೆ ಮುಂಚೆಯೇ ವಿಚಾರಕನ ಹುದ್ದೆಯನ್ನು ತೆಗೆದುಕೊಂಡರೆ, ಸರಿಯೇ?"

ಸರೋಜಾಕ್ಷರು ಒಂದು ನಿಟ್ಟುಸಿರು ಬಿಡುತ್ತಾರೆ.

ಕಾರಣ, ಸರೋಜಾಕ್ಷರು ಈ ವಿಷಯವಾಗಿ ಅಷ್ಟು ದಿನದಿಂದ ಬೇಕಾದಷ್ಟು ಯೋಚಿಸಿದ್ದಾರೆ. ಯೋಚಿಸಿದ್ದಾರೆ, ಈ ಯುಗದವರು, ಬರೀ ಉಷ್ಣ ಮಿದುಳಿನವರು. ಹಿತ-ಅಹಿತದ ಜ್ಞಾನವಿಲ್ಲದವರು, ಎಂದು, ಆದರೂ ವಿವೇಕ ನೆಮ್ಮದಿಯಾಗಿ ಕೂಡಲು ಬಿಡಲಿಲ್ಲ. ಮನಸ್ಸು ಹೀಯಾಳಿಸುತ್ತಿದೆ. ಇದಕ್ಕೆಲ್ಲಾ ನಮ್ಮ ಕುಂದೇ ಕಾರಣ. ನಮ್ಮದೇ ತಪ್ಪು. ಇದೆಲ್ಲಾ ನಮ್ಮ ಕೈಯಲ್ಲಾಗದಿರುವಿಕೆಯೇ ಕಾರಣ ಎಂದು. ತುಂಬಾ ಯೋಚಿಸಿ, ಯೋಚಿಸಿ ತಾನೇ-

ಸರೋಜಾಕ್ಷರು ನಿಟ್ಟುಸಿರು ಬಿಟ್ಟು ಹೇಳಿದರು. "ಇಲ್ಲ ಚಿಕ್ಕಮ್ಮ, ಹಾಗೂ ಹೇಳುತ್ತೇನೆ ಈ ಯುಗದವರ ಕಣ್ಣೂ, ಕಿವಿಯೂ ಈಗ ತೆಗೆದಿದೆ."

ಹೈಮವತಿ ಚರ್ಚೆ ಮಾಡುವುದಿಲ್ಲ. ಪ್ರತಿವಾದಿಸುವುದೂ ಇಲ್ಲ.

ಅವರೂ ಒಂದು ನಿಟ್ಟುಸಿರು ಬಿಟ್ಟು ಹೇಳಿದರು, "ಏನೋಪ್ಪಾ, ತೆಗೆದಿದೆಯೋ, ಅಥವಾ ಒಂದು ಮೋಹದ ಆವರಣದಿಂದ ಮುಚ್ಚಿದೆಯೋ, ನನಗೇನೋ ತೋರುತ್ತೆ. ಒಂದು ದೊಡ್ಡ ಆಟದ ರಂಗದಲ್ಲಿ ಈ ಅಬ್ಯಾಪಾರಿಗಳು ಕೇವಲ ಆಟದ ಕಾಯಿಗಳು. ಬಣ್ಣದ ಇಸ್ಪೀಟುಗಳು. ಅವರನ್ನು ಇಟ್ಟುಕೊಂಡು ನಡೆಯುತ್ತಾ ಇದೆ ಒಂದು ದೊಡ್ಡ 'ಗ್ಯಾಂಬ್ಲಿಂಗ್'. ಇವರುಗಳು ನತದೃಷ್ಟರುಗಳು. ತಾವೇ ಗೆಲ್ಲುತ್ತಿದ್ದೇವೆ. ಸೋಲುತ್ತಿದ್ದೇವೆ ಎಂದು ಕೊಂಡಿದ್ದಾರೆ. ತಮ್ಮ ಸರ್ದಿ ಇದು ಎಂದುಕೊಳ್ಳುತ್ತಾರೆ. ಪಾಪ ಅವರುಗಳಿಗೆ ಗೊತ್ತೂ ಇಲ್ಲ. ದಾಳದ ಇಷ್ಟ ಒಂದೂ ನಡೆಯುವುದಿಲ್ಲ. ಹಾಕುವವನು ಎಡಕ್ಕೆ, ಬಲಕ್ಕೆ ಹೇಗೆ ಬೇಕಾದರೂ ಹಾಕಬಲ್ಲ ಎಂಬುದನ್ನು! ಯುಧಿಷ್ಠಿರ ಆಟದ ನಶೆಯಲ್ಲಿ ರಾಜ್ಯ ಸಂಪತ್ತು ಎಲ್ಲವನ್ನೂ ಕಳೆದುಕೊಂಡು, ಕಡೆಗೆ ಪತ್ನಿ ಪುತ್ರರನ್ನೂ ಪಣವಾಗಿಟ್ಟ. ಈ ಯುಗದ ಆಟದಲ್ಲಿ ನಮ್ಮ ಈ ಯುಧಿಷ್ಠಿರರುಗಳು ಮಾನವ ಸಭ್ಯತೆಯ ಭವಿಷ್ಯವನ್ನೇ ಪಣವಾಗಿಟ್ಟಿದ್ದಾರೆ."

ಸ್ವಲ್ಪ ಅನ್ಯಮನಸ್ಕರಾಗಿದ್ದು ಸರೋಜಾಕ್ಷರು ನುಡಿದರು: "ಯಾರಿಗೆ ಗೊತ್ತು ಇದರಿಂದಾಗಿ ಒಂದು ತಪ್ಪಿಲ್ಲದ, ನಿರ್ವಿಕಾರವಾದ ಒಂದು ಸಭ್ಯತೆ ಹುಟ್ಟುತ್ತೋ ಏನೋ!"

"ಕುಂದಿಲ್ಲದ್ದೇ?" ಹೈಮವತಿ ಮೃದುನಕ್ಕು ಹೇಳುತ್ತಾರೆ: "ಪ್ರಕೃತಿಯ ಸೃಷ್ಟಿಯಲ್ಲೇ ಕುಂದು–ಕೊರತೆಗೆ ಕಡಿಮೆಯಿಲ್ಲ. ಇನ್ನು ಮನುಷ್ಯನ ಸೃಷ್ಟಿಯಲ್ಲಿ ಇಲ್ಲದೆ ಹೋಗುತ್ತದೆಯೇ? ಒಂದು ಕುಂದಿನ ಜಾಗದಲ್ಲಿ ಬೇರೊಂದು ಕುಂದು, ಒಂದು ಕೊರತೆಯ ಜಾಗದಲ್ಲಿ ಬೇರೊಂದು ಕೊರತೆ ಬರಬಹುದು."

"ಪ್ರಕೃತಿ ಕುರುಡು"

"ಮನುಷ್ಯ ಮಾತ್ರ ಕಣ್ಣುಳ್ಳವನೇ?"

"ಮನುಷ್ಯನಿಗೆ ಚಿಂತನಾಶಕ್ತಿ ಇದೆ."

"ಮನುಷ್ಯ ಅದೇ ಯೋಚನೆ ಮಾಡುತ್ತಾನೆ." ಹೈಮವತಿ ಸಹಜವಾಗಿ ನಕ್ಕರು. "ನಿಜವಾಗಿ ಆ ಶಕ್ತಿ ಇದ್ದಿದ್ದರೆ ಮನುಷ್ಯ ಹೀಗೆ ಯೋಚಿಸುತ್ತಿರಲಿಲ್ಲ. ಜಗತ್ತಿನಲ್ಲಿ ನಾನೊಬ್ಬನೇ ಇರಬೇಕು, ಬೇರೆ ಯಾರೂ ಇರಕೂಡದು ಎಂದು!"

"ಮನುಷ್ಯನ ವಿಚಾರವಾಗಿ ತುಂಬಾ ಯೋಚನೆ ಮಾಡುತ್ತಿರುವ ಹಾಗೆ ಕಾಣುತ್ತೆ".

"ಯೋಚಿಸಬೇಕಾದ್ದೇನಿದೆ? ಜಾಜ್ವಲ್ಯಮಾನವಾಗಿ ಕಣ್ಣುಮುಂದೆ ಕಾಣುತ್ತಿದೆಯಲ್ಲಾ. ಆ ಯೋಚನೆಯಿಂದಲೇ ಮನುಷ್ಯ ಪ್ರತಿಜ್ಞೆ ಮಾಡುತ್ತಾನೆ, ಪೃಥ್ವಿಯನ್ನು ನಿಃಕ್ಷತ್ರಿಯವಾಗಿ ಮಾಡುತ್ತೇನೆ ಎಂದು. ಅದರಿಂದಲೇ ಕುರುಕ್ಷೇತ್ರವನ್ನು ಪ್ರಾರಂಭಿಸುತ್ತಾನೆ. ಆ ಯೋಚನೆಯಿಂದಲೇ ಎಲ್ಲಾ ಸದ್ಭಾವನೆಯನ್ನೆಲ್ಲಾ ಹೊರದೂಡಿ ದಾಳವನ್ನು ಹಾಕಲು ಕೂಡುತ್ತಾನೆ. ಆದರೆ ಇರಲಪ್ಪಾ ಈ ದಾರ್ಶನಿಕ ವಿಚಾರಗಳು. ಪಂಡಿತ–ಮೂರ್ಖರ ಮಧ್ಯೆ ಚರ್ಚೆ ಪ್ರಾರಂಭವಾದರೆ ಅದು ಅನುಕೂಲಕ್ಕಲ್ಲ. ಅದಕ್ಕಿಂತ ಬಂದ ವಿಚಾರವನ್ನು ಹೇಳುತ್ತೇನೆ. ಅದು ಯಾವುದೋ ಎರಡು ಪುಸ್ತಕ ಕೊಡುತ್ತೇನೆಂದು ಹೇಳಿದ್ದೆಯಲ್ಲಾ, ಕೊಡಲಿಲ್ಲವಲ್ಲಾ?"

ಹೈಮವತಿ ಡಿಗ್ರಿ–ಗಿಗ್ರಿ ಪಾಸು ಮಾಡಿದವರಲ್ಲ. ಆದರೂ ಸರೋಜಾಕ್ಷರು ಓದುವಂತಹ, ಅವರಿಗೆ ಇಷ್ಟವಾದಂತಹ ಇಂಗ್ಲಿಷ್ ಪುಸ್ತಕಗಳನ್ನೂ ಸಹ ಓದಿಬಿಡುತ್ತಿದ್ದರು. ವಿಜಯಾಗೆ ಇದೂ ಒಂದು ಕಂಡರೆ ಆಗದ ವಿಷಯವೇ! ವಿಜಯಾಗೆ ಅದರಲ್ಲಿ ನಂಬಿಕೆಯೂ ಇಲ್ಲ. ಹೇಳುತ್ತಾರೆ, "ಓದುತ್ತಾಳಂತೆ, ತಲೆ. ಸುಮ್ಮನೆ ನಿಮ್ಮ ಮುಂದೆ ತೋರಿಕೆ."

ಸರೋಜಾಕ್ಷರು ಇಂತಹ ಮಾತುಗಳಿಗೆ ಜವಾಬು ಕೊಡುವವರಲ್ಲ. ಒಂದು ಸಲ ಹೇಳಿದ್ದರು: "ಅದರಿಂದ ಅವರಿಗೆ ಆಗುವ ಲಾಭವೇನು?"

"ಆಹಾ, ನೀವು ಆಶ್ಚರ್ಯಪಡುತ್ತೀರಿ, ಷಹಭಾಸ್‌ಗಿರಿ ಕೊಡುತ್ತೀರಿ. ಅದೇ ಲಾಭ."

ಸರೋಜಾಕ್ಷರು ಸುಮ್ಮನಾಗಿದ್ದರು. ಇಂದು ಹೈಮವತಿಯ ಮುಂದೆ ಸುಮ್ಮನಾದರು.

ಆಮೇಲೆ ಮೆಲ್ಲನೆ ಹೇಳಿದರು: "ಅದನ್ನು ಕಾಲೇಜು ಲೈಬ್ರರಿಯಿಂದ ತಂದುಕೊಡೋಣವೆಂದಿದ್ದೆ. ಹೋಗಲಿ, ಬ್ರಿಟಿಷ್ ಕೌನ್ಸಿಲ್‌ನಿಂದ ತಂದು ಕೊಡುತ್ತೇನೆ."

"ಅಂತಹ ಜರೂರೇನಿಲ್ಲಪ್ಪಾ, ಸ್ವಲ್ಪ ಲಜ್ಜಿತರಾಗಿ ನುಡಿದರು ಹೈಮವತಿ. ವಿದುಷಿಯೇನಲ್ಲ ಪುಸ್ತಕವಿಲ್ಲದಿದ್ದರೆ ಕಾತರಳಾಗಲು. ಆದರೆ ಏಕೋ ಹೊತ್ತು

ಹೋಗಲೇವೊಲ್ಲದು. ಅದಕ್ಕೇ ಪುಸ್ತಕ–ಪುಸ್ತಕ ಎಂದು ಸಾಯುತ್ತೇನೆ. ಅಂತಹ ಅವಸರವೇನಿಲ್ಲ. ತಿರುಗಿ ಕಾಳಿ–ಸಿಂಹಿಯ ಮಹಾಭಾರತ ಓದಲು ಷುರು ಮಾಡಿದ್ದೇನೆ."

"ಆಯಿತು ಬಿಡು." ಸರೋಜಾಕ್ಷರು ಕೌತುಕದಿಂದ ನುಡಿದರು. ಶಾರದಾ ಕಿವಿಗೆ ಈ ಮಾತು ಬಿದ್ದರೆ ಆಯಿತು!" ಹೈಮವತಿ ಏನೋ ಹೇಳಲು ಹೋಗುತ್ತಿದ್ದವರು. ಅಷ್ಟರಲ್ಲಿ ಶಾರದಾ ಪ್ರಸಾದರ ಧ್ವನಿ ಕೇಳಿಸಿತು. "ಶಾರದಾ ಮಾತು ಏನಾಗುತ್ತಿತ್ತು ಅಣ್ಣಾ?" "ಓ, ಚಿಕ್ಕಮ್ಮಾನೇ? ಎಷ್ಟು ಹೊತ್ತಾಯಿತು ಬಂದು? ಚಿಕ್ಕಮ್ಮ–ಮಗ ಸೇರಿ ಶಾರದಾಬಾಬುವನ್ನು ನಿಂದಿಸುತ್ತಿದ್ದೀರಾ?" ಎಂದು ಕೇಳಿಬಿಟ್ಟು, ಹ, ಹ, ಹ, ಎಂದು ನಗಲಾರಂಭಿಸಿದರು. ಚಿಕ್ಕತ್ತೆಗೆ ನಮಸ್ಕಾರ ಮಾಡುವ ಗೋಜಿಗೆ ಹೋಗಲಿಲ್ಲ ಆತ. ಹೈಮವತಿ ನಕ್ಕುಬಿಟ್ಟು ಕೇಳಿದರು. "ಯಾಕಪ್ಪಾ, ನಿಂದೆ ಯಾಕೆ? ನೀನೇನು ನಮಗೆ ನಿಂದೆಗೆ ಪಾತ್ರನಾದ ಹುಡುಗನೇ?"

ಕೋಣೆಯಲ್ಲಿ ಕುರ್ಚಿ ಇದ್ದರೂ ಹಾಸಿಗೆಯ ಒಂದು ತುದಿಯಲ್ಲಿ ಕೂತು ಶಾರದಾ ಪ್ರಸಾದರು ಪಂಚೆಯ ತುದಿಯಿಂದ ಮುಖದ ಬೆವರನ್ನೊರಸುತ್ತಾ ಹೇಳಿದರು–

"ಅದು ನೀವು ಸ್ನೇಹ–ವಾತ್ಸಲ್ಯದಿಂದ ಹೇಳದಿದ್ದರೂ ಮಿಕ್ಕವರೆಲ್ಲಾ ಹುಚ್ಚು–ಬೆಪ್ಪು ಎಂದಲ್ಲದೇ ಬೇರೇನೂ ತಿಳಿದಿಲ್ಲ."

ಶಾರದಾ ಪ್ರಸಾದ್ ಹೊರಗೆ ಎಲ್ಲೋ ಹೋಗಿ ಬಂದಿರುವುದು ಖಂಡಿತ. ಅದು ಅವರ ಸಜ್ಜಿನಿಂದ ಗೊತ್ತಾಗುತ್ತಿದೆ. ಹಾಕಿಕೊಂಡಿದ್ದುದು ಪಂಚೆ–ಷರಟು. ಆದರೂ ಅದು ಬೆಳ್ಳಗೆ ಹೊಳೆಯುತ್ತಿತ್ತು. ಅದು ದೈವವಶಾತ್ ಯಾವಾಗಲಾದರೂ ಒಮ್ಮೆ ಕಾಣುವಂತಹದ್ದು!

ಸರೋಜಾಕ್ಷರ ಕಣ್ಣಿಗೂ ಅದು ಕಾಣುತ್ತೆ. ಮೃದು ನಗೆಯೊಂದಿಗೆ ಕೇಳಿದರು. "ಯಾರು ನಿನ್ನನ್ನು ಹಾಗಂದಿದ್ದು?"

"ನಿಮ್ಮನ್ನು ಬಿಟ್ಟು ಬೇರೆ ಎಲ್ಲರೂ ಹೇಳುತ್ತಾರೆ." ,ಸರಳವಾಗಿ ಹೇಳಿದರು, "ಹೇಳುತ್ತಾರೆ. ಈಗ ಹೇಳುತ್ತಾರೆ ಬಿಡಿ. ನಮ್ಮ ದೇಶದ ಜನರೇ ಹೀಗೆ. ಈಗತಾನೆ ಹೋಗಿದ್ದೆ ಒಬ್ಬ 'ಪಬ್‌ಲಿಷರ್' ಮಹಾರಾಯನ ಹತ್ತಿರ. ಎಂತಹ 'ವ್ಯಾಲುಯೇಬಲ್ ಮ್ಯಾನುಸ್ಕ್ರಿಪ್ಟ್' ತೆಗೆದುಕೊಂಡು ಹೋಗಿದ್ದೇನೆ! ನೋಡಲೂ ಇಲ್ಲ. ಏನೋ ನೋಡಿದರೂ ದುಡ್ಡು ಖರ್ಚು ಆಗುತ್ತೆ ಅನ್ನುವ ಹಾಗೆ! 'ಸಬ್ಜೆಕ್ಟ್ ಮ್ಯಾಟರ್' ಸ್ವಲ್ಪ ಹೇಳಲು ಹೋದೆ. ಹೇಗೆ ಹಾಸ್ಯ ಮಾಡಿ ಮಾತಾಡಿದ ಎಂದರೆ, ಏನೋ ನಿಜವಾಗಲೂ ಒಬ್ಬ ಹುಚ್ಚ ಮಾತಾಡಿದ ಅನ್ನುವ ಹಾಗೆ! ಏನು ಹೇಳಿದ ಗೊತ್ತೇ? ಸ್ವಾಮಿ, ನಾವು ಸಣ್ಣಕುಳಗಳು. ಏನೋ ಒಂದೆರಡು. ಕತೆ. ಉಪನ್ಯಾಸ ಮಾರಿ ಹೊಟ್ಟೆ ಹೊರೆಯುತ್ತೇವೆ. ನಿಮ್ಮ ಈ ಅಮೂಲ್ಯ ಗ್ರಂಥವನ್ನು ಪ್ರಕಾಶಿಸುವ ಶಕ್ತಿ ನಮಗೆಲ್ಲಿದೆ? ನೀವು ಇನ್ನೂ ಒಂದು ಕೆಲಸ ಮಾಡಿ. ನಿಮ್ಮ ಈ ಮಹಾನ್ ಪಾಂಡು ಲಿಪಿಯನ್ನು ರಷ್ಯಾಗೆ ಕಳುಹಿಸಿ. ಇದರ ಬೆಲೆ ಅವರಿಗಾದರೆ ತಿಳಿಯುತ್ತೆ! ಕೇಳಿ! ಕೇಳಿದರೆ ಏನು ತೋರುತ್ತೆ? ಬರೀಬೂಗಳೆ ಜನ ಎಲ್ಲಾ ಬಂದು ಪುಸ್ತಕದ ವ್ಯಾಪಾರ ಪ್ರಾರಂಭಿಸಿದ್ದಾರೆ. ಧಾನ್ಯ–ದಿನಸಿ. ಕಬ್ಬಿಣ–ಉಕ್ಕಿಗಿಂತ ಜಾಸ್ತಿ ಬೆಲೆಯನ್ನು ಕೊಡುವುದು ಗೊತ್ತಿಲ್ಲ! ನನ್ನನ್ನು ಕೇಳಿದರೆ. ಇನ್ನೂ ಮುಂಚೆ ಮುದ್ರಣಯಂತ್ರ ಇಲ್ಲದಿದ್ದಾಗಲೇ ಚೆನ್ನಾಗಿತ್ತು. ಬೆಲೆ ಬಾಳುವ

ಸಾಮಾನಿಗೆ ಬೆಲೆ ಇತ್ತು." ಶಾರದಾ ಪ್ರಸಾದರ ಧ್ವನಿ ಉತ್ತೇಜನಗೊಂಡಿತ್ತು. ಸರೋಜಾಕ್ಷರು ಹೇಳಿದರು. "ಮತ್ತೆ ನೀನೇ ಹೇಳುತ್ತಿದ್ದೆಯಲ್ಲಾ, ಮುದ್ರಣಯಂತ್ರ ಇಲ್ಲದಿದ್ದುದರಿಂದಲೇ ನಮ್ಮ ಸಂಪತ್ತೆಲ್ಲಾ ನಿರಂತರವಾಗಿ ಹಾಳಾಯಿತು ಎಂದೂ–ಮುದ್ರಣೆಯಾದುದು ಒಂದೆರಡು ಕಾಪಿಯಾದರೂ ಉಳಿಯುತ್ತೆ ಎನ್ನುತ್ತಿದ್ದೆಯಲ್ಲಾ?" ಶಾರದಾ ಇನ್ನೂ ಉತ್ತೇಜನಗೊಳ್ಳುತ್ತಾರೆ. ಹೇಳುತ್ತಾರೆ: "ಹೇಳಿದ್ದೆ. ಈಗಲೂ ಹೇಳುತ್ತೇನೆ. ಆದರೆ ಈ ಅ–ಸಭ್ಯ ಜನರ ನಡತೆಯನ್ನು ನೋಡಿದರೆ ಕೋಪ ಬರುತ್ತೆ. ಹೇಳುತ್ತೇನೆ,"

"ಒಪ್ಪಿಕೊಳ್ಳೋಣ, ಒಂದು ಕಾಲದಲ್ಲಿ ನಮ್ಮ ಈ ಮಹಾನ್ ಭಾರತ ವಿಜ್ಞಾನದಲ್ಲಿ ಉನ್ನತ ಸ್ಥಾನವನ್ನು ಪಡೆದಿತ್ತು ಎಂದು, ಅದರ ಪ್ರಮಾಣಗಳನ್ನೂ ನೀವು ತೋರಿಸಿದ್ದೀರಿ, ಆದರೆ ಅದರಿಂದ ಏನು ಉದ್ಧಾರವಾಗುತ್ತೆ ಹೇಳಿ? ಈಗ ಇನ್ನೊಬ್ಬರ ಮುಂದೆ ಕೈಯೊಡ್ಡಿ ಕೂತಿದ್ದೇವಲ್ಲಾ!" "ಎಷ್ಟೊಂದು ಮೂರ್ಖತನವಾದ ಮಾತು. ಕೈಯ್ಯೊಡ್ಡಿರುವುದು ಬುದ್ಧಿಯ ದೋಷದಿಂದ, ಹಣೆಯ ಬರಹದ ದೋಷದಿಂದ, ಆದರೆ ಯಾವಾಗಲೂ ಭಿಕಾರಿಯಾಗಿರಲಿಲ್ಲವಲ್ಲಾ, ಅದನ್ನು ಪ್ರಪಂಚಕ್ಕೆ ಹೇಳಲೂ ಬಾರದೇ?"

ಅವರ ಉತ್ತೇಜನೆಗೊಂಡ ಮುಖವನ್ನು ನೋಡಿ ಸರೋಜಾಕ್ಷರಿಗೆ ಸಂಕಟವಾಗುತ್ತೆ. ಆದರೂ ಅದನ್ನು ಮರೆಸಿಕೊಂಡು ಉತ್ಸಾಹದ ಧ್ವನಿಯಿಂದ ಕೇಳುತ್ತಾರೆ, "ಎಲ್ಲಿ, ನಿನ್ನ ಥೀಸೀಸ್ ಎಲ್ಲಾ ಬರೆದಾಯಿತೇ? ಬರೆದು ಮುಗಿಯಿತೇ!?"

ಏನೋ ಒಂದು ಆಶ್ಚರ್ಯಪಡುವಂತಹ ಮಾತು ಕೇಳಿದಂತೆ ಶಾರದಾ ಪ್ರಸಾದರು, "ಏನಣ್ಣಾ ಮುಗಿಯಿತೇ ಎನ್ನುತ್ತೀರಿ? ಅದು 'ಫಸ್ಟ್ ವಾಲ್ಯೂಮ್' ಅಷ್ಟೇ. ಅದರ ತರಹ ಇನ್ನೂ ಒಂಭತ್ತು ವಾಲ್ಯೂಮ್ ಬರುತ್ತೆ. ಆಯಿತು ಅಂತಲೇ ಹೇಳಬೇಕು. ಒಂದು ವಿಧದಲ್ಲಿ. ಏಕೆಂದರೆ ತುಂಡು ತುಂಡು ಕಾಗದಗಳಲ್ಲಿ ನೋಟ್ ಮಾಡಿದ್ದೆ. ಅದೆಲ್ಲಾ ಒಂದು ಕಡೆ ಸೇರಿಸಿ–ಹೈಮವತಿಗೆ ಶಾರದಾಪ್ರಸಾದರ ರೀಸರ್ಚಿನ, ವಿಷಯವೇನೆಂಬುದು ಗೊತ್ತು. ಈ 'ಸಿಂಪಲ್' ಮನಸ್ಸಿನ ಮನುಷ್ಯನ ಎದುರಿಗೆ ತಮ್ಮ ಮನೋಭಾವನೆಯನ್ನು ಹೊರಗೆ ಕೆಡವದೆ ಮಾತಾಡುವುದಕ್ಕೆ ಸರೋಜಾಕ್ಷರು ಕಷ್ಟಪಡುತ್ತಿದ್ದಾರೆ ಎಂದು ಅರಿತು, ತಾವು ಮಾತನ್ನು ಮುಂದುವರಿಸುತ್ತಾರೆ. "ಏಕೇ, ಒಟ್ಟಿಗೇ ಹತ್ತು ಖಂಡವನ್ನೂ ಬರೆದು ಮುದ್ರಿಸಲು ಕೊಟ್ಟರೆ ಅವರಿಗೂ ವಿಷಯದ ತಿರುಳು ಸ್ಪಷ್ಟವಾಗುತ್ತೆ."

"ಹೌದು, ನಾನೂ ಹಾಗೆಯೇ ಅಂದುಕೊಂಡಿದ್ದೆ." ಸ್ವಲ್ಪ ಅನ್ಯಮನಸ್ಕನಾಗಿ ಶಾರದಾ ಪ್ರಸಾದ್ ಹೇಳಿದರು. "ಆದರೆ ಯೋಚಿಸಿದೆ. ಈಗಿಂದಲೇ ಪ್ರಯತ್ನಪಟ್ಟರೆ ಒಳ್ಳೆಯದು. ಆಗ ತಕ್ಷಣಕ್ಕೆ ಮಾರ್ಕೆಟ್ ಕ್ರಿಯೇಟ್ ಆಗುತ್ತೆ. ಹೋಗಲಿ"– ತಿರುಗಿ ಇದ್ದಕ್ಕಿದ್ದಂತೆಯೇ ಶಾರದಾ ಪ್ರಸಾದ್ ತಮ್ಮ ಉತ್ತೇಜನೆಯಿಂದ ಕೂಡಿದ ಸ್ಥಿತಿಗೆ ಹಿಂತಿರುಗುತ್ತಾರೆ. ಹೇಳುತ್ತಾರೆ: "ಅದಕ್ಕೋಸ್ಕರ ನಾನು ಯೋಚಿಸುವುದಿಲ್ಲ. ಒಂದೇ ಸಲಕ್ಕೆ ನಂಬಿಕೆ ಬಿಡುವವನಲ್ಲ ಈ ಶಾರದಾ ಪ್ರಸಾದ್ ಸುಮ್ಮನೆ ಆಯಿತೇ. ನಾನು ಏನಾದರೂ ವಿಷಯ ಸರಿಯಾಗಿಲ್ಲ ಎಂದು ತೋರಿದರೆ, ಅದನ್ನು ಚೂರು ಚೂರಾಗಿ ಹರಿದು ಬಿಸಾಕಿ ತಿರುಗಬರೆಯಲು ಕೊಡುತ್ತೇನೆ.

ಎಲ್ಲಾ ಪಬ್‌ಲಿಷರುಗಳೂ ಏನೂ ದಡ್ಡರಲ್ಲವಲ್ಲಾ. ವಿದ್ವಾನ್, ಬುದ್ಧಿವಂತ, ಕಲ್ಚರ್ಡ್ ಜನರೂ ಇರುತ್ತಾರೆ ಈ ಲೈನಿನಲ್ಲಿ. ಅಂತಹವರನ್ನು ಹುಡುಕಿಕೊಂಡು ಹೋಗುತ್ತೇನೆ. ಆಗ ಇವರುಗಳಿಗೆ ಓದಲು ಅದು ಸಿಗುವುದಿಲ್ಲ. ವಿಷಯ ಬಹಳ ಅಮೂಲ್ಯವಾದುದು. ಈಗ ನೋಡಿ, ಹೃದಯವನ್ನು ಬದಲಿಸುವುದು, ಎಂಬ ಸುದ್ದಿಯನ್ನು ಕೇಳಿ ಕೈಯನ್ನೆತ್ತಿ ಕುಣಿಯುತ್ತಿದ್ದೇವೆ. ಆದರೆ ಅದು ಇತ್ತು ನಮ್ಮ ಈ ದೇಶದಲ್ಲಿ. ರಾಮಾಯಣ, ಮಹಾಭಾರತ, ಪುರಾಣ, ಉಪಪುರಾಣ ಎಲ್ಲಾ ನೋಡಿ, ಸಿಗುತ್ತೆ ಪ್ರಮಾಣಗಳು, ಮೃತದೇಹದಲ್ಲಿ ಪ್ರಾಣಸಂಚಾರ, ಒಂದು ದೇಹದಿಂದ ಇನ್ನೊಂದು ದೇಹಕ್ಕೆ ಪ್ರಾಣದ ಟ್ರಾನ್ಸ್‌ಫರ್, ಇಷ್ಟಬಂದ ಹಾಗೆ ಮನುಷ್ಯ ಅಥವಾ ಬೇರೆ ಪ್ರಾಣಿಯ ದೇಹಧಾರಣ, ಚಿರಯೌವನ, ಒಬ್ಬರ ಯೌವನವನ್ನು ಇನ್ನೊಬ್ಬರು ಆಕರ್ಷಣೆ ಮಾಡಿಕೊಳ್ಳುವುದು ಏನೇನಿಲ್ಲ! ಹೇಳಿದರೆ ಮುಗಿಯುವುದಿಲ್ಲ. ಚಿಕ್ಕಮ್ಮಾ ಇಲ್ಲಿ ಬಂದು ಒಂದೆರಡು ತಿಂಗಳು ಇರಿ, ಉದಾಹರಣೆಯೊಂದಿಗೆ ಎಲ್ಲಾ ಪ್ರಮಾಣ ಮಾಡುತ್ತೇನೆ."

"ಎರಡು ತಿಂಗಳೇ?" ಹೈಮವತಿ ನಕ್ಕು ಕೇಳುತ್ತಾರೆ.

ಶಾರದಾಪ್ರಸಾದ್ ಉತ್ಸಾಹದಿಂದ ಹೇಳುತ್ತಾರೆ, "ಎರಡು ತಿಂಗಳು ಎಂದು ನೀವು ಗಾಬರಿಪಡುತ್ತೀರಲ್ಲಾ, ನಾನು ಹಾಗೂ ಕಮ್ಮಿಯಾಗಿಯೇ ಹೇಳಿದೆ. ವಿಷಯ ಎಷ್ಟಿದೆ ಎಂದರೆ ಎರಡು ತಿಂಗಳೂ ಸಾಲದು. ಈಗಿನ ಯುಗ ಇನ್ನೂ ಸ್ವಪ್ನದಲ್ಲೂ ಅವೆಲ್ಲವನ್ನೂ ಸಾಧ್ಯವೆಂದು ತಿಳಿದಿಲ್ಲ."

ಹೈಮವತಿ ನಕ್ಕು ಹೇಳಿದರು. "ಅದರಲ್ಲಿ ಕವಿಯ ಕಲ್ಪನೆಯೂ ಸ್ವಲ್ಪ ಇರಬಹುದು. ಆಗಿನ ಮನುಷ್ಯ ಇಪ್ಪತ್ತು ಅಡಿ ಎತ್ತರ ಇದ್ದ ಎನ್ನುವ ಹಾಗೆ."

ಶಾರದಾ ಪ್ರಸಾದ್‌ಗೆ ಅಕಸ್ಮಾತ್ ಮೇಲಿನಿಂದ ಬಿದ್ದ ಅನುಭವವಾಗುತ್ತೆ.

"ಛೆ, ಛೆ, ನೀವೂ ಈ ಮಾತು ಆಡಿದಿರಾ ಚಿಕ್ಕಮ್ಮಾ! ನಾನೇನೋ ನಿಮ್ಮನ್ನು.... ಇಲ್ಲ ಇಲ್ಲ ನೀವು ಹಾಗೆ ಹೇಳಬೇಡಿ. ಇಪ್ಪತ್ತೊಂದಡಿ ಮನುಷ್ಯ ಇರಲಿಲ್ಲವೇ? ಅಂದರೆ ಅತಿಕಾಯದ ಆನೆ, ಜಿರಾಫೆ, ಮೊಸಳೆ ಇವೆಲ್ಲಾ ಇರಲಿಲ್ಲವೇ? ಇದರಲ್ಲಿ ಅಪನಂಬಿಕೆ ಏನಿದೆ? ಈ ಪ್ರಾಣಿಗಳ ಜೊತೆಗೆ ಹೆಣಗಾಡಿ ಬಾಳುವುದಕ್ಕೆ ಸರಿಯಾಗಿತ್ತು ಅವರ ದೇಹಾಕೃತಿಯೂ. ಎಡ್‌ಜಸ್ಟ್ ಮಾಡುವುದೇ ಪ್ರಕೃತಿಯ ಕೆಲಸ. ಪ್ರಪಂಚದಲ್ಲಿ ಆಗ ಬೇಕಾದಷ್ಟು ಜಾಗ ಇತ್ತು. ಆದ್ದರಿಂದ ಪ್ರಾಣಿಗಳೂ ದೊಡ್ಡದಾಗಿತ್ತು. ಮನುಷ್ಯರೂ ದೊಡ್ಡದಾಗಿ ಬೆಳೆದಿದ್ದರು. ಕ್ರಮೇಣ ಪ್ರಪಂಚದಲ್ಲಿ ಜಾಗ ಕಡಿಮೆಯಾಗುತ್ತಾ, ಮನುಷ್ಯರ ಸಂಖ್ಯೆ ಬೆಳೆಯುತ್ತಾ ಹೋಯಿತು. ಆಯಿತು ತಕ್ಷಣವೇ ಪ್ರಕೃತಿ ಮನುಷ್ಯನ ಆಕಾರವನ್ನು ಚಿಕ್ಕದು ಮಾಡಿತು. ನಮ್ಮ ಸಂಖ್ಯಾ ತತ್ವಜ್ಞರುಗಳು ಹೇಳುತ್ತಾ ಇದ್ದಾರೆ. ಇನ್ನು ಮುಂದೆ ಪ್ರಪಂಚದಲ್ಲಿ ಇನ್ನು ಹೆಚ್ಚು ಜನ ಇರಲಾಗುವುದಿಲ್ಲ. ಆದರೆ ಹಿಡಿಸುತ್ತೆ ನೋಡಿ. ಪ್ರಕೃತಿ ಆಗ ಮನುಷ್ಯನನ್ನು ಲಿಲಿಪುಟ್ ಮನುಷ್ಯನನ್ನಾಗಿ ಮಾಡುತ್ತೆ. ಅದೂ ಷುರು ಆಗಿದೆ. ಮೊದಲು ಮನಸ್ಸಿನಿಂದ ಎಲ್ಲಾ ಷುರು. ದಿನ ದಿನಕ್ಕೆ ಮನುಷ್ಯನ ಮನಸ್ಸು ಚಿಕ್ಕದಾಗುತ್ತಿದೆ. ಕಾಲಕ್ರಮೇಣ ದೇಹವೂ ಚಿಕ್ಕದಾಗುತ್ತೆ ಮತ್ತೆ ಇಪ್ಪತ್ತೊಂದಡಿ ಮನುಷ್ಯ ಇದ್ದ ಎಂದರೆ ಅಪನಂಬಿಕೆ ಏಕೆ?"

ಈ ಅಭಿನವ ಮತವಾದವನ್ನು ಕೇಳಿ ಕಷ್ಟಪಟ್ಟು ನಗುವನ್ನು ತಡೆದುಕೊಂಡು ಹೈಮವತಿ ಹೇಳಿದರು: "ಅದೊಂದು ವೇಳೆ ನಿಜವಿರಬಹುದು. ಆದರೆ ವದಂತಿ ಅನ್ನುವುದು ಒಂದು ಇದೆಯಲ್ಲಾ ಆ ಸತ್ಯಯುಗದಿಂದ ಹಿಡಿದು ಈ ಕಲಿಯುಗದವರೆಗೆ ಅದೂ ವೃದ್ಧಿಗೊಂಡಿದೆಯೆಂದು ಯೋಚಿಸಿದರೆ–"

ಶಾರದಾ ಪ್ರಸಾದ್ ಯೋಚನೆಯಿಂದ ಸುಮ್ಮನಾಗುತ್ತಾರೆ.

ಹೇಳುತ್ತಾರೆ. "ನೀವೂ ಈ ತರಹ ಹೇಳಿದರೆ ನಾನೇನು ಹೇಳಲಿ? ಅದೇ ಹೊರದೇಶದವರು ರೀಸರ್ಚ್ ಮಾಡಿ ಪಬ್ಲಿಷ್ ಮಾಡಿದರೆ ಆಗ, ಭೇಷ್. ಭೇಷ್ ಎನ್ನುತ್ತೀರಿ. ಅದರಲ್ಲಿ ಅಪನಂಬಿಕೆ ಏನೂ ಇರುವುದಿಲ್ಲ!"

ಹೈಮವತಿಯ ನಾಲಿಗೆಯ ತುದಿಯಲ್ಲಿ ಬಂದಿತ್ತು. 'ಕಣ್ಣಿಂದ ನೋಡಿದ ಮೇಲೆ ಹೇಗೆ ನಂಬದೇ ಇರುವುದು' ಎಂದು. ಆದರೆ ಹೇಳಲಿಲ್ಲ. ಈಗ ಅವರು ಸಹಾನುಭೂತಿಯನ್ನು ತೋರುವ ಭೂಮಿಕೆಯನ್ನು ತೆಗೆದುಕೊಂಡು, "ನೀನು ಹೇಳುವುದೂ ಸರಿಯೇ, ಯೋಚಿಸಿದರೆ ಹಾಗೆಯೇ ಅನ್ನಿಸುತ್ತೆ. ಒಂದು ಕಾಲದಲ್ಲಿ ಈ ಪ್ರಾಚ್ಯಭೂಮಿ ಜ್ಞಾನ–ವಿಜ್ಞಾನಗಳಲ್ಲಿ ಪ್ರಪಂಚದಲ್ಲೇ ಶ್ರೇಷ್ಠ ಸ್ಥಾನ ಪಡೆದಿತ್ತು ಎನ್ನುವುದಕ್ಕೆ ಪ್ರಮಾಣಗಳಿಲ್ಲದೆಯೂ ಇಲ್ಲ" ಎಂದರು.

ಶಾರದಾ ಪ್ರಸಾದರಿಗೆ ಸ್ವಲ್ಪ ಸಂತೋಷವಾಯಿತು. "ಅದೇ ತಾನೇ ಹೇಳಿ ಹೇಳಿ ಸಾಯುತ್ತಿದ್ದೇನೆ. ನೀವು ಒಂದೇ ಸಲಕ್ಕೆ ಗ್ರಹಿಸಿಕೊಂಡಿರಿ ಮತ್ತು ಒಪ್ಪಿಕೊಂಡಿರಿ. ಬೇರೆ ಯಾರೂ ಕಿವಿಗೇ ಹಾಕಿಕೊಳ್ಳುವುದಿಲ್ಲ. ನನ್ನದು ಬರೀ ಅರಣ್ಯರೋದನವಾಗಿದೆ. ಈಗ ನೋಡಿ. ಕೇಳಿದ್ದೇವೆ. ಶ್ರೀಕೃಷ್ಣ ಒಂದು ಹಿಡಿ ಹುಲ್ಲನ್ನು ಬಿಸಾಕಿದ್ದು ಅದೆಲ್ಲಾ ಒನಕೆಯಾಗಿ ಯದುವಂಶವನ್ನು ನಾಶ ಮಾಡಿತು ಎಂದು. ಇದು ಏನು? ನನ್ನ ಅಭಿಪ್ರಾಯದಲ್ಲಿ ಇದು ಕೇವಲ ಅಣುಶಕ್ತಿಯ ಕಲಾಪ. ಒಂದು ಸಲ ಬಿಸಾಕಿದ್ದಕ್ಕೇ ವಂಶಕ್ಕೆ ವಂಶವೇ ನಿರ್ಮೂಲವಾಯಿತು. ಆದರೆ ಇದು ನಮ್ಮ ದೇಶದಲ್ಲಿ ಹೇಳುವ ವಿಚಾರವಾದುದರಿಂದ ಇದು ರೂಪಕ, ವದಂತಿ ಇತ್ಯಾದಿ ಅಲ್ಲವೇ? ಇದು ಸರಿಯಲ್ಲ. ಅಂದು ಮೀನಾಕ್ಷಿಗೆ ತಿಳಿಹೇಳುತ್ತಿದ್ದೆ. ವಲ್ಕಲ ಅನ್ನುವುದು ಇನ್ನೇನೂ ಅಲ್ಲ ಮರದ ತೊಗಟೆಯಿಂದ ಮಾಡಿದ ಬಟ್ಟೆ, ಅಂದರೆ ನಿಮ್ಮ ಈಗಿನ ಆರ್ಟ್ ಸಿಲ್ಕ್, ರೇಯಾನ್ ಎಂದು ನಕ್ಕೂ ನಕ್ಕು ಉಡಾಯಿಸಿ ಬಿಟ್ಟಳಲ್ಲಾ. ಒಂದೇ ಸಾಮಾನಿನ ಹೆಸರು ಬೇರೆ ಬೇರೆ ಭಾಷೆಗಳಲ್ಲಿ ಬೇರೆ ಬೇರೆಯಾಗಿ ಇರುವಂತೆ, ಬೇರೆ ಬೇರೆ ಕಾಲಗಳಲ್ಲಿ ಬೇರೆ ಹೆಸರಿದ್ದಿರಬಹುದೆಂದರೆ ನಂಬುವುದಿಲ್ಲ! ಹೋಗಲಿ ಅದಕ್ಕಾಗಿ ಯೋಚಿಸುತ್ತಿಲ್ಲ. ಸತ್ಯವನ್ನು ಎಂದೆಂದೂ ಹೀಗೆಯೇ ಮುಚ್ಚಿಡಲು ಆಗುವುದಿಲ್ಲ. ಈ ಶಾರದಾ ಪ್ರಸಾದನ ರೀಸರ್ಚಿನ ಫಲವಾಗಿ ಭಾರತವರ್ಷ ಪ್ರಪಂಚದಲ್ಲಿ ಶ್ರೇಷ್ಠತಮವಾದ ಆಸನವನ್ನು ಪಡೆಯದೆ ಇರುವುದಿಲ್ಲ. ಆಧುನಿಕ ವಿಜ್ಞಾನ ಎಷ್ಟೇ ಮುಂದುವರಿದರೂ ಅದು ತಲೆ ತಗ್ಗಿ ಹೇಳಲೇಬೇಕಾಗುತ್ತೆ. "ಪ್ರಾಚೀನ ಭಾರತದ ಯೋಗ ಬಲದ ಮುಂದೆ ನಾವು ಇನ್ನೂ ಅಕ್ಷರ ಕಲಿಯುವ ಹಸುಳೆಗಳು ಮತ್ತು ಆ ಯೋಗ ಬಲವೇ ವಿಜ್ಞಾನ

ಶಕ್ತಿ" ಎಂದು ಹೈಮವತಿ, ಶಾರದಾ ಪ್ರಸಾದರ ಉತ್ತೇಜನದಿಂದ ಕೆಂಪೇರಿದ ಮುಖವನ್ನು ನೋಡಿ ಹೇಳಿದರು.

"ನಿನ್ನ ಹಾಗೆ ನಾವೆಲ್ಲಾ ಈ ವಿಷಯವನ್ನು ಅಷ್ಟು ಕೂಲಂಕಷವಾಗಿ ಯೋಚಿಸಲು ಹೋಗುವುದಿಲ್ಲ. ಕೇಳಿದರ ಮನಸ್ಸೆಲ್ಲಾ ತಳಮಳಗೊಳ್ಳುತ್ತೆ. ಆದರೆ ನೀನು ಇಷ್ಟು ಹೊತ್ತೂ ಎಲ್ಲೆಲ್ಲೋ ಸುತ್ತಾಡಿಕೊಂಡು ಬಂದಿದ್ದೀಯಾ, ಸ್ನಾನ ಮಾಡಿ, ಊಟ........."

"ನನ್ನ ಸ್ನಾನಾಹಾರವೇ? ಅದಕ್ಕಾಗಿ ಯೋಚಿಸಬೇಡಿ"–ಶಾರದಾ ಪ್ರಸಾದ್ ಇನ್ನೂ ಹುಮ್ಮಸ್ಸಿನಿಂದ ಇನ್ನೂ ಜೋರಾಗಿ, ಆಧುನಿಕ ವಿಜ್ಞಾನ ಮತ್ತು ಪ್ರಾಚೀನ ಯೋಗಬಲದ ಸಂಪರ್ಕದ ವಿಷಯವಾಗಿ ಉಪಮೆಗಳೊಂದಿಗೆ ಉದಾಹರಣೆಗಳನ್ನೂ ಸಮಾಲೋಚನೆಗಳನ್ನೂ ಹೇಳುತ್ತಾ, ಅಕಸ್ಮಾತ್ತಾಗಿ ಹೇಳುತ್ತಾರೆ. "ಸರಿ ಹೋಗಿ ಈಗ ಸ್ನಾನವನ್ನೇ ಮುಗಿಸಿಕೊಂಡು ಬರುತ್ತೇನೆ. ತಲೆಯೆಲ್ಲಾ ಜುಂ ಎನ್ನುತ್ತೆ."

ಶಾರದಾ ಪ್ರಸಾದ್ ಹೊರಟುಹೋದ ಮೇಲೆ ಹೈಮವತಿ ಸಹಾನುಭೂತಿಯಿಂದ ಹೇಳಿದರು: "ಸರೋಜ್, ಹೇಗಾದರೂ ಮಾಡಿ ಅವನ ಈ ಬರವಣಿಗೆಯನ್ನು ಮುದ್ರಿಸಲಾಗುವುದಿಲ್ಲವೇ?" ಸರೋಜಾಕ್ಷರು ಮೃದು, ವ್ಯಥೆಯ ನಗು ನಕ್ಕು ಹೇಳಿದರು: "ಗುಡ್ಡು, ಕೆಲವು ಸಾವಿರಗಳನ್ನು ಖರ್ಚು ಮಾಡಿದರೆ ಆಗುತ್ತೆ."

ಹೈಮವತಿ, "ನನ್ನ ಹತ್ತಿರ ದುಡ್ಡು ಇದ್ದಿದ್ದರೆ ನಾನು ಪಬ್ಲಿಷರ್ ಆಗುತ್ತಿದ್ದೆ" ಎಂದರು. ಸರೋಜಾಕ್ಷರು ಹೇಳಿದರು, "ಆವಾಗ ಮಾತ್ರ ಆ ಪೆಟ್ಟಿನಿಂದ ಅವನನ್ನು ಕಾಪಾಡಲು ಆಗುತ್ತದೆಯೇ ಚಿಕ್ಕಮ್ಮಾ? ಅದು ಇನ್ನೂ ದೊಡ್ಡ ಪೆಟ್ಟಾಗುವುದಿಲ್ಲವೇ? ಈಗ, ಹೇಗೋ ಇಷ್ಟೊಂದು ದೊಡ್ಡ ವಿಷಯವಾದರೂ ಯಾರೂ ನೋಡಿ ಬೆಂಬಲ ಕೊಡುವುದಿಲ್ಲವಲ್ಲಾ ಎಂಬ ಒಂದೇ ವ್ಯಥೆ ಇದೆ. ಹುಮ್ಮಸ್ಸು ಇದೆ, ಆಸೆ ಇದೆ. ಅಪಾರವಾದ ಆಸೆ. ಅದರ ಬಲದಿಂದಲೇ ಇಷ್ಟೊಂದು 'ಆಕ್ಟಿವಿಟಿ'. ಆದರೆ ಆಗ, ಆಸೆಯಲ್ಲಾ ಒಡೆದು ಚೂರು ಚೂರಾಗುವುದಿಲ್ಲವೇ? ತನ್ನ ಗ್ರಂಥ ಕ್ರಿಮಿ–ಕೀಟಗಳ ತಿನಸಿಯಾಗುತ್ತಿರುವುದನ್ನು ನೋಡಿದರೆ ಅವರಿಗೂ ಗೆದ್ದಲು ಹಿಡಿದಂತಾಗುವುದಿಲ್ಲವೇ?"

"ನಿಜವಾಗಲೂ ಎಂತಹ ಒಂದು ವಾಸ್ತವವಲ್ಲದ ನಶೆಯಲ್ಲಿ ಮುಳುಗಿದ್ದಾನೆ ಮನುಷ್ಯ–" ಸರೋಜಾಕ್ಷರು ಮೆಲ್ಲಗೆ ಹೇಳಿದರು: "ಈ ಪ್ರಪಂಚದಲ್ಲಿ ಯಾವ ನಶೆ ತಾನೆ ಅಸಂಗತವಲ್ಲದ್ದು? ಅಧಿಕಾರದ ನಶೆ, ಜಯದ ನಶೆ, ಏಕಚ್ಛತ್ರಾಧಿಪತ್ಯ ನಡೆಸುವ ನಶೆ, ಸ್ವರ್ಣದ ನಶೆ, ಧರ್ಮದ ನಶೆ, ಸಂಸಾರದ ನಶೆ, ಯಾವುದೆಲ್ಲಾ ಮನುಷ್ಯನನ್ನು ಓಡಿಸುತ್ತಿದೆಯೋ, ಇದರಲ್ಲಿ ಯಾವುದು ಅಸಂಗತವಲ್ಲದ್ದು? ಮನುಷ್ಯ ಇದ್ದರೆ ಇಂತಹ ನಶೆಯೂ ಇದ್ದೇ ಇರುತ್ತೆ. ಅದೇ ಅವನ ಶಕ್ತಿ. ಯಾತಕ್ಕಾಗಿ ತಾನು ಈ ವಿಶ್ವವನ್ನೇ ಮರೆತು ಓಡುತ್ತಿದ್ದನೋ ಅದು ಬರೀ ಶೂನ್ಯ ಎಂದು ಯಾವಾಗ ಗೊತ್ತಾಗುತ್ತದೆಯೋ ಆಗಲೇ ಅದು ಒಡೆದು ಚೂರಾಗುತ್ತೆ."

ಹೈಮವತಿ ಪ್ರತಿವಾದಿಸುವ ಧ್ವನಿಯಲ್ಲಿ ಕೇಳಿದರು, "ಅಂದರ ಯಾರೂ ಸಫಲರಾಗಿಲ್ಲವೇ?"

"ನನಗೇನೋ ಹಾಗೆ ತೋರುವುದಿಲ್ಲ. ಶ್ರೀರಾಮಚಂದ್ರ ರಾಮರಾಜ್ಯವನ್ನು ರಚಿಸಿಯೂ ಕೂಡ ಸುಖಿಯಾಗಲಿಲ್ಲ."

"ಆದರೂ ಪಾಪ ಅವರ ಆ ದುರ್ದಮನೀಯವಾದ ಆಸೆಯನ್ನು ನೋಡಿದರೆ ಒಂದು ಪುಸ್ತಕವಾದರೂ ಪಬ್ಲಿಷ್ ಮಾಡಿದರೆ, ಅವರ ಆಸೆ, ನಿರಾಸೆ ಆಗುವುದಿಲ್ಲವೇನೋ ಎನ್ನಿಸುತ್ತೆ. ಆದರೆ ಭಯಂಕರವಾದ ನೈಜ, ವಾಸ್ತವಿಕತೆ ಮುಖಕ್ಕೆ ಹೊಡೆದರೆ ಯಾರಿಗೂ ಅದನ್ನು ಸಹಿಸಲಾಗುವುದಿಲ್ಲ."

ಹೈಮವತಿ ಹೇಳಿದರು, "ಆದರೂ ಇಂತಹವರನ್ನು ನೋಡಿದರೆ 'ಅಯ್ಯೋ ಪಾಪ' ಅನ್ನಿಸುತ್ತೆ."

ಸರೋಜಾಕ್ಷರು ಸ್ವಲ್ಪ ನಕ್ಕು ಹೇಳಿದರು, "ಎಲ್ಲರಿಗೂ ಹಾಗೆ ಅನ್ನಿಸುವುದಿಲ್ಲ. ಹೇಗೆ ಈ ಮನೆಯ ಯಜಮಾನಿಯೋ ಹಾಗೆಯೇ!"

ಹೈಮವತಿ ಸ್ವಲ್ಪ ಚಕಿತರಾಗಿ ನುಡಿದರು, "ಆಯಿತು ನೋಡು, ಇಷ್ಟು ಹೊತ್ತು ತೋಚಲೇ ಇಲ್ಲವಲ್ಲಾ, ಎಲ್ಲಿ ಈ ಮನೆಯ ಯಜಮಾನಿ? ಊಂ, ಇಷ್ಟು ಹೊತ್ತಾಯಿತು ಬಂದೆ, ಹೋಗಿ ನೋಡಲೇ ಇಲ್ಲ."

"ಅದು ಯಾರು ಮಾಡಬೇಕಾದದ್ದು, ಅದನ್ನೇ ಯೋಚಿಸುತ್ತಿದ್ದೆ–"

"ಭೇಷ್, ನನ್ನದೇ. ನಾನೇ ಬಂದಿದ್ದು. ಹೋಗಿ ನೋಡುತ್ತೇನೆ–"

ಹೈಮವತಿ ಎದ್ದು ನಿಂತರು.

ಇದರಿಂದ ವಿಜಯಾಗೆ ಸ್ವಲ್ಪ ಕಷ್ಟಕ್ಕಿಟ್ಟುಕೊಂಡಿತು. ಕೋಣೆಯ ಹತ್ತಿರ ಬಂದು ಅವರು ಯಾವಾಗಲೂ ಮಾಡುವ ನಿಯಮದಂತೆ ಬಾಗಿಲ ಬಳಿ ನಿಂತುಬಿಟ್ಟಿದ್ದರು. ಇನ್ನೊಬ್ಬರ ಮಾತನ್ನು ಒಟ್ಟು ಕೇಳುವುದು ಆಕೆಗೆ ಬಹಳ ಪ್ರಿಯವಾದ ಕೆಲಸ.

ಆದರೆ ಅದು ಎಲ್ಲರಿಗೂ ತಿಳಿದುಹೋಗುವುದು ವಾಂಛನೀಯವಲ್ಲ. ಆದ್ದರಿಂದ ಆಕೆ ತಕ್ಷಣ ಸ್ವಲ್ಪ ಮೆಟ್ಟಲುಗಳ ಕಡೆ ಹೋಗಿ ಕಣ್ಣಿಗೆ ಕಾಣದ ಯಾರನ್ನೋ ಉದ್ದೇಶಿಸಿ "ಸುಮ್ಮನೆ, ಸರಿ, ನೀನು ಆ ಕೆಲಸ ಮುಗಿಸು, ಬರುತ್ತೇನೆ" ಎಂದು ಕೂಗಿ ಹೇಳಿಬಿಟ್ಟು ಕೋಣೆಯೊಳಗೆ ಬಂದರು ಮತ್ತು ಆಗ ತಾನೆ ಗೊತ್ತಾದ ಹಾಗೆ, "ಓ, ಚಿಕ್ಕಮ್ಮಾನೇ? ಎಷ್ಟು ಹೊತ್ತಾಯಿತು ಬಂದು?" ಎಂದು ಕೇಳಿದರು.

ಹೈಮವತಿ ಸ್ವಲ್ಪ ಅಪ್ರತಿಭರಾಗಿ ಹೇಳಿದರು, "ಇದೇ ಸ್ವಲ್ಪ ಹೊತ್ತಾಯಿತು. ನೀನು ಪೂಜೆ ಮಾಡುತ್ತಾ ಇದ್ದೆಯಾ?"

"ಪೂಜೆಯೇ?" ಎಂದು ಒಂದು ದೊಡ್ಡಸ್ತಿಕೆಯ ನಗು ನಕ್ಕು ವಿಜಯಾ ಹೇಳಿದರು: "ಪೂಜೆಯೇನು ಪೂಜೆ, ಪೂಜೆಯ ಆಟ ಅದರಿಂದ ಈ ಜಂಜಾಟದ ಪ್ರಪಂಚದಿಂದ ಸ್ವಲ್ಪ ಹೊತ್ತು ದೂರ ಇರುವುದಕ್ಕೆ ಆಗುತ್ತೆ ಅಷ್ಟೆ."

ಇದಕ್ಕೆ ಜವಾಬೇನಿದೆ?

ಹೈಮವತಿ ಸುಮ್ಮನಿದ್ದರು.

ವಿಜಯಾನೇ ತಿರುಗಿ, ತನ್ನ ಹಿಂದಿನ ಮಾತನ್ನು ಮರೆತು, "ಬಂದಿರುವುದು ಆಗಲೇ ತಿಳಿಯಿತು. ಮೀನಾ ಬಂದು ಸಮಾಚಾರ ಕೊಟ್ಟಳು. ಆದರೆ ಅಂದುಕೊಂಡೆ, ನಾನು ಅವಸರವಾಗಿ ಬಂದು ಮಾಡೋದೇನಿದೆ. ವಿದುಷಿ ಚಿಕ್ಕಮ್ಮ, ವಿದ್ವಾನ್ ಮಗ, ಇವರುಗಳ ಮಧ್ಯೆ ಬಂದು ನಾನು ಕುಳಿತುಕೊಳ್ಳುವುದೇ? ಹಂಸಗಳ ಮಧ್ಯೆ ಬಕಪಕ್ಷಿಯಂತೆ? ಅದಕ್ಕಿಂತ ಇರಲಿ, ನೀವುಗಳು ಇಷ್ಟ ಬಂದಷ್ಟು ಮಾತಾಡಿಯಾಗಲಿ, ಆಮೇಲೆ ಹೋಗೋಣ" ಎಂದುಕೊಂಡೆ, ಎಂದರು. ಅವರ ಮುಖದಲ್ಲಿ ಒಂದು ಕುಟಿಲ ನಗು.

ಹೈಮವತಿಗೆ ಇದು ಯಾವುದೂ ತಿಳಿಯದ್ದಲ್ಲ. ವಿಜಯಾವನ್ನು ಚನ್ನಾಗಿಯೇ ತಿಳಿದುಕೊಂಡಿರುವವರು ಅವರು. ಆದರೂ ಸರೋಜಾಕ್ಷರಿಗೆ, ಹೈಮವತಿಯ ಎದುರಿಗೆ ವಿಜಯಾರ ಈ ನಾಚಿಕೆಗೇಡಾದ ವರ್ತನೆಯನ್ನು ನೋಡಿ ಸುಮ್ಮನಿರಲಾಗುವುದಿಲ್ಲ.

ಸರೋಜಾಕ್ಷರು ಕೇಳಿದರು, "ದೊಡ್ಡ ದೊಡ್ಡ ಮಾತು ಆಡುವುದಕ್ಕೆ ಬಾರದಿರುವುದರಿಂದ ಚಿಕ್ಕ ಮಾತು ಆಡಬೇಕು ಎಂದು ಯಾವ ಕಾನೂನಿನಲ್ಲಿದೆ?"

ವಿಜಯಾ ಮೂರ್ಖಳಾದರೂ ಬೆಪ್ಪಲ್ಲ. ಇಂತಹ ಮಾತಿಗೆ ಜವಾಬು ಕೊಡುವುದು ಆಕೆಗೆ ಚೆನ್ನಾಗಿ ಗೊತ್ತು. ಅದನ್ನು ಕೊಡದೆ ಇರುವುದೂ ಇಲ್ಲ.

"ನಾನು ಚಿಕ್ಕ ಮನಸ್ಸಿನ ಮನುಷ್ಯಳು, ಚಿಕ್ಕ ಮಾತನ್ನು ಬಿಟ್ಟರೆ ಇನ್ನೇನು ಬರುತ್ತೆ? ಹಾಗಾದರೆ ಮೂಗಿಯಾಗಿ ಕೂತಿರಬೇಕು. ಅದೂ ಹಾಗೆಯೇ ತಾನೆ ಇದ್ದೇನೆ. ಈ ದೊಡ್ಡ ಮನಸ್ಸಿನ ಮನುಷ್ಯನ ಮನೆಯಲ್ಲಿ ಮೂಗಿಯಾಗಿಯೇ ಕೂತಿದ್ದೇನೆ. ಮಗ ತನ್ನ ಹೆಂಡತಿಯನ್ನು ಸಭೆಯಲ್ಲಿ ಕುಣಿಸುತ್ತಿದ್ದಾನೆ. ಸೊಸೆ ಕುಡಿದುಬಿಟ್ಟು ಜ್ಞಾನವಿಲ್ಲದೆ ಮನೆಗೆ ಬರುತ್ತಾಳೆ, ಮಗಳು ಒಬ್ಬ ಶೂದ್ರ ಹುಡುಗನೊಂದಿಗೆ ಓಡಾಡಿ ಮಾನ ಕಳೆಯುವುದರಲ್ಲಿದ್ದಾಳೆ. ಇನ್ನು ಯಜಮಾನರು–" ಗಂಟಲಲ್ಲಿದ್ದ ವಿಷವನ್ನೆಲ್ಲಾ ಒಟ್ಟಿಗೆ ಸುರಿಸಿ ಹೇಳುತ್ತಾರೆ, "ಇನ್ನು ಯಜಮಾನರು, ಭಂಡಾರದಲ್ಲಿ ಅಂಭಾ ಭವಾನಿ" ಎಂದು ತಿಳಿದೂ ರೋಷದಿಂದ ಕೆಲಸ ಬಿಟ್ಟು 'ಭೋಲಾನಾಥ'ರಾಗಿ ಕೂತು ದೊಡ್ಡ ದೊಡ್ಡ ಮಾತಿನ ಬೆಳೆ ಬೆಳೆಸುತ್ತಿದ್ದಾರೆ, ಓದುತ್ತಿದ್ದಾರೆ, ಈ ಚಿಕ್ಕಮ್ಮ ಹೆಣ್ಣು ಹೆಂಗಸು ದುಡ್ಡಿನ ವಿಷಯ ಮಾತಾಡಿದರೆ ಅವಳನ್ನು ಬಾಯಿ ಮುಚ್ಚುವಂತೆ ಮಾಡುತ್ತಾರೆ. ಆದರೂ ನಾನು ಮಾತಾಡುತ್ತಾ ಇಲ್ಲ. ಮೂಗಿಯಾಗಿಯೇ ಕೂತಿದ್ದೇನೆ."

ಮಧ್ಯೆ ಅಡ್ಡಿಯಾಗಿ ಮಾತು ಬರದೇ ಇರಲಿ ಎಂದು ತಮ್ಮ ಸ್ವಭಾವದಂತೆ ಗಟ್ಟಿಯಾಗಿ ಮಾತನ್ನು ಹೇಳಿಬಿಟ್ಟೇ ನಿಲ್ಲಿಸುತ್ತಾರೆ ವಿಜಯಾ.

ಮಾತು ಮುಗಿದ ಮೇಲೆ ಅಡ್ಡಿ ಮಾಡುವುದಕ್ಕೂ ಏನೂ ಇರುವುದಿಲ್ಲ ಸರೋಜಾಕ್ಷರಿಗೆ.

ಸಂದೇಹವೇ ಇಲ್ಲ. ಇದೆಲ್ಲಾ ಹೈಮವತಿಯ ಮುಂದೆ ಬೇಕೆಂದೇ ವಿಜಯಾ ಹೇಳಿದ್ದಾರೆ ಎನ್ನುವುದರಲ್ಲಿ ಅವರಿಗೆ ಸಂದೇಹವಿಲ್ಲ.

ಏಕೆಂದರೆ ಹೈಮವತಿ, ಸಭ್ಯ, ಸುಸಂಸ್ಕೃತರು, ಸರೋಜಾಕ್ಷರ ಮರ್ಯಾದೆಗೆ ಪಾತ್ರರಾದವರು. ಆದ್ದರಿಂದ ಇಂತಹ ಕುಟಿಲ ಮಾತುಗಳಾಡಿದರೆ ಸರೋಜಾಕ್ಷರ ಮನಸ್ಸಿಗೆ ಪೆಟ್ಟಾಗುತ್ತೆ ಆಗಲಿ ಎಂದೇ ವಿಜಯಾ ಹೇಳಿಬಿಟ್ಟು ಒಂದು ವಿಜಯೋಲ್ಲಾಸದ ಅನುಭವವನ್ನು ಹೊಂದುತ್ತಾರೆ. ಊಂ, ಈಗ ಎಲ್ಲಿ ಮುಖ ಮುಚ್ಚಿಕೊಳ್ಳುತ್ತೀಯೋ ಮುಚ್ಚಿಕೋ ಎಂಬಂತೆ!

ಇಬ್ಬರೂ ಎದುರೆದುರಿಗೆ ಕುಳಿತು ಬಹಳ ಉಚ್ಚವಾದಂತಹ ಚರ್ಚೆ ನಡೆಸಿದ್ದರಲ್ಲಾ. ಈಗ ಅದರಿಂದ ಯಾವ ಉತ್ಕೃಷ್ಟ ಬೆಳೆ ಬೆಳೆಯುತ್ತಿದೆ ಎಂಬುದನ್ನು ಈ ಸ್ಟೈಲಾದ ಚಿಕ್ಕಮ್ಮ ನೋಡಲಿ! ಇಂದಿಲ್ಲದಿದ್ದರೆ ನಾಳೆ ಮನೆ ಮಾರಬೇಕಾಗುತ್ತೆ. ಒಡವೆ ಗಿರವಿಯಿಡ ಬೇಕಾಗುತ್ತೆ. ಇದೇ ಮನೆಯ ಸ್ಥಿತಿ. ಅವರು ಗಂಡಸು. ಪರಮಪುರುಷರಾಗಿ ಕುರ್ಚಿಯಲ್ಲಿ ಆರಾಮವಾಗಿ ಕುಳಿತಿದ್ದಾರೆ. ಎಂದೆಂದೂ ತಾವು ಮಹಾನ್ ಎನಿಸಿಕೊಂಡು ಕುಳಿತರು. ಸಂಸಾರವನ್ನು ಕಣ್ಣೆತ್ತಿಯೂ ನೋಡಲಿಲ್ಲ. ಅದಕ್ಕೇ ಇಂತಹ ಗುಣನಿಧಿ ಮಗ, ಇಂತಹ ನಾಚಿಕೆಯಿಲ್ಲದ ಸೊಸೆ, ಎಲ್ಲಾ ಆಗುತ್ತಾ ಇದೆ. ನಿನಗಾಗಿ ಇನ್ನೂ ಒಂದು ಮುಸಲ ತಯಾರಾಗುತ್ತಾ ಇದೆ. ನಿನ್ನ ಚಿಕ್ಕ ಮಗಳೇ ನಿನ್ನ ಮಾನ-ಮರ್ಯಾದೆಯನ್ನು (ಮುಸಲ ಎನ್ನುವುದು ಒಂದು ಒನಕೆ) ಕಸದಲ್ಲಿ ಎಳೆದು ಯಾವನೋ ತೋಟಿಯ-ದೊಂಬರದವನ ಕುತ್ತಿಗೆಗೆ ಮಾಲೆ ಹಾಕಿಬಿಟ್ಟು ಓಡುತ್ತಾಳೆ! ಆಗ ಯಾರೂ ನನ್ನ ಹೆಸರು ಹೇಳುವುದಿಲ್ಲ. ನಿನ್ನ ಹೆಸರೇ ಬೀದಿಯಲ್ಲಿ ಎಳೆಯಲ್ಪಡುತ್ತೆ! ಚಿಂತೆ ವಾಯುವಿಗಿಂತಲೂ ದ್ರುತಗಾಮಿ.

ಸರೋಜಾಕ್ಷರ ಬಾಡಿದ ಮುಖವನ್ನು ನೋಡಿ ಒಂದು ಕ್ರೂರ-ಪುಳಕದಿಂದ ಇಷ್ಟನ್ನೂ ಯೋಚಿಸಿಬಿಟ್ಟರು ವಿಜಯಾ.

ಹೀಗೆಯೇ ಆಗುತ್ತೋ ಏನೋ! ಯಾವ ಮನೆ ಪ್ರೇಮದ ಬೀಡಾಗಬೇಕೋ ಆ ಮನೆ ಪ್ರೇಮ-ಶೂನ್ಯವಾದರೆ, ಶೂನ್ಯತೆ ಮಾತ್ರವಲ್ಲದೆ, ತಿರಸ್ಕಾರ, ಕ್ರೂರತೆ, ಆಕ್ರೋಶ ಇವೆಲ್ಲವೂ ಅದನ್ನು ಆಕ್ರಮಿಸಿಕೊಳ್ಳುತ್ತೆ.

ಅದಕ್ಕೇ ಅಣ್ಣ-ತಮ್ಮಂದಿರಲ್ಲಿ, ತಂದೆ-ಮಗನಲ್ಲಿ, ಗಂಡ-ಹೆಂಡತಿಯರಲ್ಲಿ ಪ್ರೇಮದ ಕೊರತೆಯಾದರೆ ಆ ಸ್ಥಾನವನ್ನು ಹೊರಗಿನ ಶತ್ರುಗಳಿಗಿಂತ ಹೆಚ್ಚಾಗಿ, ಪರಸ್ಪರರಲ್ಲಿ ತಿರಸ್ಕಾರ ಕ್ರೂರತೆ, ಆಕ್ರೋಶ ಮುಂತಾದ ಒಳಗಿನ ಶತ್ರುಗಳೇ ಆಕ್ರಮಿಸಿಕೊಳ್ಳುತ್ತದೆ.

ಆದರೆ ಆ ಮಾತುಗಳನ್ನು ವಿಜಯಾ ಅಂದುಕೊಂಡಿದ್ದು ಮನಸ್ಸಿನಲ್ಲಿ. ಮತ್ತೆ ಬಾಯಲ್ಲಿ ಹೇಳಿದರು. "ಹೋಗಲಿ ಬಿಡು ಆ ಮಾತು, ಮನೆಯಲ್ಲಿರುವ ಸಂದರ್ಭಗಳು ಹೇಳಿ ಮುಗಿಸುವುದು ಸಾಧ್ಯವಲ್ಲ. ಆದರೆ ನೀನೂ ಮನೆಯವಳು ತಾನೇ. ಅದಕ್ಕೇ ಹೇಳಿದೆ ಚಿಕ್ಕಮ್ಮ, ನೋಡಿಕೋ, ಸಮಾಚಾರ ಮೂರನೇಯವರ ಕಿವಿಗೆ ಬೀಳದೆ ಇರಲಿ."

ಮೂರನೇಯವರ ಕಿವಿಗೆ!

ಹೈಮವತಿ ನಕ್ಕು ಹೇಳಿದರು, "ಆ ಭಯ ಅಂತೂ ಪಡಬೇಡ."

ಸರೋಜಾಕ್ಷರ ಮನಸ್ಸಿಗೆ ಇನ್ನೂ ನೋವಾಗುತ್ತೆ.

ವಿಜಯಾ ಸೆರಗು ಕಟ್ಟಿಕೊಂಡು ಜಗಳಕ್ಕೆ ಇಳಿದಿದ್ದಾರೆಂದು ಅವರಿಗೆ ತೋರುತ್ತೆ. ಏನಾದರೂ ಅವರು ಹೇಳಲು ಹೋದರೆ, ಗಂಡನಿಗೆ ಇನ್ನೂ ಒಂದಷ್ಟು ಅವಮರ್ಯಾದೆ ಮಾಡುತ್ತಾರೆ. ಕೆಲವು ಹಠಮಾರಿ ಮಕ್ಕಳಲ್ಲಿ ಈ ಪ್ರವೃತ್ತಿಯನ್ನು ಕಾಣಬಹುದು. ಹೊರಗಿನ ಮನುಷ್ಯರ ಎದುರಿಗೆ ಮನೆಯವರನ್ನು ಅವಮಾನ ಮಾಡುವುದಕ್ಕಾದರೆ, ಇನ್ನೇನೂ ಬೇಡ.

ಆದರೆ, ವಿಜಯಾ ಏನು ಚಿಕ್ಕ ಮಗುವೇ?

ವಿಜಯಾ ತೋರುವ ಕ್ರೂರತೆಯನ್ನು ಚಂಡಿತನ ಎಂದು ಹೇಳಿ ತಳ್ಳಿಬಿಡಲು ಸಾಧ್ಯವೇ? ಹೈಮವತಿ ಸರೋಜಾಕ್ಷರ ಇಕ್ಕಟ್ಟಿನಲ್ಲಿ ಸಿಕ್ಕಿದ ಪರಿಸ್ಥಿತಿಯನ್ನರಿಯುತ್ತಾರೆ. ಅದಕ್ಕೇ ನಗೆ ಮೊಗದೊಂದಿಗೆ ಉತ್ಸಾಹ ತೋರುತ್ತಾ, "ಎಲ್ಲಮ್ಮ ಸೊಸೆ, ನಿನ್ನ ದೇವರ ಪ್ರಸಾದ–ಗಿಸಾದ ಎಲ್ಲಿ? ತೆಗಿ ಆಮೇಲೆ ಸ್ವಲ್ಪ ಟೀ ಕುಡಿಸು. ಮಾತಾಡಿ ಗಂಟಲು ಒಣಗಿಹೋಗಿದೆ" ಎಂದರು. ವಿಜಯಾರ ಗಮನವನ್ನು ಬೇರೆ ಕಡೆ ತಿರುಗಿಸಲು ಹೈಮವತಿ ಆಡಿದ ಮಾತುಗಳನ್ನು ಕೇಳಿ ಅವರನ್ನು ಸರೋಜಾಕ್ಷರು ಕೃತಜ್ಞತೆಯಿಂದ ನೋಡಿದರು.

ಆದರೆ ವಿಜಯಾ ಅಷ್ಟು ಸುಲಭವಾಗಿ ಸೋಲುವವರೇ! ಅಳುಕಿಲ್ಲದ ಧ್ವನಿಯಿಂದ ಹೇಳಿದರು, "ಪ್ರಸಾದ? ಅದೆಲ್ಲಾ ನಿನ್ನಂತಹ 'ಮೇಮ್‌ಸಾಹೇಬಳಾ'ದ ಅತ್ತೆಗಾಗಿ ತರಲು ಧೈರ್ಯವಾಗಲಿಲ್ಲ. ಆಳನ್ನು ತಿಂಡಿಗಳನ್ನು ತರಲು ಅಂಗಡಿಗೆ ಕಳುಹಿಸಿದ್ದೇನೆ. ನಿನಗೆ ಬ್ರಾಹ್ಮಣರ ಮನೆಯ ವಿಧವೆಯ ಆಚಾರ–ವಿಚಾರಗಳೇನೂ ಇಲ್ಲವಲ್ಲ, ಆದ್ದರಿಂದ ಅವನನ್ನೇ ಟೀ ಮಾಡಲು ಹೇಳಿದ್ದೇನೆ. ಇದೋ ಇನ್ನೇನು ತಂದ!"

ಹೈಮವತಿ ಸ್ತಬ್ಧರಾದರು.

ತಾನೇ ತೋಡಿದ ಬಾವಿಯನ್ನು ನೋಡಿದರು. ಈಗ 'ಬೇಡ ಹಸಿವಿಲ್ಲ' ಎಂದು ಹೇಳಲು ದಾರಿಯೂ ಇಲ್ಲ.

ಇದಾದ ಮೇಲೆ ಇನ್ನು ಕೂತುಕೊಂಡು ಕೇಳಲೂ ಬೇಕು. "ಒಳ್ಳೆ ನೆಮ್ಮದಿಯಾಗಿದ್ದೀಯಮ್ಮಾ ಚಿಕ್ಕಮ್ಮ. ಆಚಾರ–ವಿಚಾರದ ತೊಂದರೆ ಇಲ್ಲದೆ. ಆಳು ಕೊಟ್ಟರೆ ತಿನ್ನಬಹುದು. ನನ್ನ ಹಾಗೆ ಮರಣ–ಸಂಕಟ ಇಲ್ಲ ನಿನಗೆ."

ಕೇಳಲೇಬೇಕು ಏಕೆಂದರೆ ವಿಜಯಾ ಇರುವ ಕಡೆ ಬೇರೆಲ್ಲರದೂ 'ಶ್ರೋತಾ'ವಾಗುವ ಭೂಮಿಕೆಯೇ ವಿಜಯಾರದು. ಮಿಕ್ಕೆಲ್ಲರ ಮನಸ್ಸಿನ ನಯ, ನಾಜೋಕು ಎಲ್ಲವನ್ನೂ ಎಳೆದುಕೊಂಡು ಮಾಡುವಂತಹದ್ದೇ ಸ್ವಭಾವ.

ಸರೋಜಾಕ್ಷರು ಏನಾದರೂ ಪ್ರಾರ್ಥಿಸುತ್ತಿದ್ದರೇ? ಏನಾದರೂ ಒಂದು ಅನಾಹುತ ನಡೆದು ವಿಜಯಾ ಮಾತಾಡುವುದು ನಿಲ್ಲಲಿ ಎಂದು? ದೇವರು ಅದನ್ನು ಕಿವಿಗೊಟ್ಟು ಕೇಳಿ ವರವೂ ಕೊಟ್ಟನೇ?

ಅದಕ್ಕೇ ಮಾತಿನ ಮಧ್ಯೆ ಒಂದು ಕೆಟ್ಟ ಗ್ರಹದ ಆವಿರ್ಭಾವವಾಗುತ್ತೆ!

ಕೆಳಗಡೆ ಏನೋ ಗಲಾಟೆ ಕೇಳಿಸುತ್ತೆ. ಅದರೊಂದಿಗೆ ಮೆಟ್ಟಲೇರುತ್ತಿರುವ ಜೋಡಿನ ಶಬ್ದ. ಅದರ ಕಡೆಯ ಲಯದೊಂದಿಗೆ ಬಂದು ನಿಲ್ಲುತ್ತಾನೆ ಸರೋಜಾಕ್ಷರ ಚಿಕ್ಕ ಮಗ.

ಕೈಯಲ್ಲಿ ಚಿಕ್ಕದಾದ ಸೂಟ್‌ಕೇಸ್.

ತಲೆಯಲ್ಲಿ ದೊಡ್ಡ ಬ್ಯಾಂಡೇಜು.

ಗಲಾಟೆ ಕೇಳಿ ಶಾರದಾ ಪ್ರಸಾದ್ ಮೈಗೆ ಎಣ್ಣೆ ಒತ್ತಿಕೊಳ್ಳುತ್ತಾ ಹಾಗೆಯೇ ಅಲ್ಲಿಗೆ ಬಂದರು. ಬ್ಯಾಂಡೇಜ್ ಕಟ್ಟಿರುವುದನ್ನು ನೋಡಿ ಎಲ್ಲರೂ ಗಾಬರಿಯಿಂದ ನೋಡಿದರು. ವಿಜಯಾದು ಅಮ್ಮನ ಹೃದಯ. ಅದಕ್ಕೇ ವಿಜಯಾ ಕೂಗಿಕೊಂಡರು. "ಇದೇನಪ್ಪಾ ಕಮಲ್, ಎಲ್ಲಿ ಏನು ಸರ್ವನಾಶ ಮಾಡಿಬಿಟ್ಟು ಬಂದೆ?"

ಕಮಲಾಕ್ಷ ಅಲಕ್ಷ್ಯವಾಗಿ ಜವಾಬು ಕೊಟ್ಟ, "ಏನಿಲ್ಲಪ್ಪ, ಏನಿಲ್ಲ, ಅಂತಹ ಅನಾಹುತ ಏನೂ ಆಗಿಲ್ಲ. ಕೇವಲ ನಾಲ್ಕೈದು ಸ್ಟಿಚ್ ಹಾಕಬೇಕಾಯಿತು ಅಷ್ಟೆ."

"ಸ್ಟಿಚ್ 'ಹಾಕಬೇಕಾಯಿತೇ?' ಹೈಮವತಿ ಹತ್ತಿರ ಬಂದು ಕೇಳಿದರು. "ಹಾಗಾದರೆ ಪೆಟ್ಟೇನೂ ಕಮ್ಮಿಯಾಗಿರಲಾರದು. ಏನಾಯಿತು? ಬಿದ್ದು ತಲೆ ಒಡೆದುಕೊಂಡೆಯೋ ಅಥವಾ ಹೊಡೆದಾಡಿದೆಯೋ?" ಮೊಮ್ಮಗನೆನ್ನುವ ಸಲಿಗೆಯ ಧ್ವನಿಯಲ್ಲೇ ಕೇಳಿದರು.

ಕಮಲಾಕ್ಷನೂ ಅದಕ್ಕೆ ತಕ್ಕ ಧ್ವನಿಯಲ್ಲೇ "ಚಿಕ್ಕಮ್ಮಮ್ಮಾನೇ? ಸರಿಯಾಗಿ ಹಿಡಿದಿರಿ. ಅದೇ ಕಡೆಯದೇ!" ಎಂದ.

"ಹೊಡೆದಾಟವೇ? ರಸ್ತೆಯ ಹುಡುಗರಂತೆ ಹೊಡೆದಾಡಿ ನೀನು ತಲೆ ಒಡೆದುಕೊಂಡೆಯಾ?" ವಿಜಯಾ ತಿರಸ್ಕಾರ, ಧಿಕ್ಕಾರಗಳು ಕೂಡಿದ ಧ್ವನಿಯಿಂದ ಕೂಗಿ ಕೇಳಿ ಅಂದರು, "ಭೇಷ್, ಈ ಒಬ್ಬ ಹುಡುಗ ಬಾಕಿ ಇದ್ದ. ಅವನೂ ದಾರಿ ಹಿಡಿದ. ಮಹಾಪುರುಷ ಅಪ್ಪನ ಮಹಾನ್ ಶಿಕ್ಷಣದ ಫಲ. ಯಾತಕ್ಕೋಸ್ಕರ ಯಾರ ಜೊತೆಯಲ್ಲಿ ಆಯಿತು ಇದೆಲ್ಲಾ?"

"ಅತ್ತಿಗೇ," ಶಾರದಾ ಪ್ರಸಾದ್ ಗದರಿಸುವ ಧ್ವನಿಯಲ್ಲಿ ಹೇಳಿದರು, "ಆ ಇತಿಹಾಸವನ್ನೆಲ್ಲಾ ಆಮೇಲೆ ಕೇಳಿದರೂ ಮಹಾಭಾರತವೇನೂ ಅಶುಚಿಯಾಗುವುದಿಲ್ಲ. ಈಗ ಹುಡುಗನಿಗೆ ಏನು ಮಾಡಬೇಕೋ, ನೋಡಬೇಕೋ ನೋಡಿ!"

ವಿಜಯಾರನ್ನು ಗದರಿಸಿ ಮಾತಾಡುವ ಧೈರ್ಯ ಇರುವವರು ಶಾರದಾ ಪ್ರಸಾದ್ ಒಬ್ಬರೇ. ವಿಜಯಾ ಸ್ವಲ್ಪ ಸುಮ್ಮನಾಗುತ್ತಾರೆ. ಹೇಳಿದರು, "ನಾನಿನ್ನೇನು ನೋಡೋದು. ನೀವುಗಳೇ ಡಾಕ್ಟರಿಗೆ ಹೇಳಿ ಕಳುಹಿಸಿ."

ಕಮಲಾಕ್ಷ ಹಾ, ಹೂ ಎಂದು ಕೂಗಿ ಗಲಾಟೆ ಮಾಡಿಹೇಳಿದ, "ಬೇಡಪ್ಪಾ ಬೇಡ ಆಸ್ಪತ್ರೆಯ ಡಾಕ್ಟರು ನೋಡಿದ್ದಾರೆ, ಕಟ್ಟಿದ್ದಾರೆ ಎಲ್ಲಾ ಸರಿಹೋಗಿದೆ." ಸಮಸ್ಯೆಯನ್ನು ಲಘುವಾಗಿಸಿ ಮಾತಾಡಿಬಿಟ್ಟು ಕಮಲಾಕ್ಷ ಕೇಳಿದ: "ಮನೆಯ ಮುಖ್ಯ ಮನುಷ್ಯ ಎಲ್ಲಿ ಕಾಣುತ್ತಾ ಇಲ್ಲವಲ್ಲಾ. ಬಿಚ್ಚು ಬಾಬು ಎಲ್ಲಿ?"

ಬಿಟ್ಟು ಎಂದು ಹೆಸರು ಇಟ್ಟಿದ್ದು ಕಮಲಾಕ್ಷನೇ ಮತ್ತು ಚಿಕ್ಕಪ್ಪನ ಹತ್ತಿರವೇ ಅವನಿಗೆ ಹೆಚ್ಚು ಸಲಿಗೆ ಇದ್ದುದೂ. ಈಗ ಸಂದರ್ಭವೆಲ್ಲಾ ಬದಲಾಗಿದೆ.

ಆದರೆ ಯಾರಿಗೋಸ್ಕರ ಯಾರು ಏನನ್ನು ಬಿಡುತ್ತಿದ್ದಾರೆ ಗೊತ್ತಾಗುವುದಿಲ್ಲ.

ವಿಜಯಾ ಈ ಅವಕಾಶವನ್ನು ಬಿಡುವುದಿಲ್ಲ ಹೇಳುತ್ತಾರೆ: "ನೀನು ನೋಡಿದ್ದ ಸಂಸಾರದಲ್ಲಿ ಈಗ ತುಂಬಾ ಬದಲಾವಣೆಗಳಾಗಿ ಹೋಗಿದೆ ತಿಳಿಯಿತೇ? ಮಗುವನ್ನು ನೋಡಬೇಕಾದರೆ ಸ್ಕೂಲಿಗೆ ಹೋಗಿ ನೋಡಬೇಕು ಅಥವಾ ಅವನ ಮಾವನ ಮನೆಗೆ ಹೋಗಬೇಕು. ಕಮಲಾಕ್ಷ ಬಹಳ ದಿನಗಳಿಂದ ಮನೆಗೆ ಬಂದಿರಲಿಲ್ಲ. ಎರಡು ಸಲದ ರಜಾ ದಿನಗಳಲ್ಲಿ ಅವನು ಕ್ಯಾಂಪ್‌ಗೆ ಹೋಗಬೇಕಾಗಿ ಬಂದಿತ್ತು. ಆದ್ದರಿಂದ ಸ್ವಲ್ಪ ಆಶ್ಚರ್ಯದಿಂದ ಕೇಳಿದ ಯಾಕೆ ಹಠಾತ್ತನೆ ಈ ಏರ್ಪಾಟು?"

"ಎರಡು ದಿವಸ ಇದ್ದರೆ ಗೊತ್ತಾಗುತ್ತೆ– ನಿಮ್ಮತ್ತಿಗೆ ಈಗ ಮಗನನ್ನು ತಾಯಿಯ ಮನೆಯಲ್ಲಿ ಬಿಟ್ಟು ಪಾರ್ಟಿಯಲ್ಲಿ ಕುಣಿಯಲು ಹೋಗುತ್ತಾಳೆ"

"ವಾಹ್, ವಾಹ್! ಕೇಳಿ ಬಹಳ ಆನಂದವಾಗುತ್ತಾ ಇದೆ!"

ಸರೋಜಾಕ್ಷರು ಹೆಂಡತಿಯನ್ನು ದಿಟ್ಟಿಸಿ, ದುರುಗುಟ್ಟಿ ನೋಡುತ್ತಾರೆ.

ಹೈಮವತಿಗೆ ಕಳವಳವಾಗುತ್ತೆ. ಹೇಳುತ್ತಾರೆ:

"ನಾನು ಈಗ ಹೋಗುತ್ತೇನೆ, ಸರೋಜ್" ಹೇಳಿ ಆದ ಮೇಲೆ ಬಹುಶಃ ಹೀಗೆ ಹಠಾತ್ತನೆ ಹೊರಡುವ ಸಂದರ್ಭವನ್ನು ಮರೆಸಲೆಣಿಸಿ ಹೇಳುತ್ತಾರೆ. "ಕಮಲ್, ನೀನು ಇನ್ನೂ ಕೆಲವು ದಿನ ಇರುತ್ತೀಯಲ್ಲಾ, ಸ್ವಲ್ಪ ಹುಷಾರಾದ ಮೇಲೆ ಒಂದು ದಿನ ಮನೆಗೆ ಬಾ. ನಿನ್ನ ವೀರತ್ವದ ಕತೆ ಕೇಳೋಣ."

"ಅದಕ್ಕೆ ಮುಂಚೆಯೇ ಕೇಳುತ್ತೀರಿ"–ಕಮಲಾಕ್ಷ ನಗುನಗುತ್ತಾ ಹೇಳಿದ, "ಪೇಪರಿನಲ್ಲೇ ನೋಡುತ್ತೀರಿ, ಇಂತಹ ಒಂದು ಸಮಾಚಾರ ಪೇಪರಿನಲ್ಲಿ ಬರದೇ ಇರುತ್ತದೆಯೇ? ಖರಗ್‌ಪೂರ್ ಟೆಕ್ನೋಲಾಜಿಕಲ್ ಸ್ಕೂಲಿನಲ್ಲಿ ವಿದ್ಯಾರ್ಥಿಯರ ಆಂದೋಳನ ಅಧ್ಯಾಪಕರುಗಳಿಗೆ ಪೆಟ್ಟು, ಪೊಲೀಸು ಮತ್ತು ವಿದ್ಯಾರ್ಥಿಯರಲ್ಲಿ ಸಂಘರ್ಷ. ಎರಡು ಪಕ್ಷದಿಂದ ಇಪ್ಪತ್ತೆರಡು ಜನರಿಗೆ ಪೆಟ್ಟು, ಮೂರು ಮಂದಿಯ ಸ್ಥಿತಿ ಶಂಕಾಜನಕ. ಆದರೆ ಅದರಲ್ಲಿ ಇಬ್ಬರು ಪೊಲೀಸರು. ಇಟ್ಟಿಗೆಯ ಪೆಟ್ಟಲ್ಲವೇ?"

ನೆಮ್ಮದಿಯಾಗಿ ನಗು ನಗುತ್ತಾ ಹೇಳುತ್ತಿದ್ದಾನೆ ಕಮಲಾಕ್ಷ.

ಅಂತೂ ಮನೆಯಿಂದ ದೂರದಲ್ಲಿದ್ದರೂ ಈ ಮನೆಯ ಇನ್ನೊಬ್ಬ ಮಗನದೂ ನಡತೆ ಇತ್ಯಾದಿ ಬದಲಾಗಿದೆ. ಹೊಡೆದಾಡಿ ತಲೆ ಒಡೆದುಕೊಂಡು ಬಂದು ಅದರಿಂದ ನಾಚುತ್ತಿಲ್ಲ ಅವನು. ಅವನಿಗೆ ನಾಚಿಕೆ. ಅಳುಕು ಏನಿಲ್ಲ. ಅಧ್ಯಾಪಕರುಗಳನ್ನು ಹೊಡೆದು, ಪೋಲಿಸರನ್ನು ಹಿಮ್ಮೆಟ್ಟಿದುದಕ್ಕಾಗಿ!

ಹೈಮವತಿ ಹೊರಟು ಹೋದರು.

ವಿಜಯಾ ಸ್ವಲ್ಪ ಉಪಚಾರಕ್ಕಾಗಿ ಹೇಳಲು ಹೋಗಿದ್ದರು. "ನಿನಗಾಗಿ ಟೀ ಮಾಡುತ್ತಾ ಇದ್ದಾನೆ. ತಿಂಡಿ ತರಲು ಹೋಗಿದ್ದಾನೆ" ಎಂದು.

ಹೈಮವತಿ ನಕ್ಕು ಕಮಲಾಕ್ಷನ ಬೆನ್ನು ಸವರಿ, "ನನ್ನ ಭಾಗವನ್ನು ನನ್ನ ಮೊಮ್ಮಗ ತಿನ್ನುತ್ತಾನೆ" ಎಂದು ಹೇಳಿ ಹೊರಟರು.

ವಿಜಯಾ ಪಕ್ಕಕ್ಕೆ ಸರಿದುಕೊಳ್ಳುತ್ತಾರೆ.

ಆಸ್ಪತ್ರೆಯ ಬ್ಯಾಂಡೇಜು, ಅನಾಯಾಸವಾಗಿ ಮುಟ್ಟಿಬಿಟ್ಟು ಹೊರಟುಹೋದಳಲ್ಲಾ ವಿಧವೆ ಹೆಂಗಸು!

ಅಮ್ಮನಿಗಿಂತ ಹೆಚ್ಚು ಅಕ್ಕರೆಯೇ!

ವಿಜಯಾಗೇನು ಆಸೆ ಇಲ್ಲವೆ ಮಗನ ಮೈ ಸವರಬೇಕೆಂದು? ಆದರೆ ಬ್ಯಾಂಡೇಜಿನ ಜಾತಿ ನೋಡಬೇಡವೆ?

"ಚಮತ್ಕಾರವಾದಂತಹ ದೇಶವಾಯಿತು ನಮ್ಮದು!" ಎಂದು ಹೇಳುತ್ತಾ ಎಣ್ಣೆಯನ್ನು ಉಜ್ಜಿ ಕೊಳ್ಳುತ್ತಾ ಶಾರದಾಪ್ರಸಾದರು ಹೊರಟುಹೋದರು. ಶಾರದಾ ಮತ್ತು ಹೈಮವತಿ ಹೊರಟುಹೋದ ಮೇಲೆ ಸರೋಜಾಕ್ಷರು ಮೆಲ್ಲಗೆ ಕಮಲಾಕ್ಷನ ಕಡೆ ತಿರುಗಿ ಕೇಳಿದರು. "ಇದಕ್ಕೆಲ್ಲಾ ಬಹಳ ಆವಶ್ಯಕತೆ ಇತ್ತೇ?"

ಕಮಲಾಕ್ಷ ಟೀಚರನ್ನು ಬಡಿದು ತಲೆ ಒಡದುಕೊಂಡು ಬಂದು ನಗುನಗುತ್ತಾ ಎಲ್ಲವನ್ನೂ ಉಡಾಯಿಸಿಬಿಟ್ಟರೂ ಅಪ್ಪನ ಮುಂದೆ ಸ್ವಲ್ಪ ಸಂಕೋಚಗೊಳ್ಳುತ್ತಿದ್ದ. ಆದರೂ ಸಹಜವಾಗಿ ಹೇಳಲು ಪ್ರಯತ್ನಿಸಿದ. "ಪರಿಸ್ಥಿತಿಯನ್ನು ಕೇಳಿದರೆ ನಿಮಗೇ ಗೊತ್ತಾಗುತ್ತೆ ಅವಶ್ಯಕತೆ ಇತ್ತೇ ಇಲ್ಲವೇ ಎನ್ನುವುದು."

ಸರೋಜಾಕ್ಷರು ಸ್ವಲ್ಪ ದೃಢವಾಗಿಯೇ ಹೇಳಿದರು, "ಬಹುಶಃ ನನಗೆ ತಿಳಿಯುವುದು ಕಷ್ಟ. ಕಾರಣ ನಮ್ಮ ಕಾಲದಲ್ಲಿನ ಮನೋಭಾವವೇ ಬೇರೆಯಾಗಿತ್ತು. ಆದರೂ ಕೇಳುತ್ತೇನೆ ಎಷ್ಟು ಕೆಟ್ಟ ಪರಿಸ್ಥಿತಿಯಾದರೆ ನೀನು ನನ್ನನ್ನು ಹಿಡಿದು ಹೊಡೆಯುತ್ತೀಯ?"

"ಇದೇನು ಮಾತಿನ ಲಕ್ಷಣ?" ವಿಜಯ ಬೇಜಾರಾದ ಧ್ವನಿಯಿಂದ ಹೇಳಿದರು. "ಕಮಲ್, ನೀನು ಬಾ, ಕೈ ಕಾಲು ತೊಳೆದುಕೊಂಡು ತಿಂಡಿ ತಿನ್ನು ಬಾ."

"ನೀನು ಹೋಗು, ಅವನು ಬರುತ್ತಾನೆ"–ಸರೋಜಾಕ್ಷರು ಹೇಳಿದರು, "ನನ್ನ ಪ್ರಶ್ನೆಗೆ ನೀನು ಉತ್ತರವನ್ನು ಹೇಳಿಬಿಟ್ಟು ಹೋಗಬೇಕು ಕಮಲ್! ನಾನು ಎಂತಹ ಹೀನ ನಡತೆಯಿಂದ ನಡೆದರೆ ನೀನು ನನ್ನನ್ನು ಹಿಡಿದು ಹೊಡೆಯಬಲ್ಲೆ?"

ಕಮಲಾಕ್ಷನಿಗೆ, ಮಾತಿನಲ್ಲಿ ಒಳಗೆ ಹುದುಗಿದ್ದ ಅರ್ಥ ಗೊತ್ತಾಗದೇ ಇಲ್ಲ. ಆದರೂ ಮಾತು ಬದಲಾಯಿಸಲು ಹೇಳಿದ, "ಹಠಾತ್ತನೆ ಏಕೆ ಹೀಗೆ ಕೇಳುತ್ತೀರಿ?"

"ಏಕೆ ಕೇಳಿದೆ ಎಂಬುದನ್ನು ಅರ್ಥಮಾಡಿಕೊಳ್ಳುವಷ್ಟು ಯೋಗ್ಯತೆ ನಿನಗೆ ಖಂಡಿತಾ ಇದೆ. ಚಿರಕಾಲವೂ ಇದೇ ಶಿಕ್ಷಣವನ್ನೇ ಪಡೆದು ಬಂದಿದ್ದೀಯ, ಶಿಕ್ಷಕರು ತಂದೆಯ ಸಮಾನ !"

ಕಮಲಾಕ್ಷ ಈಗ ಜೋರಾಗಿ ಹೇಳಿದ, "ನಿಮ್ಮ ಕಾಲದ ಆ ಆದರ್ಶವೆಲ್ಲಾ ಈಗ ನಡೆಯುವುದಿಲ್ಲ ಅಪ್ಪಾ! ಆಗ ಅದು ಎರಡು ಪಕ್ಷದಲ್ಲೂ ಇತ್ತು. ಅಧ್ಯಾಪಕರು, ಅಧ್ಯಾಪಕರಾಗಿ ನಡೆಯುತ್ತಿದ್ದರು.

"ಅದನ್ನೇ ತಾನೆ ನಾನು ಕೇಳುತ್ತಿದ್ದೇನೆ, ಎಷ್ಟರಮಟ್ಟಿಗೆ ಹೀನವಾದ ಕೆಲಸ ಅವರು ಮಾಡಿದ್ದಾರೆ ಹಿಡಿದು ಹೊಡೆಯುವಂತಹದ್ದು!"

ಕಮಲಾಕ್ಷ ಅದನ್ನು ಸರಸರನೆ ಹೇಳಲಿಲ್ಲ. ಆದರೂ ಪ್ರಶ್ನೆಗಳ ಮೂಲಕ ಪೂರ್ತಿ ಸಮಾಚಾರ ಹೊರಗೆ ಬಂತು. ಸರೋಜಾಕ್ಷರು ಹುಡುಗರನ್ನು ಇಂತಹ ತನಿಖೆಗೆ ಒಳಗಾಗಿಸುವರಲ್ಲ. ಅವರುಗಳು ಚಿಕ್ಕವರಾಗಿದ್ದಾಗ ವಿಜಯಾ, ಚಿಕ್ಕಪುಟ್ಟ ವಿಷಯಗಳಿಗಾಗಿ ಈ ತರಹ ವಿಚಾರಣೆ ಮಾಡಲು ಹೋದರೆ, "ಇದರಿಂದ ಅವರನ್ನು ಸಹನೆಯಿಲ್ಲದವರನ್ನಾಗಿ ಮಾಡಿದಂತಾಗಿ, ಪುಕ್ಕಲುಗಳಾಗಿ ಮಾಡಿದಂತಾಗುತ್ತೆ. ಸುಳ್ಳು ಹೇಳಲು ಕಲಿಸಿದ ಹಾಗೆ ಆಗುತ್ತೆ ಬಿಟ್ಟುಬಿಡು" ಎನ್ನುವರು.

ಆದರೆ ಇಂದು ಯಾಕೋ ತಾನೇ ಆ ವಿಷಯವನ್ನು ಅಷ್ಟಕ್ಕೆ ಬಿಡದೆ, ಹಿಡಿದರು. ಏನೋ ಒಂದು ಕುತೂಹಲ. ಹೊರ ಪ್ರಪಂಚದಲ್ಲಿ ಏನು ನಡೆಯುತ್ತಿದೆ ನೋಡೋಣ. ಅವಕ್ಕೂ ತಮ್ಮ ಅನುಭವದ ಸಂದರ್ಭಗಳಿಗೂ ಇರುವ ಸಂಬಂಧವನ್ನರಿಯುವ, ಕಾರಣವನ್ನು ಹುಡುಕುತ್ತಿರುವ ಮನಸ್ಸಿನ ದುಗುಡ ಪ್ರಶ್ನೆಯಾಗಿ ಹೊರಬಂತು. ಅದಕ್ಕೇ ಕೇಳಿದರು. "ನಾನು ಎಷ್ಟರಮಟ್ಟಿಗೆ ಹೀನವಾದ ಕೆಲಸ ಮಾಡಿದರೆ ನೀನು ನನ್ನನ್ನು ಹಿಡಿದು ಹೊಡೆಯುತ್ತೀಯ?"

ಕಮಲಾಕ್ಷ ಅದಕ್ಕೆ ಜವಾಬು ಕೊಟ್ಟ. ಅವನ ಅಭಿಪ್ರಾಯ–

"ಇದು ಹೀನವಾದದ್ದಲ್ಲವೆಂದರೆ ಹೇಳಿ. ನೀವು ನಿಮ್ಮ ಹಳೆಯ ಕನ್ನಡಕವನ್ನು ಹಾಕಿಕೊಂಡು ಹೊಸ ಪ್ರಪಂಚವನ್ನು ನೋಡುವುದಾದರೆ ನೋಡಿ. ಅದರಿಂದ ಪ್ರಪಂಚಕ್ಕೇನೂ ನಷ್ಟವಿಲ್ಲ. ನಾಚಿಕೊಂಡು ಅದು ತನ್ನನ್ನು ಬದಲಾಯಿಸಿಕೊಳ್ಳುವುದೂ ಇಲ್ಲ. ಈ ಯುಗ ಹೇಳುತ್ತೆ. ನೀನು ಅಧ್ಯಾಪಕನಾದ ಮಟ್ಟಿಗೆ ನೀನೇನೂ ನಮ್ಮ ತಲೆಯನ್ನು ಕೊಂಡುಕೊಂಡಿಲ್ಲ. ನೀನು ದುಡ್ಡು ತೆಗೆದುಕೊಂಡು ನೀನು ಕಲಿತ ವಿದ್ಯೆಯನ್ನು ಮಾರುತ್ತಿದ್ದೀಯ. ನಾನು ನನ್ನ ದುಡ್ಡನ್ನು ಕೊಟ್ಟು ಅದನ್ನು ಕೊಂಡುಕೊಳ್ಳುತ್ತಿದ್ದೇನೆ. ಏನೋ ನೀನು ನನ್ನನ್ನು ಕೊಂಡು ಕೊಂಡ ಹಾಗೆ ಭಾವಿಸಿ, ಸದಾಚಾರ ಶಿಕ್ಷಣ ಕೊಡಲು ಬರುವುದು ಸರಿಯೇ? ಯಾವನಾದರೂ ಹುಡುಗ ಹಾಸ್ಟಲಿನ ಹೊರಗೆ ತನ್ನ ಗರ್ಲ್‌ಫ್ರೆಂಡನ್ನು ಕರೆದುಕೊಂಡು ಹೋಗಿ ಓಡಾಡಿದರೆ ಅದರ ಬಗ್ಗೆ ಮಾತಾಡಲು ನಿನಗೇನು ಹಕ್ಕಿದೆ?"

ನಡೆದಿದ್ದುದೂ ಇದೇ.

ಯಾರೋ ಒಬ್ಬ ಅಧ್ಯಾಪಕರು ನೋಡಿದರಂತೆ. ಹಾಸ್ಟಲಿನ ಒಬ್ಬ ಹುಡುಗ ತನ್ನ ಗರ್ಲ್ ಫ್ರೆಂಡ್ ಜೊತೆಗೆ ಹಿ.ಹಿ. ಹೋಹೋ ಎಂದು ಓಡಾಡುತ್ತಿದ್ದನಂತೆ.

ಕ್ಲಾಸು ತಪ್ಪಿಸಿಕೊಂಡಲ್ಲ ರಜೆಯ ದಿನವಂದು.

ಆಯಿತು, ಅವರು ಹೋದರು ತಮ್ಮ ತಲೆಯನ್ನು ಕೊಡಲು; ಬಂದು, ವಿದ್ಯಾರ್ಥಿ ಜೀವನದ ಆದರ್ಶ, ಹಾಸ್ಟಲ್ಲಿನ ಡಿಸಿಪ್ಲಿನ್ ಇದೆಲ್ಲಾದರ ಮೇಲೆ ಲೆಕ್ಚರ್ ಒದರಲು! ಅವರಿಗೆ ಗೊತ್ತಾಗಬೇಡವೇ, ಹಾವಿನ ಬಾಲ ಮೆಟ್ಟದರೆ ಏನಾಗುತ್ತೆ ಅಂತ?

ಎಲ್ಲಾ ವಿದ್ಯಾರ್ಥಿಗಳೂ ಒಂದುಗೂಡಿ ಅವರನ್ನು ಹೊಡೆದುಹಾಕುವುದಿಲ್ಲವೇ?

ಅದೂ ಅವರು ಸ್ವಲ್ಪ ತಗ್ಗಿ ಹೋಗಿದ್ದರೆ ಸರಿ, ಹಾಗಿಲ್ಲದೆ ಅವರು ಹೋದರು. ಸೂಪರಿಂಟೆಂಡಿಗೆ ತಿಳಿಸಲು! ಕುದಿದೇಳುವುದಿಲ್ಲವೇ ಹುಡುಗರು!

ಒಡೆಯುವುದಿಲ್ಲವೇ ಕಾಲೇಜಿನ ಕುರ್ಚಿ, ಟೇಬಲ್ಲು, ಯಂತ್ರ, ಸರಂಜಾಮುಗಳನ್ನು? ಯಾವುದನ್ನು ಇಟ್ಟುಕೊಂಡು ಅವರೇ ಕೆಲಸ ಮಾಡುತ್ತಿದ್ದರೋ ಅವುಗಳನ್ನೇ!! ಎಲ್ಲವನ್ನೂ ಹೊಸಕಿಹಾಕಿದರು.

ಸೂಪರಿಂಟೆಂಡರೂ ಅಷ್ಟೆ ಬೆಪ್ಪು–ತಕ್ಕಡಿ! ನಿನ್ನ ಕೈಯಲ್ಲಾದರೆ ಏನಾದರೂ ಬಗೆ ಹರಿಸುವ ದಾರಿ ಹೇಳು, ಅದು ಬಿಟ್ಟು ಹೋದರು ಪೊಲೀಸನನ್ನು ಕರೆಯಲು!

ಅದರ ಪರಿಣಾಮ ಇದೇ ಮತ್ತೆ.

ವಿದ್ಯಾರ್ಥಿಗಳೂ ಗಾಯಗೊಂಡಿದ್ದಾರೆ, ಪೊಲೀಸರ ಲಾಠಿಯಿಂದ.

ಪೊಲೀಸರಿಗೆ ಇಟ್ಟಿಗೆಗಳಿಂದ ಪೆಟ್ಟಾಗಿದೆ, ಟೀಚರುಗಳಿಗೆ, ಕುರ್ಚಿ ಟೇಬಲ್ಲುಗಳಿಂದ ಗಾಯಗಳಾಗಿದೆ.

ಕಮಲಾಕ್ಷ ಆ ಗುಂಪಿನ ಮುಖಂಡನಾಗಿದ್ದ ಕಾರಣ ಅವನ ತಲೆಯ ಮೇಲೂ ಒಂದು ಏಟು ಬೀಳದೆ ಹೋಗಲಿಲ್ಲ. ಆದರೆ ಅವನು ಅದನ್ನು ಕೆಯರ್ ಮಾಡುವುದಿಲ್ಲ. ತಂದೆಯ ಮಾತನ್ನು ಖಂಡಿಸಿ ಜೋರಾಗಿ ಹೇಳುತ್ತಾನೆ. "ಅನ್ಯಾಯ ಮಾಡಿದವರು ಖಂಡಿತವಾಗಿಯೂ ಟೀಚರುಗಳೇ. ಸ್ಟೂಡೆಂಟ್ ಅನ್ನಿಸಿಕೊಂಡವರು ಯಾರೂ ಚಿಕ್ಕ ಹುಡುಗರಲ್ಲ. ಅವರವರ ಸ್ವಂತ ವ್ಯವಹಾರದಲ್ಲಿ ನೀನು ಯಾಕೆ ತಲೆ ಹಾಕಬೇಕು?"

ಬುದ್ಧಿಯಿಲ್ಲದ ಕೆಲಸ ಮಾಡಿದರೆ ಅದರ ಫಲವನ್ನು ಅನುಭವಿಸಲೇಬೇಕು.

ಸರೋಜಾಕ್ಷರು ನಿಧಾನವಾಗಿ ಕೇಳಿದರು, "ಹಾಸ್ಟಲಿನಲ್ಲಿರುವ ಹುಡುಗರ ನೈತಿಕ ಚರಿತ್ರೆಯ ವಿಷಯದಲ್ಲಿ ಟೀಚರುಗಳಿಗೆ ಯಾವ ಜವಾಬ್ದಾರಿಯೂ ಇಲ್ಲವೇ?"

"ಏಕಿಲ್ಲ, ಇದೆ. ಯಾವನಾದರೂ ಹುಡುಗ ರಾತ್ರಿ ಹತ್ತುಗಂಟೆ ಮೇಲೆ ಹಾಸ್ಟಲ್ಲಿನ ಹೊರಗಿದ್ದರೆ ಅದರ ವಿಷಯವಾಗಿ, ಹಾಸ್ಟಲ್ಲಿನ ಕಾನೂನಿನ ಪ್ರಕಾರ ಪ್ರಶ್ನೆ ಮಾಡಿ ಮಾತು ಎತ್ತಬಹುದು. ಅದಕ್ಕೆ ಹಕ್ಕಿದೆ ಅದು ಬಿಟ್ಟು ಬೇರೆ ಯಾವಾಗಲೂ ಇಲ್ಲ."

ಸರೋಜಾಕ್ಷರು ಸ್ವಲ್ಪ ಶಿಥಿಲವಾದ ಧ್ವನಿಯಿಂದ ಕೇಳಿದರು, "ಒಳ್ಳೆಯದು, ಕೆಟ್ಟದ್ದು ಎಂಬುದರ ಜವಾಬ್ದಾರಿ ಬರೀ ಕಾನೂನಿನ ಸಂಬಂಧದಿಂದಲೇ? ಯಾವನಾದರೂ ಹುಡುಗ ಹಾಸ್ಟಲ್ಲಿನ ಹೊರಗೆ ಹೋಗಿ ಸಾರಾಯಿ ಕುಡಿಯುತ್ತಿದ್ದರೆ ಟೀಚರನ ಕಣ್ಣಿಗೆ ಬಿದ್ದರೂ ಸುಮ್ಮನಿರಬೇಕೇ?"

"ಹಾಸ್ಟಲ್ಲಿನ ಹೊರಗೆ?" ಕಮಲಾಕ್ಷನ ಮುಖದಲ್ಲಿ ಒಂದು ಮೃದು ನಗೆ ಮೂಡುತ್ತೆ. "ಕಷ್ಟಪಟ್ಟು ಹೊರಗೆ ಏಕೆ ಹೋಗಬೇಕು? ಒಳಗೆಯೇ ಬೇಕಾದಷ್ಟು ನಡೆಯುತ್ತಾ ಇದೆಯಲ್ಲಾ!"

ಸರೋಜಾಕ್ಷರು ಏನೂ ತಿಳಿಯದವರೇ?

ಅಪ್ಪಟವಾಗಿ ಹೇಳಲು ಹೋದರೆ ಬುದ್ಧಿಯಿಲ್ಲದವರು ಎನ್ನಬೇಕು! ಇಲ್ಲದಿದ್ದರೆ ಈ ಮಾತು ಕೇಳಿ ಅವರು ಇಷ್ಟು ಮನ ಕುಗ್ಗಿಹೋಗುತ್ತಿದ್ದರೇ?

ಇಲ್ಲದಿದ್ದರೆ, ವಿಹ್ವಲತೆಯಿಂದ ಮಗನ ಮುಖವನ್ನು ದಿಟ್ಟಿಸುತ್ತಿದ್ದರೇ? ಏನೋ ಅವನು ಹೇಳಿದ ಮಾತು ಅರ್ಥವಾಗಲಿಲ್ಲ ಎಂಬಂತೆ!

ಕಮಲಾಕ್ಷನಿಗೆ, ತಂದೆ ಹೀಗೆ ಮನ ಕುಗ್ಗಿರುವುದು ತಿಳಿಯದೆ ಇಲ್ಲ. ಆದರೂ ಬೇಕೆಂದೇ. ಅವರ ಮೋಹವನ್ನು ಹೊರದೂಡಬೇಕೆಂದೇಯೋ ಏನೋ, ಇನ್ನೂ ನಿರಾಲೋಚನೆಯ ಧ್ವನಿಯಿಂದ ಹೇಳುತ್ತಾನೆ, ಆಶ್ಚರ್ಯಪಡುತ್ತಿದ್ದೀರಾ? ನೀವೆಲ್ಲಾ ಒಳ್ಳೆಯ ಹುಡುಗರಾಗಿದ್ದಿರಿ, ಯಾವಾಗಲೂ ಮನೆಯೊಳಗೆ ಇದ್ದು ಬೆಳೆದಿರಿ. ಅದಕ್ಕೇ ಪ್ರಪಂಚವನ್ನು ನೋಡುವ ಅವಕಾಶ ಸಿಕ್ಕಲಿಲ್ಲ. ಇಲ್ಲದಿದ್ದರೆ, ಈ ಸಾರಾಯಿ ಎನ್ನುವ ವಸ್ತು ಯಾವ ಕಾಲದಲ್ಲಿ ಇರಲಿಲ್ಲ? ಮನುಷ್ಯ ಯಾವಾಗ ಕುಡಿಯದೆ ಇದ್ದಿದ್ದಾನೆ? ವಿದ್ಯಾರ್ಥಿಗಳೂ ಬಿಟ್ಟುಬಿಟ್ಟಿಲ್ಲ. ಹಳೆಯ ಕಾಲದ ಹಾಸ್ಟಲ್ಲಿನ ಸರಿಯಾದ ಇತಿಹಾಸವನ್ನು ನೋಡಿ. ಆದರೆ ಹೌದು ಮುಂಚೆ ಜನ ಅಷ್ಟು ಆನೆಸ್ಟ್ ಆಗಿರಲಿಲ್ಲ. ಬಚ್ಚಿಟ್ಟು ಕುಡಿಯುತ್ತಿದ್ದರು. ಈಗ ಜನ ಆನೆಸ್ಟ್ ಆಗಿದ್ದಾರೆ. ಅಷ್ಟು ಕಳ್ಳತನ ಮಾಡುವುದಿಲ್ಲ. ಹಾಸ್ಟಲ್ಲಿನ ಮುಕ್ಕಾಲು ಪಾಲು ಹುಡುಗರು ಸಾರಾಯಿ ಕುಡಿಯುತ್ತಾರೆ. ಮತ್ತು ಎಲ್ಲರ ಎದುರಿಗೂ ಟೀ-ಕಾಫಿಯಂತೆಯೇ ಕುಡಿಯುತ್ತಾರೆ."

ಸರೋಜಾಕ್ಷರು ಮಗನ ಮುಖವನ್ನು ಎವೆಯಿಕ್ಕದೇ ದಿಟ್ಟಿಸಿ ನೋಡಿ. "ನೀನೂ ಈ ಮುಕ್ಕಾಲು ಪಾಲಿನಲ್ಲೇ ಸೇರುತ್ತಿಯೇನೋ?" ಎಂದರು.

"ನಾನೇ?" ಕಮಲಾಕ್ಷ ತನ್ನ ಬ್ಯಾಂಡೇಜು ಕಟ್ಟಿದ ತಲೆಯನ್ನೇ ಅಲ್ಲಾಡಿಸಿ ಹೇಳಿದ: "ನಾನು ಸೇರಿದವನಲ್ಲ ಎಂದರೆ ಬಹುಶಃ ನೀವು ನಂಬುವುದಿಲ್ಲ. ಆದರೆ ನಂಬುವುದಾದರೆ ಹೇಳುತ್ತೇನೆ 'ಸೇರಿದವನಲ್ಲ' ಆದರೆ ಅದು ಯಾವುದೂ ನೀತಿಗಾಗಿ ಅಲ್ಲ. ನನಗೆ ಅದು ಇಷ್ಟವಾಗುವುದಿಲ್ಲ ಅಷ್ಟೆ. ಆದರೆ ಕುಡಿಯುವವರನ್ನು ಮಹಾ ಪಾಪಿಗಳಂತೆಯೂ ನೋಡುವುದಿಲ್ಲ. ಈಗೆಲ್ಲಾ ಅದು ಸರ್ವಸಾಧಾರಣವಾಗಿ ಹೋಗಿದೆ. ಹುಡುಗರಿರಲಿ, ಹುಡುಗಿಯರೇ--"

ಈಗ ಸ್ವಲ್ಪ ಸುಮ್ಮನಾಗುತ್ತಾನೆ ಕಮಲಾಕ್ಷ.

ಬಹುಶಃ ಅಂದುಕೊಂಡನೇನೋ. ಅಪ್ಪನಿಗೆ 'ಓವರ್‌ಡೋಸ್' ಆಗಿ ಹೋಗುತ್ತಿದೆ ಎಂದು! ಸರೋಜಾಕ್ಷರ ತಲೆ, ತಿರುಗಿ ಬಗ್ಗಿಹೋಗುತ್ತಿದೆಯೇಕೆ? ಬ್ಲಡ್ ಪ್ರೆಷರಿನಿಂದಲೇ? ಅಥವಾ ಬೇರೆ ಯಾವುದಾದರೂ ವಿಷಯದ ಭಾರದ ಅದುಮಿಕೆಯಿಂದಲೇ? ತನ್ನ ಮನೆಯಲ್ಲೇ ರಾತ್ರಿ ಹೊತ್ತೇರಿದ ಮೇಲೆ ಯಾವ ನಾಟಕವನ್ನು ನೋಡುತ್ತಾನಲ್ಲಾ! ಅವನು ಇದುವರೆಗೂ ಅದನ್ನು ನೋಡಿಲ್ಲವಲ್ಲ.

ಆದರೆ ಏನಾಶ್ಚರ್ಯ! ಸರೋಜಾಕ್ಷರು ಈ ಕುಡುಕಿ ಸೊಸೆಯನ್ನು ತಿರಸ್ಕಾರ ದೃಷ್ಟಿಯಿಂದ ನೋಡುವುದಿಲ್ಲ. ಮಮತೆಯ, ಕರುಣೆಯ ದೃಷ್ಟಿಯಲ್ಲಿ ನೋಡುತ್ತಾರೆ. ಆದರೂ ಸರೋಜಾಕ್ಷರ ತಲೆ ಬಗ್ಗಿಹೋಯಿತು. ಬಹುಶಃ ಅವರು ಅಂದುಕೊಂಡಿರಬೇಕು. ನಾನೇಕೆ ಈ ವಿಷಯವಾದ ಮಾತನ್ನೆತ್ತಿದೆ ಎಂದು.

ಕಮಲಾಕ್ಷ ಒಳಗೆ ಹೊರಟುಹೋದ.

ಯಾವುದನ್ನೂ ಮನಸ್ಸಿಗೆ ಹಚ್ಚಿಕೊಳ್ಳದ ಹುಡುಗ. ಅವನ ಮನಸ್ಸು ಯಾವ ಕಳವಳದಿಂದಲೂ ಭಾರವಾಗುವುದಿಲ್ಲ. ಅವನು ಮೀನಾಕ್ಷಿಯನ್ನು ಕಾಣದೆ ಅವಳನ್ನು ಹುಡುಕಿಕೊಂಡು ಹೋದ.

ಆದರೆ ಮೀನಾಕ್ಷಿ ಎಲ್ಲಿ?

ಅಮ್ಮನಿಗೆ ಚಿಕ್ಕಮ್ಮಮ್ಮನ ಬರುವಿಕೆಯ ಸುದ್ದಿಯನ್ನು ಕೊಟ್ಟವಳು ಹಾಗೆಯೇ ಮಾಯವಾಗಿದ್ದಳು. ವಿಜಯಾ ಹುಡುಗನನ್ನೇ ಮಾತಿಗೆ ಹಿಡಿದುಕೊಂಡರು.

ಸಂಸಾರದಲ್ಲಿ ನಡೆಯುತ್ತಿರುವ ಘಟನೆಗಳೆಲ್ಲವನ್ನೂ ಬಿಡಿಸಿ, ಬಿಡಿಸಿ ವಿವರಿಸಿ ಹೇಳಿ ಆಕ್ಷೇಪಣೆ ಮಾಡಿದರು. ಸರೋಜಾಕ್ಷರು ವಿಜಯಾಳ ಮೇಲೆ ಹಗೆ ತೀರಿಸಿಕೊಳ್ಳಬೇಕೆಂದೇ ಕೆಲಸವನ್ನು ಬಿಟ್ಟು ಬಿಟ್ಟು ಸಂಸಾರವನ್ನು ಮುಳುಗಿಸಲು ಹೊರಟಿದ್ದಾರೆ--

ಆದರೆ ಕಮಲಾಕ್ಷ ಅದನ್ನು ಒಪ್ಪಿಕೊಳ್ಳಲಿಲ್ಲ.

ಹೇಳಿದ, "ನಿನ್ನ ಈ ತರಹದ ಭಾವನೆಗೆ ಏನೂ ಅರ್ಥವೇ ಇಲ್ಲ. ಗೊತ್ತೇ ಇದೆಯಲ್ಲಾ, ಅಪ್ಪಾ ಯಾವಾಗಲೂ ಈ ತರಹದ ಆದರ್ಶವಾದಿ ಎಂಬುದು. ಯಾವಾಗಲೂ ಒಂದು ವಾಸ್ತವವಲ್ಲದ ಪ್ರಪಂಚದಲ್ಲೇ ಬಾಳಿದರು, ಮತ್ತೇ ನೀವುಗಳು ಯಾರು ತಾನೆ ಇಲ್ಲ? ನೀನು ಇದ್ದೀಯಾ ನಿನ್ನ ಕಲ್ಪನೆಯಿಂದಾದ ಅಲೌಕಿಕ ಸ್ವರ್ಗದಲ್ಲಿ, ಅಪ್ಪ ಇದ್ದಾರೆ ಅವರ ಆದರ್ಶ ಪ್ರಪಂಚದಲ್ಲಿ. ಇನ್ನು ನಾವು, ನಿಮ್ಮ ಭಾಗ್ಯಹೀನರಾದ ಹುಡುಗರು ನಿಮ್ಮನ್ನು ಮೋಹ-ಮುಕ್ತ ಕಣ್ಣಿಂದ, ಕರುಣೆಯಿಂದ ನೋಡುತ್ತಿದ್ದೇವೆ. ಅದಿರಲಿ, ಶ್ರೀಮತಿ ಮೀನಾಕ್ಷಿ ಎಲ್ಲಿ? ಬಂದಷ್ಟು ಹೊತ್ತಿನಿಂದ ಆಸಾಮಿಯ ಪತ್ತೆಯೇ ಇಲ್ಲವಲ್ಲಾ?"

"ಮೀನಾನೇ?"

ವಿಜಯಾ ಕೆಳ ತುಟಿ ಮಡಿಸಿ ಹಂಗಿಸಿ, ತನ್ನ ಚಿಕ್ಕಮಗನ ಹತ್ತಿರ, ಚಿಕ್ಕ ಮಗಳಿಗೆ ರೆಕ್ಕೆ ಚಿಗುರಿರುವ ವಿಷಯವನ್ನೂ, ಶೀಘ್ರದಲ್ಲೇ ಅವಳು ಯಾವನೋ ಒಬ್ಬ ಕೀಳುಜಾತಿಯವನನ್ನು ಮದುವೆ ಮಾಡಿಕೊಂಡುಬಿಡುತ್ತಾಳೆ ಎಂದೂ ಭವಿಷ್ಯವಾಣಿ ನುಡಿದರು.

ಕಮಲಾಕ್ಷ ಅಮ್ಮನ ಮಾತಿಗೆ ಅಷ್ಟೊಂದು ಮುಖ್ಯತ್ವ ಕೊಡುವುದಿಲ್ಲ, ಏಕೆಂದರೆ, ಅವನಿಗೆ ಗೊತ್ತು. ವಿಷಯ ಸಾಸುವೆ ಕಾಳಿನಷ್ಟು ಇರುವುದನ್ನು, ಗುಡ್ಡದಷ್ಟು ಹೆಚ್ಚಿಸಿ ಹೇಳುವುದು ಅಮ್ಮನ ರೋಗ ಎಂದು. ಆದರೂ ಅಣ್ಣ-ಅತ್ತಿಗೆಯ ಹೊಸ ಉನ್ನತಿಯ ವಿವರಣೆ ಕೇಳಿ ಆಶ್ಚರ್ಯವಾಗದಿರಲಿಲ್ಲ. ಏಕೆಂದರೆ ಹರಡುವಂತಹ ಸಮಾಚಾರದಲ್ಲಿ ಸ್ವಲ್ಪವಾದರೂ ವಿಷಯ ಇರಬೇಕಲ್ಲವೆ!

"ಮತ್ತೆ, ಅಕ್ಕಾ, ಅವಳ ಸಮಾಚಾರವೇನು?"

"ಅಕ್ಕಾನೇ?"

ವಿಜಯಾ ಒಂದೇ ತರಹದ ಭಾವನೆಯಿಂದ ಹೇಳಿದರು, "ಅವರೂ ಸಂದರ್ಭ ಒದಗಿದರೆ ಅತ್ತಿಗೆಯ ಪಕ್ಷಕ್ಕೇ ಸೇರಿಕೊಳ್ಳುತ್ತಾರೆ. ಆದರೆ ಜಿಪುಣರಾಗಿರುವುದರಿಂದ ಬಚಾವಾದೆ. ಇಬ್ಬರೂ ಒಂದೇ ತರಹ ಜಿಪುಣರು. ಬರುತ್ತಾರೆ, ಹೋಗುತ್ತಾರೆ ಕೈಯಿಂದ ಒಂದು ಕಾಸಿನ ತಿಂಡಿಯನ್ನೂ ಯಾವಾಗಲೂ ಹಿಡಿದುಕೊಂಡು ಬಂದಿಲ್ಲ."

ಅಮ್ಮನ ಈ ಒಂದೇ ತರಹದ ಮಾತು ಕೇಳಿ ಕಮಲಾಕ್ಷನಿಗೆ ಬೇಜಾರಾಗುತ್ತಿತ್ತು. ಅದಕ್ಕೇ ಅವನು "ಸರಿ ಹೋಗುತ್ತೇನೆ. ಸ್ವಲ್ಪ ಹೊರಗೆ ಸುತ್ತಾಡಿಕೊಂಡು ಬರುತ್ತೇನೆ" ಎಂದು ಎದ್ದ.

"ಈಗ ಎಲ್ಲಿ ಹೊರಗೆ ಹೋಗುತ್ತೀಯ, ತಲೆಗೆ ಪಟ್ಟಿ ಕಟ್ಟಿಕೊಂಡು?"

"ತಲೆಯಲ್ಲಿ ಪಟ್ಟಿಯೇ? ಹುಂ, ಅದರಲ್ಲಿ ನಾಚಿಕೆಯೇನು? ಅದು ವಿಜಯ-ಗೌರವದ ಸಾಕ್ಷಿ!" ಹೇಳಿಬಿಟ್ಟು ಕಮಲಾಕ್ಷ ನಗುನಗುತ್ತಾ ಹೊರಟುಹೋದ.

ಆದರೆ ಕೆಳಗಡೆ ಶಾರದಾ ಪ್ರಸಾದರು ಅವನನ್ನು ಮಾತಿಗೆ ಹಿಡಿದುಕೊಂಡರು.

"ನಿನಗೆ ಇನ್ನೂ ಎಷ್ಟು ವರ್ಷ ಓದು ಬಾಕಿ ಇದೆ?"

"ಇನ್ನೆಷ್ಟು ವರ್ಷ"–ಕಮಲಾಕ್ಷ ನಕ್ಕು ಹೇಳಿದ, "ಇನ್ನೂ ಎರಡು ವರ್ಷ, ಒಂದು ವೇಳೆ ಫೇಯಿಲ್ ಆಗದೇ ಇದ್ದರೆ, ಯಾಕೆ ಕೇಳಿದಿರಿ ಹೇಳಿ ನೋಡೋಣ?"

ಶಾರದಾ ಪ್ರಸಾದ್ ಅಂದರು, "ಆಂ, ಫೇಯಿಲ್ ಏಕೆ ಆಗಬೇಕು?"

"ನಾನು ಕೆಲವು ವೇಳೆ ಹೇಗೆ ಪಾಸಾಗುತ್ತಿದ್ದೇನೆ ಎಂದು ಆಶ್ಚರ್ಯ ಪಡುತ್ತೇನೆ, ವರ್ಷ ಪೂರ್ತಿ ಕ್ಲಾಸಿಗೆ ಚಕ್ಕರ್ರೇ!"

ಶಾರದಾ ಗಂಭೀರವಾಗಿ ಹೇಳಿದರು, "ಅಪ್ಪನು ತಲೆಯ ಬೆವರು ಕಾಲ ಮೇಲೆ ಸುರಿಸಿ ಸಂಪಾದಿಸಿದ ಹಣ. ಅದನ್ನು ಹೀಗೆ ದಂಡ ಮಾಡುವುದೇ?"

ಕಮಲಾಕ್ಷನೂ ಗಂಭೀರವಾಗಿ ಕೇಳಿದ, "ಹಠಾತ್ತನೆ ಈ ಪ್ರಶ್ನೆ ನಿಮ್ಮ ತಲೆಯಲ್ಲಿ ಉದಯವಾಯಿತೇಕೆ?"

"ಆಗಲು ಕಾರಣ ಇದೆ. ನಿಮ್ಮ ಅಪ್ಪ ಕಾಲೇಜು ಬಿಟ್ಟು ಬಿಟ್ಟರು. ನಿನಗೆ ಗೊತ್ತಿಲ್ಲವೇನೋ!"

"ಗೊತ್ತಿರಲಿಲ್ಲ. ಅಮ್ಮನ ಹತ್ತಿರ ಕೇಳಿದೆ."

"ಮತ್ತೆ ಈಗ ಸಂಸಾರದ ವಿಷಯವಾಗಿ ಎಲ್ಲರೂ ಸ್ವಲ್ಪ ಯೋಚಿಸಬೇಕು." ಅವರಲ್ಲಿ ಯಾವಾಗಲೂ ಇಲ್ಲದ ಒಂದು ಗಾಂಭೀರ್ಯವನ್ನು ತಂದು ಕೊಂಡು ಹೇಳಿದರು, "ನೀಲು ಅಂತೂ ಖಡಾಖಂಡಿತವಾಗಿ ಜವಾಬು ಕೊಟ್ಟುಬಿಟ್ಟ."

ಕಮಲಾಕ್ಷ ಮೆಲ್ಲಗೆ ಹೇಳಿದ, "ಅಪ್ಪಾ, ಈ ಹುಚ್ಚುತನವನ್ನು ಬಿಡಬೇಕು. ತಿರುಗ ಹೋಗಿ ಕೆಲಸಕ್ಕೆ ಜಾಯಿನ್ ಮಾಡಿಕೋಬೇಕು.

"ಬಿಟ್ಟುಬಿಟ್ಟು, ತಿರುಗ?"

ಶಾರದಾ ಪ್ರಸಾದ್ ಅವಾಕ್ಕಾಗಿ ನೋಡುತ್ತಿದ್ದರು.

ಕಮಲಾಕ್ಷನಿಗೆ ಅವರ ಆಶ್ಚರ್ಯ ಅರ್ಥವಾಗುವುದಿಲ್ಲ. ಅವನು ಹೇಳಿದ: "ಅದೇನೂ ಅಂತಹ ಅಸಂಭವವಾದದ್ದಲ್ಲ. ವಿವರವಾಗಿ ಒಂದು ಕಾಗದ ಬರೆದರೆ ಆಯಿತು. ಹೇಳಿದರೆ ಆಯಿತು. ಹಠಾತ್ತಾಗಿ ಒಂದು ಕಳವಳದಲ್ಲಿ ಹಾಗೆ ಮಾಡಿದ್ದೆ–"

ಶಾರದಾವಿನ ಶಾಂತಸ್ವರ ಹೇಳಿತು, "ನಿಮ್ಮ ಅಪ್ಪನ ವಿಷಯ ಮಾತಾಡುತ್ತಿರುವುದು, ಕಮಲ್!"

ಕಮಲಾಕ್ಷ ಚಂಚಲಗೊಳಗಾಗುತ್ತಾನೆ, ಹೇಳುತ್ತಾನೆ, "ಅಪ್ಪಾ ಯಾವಾಗಲೂ ವಾಸ್ತವವನ್ನು ಲೆಕ್ಕಿಸದ ಬುದ್ಧಿಯಿಂದಲೇ ನಡೆದುಕೊಂಡು ಬಂದಿದ್ದಾರೆ. ಬೇರೆ ಕಡೆಗಳಲ್ಲೆಲ್ಲಾ ಟೀಚರುಗಳು ಒದೆ ತಿಂದು, ತಲೆ ಬಗ್ಗಿಸಿಕೊಂಡು ಬಂದು ಕೆಲಸ ಮಾಡುತ್ತಿದ್ದಾರೆ, ಮತ್ತೆ ಅಪ್ಪಾ ಸ್ವಲ್ಪ ಘೆರಾವ್ ಆಗಿದ್ದಕ್ಕೇ–– ಆಶ್ಚರ್ಯ! ಈ ಕಾಲದಲ್ಲಿ ಘೆರಾವ್ ಆಗದೇ ಇರುವವರು ಯಾರು? ಸರಿ, ನಾನು ಸ್ವಲ್ಪ ಹೊರಗೆ ಹೋಗಿ ಬರುತ್ತೇನೆ."

ಕಮಲಾಕ್ಷ ಹೊರಟು ಹೋದ, ಹಿಂದುಗಡೆಯ ಕಣ್ಣುಗಳ ಕಡೆ ತಿರುಗಿ ನೋಡಲಿಲ್ಲ.

ನೋಡಲಿಲ್ಲವಾದುದರಿಂದ ಒಳ್ಳೆಯದಾಯಿತು. ನೋಡಿದರೆ ಚಕಿತನಾಗುತ್ತಿದ್ದ. ಶಾರದಾ ಪ್ರಸಾದ್ ಅನ್ನುವ ಈ ಮನುಷ್ಯನ ಕಣ್ಣಲ್ಲಿ ಇಷ್ಟೊಂದು ಬೆಂಕಿ ಇರಬಹುದೆಂದು ಅವನು ಎಣಿಸಿಯೇ ಇರಲಾರ.

* * *

ಮತ್ತೆ ಯಾವ ಕಣ್ಣುಗಳು ಯಾವಾಗಲೂ ಜ್ವಲಿಸುತ್ತಿತ್ತೋ ಆ ಕಣ್ಣುಗಳು ಆರಿ ಹೋದ ಇದ್ದಲಿನಂತೆ ಕಾಂತಿಯಿಲ್ಲದಂತೆ ಕಾಣುತ್ತೋ ಎಂಬುದನ್ನು ಯಾರೂ ಎಣಿಸಲಾರರು!

ಆದರೆ ಹಾಗೆಯೇ ತೋರುತ್ತೆ.

ದಿವಾಕರನ ಕಣ್ಣುಗಳು ಆರಿ ಹೋದ ಇದ್ದಲಿನಂತಾಗಿಯೇನೋ!

"ನಾಳೆ ಮಧ್ಯಾಹ್ನದ ನಾಲ್ಕು ಗಂಟೆಯ ಗಾಡಿಯಲ್ಲಿ ಹೋಗಲು ಬರುತ್ತೀಯಲ್ಲವೇ ಮೀನಾಕ್ಷಿ?"

ಮೀನಾಕ್ಷಿ ಸ್ವಲ್ಪ ಹಿಂಜರಿಯುತ್ತಾ, "ಸರಿಯೇ, ಆದರೆ ಬೆಳಗಿನ ಯಾವುದಾದರೂ ಗಾಡಿ ಹಿಡಿಯೋಣ, ಆಗ ಸಾಯಂಕಾಲದ ಗಾಡಿಯಲ್ಲಿ ಹಿಂತಿರುಗಬಹುದು ಎಂದಳು.

"ಅಂತಹ ಯಾವುದೂ ಗಾಡಿ ಇಲ್ಲ ಮೀನಾಕ್ಷಿ. ಯಾವ ತರಹ ಹೋದರೂ ಒಂದು ರಾತ್ರಿ ನಿಲ್ಲಲೇಬೇಕಾಗುತ್ತೆ. ಆಮೇಲೆ ದಿವಾಕರ ಅವಳಿಗೆ ವಿವರಿಸಲಾರಂಭಿಸಿದ. "ಬರೀ ಬೆಳಗಿನ ಬೆಳಕಿನಲ್ಲಿ ನೋಡಿದರೆ ಯಥಾರ್ಥವಾದ ದೈನ್ಯ, ಹೀನ ದೆಶೆಯನ್ನೂ ಹಳ್ಳಿಯ ಚಹರೆಯನ್ನು ನೋಡುವುದಕ್ಕಾಗುವುದಿಲ್ಲ. ಅದಕ್ಕೋಸ್ಕರವಾದರೂ ರಾತ್ರಿ

ನಿಲ್ಲಬೇಕು. ನೋಡಬೇಕು ಕತ್ತಲೆ ಅಂದರೇನು, ಅಸಹಾಯತೆ ಅಂದರೆ ಏನು ಎಂಬುದನ್ನೂ ಹೇಗಿದೆ ನಮ್ಮ ದೇಶ ಎಂಬುದನ್ನೂ ನೋಡಬಹುದು."

ಆದರೆ ಇಷ್ಟು ದಿನವೂ ದಿವಾಕರ ಬೇರೆ ತರಹವೇ ಹೇಳಿಕೊಂಡು ಬಂದಿದ್ದಾನೆ.

ಹೇಳಿದ್ದೇನೋ ಉಂಟು. ಆದರೆ ಏಕೆ ಹಾಗೆ ಹೇಳಿದ?

ದ್ವೇಷ ಭಾವನೆಯಿಂದಾಗಿ.

ಯೋಚಿಸಿದ್ದ ಮನಸ್ಸಿಗೆ ಮುಕ್ತಿ ಸಿಕ್ಕರೆ, ಸಂದರ್ಭಕ್ಕೂ ಮುಕ್ತಿ ಬರುತ್ತೆ ಎಂದು ಆದರೆ ಅದು ತಪ್ಪು ಎಂದು ಈಗ ಗೊತ್ತಾಯಿತು.

ಎಷ್ಟೋ ಮಾತುಗಳಾಯಿತು.

ಎಷ್ಟೋ ಬೊಗಳೆ ಬಿಟ್ಟಾಯಿತು.

ಕಡೆಗೆ ಮೀನಾಕ್ಷಿ ಒಪ್ಪಿಕೊಂಡಳು. "ಮನೆಯಲ್ಲಿ ಏನೆಂದು ಹೇಳಲಿ"

"ಧೈರ್ಯವಾಗಿ ಹೇಳು. ಒಂದು ಸಹಪಾಠಿಯ ಗ್ರಾಮ ನೋಡಲು ಹೋಗುತ್ತೇನೆ, ತುಂಬಾ ದಿನಗಳಿಂದ ಹೇಳುತ್ತಿದ್ದುದರಿಂದ ಹೋಗುತ್ತೇನೆ" ಎಂದು.

*****

ಅಧ್ಯಾಯ ಏಳು

ಮಾತು ಕೊಟ್ಟು ಬಂದಳು.

ಆದರೆ ಮನಸ್ಸಿನ ಮೇಲೆ ಒಂದು ಚಪ್ಪಡಿಯನ್ನು ಹೇರಿದಂತಹ ಭಾರ. ಮೆಲ್ಲ ಮೆಲ್ಲನೆ ಮನೆಯೊಳಗೆ ಬರುತ್ತಿದ್ದಳು. ಎದುರಿಗೆ ಕಮಲಾಕ್ಷನನ್ನು ನೋಡಿ ಕೈಗೆ ಸ್ವರ್ಗ ಸಿಕ್ಕಿದಂತಾಯಿತು.

"ಚಿಕ್ಕಣ್ಣಾ, ನೀನು ಯಾವಾಗ ಬಂದೆ? ಏನಿದು ಹಠಾತ್ತಾಗಿ ಬಂದೆ? ತಲೆಯಲ್ಲಿ ಏಕೆ ಬ್ಯಾಂಡೇಜು? ಏನಾಯಿತು?"

ಒಂದು ಹೊರೆ ಪ್ರಶ್ನೆಗಳು.

ಕಮಲಾಕ್ಷ ಆದಷ್ಟು ಕ್ಲುಪ್ತವಾಗಿ ಉತ್ತರ ಕೊಟ್ಟು ಕೇಳಿದ: "ನಿನ್ನದೇನು ಸಮಾಚಾರ? ಶ್ರೀಮತಿ ಮೀನಾಕ್ಷಿದೇವಿ? ಕೇಳಿದೆ, ನಿನಗೇನೋ ರೆಕ್ಕೆ ಬಂದಿದೆಯಂತೆ, ಹಾರುತ್ತಿದ್ದೀಯಂತೆ ಫಕ್ಕನೆ ಒಂದು ದಿನ ಕಾಡಿಗೆ ದಾರಿ ಹೊರಟುಹೋಗುತ್ತೀಯೋ? ಹೇಗೆ?"

"ಎಲ್ಲಾ ವಿಷಯಗಳನ್ನೂ ಆಗಲೇ ಕೇಳಿ ಆಯಿತಾ?" ಮೀನಾಕ್ಷಿಗೆ ಮನಸ್ಸಿನ ಮೇಲಿನ ಭಾರ ಸ್ವಲ್ಪ ಇಳಿದಂತೆ ಆಯಿತು, "ಹೋಗಲಿ, ಬದುಕಿದೆ. ನನ್ನ ಶ್ರಮ ಸ್ವಲ್ಪ ಕಡಿಮೆ ಆದ ಹಾಗಾಯಿತು" ಎಂದಳು.

ಆಮೇಲ ಮೀನಾಕ್ಷಿ ತನ್ನ ಸಮಸ್ಯೆಯ ಬಗ್ಗೆ ಹೇಳಿದಳು.

ಆದರೆ ಕಮಲಾಕ್ಷ ಒಂದು ಉಸುರಿನಲ್ಲಿ ಊದಿ ಅವಳ ಮನಸ್ಸಿನ ಮೇಲಿನ ಕಲ್ಲನ್ನು ಹಾರಿಸಿದ "ಇಷ್ಟೇ ತಾನೇ? ಇದಕ್ಕೋಸ್ಕರ ಇಷ್ಟು ಯೋಚನೆಯೇ? ಹೂಂ, ನೀವುಗಳು ಈ ಯುಗದಲ್ಲಿ ಹುಟ್ಟಿದ್ದೇ ತಪ್ಪು. ನೀನೂ ಆ ವಿಜಯಾದೇವಿಯ ಸಮಕಾಲೀನ ವ್ಯಕ್ತಿಯೇ! ಒಂದು ದಿನಕ್ಕೋಸ್ಕರ ಸಹಪಾಠಿಯ ಊರು ನೋಡಲು ಹೋಗುತ್ತೀಯೆ. ಅದಕ್ಕೆ ಇಷ್ಟೊಂದು ಕಳವಳವೇ, ಯೋಚನೆಯೇ?"

"ಆಹಾ, ನಾನು ನನಗೋಸ್ಕರ ಏನೂ––ಮೀನಾಕ್ಷಿ ಘಂಟಾಘೋಷದಿಂದ ಹೇಳಿದಳು: "ನಮ್ಮ ಸಮಾಚಾರ ಹೇಗೆ ಅನ್ನುವುದು ಗೊತ್ತಿಲ್ಲವೇನೋ? ಪರ್‌ಮಿಷನ್ ಸಿಗಬೇಕಾದರೆ" –ಎಂದು ಹೇಳಿದಳು. ಆದರೆ ಬಾಧಕವಾದ ಭಾವನೆ ಇರುವುದು ಅವಳ ಮನಸ್ಸಿನಲ್ಲೇ, ಅದನ್ನು ಅವಳು ಹೇಳಲಿಲ್ಲ.

"ಅಲ್ಲೇ ಇರುವುದು ತಪ್ಪು" ಕಮಲಾಕ್ಷ ಹೇಳಿದ, "ಅದು ಸಿಗಬೇಕೆಂದು ಯೋಚಿಸಿದೆ. ನಿನಗೆ ತೋರಿದ ಹಾಗೆ ಕೆಲಸ ಮಾಡಿಕೊಂಡು ಹೋಗು. ಆಗ ಎಲ್ಲವೂ ಸುಲಭವಾಗಿ ಹೋಗುತ್ತೆ. ಒಂದು ದಿನ ಮನೆಯ ಹೊರಗೆ ಹೋಗಿ ಬರಲಾಗದಂತಹ ಚಿಕ್ಕ ಹುಡುಗಿಯೇನಲ್ಲ ನೀನು. ಇದೇನು ಹತ್ತೊಂಬತ್ತನೇಯ ಶತಮಾನವೇ?"

ಮೀನಾಕ್ಷಿಗೆ ಸ್ವಲ್ಪ ಸಮಾಧಾನವಾಗುತ್ತೆ. ಆದರೆ ಆಶ್ಚರ್ಯವೂ ಆಗುತ್ತೆ ಎಷ್ಟೋ ದಿನಗಳಿಂದ ಕಮಲಾಕ್ಷ ಮನೆಗೆ ಬಂದಿಲ್ಲ. ಈ ನಡುವೆ ಎಷ್ಟೊಂದು ಅದ್ಭುತವಾದ ಬದಲಾವಣೆ ಅವನಲ್ಲಿ! ಕಮಲಾಕ್ಷ ಒಂದು ಕಾಲದಲ್ಲಿ ಹೇಳುತ್ತಿದ್ದ. "ಅರೆ, ಸ್ವಲ್ಪ ಹೇಳಿದಂತೆ ಕೇಳುವ ಭಾವನೆ, ಸ್ವಲ್ಪ ಒಪ್ಪಿಕೊಂಡಂತೆ ನಾಟಕ, ಇದೆಲ್ಲಾ ಮಾಡುವುದರಿಂದ ವಯಸ್ಸಾದ ಮನುಷ್ಯನನ್ನೂ, ಪುಣ್ಯಶೀಲೆ ಹೆಂಗಸನ್ನೂ ತೃಪ್ತಿಪಡಿಸಬಹುದಾದರೆ, ಮಾಡುವುದರಲ್ಲಿ, ನಷ್ಟವೇನು? ನಿಜವಾಗಿಯೂ ಖುಷಾಮತ್ತು ಮಾಡುತ್ತಿಲ್ಲವಲ್ಲಾ, ಸ್ವಲ್ಪ ತಾಜಾ ಮಾಡುತ್ತೀಯಾ, ಅಷ್ಟೇ ತಾನೇ! ಸಮಸ್ಯೆ ಬಗೆ ಹರಿಯಿತು. ಕೆಲಸ ನಡೆಯಬೇಕಾದುದು ಮುಖ್ಯ. ಅದು ದೊಣ್ಣೆಯಿಂದ ಹೊಡೆದೂ ಸಾಧಿಸಬಹುದು. ತಾಜಾ ಮಾಡಿಯೂ ಸಾಧಿಸಬಹುದು. ನನಗೆ ತೋರುತ್ತೆ, ತಾಜಾ ಮಾಡುವುದು ಸುಲಭ ಎಂದು. ಒಂದು ಯಂತ್ರವಾದರೂ ಅದು ಕೀಕೀ ಎಂದರೆ ಎಣ್ಣೆ ಹಾಕಬೇಕಾಗುತ್ತೆ, ಮತ್ತೆ ಇವರು ಮನುಷ್ಯರಲ್ಲವೇ? ನೋಡುತ್ತಿರು. ಸಮಯಕ್ಕೆ ಸರಿಯಾಗಿ ಎಣ್ಣೆ ಹಾಕುತ್ತಿದ್ದರೆ ಎಲ್ಲಾ ಶಾಂತವಾಗಿರುತ್ತೆ."

ಆದರೆ ಈಗಿನ ಕಮಲಾಕ್ಷ ಹೊಸ ಮನುಷ್ಯ.

ಇವನ ಭಾಷೆಯಲ್ಲಿ ದಿವಾಕರನ ಮಾತಿನ ಸ್ವರ ತೋರುತ್ತೆ.

ಹಳೆಯ ದಿವಾಕರನದು.

ಇವನು ಹೇಳಲೆಳಸುತ್ತಾನೆ, ದೊಡ್ಡವಳಾಗಿಯೂ ನೀನು ಚಿಕ್ಕವಳ ಪಾತ್ರವನ್ನೇನೂ ಅಭಿನಯಿಸಬೇಕಾಗಿಲ್ಲ. ನೀನು ನಿನ್ನ ಅಧೀನಳು. ಯಾರ ಕೈಗೊಂಬೆಯೂ ಅಲ್ಲ.

ಅಮ್ಮಾ, ಅಪ್ಪಾ ಮರ್ಯಾದೆಗೆ ಪಾತ್ರರು, ಅಹುದು. ಆದರೆ ಎಷ್ಟು ಹೊತ್ತು ಅವರುಗಳು ತಮ್ಮನ್ನು ಮರ್ಯಾದೆಗೆ ಅರ್ಹರಾಗಿಟ್ಟುಕೊಂಡಿರುತ್ತಾರೋ, ಅದುವರೆಗೆಯೇ!

ಒಂದು ಕಾಲದಲ್ಲಿ ಅವರುಗಳು ಭಾಗ್ಯಹೀನರಾದ ನಮ್ಮನ್ನು ಈ ಪ್ರಪಂಚಕ್ಕೆ ತಂದರೆಂದು ಅವರನ್ನು ಕೊಂಡಾಡಬೇಕೆ? ಯಾರು ಅತ್ತರು ಅವರು ತರಬೇಕೆಂದು?

ಯಾರೂ ಇಲ್ಲ.

ಅವರು ತಮ್ಮ ಇಷ್ಟಾರ್ಥ ಸಾಧಿಸಲು ಏನು ಮಾಡಿದರೋ, ನಾವು ಅದರ ಅವಾಂಛಿತ ಆಕಸ್ಮಿಕ ಫಲ ಮಾತ್ರವೇ!

ಕಮಲಾಕ್ಷನ ಹೊಸ ಮತವಾದವನ್ನು ನೋಡಿ ಅವಾಕ್ಕಾಗುತ್ತಾಳೆ ಮೀನಾಕ್ಷಿ. ಸ್ವಲ್ಪ ಸ್ವಲ್ಪವಾಗಿ ಅವಳ ಮನಸ್ಸು ಧೈರ್ಯಗೊಳ್ಳುತ್ತೆ ಅಂದುಕೊಳ್ಳುತ್ತಾಳೆ. ನಿಜವಾಗಲೂ ಒಂದು ತುಚ್ಛವಾದ ವಿಷಯಕ್ಕೆ, ಅದಕ್ಕೆ ಸಲ್ಲದ ಬೆಲೆಯನ್ನು ಕೊಟ್ಟು ಕಳವಳಗೊಳ್ಳುತ್ತಿದ್ದೇನೆ ನಾನು. ಅಂತಹ ದೊಡ್ಡದೇ ವಿಷಯ?!

ದಿವಾಕರನೊಂದಿಗೆ ಒಂದು ಟ್ರೇಯಿನಿನಲ್ಲಿ ಹತ್ತಿ ಕೂತುಕೊಳ್ಳುವುದು, ಇಳಿಯುವುದು, ಅವನ ಅಮ್ಮನ ಮುಂದೆ ಹೋಗಿ ನಿಲ್ಲುವುದು ಆಮೇಲೆ ದಾರಿದ್ರ್ಯದ ಆಂತರಿಕತೆಯ ಆತಿಥ್ಯವನ್ನು ಸಂತೋಷದಿಂದ ಸ್ವೀಕರಿಸಿ, ಒಂದು ರಾತ್ರಿ ಅವರ ಮನೆಯಲ್ಲಿದ್ದು, ಬೆಳಿಗ್ಗೆ

ಹೊರಟುಬರುವುದು. ಇಷ್ಟಕ್ಕೆ ಏನು ಅಷ್ಟೊಂದು ಯೋಚನೆ?

"ಚಿಕ್ಕಣ್ಣಾ, ನೀನು ಕೆಲದಿನ ಇಲ್ಲಿ ಇರುತ್ತೀಯಲ್ಲವೇ?"

"ಅದೇ ಯೋಚನೆ, ಕಡೆಯ ಪಕ್ಷ ತಲೆಯ ಗಾಯ ಸ್ವಲ್ಪ ವಾಸಿಯಾಗುವವರೆಗೆ ಇರುತ್ತೇನೆ."

"ಸರಿ ಮತ್ತೆ, ಮನೆಯ ಯಜಮಾನ ಅಥವಾ ಯಜಮಾನಿ ಯಾರಾದರೂ ಅಡ್ಡಿ ಮಾಡಿದರೆ, ನೀನು ಸ್ವಲ್ಪ 'ಮ್ಯಾನೇಜ್' ಮಾಡಿಬಿಡು" ಎಂದು ಹೇಳಿದ ಮೀನಾಕ್ಷಿಯ ಮನಸ್ಸಿನ ಭಾರ ಇಳಿಯುತ್ತೆ. ಅವಳು ಹೊರಡಲು ಸಿದ್ಧಳಾಗುತ್ತಾಳೆ.

* * *

ಸಾಯಂಕಾಲ ಆಫೀಸಿನಿಂದ ಬರುತ್ತಾನೆ ನೀಲಾಕ್ಷ, ಜೊತೆಯಲ್ಲಿ ಹೆಂಡತಿ, ಮಾವನ ಮನೆಯಿಂದ ಕರೆದುಕೊಂಡು ಬಂದಿದ್ದಾನೆ.

ಮಧ್ಯೆ ಮಧ್ಯೆ ಈ ಏರ್ಪಾಟು ನಡೆಯುತ್ತೆ.

ನೀಲಾಕ್ಷ ಆಫೀಸಿಗೆ ಹೋಗುವಾಗ ಹೆಂಡತಿಯನ್ನು ಅವಳ ತಾಯಿಯ ಮನೆಯಲ್ಲಿ ಬಿಟ್ಟುಬಿಟ್ಟು ಹೋಗುತ್ತಾನೆ. ಸುನಂದಾ ಅಲ್ಲೇ ಹುಡುಗನನ್ನು ಸ್ಕೂಲಿನಿಂದ ಬಂದ ಮೇಲೆ ನೋಡಿಕೊಳ್ಳುತ್ತಾಳೆ. ಸಾಯಂಕಾಲ ಹೆಂಡತಿಯನ್ನು ಕರೆದುಕೊಂಡು ಹೋಗಿ. ಸುತ್ತಾಡಿ ಬಂದ ಮೇಲೆ ಹುಡುಗನನ್ನು ಕರೆದುಕೊಂಡು ಮನೆಗೆ ಬರುತ್ತಾರೆ.

ವಿಜಯಾ ಚಿಕ್ಕ ಮಗನ ಹತ್ತಿರ, ಮೊಮ್ಮಗನನ್ನು ನೋಡಬೇಕಾದರೆ ಅವನ ಸ್ಕೂಲಿಗೆ, ಅಥವಾ ಅವನ ಮಾವನ ಮನೆಗೆ ಹೋಗಿ ನೋಡಬೇಕು ಅಂದಿದ್ದು ಸರಿಯೇ.

ಈ ಏರ್ಪಾಟು ಮುಕ್ಕಾಲು ಪಾಲು ಹೀಗೆಯೇ ನಡೆಯುತ್ತಿದೆ.

ಹಿಂದೆಲ್ಲಾ ಸುನಂದಾಗೆ ತಾಯಿ ಮನೆ ಪ್ರೀತಿ ಇಷ್ಟು ಇರಲಿಲ್ಲ. ಈಗ ಹೆಚ್ಚಾಗುತ್ತಿದೆ. ಅವರ ಅಮ್ಮನಿಗೂ ಮಾತೃಸ್ನೇಹ ಜಾಸ್ತಿಯಾಗುತ್ತಿದೆ. ಒಂದು ದಿನ ಮಗಳನ್ನು ನೋಡದಿದ್ದರೆ ಕೇಳುತ್ತಾರಂತೆ, ಮುಂಚೆಯೆಲ್ಲಾ ಹೀಗಿರಲಿಲ್ಲ.

ಕಮಲಾಕ್ಷನನ್ನು ನೋಡಿ ಸುನಂದಾಗೆ ಸಂತೋಷವಾಗುತ್ತೆ. ಆದರೆ ಕಮಲಾಕ್ಷನಿಗೆ ಹಾಗನಿಸುವುದಿಲ್ಲ. ಪಿಚ್ಚುವಿನ ಅನುಪಸ್ಥಿತಿ ಅವನನ್ನು ಬಹಳ ಕಾಡುತ್ತೆ.

ಅವನು ತಾನೂ ಬಹಳ ಬದಲಾಯಿಸಿದ್ದಾನೆ. ಅವನ ಹೃದ್-ಯಂತ್ರದಲ್ಲಿ ಈಗ ಪೂರ್ತಿ ಹೊಸ ಸ್ವರ ಅಥವಾ ಅಪ-ಸ್ವರ. ಆದರೆ ಮನೆಯಲ್ಲಿನ ಸ್ವರ ಬದಲಾವಣೆ ಅವನಿಗೆ ಸ್ವಲ್ಪವೂ ಹಿಡಿಸಲಿಲ್ಲ.

ತೋರುತ್ತೆ, ಅವನು ಏನನ್ನೋ ಇಟ್ಟುಬಿಟ್ಟು ಹೋಗಿದ್ದುದು, ಅವನು ಇಲ್ಲದಿರುವಾಗ ಹಾಳಾಗಿಹೋಗಿದೆ, ಎಂಬಂತಿದೆ!

ಬಹುಶಃ ಹೀಗೆಯೇ ಆಗುತ್ತೇನೋ.

ಮನುಷ್ಯ ಪ್ರತಿ ನಿತ್ಯವೂ ಬದಲಾವಣೆ ಹೊಂದುತ್ತಿರುತ್ತಾನೆ. ಆದರೆ ಆಶಿಸುತ್ತಾನೆ. ತನ್ನ ಸುತ್ತಮುತ್ತಿನ ವಾತಾವರಣ ಒಂದೇ ತರಹ ಇರಬೇಕು ಎಂದು! ತಾನು ಅದಕ್ಕೆ ಬೆಲೆ

ಕೊಡುತ್ತಾನೋ ಬಿಡುತ್ತಾನೋ, ಆದರೆ ಅದು ಹಾಗೆಯೇ ಇರಬೇಕೆಂದು ಆಶಿಸುತ್ತಾನೆ. ಕಮಲಾಕ್ಷ ಸರಿಯಾಗಿ ಮಾತೇ ಆಡಲಿಲ್ಲ.

ಅವನು ತನ್ನ ಕೋಣೆಗೆ ಹೋಗಿ ಹೊತ್ತಿಗೆ ಮುಂಚೆಯೇ ಮಲಗಿಬಿಟ್ಟ.

ಅವನು ಮುಂಚೆಯೇ ಕೈಮುಗಿದು ಹೇಳಿಬಿಟ್ಟಿದ್ದ, "ತಲೆಯ ಬ್ಯಾಂಡೇಜಿನ ಪ್ರಸಂಗವನ್ನು ಬಿಟ್ಟು ಬೇರೆ ಮಾತು ಕೇಳಿ" ಎಂದು.

ಮಾರನೆಯ ದಿನ, ಅಂದು ಸುನಂದಾ ಗಂಡನ ಹತ್ತಿರ, "ನನಗೆ ಈವತ್ತು ಹೊರಗೆ ಬರಲು ಇಷ್ಟವಿಲ್ಲ" ಎಂದಳು.

"ಯಾಕೆ, ಕಮಲಾಕ್ಷ ಬಾಬುವಿನ ಆಪ್ಯಾಯನಕ್ಕಾಗಿಯೇ? ಬಾಬು ಸರಿಯಾಗಿ ಮಾತೇ ಆಡಲಿಲ್ಲವಲ್ಲಾ?" ವ್ಯಂಗ್ಯದಿಂದ ಕೇಳಿದ ನೀಲಾಕ್ಷ.

ಸುನಂದಾ ಹುಬ್ಬು ಗಂಟಿಕ್ಕಿದಳು.

ತಟ್ಟನೆ ಹಿಂತಿರುಗಿ ಕೇಳಿದಳು, "ನಿಮಗೇಕೆ ಈ ತರಹ ಒಂದು ವಿಚಿತ್ರ ಯೋಚನೆ ಬಂತು? ನಾನು ನಿಮ್ಮ ತಮ್ಮನ ಆಪ್ಯಾಯನಕ್ಕಾಗಿ ನಿಲುತ್ತೇನೆ ಎಂದು?"

"ಮತ್ತೆ ಸುಮ್ಮಸುಮ್ಮನೆ ಯಾಕೆ ಮನೆಯಲ್ಲಿ ಕುಳಿತಿರಬೇಕು?"

"ಪ್ರತಿಯೊಬ್ಬರಿಗೂ, ಇಷ್ಟ ಇಷ್ಟವಿಲ್ಲದಿರುವಿಕೆ, ಇರುವುದಿಲ್ಲವೇ?"

ನೀಲಾಕ್ಷ ಹಾಗೂ ಹೆಂಡತಿಯನ್ನು ಕಾಡಿ ಬೇಡಿ ನೋಡಿ ಆಮೇಲೆ ಬೇಜಾರಾಗಿ ಹೊರಟುಹೋದ. ಸುನಂದಾ ಈಕಡೆಯ ನೆರಳನ್ನೂ ತುಳಿಯಲಿಲ್ಲ. ಕತ್ತಲಾದ ವರಾಂಡಾದಲ್ಲಿ ಸುಮ್ಮನೆ ನಿಂತಿದ್ದಳು. ಅವಳ ಮನಸ್ಸಿನಲ್ಲಿ ಒಂದು ಒಡಕಲು ಗ್ರಾಮಫೋನ್ ರೆಕಾರ್ಡು ಬಾರಿಸುತ್ತಿತ್ತು. ಅದರ ಧ್ವನಿ ಹೇಳುತ್ತಿತ್ತು. 'ಈ ಮನೆಯಲ್ಲಿ ಅವನನ್ನೇ ಎಲ್ಲರಿಗಿಂತ ಹೆಚ್ಚು ಪ್ರೀತಿಯಿಂದ ನೋಡುತ್ತಿದ್ದೆ ನಾನು. ಅಂದರೆ ನಾನು ಯಾವಾಗ ನಿಜವಾದ ನಾನಾಗಿದ್ದೆನೋ ಆಗ ಮತ್ತು ಅವನೂ ನನ್ನನ್ನು ಎಲ್ಲರಿಗಿಂತ ಪ್ರೀತಿಯ ಕಣ್ಣಿನಿಂದ ನೋಡುತ್ತಿದ್ದ. ಈಗ ನನ್ನನ್ನು ಅಸಡ್ಡೆಯಿಂದ ನೋಡುತ್ತಾನೆ. ನೋಡುತ್ತಾನೆ. ಎಂಬುದನ್ನು ಕಂಡೇ ಕಂಡೆನಲ್ಲಾ.

ಕೇವಲ ಅವನಿಗೆ ಮಾತ್ರವಲ್ಲ. ನನ್ನ ಎಲ್ಲಾ ಹಳೆಯ ಪರಿಚಿತ ಜಗತ್ತಿನ ಕಣ್ಣಿಗೆ ನಾನು ತಿರಸ್ಕಾರಕ್ಕೆ ಪಾತ್ರಳು ಕಾರಣ ನಾನು. ಆ ಹಳೆಯ 'ನನ್ನನ್ನು' ಭಸ್ಮಮಾಡಿ ಆ ಭಸ್ಮದ ತಿಲಕವನ್ನಿಟ್ಟು ಕೊಂಡು ಕುಣಿಯುತ್ತಿದ್ದೇನೆ.

ಅದರಿಂದ ನನಗೆ ಏನು ಸಿಕ್ಕಿದೆ?

ಸಿಕ್ಕಿದೆ ಮೆಹರಾ ಸಾಹೇಬರ ಮುಗ್ಧ ದೃಷ್ಟಿ ಸಿಕ್ಕಿದೆ ಶಕುಂತಲಾ ರಾಯ್‌ಳ ಹೊಟ್ಟೆಕಿಚ್ಚು. ಇನ್ನೂ ಸಿಕ್ಕಿದೆ ಪ್ರಪಂಚವನ್ನು ತುಚ್ಛವಾಗಿ ನೋಡುವ ಯೋಗ್ಯತೆ.

ಈಗ ನನ್ನ ಗಂಡನನ್ನು ಸುಲಭವಾಗಿ ತುಚ್ಛವಾಗಿಸಿ ಮಾತಾಡಬಲ್ಲೆ. ವಿಜಯಾ ದೇವಿಯನ್ನು ಅಸಡ್ಡೆಯಿಂದ ಮೂಲೆಗೊತ್ತಿ ಮಾತಾಡ ಬಲ್ಲೆ. ಬಲ್ಲೆ ಇನ್ನೂ ಏನೇನನ್ನೋ!

ಕಾರಣ ಈ ಮನೆಯ ಆವರಣ ರೇಖೆಯಿಂದ ಹೊರಗೆ ಬಂದು. ನನಗಿರುವ ಬೆಲೆಯನ್ನು ಕಂಡುಕೊಂಡಿದ್ದೇನೆ.

ಈ ಬರುವಿಕೆಯ ಖಾತೆಯಲ್ಲಿ ಜಮಾ ಹೆಚ್ಚಿದೆ.

ಆದರೆ ಏನು ಸುಖ?

ಹೋಗಲಿ, ಶಾಂತಿಯೋ?

ಇನ್ನೂ ಅಗ್ಗವಾದದ್ದು, ನೆಮ್ಮದಿ?

ಸಿಕ್ಕಿಲ್ಲ.

ಯಾವುದೂ ಸಿಕ್ಕಿಲ್ಲ.

ಕಾರಣ, ಅದರ ಬದಲು ನಾನು ಈ ಅಮೂಲ್ಯ ವಸ್ತುಗಳನ್ನು ಕೇಳಲಿಲ್ಲ. ನಿಜವಾಗಿಯೂ ಕೇಳಲಿಲ್ಲ. ನಾನು ಕೇವಲ ನನ್ನ ಗಂಡನ ಮೇಲಿನ ಆಕ್ರೋಶದಿಂದ ನನ್ನನ್ನೇ ಧ್ವಂಸಮಾಡಿ ಕೊಂಡಿದ್ದೇನೆ.

ಈಗ ಅವರಿಗೆ ನನ್ನನ್ನು ಕಂಡರೆ ಭಯ.

ಇದನ್ನೇ ಸುಖ ಎಂದರೆ, ಸುಖ ಇದೆ.

ಆದರೆ ಕಮಲ್ ನನ್ನನ್ನು ಲಕ್ಷಿಸದೆ ಮುಖ ತಿರುಗಿಸಿಕೊಂಡು ಹೋದ ಎಂದು ನನಗೆ ಪ್ರಪಂಚವೇ ಕಹಿಯಾಗಿದೆ. ನಾನು ಕಳ್ಳನ ಮೇಲೆ ಕೋಪಿಸಿಕೊಂಡು ನೆಲದ ಮೇಲೆ ಊಟ ಮಾಡಿದೆ. ಇವರ ಮೇಲೆ ಸೇಡು ತೀರಿಸಿಕೊಳ್ಳುತ್ತೇನೆಂದು ನನ್ನ ಮೇಲೆಯೇ ಸೇಡು ತೀರಿಸಿಕೊಂಡೆ.

ನನ್ನ ಮಾವನವರು ನನ್ನನ್ನು ಮರ್ಯಾದೆಯಿಂದ ನೋಡುತ್ತಿದ್ದರು. ಈಗ ಅವರ ಎದುರಿಗೆ ನಾನು ತಲೆ ಎತ್ತಿ ನಿಲ್ಲಲಾಗುತ್ತಿಲ್ಲ. ಆದರೆ ಅವರ ಕೋಣೆಯ ಮುಂದೆ ಕುಡುಕಳಾಗಿ ತೂರಾಡಿಕೊಂಡು ಬರುತ್ತೇನೆ.

ಈ ಅದ್ಭುತವಾದ ಜೀವನದ ಪರಿಸಮಾಪ್ತಿ ಎಲ್ಲಿ ? ಗೊತ್ತಿಲ್ಲ.

ಬಹಶಃ ನನ್ನ ಮಗ ದೊಡ್ಡವನಾಗಿ ನನ್ನನ್ನು ತಿರಸ್ಕಾರದ ಕಣ್ಣಲ್ಲಿ ನೋಡಿದರೆ ಆಗ ಇದರ ಪರಿಸಮಾಪ್ತಿಯ ಎಲ್ಲೆಯನ್ನು ನೋಡಬಹುದೇನೋ!

ಸುನಂದಾ ದೂರದಲ್ಲಿ ರಸ್ತೆಯ ಕಡೆ ನೋಡುತ್ತಾಳೆ.

ಎಷ್ಟು ದೂರದವರೆಗೂ ಹೋಗುತ್ತೆ ಈ ರಸ್ತೆ?!

ಅಕಸ್ಮಾತ್ ಇಲ್ಲಿಂದ ಧುಮುಕಿದರೆ ಎಲ್ಲಾ ಪ್ರಶ್ನೆಗಳಿಗೂ ಉತ್ತರ ಸಿಗುವುದೇ?

ಆ ಮುಹೂರ್ತದಲ್ಲಿ ಅಂತಹ ಒಂದು ದುರ್ದಮ್ಯವಾದ ಭಾವನೆ ಬರುತ್ತಿದೆ.

ಆಶ್ಚರ್ಯ!

ಒಬ್ಬ ಲೆಕ್ಕಕ್ಕಿಲ್ಲದ ಹುಡುಗ ನನ್ನನ್ನು ತಿರಸ್ಕಾರದ ದೃಷ್ಟಿಯಿಂದ ನೋಡಿದ ಎಂದು ಪ್ರಪಂಚವೇ ಅರ್ಥವಿಲ್ಲದಂತಾಗುತ್ತಿದೆಯೇ?

ಛೀ!

ಹೊಟ್ಟೆಗೆ ಈವತ್ತು ಆನಂದರಸ ಬಿದ್ದಿಲ್ಲ. ಅದಕ್ಕೇ ಈ ದುರವಸ್ಥೆ.

ಕೇಳಿದ್ದೇನೆ, ಕುಡುಕರಿಗೆ ಸಾರಾಯಿ ಕುಡಿಯದಿದ್ದರೆ ಕಾರಣವಿಲ್ಲದೆ ವಿಷಾದರೋಗ ಬರುತ್ತೆ ಎಂದು, ನನಗೂ ಹಾಗೇ ಆಗಿದೆ.

ಎಷ್ಟು ಮಜ! ಎಷ್ಟು ಮಜಾ! ನಾನೂ ಕುಡುಕಳು. ಇದರ ಅರ್ಥ ನಾನೂ ಜಾತಿಯಲ್ಲಿ ಮೇಲೇರಿದೆ. ನಾನು ಪರಿಪಕ್ವಳಾದೆ. ನನ್ನನ್ನು ಈಗ ಗೌರವವಾದ ಮನೆಯತನದ ಹೆಂಗಸೆಂದು ಅರಿಯಲಾಗುವುದಿಲ್ಲ.

ಶಕುಂತಲಾರಾಯ್‌ಳ ಮಟ್ಟಕ್ಕೆ ಏರಿದೆ ನಾನು!

ಏನು ಮಜಾ!

ಆದರೆ ಇಷ್ಟು ಮೌಜಿನಲ್ಲೂ ಏಕೆ ಅಳು ಬರುತ್ತಿದೆ ? ಈವತ್ತು ನಾನು ನಶೆಯಲ್ಲಿಲ್ಲವಲ್ಲಾ! ನನ್ನ ದೇಹದ ರಕ್ತವೆಲ್ಲಾ ಹಾಗಾದರೆ ಸಾರಾಯಿಯಾಗಿ ಹೋಗಿದೆಯೋ? ನಶೆಯಾಗುವ ಹಾಗೆ ಮಾಡಿಕೊಳ್ಳದಿದ್ದರೂ ನಶೆಯಾಗುತ್ತಿದೆಯೋ? ಅದಕ್ಕೇ ಸುಮ್ಮ ಸುಮ್ಮನೆ ಅಳಬೇಕೆನಿಸುತ್ತೆ. ಕೈ ಚಪ್ಪಾಳೆ ತಟ್ಟೋಣವೆನಿಸುತ್ತೆ.

ಅಯ್ಯೋ, ಅಮ್ಮಾ ನಾನೇನು ಮಾಡಲಿ?

* * *

ಮುಳುಗುವ ಸೂರ್ಯನ ಚಕಮಕಿಯ ಬಿಸಿಲಿನ ವೇಳೆಯಲ್ಲಿ, ಮೀನಾಕ್ಷಿಯನ್ನು ಆ ಮನೆಯೊಳಗೆ ಕರೆದುಕೊಂಡು ಬಂದ ದಿವಾಕರ.

ಆ ಚಕಮಕಿಯ ಆಯಸ್ಸು ಇನ್ನು ಜಾಸ್ತಿ ಇಲ್ಲ ಎನ್ನುವುದು ಕೆಂಪೇರುತ್ತಿರುವ ಸೂರ್ಯನ ಬಣ್ಣದಿಂದ ಗೊತ್ತಾಗುತ್ತೆ.

ಆದರೆ ಅದು ಬಡವನ ಕುಟೀರವೇ? ಯಾವ ಕುಟೀರದಲ್ಲಿ ದಿವಾಕರನ ಮಹೀಯುಸಿ ಜನನಿ ತನ್ನ ಅಗಾಧ ಸ್ನೇಹಸಾಗರವನ್ನಿಟ್ಟುಕೊಂಡು, ದಿವಾಕರ ಹಿಂದಿರುಗುವುದನ್ನು ಇದಿರು ನೋಡುತ್ತಾ ಇರುವಳೋ ಆ ಪರ್ಣಕುಟೀರವೇ?

ಇಲ್ಲ. ಇದು ಆ ಮನೆಯಲ್ಲ.

ಇದು ಯಾವುದೋ ಹಿಂದಿನ ಕಾಲದ ಧನವಂತನ ಮಾಳಿಗೆಯ ಹಾಳುಬಿದ್ದ ಭಾಗ! ಸ್ಟೇಷನ್ನಿನಿಂದ ಕಾಲುದಾರಿಯನ್ನು ಹಿಡಿದು ಬರುವವರೆಗೆ ಮೀನಾಕ್ಷಿಗೆ ಇದು ಚೆನ್ನಾಗಿಯೇ ಕಂಡಿತು. ತೋಪು. ಮರಗಳಲ್ಲಿ ಮುಳುಗುವ ಸೂರ್ಯರಶ್ಮಿಯ ಕಣ್ಣಾಮುಚ್ಚಾಲೆ. ಚಿತ್ರಗಳಲ್ಲಿ ನೋಡಿದಂತಹ ಗುಡಿಸಲುಗಳು. ಮಣ್ಣಿನ ಗೋಡೆ, ದಿಣ್ಣೆಗಳು, ಪಾಚಿಯ ಕೊಳಗಳು. ಕಾಲುದಾರಿಯಲ್ಲಿ ಅಪರೂಪವಾಗಿ ಮಧ್ಯೆ ಮಧ್ಯೆ ಒಬ್ಬಿಬ್ಬರು ಗ್ರಾಮದ ಹುಡುಗಿಯರು ನೀರು ತರುವ ದೃಶ್ಯ ಮನೋಜಗತ್ತಿನಲ್ಲಿ ಅಂಕಿತವಾಗಿರುವ ಗ್ರಾಮದ ದೃಶ್ಯದೊಂದಿಗೆ ಹಾಗೆಯೇ ಹೋಲುತ್ತದೆ.

ದಿವಾಕರ ಇವುಗಳ ಪರಿಚಯ ಮಾಡಿಸುತ್ತಾ ನಿರರ್ಗಳವಾಗಿ ಮಾತಾಡುತ್ತಿದ್ದ. ಆದರೆ ಮೀನಾಕ್ಷಿಗೆ ಇಷ್ಟೊಂದು ವ್ಯಾಖ್ಯಾನದ ಅವಶ್ಯಕತೆ ಇಲ್ಲ ಎನಿಸುತ್ತಿತ್ತು. ಇದರ ಪರಿಚಯ

ಮಾಡಿಕೊಡುವುದಕ್ಕೇನಿದೆ? ಚಿತ್ರಗಳಲ್ಲಿ ನೋಡಿದಂತೆ, ಸಿನಿಮಾಗಳಲ್ಲಿ ನೋಡಿದಂತೆ ಸಾಕ್ಷಾತ್ತಾಗಿ ಇದೆ ಅಷ್ಟೆ.

ಎಷ್ಟೋ ಸಲ ಹೇಳೋಣ ಅಂದುಕೊಂಡಳು. ದಿವಾಕರ, ಸ್ವಲ್ಪ ಕಡಿಮೆ ಮಾತಾಡು, ಸ್ವಲ್ಪ ನಿಧಾನವಾಗಿ ಮಾತಾಡು ಸ್ವಲ್ಪ ಶಾಂತನಾಗು ಎಂದು, ಕಾರಣ ಆಗ ಸಾಯಂಕಾಲವಾಗ ತೊಡಗಿತ್ತು.

ಆದರೆ ಹೇಳಲಾಗಲಿಲ್ಲ.

ಹೇಳಲು ಅವಕಾಶ ಸಿಗಲಿಲ್ಲ.

ಆಮೇಲೆ ಯಾವಾಗ ಸ್ವಲ್ಪ ಅವಕಾಶ ಸಿಕ್ಕಿತೋ ಆಗ. ತಾನೇ ಮಾತು ಬೆಳೆಸಿದಳು.

ಕೇಳಿದಳು, "ಸರಿ, ಇಲ್ಲಿ ಇಟ್ಟಿಗೆಯ ಗೋಡೆ ಮಾಡಬಾರದೇನು! ಎಲ್ಲಾ ಮಣ್ಣಿನ ಗೋಡೆಗಳಾಗಿ ಇವೆಯಲ್ಲಾ?"

ದಿವಾಕರ ಸ್ವಲ್ಪ ನಕ್ಕು ಹೇಳಿದ, "ಇದು ಮಣ್ಣಿನ ಮನುಷ್ಯರ ದೇಶವಲ್ಲವೇ?"

ಆಮೇಲೆ ಕಾರಣವಿಲ್ಲದೆ ತನ್ನ ಜೇಬಿನಿಂದ ಕರವಸ್ತ್ರವನ್ನು ತೆಗೆದು ಅಗ್ನಿಗೋಲಕಗಳಂತಿದ್ದ ತನ್ನ ಕಣ್ಣುಗಳೆರಡನ್ನೂ ಒರೆಸಿಕೊಂಡು ಹೇಳಿದ, "ಈ ತರಹ ಮಣ್ಣಿನ ಎರಡು ಕೋಣೆಗಳನ್ನು ಎಬ್ಬಿಸುವುದಕ್ಕೇ ಇವರುಗಳ ಸರ್ವಸ್ವವೂ ಪಣಯವಾಗುತ್ತೆ. ಸಾಲ-ಸೋಲಗಳನ್ನು ತೀರಿಸಿ ಮುಗಿಸಲಾಗುವುದಿಲ್ಲ."

ಮೀನಾಕ್ಷಿ ಚಿಕ್ಕ ಮಗುವಿನಂತೆ! "ವಾಃ ಅದೇಕೆ? ಕೂಲಿಯನ್ನು ಕರೆಯದೆ ತಾವೇ ಮಾಡಿಕೊಂಡರೆ ಆಯಿತು ಏನಂತೆ ಕಷ್ಟ?" ಎಂದಳು.

ಅಟ್ಟಹಾಸದಿಂದ ನಕ್ಕ ದಿವಾಕರ. ನಿರ್ಜನವಾದ ದಾರಿಯಲ್ಲಿ ನಡೆಯುತ್ತಾ ದಿವಾಕರನ ಆ ನಗು ಕೇಳಿ, ಮೀನಾಕ್ಷಿಗೆ ಸ್ವಲ್ಪ ಮೈಜುಮ್ಮೆಂದಿತು.

"ಇದರಲ್ಲಿ ಅಷ್ಟು ನಗಲು ಏನಿದೆ?" ಎಂದಳು. ಭಯವನ್ನು ತಳ್ಳಲೆಂದೇ ಇರಬಹುದು. ಮೀನಾಕ್ಷಿ ತೀಕ್ಷ್ಣತೆಯಿಂದ ಕೇಳಿದಳು: "ನಾನು ಹೇಳಿದುದರಲ್ಲಿ ನಗುವುದಕ್ಕೇನಿದೆ? ಮನೆಯೆಲ್ಲಾ ಕಟ್ಟುವವರೂ ಮನುಷ್ಯರು ತಾನೇ? ರೈತ ಜೀತ ಮಾಡುವವರು ತಾವು ತಾವೇ ದುಡಿದು-"

"ತಾವುಗಳೇ ದುಡಿದೇ ಎಲ್ಲಾ ಮಾಡಿಕೊಳ್ಳುತ್ತಾರೆ ಮೀನಾಕ್ಷಿ. ಕೂಲಿಯವನು ಮಾಡುತ್ತಾನೆಂದು ಕನಸು ಕಾಣುವುದಿಲ್ಲ ಇವರುಗಳು. ಗಂಡಸರು, ಹೆಂಗಸರು, ಮಕ್ಕಳು-ಮರಿ ಎಲ್ಲರೂ ಸೇರಿ ದುಡಿಯುತ್ತಾರೆ. ಆದರೆ ಸಾಮಾನು ಸರಂಜಾಮು ಬೇಕಲ್ಲ?"

"ಸಾಮಾನು-ಸರಂಜಾಮು?" ಮೀನಾಕ್ಷಿ ಆಶ್ಚರ್ಯದಿಂದ ಕೇಳಿದಳು. "ಸಾಮಾನು-ಸರಂಜಾಮು ಏನು ಬೇಕು? ಬರೀ ಮಣ್ಣು ತಾನೇ? ನಾಲ್ಕು ಕಡೆಗಳಲ್ಲೂ ಇಂತಹ ಮೈದಾನ-"

"ಹುಂ, ನಿನ್ನನ್ನು ಎಷ್ಟರಮಟ್ಟಿಗೆ ತಿಳುವಳಿಕೆ ಇಲ್ಲದವಳೆಂದು ಎಂದುಕೊಂಡಿದ್ದೆನೊ ನೀನು ಅದಕ್ಕಿಂತ ಹತ್ತರಷ್ಟು ಮಟ್ಟಿಗಿನ ಅವಿವೇಕಿ. ಮೈದಾನ ಇದೆ ಅಂತ ಮಣ್ಣು

ತೆಗೆದುಕೊಳ್ಳುವುದಕ್ಕಾಗುತ್ತದೆಯೇ? ಅದು ಯಾರ ಜಮೀನೋ, ಅವರು ಆಕ್ಷೇಪಿಸುವುದಿಲ್ಲವೇ? ಅದಲ್ಲದೆ ಬೊಂಬು-ಗಿಂಬು, ಹಗ್ಗ-ಮೊಳೆ ಇವೆಲ್ಲಾ ಬೇಡವೇ?"

"ಓಹೋ, ಅದೆಲ್ಲಾ ಏನು ಅಂತಹ ಬೆಲೆ ಬಾಳುವಂತಹದ್ದೇ?"

"ತುಂಬಾ ಬೆಲೆಯಾಗುತ್ತೆ ಮೀನಾಕ್ಷಿ. ಈ ತುಚ್ಛ ವಸ್ತುಗಳೇ ಬಹಳ ಬೆಲೆಯಾಗುವಂತಹದ್ದು ಇವರಿಗೆ."

ದಿವಾಕರನ ಧ್ವನಿ ಭಾರವಾಗುತ್ತೆ. ದಿವಾಕರ ಮೆಲ್ಲಗೆ ತನ್ನ ಒಂದು ಕೈಯನ್ನು ಮೀನಾಕ್ಷಿಯ ಭುಜದ ಮೇಲೆ ಇಟ್ಟು ಹೇಳುತ್ತಾನೆ. "ನಗರದ ನಾಟಕಕರ್ತರು ಇವರ ದುಃಖ ಕಷ್ಟಗಳನ್ನು ನೋಡಿ ಮನಸ್ಸು ಕರಗಿ, ಜೋರಾದ ನಾಟಕಗಳನ್ನು ಮಂಚವೇರಿಸಿ ಷಹಭಾಸ್‌ಗಿರಿಯನ್ನು ಪಡೆಯುತ್ತಾರೆ, ಆದರೆ ಗೊತ್ತೇ, ಇವರ ದುಃಖದ ಸಾವಿರದಲ್ಲಿನ ಒಂದು ಪಾಲೂ ಕೂಡ ವ್ಯಕ್ತವಾಗುವುದಿಲ್ಲ. ಇವರ ವಿಷಯವಾಗಿ ಯೋಚಿಸು ಮೀನಾಕ್ಷಿ, ಆಳವಾಗಿ ಯೋಚಿಸು" ಮೀನಾಕ್ಷಿ ಸುಮ್ಮನಾಗಿದ್ದಳು.

ಮೀನಾಕ್ಷಿಯ ಮನಸ್ಸು ಭಾರವಾಗಿಹೋಗಿತ್ತು. ಅವಳಿಗೆ ತೋರಿರಲಿಲ್ಲ. ದಿವಾಕರನ ಕೈ ಇನ್ನೂ ಅವಳ ಹೆಗಲ ಮೇಲೆ ಇದೆ ಎಂದು. ತಿರುಗಿ ದಿವಾಕರ ಲಘುವಾಗಿ ಎಂದ: "ಹೋಗಲಿ ಬಿಡು, ನಿನ್ನ ಮನಸ್ಸನ್ನು ಕೆಡಿಸಿದೆ. ಏನು ಗೊತ್ತೇ? ಊರಿಗೆ ಬಂದರೆಯೇ– – ಹೋಗಲಿ, ಆ ಮಾತೆಲ್ಲಾ ಇರಲಿ, ಹೂಂ ಏನೋ ಕೇಳುತ್ತಿದ್ದೆಯಲ್ಲಾ, ಇಲ್ಲಿ ಇಟ್ಟಿಗೆ-ಗಾರೆಯ ಮನೆ ಇಲ್ಲವೇ ಎಂದೇ? ಇಲ್ಲದೇ ಏನಿಲ್ಲ. ಅನೇಕ ಮಂದಿ ಭಾಗ್ಯಹೀನರ ಮಧ್ಯೆ ಒಬ್ಬಿಬ್ಬರು ಭಾಗ್ಯವಂತರೂ ಇರುತ್ತಾರಲ್ಲ."

"ದಿವಾಕರ, ನೀನು ಹೇಳುತ್ತಿದ್ದೆಯಲ್ಲ, ಸ್ಟೇಷನ್ನಿನಿಂದ ನಿಮ್ಮ ಮನೆ ಬಹಳ ದೂರವೇನಿಲ್ಲ ಎಂದು, ಆದರೆ ತುಂಬಾ ಹೊತ್ತಿನಿಂದ ನಡೆಯುತ್ತಾ ಇದ್ದೇವಲ್ಲಾ?"

"ಗ್ರಾಮದ ಲೆಕ್ಕದಲ್ಲಿ ಇದೇ 'ಸ್ವಲ್ಪ ದೂರ' ಮೀನಾಕ್ಷಿ. ನಿನಗೇನು ನಡೆಯಲು ಬಹಳ ಕಷ್ಟವಾಗುತ್ತಿದ್ದೆಯೇ?"

"ಇಲ್ಲ, ಇಲ್ಲ. ಕಷ್ಟವೇನಿಲ್ಲ, ಸುಮ್ಮನೆ ಕೇಳಿದೆ."

"ಇನ್ನೊಂದಿಷ್ಟು ಕಷ್ಟಪಡಬೇಕು," ಹೇಳಿದ ದಿವಾಕರ.

ಆಮೇಲೆ ಕತ್ತಲಾಗುವ ಸಮಯಕ್ಕೆ ಆ ಪಾಳು ಮನೆಗೆ ಕರೆದುಕೊಂಡು ಹೋದ ದಿವಾಕರ. ಮೀನಾಕ್ಷಿ ಅವಾಕ್ಕಾಗಿ ಕೇಳಿದಳು. "ಇಲ್ಲೇನು? ಇದೇನು ನಿಮ್ಮ ಮನೆಯೇ?"

"ಇಲ್ಲ. ನನ್ನದು ಹೇಗಾಗುತ್ತೆ?" ದಿವಾಕರ ಹಠಾತ್ತನೆ ವ್ಯಂಗ್ಯವಾದ ಧ್ವನಿಯಲ್ಲಿ ಹೇಳಿದ. "ಇಲ್ಲಿ ಇಟ್ಟಿಗೆಯ ಮನೆಯಿಲ್ಲವೆಂದು ನಿಂದಿಸುತ್ತಿದ್ದೆಯಲ್ಲಾ. ಅದಕ್ಕೇ ಇಟ್ಟಿಗೆಯ ಮನೆ ತೋರಿಸಲು ಕರೆದುಕೊಂಡು ಬಂದೆ."

ಅವನ ಮಾತಿನ ಆ ಸ್ವರ ಮೀನಾಕ್ಷಿಗೆ ಹಿಡಿಸಲಿಲ್ಲ. ಬಹಳ ಕಳವಳವಾಯಿತು. ಆ ಬಾಗಿಲುಗಳಿಲ್ಲದ ಕಿಟಕಿ, ಬಾಗಿಲುಗಳಿರಬೇಕಾದ ಖಾಲಿ ಜಾಗಗಳನ್ನೂ, ಗೋಡೆ ಗೋಡೆಗಳಲ್ಲೂ ಇಳಿದು ಬಂದಿರುವ ಮರದ ಬೇರುಗಳನ್ನೂ ನೋಡಿ ಭಯವಾಯಿತು.

ಮೀನಾಕ್ಷಿ ಸ್ವಲ್ಪ ಒಣಗಿದ ಗಂಟಲಿನಿಂದ ಕೇಳಿದಳು. "ನಿಂದೆ ಯಾವಾಗ ಮಾಡಿದೆ? ಸುಮ್ಮನೆ ಕೇಳಿದೆ. ಆಯಿತಪ್ಪಾ ಸಾಕು, ನಡಿ, ನಡಿ ಸಾಯಂಕಾಲವಾಗುತ್ತಾ ಇದೆ. ಎಲ್ಲಿಂದಲಾದರೂ ಹಾವು-ಗೀವು ಹೊರಟು ಬಂದರೆ-"

ದಿವಾಕರ ಒಂದು ನಿರ್ಲಜ್ಜ ನಗು ನಕ್ಕು ಹೇಳಿದ: "ಈಗಲೇ ಹೊರಟು ಹೋಗುವುದೆಂದರೆ ಇಷ್ಟೆಲ್ಲಾ ಕಲಾ-ಕೌಶಲ ಮಾಡಿ, ಇಷ್ಟೆಲ್ಲಾ ಏರ್ಪಾಟುಗಳನ್ನು ಮಾಡಿ ಬಂದದ್ದು, ಈಗಲೇ ಹೊರಟುಹೋಗುವುದಕ್ಕೆಯೇ?"

ಇದ್ದಕಿದ್ದಂತೆ ನಾಲ್ಕು ಕಡೆಯ ಮುರುಕಲು ಗೋಡೆಗಳು ಭೂಕಂಪದಿಂದ ಅಲ್ಲಾಡಿದಂತೆ ಆಗುತ್ತೆ. ಚಕಮಕಿಸುವ ಬೆಳಕು ಮುಹೂರ್ತಮಾತ್ರದಲ್ಲಿ ಕಗ್ಗತ್ತಲ ಆಳದಲ್ಲಿ ಮುಳುಗಿಹೋಗುತ್ತೆ ಹಲ್ಲುಗಳನ್ನು ಕಿರಿಯುತ್ತಿರುವ ದೈತ್ಯ ಒಬ್ಬ ಅದರ ಕಿಂಡಿ, ಕಿಂಡಿಗಳಲ್ಲೂ ಇಣಿಕಿ ನೋಡುತ್ತಿದ್ದಾನೆ.

ಮೀನಾಕ್ಷಿಯ ಕೈ-ಕಾಲುಗಳು ತಣ್ಣಗಾಗುತ್ತೆ.

ಮೀನಾಕ್ಷಿಯ ಎದೆಯ ಮೇಲೆ ಒಂದು ಕಲ್ಲು ಸೇರಿದಂತಿದೆ.

ಆದರೂ ಮೀನಾಕ್ಷಿ ಕೂಗಿಕೊಂಡಳು ಒಡೆದ ಧ್ವನಿಯಲ್ಲಿ.

"ಈ ಮಾತಿನ ಅರ್ಥವೇನು ದಿವಾಕರ?"

ದಿವಾಕರ ಚಲನೆಯಿಲ್ಲದೆ ಇದ್ದಾನೆ.

ದಿವಾಕರನ ಅದೇ ನಿರ್ಲಜ್ಜ ನಗು ನಕ್ಕು ಹೇಳುತ್ತಾನೆ, "ಅರ್ಥ ಬಹಳ ಸುಲಭ, ಕಲ್ಕತ್ತೆಯ ಸಮಾಜದಲ್ಲಿ ನೀನು ನನಗೆ ಸಿಗುವುದಿಲ್ಲ. ಆದ್ದರಿಂದ ತುಂಬಾ ದಿನದ ನನ್ನ ಆಸೆಯನ್ನು ತೀರಿಸಿಕೊಳ್ಳಲು ಇಷ್ಟೊಂದು ಕಡ್ಡಿ ಹುಲ್ಲು ಹತ್ತಿಸಿ-"

"ದಿವಾಕರ!" ಮೀನಾಕ್ಷಿ ತೀವ್ರ ತಿರಸ್ಕಾರದಿಂದ ಕೂಗಿಕೊಂಡಳು, "ಇಷ್ಟು ದೊಡ್ಡ ಶೈತಾನನೇ ನೀನು?"

ದಿವಾಕರ ಗಡಸು ಧ್ವನಿಯಿಂದ ಹೇಳಿದ, "ಬಡವ ಪ್ರಪಂಚದ ಯಾವುದಾದರೊಂದು ಭೋಗ್ಯ ವಸ್ತುವಿಗೆ ಕೈ ಹಾಕಿದರೂ ಅವನು ಶೈತಾನನೆನಿಸಿಕೊಳ್ಳುತ್ತಾನೆ. ಆದರೆ ಇದನ್ನು ಬಿಟ್ಟು ನಿನ್ನನ್ನು ಪಡೆಯಲು ಬೇರೆ ಏನು ದಾರಿ?"

"ಪಡೆಯುವುದು?"

ಮೀನಾಕ್ಷಿ ಕತ್ತಲೆಯ ಪಟದಲ್ಲಿ ತನ್ನ, ಒಂದು ಕಾಲದ ಪ್ರೇಮಕ್ಕೆ ಪಾತ್ರನಾದವನ ಮುಖವನ್ನು ನೋಡುವ ಪ್ರಯತ್ನ ಮಾಡುತ್ತಾಳೆ. ಎಲ್ಲಾ ಸೇರಿ ಒಂದು ನೆರಳು ಮಾತ್ರವೇ ಕಾಣುತ್ತೆ. ಅದನ್ನೇ ಉದ್ದೇಶಿಸಿ ಕೋಪದಿಂದ ಕೇಳುತ್ತಾಳೆ. "ಇದನ್ನು ನೀನು, ಪಡೆದ ಹಾಗೆನ್ನುತ್ತೀಯಾ?"

"ಹೇಳುತ್ತೇನೆ. ಅದಕ್ಕೇ ಹೇಳುತ್ತೇನೆ"- ದಿವಾಕರ ನಿಷ್ಠೂರದಿಂದ ಹೇಳುತ್ತಾನೆ. "ನೀನು ಈಗತಾನೆ ಸ್ವರ್ಗದಿಂದ ನೆಲಕ್ಕೆ ಬೀಳಲಿಲ್ಲ, ಮೀನಾಕ್ಷಿ, ಈ ಪ್ರಪಂಚವನ್ನು ತಿಳಿಯದವಳೂ

ಅಲ್ಲ. ನಮ್ಮಂತಹ ರಕ್ತ ಮಾಂಸಗಳಿಂದಾದ ಮನುಷ್ಯನಿಗೆ 'ಪಡೆಯುವಿಕೆಗೆ' ಇನ್ನೇನು ಅರ್ಥ ಇರುತ್ತೆ?"

"ದಿವಾಕರ, ಇಷ್ಟು ನೀಚನಾಗಬೇಡ, ನಿನ್ನನ್ನು ಇಷ್ಟು ನಿಕೃಷ್ಟನನ್ನಾಗಿ ಮಾಡಿಕೋಬೇಡ. ನೀನು ನಿನ್ನ ಸಭ್ಯತೆಯ, ನಾಗರಿಕತೆಯ ಪ್ರಶ್ನೆಗೆ ಜವಾಬು ಕೊಟ್ಟುಕೋ."

"ಸಭ್ಯತೆ? ನಾಗರೀಕತೆ? ಅದೆಲ್ಲಾ ಬರೀ ಶಬ್ದಗಳು. ಅದೆಲ್ಲಾ ನನಗೆ ಲಕ್ಷ್ಯವಿಲ್ಲ. ನಾನು ನಿಶ್ಚಯ ಮಾಡಿಕೊಂಡಿದ್ದೇನೆ."

"ನೀನೇನು ನಿಶ್ಚಯಿಸಿದ್ದೀಯೋ ಅದು ನನಗೆ ತಿಳಿಯಬೇಕಾಗಿಲ್ಲ–" ಮೀನಾಕ್ಷಿ ಒಳಗಿನ ಭಯವನ್ನು ಅಡಗಿಸಿ ಸಹಜಭಾವನೆಯನ್ನು ತೋರುತ್ತಾಳೆ. ಏನೋ ದಿವಾಕರ ಎಂಬ ಒಬ್ಬ ಹುಡುಗ ಯಾವುದೋ ಒಂದು ಬೇಡದ ವಿಷಯವಾಗಿ ಚರ್ಚೆ ಮಾಡುತ್ತಿರುವಂತೆ, ಜೋರಾಗಿ ಹೇಳಿದಳು: "ನಿನ್ನ ಮನೆ ನೋಡುವ ಆಸೆ ನನಗೆ ತೀರಿಹೋಯಿತು. ಈಗ ದಯವಿಟ್ಟು ನಡಿ ನೋಡೋಣ. ಸ್ಟೇಷನ್ ಕಡೆ ನಡಿ, ಒಳ್ಳೇ ಚೆನ್ನಾಗಿದೆ! ಏನೊ ಒಂದು ಹಿಂದಿ ಸಿನಿಮಾದ 'ವಿಲ್ಲನ್' ನಂತೆ ಅಭಿನಯ ಮಾಡುತ್ತಿರುವಂತಿದೆ ನೀನು!"

ದಿವಾಕರ ಜೇಬಿನಿಂದ ಒಂದು ಟಾರ್ಚು ತೆಗೆಯುತ್ತಾನೆ ಈ ಕಡೆ ಆ ಕಡೆ ನೋಡಿ ಬಿಟ್ಟು ತಿರುಗಿ ಜೇಬಿಗೆ ಹಾಕಿಕೊಂಡು ಮೀನಾಕ್ಷಿಯ ಒಂದು ಕೈಯನ್ನು ಹಿಡಿದು ಹತ್ತಿರ ಎಳೆದುಕೊಳ್ಳಲು ಪ್ರಯತ್ನಿಸುತ್ತಾ ಹೇಳಿದ. "ಸರಿಯಾಗಿಯೇ ಹೇಳಿದೆ. ನೀವುಗಳು ಯಾವಾಗಲೂ ಹೇಳುವ ರೊಮಾಂಟಿಕ್ ನಾಯಕನಾಗುವ ಹಂಬಲ ನನಗಿಲ್ಲ. ನಾನು ವಿಲ್ಲನೇ ಆಗಬಯಸುತ್ತೇನೆ. ಎಷ್ಟೋ ಪ್ರಯತ್ನಪಟ್ಟು, ಎಷ್ಟೊ ಸುಳ್ಳಿನ ಬಲೆಯನ್ನು ನೇಯ್ದು ಈ ಏರ್ಪಾಡು ಮಾಡಿದ್ದೇನೆ. ದಯೆ ತೋರಿಸುವುದಕ್ಕಾಗುವುದಿಲ್ಲ ಈಗ ನಾನು. ಈ ಮನೆಯ ಒಂದು ಭಾಗ ವಾಸಕ್ಕೆ ಯೋಗ್ಯವಾಗಿದೆ. ಅಲ್ಲಿ ಒಬ್ಬ ವಾಸವಾಗಿಯೂ ಇದ್ದಾನೆ. ಆದರೆ ನನ್ನ ಮೇಲೆ ದಯೆ ಇಟ್ಟು ಇವತ್ತು ಕೋಣೆಯಲ್ಲಿರುವ ಅಧಿಕಾರವನ್ನು ನನಗೆ ವಹಿಸಿ ಹೊರಟು ಹೋಗಿದ್ದಾರೆ. ಒಂದಾನೊಂದು ಕಾಲದಲ್ಲಿ ಯಾರೋ ರಾಜ–ಮಹಾರಾಜರ ಅರಮನೆಯಾಗಿತ್ತು ಇದು––"

"ದಿವಾಕರ, ನಿನ್ನ ಈ ಮನೆಯ ಇತಿಹಾಸವನ್ನು ಕೇಳುವ ಆಸೆ ನನಗಿಲ್ಲ" ಕೈಯನ್ನು ಬಿಡಿಸಿಕೊಂಡು ಹೇಳಿದಳು ಮೀನಾಕ್ಷಿ: "ಬಹಳ ಬೇಜಾರಾಗುತ್ತಿದೆ ನನಗೆ."

ಆದರೆ ಅವಳ ಅಂಗೈಯಲ್ಲಿ ಮಂಜಿನಂತೆ ತಣ್ಣಗಾಗಿತ್ತು. ಒಂದು ಕಾಲದಲ್ಲಿ ಈ ಮನುಷ್ಯ ತನ್ನ ಸ್ನೇಹಿತನಾಗಿದ್ದನೆಂಬುದೇ ಈಗ ಜ್ಞಾಪಕಕ್ಕೆ ಬರುತ್ತಿಲ್ಲ. ಒಂದು ಕ್ರೂರ ಪ್ರಾಣಿಯ ಎದುರಿಗೆ ಇರುವಂತಹ ಭಾವನೆಯೇ ಬರುತ್ತಿದೆ ಮತ್ತು ಓಡಿ ಹೋಗುವ ಚಿಂತೆಯನ್ನೇ. ದಾರಿಯನ್ನೇ ಮನಸ್ಸು ಹುಡುಕುತ್ತಿದೆ.

ಆದರೆ ಸೂರ್ಯನ ಬೆಳಕಿನ ಕಡೆಯ ತುಣುಕೂ ಮಾಯವಾಗಿದೆ. ನಾಲ್ಕು ಕಡೆಗಳಲ್ಲೂ ಬರೀ ಕತ್ತಲೆಯ ಹೊರತು ಮೀನಾಕ್ಷಿಗೆ ಇನ್ನೇನೂ ಕಾಣುತ್ತಿಲ್ಲ. ಆದರೂ ಅವಳು ಆ

ಕತ್ತಲೆಯಲ್ಲೇ ಆ ಮುರುಕಲು ಅರಮನೆಯ ಗೇಟಿನಿಂದ ಹೊರಗೆ ಬರುತ್ತಾಳೆ. ಓಡಲೆತ್ನಿಸುತ್ತಾಳೆ.

ಆದರೆ ಎಲ್ಲಿ ಓಡುವುದು?

ಈ ಕಗ್ಗತ್ತಲಲ್ಲಿ ಯಾರಿಗೆ ಗೊತ್ತು ಎಲ್ಲಿ ಮುಳ್ಳು-ಪೊದೆಗಳಿದೆಯೋ, ಎಲ್ಲಿ ಹಳ್ಳ-ಕೊಳ್ಳಗಳಿದೆಯೋ! ದಿವಾಕರ ಮುಂದಕ್ಕೆ ಬರುತ್ತಾನೆ. ಹೇಳುತ್ತಾನೆ, "ಮೀನಾಕ್ಷಿ, ಸುಮ್ಮನೆ ಚಿಕ್ಕ ಮಗು ಹಾಗೆ ಆಡಬೇಡ. ಇದು ಜನವಸತಿಯಿಂದ ತುಂಬಾ ದೂರದಲ್ಲಿದೆ. ಕೂಗಿಕೊಂಡು ಸತ್ತರೂ ಯಾರಿಗೂ ಕೇಳಿಸುವುದಿಲ್ಲ ಮತ್ತು ಈ ಪ್ರಪಂಚದಲ್ಲಿ ಯಾರಿಗೂ ಗೊತ್ತೂ ಆಗುವುದಿಲ್ಲ ನಾನು ಕೆಲವು ಗಂಟೆಗಳಿಗಾಗಿ ನಿನ್ನನ್ನು ಈ ಪ್ರಪಂಚದಿಂದ ಕದ್ದುಕೊಂಡು ಬಂದು—" ಮೀನಾಕ್ಷಿ ಆಕಸ್ಮಿಕವಾಗಿ ಬಗ್ಗಿ ಒಂದು ಇಟ್ಟಿಗೆಯ ತುಂಡನ್ನು ತೆಗೆದುಕೊಳ್ಳುತ್ತಾಳೆ. ತಿರಸ್ಕಾರದಿಂದ ಹೇಳುತ್ತಾಳೆ, "ನೀಚ, ಶೈತಾನ, ರಾಸ್ಕಲ್! ಇನ್ನೊಂದು ಹೆಜ್ಜೆ ಮುಂದಕ್ಕೆ ಇಟ್ಟೆಯೋ ತಿಳಿದುಕೋ, ನಾನು ನಿನ್ನ ಪ್ರಾಣಕ್ಕಾಗಿಯೂ ಯೋಚಿಸುವುದಿಲ್ಲ. ತಿಳಿದುಕೋ!"

"ಮಾಡು ಹಾಗಾದರೆ ನನ್ನನ್ನು ಕೊಲೆಯೇ ಮಾಡು." ದಿವಾಕರ ಕೌತುಕವೆನ್ನುವಂತೆ ಹೇಳುತ್ತಾನೆ: ಯೋಚಿಸಿದ್ದೆ ಒಂದು ರಾತ್ರಿಗಾಗಿ ಸ್ವರ್ಗಕ್ಕೆ ಟಿಕೆಟ್ಟು ತೆಗೆದುಕೊಂಡಿದ್ದೇನೆಂದು ಕೊಂಡೆ. ಅದು ಯಾವಾಗ ಆಗುವುದಿಲ್ಲವೋ ಆಗ ನಿನ್ನ ಕೈಯಿಂದ ಸತ್ತು ಸ್ವರ್ಗಕ್ಕೆ ಹೋಗುತ್ತೇನೆ."

ತೇರಿದ ನಟ ದಿವಾಕರ ದಾಸ್. ಹಾಗೆಯೇ ಹೇಳುತ್ತಾನೆ: "ಮನಸ್ಸಿನಲ್ಲಿ ಒಂದು ಅಹಂಕಾರವಿತ್ತು. ಬಡವ ರೈತರ ಹುಡುಗನಾಗಿಯೂ, ರಾಜಕುಮಾರಿಯ ಪ್ರೀತಿ ಸಿಕ್ಕಿದೆ ಎಂದು. ಆದರೆ ನೋಡುತ್ತಾ ಇದ್ದೇನೆ, ಆ ಅಹಂಕಾರವೂ ಸುಳ್ಳು."

ಮೀನಾಕ್ಷಿ ಸ್ವಲ್ಪ ಮೆತ್ತಗಾಗುತ್ತಾಳೆ.

ಮೆಲ್ಲನೆಯ ಧ್ವನಿಯಲ್ಲೇ ಹೇಳುತ್ತಾಳೆ, "ಹಾಗೆ ತಿಳಿದುಕೊಂಡಿದ್ದಕ್ಕೆ ಧನ್ಯವಾದಗಳು. ತಿಳಿದುಕೊಂಡು ಆ ಸುಳ್ಳನ್ನು ನಿಜವಾಗಿಸಲು, ಮೈ ಬಲವನ್ನು ಉಪಯೋಗಿಸುವ ಪ್ರಯತ್ನವನ್ನು ನೀನು ಮಾಡುವುದಿಲ್ಲವೆಂದು ಆಶಿಸುತ್ತೇನೆ. ಊಂ, ಈಗ ಟಾರ್ಚನ್ನು ತೆಗಿ ನೋಡೋಣ, ನಡಿ--" ಆಕಸ್ಮಿಕವಾಗಿ ನಗಲಾರಂಭಿಸಿದ ದಿವಾಕರ, ಜೋರಾಗಿ ಹೇಳಿದ, "ಯಾರಿಗೆ ಬೇರೆ ಯಾವ ಬಲವೂ ಇಲ್ಲವೋ ಅವರಿಗೆ ದೇಹಬಲವೇ ಭರವಸೆ. ಸುಳ್ಳು ಸುಳ್ಳಾಗಿ ಇನ್ನು ಗೋಳು ಹುಯಿದುಕೋಬೇಡ. ಕೈಯಲ್ಲಿನ ಇಟ್ಟಿಗೆಯನ್ನ ಬಿಸಾಕು. ಪ್ರಪಂಚದಲ್ಲಿ ಯಾರಿಗೂ ಗೊತ್ತಾಗುವುದಿಲ್ಲ. ನಂಬು, ಆಮೇಲೆ ನಿನ್ನನ್ನು ಯಥಾಸ್ಥಾನಕ್ಕೆ ಕರೆದುಕೊಂಡು ಹೋಗಿ ಬಿಡುತ್ತೇನೆ."

"ನಿನ್ನ ಕೃಪೆಯ ಮಾತು ಜ್ಞಾಪಕ ಇರುತ್ತೆ--" ಮೀನಾಕ್ಷಿ ಕತ್ತಲಲ್ಲೇ ಕ್ಷೀಣವಾದ ನಕ್ಷತ್ರಲೋಕವನ್ನು ಭರವಸೆಯಾಗಿಟ್ಟುಕೊಂಡು ಮುಂದಕ್ಕೆ ಅಡಿಯಿಡುತ್ತಾ ಇರುತ್ತಾಳೆ. ಆದರೆ ಮೀನಾಕ್ಷಿಯ ಭಾಗ್ಯರೇಖೆ ಕಣ್ಮರೆಯಲ್ಲಿ ಕ್ರೂರನಗು ನಗುತ್ತಿದೆಯೇನೋ. ಸರಿಯಾಗಿ ಅದೇ ಸಮಯದಲ್ಲಿ ಅಕಸ್ಮಾತ್ ಬರಿದಾದ ಮೈದಾನದ ಹಲವಡೆಗಳಿಂದ ಸ್ವೇಚ್ಛೆಯಿಂದ ತಿರುಗುವ ನರಿಗಳ ಕೂಗು ಗಾಳಿಯನ್ನು ಇರಿದುಕೊಂಡು ಹೊರಬರುತ್ತೆ.

ಯಾವ ಶತ್ರುವಿಗೆ ಹೆದರಿ ಓಡುತ್ತಿದ್ದಳೋ ಆ ಶತ್ರುವನ್ನೇ ಕರೆದು ಕೂಗಿಕೊಂಡಳು:

"ದಿವಾಕರ, ಟಾರ್ಚನ್ನು ಹಿಡಿ, ನಿನ್ನ ಧರ್ಮದ ದಮ್ಮಯ್ಯಾ."

ಆದರೆ ದಿವಾಕರ ಅವಳಿಗೆ ದಾರಿ ತೋರಿಸಲು, ಹಿಂದಿರುಗಲು ಸುಲಭವಾಗುವಂತೆ ಟಾರ್ಚನ್ನು ಹಿಡಿಯುತ್ತಾನೆಯೇ? ದಿವಾಕರ ಧರ್ಮ–ಅಧರ್ಮಕ್ಕೆ ಹೆದರುತ್ತಾನೆಯೇ?! ಇಲ್ಲ ಅವನು ಲಕ್ಷ್ಯ ಮಾಡುವುದಿಲ್ಲ.

ದಿವಾಕರ ನಿಜವಾಗಲೂ, ಅಗ್ಗವಾದ ನಾಟಕದ ವಿಲ್ಲನ್ನಿನ ಪಾತ್ರವನ್ನೇ ಅಭಿನಯಿಸುತ್ತಾನೆ. ಮೀನಾಕ್ಷಿಯ ಒಂದು ಅತಲವನ್ನು ಮುಟ್ಟುತ್ತಿರುವ ಅಂಧಕಾರದಲ್ಲಿ ಮುಳುಗಿಹೋದಳೇನೋ!

*****

ಅಧ್ಯಾಯ ಎಂಟು

"ಆಯಿತು ಅಬ್ಬಾ! ನಾನು ಬಂದೆ ತಲೆ ಒಡೆದುಕೊಂಡು! ಇನ್ನು ನೀನು ಬಂದೆ ಜ್ವರ ಬರೆಸಿಕೊಂಡು--" ಕಮಲಾಕ್ಷ ಕೂಗಿಕೊಂಡು ಹೇಳಿದ: "ಅಮ್ಮಾ, ಬಂದು ನೋಡು, ನಿನ್ನ ಚಿಕ್ಕ ಮಗಳು ಹಿಂದಿರುಗಿದ್ದಾರೆ! ಆದರೆ ಬರೀ ಕೈಯಲ್ಲಲ್ಲ! ಗ್ರಾಮದಿಂದ ಒಂದು ಒಳ್ಳೇ ಪ್ರೆಸೆಂಟ್‌ನ್ನೂ ತೆಗೆದುಕೊಂಡು!- ಏನು ಸಮಾಚಾರ ಹೇಳು, ಕೇಳೋಣ, ಗ್ರಾಮದ ಮಣ್ಣಿನಲ್ಲಿ ಕಾಲಿಟ್ಟ ತಕ್ಷಣವೇ ಪಾಚಿಕೊಳದಲ್ಲಿ ಮುಳುಗಿ ಎದ್ದೆಯೇನು?"

"ಹೂಂ, ಅದೇ ಮಾಡಿದೆ." ಮೀನಾಕ್ಷಿ ಸುಸ್ತಾಗಿ ಹೇಳಿದಳು. "ಈಗ ಸ್ವಲ್ಪ ಹೋಗಿ ಮಲಗಲು ಬಿಡು ನೋಡೋಣ."

ಮಲಗಲೆಳಸುತ್ತಾಳೆ ಮೀನಾಕ್ಷಿ.

ತನ್ನನ್ನು ಮೈ ಮರೆಯಲು ಬಿಟ್ಟು ಮಲಗಲು ಬಯಸುತ್ತಾಳೆ ಮೀನಾಕ್ಷಿ. ಏನನ್ನೂ ಯೋಚಿಸುವುದಿಲ್ಲ. ಯಾವ ಘಟನೆಯನ್ನೂ ವಿಶ್ಲೇಷಣೆ ಮಾಡಲೂ ಕೂಡುವುದಿಲ್ಲ. ಯಾರನ್ನೂ ದೂಷಿಸುವುದಿಲ್ಲ. ತನ್ನನ್ನೂ ಧಿಕ್ಕರಿಸುವುದಿಲ್ಲ. ಕೇವಲ ಒಂದು ನಿಶ್ಚಿಂತತೆಯ ಆಶ್ರಯದಲ್ಲಿ ಸ್ವಲ್ಪ ಮಲಗಬೇಕು. ಆದರೆ ಯಾರು ಅವಳನ್ನು ನಿಶ್ಚಿಂತೆಯಿಂದ ಮಲಗಲು ಬಿಡುತ್ತಾರೆ?!

ಅನುಭವವಿಲ್ಲದ ಹುಡುಗ 'ಜ್ವರ' ಎಂಬುವ ಮಾತನ್ನು ನಂಬಿ ಬಿಡುತ್ತಾನೆ. ವಿಜಯಾ ಎಂಬ ತೀರ ಅನುಭವಸ್ಥಳಾದ ತೀಕ್ಷ್ಣ ದೃಷ್ಟಿಯ ಹೆಂಗಸು ಅದನ್ನು ನಂಬುವರೇ?!

* * *

ಈ ಸಂಸಾರದಲ್ಲಿ ಒಂದೇ ಒಂದು ಜೀವ ಸುಖಿಯಾಗಿತ್ತು. ನಿಜವಾಗಿಯೂ ಸುಖಿ ಆದರೆ ಅದರ ಸುಖವೂ ಹೋಯಿತು.

ತನ್ನ ಆ ಮನೋರಮ್ಯ ಮನೆಯನ್ನು ಬಿಟ್ಟು, ಪ್ರಪಂಚದ ಸಂತೆಯಲ್ಲಿ ಇಳಿದು, ಕೊನೆ ಮೊದಲು ಗೊತ್ತಾಗದೆ ಹೋಗುತ್ತಿದೆ ಆ ಜೀವ.

ಯೋಚಿಸುತ್ತೆ-

'ಆಶ್ಚರ್ಯ! ಈ ಪ್ರಪಂಚದ ಜನ ಎಷ್ಟು ಬುದ್ಧಿಹೀನರು! ತನಗೆ ತಿಳಿದ ಜಗತ್ತನ್ನು ಬಿಟ್ಟು ಹೊರಗಿನದೇನನ್ನೂ ತಿಳಿಯಲು ಇಷ್ಟಪಡುವುದಿಲ್ಲ. ಅಷ್ಟೇ ಅಲ್ಲ. ತನಗೆ ತಿಳಿಯಲಾಗದ್ದನ್ನು ವ್ಯಂಗ್ಯ, ಹಾಸ್ಯ ಮಾಡುವುದು, ಹಾಸ್ಯಕರವಾದದ್ದೆಂದು ಉಡಾಯಿಸಿಬಿಡುವುದು! ಕುತೂಹಲಕ್ಕಾದರೂ ಒಂದು ಸಲ ತಿರುಗಿ ನೋಡುವುದಿಲ್ಲ!'

ದೀರ್ಘಕಾಲದ ಸಾಧನೆಯ ಫಲವಾದ, 'ಪ್ರಾಚೀನ ಭಾರತದ ಜ್ಞಾನ ಮತ್ತು ಆಧುನಿಕ ಜಗತ್ತಿನ ವಿಜ್ಞಾನ'ದ ಪಾಂಡುಲಿಪಿಯ ಮೂಟೆಯನ್ನು ಹೊತ್ತುಕೊಂಡು, ಪ್ರಪಂಚದಲ್ಲಿನ

ಪ್ರಕಾಶರ ಬಾಗಿಲು ಬಾಗಿಲುಗಳಲ್ಲಿ ನಿಂತು, ಹತಾಶನಾಗಿ, ಶಾರದಾ ಪ್ರಸಾದ್ ಈಗ ಕೆಲಸ ಹುಡುಕುತ್ತಿದ್ದಾರೆ.

ಆದರೆ ಪ್ರಪಂಚದ ಯಾವ ಕೆಲಸವೂ ಅವರಿಗೆ ಗೊತ್ತಿಲ್ಲ. ಆದರೂ ಅವರು ಯಾರನ್ನು ಕಂಡರೂ ಕೇಳುತ್ತಿದ್ದಾರೆ, "ಅಣ್ಣಾ, ಒಂದು ಕೆಲಸ ಕೊಡಿಸುತ್ತೀರಾ?"

ಅವರಿಗೆ ಆಗ ಯಾವುದಾದರೂ ಪ್ರೆಸ್ಸಿನಲ್ಲಿ ಕೆಲಸ ಮಾಡಬೇಕು ಎಂದು.

ಬಹುಶಃ ಆ ಪ್ರೆಸ್ಸಿನ ಕೆಲಸದ ಅಂತರಾಳದಲ್ಲಿ, ಯಾವುದೋ ಒಂದು ಆಸೆ ಪೂರೈಸುವುದೆಂಬ ಹಂಬಲವೋ?

'ಆದರೆ ಎಲ್ಲರೂ ಕೇಳುವುದು ಹಿಂದಿನ ಅನುಭವ.'

"ಮುಂಚೆ ಎಲ್ಲಿ ಕೆಲಸ ಮಾಡಿದ್ದೀರಿ? ಯಾವ ಪ್ರೆಸ್ಸಿನಲ್ಲಿ?"

"ಎಲ್ಲೂ ಮಾಡಿಲ್ಲ. ಈಗ ಮಾಡೋಣ ಎಂದು ಬಂದಿದ್ದೇನೆ."

"ಓಹೋ, ಆದರೆ ಆಕಸ್ಮಿಕವಾಗಿ ಏಕೆ ಪ್ರೆಸ್ಸಿನಲ್ಲಿ ಕೆಲಸಮಾಡಬೇಕೆನ್ನಿಸಿತು? ಬೇರೆ ಎಲ್ಲಿ ಕೆಲಸ ಮಾಡುತ್ತಿದ್ದಿರಿ? ಈ ವಯಸ್ಸಿನಲ್ಲಿ ಯಾಕೆ ಬಿಟ್ಟು ಬಂದಿರಿ?"

ಶಾರದಾ ಪ್ರಸಾದ್‌ಗೆ ಬೇಜಾರಾಗುತ್ತೆ.

"ಯಾಕೆ, ಏನು, ಎತ್ತ ಇದೆಲ್ಲಾ ನಿಮಗೆ ಯಾಕೆ ಹೇಳಬೇಕು ಸ್ವಾಮಿ? ನಿಮ್ಮ ಹತ್ತಿರ ಕೆಲಸ ಖಾಲಿ ಇದೆಯೇ ಹೇಳಿ?"

ಎದುರಾಳಿತಾನೆ ಇಂತಹ ಸಂದರ್ಭದಲ್ಲಿ ಬಿಟ್ಟುಬಿಡುತ್ತಾನೆಯೇ! ಜೋರು ತೋರಿದರೆ ಇರುತ್ತಾನಾ? ಕೆಲಸಕ್ಕೆ ಆಳನ್ನು ಇಟ್ಟುಕೊಳ್ಳುತ್ತಾನೋ ಬಿಡುತ್ತಾನೋ. ಕೆಲಸ ಕೇಳಲು ಬಂದವನೆಲ್ಲಾ ಕೆಲಸದವನೇ! ಆದ್ದರಿಂದ ಯಜಮಾನಿಕೆಯ ಧ್ವನಿಯಲ್ಲೇ ಹೇಳುತ್ತಾನೆ, "ಖಾಲಿ ಇದೆ. ಆದರೆ ನಿಮಗೆ ಕೊಡುವುದಿಲ್ಲ. ಆದರೆ ಇಷ್ಟು ಮಾತ್ರ ತಿಳಿದುಕೊಂಡು ಹೋಗಿ. ಇದೆಲ್ಲಾ ವೃತ್ತಾಂತ ಕೇಳದೆ ಯಾರೂ ನಿಮ್ಮನ್ನು ಆಫೀಸಿನ ಕುರ್ಚಿಯಲ್ಲಿ ಕೂಡಿಸುವುದಿಲ್ಲ. ಬರೀ ಒಬ್ಬ 'ಬೆಯರರ್'ನ ಕೆಲಸ ಮಾಡಬೇಕಾದರೂ, ಬರೀ ನಿಮ್ಮದು ಮಾತ್ರವೇನು. ನಿಮ್ಮ ತಾತ–ಮುತ್ತಾತರ ಕುಲ–ಗೋತ್ರ ಕೆಲಸ ಇತ್ಯಾದಿಯೆಲ್ಲಾ ಕೇಳುತ್ತಾರೆ."

"ಯಾಕೆ? ಯಾಕೆ, ಹೇಳಿ ಸ್ವಾಮಿ? ಆಸಾಮಿ ಕಳ್ಳನೇನು?

ಅವರೆಲ್ಲಾ ಹೋ, ಹೋ ಎಂದು ನಗಲಾರಂಭಿಸುತ್ತಾರೆ.

ಹೇಳುತ್ತಾರೆ." ಓಹೋ, ಸ್ವಲ್ಪ 'ಸ್ಕ್ರೂಲೂಸ್' ಆಸಾಮಿ ಅಂತ ಕಾಣುತ್ತೆ!"

'ಸ್ಕ್ರೂಲೂಸ್' ಆಗಿರುವ ಆಸಾಮಿಯ ಬ್ರೆಯಿನ್ ಸ್ವಾಭಾವಿಕವಾಗಿರುವುದಿಲ್ಲ.

ಆದರೆ ಸರೋಜಾಕ್ಷರ ಬ್ರೆಯಿನಿಗೂ ಈ ರೋಗ ಹಿಡಿದಿದೆಯೇನು? ಅವರು ಮನೆಯ ಹೊಸಲು ದಾಟದೇ ಹೀಗೆ ಕುಳಿತಿದ್ದಾರಲ್ಲಾ. ಇದೆಂತಹ ಕೆಟ್ಟ ದೃಶ್ಯ! ಡಾಕ್ಟರು ರೆಸ್ಟ್ ತೆಗೆದುಕೊಳ್ಳಲು ಹೇಳಿದ್ದ ಗಡುವೂ ದಾಟಿಯಾಯಿತು.

ಕಮಲಾಕ್ಷ ಅಮ್ಮನ ಹತ್ತಿರ ಬಂದು ಕೇಳಿದ, "ಸಮಾಚಾರ ಏನು ಎಂದು ಸ್ವಲ್ಪ ಹೇಳು ಮದರ್, ಯಜಮಾನರು ಮನೆ ಬಿಟ್ಟು ರಸ್ತೆಗೆ ಇಳಿಯುತ್ತಿಲ್ಲವಲ್ಲ? ಆದರೆ ರೋಗವೂ ಏನು ಇಲ್ಲ? ವಿಜಯಾರ ತಲೆಯಲ್ಲಿ ಈಗೆಲ್ಲಾ ಯಾವಾಗಲೂ ಒಂದು ಜ್ವಾಲೆಯ ಉರಿ. ವಿಜಯಾ ತಮ್ಮ ಚಿಕ್ಕಮಗಳನ್ನು ಕುಳಿತರೆ, ನಿಂತರೆ ಭಸ್ಮ (ಮಾನಸಿಕವಾಗಿ) ಮಾಡುತ್ತಿದ್ದಾರೆ ಮತ್ತು ತಮ್ಮ ಮೃತ್ಯುವನ್ನು ಬಯಸುತ್ತಿದ್ದಾರೆ.

ಅದಕ್ಕೇ ವಿಜಯಾ ಎಷ್ಟೋ ದಿನದ ಮೇಲೆ ಮನೆಗೆ ಬಂದಿರುವ ಮಗನನ್ನೂ ಅಕ್ಕರೆಯಿಂದ ಮಾತಾಡಿಸುತ್ತಿಲ್ಲ. ಈ ಮಾತನ್ನು ಕೇಳಿ ಕೋಪದಿಂದ ಅಂದರು: "ಯಾಕೆ ಹೊರಗೆ ಹೋಗುತ್ತಿಲ್ಲ ಎಂದು ನನ್ನನೇನು ಕೇಳುತ್ತೀಯಾ? ನನ್ನನ್ನೇನು ಯಾವಾಗಲೂ ಅವರ ಜೊತೆಯಲ್ಲಿ ಕಂಠಸ್ಯ-ಗಳಸ್ಯ ಮಾಡುವುದನ್ನು ನೋಡಿದ್ದೀಯೇನು? ಹೋಗಿ ನೀನೇ ಕೇಳುವುದಕ್ಕೇನು?"

"ನಾ..........ನೇ? ಅ..........ಬ್ಬಾ!"

ಕಮಲಾಕ್ಷ ಭಯದ ಅಭಿನಯ ಮಾಡುತ್ತಾನೆ.

"ಯಾಕೆ? ಅಬ್ಬಾ ಏನು?" ವಿಜಯಾ ಕಟುವಾಗಿ ನುಡಿದರು: "ಸ್ವಂತ ತಂದೆಯಲ್ಲದೇ ಏನು, ಪಕ್ಕದ ಮನೆ ಮನುಷ್ಯನೇನೂ ಅಲ್ಲವಲ್ಲ. ಹುಚ್ಚು-ಗಿಚ್ಚು ಏನಾದರೂ ಹಿಡಿದು ಹೋಗುತ್ತಿದೆಯೋ ಏನೋ, ನೀವುಗಳಲ್ಲದೆ ಇನ್ನು ಯಾರು ನೋಡಬೇಕು?"

"ನನಗೆ ಬೇಕಾಗಿಲ್ಲಪ್ಪಾ!" ಹೇಳುತ್ತಾನೆ ಕಮಲಾಕ್ಷ: "ನಾನು ಬೇಗನೇ ಹೊರಟುಹೋಗುತ್ತೇನಪ್ಪಾ! ಮನೆಯ ಸ್ಥಿತಿ ನೋಡಿದರೆ-ಮನೆಯ ಯಜಮಾನರು, ನಿನ್ನ ಭಾಷೆಯಲ್ಲಿ, ಹುಚ್ಚು-ಗಿಚ್ಚು ಹಿಡಿದು ಹೋಗುತ್ತಿದ್ದಾರೆ. ಮನೆಯ ಯಜಮಾನಿ ಯಾವಾಗಲೂ ಸಿಂಹವಾಹಿನಿ, ಮನೆಯ ದೊಡ್ಡ ಮಗ ನರಕದ ಬಾಗಿಲಲ್ಲಿ ಹೋಗಿ ನಿಂತಿದ್ದಾರೆ. ಮನೆಯ ದೊಡ್ಡ ಮಗಳು ಒಂದು ಸಲ ಬಂದು ಬಣ್ಣದ ಕಿರಣಗಳನ್ನು ಹರಡಿಬಿಟ್ಟು ಹೋಗುತ್ತಾರೆ. ಮನೆಯ ಚಿಕ್ಕ ಮಗಳು ಸುಳ್ಳು-ಸುಳ್ಳಾಗಿ ಜ್ವರ ಎಂದು ರಾತ್ರಿ-ಹಗಲು ಮಲಗಿಕೊಂಡಿರುತ್ತಾಳೆ ಮತ್ತು ಮನೆಯಲ್ಲಿದ್ದ ಒಬ್ಬ ತಮಾಷೆಯ ಮನುಷ್ಯ, ರಸ್ತೆ ರಸ್ತೆಯಲ್ಲಿ ಕೆಲಸ ಕೊಡುತ್ತೀರಾ, ಕೆಲಸ ಕೊಡುತ್ತೀರಾ ಎಂದು ತಿರುಗುತ್ತಿದ್ದಾರೆ.-"

ವಿಜಯಾಗೆ ತಲೆಯೆಲ್ಲಾ ಉರಿಯುತ್ತಿದೆ. ಆದರೂ ಸ್ತಂಭಿಸಿ ಹುಬ್ಬೇರಿಸಿದರು, ಕೇಳಿದರು, "ಕೆಲಸ, ಕೆಲಸ ಎನ್ನುತ್ತಿರುವುದು ಯಾರು?"

"ಏಕೆ, ಶ್ರೀಮಾನ್ ಮಾವಯ್ಯನವರು!" ಕಮಲಾಕ್ಷ ಹೋಹೋ ಎಂದು ನಕ್ಕು ಹೇಳಿದ: "ಅಪ್ಪಾ ಕೆಲಸ ಬಿಟ್ಟುಬಿಟ್ಟಿದ್ದಾರಲ್ಲಾ, ಅದಕ್ಕೇ ಇವರು ಸಂಸಾರದ ಭಾರವನ್ನು ತೆಗೆದುಕೊಳ್ಳುತ್ತಾರೆ, ಸೆಟ್ಟಗೆ ಹೋಗಿ ಅಪ್ಪನ ಕುರ್ಚಿಯಲ್ಲೇ ಕುಳಿತುಕೊಂಡರಾಯಿತು!"

ವಿಜಯಾ ಕ್ರೋಧದಿಂದ ನುಡಿದರು, "ಕೆಲಸ ಹುಡುಕುತ್ತಿದ್ದಾರಾ" ಸಂಸಾರಕ್ಕಾಗಿಯೇ! ಹಾಗೇಂತ ಹೇಳಿದನೇ ನಿನ್ನ ಹತ್ತಿರ? ಆ ಒಬ್ಬ ಮನುಷ್ಯ. ಎಂತಹ ಗುಗ್ಗು, ಎಂತಹ ಗುಗ್ಗು. ನಿಮ್ಮನ್ನೆಲ್ಲಾ ಒಂದು ಸಂತೆಯಲ್ಲಿ ಖರೀದಿ ಮಾಡಿ ಇನ್ನೊಂದು ಸಂತೆಯಲ್ಲಿ ಮಾರಿಬಿಡುವ

ಛಾತಿ ಇದೆ ಅವನಿಗೆ. ರಾತ್ರಿ–ಹಗಲು ಏಕೆ ತಿರುಗುತ್ತಿದ್ದಾನೆ ಗೊತ್ತೇ? ಅವನ ಆ 'ಬೆಲೆ ಬಾಳುವ' ಮಹಾಭಾರತವನ್ನು ಹೇಗಾದರೂ ಮುದ್ರಿಸಬೇಕು ಅಂತ. ಅದನ್ನು ಮುದ್ರಿಸಿದರೆ ಪ್ರಪಂಚದಲ್ಲೆಲ್ಲಾ ಎಲ್ಲರೂ ಹೊಗಳುತ್ತಾರಂತೆ. ಅಷ್ಟೊ ಭಂಡತನ. ಆ ಛಲದಿಂದಲೇ ಜೀವನವೆಲ್ಲಾ ಮೈದುನನ ಕತ್ತಿನ ಮೇಲೆ ಕುಳಿತು ರಾಜನ ಜೀವನವನ್ನು ತಳ್ಳಿದ. ಈಗ ಗೂಡಿನಲ್ಲಿ ಜೇನು ಒಣಗಿತು, ನೋಡಿದ. ಅದಕ್ಕೇ ತನ್ನ ನಶೆಯ ಖರ್ಚಿಗಾಗಿ ಹಾತೊರೆಯುತ್ತಿದ್ದಾನೆ!"

"ನಶೇಯೇ? ಅಯ್ಯೋ ಛೇ ಪಾಪ!" ಕಮಲಾಕ್ಷ ಹೇಳಿದ: "ಕಡೆಯ ಪಕ್ಷ ಈ ಅಪವಾದವನ್ನು ಆ ಮನುಷ್ಯನ ಮೇಲೆ ಹೊರಿಸಬೇಡ." ಹೇಳಿಬಿಟ್ಟು ಹಠಾತ್ತನೆ ಸುಮ್ಮನಾದ.

ಕಮಲಾಕ್ಷನಿಗೆ ಅನ್ನಿಸುತ್ತೆ. ಈ ಪ್ರಪಂಚದಲ್ಲಿ ಯಾರನ್ನೂ ನಂಬಬಾರದು ಎಂದು.

ವಿಜಯಾ, ಹುಡುಗನ ಈ ಭಾವನೆಯ ಬದಲಾವಣೆಯನ್ನು ನೋಡುತ್ತಾರೆ ಮತ್ತು ಅದರ ಕಾರಣವನ್ನೂ ಅನುಮಾನಿಸುತ್ತಾರೆ. ಅದಕ್ಕೇ ವಿಜಯಾ ಸ್ವಲ್ಪ ಅದುಮಿದ ಧ್ವನಿಯಲ್ಲಿ ಕೇಳುತ್ತಾರೆ: "ಸಂಸಾರದಲ್ಲಿನ ಎಲ್ಲರ ಮೇಲೂ ಟೀಕಿಸಿದೆ. ಮನೆಯ ಸೊಸೆಯ ವಿಷಯವಾಗಿ ಮಾತ್ರ ಹೇಳಲು ಧೈರ್ಯವಾಗಲಿಲ್ಲವೇನೋ?"

ಕಮಲಾಕ್ಷ ಸ್ವಲ್ಪ ಹೊತ್ತು ಸುಮ್ಮನಿರುತ್ತಾನೆ.

ಆಮೇಲೆ ಸ್ವಲ್ಪ ಮೆಲ್ಲನೆಯೇ ಹೇಳಿದ, "ಧೈರ್ಯ ಇಲ್ಲ ಎಂದಲ್ಲ. ಅಭಿರುಚಿ ಇಲ್ಲ." ಮೆಲ್ಲಗೇ ಹೇಳಿದ ಕಾರಣ, ಸುನಂದಾ ಮನೆಯಲ್ಲೇ ಇದ್ದಾಳೆ.

ಏನೋ ಗೊತ್ತಿಲ್ಲ ಈಗೆಲ್ಲಾ ಮುಕ್ಕಾಲು ಪಾಲು ಸುನಂದಾ ಮನೆಯಲ್ಲೇ ಇರುತ್ತಾಳೆ. ತಾಯಿ ಮನೆಗೆ ಹೋಗುವುದನ್ನೂ ನಿಲ್ಲಿಸಿದ್ದಾಳೆ.

ಸುನಂದಾ ಅಲಂಕಾರ ಮಾಡಿಕೊಂಡು ಸಾಯಂಕಾಲದ ಹೊತ್ತು ನೀಲಾಕ್ಷನ ಜೊತೆಯಲ್ಲೂ ಹೋಗುತ್ತಿಲ್ಲ.

ಆದರೆ ಏಕೆ?

ವಿಜಯಾ ಮನಸ್ಸಿನಲ್ಲೇ ಪ್ರಶ್ನೆ ಹಾಕಿಕೊಳ್ಳುತ್ತಾರೆ. ಹಠಾತ್ತನೆ ಈ ಬದಲಾವಣೆ ಏಕೆ? 'ಕಳ್ಳನ ಮನಸ್ಸು ಹುಳ್ಳುಳ್ಳಗೆ' ಎನ್ನುವ ಹಾಗೆ ವಿಜಯಾ ಮನಸ್ಸು ಅದರ ಕಡೆಗೇ ಹೋಗುತ್ತೆ. ಅವರ ದೃಢವಾದ ನಂಬಿಕೆ, ಸುನಂದಾಗೆ ಮೀನಾಕ್ಷಿಯ ಬಗ್ಗೆ ಅನುಮಾನವಾಗಿದೆ. ಅವಳನ್ನು ಕಂಗಾಣಿಸುವುದಕ್ಕಾಗಿಯೇ ಅವಳು ಮನೆಯಲ್ಲಿ ಇರುತ್ತಿದ್ದಾಳೆ ಎಂದು.

ಅನುಮಾನ ಬಂದೇ ಬರುತ್ತೆ.

ಹೆಂಗಸಿನ ಕಣ್ಣು ಅವನ್ನು ಮೋಸಗೊಳಿಸಲಾಗುವುದಿಲ್ಲ. ಮೀನಾಕ್ಷಿಗೆ ನಿಜವಾಗಲೂ ಯಾವ ರೋಗವೂ ಇಲ್ಲ. ಕೇವಲ ಮನೋರೋಗದಿಂದ ನರಳುತ್ತಾ ಬಿದ್ದಿದ್ದಾಳೆ ಎಂದು ಸುನಂದಾಗೆ ತಿಳಿದುಹೋಗಿದೆ. ವಿಜಯಾ ಯೋಚಿಸುತ್ತಾರೆ, ಏನು ಮಾಡೋಣ? ಹೇಗಾದರೂ ಮಾಡಿ ಜಗಳ ಆಡಿ ಈ ಬಜಾರಿ ಸೊಸೆಯನ್ನು ಮನೆಯಿಂದ ಓಡಿಸಲೇ?

ಆಗ ಬಹುಶಃ ಮೀನಾಕ್ಷಿಯ ವಿಷಯ ಎಲ್ಲರಿಗೂ ತಿಳಿಯುವಂತಾಗುವುದಿಲ್ಲ. ಸ್ವಲ್ಪ ಸ್ವಲ್ಪವಾಗಿ ಅವಳೂ ಸುಧಾರಿಸಿಕೊಂಡು ಏಳಬಹುದು. ಆಗ ನೋಡಿ ಮಾಡಿ ಹೇಗಾದರೂ ಅವಳಿಗೆ ಒಂದು ಮದುವೆ ಮಾಡಿಬಿಡಬಹುದು.

ಬಹುಶಃ ಸುನಂದಾಳ ಈ ಬದಲಾವಣೆಗೆ ಬೇರೆ ಏನಾದರೂ ಕಾರಣವೂ ಇರಬಹುದು. ಅವಳು ಒಂದು ವೇಳೆ ಮೀನಾಕ್ಷಿಯ ಕಡೆ ತಿರುಗಿಯೂ ನೋಡಿಲ್ಲದಿರಬಹುದು, ಆದರೂ ವಿಜಯಾ ಅದನ್ನೇ ಯೋಚಿಸುತ್ತಿರುತ್ತಾರೆ.

ಆದರೆ ಸುನಂದಾ ನಿಜವಾಗಲೂ ಒಂದು ದಿನ ತಿರುಗಿ ನೋಡಿದಳು. ಅವಳು ಗಮನಿಸಿದಳು. ಮೀನಾಕ್ಷಿಗಾಗಿ ಯಾರೂ ಡಾಕ್ಟರು ಬರುತ್ತಿಲ್ಲ. ಅವಳು ಎದ್ದು ಹೋಗಿ ಊಟವನ್ನೂ ಮಾಡಿಬಿಟ್ಟು ಬರುತ್ತಾಳೆ, ಆದರೆ ಕಾಲೇಜಿಗೆ ಹೋಗುತ್ತಿಲ್ಲ. ರಾತ್ರಿ-ಹಗಲು ಕೋಣೆಯೊಳಗೇ ಬಿದ್ದಿರುತ್ತಾಳೆ. ಸುನಂದಾ ಯೋಚಿಸುತ್ತಾಳೆ, 'ಹಾಗಾದರೆ ಮೀನಾಕ್ಷಿ ಯಾವುದಾದರೂ ಪರೀಕ್ಷೆಯಲ್ಲಿ ಪಾಸಾಗದೆ ಆ ನಾಚಿಕೆಗೋಸ್ಕರ ಹೀಗಿದ್ದಾಳೆಯೇ?'

ಒಳ್ಳೆ ಚೆನ್ನಾಯಿತು!

ಅಪ್ಪಾ ಮನೆಯಿಂದ ಹೊರಗೆ ಹೋಗುವುದನ್ನು ಬಿಟ್ಟಿದ್ದಾರೆ. ಅಪ್ಪನ ಮಗಳೂ ಅದನ್ನೇ ಮಾಡುತ್ತಿದ್ದಾಳೆ ಮತ್ತು ಅಪ್ಪನ ಸೊಸೆಯೂ--ಸುನಂದಾ ಮನಸ್ಸಿನಲ್ಲೇ ತನಗಾಗಿ ಒಂದು ವ್ಯಂಗ್ಯ ನಗು ನಗುತ್ತಾಳೆ. ಅಪ್ಪನ ಸೊಸೆಯು ಹೊರಗಿನ ಪ್ರಪಂಚಕ್ಕೆ ಕಾಲಿಡದೆ ಗರಿ ಮುದುರಿಕೊಂಡು ಮನೆಯಲ್ಲಿ ಕೂಡಲೆಳಸುತ್ತಾಳೆ ಇನ್ನು ಮತ್ತೆ--ವ್ರತಕಥೆಗಳಂತೆ, ಅತಃ ಇನ್ನು ಮೇಲೆ ಎಲ್ಲರೂ ಸುಖವಾಗಿ ಇರಲಾರಂಭಿಸಿದರು ಎಂಬಂತಾಗುತ್ತದೆಯೇ?

ಇಲ್ಲವೆ ಇದು ಬರೀ, ಬಿರುಗಾಳಿಗೆ ಮುಂಚಿನ ಶಾಂತವಾತಾವರಣವೇ!

ಸುನಂದಾನೂ ತನ್ನ ಕೋಣೆಯಲ್ಲೇ ಇರಲು ಬಯಸುತ್ತಾಳೆ.

ಏನೋ ಇದು ಒಂದು ಹೊಟೇಲು-ಕೋಣೆ ಎಂಬಂತೆ.

ಒಂದೇ ಕಡೆ ಅಡಿಗೆಯಾಗುತ್ತೆ. ಆದರೆ ಬೇರೆ ಬೇರೆ ಪರಿವಾರದವರಂತೆ ಎಲ್ಲರೂ ಅವರವರ ಕೋಣೆಯಲ್ಲಿ ಇರುತ್ತಾರೆ.

ಒಂದಾನೊಂದು ಕಾಲದಲ್ಲಿ ಎಲ್ಲರೂ ಒಂದೇ ಪರಿವಾರದವರೇ ಆಗಿದ್ದರು. ಒಂದೇ ಕಡೆ ಕುಳಿತು ಮಾತುಕತೆಯಾಡುತ್ತಿದ್ದರು. ಒಬ್ಬರನ್ನೊಬ್ಬರು ನೋಡುತ್ತಿದ್ದರು. ಒಬ್ಬರ ವಿಷಯ ಇನ್ನೊಬ್ಬರಿಗೆ ತಿಳಿದಿತ್ತು ಎಂಬುದು ಯಾರಿಗೂ ಜ್ಞಾಪಕವೇ ಬರುತ್ತಿಲ್ಲ.

ಆದರೆ ಒಂದು ಕಾಲದಲ್ಲಿ ಹಾಗೂ ಇತ್ತು.

ಸರೋಜಾಕ್ಷರು ಯಾವಾಗಲೂ ಹೆಚ್ಚು ಮಾತಾಡುತ್ತಿರಲಿಲ್ಲ. ಆದರೂ ಎಲ್ಲರೂ ಸುತ-ಮುತ್ತ ಬಂದು ಕುಳಿತುಕೊಳ್ಳುತ್ತಿದ್ದರು.

ಸುನಂದಾ ಕೇಳುತ್ತಿದ್ದಳು, "ಈ ಪುಸ್ತಕದಲ್ಲಿ ಇಂತಹ ಕಡೆ ಇದು ಸರಿಯಾಗಿ ಅರ್ಥವಾಗುತ್ತಿಲ್ಲ. ಇಲ್ಲಿ ಲೇಖಕರು ಏನು ಹೇಳುತ್ತಿದ್ದಾರೆ, ಹೇಳಿ" ಎಂದು.

ಆವಾಗ ಮೀನಾಕ್ಷಿ ಹೇಳುತ್ತಿದ್ದಳು, "ಅಬ್ಬಾ, ಅತ್ತಿಗೆ, ಹೇಗೆ ತಾನೆ ಅಷ್ಟು ದಪ್ಪ ದಪ್ಪ ಪುಸ್ತಕಗಳನ್ನು ಒಂದೇ ದಿನದಲ್ಲಿ ಓದಿ ಮುಗಿಸುತ್ತಾಳೋ!" ಎಂದು.

ಕಮಲಾಕ್ಷ ಆಗ ಮನೆಯಲ್ಲೇ ಇದ್ದ.

ಅವನು ಮೆಲ್ಲಗೆ ಹೇಳುತ್ತಿದ್ದ, "ಮನುಷ್ಯ ಓದಬೇಕಾದ ಜವಾಬ್ದಾರಿಯನ್ನು ಕಳೆದಾದ ಮೇಲೂ ಯಾಕೆ ತಾನೆ ಇನ್ನೂ ಓದಲು ಕುಳಿತುಕೊಳ್ಳುತ್ತಾನೋ, ಇದು ನನ್ನ ಬುದ್ಧಿಗೆ ಎಟುಕುತ್ತಿಲ್ಲ. ಇಟ್ಟು ಬಿಡು ಅತ್ತಿಗೆ, ಪುಸ್ತಕ ಇಟ್ಟುಬಿಡು. ಇಲ್ಲದಿದ್ದರೆ ಈ ಮನೆ ಯಜಮಾನರ ಗಾಳಿ ನಿನ್ನ ಮೇಲೂ ಬೀಸುತ್ತೆ. ಅದಕ್ಕಿಂತ ಒಂದು ಆಟ ಕೇರಂ ಆಗಲಿ."

ನೀಲಾಕ್ಷ ಹೇಳುತ್ತಿದ್ದ "ನೋಡು ಕಮಲ್, ಓದಿ ಬರೆದು ಓಡಿ ಓಡಿ ಕೆಲಸ ಮಾಡಿದರೆ ಏನೂ ಪ್ರಯೋಜನವಿಲ್ಲ. ದೊಡ್ಡ ಮನುಷ್ಯನಾಗಬೇಕಾದರೆ--ಬಿಸಿನೆಸ್ ಮಾಡಬೇಕು. ಬಿಸಿನೆಸ್ ಅನ್ನೋದು ಏನು ಅಂತ ಈಗಿಂದಲೇ ಕಲಿಯಲು ಷುರು ಮಾಡು."

ಮಯೂರಾಕ್ಷಿಯೂ ಆಗ ಮನೆಯಲ್ಲೇ ಇದ್ದಳು. ಅವಳಿಗಿನ್ನೂ ಮದುವೆಯಾಗಿರಲಿಲ್ಲ. ಅವಳು ಹೇಳುತ್ತಿದ್ದಳು, "ನೀನು ಸುಮ್ಮನಿರಣ್ಣಾ! ಬೆಂಗಾಲಿಗಳ ತಲೆಗೆ ಅದೆಲ್ಲಾ ಹತ್ತುವುದಿಲ್ಲ. ಒಂದು ಲೋಟಾ-ಕಂಬಳಿಯನ್ನು ಭರವಸೆಯಾಗಿಟ್ಟುಕೊಂಡು, ಎರಡು ಕಾಸಿನ ಹುರಿ-ಗಡಲೆ ತಿಂದು ಕಾಲ ಕಳೆಯುವವರಿಗೇ ಅದು ಸಾಧ್ಯ. ಬೆಂಗಾಲಿಗಳ ಅಭಿರುಚಿಯೇ ಬೇರೆ. ಮತ್ತು ಮಧ್ಯೆ ಮಧ್ಯೆ ಈ ಸಭೆಯಲ್ಲಿ ಪ್ರತ್ಯಕ್ಷವಾಗುತ್ತಿದ್ದರು ಹುಚ್ಚು ಶಾರದಾ ಪ್ರಸಾದ್ ಮತ್ತು ಹೇಳುತ್ತಿದ್ದರು: "ನೀವೆಲ್ಲಾ ಈ ಉಪಯೋಗವಿಲ್ಲದ ವಿಷಯವಾಗಿ ಮಾತಾಡಿ ಸುಮ್ಮನೇ ಕಾಲ ಕಳೆಯುತ್ತಿದ್ದೀರಿ. ಆದರೆ ನನ್ನ ಆ ಹೊಸ ಚಾಪ್ಟರ್‌ನ್ನು ಕೇಳಿ ಅನ್ನುತ್ತಿದ್ದೇನೆ, ನಿಮಗೆ ಪುರುಸೊತ್ತೇ ಆಗುತ್ತಿಲ್ಲ. ಅದನ್ನು ಕೇಳಿದ್ದರೆ ಗೊತ್ತಾಗುತ್ತಿತ್ತು. ಎಷ್ಟು ಇಂಟರೆಸ್ಟಿಂಗ್ ವಿಷಯ ಎಂದು! ರಾವಣ ಸ್ವರ್ಗಕ್ಕೆ ಮೆಟ್ಟಲು ಹಾಕುತ್ತಿದ್ದ. ಹಾಗೆಯೇ ಮಧ್ಯೆ ಸತ್ತುಹೋದ. ವಾಸ್ತವವಾಗಿಯೂ ಸಮಾಚಾರವೇನು ಗೊತ್ತೇ? ರಾವಣ ದೂರಕ್ಕೆ ಹೋಗುವಂತಹ ರಾಕೆಟ್ಟಿನ ಪರೀಕ್ಷೆ ನಡೆಸುತ್ತಿದ್ದ. ಇನ್ನೂ ಸ್ವಲ್ಪ ದಿನ ಬದುಕಿದ್ದರೆ ಬಹುಶಃ ಅದರಲ್ಲಿ ಸಫಲನಾಗುತ್ತಿದ್ದ ಮತ್ತು ಚಂದ್ರಲೋಕ, ಮಂಗಳ, ಶುಕ್ರ ಲೋಕಗಳಿಗೆ ಹೋಗುತ್ತಿದ್ದ. ಆದರೆ ಅದಕ್ಕೆ ಮುಂಚೆಯೇ ರಾವಣ, ಧಡಿಯ ಒಂದು ಪಾಪ ಯುದ್ಧದಲ್ಲಿ ಇಳಿದು ಧ್ವಂಸನಾಗಿಹೋದ. ಈಗ ಹೇಗೆ ವಿಯಟ್‌ನಾಮ್ ಯುದ್ಧ ನಡೆಯುತ್ತಿದೆಯೋ ಹಾಗೆಯೇ! ಯಾರಿಗೆ ಗೊತ್ತು ರಾವಣನ ಆ ಫಾರ್ಮುಲಾ ಯಾರ ಕೈಗಾದರೂ ಸಿಕ್ಕಿದೆಯೋ ಏನೋ! ಹಿಂದೆಲ್ಲಾ ಜನ ಮಂತ್ರ-ಗುಪ್ತಿ ಮಾಡುತ್ತಿದ್ದರು. 'ಫಾರ್ಮುಲಾ'ವನ್ನು ತಾಮ್ರದ ಸಂದೂಕದಲ್ಲಿ ಇಟ್ಟು ನೀರಿನಲ್ಲಿ ತೇಲಿಸಿಬಿಡುತ್ತಿದ್ದರು. ಯಾರಾದರೂ ರಾವಣನ ಫಾರ್ಮುಲಾವನ್ನೇ ತೆಗೆದುಕೊಂಡಿರಲಿ, ಅಥವಾ ತಾವೇ ಕಂಡುಹಿಡಿದೆ ಎಂದು ಹೇಳಲಿ, ಈ ಯುಗ ಏನನ್ನೂ ಹೊಸದಾಗಿ ಕಂಡುಹಿಡಿಯಲಿಲ್ಲ ಎಂಬುದೇ ನನ್ನ ಅಭಿಪ್ರಾಯ. ಅದನ್ನೇ ನಾನು ಹೇಳುತ್ತಿದ್ದೇನೆ."

ಆದರೆ ಶಾರದಾ ಪ್ರಸಾದ್‌ರ ಮಾತನ್ನು ಕೇಳಲು ಯಾರೂ ಇಷ್ಟಪಡುತ್ತಿರಲಿಲ್ಲ. ನುಸುಳಿಕೊಳ್ಳುತ್ತಿದ್ದರು. ಆದರೆ ಅವಮಾನಗೊಳಿಸಿ ಅಲ್ಲ, ಚಾಣಕ್ಯತೆಯಿಂದ.

ಆಮೇಲೆ ಮರೆಯಲ್ಲಿ ನಗೆಯಾಡುತ್ತಿದ್ದರು.

ಈ ಪರಿವಾರದ ಸಭೆಯಲ್ಲಿ ಗೈರುಹಾಜರಿಕೆ ಇದ್ದುದು ಕೇವಲ ವಿಜಯಾದು. ಅವರು ಅವರ ದೇವರ ಮನೆಯ ಕೋಣೆಯೊಳಗೆ ವಾಸವಾಗಿರುತ್ತಿದ್ದರು.

ಆದರೆ ಈಗ ವಿಜಯಾಗೆ ಇಪ್ಪತ್ತುನಾಲ್ಕು ಗಂಟೆ ಕಾಲ ಆ ಕೋಟೆಯೊಳಗೆ ಇರಲಾಗುತ್ತಿಲ್ಲ. ವಿಜಯಾ ಏನೋ ಚಡಪಡಿಸುತ್ತಾ ಕೆಳಗೆ ಇಳಿದು ಬರುತ್ತಾರೆ.

ವಿಜಯಾರ ಗಂಟಲು ಯಾವ ಯಾವಾಗಲೋ ಎರಡನೇ ಮಹಡಿಯಲ್ಲಿ ಅಥವಾ ಕೆಳಗಡೆ ಕೇಳಿಸುತ್ತೆ.

ವಿಜಯಾಗೆ ಹತಾತ್ತನ ತೋರಿತೇ? ಮನೆಯ ಯಜಮಾನಿ ತನ್ನನ್ನು ತೇಲಿಸಿ ಬಿಟ್ಟರೆ ಸಂಸಾರ ತೇಲಿಕೊಂಡು ಕೈಗೆ ಎಟುಕದೆ ಹೊರಟುಹೋಗುತ್ತೆ ಎಂದೆನಿಸಿತೇ?

ವಿಜಯಾರ ಮಾತು ವಿಜಯಾಗೇ ಗೊತ್ತು. ಆದರೆ ಸರೋಜಾಕ್ಷರು ಮಧ್ಯೆ ಮಧ್ಯೆ ಆಶ್ಚರ್ಯಪಡುತ್ತಾರೆ. ಜೀವನದಲ್ಲಿ ಇದುವರೆಗೂ ಮಾಡದಿದ್ದುದನ್ನು ಮಾಡುತ್ತಾರೆ. ಒಂದೊಂದು ಸಲ! ವಿಜಯಾ ಏನು ಹೇಳುತ್ತಿದ್ದಾರೆಂದು ಕೇಳಲು ಪ್ರಯತ್ನಿಸುತ್ತಾರೆ! ವಿಜಯಾ ಗಟ್ಟಿಯಾಗಿ ಕೂಗುತ್ತಿರುವುದರಿಂದಲೇ ಒಂದು ದಿನ ಅವರಿಗೆ, ಶಾರದಾ ಪ್ರಸಾದ್ ಕೆಲಸ ಹುಡುಕುತ್ತಿರುವುದು ಗೊತ್ತಾಗುತ್ತೆ.

ಹುಡುಕುತ್ತಿದ್ದಾರೆ, ಅಥವಾ ಹುಡುಕುವ ಆಟ ಹೂಡಿದ್ದಾರೆ!

ಸರೋಜಾಕ್ಷರು ಸ್ತಬ್ಧರಾಗುತ್ತಾರೆ!

ಅವರು ತಮ್ಮ ಕರ್ತವ್ಯವನ್ನು ನಿರ್ಣಯಿಸಲು ಕುಳಿತುಕೊಳ್ಳುತ್ತಾರೆ.

ವಿಜಯಾರ ಒಂದು ಶಂಕೆ ನಿಜವಾಗುತ್ತೆ.

ಸುನಂದಾ ನಾದಿನಿಯ ಕಡೆ ನೋಡುತ್ತಾಳೆ.

ಒಂದು ದಿನ ಅವಳ ಕೋಣೆಯೊಳಗೆ ಹೋಗಿ ಕೇಳುತ್ತಾಳೆ, "ಮೀನಾ, ನಿನಗೇನಾಗಿದೆ ಹೇಳು ನೋಡೋಣ?"

ಕಿಟಕಿಯಿಂದ ಮುಳುಗುವ ಸೂರ್ಯನ ಬೆಳಕು ಒಳಗೆ ಇಣುಕುತ್ತಿತ್ತು. ಮೀನಾಕ್ಷಿ ಬೇಗ ಎದ್ದು ಕಿಟಕಿಯ ಬಾಗಿಲನ್ನು ಹಾಕಿದಳು. ಆ ಮುಳುಗುವ ಸಾಯಂಕಾಲದ ಬೆಳಕನ್ನು ಕಂಡರೆ ಮೀನಾಕ್ಷಿಗೆ ಬಹಳ ಭಯ. ಏನೋ ಅದು ಒಂದು ಸರ್ವಗ್ರಾಸಿಯಾದ ಕಪ್ಪು ದೈತ್ಯನ ಚಿನ್ನದ ಮುಖವಾಡವಿದ್ದಂತಿದೆ! ಕ್ಷಣದಲ್ಲೇ ಅದು ಕಿತ್ತುಹೋಗಿ ಆ ಕಪ್ಪು ದೈತ್ಯ ತನ್ನ ಭಯಂಕರವಾದ ರೋಮದಿಂದ ಕೂಡಿದ ಪಂಜೆಯಿಂದ ಎಳೆದುಕೊಂಡು ಮೀನಾಕ್ಷಿ ಎಂಬ ಒಂದು ಹುಡುಗಿಯನ್ನು ಹಿಡಿದು ಪುಡಿ ಪುಡಿಯಾಗಿ ಮಾಡಿಬಿಡುತ್ತೇ. ಮೀನಾಕ್ಷಿ ಎಂಬ ಒಂದು ಹುಡುಗಿಯನ್ನು ನಿರ್ಮೂಲನೆ ಮಾಡಿಬಿಡುತ್ತೆ.

ಹಾಗಾದರೆ ಮೀನಾಕ್ಷಿ ಎಂಬ ಆ ಹುಡುಗಿ ಇನ್ನೂ ಇದೆಯೇ? ಆ ಭೀರು, ಆದರೂ ವಿಪ್ಲವಿ, ಮೃದು ಆದರೂ ತೇಜದಿಂದ ಕೂಡಿದ. ವ್ಯತಿರಿಕ್ತ ಪದಾರ್ಥದಿಂದ ಮಾಡಲ್ಪಟ್ಟ ಆ ಹುಡುಗಿ! ಅವಳು ತನಗೆ ತಾನೇ ಯೋಚಿಸುತ್ತಾಳೆ, ಅವಳು ಮುಗಿದುಹೋದಳು. ಅಳಿಸಿಹೋದಳು. ಸತ್ತುಹೋದಳು. ಅದಕ್ಕೇ ಪ್ರಪಂಚದ ಕಡೆ ಬೆನ್ನು ತಿರುಗಿ ಗೋಡೆಯನ್ನು ನೋಡುತ್ತಾ ಮಲಗಿದ್ದಾಳೆ. ಈ ಕಡೆಯ, ಪ್ರಪಂಚದ ಕಡೆಯ ಬಾಗಿಲು ಒಂದು ಬಿರುಗಾಳಿಯಿಂದ ಮಧ್ಯೆ ಮಧ್ಯೆ ತೆಗೆದುಕೊಳ್ಳುತ್ತೆ. ಆ ಬಿರುಗಾಳಿ ಮೀನಾಕ್ಷಿಯ ಮೇಲೆ ಬಂದು ಬೀಳುತ್ತೆ, "ರಾತ್ರಿ-ಹಗಲು ಮಲಗಿದ್ದು ಯಾಕೆ ಗೋಳಾಡಿಸುತ್ತೀಯ? ಮನೆಯ ಮಂದಿ ಯಾರೂ ಕುರುಡರಲ್ಲವಲ್ಲಾ, ಜ್ವರ ಎಂದು ಮಲಗಿದ್ದರೆ ಇಷ್ಟು ದಿನ ಆಯಿತು, ಯಾರೂ ಡಾಕ್ಟರು ಬಂದು ನೋಡುತ್ತಿಲ್ಲವಲ್ಲ ಎಂದು ಗೊತ್ತಾಗುವುದಿಲ್ಲವೇ? ಸುಮ್ಮನೆ ಮಲಗಿದ್ದರೆ ಜನರ ಅನುಮಾನವನ್ನು ಹೋಗಲಾಡಿಸುವುದಕ್ಕಾಗುತ್ತದೆಯೇ?"

ಮೀನಾಕ್ಷಿ ಈ ಬಿರುಗಾಳಿಯ ಮುಂದೆ ಮೂಗು-ಕಿವುಡು, ಕಲ್ಲಿನಂತಾಗಿದ್ದಾಳೆ. ಗೋಡೆಯ ಕಡೆ ತಿರುಗಿ ಮಲಗಿರುತ್ತಾಳೆ.

ಒಂದೊಂದು ಸಲ ಆ ಬಿರುಗಾಳಿಯೇ ಬಂದು ಪಿಸುಮಾತಿನಲ್ಲಿ ಕೇಳುತ್ತೆ. ಮೀನಾಕ್ಷಿಯ ಮೇಲೆ ಬಿರುಗಾಳಿಯ ಬಿಸಿ ಶ್ವಾಸ ಬಂದು ತಾಕುತ್ತೆ. ಏನೋ ಒಂದು ಅವಾಂತರ ಮಾಡಿಕೊಂಡೇ ಬಂದಿದ್ದೀಯಾ ಎಂದು ಗೊತ್ತೇ ಆಗುತ್ತಿದೆ. ಆದರೆ ತಲೆ ಹೋಗುವ ವಿಪತ್ತು ಏನಾದರೂ ಆಗಿದೆಯೇ ಹೇಳು. ಹಾಗಾದರೆ ನೂರು ಜನ್ಮದ ನರಕವನ್ನೂ ಲಕ್ಷಿಸದೆ ಏನಾದರೊಂದು ಏರ್ಪಾಡು ಮಾಡೋಣ."

ಕಲ್ಲಿಗೂ ಏನಾದರೂ ಅನುಭವವಾಗುವುದು ಸಾಧ್ಯವೇನು?

ಕಲ್ಲೂ ಕೂಡ, ಭಯ, ಆಶ್ಚರ್ಯ, ತಿರಸ್ಕಾರಗಳಿಂದ ಸಂಕುಚಿತವಾಗುವುದು ಸಾಧ್ಯವೇ?

ಗೊತ್ತಾಗುವುದಿಲ್ಲ:

ಗೊತ್ತಾದರೆ ಕೇಳಿಸುತ್ತಿತ್ತೇನೊ ಒಂದು ಕೂಗು. ಗೋಡೆಗಳಿಗೆ ಢಿಕ್ಕಿ ಹೊಡೆದು ಕೇಳಿಸಿರುವುದು, ಛೀ, ಛೀ, ಛಿ, ಛೀ!

ಹೇಳಿರುವುದು --ಇವಳೆಯೇ ನನ್ನ ಪುಣ್ಯವತಿ ಅಮ್ಮಾ!

ಆರ್ತನಾದ ಕೇಳಿಸುವುದಿಲ್ಲ.

ಮೂಕ ಗೋಡೆಯ ಕಡೆ ತಿರುಗಿಕೊಂಡು ಬಿದ್ದಿದೆ ಒಂದು ಮೂಕ ಗೊಂಬೆ.

ಬಿರುಗಾಳಿ ಕಡೆಗೆ ಬೇರೆ ದಾರಿಯಿಲ್ಲದೆ ಇನ್ನೊಂದು ಕೋಣೆಗೆ ಹೋಗಿ ಶರಣಾಗುತ್ತೆ ಯಾರನ್ನು ತನ್ನ ಚಿರಶತ್ರು ಎಂದು ತಿಳಿದಿತ್ತೋ ಅಲ್ಲಿಗೇ!

"ಮಾನಾಪಮಾನವನ್ನು ಬಿಟ್ಟು ನಿನ್ನ ಹತ್ತಿರವೇ ಬರಬೇಕಾಯಿತು ಸೊಸೆಯಮ್ಮಾ, ಆದರೆ ಇದೂ-ಹೇಳುತ್ತೇನಮ್ಮಾ, ಈ ಕಳಂಕ ಬರೀ ನನ್ನದು ಮಾತ್ರವೇ ಅಲ್ಲ. ನಿಮಗೂ ಸೇರಿದ್ದೇ. ನಿಮ್ಮ ಮಾವನ ಮನೆ ಕಳಂಕ ಹೊರಬಂದರೆ ಅವಮಾನ ನಿಮಗೂ ಆಗುತ್ತೆ.

ಈ ಹಾಳಾದ ಹುಡುಗಿಯನ್ನು ಕೇಳಿ ಕೇಳಿ ಸಾಕಾಯಿತು. ಒಂದು ಮಾತು ಬಾಯಿಂದ ಹೊರಡಿಸಲಾಗಿಲ್ಲ. ನೀನು ಒಂದು ಸ್ವಲ್ಪ ಪ್ರಯತ್ನ ಮಾಡು. ನನ್ನ ಒಳ್ಳೆಯ ಕಾಲಕ್ಕೆ ಈಗೆಲ್ಲಾ ಹೇಗೂ ಮನೆಯಲ್ಲೇ ಇರುತ್ತೀಯಲ್ಲಾ" ಸುನಂದಾ ಕೇಳಿದಳು. ಅವಳೂ ಹಾಗೆಯೇ ಕಲ್ಲಿನ ಬೊಂಬೆಯಂತೆ ಭಾವಹೀನವಾದ ದೃಷ್ಟಿಯಿಂದ ಏನೂ ಗೊತ್ತಾಗಲಿಲ್ಲ ಎಂಬಂತೆ, ಅತ್ತೆಯ, ಉತ್ತೇಜನೆಯಿಂದ ಕೆಂಪೇರಿದ ಮುಖದ ಕಡೆ ನೋಡುತ್ತಾ ಇದ್ದಳು.

ಈಗೆಲ್ಲಾ ಅದೇ ಅವಳ ಅಭ್ಯಾಸ.

ಏನೋ ಒಂದೂ ಅರ್ಥವಾಗುತ್ತಿಲ್ಲ ಎಂಬಂತೆ!

ಆದರೆ ಸುನಂದಾಗೆ ಎಲ್ಲಾ ಗೊತ್ತಾಗುತ್ತಿದೆ.

ಏಕೆಂದರೆ ಸುನಂದಾ ಈಗೆಲ್ಲಾ ಮನೆಯಲ್ಲೇ ಇರುತ್ತಿದ್ದಾಳೆ. ಒಬ್ಬ ಹೆಂಗಸಿನ ತೀಕ್ಷ್ಣ ದೃಷ್ಟಿಗೆ ಸಂದರ್ಭದ ನೈಜತೆ ಗೊತ್ತಾಗದೆ ಇರುವುದಿಲ್ಲ.

ಆದರೂ ಸುನಂದಾ ಏನೂ ಗೊತ್ತಾಗಲಿಲ್ಲ ಎಂಬಂತೆ ಭಾವಶೂನ್ಯವಾದ ದೃಷ್ಟಿಯಿಂದ ನೋಡುತ್ತಿದ್ದಳು. ನೋಡಿ ವಿಜಯಾಗೆ ಕೋಪ ಉಕ್ಕಿ ಬರುತ್ತಿತ್ತು. ಆದರೂ ಕೋಪವನ್ನು ನುಂಗಿಕೊಂಡು ತಿರುಗಿ ಹೇಳಿದರು, "ಹಾಳಾದವಳಿಗೆ ಹೋಗಿ ತಿಳಿಯ ಹೇಳು, ಈ ತರಹ ಬಿದ್ದುಕೊಂಡಿದ್ದರೆ ಅವಮಾನ ಜಾಸ್ತಿಯಾಗುತ್ತದೆಯೇ ವಿನಹ ಕಡಿಮೆಯಾಗುವುದಿಲ್ಲ ಎಂದು ಅದೂ ಕೇಳು, ಏನಾದರೂ ನಾಚಿಕೆಗೇಡು ಕೆಲಸ ಮಾಡಿಕೊಂಡು ಬಂದಿದ್ದಾಳೋ ಏನೋ ಎಂದು ದೇವರೇ, ಹೀಗೂ ಬರೆದಿತ್ತು ಹಣೆಯಲ್ಲಿ!"

ಹಣೆಯ ಬರಹವನ್ನು ದೂರುವುದು ವಿಜಯಾಗೆ ಚೆನ್ನಾಗಿಯೇ ಬರುತ್ತೆ. ಇಂತಹ ಸಮಯದಲ್ಲಿ ಅವರ ದೊಡ್ಡ ಮಗಳೂ ಊರಲ್ಲಿಲ್ಲ. ತಿರುಗಾಡಿಕೊಂಡು ಬರಲು ಬಾಂಬೆಗೆ ಹೋಗಿದ್ದಾಳೆ. ಅಜಂತಾ ಎಲ್ಲೋರ ನೋಡಿಕೊಂಡೇ ಅವಳು ವಾಪಸ್ಸು ಬರುತ್ತಾಳೆ.

ಮಗಳು ಊರಲ್ಲಿದ್ದಿದ್ದರೆ ಸೊಸೆಯ ಶರಣಾಗುತ್ತಿದ್ದರೆ ಅವರು? ಅದಲ್ಲದೆ ಈಗೆಲ್ಲಾ ಬಿನ್ನಾಣಗಿತ್ತಿ, ಅಲಂಕಾರ ಮಾಡಿಕೊಂಡು ಮನೆಯಲ್ಲೇ ಬೇರೆ ಇರುತ್ತಾಳೆ. ಮುಕ್ಕಾಲು ಪಾಲು ದಿನ ನೀಲೂ ಒಬ್ಬನೇ ಹೊರಗೆ ಹೋಗುತ್ತಾನೆ, ಏನು ಕಾರಣವೋ? ವಿಜಯಾನ ಕಂಗಾಣಿಸುತ್ತಿದ್ದಾಳೋ?!

ಹೋಗಲಿ, ಈಗ ಒಂದು ಒಳ್ಳೆಯ ದಾರಿ ಹಿಡಿದ ಹಾಗಾಯಿತು ಎಂದುಕೊಂಡರು ವಿಜಯಾ. ಈ ಮನೆಯ ಕಳಂಕ ಎಂದರೆ ನಿಮಗೂ ಸೇರಿದ್ದೇ ಎಂದು ತಿಳಿಯ ಹೇಳಿದ್ದೇನೆ. ಇನ್ನು ಈ ವಿಷಯವನ್ನು ತಾಯಿಯ ಮನೆಯಲ್ಲಿ ಜಾಲಿಸಲು ಹೋಗುವುದಿಲ್ಲ. ಅದೂ ಅಲ್ಲದೆ ಸೊಸೆಯ ಮೇಲೆ ಆ ನಂಬಿಕೆ ಇದೆ ಅವರಿಗೆ. ಬೇಡ ಎಂದರೆ ಹೋಗಿ ಹೇಳುವುದಿಲ್ಲ. ಇನ್ನೂ ತಮ್ಮ ಮಗಳಿಗೇ ಸ್ವಲ್ಪ ಹೊಟ್ಟೆಯಲ್ಲಿ ಮಾತು ನಿಲ್ಲುವುದಿಲ್ಲ.

ವಿಜಯಾ ಯೋಚಿಸಿದರು, ಈಗ ಹೇಗಾದರೂ ಮಾಡಿ ಸೊಸೆಯ ಶರಣಾಗಿ ದಾಟೋಣ ಎಂದು. ಆದರೂ ತಮ್ಮ ಅದೃಷ್ಟವನ್ನು ಕುರಿತು ನೊಂದುಕೊಳ್ಳದಿರಲಾಗಲಿಲ್ಲ.

ಆದರೆ ಸೊಸೆ ಅವರಲ್ಲಿ ಸಮವೇದನೆಯನ್ನು ತೋರಲಿಲ್ಲ. ಕೇವಲ ಆಶ್ಚರ್ಯದಿಂದ ಕೇಳಿದಳು: "ನೀವು ಯಾವ ವಿಷಯವಾಗಿ ಮಾತಾಡುತ್ತಿದ್ದೀರಾ ಎಂದು ನನಗೆ ಗೊತ್ತಾಗಲಿಲ್ಲ!"

ವಿಜಯಾಗೆ ಸ್ವಲ್ಪ ಕಕ್ಕಾವಿಕ್ಕಿ ಆಯಿತು. ಆಮೇಲೆ ಸುಧಾರಿಸಿಕೊಂಡರು. ಮೂಳೆಯವರೆಗೆ ಊರಿರುವ ಕೆಟ್ಟತನ ಇರುವ ಈ ಸೊಸೆಯನ್ನು ನೋಡಿ ಅವರಿಗೆ, ಮೂಳೆಯವರೆಗೆ ಉರಿಯಿತು. ಆದರೂ ಅಡಗಿಸಿಕೊಂಡು ಹೇಳಿದರು, "ಏನಾಗಿದೆ ಎನ್ನುವುದನ್ನು ನಿನ್ನಂತಹ ಬುದ್ಧಿವಂತೆಗೆ ನಾನು ಬಿಡಿಸಿ ಹೇಳಬೇಕೆ? ನೋಡುತ್ತಾ ಇಲ್ಲವೆ ನಿನ್ನ ನಾದಿನಿಯನ್ನು? ಏನು ಸಮಾಚಾರ ಎಂಬುದನ್ನೂ ಖಂಡಿತಾ ಅನುಮಾನಿಸಿದ್ದೀಯೆ!"

"ಅನುಮಾನವೇ? ನಾನೇ?" ಸುನಂದಾ ಆಕಾಶದಿಂದ ಬಿದ್ದಳು.

"ನಾನೇನು ಅನುಮಾನಿಸಲಿ? ನಾನೇನು ಡಾಕ್ಟರೇ? ಸ್ಲೋ-ಫೀವರ್-ಎಷ್ಟು ಕಾರಣಗಳಿಂದ ಬರಬಹುದು."

"ಜ್ವರವೇ? ಜ್ವರವು ನಿಜವಾಗಿಯೂ ಅವಳ ದೇಹದಲ್ಲೇ ಸೊಸೆಯಮ್ಮಾ?" ವಿಜಯಾ ಬಹಳವಾಗಿ ಅಡಗಿದ ಧ್ವನಿಯಲ್ಲಿ ಹೇಳಿದರು, "ಇದು ಮನಸ್ಸಿನ ಜ್ವರ. ಅದರಿಂದಲೇ ಜರ್ಜರಿತಳಾಗುತ್ತಿದ್ದಾಳೆ. ಅದೇ ಅದೊಂದು ದಿನ ರಾತ್ರಿಯಲ್ಲಿ ಯಾವ ಹಾಳು ಜಾಗದಲ್ಲಿ ಇದ್ದು ಬಂದಳೋ, ಏನು ಸರ್ವನಾಶ ಮಾಡಿಕೊಂಡು ಬಂದಳೋ, ಯಾರಿಗೆ ಗೊತ್ತು!

ಸುನಂದಾ ಗಂಭೀರವಾದ ಧ್ವನಿಯಲ್ಲಿ ಹೇಳುತ್ತಾಳೆ, "ಗ್ರಾಮದಲ್ಲಿ ರಾತ್ರಿ ಇದ್ದರೆ ಸೊಳ್ಳೆಯಿಂದ ಮಲೇರಿಯಾ ಬರಬಹುದು. ನೀರಿನಿಂದ 'ಬಿಕೊಲಾಯ್' ಬರಬಹುದು, ಕಪ್ಪೆಯಿಂದ–"

"ನೀನು ಸುಮ್ಮನಿರಮ್ಮಾ, ಸುಮ್ಮನೆ ಹುಡುಗಾಟ ಮಾಡಬೇಡ." ವಿಜಯಾ ಕೋಪದಿಂದ ನುಡಿದರು: "ಹೆಂಗಸಾಗಿದ್ದುಕೊಂಡು ಹೆಂಗಸಿನ ಕಷ್ಟ ಗೊತ್ತಾಗುವುದಿಲ್ಲವೇ? ಆಗಿನಿಂದ ಅವಳು ಏಕೆ ಹೀಗೆ ಬಾಯಿ ಮುಚ್ಚಿ, ಮುಖ ಮುಚ್ಚಿಕೊಂಡು ಕೋಣೆಯಲ್ಲಿ ಬಿದ್ದಿರುತ್ತಾಳೆ ಎಂದು ಗೊತ್ತೇ?"

"ಮೈ ಸರಿಯಾಗಿಲ್ಲದಿದ್ದರೆ ಹಾಗಿದ್ದೇ ಇರುತ್ತಾಳಲ್ಲವೇ?"

"ಅದೇ. ಆ ಸರಿಯಾಗಿಲ್ಲದ್ದು ಯಾವ ಜಾತಿಯದ್ದು ಅನ್ನುವುದನ್ನು ನೋಡು. ನೋಡಿ ಅದರ ಪ್ರತೀಕಾರ ಮಾಡುವ ದಾರಿ ನೋಡು. ಸೊಳ್ಳೆ, ತಿಗಣೆ ಹಾವು–ಚೇಳಲ್ಲದೆ ಶತ್ರುಗಳೂ ಇದಾರಲ್ಲಾ ಹೆಂಗಸಿಗೆ. ಆ ಶತ್ರುವಿನ ನಿಪಾತಕ್ಕೆ ದಾರಿ ಹುಡುಕಬೇಕು."

ಈಗ ಸುನಂದಾ ತಿರಸ್ಕಾರ, ಕೋಪ ಮಿಶ್ರಿತ ಒಂದು ಭಾವದಿಂದ ಹೇಳುತ್ತಾಳೆ, ಇದೆಲ್ಲಾ ಏನು ಹೇಳುತ್ತಾ ಇದ್ದೀರಿ? ಮೀನಾಕ್ಷಿ ನಿಮ್ಮ ಮಗಳಲ್ಲವೇ?"

ವಿಜಯಾ ಚಲನೆಯಿಲ್ಲದೆ ಇರುತ್ತಾರೆ. ಹೇಳುತ್ತಾರೆ, "ನನ್ನ ಮಗಳೆಂದಲ್ಲವೇ ಇಷ್ಟೊಂದು ಹೊಟ್ಟೆಯುರಿ! ನೆರೆಯವರ ಮಗಳಾದರೆ ಇಷ್ಟು ಕೊರಗುತ್ತಿದ್ದೆನೆ? ಈಗ ಹೋಗಿ ನೋಡಮ್ಮಾ. ನಿನ್ನ ಮೇಲೆ ಎಲ್ಲಾ ಭಾರವನ್ನೂ ಹಾಕಿಬಿಟ್ಟಿದ್ದೇನೆ. ಏನು ಪ್ರತೀಕಾರ ಮಾಡಬೇಕೋ ಮಾಡು." ಅನಾಯಾಸವಾಗಿಯೇ ಮಾನವನ್ನೆಣಿಸದೆ ಹೀಗೆ ಹೇಳಿದರು.

ಆದರೆ ಧೂಳಿನಲ್ಲಿ ಬಿದ್ದ ಅವರ ಮಾನದ ಕಡೆ ಕಣ್ಣೆತ್ತಿಯೂ ನೋಡದೆ ಸುನಂದಾ ಕೇಳಿದಳು, "ನೀವು ಈ ವಿಷಯವಲ್ಲಿ ನಿಶ್ಚಿತವಾಗಿ ವಿಷಯ ತಿಳಿದುಕೊಂಡಿದ್ದೀರಾ?"

"ಅದು ನಿಶ್ಚಯವಲ್ಲದೆ ಇನ್ನೇನು?" ವಿಜಯಾ ಹಣೆಯನ್ನು ಹೊಡೆದುಕೊಳ್ಳುತ್ತಾರೆ. "ಏನು ಗತಿಯಾಗಿದೆ ಹುಡುಗಿಗೆ, ಒಂದು ಸಲ ನೋಡಿದರೆ ಗೊತ್ತಾಗಿರುವುದು ನನಗೆ. ಓದುವುದರಲ್ಲಿ ಅಷ್ಟು ಮನಸ್ಸಿದ್ದವಳು, ಎಲ್ಲಾ ಬಿಟ್ಟುಬಿಟ್ಟಿದ್ದಾಳೆ, ಪುಸ್ತಕ ಮುಟ್ಟುತ್ತಿಲ್ಲ. ಕಾಲೇಜಿಗೆ ಹೋಗುತ್ತಿಲ್ಲ," ವಿಜಯಾ ಹಠಾತ್ತನೆ ಸೆರಗಿನಿಂದ ಕಣ್ಣೊರಸಿಕೊಂಡಳು.

ಸುನಂದಾ ಎವೆಯಿಕ್ಕದೆ ಒಂದು ಸಲ ನೋಡಿ, ಇನ್ನೂ ಸ್ಥಿರ ಧ್ವನಿಯಲ್ಲಿ ಕೇಳಿದಳು: "ನೀವು ಯಾವ ತರಹದ ಪ್ರತೀಕಾರದ ಮಾತು ಹೇಳುತ್ತಿದ್ದೀರಿ?"

ವಿಜಯಾಗೆ ಮೈಮೇಲೆಲ್ಲಾ ವಿಷ ಎರಚಿದಂತಾಗುತ್ತೆ ಕೆಂಡ ಎರಚಿದಂತಾಗುತ್ತೆ. ಆದರೂ ವಿಜಯಾ ತಲೆಯನ್ನು ಶಾಂತವಾಗಿಟ್ಟುಕೊಂಡು ಕೋಪದ ವ್ಯಂಗ್ಯ ನಗು ನಕ್ಕು ಹೇಳಿದರು: "ಅದೆಲ್ಲಾ ನಾನು ನಿನಗೆ ಹೇಳಿಕೊಡಬೇಕೇನಮ್ಮಾ, ನಿಮ್ಮ ಈ ಕಾಲದಲ್ಲಿ ಎಷ್ಟೆಷ್ಟೋ ಏರ್ಪಾಟುಗಳು ಇವೆ. ನಿಮ್ಮಗಳಿಗೆ ಇದೆಲ್ಲಾ ಎಷ್ಟೋ ಗೊತ್ತು. ಪ್ರಾಣಕ್ಕೆ ಅಪಾಯವಿಲ್ಲದಂತೆ ಏನಾದರೂ–" ಮಾತಿನ ಮಧ್ಯೆ ಮಾತಾಡುತ್ತಾಳೆ ಸುನಂದಾ, ನಕ್ಕು ಹೇಳುತ್ತಾಳೆ, "ಹಾಗಾದರೆ ನಮ್ಮ ಈ ಕಾಲ ನಿಮಗೂ ಕೆಲವು ಅನುಕೂಲತೆಗಳನ್ನು ಮಾಡಿಕೊಟ್ಟಿದೆ ಎನ್ನಿ. ಸರಿ ನೋಡುತ್ತೇನೆ, ಏನು ಮಾಡಲಾಗುತ್ತದೆ ಎಂತ."

ಈ ಕೋಣೆಗೆ ಸುನಂದಾ ಯಾವಾಗಲೋ ಅಪರೂಪವಾಗಿ ಬರುತ್ತಾಳೆ. ಹೇಳ ಹೋದರೆ ಬರುವುದೇ ಇಲ್ಲ ಎನ್ನಬೇಕು.

ಈವತ್ತು ಬಂದಳು.

ಬಂದು ಮೀನಾಕ್ಷಿಯ ಟೇಬಲ್ಲಿನ ಮುಂದಿರುವ ಕುರ್ಚಿಯಲ್ಲಿ ಕುಳಿತು, ಆಂತರಿಕವಾದ ಧ್ವನಿಯಲ್ಲಿ ಕೇಳಿದಳು, "ಏನೇ ಮೀನಾ, ನೀನೇನೋ ಓದುವುದನ್ನು ಬಿಟ್ಟು ಬಿಡುತ್ತೇನೆಂದು ಹೇಳಿದೆಯಂತೇ?"

ಈ ಆಕ್ರಮಣದಿಂದ ಚಕಿತಳಾಗಿ ಮೀನಾಕ್ಷಿ ಸ್ವಲ್ಪ ಹುಬ್ಬೇರಿಸಿದಳು. ಗೊತ್ತಾಗಲಿಲ್ಲ. ಇದರ ಅರ್ಥವೇನು ಎಂದು.

ತಾನಾಗಿಯೇ ಬಂದಿದ್ದಾಳೆಯೇ? ಅಥವಾ ಯಾರದಾದರೂ ದೂತಳಾಗಿಯೇ? ಚಿಕ್ಕಣ್ಣನೂ ಹೊರಟುಹೋದನಲ್ಲಾ, ಅಮ್ಮನಿಂದ ಪ್ರೇರಿತಳಾಗಿ ಖಂಡಿತ ಇರಲಾರದು. ಮತ್ತೆ ಅಪ್ಪಾನೇ? ಮೀನಾಕ್ಷಿ ತನ್ನ ಮೃತ್ಯುವನ್ನು ಕರೆಯಲಾರಂಭಿಸಿದಳು. ಆಕಸ್ಮಿಕ ಮೃತ್ಯು!

ಸುನಂದಾ ತಿರುಗಿ ಕೇಳಿದಳು, "ಅಮ್ಮಾ ಹೇಳುತ್ತಿದ್ದರು, ನೀನು ಕಾಲೇಜು–ಗೀಲೇಜಿಗೆ ಹೋಗುವುದಿಲ್ಲವಂತೆ, ಪುಸ್ತಕ ಮುಟ್ಟುವುದಿಲ್ಲವಂತೆ, ಆದರೆ ಜ್ವರ–ಗಿರ ಎಲ್ಲಾ ಸುಳ್ಳು–ಸುಳ್ಳೆ ಎಂದು!" ಸುನಂದಾಳ ಮಾತಿನಲ್ಲಿ ಯಾವುದೋ ಹಳೆಯ, ಕಳೆದುಹೋದ ಯುಗದ ಚಿರಪರಿಚಿತ ಸ್ವರ. ಸುನಂದಾ ಎಷ್ಟೋ ಕಾಲದಿಂದ ಈ ಸ್ವರದಲ್ಲಿ ಮಾತಾಡಿಲ್ಲ. ಮೀನಾಕ್ಷಿಗೆ ಏನು ತೋರಿತೋ. ಯಾರಿಗೆ ಗೊತ್ತು ಸುನಂದಾಗೆ ತನ್ನ ಕಂಠ ಧ್ವನಿಯೇ ಮರೆತು

ಹೋದಂತಾಗಿದ್ದುದು. ಇಂಪಾಗಿತ್ತು. ಈ ತರಹ ಸಹಜವಾಗಿ ಮಾತಾಡುವ ಶಕ್ತಿ ತನಗೆ ಇನ್ನೂ ಇದೆ ಎಂಬುದನ್ನು ನೋಡಿ ಅವಳಿಗೆ. ತನಗೆ ಆಶ್ಚರ್ಯವಾಗುತ್ತೇನೋ! ತುಂಡು ತುಂಡಾದ ಮಾತು–ನಗೆಗಳನ್ನು ಅಭ್ಯಾಸ ಮಾಡಿ ಮಾಡಿ ಯಾಂತ್ರೀಕವಾಗಿ ಹೋಗುತ್ತಿದ್ದವಳು ಈಗ ಈ ಆವಿಷ್ಕಾರದಿಂದ ಪುಳಕಿತಳಾಗಿ ತಿರುಗಿ ಅದರ ಸ್ವಾದವನ್ನು ಇನ್ನೊಂದು ಗುಟುಕು ಕುಡಿಯಲು ಆಶಿಸಿದಳು.

ಸುನಂದಾ ತಿರುಗಿ ಕೇಳಿದಳು, "ಏನಾಯಿತು ನಿನಗೆ? ವರ್ಷಪೂರ್ತಿ ಚಕ್ಕರ್ ಹೊಡೆದು ಬಿಟ್ಟು ಈಗ ಪರೀಕ್ಷೆ ಸಮಯದಲ್ಲಿ ಹೆದರಿಕೆಯಾಗುತ್ತಿದೆಯೇ?"

ಹೆದರಿಕೆಯೇ? ಪರೀಕ್ಷೆಗಾಗಿಯೇ?

ಮೀನಾಕ್ಷಿ ಎದ್ದು ಕುಳಿತುಕೊಳ್ಳುತ್ತಾಳೆ.

ಮೀನಾಕ್ಷಿಯ ಮನಸ್ಸೂ ಸುನಂದಾಳ ಈ ಹೊಸ ರೂಪ ಅಥವಾ ಹಳೆಯ ರೂಪ (ಎನ್ನಬೇಕೋ)ವನ್ನು ನೋಡಿ ಚಲನೆಗೊಂಡಿತು. ಅದಕ್ಕೇ ಮೀನಾಕ್ಷಿ ಮಾತಾಡಿದಳು.

ಉದಾಸೀನ, ಮ್ಲಾನ ಧ್ವನಿಯಿಂದ ಹೇಳಿದಳು; "ನಾನಿನ್ನು ನಿಮ್ಮ ಹಳೆಯ ಮೀನಾಕ್ಷಿಯಾಗಿಲ್ಲ ಅತ್ತಿಗೆ."

ಸುನಂದಾ ನಿರ್ಲಜ್ಜ ವೇಷಭೂಷಣಗಳನ್ನು ಧರಿಸಿಕೊಂಡು ಪಾರ್ಟಿಗೆ ಹೋಗಿ ಸಾರಾಯಿ ಕುಡಿಯುತ್ತಾಳೆ, ಮಹರಾ ಸಾಹೇಬರ ಮೈ ಮೇಲೆ ಬಿದ್ದು ಹಿ–ಹಿ ಎಂದು ನಕ್ಕು ಗಂಡನ ಕೆಲಸದ ಉನ್ನತಿಗೆ ಸಹಾಯ ಮಾಡುತ್ತಾಳೆ. ಎಲ್ಲಾ ತರಹದ ಭಾವ–ಮಮತೆಗಳನ್ನೂ ವ್ಯಂಗ್ಯ ನಗೆ ನಕ್ಕು ನುಚ್ಚು ನೂರು ಮಾಡುತ್ತಾಳೆ. ಅಂತಹವಳು ಮೀನಾಕ್ಷಿಯ ಈ ಮ್ಲಾನವದನವನ್ನು ನೋಡಿ ದಯಾಪರವಶಳಾದಳು. ಸುನಂದಾಗೆ ಅನ್ನಿಸಿತು ಒಂದು ವೇಳೆ ವಿಜಯಾ ಅನುಮಾನಿಸಿರುವುದು ನಿಜವಿರಬಹುದು ಎಂದು.

ಆದರೆ ಈ ಜಟಿಲವಾದ ಪ್ರಶ್ನೆಯ ಬಗ್ಗೆ ಏನನ್ನೂ ಕೇಳದೆ ನಕ್ಕುಬಿಟ್ಟು ಕೇಳಿದಳು, "ಇಲ್ಲವೇ? ನೀನು ಆ ಮೀನಾಕ್ಷಿಯಾಗಿಲ್ಲವೇ? ಎಲ್ಲಿ, ನನಗೇನೂ ಬದಲಾವಣೆ ಕಾಣುತ್ತಿಲ್ಲವಲ್ಲಾ, ಮುಂಚೆ ಇದ್ದ ಹಾಗೆಯೇ ಎರಡು ಕೈ, ಎರಡು ಕಾಲು. ಎರಡೆರಡು ಕಣ್ಣು, ಕಿವಿ. ಒಂದು ತಲೆಯೊಂದಿಗೆ ಪೂರ್ತಿ ಮನುಷ್ಯಾಕಾರವೇ ನೋಡುತ್ತಾ ಇದ್ದೇನೆ."

ಮೀನಾಕ್ಷಿ ಇನ್ನೊಂದು ಕಡೆ ಮುಖವನ್ನು ತಿರುಗಿಸಿಕೊಂಡು ಹೇಳಿದಳು, "ಹೊರಗಿನಿಂದ ಕಾಣುವುದೆಲ್ಲಾ ಸರಿ ಎಂದು ಹೇಳಲಾಗುವುದಿಲ್ಲವಲ್ಲಾ!"

ಸುನಂದಾ ಒಂದು ಕ್ಷಣ ಏನೋ ಯೋಚಿಸಿದಳು. ಆಮೇಲೆ ಕೌತುಕದ ಧ್ವನಿಯಿಂದ ಹೇಳಿದಳು: "ಹಾಳಾಯಿತು. ಈ ಹುಡುಗಿ ಏನನ್ನುತ್ತಮ್ಮಾ! ಒಳಗೊಳಗೆ ಏನೇನೋ ಮಾಡುತ್ತಾ ಇದ್ದೀಯೇನು?" ಮೀನಾಕ್ಷಿ ಬೆಚ್ಚುತ್ತಾಳೆ.

ಅವಳ ಮನಸ್ಸು ಥಟ್ಟನೆ ವಿಮುಖವಾಗುತ್ತೆ.

ಓಹೋ ಅಷ್ಟೆಯೇ? ನಗೆಯಾಡಲು ಬಂದಿರುವವಳಂತೆ ತೋರುತ್ತೆ, ಅಷ್ಟೆಯೇ?!

ಆ ಮಮತೆ ತೋರುವುದೂ ಬರೀ ಆಟವೇ?

ಮೀನಾಕ್ಷಿಯ ಮ್ಲಾನ, ಅನುತಪ್ತ ಧ್ವನಿಯಲ್ಲಿ ಒಂದು ರೂಢಭಾವ ತಲೆ ಎತ್ತುತ್ತೆ ಮೀನಾಕ್ಷಿ ನೆಟ್ಟಗೆ ಎದ್ದು ಕುಳಿತುಕೊಂಡು ಕೇಳುತ್ತಾಳೆ, "ಓಹೋ, ತನಿಖೆಗೆ ಬಂದಿದ್ದೀಯಾ?"

ಸುನಂದಾ ಗಂಭೀರಳಾಗುತ್ತಾಳೆ.

ಹೇಳುತ್ತಾಳೆ, "ನಿನಗೆ ಹಾಗೆ ತೋರುವುದು ಸಹಜವೇ. ನನ್ನ ಮೇಲೆ ಇದಕ್ಕಿಂತ ಉಚ್ಚಭಾವನೆ ನಿನಗೆ ಬರುವುದು ಸಾಧ್ಯವೇ ಆದರೂ ಅದನ್ನು ನೀನು ಬದಲಾಯಿಸಿರಬಹುದಾಗಿತ್ತು. ಅಮ್ಮನ ಆದೇಶದಿಂದಲೇ ಬಂದಿದ್ದರೂ, ನಿನಗೆ ಸದುಪದೇಶ ಹೇಳಿ, ಪ್ರತೀಕಾರಕ್ಕೆ ಒಪ್ಪಿಸುವ ಹುಕುಮನ್ನು ಪಡೆದು, ಆದರೂ–ಇಲ್ಲ ಬಿಡು," ಸುನಂದಾ ಮುಖ ತಿರುಗಿಸಿಕೊಂಡು ಹೇಳಿದಳು: "ಯೋಚಿಸಿದರೆ ಒಂದೊಂದು ಸಲ ನಗು ಬರುತ್ತೆ, ಆದರೆ ಒಂದು ಕಾಲದಲ್ಲಿ ವಂಗದೇಶದ 'ಒಳ್ಳೆಯ ಸೊಸೆ'ಯ ಆದರ್ಶವೇ ನನ್ನ ಆದರ್ಶವಾಗಿತ್ತು."

ಮೀನಾಕ್ಷಿ ಸ್ವಲ್ಪ ಸುಮ್ಮನಿದ್ದು ಹೇಳಿದಳು, "ಒಂದು ವೇಳೆ ಈ 'ಆದರ್ಶ'ವನ್ನು ಪಳಗುವ ಮನುಷ್ಯ, ಶಕ್ತಿಯಿಲ್ಲದವನು, ಕಾಲಚಕ್ರವೇ ಎಲ್ಲಾದರ ನಿಯಾಮಕನೇನೋ!"

"ಅದೇನೋ ಹೌದು. 'ಕಾಲಚಕ್ರ'ದ ಬಲಿಯಾಗಿ ಬಿದ್ದು ಒಂದು ದಿನ ನಾನು ನಿಮ್ಮ ಈ 'ಮೈತ್ರಾ' ಪದವಿಯನ್ನೇ ಕಳೆದುಕೊಂಡು 'ಮಿಸೆಸ್ ಮೆಹರಾ' ಆಗುವುದರಲ್ಲಿದ್ದೆ. ಕಡೆಗೆ ಆ ಕಾಲಚಕ್ರವೇ ರಕ್ಷಿಸಿತು. ಒಬ್ಬ ಕುಡುಕನ ಪ್ರೇಮಕ್ಕೆ ಆಸ್ಪದ ಕೊಡುವುದು ಸರಿಯಲ್ಲವೆಂದು ತೋರಿತು. ಇದರಿಂದ ನಿಮ್ಮಣ್ಣ ಬಹಳ ಕೋಪಗೊಂಡರು. ಯೋಚಿಸಿದ್ದರು ಈ ಪದವಿ ಬದಲಿನ ಬೆಲೆಯಾಗಿ ಒಂದು ದೊಡ್ಡ ಅಂಕೆಯ ಚೆಕ್ಕನ್ನು ಗಿಟ್ಟಿಸುವ ಲೆಕ್ಕ ಹಾಕಿದ್ದರು. ಆ ಆಸೆಗೆ ಮಣ್ಣು ಬಿತ್ತು. ದುರಾತ್ಮನನ್ನು ಅಲ್ಲೇ ನಿದ್ದೆ ಮಾಡಿಸಿ ಬಂದು ನಿಮ್ಮಣ್ಣನ ಭುಜದ ಆಸರೆಯನ್ನು ಪಡೆದೆ."

"ಅತ್ತಿಗೆ!"

ಮೀನಾಕ್ಷಿಯ ಕಂಠದಲ್ಲಿ, ಇಷ್ಟು ದಿನಗಳಿಂದ ನೀರವವಾಗಿದ್ದ ಕಂಠದಿಂದ ಒಂದು ತೀಕ್ಷ್ಣಧ್ವನಿ ಹೊರ ಬರುತ್ತೆ, "ಅಣ್ಣನ ಮೂರ್ತಿಯನ್ನು ಇಷ್ಟು ಕೀಳಾಗಿ ಚಿತ್ರಿಸಬೇಕಾಗಿರಲಿಲ್ಲ. ನಿನ್ನನ್ನು ಯಾರೂ ಏನೂ ಹೇಳಲಿಲ್ಲವಲ್ಲಾ."

ಮೀನಾಕ್ಷಿ ಅಂದುಕೊಂಡಿದ್ದಳು, ಈ ಅಪಮಾನದಿಂದ ಸುನಂದಾ ಎದ್ದು ಹೊರಹೋಗುತ್ತಾಳೆ ಎಂದು. ಆದರೆ ಸುನಂದಾ ಹೋಗಲಿಲ್ಲ. ಅವಳು ಕುರ್ಚಿಯಲ್ಲಿ ಒರಗಿಕೊಂಡು ಒಂದೇ ತರಹ ತಲೆಯನ್ನು ಆಡಿಸುತ್ತಾ ಹೇಳಿದಳು: "ನಿನ್ನನ್ನೂ ಯಾರೂ ಏನೂ ಹೇಳಲು ಬರಲಿಲ್ಲವಲ್ಲಾ. ಆದರೂ ಯಾಕೆ ಈ ಮೃತ್ಯುಶಯ್ಯೆಯ ಪಣ ತೊಟ್ಟು ಯಾಕೆ ಬಿದ್ದಿದ್ದೀಯ? ವಿವೇಕವೋ ಅದು ಏನೋ ಒಂದು ಇದೆಯಲ್ಲಾ ಅದೇ ಹುಕುಂ ಮಾಡುತ್ತೆ. ಹೋಗಲಿ, ಈಗ ಅಮ್ಮನ ಹುಕುಂ ಆಗಿದೆ. ನಿನಗೆ ಏನಾದರೂ ಅನಾಹುತ ಆಗಿದ್ದರೆ ಅದರ ಪ್ರತೀಕಾರದ 'ಆಫೀಸ್'ಗೆ ಕರೆದುಕೊಂಡು ಹೋಗಬೇಕು ಎಂದು."

"ಅತ್ತಿಗೇ!"

ಮೀನಾಕ್ಷಿ ತೀಕ್ಷ್ಣ ಧ್ವನಿಯಲ್ಲಿ ಕೇಳಿದಳು, "ಅಮ್ಮ ಹೇಳಿದರೇ ಈ ಮಾತನ್ನು?"

"ಹೇಳಿದರಲ್ಲ!"

ಏನೋ ಒಂದು ತಿರಸ್ಕಾರ ಧಿಕ್ಕಾರಗಳಿಂದ ತುಟಿ ಮಡಿಸಿಕೊಳ್ಳುತ್ತೆ ಮೀನಾಕ್ಷಿಗೆ. ಅವಳು ಇನ್ನೂ ತೀವ್ರವಾಗಿ ಹೇಳುತ್ತಾಳೆ. "ಅಮ್ಮ ಅಲ್ಲವೆ ಹಗಲು ರಾತ್ರಿ ಪೂಜೆ ಮಾಡುವವರು? ಅಮ್ಮ ಅಲ್ಲವೆ ಒಂದು ಸೊಳ್ಳೆ, ತಿಗಣೆ, ಇರುವೆಯನ್ನು ಕೊಲ್ಲುವುದೂ ಜೀವಹತ್ಯೆ ಎಂದು ಎಣಿಸುವವರು?" ಸುನಂದಾ ಹಠಾತ್ತನೆ ನಗುತ್ತಾಳೆ.

ಹೇಳುತ್ತಾಳೆ, "ಮನುಷ್ಯ ಎನ್ನುವ ಈ ಜೀವ ಇಂತಹ ಎದುರು- ಪುದಿರಾದ ವಸ್ತುಗಳಿಂದಲೇ ಮಾಡಲ್ಪಟ್ಟವನು, ಕಣೆ ಮೀನಾ! ಅದಕ್ಕೇ ಇರಬಹುದು ಪಂಚ ಭೂತದ ದೇಹ ಎನ್ನುತ್ತಾರ." "ಆದರೆ ಇದು ಬಿಟ್ಟು ಇನ್ನೇನು ತಾನೆ ದಾರಿ ಹೇಳು?"

ಮೀನಾಕ್ಷಿ ತಿರುಗಿ ಮಲಗಿಕೊಂಡುಬಿಡುತ್ತಾಳೆ.

ಮೀನಾಕ್ಷಿ ಗೋಡೆಯ ಕಡೆಗೆ ತಿರುಗಿಕೊಳ್ಳುತ್ತಾಳೆ.

ಅವಳು ಸ್ವಲ್ಪ ತಗ್ಗಿದ ಧ್ವನಿಯಲ್ಲಿ ಹೇಳುತ್ತಾಳೆ, "ಪಾಪಕ್ಕೆ ಪ್ರಾಯಶ್ಚಿತ್ತ ಮಾಡಬೇಕು. ಅದು ಇನ್ನೊಂದು ಪಾಪದಿಂದ ಆಗುವುದಿಲ್ಲ."

"ಪಾಪವೆ?"

ಸುನಂದಾಗೆ ಆಕಾಶದಿಂದ ನೆಲಕ್ಕೆ ಬಿದ್ದಂತಾಗುತ್ತೆ. ಅವಳು ಕಣ್ಣುಗಳು ದೊಡ್ಡದಾಗಿ ಅರಳುತ್ತೆ. ವ್ಯಂಗ್ಯ ಧ್ವನಿಯಲ್ಲಿ ಕೇಳುತ್ತಾಳೆ. "ಯಾವ ಯುಗದಲ್ಲಿದ್ದೀಯ ನೀನು? ಅದಕ್ಕೇ ಈ ಪಾಪ-ಪುಣ್ಯ, ಪಾಪದ ಪ್ರಾಯಶ್ಚಿತ್ತ ಇಂತಹ ಕಂತೆಪುರಾಣದ ಮಾತುಗಳನ್ನಾಡುತ್ತಿದ್ದೀಯ ರಬಿಷ್!"

ಆದರೆ ಹೀಗೆ ವ್ಯಂಗ್ಯವನ್ನು ಯಾರನ್ನು ನೋಡಿ ಮಾಡುತ್ತಿದ್ದಾಳೆ ಸುನಂದಾ?

ನಿಜವಾಗಲೂ ಮೀನಾಕ್ಷಿಯನ್ನೇ?

ಮೀನಾಕ್ಷಿಯಿಂದ ಯಾವ ಉತ್ತರವೂ ಬರುವುದಿಲ್ಲ. ಅವಳು ತಿರುಗಿ ಪ್ರಪಂಚದ ಕಡೆಗೆ ಹಿಂತಿರುಗಿ ಮಲಗಿಕೊಳ್ಳುತ್ತಾಳೆ.

ಸುನಂದಾ, ಹಿಂತಿರುಗಿ ಮಲಗಿರುವ ಮೀನಾಕ್ಷಿಯ ಕಡೆ ಕೆಲಹೊತ್ತು ನೋಡುತ್ತಿದ್ದು ಮೆಲ್ಲಗೆ ಹೇಳುತ್ತಾಳೆ. "ನೋಡು ಮೀನಾ, ಅಜಾಗರೂಕತೆಯಿಂದ ಯಾರನ್ನಾದರೂ ನಾಯಿ ಕಚ್ಚಿದರೆ ಆ ವಿಷವನ್ನು ಹೊರ ತೆಗೆಯಲು ಪ್ರಯತ್ನ ಮಾಡದೆ, ಹಾಗೆಯೇ ಇಟ್ಟುಕೊಂಡು, ಇರಲಿ, ನನ್ನ ಅಜಾಗರೂಕತೆಗೆ ಪ್ರಾಯಃಶ್ಚಿತ್ತ ಮಾಡುತ್ತೇನೆ ಎನ್ನುತ್ತಾರೆಯೇ?"

ಮೀನಾಕ್ಷಿ ಆದರೂ ನೀರವ.

ಸುನಂದಾ ಸ್ವಲ್ಪ ಹೊತ್ತು ಸುಮ್ಮನಿದ್ದು ಒಂದು ಕೋಪದ ನಗು ನಕ್ಕು ಹೇಳಿದಳು. "ಈ ಯುಗದ ಸಭ್ಯ ಸಮಾಜವನ್ನು ನೋಡಲು ನಿನಗೆ ಇನ್ನೂ ಸಂದರ್ಭ ಬಂದಿಲ್ಲ ಮೀನಾ. ಅದಕ್ಕೇ ನೀನು ಇನ್ನೂ ಈ ಮುತ್ತಜ್ಜಿಯ ಕಾಲದ ಸಂಸ್ಕಾರದ ಮರಳಿನಲ್ಲಿ ತಲೆಯನ್ನು

ತೂರಿಸಿಕೊಂಡು ಕುಳಿತಿದ್ದೀಯ. ಈ ತರಹ ತೊಂದರೆಯಿಂದ ಮುಕ್ತಳಾಗುವುದು ಎಷ್ಟು ಸಾಧಾರಣವಾಗಿ ಹೋಗಿದೆ ಎಂದರೆ, ಇವರ ವಿಷಯವಾಗಿ ನೀನು ಇಷ್ಟೊಂದು ಯೋಚಿಸುವುದನ್ನು ನೋಡಿದರೆ ಯಾರಾದರೂ ನಗುತ್ತಾರೆ ಅಷ್ಟೆ."

"ಅತ್ತಿಗೆ, ನನಗೆ ಈ ಮಾತೆಲ್ಲಾ ಕೇಳಲು ಕಷ್ಟವಾಗುತ್ತಿದೆ."

ಸುನಂದಾ ಸ್ವಲ್ಪ ನಕ್ಕು ಕೌತುಕದಿಂದ ನುಡಿಯುತ್ತಾಳೆ. "ಅಂದರೆ ಅಪರಾಧಿ ತೀರ ಕಟುಕನಲ್ಲ, ನಿನ್ನ ಪ್ರೇಮಕ್ಕೆ ಪಾತ್ರನಾದವ ಅದಕ್ಕೇ ಅವನು ಕೊಟ್ಟ ಈ ಬಹುಮಾನವನ್ನು–"

"ಅತ್ತಿಗೆ, ನನ್ನನ್ನು ನನ್ನ ಇಷ್ಟವಿದ್ದ ಹಾಗೆ ಸಾಯಲು ಬಿಡು."

ಸುನಂದಾಗೆ, ಒಂದು ಮಗುವಿನ ಹಟದಂತೆ ತೋರುತ್ತೆ ಈ ಮಾತು. ಅದಕ್ಕೇ ಅವಳು ಹೇಳಿದಳು, "ಇದೋ, ಈಗಾಗಲೇ ನಿನ್ನ ಇಷ್ಟಪಿದ್ದ ಹಾಗೆ ಸತ್ತಿದ್ದಾಯಿತಲ್ಲಾ, ಇನ್ನು ಈಗ ನಮ್ಮ ಇಷ್ಟದ ಪ್ರಕಾರ ಬದುಕಿಸಲು ಪ್ರಯತ್ನಿಸುತ್ತೇವೆ ನಾವು."

"ನಿನ್ನ ದಮ್ಮಯ್ಯ ಅತ್ತಿಗೆ! ನನ್ನ ವಿಷಯ ನೀವುಗಳು ಯೋಚಿಸುವುದನ್ನು ಸ್ವಲ್ಪ ಕಡಿಮೆ ಮಾಡಿ, ನಾನೇ ನನ್ನ ವಿಷಯ ಎಷ್ಟು ಯೋಚಿಸುತ್ತೇನೆ ಎಂದರೆ ಅದೇ ಹೆಚ್ಚಾಗಿ ಹೋಗುತ್ತಿದೆ."

"ಆದರೂ ಹೀಗೆ ಬುದ್ಧಿಯಿಲ್ಲದ 'ಡಿಸಿಷನ್' ತೆಗೆದುಕೊಳ್ಳುತ್ತಿದ್ದೀಯ. ಆದಿ ಅನಂತ ಕಾಲದಿಂದ ಯಾವುದು ನಡೆದು ಬರುತ್ತಿದೆಯೋ, ಬಹುಶಃ ಮುಂದಕ್ಕೂ ನಡೆದುಕೊಂಡು ಬರಬಹುದೋ. ಅಂತಹ ಸುಲಭವಾದ ದಾರಿಯನ್ನು ಬಿಟ್ಟು, ಬೇರೆ ದಾರಿಯಲ್ಲಿ ನಡೆಯಲು ನೋಡುತ್ತಿದ್ದೀಯ. ಹಾಗೆ ನಡೆಯುವುದು, ಈ ಸಮಾಜಕ್ಕೆ ಸರಿ ತೋರುವುದಿಲ್ಲ ಮೀನಾ. ಯಾವ ಮುತ್ತಜ್ಜಿಯ ಕಾಲದ ಸಂಸ್ಕಾರದ ಮಾತು ಹೇಳುತ್ತಿದ್ದೇನೋ ಅವರ ಅಜ್ಜಿ, ಮುತ್ತಜ್ಜಿಯ ಕಾಲದಿಂದಲೂ ಎಲ್ಲಾ ಪವಿತ್ರತೆ ಶುಚಿತ್ವ ಸಂಸ್ಕಾರಗಳ ಅಂತರಾಳದಲ್ಲಿ ಪ್ರವಹಿಸುತ್ತಾ ಬಂದಿದೆ ಈ 'ವಿಪನ್ಮುಕ್ತಿ'ಯ ದಂಡಯಾತ್ರೆ. ಪರಿವಾರದ ಒಳ್ಳೆಯ ಹೆಸರು ಹೋಗುತ್ತೆ. ವಂಶಕ್ಕೆ ಕಳಂಕ ಬರುತ್ತೆ ಎಂದು ಈ ಭಯಂಕರವಾದ ಭಯಕ್ಕಾಗಿ ಜನ, ಜೀವಸಮೇತ ಹುಡುಗಿಯರನ್ನು ರಾತ್ರಿಯೋ ರಾತ್ರಿ ಮಾಯವಾಗಿಸಿಬಿಟ್ಟಿದ್ದಾರೆ. ಮನುಷ್ಯನ ಇಂತಹ ಇತಿಹಾಸಕ್ಕೆ ಕಡಿಮೆಯೇನಿಲ್ಲವಲ್ಲ. ಮುಖ್ಯವಾಗಿ ಮನುಷ್ಯ ಪಾಪ–ಪುಣ್ಯ, ಧರ್ಮ–ವಿವೇಕ ಇವುಗಳ ವಿಷಯವನ್ನು ಗಮನಿಸುವುದು ಎಷ್ಟರಮಟ್ಟಿಗೆ ಅವು ಶಾಂತವಾಗಿ ಹತೋಟಿಯಲ್ಲಿರುವುದೋ ಅಷ್ಟರವರೆಗೆ ಮಾತ್ರವೇ. ಆದರೆ ಯಾವಾಗ ಮನುಷ್ಯ ನೋಡುತ್ತಾನೋ ಸಂದರ್ಭ ಸ್ವಲ್ಪ ಕಷ್ಟಕ್ಕಿಟ್ಟುಕೊಂಡಿದೆ ಎಂದು, ಆಗ ಈ ಪಾಪ–ಪುಣ್ಯ ಈ ತರಹದ ಸಂಸ್ಕಾರಗಳು ಅಳಿಸಿಹೋಗುತ್ತೆ. ಆ ತೊಂದರೆಯನ್ನು ಹೊರದೂಡಲು ಅವನು ಮಾಡಲಾಗದ ಕೆಲಸವೇ ಇಲ್ಲ. ಇಷ್ಟೇ ಸಂಸ್ಕಾರದ ಬಲೆ, ಪಾಪ, ಪುಣ್ಯ ಧರ್ಮ–ಅಧರ್ಮಗಳಿಗೆ ಇರುವ ಒಂದು ವಿಶೇಷವೇನೆಂದರೆ ಇವುಗಳ ವಿಶೇಷವಾದ ಮಾಲೀಕರು, ಸ್ವಾರ್ಥ ಮತ್ತು ಸೌಕರ್ಯ ಇವೆರಡೂ ಆ ಮಾಲೀಕರು, ಯಜಮಾನರುಗಳು."

ಮೀನಾಕ್ಷಿ ಆ ಕಡೆ ತಿರುಗಿಕೊಂಡೇ ಹೇಳಿದಳು, "ನಿನ್ನ ಈ ಬೆಲೆ ಬಾಳುವ ಮಾತುಗಳಿರಲಿ ಅತ್ತಿಗೆ. ನನಗೆ ಹಿಡಿಸುತ್ತಿಲ್ಲ."

ಆದರೂ ಸುನಂದಾ ನಗುವ ಧ್ವನಿಯಿಂದ ಕೇಳುತ್ತಾಳೆ. "ಹಾಗಾದರೆ ಸೋತು ಹಿಂದಿರುಗಲೇ?

"ಯಾವುದು ನಿನ್ನ ಸೋಲೋ–ಗೆಲುವೋ ನನಗೆ ಗೊತ್ತಿಲ್ಲ ಅತ್ತಿಗೆ. ಆದರೆ ನನಗೆ ಗೊತ್ತು ನಾನು ಚೆನ್ನಾಗಿ ಸೋತುಹೋದೆ."

ಸುನಂದಾ ಹಾಗೂ ತುಂಬಾ ಹೊತ್ತು ಇದ್ದು ಅವಳಿಗೆ ತಿಳುವಳಿಕೆ ಹೇಳಲು ಪ್ರಯತ್ನಿಸುತ್ತಾಳೆ. "ಈ ಯುಗ ಇಂತಹ ತುಚ್ಛ ವಿಷಯಕ್ಕಾಗಿ ಇಷ್ಟೊಂದು ಯೋಚಿಸುವುದಿಲ್ಲ. ಇದನ್ನು ಬರೀ ಒಂದು ಆಕ್ಸಿಡೆಂಟ್ ಎಂದು ತಿಳಿಯುತ್ತೆ" ಎಂದು ಕಡೆಗೆ ಹಿಂದಿರುಗುತ್ತಾಳೆ.

ಹೋಗುವಾಗ ತಿರುಗಿ ಒಂದು ಸಲ ಹೇಳುತ್ತಾಳೆ, "ಗೊತ್ತಾಯಿತು, ಆಸಾಮಿ ನಿನ್ನ ಪ್ರೇಮಪಾತ್ರ ಅದಕ್ಕೇ ಪಾಪ, ಪ್ರಾಯಶ್ಚಿತ್ತ ಎಂದೆಲ್ಲಾ ಹೇಳಿ ಮನಸ್ಸನ್ನು ಗೆಲ್ಲಲು ಪ್ರಯತ್ನಿಸುತ್ತೀಯ. ಆದರೆ ಈ ಪ್ರಾಯಶ್ಚಿತ್ತವನ್ನು ಯಾವ ಮಣ್ಣಲ್ಲಿ ಕುಳಿತು ಮಾಡುತ್ತೀಯೆಂದು ಯೋಚಿಸುತ್ತೀಯ. ಆದರೆ ಈ ಪ್ರಾಯಶ್ಚಿತ್ತವನ್ನು ಯಾವ ಮಣ್ಣಲ್ಲಿ ಕುಳಿತು ಮಾಡುತ್ತೀಯೆಂದು ಯೋಚಿಸುತ್ತಿದ್ದೇನೆ. ಯುಗ ಎಷ್ಟೇ ಉದಾರ ಮತ್ತು ಪ್ರಗತಿಶೀಲವಾಗಿರಲಿ, ನೀನು ಒಂದು, ಗೋತ್ರ–ಪರಿಚಯವಿಲ್ಲದ ಜೀವನವನ್ನು ಸ್ನೇಹದ ನೆರಳಲ್ಲಿ ಬೆಳೆಸುತ್ತೇನೆ ಎಂದರೆ ಅದು ನಡೆಯುವ ಮಾತಲ್ಲ. ಕರ್ಣ, ಕುಂತಿಯ ಮಡಿಲನ್ನು ಬಿಡಲೇ ಬೇಕಾಗುತ್ತೆ. ಸಾವಿರಾರು ವರ್ಷಗಳಿಂದ ಸಮಾಜದಲ್ಲಿ ಎಷ್ಟೆಷ್ಟೋ ಬದಲಾವಣೆಗಳು ನಡೆದುಹೋಯಿತು. ಆದರೆ ಕರ್ಣ–ಕುಂತಿ ಸಮಾಚಾರ ಮಾತ್ರ ಬದಲಾವಣೆ ಇಲ್ಲದೆಯೇ ನಿಂತಿದೆ."

ಸುನಂದಾ ಸೋತು ಹಿಂತಿರುಗಿದಳು.

ಆದರೆ ವಿಜಯಾ ಸೋಲುತ್ತಾರೆಯೇ?

ವಿಜಯಾ ತನಗೆ ಸಖತ್ ಖಾಯಿಲೆಯೆಂದು ದೊಡ್ಡ ಮಗಳಿಗೆ ತಂತಿ ಕೊಡಿಸಿದರು. ತನ್ನ ಒಬ್ಬ ನಂಬಿಕೆಗೆ ಪಾತ್ರನಾದ ಗುರು–ತಮ್ಮ (ಒಂದೇ ಗುರುವಿನ ಶಿಷ್ಯರಾದವರು)ನ ಕೈಗೆ ಈ ಕೆಲಸದ ಭಾರವನ್ನು ಕೊಟ್ಟರು ವಿಜಯಾ.

ನೀಲಾಕ್ಷ ಬಹಳ ಸಂಕಟದಲ್ಲಿ ಸಿಕ್ಕಿಬಿದ್ದಿದ್ದಾನೆ.

ನೀಲಾಕ್ಷ ಹೊರಗಿನ ಪ್ರಪಂಚದಲ್ಲಿ ತುಡುಪಿಲ್ಲದ ದೋಣಿಯಂತೆ, ಕೈಯಲ್ಲಿ ಅಸ್ತ್ರವಿಲ್ಲದ ಸೈನಿಕನಂತೆ ಓಡಾಡುತ್ತಿದ್ದ. ಆದರೆ ಯಾವ ವಿಧದಲ್ಲೂ ಸುನಂದಾಳನ್ನು ತನ್ನ ವಶಕ್ಕೆ ತರಲು ಆಗುತ್ತಿಲ್ಲ. ಸುನಂದಾ ದಿನ ನಿತ್ಯವೂ ಏನಾದರೊಂದು ನೆಪ ಹೇಳುತ್ತಾಳೆ. ಈವತ್ತು ತಲೆನೋವು. ಈವತ್ತು ಜ್ವರ ಬರುತ್ತಿದೆ. ಈವತ್ತು ಮೂಡ್ ಇಲ್ಲ–– ಹೀಗೆಯೇ.

ಆಶ್ಚರ್ಯ!

ಇದೇ ಈ ಮೆಹರಾ ಸಾಹೇಬ್ ಗಾಡಿ ಕಳುಹಿಸುತ್ತೇನೆ ಎನ್ನುತ್ತಾನೆ. ಇಂಗಿತವಾಗಿ ಇದೂ ಹೇಳುತ್ತಿದ್ದಾನೆ, ಹೆಚ್ಚು 'ಚಾಲಾಕಿ' ಮಾಡಿದರೆ ನೀಲಾಕ್ಷನೆನ್ನುವ ಈ ಸುಳ್ಳು ಹುಲಿಯನ್ನು ಪುನಃ ಮೂಷಿಕವನ್ನಾಗಿ ಮಾಡಿಬಿಡುತ್ತೇನೆ, ಎಂದು ಇದೇನು ಸಣ್ಣ–ಪುಟ್ಟ ಸಂಕಟದ ಮಾತೇ!

ನೀನೊಬ್ಬ ತುಚ್ಛ ಹೆಂಗಸು! ಸ್ವಲ್ಪ ಕೆಲಸಕ್ಕೆ ಒದಗುತ್ತೀಯೆಂದಲ್ಲವೆ ನಿನ್ನನ್ನು ಇಷ್ಟೊಂದು ನಾನು 'ತಾಜಾ' ಮಾಡುವುದು! ಇಲ್ಲದಿದ್ದರೆ ನಿನಗೆ ತಲೆ ಬಗ್ಗುತ್ತೇನೆಯೇ? ಆ ಒಂದು ನೆಪವನ್ನು ತೆಗೆದುಕೊಂಡು ನೀನು ನನ್ನ ಹತ್ತಿರ 'ಮೂಡ್' ತೋರಿಸುತ್ತೀಯಾ?

ಅನವರತವೂ ನೀಲಾಕ್ಷನ ಮನಸ್ಸಿನಲ್ಲಿ ಈ ಮಾತುಗಳೇ ಬುಸುಗುಟ್ಟುತ್ತಿದೆ. ನಿನ್ನ ಬೆಲೆ ಏನು? ಏನಾಗಿದ್ದೆ ಮೊದಲು? ಅದೇ ಆ ಮಡಕೆ ತಿಕ್ಕುವ ಅಮ್ಮ ಮತ್ತು ತಲೆಯ ಮೇಲೆ ತರಕಾರಿ ಹೊತ್ತು ತರುವ ಅಪ್ಪನ ಮಗಳು! ನೋಡಲು ಇದ್ದಿದ್ದು ಎಣ್ಣೆ ಸುರಿಸುವ ಮುಖ ಮತ್ತು ತಲೆ. ಶುದ್ಧ ಗಮಾರ ಹುಡುಗಿಯದ್ದು. ಕೆನ್ನೆಗೆ ಹೊಡೆದರೂ ಮಾತು ಹೊರಡುತ್ತಿರಲಿಲ್ಲ. ಯಾರು ನಿನ್ನನ್ನು ಇಷ್ಟೆಲ್ಲಾ ತಯಾರು ಮಾಡಿದ್ದು? ತಿಕ್ಕಿ, ಬೆಳಗಿ, ತಿಳಿಯ ಹೇಳಿ ಯಾರು ನಿನ್ನನ್ನು ಈ ಹೊರಗಿನ ಪ್ರಪಂಚಕ್ಕೆ ಯೋಗ್ಯವಾಗುವ ಹಾಗೆ ಮಾಡಿದ್ದು? ಯಾರು ನಿನ್ನನ್ನು ಈ ಕೋಟೀಶ್ವರರುಗಳೆದುರಿಗೆ ಕರೆದುಕೊಂಡು ಹೋಗಿ ನಿಲ್ಲಿಸಿದ್ದುದು? ನಾನಲ್ಲವೇ ? ಈಗ ನನ್ನ ಹತ್ತಿರವೇ 'ಮೂಡ್' ತೋರಿಸುತ್ತೀಯಾ? ಕಾರಣ, ನಾನು ನಿನ್ನನ್ನು ತಲೆಯ ಮೇಲೆ ಕೂಡಿಸಿಕೊಂಡಿದ್ದೇನ ಅಲ್ಲವೇ? ಇದೇ ಅಂದು ಆ ಮೆಹರಾ ಸಾಹೇಬನ ಜೊತೆಯಲ್ಲಿ ಆಡಿದ ಆಟದಲ್ಲಿ ನೋಡ ಹೋದರೆ ಏನೂ ಬಾಕಿ ಇರಲಿಲ್ಲ. ಆದರೂ ಏನಾದರೂ ಹೇಳಿದೆನೆ? ಹಲ್ಲು ಹಲ್ಲು ಕಚ್ಚಿಕೊಂಡು ಸುಮ್ಮನಿರಲಿಲ್ಲವೇ? ಸುಮ್ಮನಿದ್ದೆ, ಏಕೆ ಎಂದರೆ ನೀನು ನನಗೆ ಸಹಾಯಕಳಾದ ಸಹಧರ್ಮಿಣಿ ಎಂಬ ನಂಬಿಕೆಯಿಂದ ಮತ್ತು ನಿನ್ನ ಬುದ್ಧಿಯ ಮೇಲಿನ ನಂಬಿಕೆಯಿಂದ. ನಂಬಿಕೊಂಡಿದ್ದೆ, ನೀನು ಇನ್ನೊಂದು ಸ್ವಲ್ಪ ಸಲಿಗೆ ಕೊಟ್ಟು ಆ ಕುಡುಕನನ್ನು ಮಲಗಿಸಿಬಿಟ್ಟು ಆಮೇಲೆ ಮಾನಹಾನಿಯ ನೆಪಮಾಡಿ ಒಂದು ದೊಡ್ಡ ಮೊಬಲಗನ್ನು ಕೈಗೆ ತೆಗೆದುಕೊಳ್ಳುತ್ತೀಯೆಂದಿದ್ದೆ. ಹಾಗಿಲ್ಲದೆ ನೀನು ಬರೀಕೈಯಲ್ಲಿ ಓಂತಿರುಗಿ ಬಂದು ಗಂಡನನ್ನು ತುಚ್ಛವಾಗಿಸಿ, ಮುಳ್ಳು ಮುಳ್ಳಾದ ಮಾತುಗಳಾಡಿದ್ದೆ, ಸ್ವಲ್ಪ ಈ ಕಡೆ ಆ ಕಡೆ ಆದರೆ ನಿನ್ನ ಸತೀತ್ವವೆಲ್ಲಾ ಹೊರಟು ಹೋಯಿತು ನಿನಗೆ ಅಲ್ಲವೇ? ಹೂಂ, ಇದೂ ಒಂದು ಷೋ. ಅಮ್ಮಣಿ! ನಿನಗೆ ತಿಳಿಯದ್ದೇನಿಲ್ಲ ಒಂದು ವೇಳೆ ನನ್ನನ್ನೇ ಒಂದು ದಿನ 'ಹೂಟ್–ಅವುಟ್' ಮಾಡಿಬಿಡುತ್ತೀಯ!

ಯಾವಾಗಲೂ ಈ ತರಹ ಬುಸುಗುಟ್ಟುತ್ತಾ ಕಾಲ ಕಳೆಯುತ್ತಿದ್ದಾನೆ ನೀಲಾಕ್ಷ. ಆದರೆ ಸುನಂದಾಳನ್ನು ಒಪ್ಪಿಸಲಾಗುತ್ತಿಲ್ಲ. ಅಷ್ಟೇಕೆ ತಾಯಿ ಮನೆಗೂ ಹೆಚ್ಚು ಹೋಗುತ್ತಿಲ್ಲ. ಅವಳ ತಾಯಿಯೂ ಕೇಳಿದರು, "ಎಲ್ಲಿ ಸುನು, ಈಗೆಲ್ಲಾ ಬರುವುದೇ ಇಲ್ಲವಲ್ಲಾ. ಪಿಶುವನ್ನೂ ಎಷ್ಟೋ ದಿನದಿಂದ ನೋಡಿಲ್ಲ––"

ಆದರೆ ಏಕೆ ಈ ಬದಲಾವಣೆ?

ಈ ಮನೆಯ ಚಿಕ್ಕ ಮಗ, ಒಂದು ಕಾಲದಲ್ಲಿ ಯಾವನು, ಅತ್ತಿಗೆಯಲ್ಲಿ ತುಂಬಾ ಪ್ರೀತಿ, ಶ್ರದ್ಧೆಯನ್ನಿಟ್ಟಿದ್ದನೋ, ಅವನು ಈಗ ಅಸಹ್ಯಪಟ್ಟನೆಂದೇ?

ಅರೆ, ಛೆ, ಛೆ!

ಸುನಂದಾಗೆ ಏನು ಹುಚ್ಚೇ? ಆ ಮಡುಗನೂ ಒಬ್ಬ ಮನುಷ್ಯನೆನಿಸಿಕೊಳ್ಳುವಂತಹ ಯೋಗ್ಯನೆ? ಅದಕ್ಕಾಗಿ ಅವನ ಶ್ರದ್ಧೆ ಇರುವಿಕೆಯ ಬಗ್ಗೆ ಸುನಂದಾ ಎನ್ನುವ ಈ ಬೆಲೆ ಬಾಳುವ ವ್ಯಕ್ತಿ ತನ್ನನ್ನು ಬದಲಾಯಿಸಿಕೊಳ್ಳುತ್ತಾಳೆಯೇ? ಒಂದು ವೇಳೆ ಅಸಡ್ಡೆಯ ಕನ್ನಡಿಯಲ್ಲಿ ತನ್ನ ಈ ಆತ್ಮಘಾತಿಯಾದ ಮೂರ್ತಿಯನ್ನು ನೋಡಿ ಚಕಿತಳಾಗಿದ್ದಾಳೋ? ಒಂದು ವೇಳೆ ಯೋಚಿಸುತ್ತಾ ಇದ್ದಾಳೋ, ಯಾರ ಮೇಲೆ ಕೋಪಿಸಿಕೊಂಡು ನಾನು ಈ ಆತ್ಮಹನನದ ಯಜ್ಞವನ್ನು ಮಾಡುತ್ತಿದ್ದೇನೆ ? ಯಾರ ಮೇಲೆ ಆಕ್ರೋಶವೋ ಅವನು ಅದಕ್ಕೆ ಯೋಗ್ಯನೇ? ಎಂದು ಯೋಚಿಸುತ್ತಿದ್ದಾಳೋ?!

ತೀರ ಮನಸ್ಸಿನೊಳಹೊಕ್ಕು ನೋಡಿದರೆ ಒಂದು ವೇಳೆ ಕಾಣಬಹುದೇನೋ ಆಕ್ರೋಶಕ್ಕೆ ಪಾತ್ರನಾದವನು ನೀಲಾಕ್ಷ ಎನ್ನುವ ಈ ಅರ್ಥ-ಲೋಭಿ, ಸ್ವಾರ್ಥಿ ಮತ್ತು ತಿರುಳಿಲ್ಲದ ಮನುಷ್ಯನು ಮಾತ್ರವೇ ಅಲ್ಲ, ಒಂದು ವೇಳೆ ಈ ಮನೆಯಲ್ಲೇ ಆತ್ಮ-ಚಿಂತನೆಯಲ್ಲಿ ಮುಳುಗಿರುವ ಇನ್ನೊಬ್ಬ ಪುರುಷರು. ಯಾರು ತನ್ನನ್ನು ಸ್ಥಾಪಿಸಿಕೊಂಡಿದ್ದಾರೋ ಅವರೂ ಇರಬಹುದು!

ಸುನಂದಾಳ ಕೋಪ ಅವರ ಮೇಲೆಯೇ ಇರಬಹುದೇನೋ. ಅವರು ಒಂದು ವೇಳೆ ಈ ಬಿಕ್ಕಟ್ಟಿನಿಂದ ಕಾಪಾಡಲಾಗುತ್ತಿತ್ತೋ ಏನೋ. ಅವರು ತನ್ನ ಕರ್ತವ್ಯವನ್ನು ಮಾಡಲಿಲ್ಲ. ಅವರು ಕೇವಲ ಸ್ವಾಭಿಮಾನದ ಕೋಟೆಯಲ್ಲಿ ವಾಸ ಮಾಡುತ್ತಾ ತಮ್ಮ ಮಾನವನ್ನು ಕಾಪಾಡಿಕೊಳ್ಳುವುದರಲ್ಲೇ ಜಾಗರೂಕತೆಯಿಂದಿದ್ದಾರೆ. ಒಟ್ಟಿನಲ್ಲಿ ಹೇಳಹೋದರೆ ಅವರು ತಮ್ಮ ಕರ್ತವ್ಯವನ್ನು ಪಾಲಿಸಲಿಲ್ಲ. ಅವರ ಮಾತನ್ನು ಯಾರೂ ಕೇಳದೆ ಹೋದರೆ, ಹೇಳಿ ಏನು ಪ್ರಯೋಜನ ಎಂದು ಮಾತ್ರ ಯೋಚಿಸಿದ್ದಾರೆ.

ಆದರೆ ಸುನಂದಾ ತಂದೆ ಹೀಗಿಲ್ಲವಲ್ಲಾ.

ಅವರು ತಮ್ಮ ಮಾನಹಾನಿಯ ಭಯದಿಂದ ಹೀಗೆ ತಟಸ್ಥರಾಗಿರುವುದಿಲ್ಲ. ಅವರು ತಮ್ಮ ಹೆಂಡತಿ, ಮಕ್ಕಳನ್ನು ಬಯ್ಯುತ್ತಾರೆ, ಗದರಿಸುತ್ತಾರೆ, ಪ್ರೀತಿಸುತ್ತಾರೆ. ಆದ್ದರಿಂದ ಅವರ ಆಡಳಿತದ ಪ್ರಜೆಗಳು ಅದೇ ಅವರ ಸ್ವಾಭಾವಿಕ ನೀತಿಯೆಂದು ಜಾಗರೂಕರಾಗಿರುತ್ತಾರೆ.

ಆದರೆ ಸರೋಜಾಕ್ಷರು ಈಗ ಅಧಿಕಾರ ಮಾಡಿ ಹೇಳಲು ಬಂದರೆ, ಯಾರಾದರೂ ಅದನ್ನು ಸ್ವಾಭಾವಿಕವೆಂದು ತಿಳಿದುಕೊಳ್ಳುವವರೇ? ಅವರು ಅಧಿಕಾರ ತೋರಿದರೆ ಅದನ್ನು ಅವಮಾನವೆಂದು ತಿಳಿದುಕೊಳ್ಳುತ್ತಾರೆ ಅಷ್ಟೆ!

ಆದರೆ ನಾನು ಅಂತಹದ್ದೇ ಅಂದರೆ ತಾಯಿಯ ಮನೆಯಂತಹ ಒಂದು ಸಂಸಾರವನ್ನೇ ಬಯಸಿದ್ದೆ-ಸುನಂದಾ ಯೋಚಿಸುತ್ತಾಳೆ. ಅದೇ ನನ್ನ ಭಾವನೆಯಲ್ಲಿ ಆದರ್ಶದ ಸಂಸಾರವಾಗಿತ್ತು. ಅದನ್ನೇ ನಾನು ಆಶಿಸುತ್ತಿದ್ದೆ. ಕಲ್ಯಾಣಿಯಾದ ವಧು, ಸೇವಾಪರಾಯಣ

ಹೆಂಡತಿ, ಸ್ನೇಹಮಯಿ ತಾಯಿಯಾಗಲೂ ಬಯಸಿದ್ದೆ ಆದರೆ ವಿಧಿ ಹಾಗೆ ಆಗಲು ಬಿಡಲಿಲ್ಲ. ನನ್ನ ಗಂಡನ ಲೋಭದ ಅಗ್ನಿಯಲ್ಲಿ ಧ್ವಂಸವಾಗಿ ಹೋದೆ ನಾನು. ನಿರ್ಲಜ್ಜ ವೇಷಭೂಷಣಗಳನ್ನು ಹಾಕಿಕೊಳ್ಳುವುದನ್ನೇ ನಾನು ದೊಡ್ಡಸ್ತಿಕೆಯೆಂದು ತಿಳಿಯಲು ಕಲಿತೆ, ಜನರೊಂದಿಗೆ ನಡವಳಿಕೆಯಲ್ಲಿ ಶೀಲವನ್ನು ವರ್ಜಿಸಿದೆ. ನಾನು ಅಮಂಗಲದ ದೀವಟಿಗೆಯನ್ನು ಕೈಯಲ್ಲಿ ತೆಗೆದುಕೊಂಡು ಜೀವನದಲ್ಲಿನ ಅಮೂಲ್ಯ ಗುಣಗಳನ್ನೆಲ್ಲಾ, ದಹಿಸಲು, ಉರಿಸಲು ಕಲಿತೆ. ಅದರ ಅರ್ಥ, ನಾನು ಬುದ್ಧಿಹೀನತೆಯ ಚರಮ ನಿದರ್ಶನಳಾದೆ. ಕಣ್ಣಿನ ಮೇಲೆ ಕೋಪಿಸಿಕೊಂಡು ನೆಲದ ಮೇಲೆ ಊಟ ಮಾಡಿದ ಉದಾಹರಣೆಯಾದೆ. ಆದರೆ ಒಂದು ಕಾಲದಲ್ಲಿ ಜನ. ನನ್ನನ್ನು ಬುದ್ಧಿವಂತೆ ಎನ್ನುತ್ತಿದ್ದರು. ನಾನೂ ಅದನ್ನು ನಂಬುತ್ತಿದ್ದೆ.--

ತನ್ನ ಜೀವನವನ್ನೇ ತನ್ನ ಇಷ್ಟದಂತೆ ಇಟ್ಟುಕೊಳ್ಳಲು ಬಾರದವಳಿಗೆ, ಧೂಳಿನಲ್ಲಿ ಹೊರಳಿದವಳಿಗೆ ಬುದ್ಧಿಯ ಹೆಮ್ಮೆ ಬೇರೆಯೇ?

ಆದರೆ ಬರೀ ಸುನಂದಾ ಮಾತ್ರ ಅಲ್ಲ, ಇನ್ನೂ ಒಬ್ಬರು ಘಂಟಾಘೋಷವಾಗಿ ಈ ಮಾತನ್ನು ಹೇಳುತ್ತಿದ್ದರು.

"ಗೊತ್ತಾಯಿತೇ ಚಿಕ್ಕಮ್ಮಾ, ಈ ಯುಗದ ಎಲ್ಲರಿಗೂ ತಮ್ಮ ಬುದ್ಧಿಯ ಹೆಮ್ಮೆ ಬಹಳ ಇರುತ್ತೆ. ತೋರುತ್ತಾರ ಏನೋ ತಮಗೇ ಎಲ್ಲಾ ಗೊತ್ತು ಎಂಬಂತೆ, ಆದರೆ ನಾನು ಹೇಳುತ್ತೇನೆ ಅವರಿಗೆ ಏನೂ ಗೊತ್ತಿಲ್ಲ."

*****

ಅಧ್ಯಾಯ ಒಂಭತ್ತು

ದೊಡ್ಡದಾದ ಒಂದು ಕಂತೆ ಕಾಗದ ಇದೆ ಹೈಮವತಿಯ ಟೇಬಲ್ ಮೇಲೆ. ಅದರ ಎರಡು ಕಡೆಗೂ ಇಬ್ಬರು ಕುಳಿತಿದ್ದಾರೆ, ಹೈಮವತಿ ಮತ್ತು ಶಾರದಾ ಪ್ರಸಾದ್.

ಹೈಮವತಿ ಅವರ ಒಬ್ಬ ಸ್ನೇಹಿತೆಯಿಂದ ಕೇಳಿದ್ದಾರಂತೆ ಈ ಪುಸ್ತಕ ಪಬ್ಲಿಷ್ ಮಾಡಿ ಮಾರುವುದು ಬಹಳ ಲಾಭಕರವಾದ ವ್ಯಾಪಾರ ರೂಪಾಯಿಗೆ ರೂಪಾಯಿ ಲಾಭ ಎಂದು. ಆದ್ದರಿಂದ ತಾವೂ ಒಬ್ಬ ಪಬ್ಲಿಷರ್ ಅಗಲು ಬಯಸುತ್ತಾರೆ ಮತ್ತು ಮೊದಲ ಪುಸ್ತಕವಾಗಿ ಶಾರದಾ ಪ್ರಸಾದನ ಆರಾಯ್ಕೆಯ ಪುಸ್ತಕವನ್ನು ಪ್ರಕಟಿಸಲು ಇಷ್ಟಪಡುತ್ತಾರೆ. ಅದಕ್ಕೇ ಶಾರದಾ ಪ್ರಸಾದ್ ಆ ಕಾಗದದ ಮೂಟೆಯನ್ನು ತಂದು, ವಿಶ್ವಾಸದ ಧ್ವನಿಯಿಂದ ಹೇಳಿದರು, "ನಮ್ಮ ಭಾರತ ವರ್ಷದ ಐತಿಹ್ಯದಲ್ಲಿ ಶ್ರದ್ಧೆ ಇರುವವರನ್ನು ಅಣ್ಣ ಒಬ್ಬರನ್ನು ಬಿಟ್ಟರೆ, ಈಗ ತಾನೆ ಮೊದ ಮೊದಲು ಇನ್ನೊಬ್ಬ ವ್ಯಕ್ತಿಯನ್ನು ನೋಡುತ್ತಿದ್ದೇನೆ! ಅಂತೂ ಯಾವಾಗಲೂ ಅತ್ತಿಗೆ ಬಾಯಲ್ಲಿ ನಿಮ್ಮ ವಿಷಯವಾಗಿ ಟೀಕೆಯನ್ನೇ ಕೇಳುತ್ತಾ ಬಂದಿದ್ದೇನೆ. ನೀವೂ ತುಂಬಾ ಫ್ಯಾಷನ್ ಮಾಡಿಕೊಳ್ಳುವವರಂತೆ, ಮೇಮ್ ಸಾಹೇಬರಂತೆ."

ಹೀಗೆ ಹೇಳಿಬಿಡುತ್ತಾರೆ ಶಾರದಾ ಪ್ರಸಾದ್, ಇದು ತಮ್ಮ ಕಾರ್ಯಸಿದ್ಧಿಗಾಗಿ ತಾಜಾ ಮಾಡಬೇಕೆಂದೋ ಅಥವಾ ವಿಜಯಾರನ್ನು ನಿಂದಿಸಬೇಕೆಂದೋ ಅಲ್ಲ. ಒಂದು ಆವೇಶ–ವೇಗದಲ್ಲಿ ಹೇಳಿಬಿಡುತ್ತಾರೆ.

ಹೈಮವತಿ ತಾನೇ ಶಾರದಾ ಪ್ರಸಾದರನ್ನು ಬರಹೇಳಿ ಕರಸಿದ್ದಾರೆ. ಶಾರದಾರ ಪುಸ್ತಕದ ವಿಚಾರ ಕೇಳಿದಾಗಿನಿಂದ, ಅದನ್ನು ಕೇಂದ್ರವಾಗಿಟ್ಟು ವ್ಯಾಪಾರ–ಚಿಂತೆ ಅವರ ಮನಸ್ಸಿನಲ್ಲಿ ಎದ್ದಿದೆಯಂತೆ. ಪ್ರೆಸ್ಸು ಮಾಲೀಕರೊಂದಿಗೆ ಮಾತಾಡಿದ್ದಾರಂತೆ. ಇನ್ನು ಕಾಗದ ಇತ್ಯಾದಿ ತೆಗೆದು ಶುರು ಮಾಡುತ್ತಾರಂತೆ. ಈಗ ಅವರ ಪ್ರಶ್ನೆ, ಶಾರದಾಪ್ರಸಾದ್ ಎಷ್ಟು ಅಡ್ವಾನ್ಸ್ ಕೇಳುತ್ತಾರೆ ಎಂಬುದೇ.

ಶಾರದಾ ಪ್ರಸಾದ್ ಮೊದಲು ಬೆಚ್ಚಿದರು. ಆಮೇಲೆ ಕೆಂಪೇರಿದ ಮುಖದಿಂದ ಹೇಳಿದರು: "ನಿಮ್ಮ ಹತ್ತಿರ ಅಡ್ವಾನ್ಸ್ ತೆಗೆದುಕೊಳ್ಳುವುದೇ ಏನು ಹೇಳುತ್ತಿದ್ದೀರಿ?"

ಆದರೆ ಹೈಮವತಿ ಖಂಡಿತವಾಗಿ ಹೇಳಿದರು: "ಬಿಸಿನೆಸ್ ವಿಷಯದಲ್ಲಿ ಯಾವಾಗಲೂ ಕರಾರು–ಕಾನೂನುಗಳನ್ನು ಅನುಸರಿಸಿ ನಡೆಯುವುದೇ ಸರಿ. ಇಲ್ಲದಿದ್ದರೆ ಅದಕ್ಕೆ ಒಂದು ಬೆಲೆ ಇರುವುದಿಲ್ಲ. ಏನೋ ಒಂದು ಮಕ್ಕಳ ಆಟದ ತರಹ ಆಗುತ್ತೆ."

ಈ ಯುಕ್ತಿಗೆ ಶಾರದಾ ಪ್ರಸಾದ್ ತಲೆ ಬಾಗಿದ್ದಾರೆ. ಆದ್ದರಿಂದ ಹೇಳಿದರು: "ಸರಿ ನೀವು ಹೇಳಿದ ಹಾಗೆಯೇ ಆಗಲಿ."

ಹೈಮವತಿ ಹೇಳಿದರು, "ನಾನು ಇದೇ ತಾನೆ ಮೊದಲು ವ್ಯಾಪಾರಕ್ಕೆ ಇಳಿದಿರುವುದು. ಆದ್ದರಿಂದ ಹೆಚ್ಚು ಕೊಡಲು ಸಾಧ್ಯವಿಲ್ಲ. ಒಂದು, ಮೂರು ಸಾವಿರ ಈಗ ಕೊಡುತ್ತೇನೆ. ಆಮೇಲೆ ಮುದ್ರಣ ಪ್ರಾರಂಭವಾದ ಮೇಲೆ--"

ಅಂಕೆಯು ಶಾರದಾ ಪ್ರಸಾದ್‌ಗೆ ಆಶಾತೀತವಾದುದು. ಅದನ್ನು ಆತ ಹೇಳಲು ಹಿಂಜರಿಯಲೂ ಇಲ್ಲ. ಆದರೆ ಹೈಮವತಿ, ಎಲ್ಲಾ ವಿಚಾರಮಾಡಿ, ಲೆಕ್ಕ-ಪತ್ರ ತಯಾರು ಮಾಡಿ ಕೆಲಸ ಮಾಡುತ್ತಿದ್ದಾರೆ. ಹೈಮವತಿಗೆ ತಿಳಿದಂತೆ, ಪುಸ್ತಕ, ಮೂರು ಖಂಡಗಳಲ್ಲಿ ಪೂರ್ತಿಯಾಗುತ್ತೆ. ಆದರೆ ಒಂದೊಂದು ಖಂಡವೇ ಮೂವತ್ತು ರೂಪಾಯಿಯಾಗುತ್ತೆ. ಎರಡನೆಯದು ಮತ್ತು ಮೂರನೆಯ ಖಂಡಗಳನ್ನು ಇನ್ನೂ ಬರೆದಿಲ್ಲ. ಆದರೆ ವಿಷಯ-ವಸ್ತುಗಳೆಲ್ಲಾ ರೆಡಿ. ಇನ್ನು ಬರೆಯುವುದು ಎಷ್ಟು ಹೊತ್ತು? ಮೊದಲನೆಯ ಖಂಡ ಅಚ್ಚಾಗುತ್ತಿರುವಾಗಲೇ ಅದು ಆಗುತ್ತೆ, ಅದು ಹೋಗಲಿ, ಒಂದೊಂದು ಪುಸ್ತಕ ಮೂವತ್ತು ರೂಪಾಯಿ ಆಗುವಾಗ ಒಂದು ಮೂರು ಸಾವಿರವಾದರೂ ಕೊಡದಿದ್ದರೆ ಪ್ರಕಾಶಕರಿಗೆ ಮರ್ಯಾದೆ ಇರುತ್ತದೆಯೇ? ಶಾರದಾ ಪ್ರಸಾದ್ ಹೇಳುತ್ತಾರೆ, "ಆಶ್ಚರ್ಯ! ನೋಡಿ, ನೀವು ಒಬ್ಬ ವಿಧವೆ ಹೆಂಗಸು. ನೀವು ಧೈರ್ಯವಾಗಿ ಈ ಕೆಲಸವನ್ನು ತೆಗೆದುಕೊಂಡಿದ್ದೀರಿ. ಈ ಪಟ್ಟಣದಲ್ಲಿ ಎಷ್ಟೆಲ್ಲಾ ದೊಡ್ಡ ದೊಡ್ಡ ಪಬ್ಲಿಷರ್‌ಗಳು ಇದಾರೆ, ಅವರುಗಳು, 'ರಿಸ್ಕ್' ತೆಗೆದುಕೊಳ್ಳಲಾಗುವುದಿಲ್ಲ ಎಂದುಬಿಟ್ಟರು-- ಇದರ ಅರ್ಥ? ಬರಹದ ವಿಷಯದಲ್ಲಿ ಅಷ್ಟು ನಂಬಿಕೆ ಇಲ್ಲ ಎಂದೇ? ಅದರ ಕಾರಣ ದೇಶದ ವಿಷಯದಲ್ಲಿ ಅವರುಗಳು ಯಾವಾಗಲೂ ಚಿಂತಿಸಿಲ್ಲ. ಕೇಳಿದರೆ ನೀವು ಆಶ್ಚರ್ಯಪಡಬಹುದು. ಅವರಿಗೆ ಉತ್ಸಾಹವಿಲ್ಲ. ಅಂದು ಒಬ್ಬ ಹುಡುಗನನ್ನು ಕೇಳಿದೆ, 'ನಮ್ಮ ದೇಶದಲ್ಲಿ ಆಕಾಶ-ದೀಪ ಉರಿಸುವ ಪದ್ಧತಿ ಇದೆಯಲ್ಲಾ, ಇದರ ವೈಜ್ಞಾನಿಕ ಅರ್ಥವೇನು?' ಎಂದು. ಹುಡುಗ ಬೆಂಗಾಲಿಯಲ್ಲಿ ಎಂ.ಎ. ಓದಿದ್ದಾನೆ. ಬಹಳ ಬ್ರಿಲಿಯಂಟ್ ಹುಡುಗನಂತೆ. ಏನು ಹೇಳಿದ ಗೊತ್ತೇ? 'ವೈಜ್ಞಾನಿಕ ಅರ್ಥ ಎಂಥಾದ್ದೂ ಇಲ್ಲ. ಬರೀ ಕು-ಸಂಸ್ಕಾರ ಅಷ್ಟೇ. ಸತ್ತ ಹಸು ಹುಲ್ಲು ತಿನ್ನುವಂತೆ! ಸತ್ತುಹೋದ ಪಿತೃಗಳ ಪ್ರೇತಗಳಿಗಾಗಿ ಯಮಪುರಿಯಲ್ಲಿ ದೀಪ ತೋರಿಸುವುದಕ್ಕಾಗಿ!' ಹೇಳಿಬಿಟ್ಟು ಅದೇನು ವ್ಯಂಗ್ಯನಗು!--ಆದರೆ ಸ್ವಲ್ಪ ಯೋಚಿಸಿದ್ದರೆ ತಾತ್ಪರ್ಯ ಗೊತ್ತಾಗಿರುವುದು. ಆಗ ಹುಡುಗನ ಕಣ್ಣಲ್ಲಿ ಬೆರಳಿಟ್ಟು ಆಡಿಸಿಬಿಟ್ಟು, ತಿಳಿಸಿದೆ, 'ನೋಡಪ್ಪಾ, ಅದು ತೀರ ಮಂಡೂಕನಾದವನು ಹೇಳುವಂತಹ ಹೇಳಿಕೆ. ಮನುಷ್ಯ ಜಾತಿ ಒಂದು ಶುದ್ಧ ಹಟಮಾರಿ ಜಾತಿ ಅಲ್ಲವೇ? ಒಳ್ಳೆಯ ಮಾತು ಯಾವುದನ್ನೂ ಕೇಳುವುದಿಲ್ಲ. ಹೌದಲ್ಲವೇ? ಅದಕ್ಕೇ ಈ ರೂಪಕದ ಪ್ರಕಟಣೆ! ನಿಜವಾದ ಕಾರಣ, ರಾತ್ರಿಯ ಬೆಳಕಿಗೆ ಬರುವ ಹುಳುಗಳ ಕಾಟದಿಂದ ತಪ್ಪಲು ಇದೊಂದು ಉಪಾಯ. ಮನೆಯಲ್ಲಿ ಎತ್ತರವಾದ ಕಡೆ ಆ ದೀಪವನ್ನು ಇಟ್ಟರೆ ಹುಳುಗಳು ಅಲ್ಲೇ ಹೋಗಿ ಗುಂಪುಗಟ್ಟುತ್ತೆ!' ಆದರೆ ಹುಡುಗ ನಂಬಿದನೋ ಬಿಟ್ಟನೋ, ನಕ್ಕು ಹೊರಟುಹೋದ. ದೀಪಾವಳಿಯ ಬೆಳಕು ಮತ್ತು ಪಟಾಕಿ ಹೊತ್ತಿಸುವ ಕಾರಣವನ್ನೂ ಹೇಳೋಣವೆಂದಿದ್ದೆ.

ಅವಕಾಶ ಕೊಡದೆ ಹೊರಟುಹೋದ. ಹೋಗಲಿ ಆ ಮಾತು. ಹಾಗಾದರೆ ನೀವು ಈ ಬಗ್ಗೆ ಸ್ಥಿರಪಡಿಸಿಕೊಂಡುಬಿಟ್ಟಿದ್ದೀರಿ ಅನ್ನಿ?"

ಹೈಮವತಿ ಗಲಾಟೆಯೇ ಮಾಡಿಬಿಟ್ಟರು, "ಸ್ಥಿರವಂತೆ, ಸ್ಥಿರ! ಹೂಂ, ನಾನು ದಿನಗಳನ್ನು ಎಣಿಸುತ್ತಿದ್ದೇನೆ, ಯಾವಾಗ ಇದನ್ನು ಪ್ರಕಟಿಸುತ್ತೇನೆ ಎಂದು! ಆದರೆ ಅದೇ ಹೇಳಿದೆನಲ್ಲ ಒಂದು ಷರತ್ತು ಯಾವ ತರಹದಿಂದಲೂ--"

ಹೌದು, ಹೈಮವತಿ ಒಂದು ಷರತ್ತು ಹಾಕಿದ್ದಾರೆ ತಮ್ಮ ಈ ಅಳಿಯನಿಗೆ, ತಾನು ಪಬ್ಲಿಷರ್ ಆಗಿರುವ ಈ ಸುದ್ದಿಯು ಯಾರಿಗೂ ತಿಳಿಯಕೂಡದು. ಆಮೇಲೆ ಅವರು ಎಲ್ಲರನ್ನೂ ಆಶ್ಚರ್ಯದಲ್ಲಿ ಮುಳುಗಿಸುತ್ತಾರಂತೆ.

ಶಾರದಾ ಪ್ರಸಾದ್ ಅದನ್ನು ನಂಬಿಯೂ ಇದ್ದಾರೆ ಮತ್ತು ಅದರಿಂದ ಒಂದು ತರಹ ಸ್ಫೂರ್ತಿಯೂ ಗೊಂಡಿದ್ದಾರೆ.

ಶಾರದಾ ಪ್ರಸಾದ್ ತಲೆಯಲ್ಲಾಡಿಸಿದರು, "ಅದು ಹೇಳಬೇಕೆ? ಇದು ಕೇವಲ ನನಗೂ ನಿಮಗೂ ಮತ್ತು ಕಂಪೋಜಿಟರನಿಗೂ ಗೊತ್ತು ಅಷ್ಟೇ. ಸರಿ, ಹಾಗಾದರೆ ಬರುತ್ತೇನೆ, ಸಮಯದ ವ್ಯತ್ಯಾಸ ಸ್ವಲ್ಪ ಹಿಂದು-ಮುಂದು ಮಾಡಿನೋಡಿ--ಇಲ್ಲವೆ. ಪ್ರಿಂಟ್ ಆದ ಮೇಲೆಯೇ--"

ಹೈಮವತಿ ತಲೆಯಲ್ಲಾಡಿಸಿದರು "ಅದೇ ಒಳ್ಳೆಯದು."

"ಆದರೆ ಹೇಳಿದನಲ್ಲಾ ಚಿಕ್ಕಮ್ಮಾ, ಪ್ರೂಫ್ ನಾನೇ ನೋಡಬೇಕು ಎಂದು."

ಹೌದು, ಅದು ಖಂಡಿತ, ಹೈಮವತಿ ಸಾವಧಾನವಾಗಿ ಹೇಳಿದರು. "ಅದನ್ನು ನೀನೇ ನೋಡದ ಹೋದರೆ ತಪ್ಪು-ನೆಪ್ಪುಗಳಿದ್ದುಬಿಡಬಹುದು."

ಶಾರದಾ ಪ್ರಸಾದ್‌ಗೆ ಸಂತೋಷ ಉಕ್ಕಿ ಬಂತು.

"ಇದೇ ನೋಡಿ, ಇದಕ್ಕೇ ನಿಮ್ಮನ್ನು ಪೂಜಿಸುತ್ತೇನೆ ಎನ್ನೋದು ಚಿಕ್ಕಮ್ಮಾ. ಎಲ್ಲಾ ತಿಳಿಯುತ್ತೆ ನಿಮಗೆ. ಒಂದಕ್ಷರ ಈ ಕಡೆಯಾದರೂ ಪೂರಾ ವಿಷಯವೇ ಮರ್ಡರ್ ಆಗಿ ಹೋಗುತ್ತೆ. ಇದನ್ನು ಎಷ್ಟು ಜನ ತಿಳಿದುಕೊಳ್ಳುತ್ತಾರೆ ಹೇಳಿ?"

ಶಾರದಾ ಪ್ರಸಾದ್ ಕಡೆಯದಾಗಿ ಒಂದು ಬಾರಿ, ಕಾಗದಗಳ ಮೇಲೆ ಮಮತೆಯಿಂದ ಕೈಯಾಡಿಸಿ ಹೇಳಿದರು, "ಇದೆಲ್ಲಾ ಇಲ್ಲೇ ಇರುತ್ತೇ ಹಾಗಾದರೆ, ನೋಡಿಕೊಳ್ಳಿ ಯಾವುದೂ—"

"ಇಲ್ಲ, ಇಲ್ಲ, ನಾನು ಈಗಲೇ ಜೋಪಾನವಾಗಿ ತೆಗೆದಿಡುತ್ತೇನೆ."

ಶಾರದಾ ಪ್ರಸಾದ್ ತಿರುಗ ಬಂದು ಕೂಡುತ್ತಾರೆ.

ಒಂದು ಲೋಟಾ ನೀರು ಕೇಳುತ್ತಾರೆ.

ನೀರು ಕುಡಿಯುವ ಅವಕಾಶದಲ್ಲಿ ಎರಡು ಮೂರು ಸಲ ತಿರುಗಿ ಕಾಗದಗಳನ್ನು ಮುಟ್ಟಿ ನೋಡಿಬಿಟ್ಟು ಎದ್ದು ನಿಂತು, ಹೇಳುತ್ತಾರೆ, "ಹೋಗಲಿ. ನೀವು ನನ್ನನ್ನು ಕಾಪಾಡಿದಿರಿ. ಕೆಲಸ ಹುಡುಕಿ ಹುಡುಕಿ ಸಾಯುತ್ತಿದ್ದ ಪರಿಸ್ಥಿತಿಯಿಂದ ಕಾಪಾಡಿದಿರಿ."

ಕೆಲಸವೇ?

ಹೈಮವತಿಗೆ ಆಕಾಶದಿಂದ ಬಿದ್ದ ಹಾಗಾಗುತ್ತೆ. ಅವರು ಯಾವಾಗಲೂ ಕೇಳಿರಲಿಲ್ಲ. ಶಾರದಾ ಪ್ರಸಾದ್ ಎಂಬ ಈ ಸರಳ ಮನಸ್ಸಿನ ಪ್ರಾಣಿ ರಸ್ತೆ ರಸ್ತೆಯಲ್ಲೂ ಕೆಲಸ ಹುಡುಕಿಕೊಂಡು ಅಲೆದಿದ್ದಾನೆ ಎಂದು!

ಅದಕ್ಕೇ ಆಶ್ಚರ್ಯದಿಂದ ಕೇಳಿದರು, "ಕೆಲಸವೇ?"

ಶಾರದಾ ಪ್ರಸಾದ್ ನಗಲಾರಂಭಿಸುತ್ತಾರೆ, ಎಲ್ಲಾ ಒಂದು ತಮಾಷೆ ಎಂಬಂತೆ! ಹೇಳುತ್ತಾರೆ, "ಅಯ್ಯೋ ಅದು ಯಾಕೆ ಕೇಳುತ್ತೀರಿ? ಅದೆಲ್ಲಾ, ಮೂರ್ಖ ಪಬ್ಲಿಷರ್‌ಗಳ ಹತ್ತಿರ ಹೋಗಿ ಬೇಸತ್ತು ಕಾಗದ ಪುಸ್ತಕಗಳನ್ನೆಲ್ಲಾ ಒಂದು ಕಡೆ ಮೂಟೆ ಕಟ್ಟಿ ಇಟ್ಟು, ಕೆಲಸ ಹುಡುಕುವುದಕ್ಕೇ ಹೊರಟಿದ್ದೆ. ಏನಾದರೊಂದು ಮಾಡಬೇಕಲ್ಲಾ?"

ಹೈಮವತಿ ಸ್ವಲ್ಪ ನಕ್ಕು ಹೇಳಿದರು, "ಅದೇನೋ ನಿಜ, ಸರೋಜನೂ ಕೂಡ– ಇಲ್ಲ, ಇಲ್ಲ, ಅದಕ್ಕಾಗಿ ಅಲ್ಲ, ಅಣ್ಣನಿಗೇನು ಕಮ್ಮಿ ಆನೆಗಾಗಿ ಸೊಳ್ಳೆ ಏನು ಮಾಡಬಲ್ಲದು? ಇದು ಕೇವಲ ನನಗಾಗಿಯೇ. ಅಂದರೆ ಸುಮ್ಮನೆ ಇರಲಾಗುತ್ತದೆಯೇ?" ಶಾರದಾ ಪ್ರಸಾದ್ ಅವಸರವಾಗಿ ಓಡುತ್ತಾರೆ.

ಹೈಮವತಿ ತುಂಬಾ ಹೊತ್ತು ಆ ಕಡೆ ನೋಡುತ್ತಾ ಒಂದು ಖಿನ್ನ, ಮ್ಲಾನವಾದ ನಗು ನಗುತ್ತಾರೆ.

ಚೆಕ್ ಅಲ್ಲ, ನೂರು ರೂಪಾಯಿಯ ನೋಟೂ ಅಲ್ಲ. ಬರೀ ಹತ್ತು ರೂಪಾಯಿಯ ನೋಟಿನ ಕಟ್ಟು. ಒಂದು ವೇಳೆ ಹೈಮವತಿ, ಶಾರದಾಗೆ ಅದೇ ಅನುಕೂಲ ಎಂದು ಅಂದುಕೊಂಡರೋ ಏನೋ ಸರೋಜಾಕ್ಷರು ಆ ಮೂರು ಕಟ್ಟು ನೋಟುಗಳ ಕಡೆ ನೋಡಿ ಅವಾಕ್ಕಾಗಿ "ಏನಿದು?" ಎಂದರು. ಶಾರದಾ ಪ್ರಸಾದ್ ಏನೋ ಎಲ್ಲಿಗೋ ಕಡೆಯ ರೈಲನ್ನು ಹಿಡಿಯುವ ಅವಸರದಲ್ಲಿದ್ದಂತಿದೆ. ಶಾರದಾ ಪ್ರಸಾದ್‌ರ ನಿಲುವು ಹಾಗಿದೆ. ನೋಟಿನ ಕಟ್ಟುಗಳನ್ನು ಸರೋಜಾಕ್ಷರ ಮುಂದೆ ಎಸೆದಂತೆ ಹಾಕಿಬಿಟ್ಟು ಓಡಿ ಹೋಗುತ್ತಾ ಹೇಳುತ್ತಾರೆ, "ಏನಿಲ್ಲ, ಏನಿಲ್ಲ, ಒಬ್ಬ ಪಬ್ಲಿಷರ್ ಮೊದಲನೆಯ ಖಂಡವನ್ನು ಅಚ್ಚು ಮಾಡಲು ತೆಗೆದುಕೊಂಡು ಮೂರು ಸಾವಿರ ಅಡ್‌ವಾನ್ಸ್ ಕೊಟ್ಟರು. ಅದೇ–" ಶಾರದಾ ಪ್ರಸಾದ್‌ರ ಧ್ವನಿಯಲ್ಲಿ ಒಂದು ಅಸಡ್ಡೆಯ ಭಾವನೆ. ಏನೋ ಒಂದು ಮೂರು ಸಾವಿರ ರೂಪಾಯಿ ಏನೂ ಲಕ್ಷ್ಯವಿಲ್ಲ. ಒಂದು ಕಟ್ಟು ಹಲ್ಲು ಉಜ್ಜುವ ಕಡ್ಡಿಯ ಕಟ್ಟಿನಂತೆ. ಎಸೆಯಬಹುದು ಅದರಲ್ಲಿ ಆಶ್ಚರ್ಯಪಡಲು ಏನಿಲ್ಲ ಎಂಬಂತ ಭಾವನೆ.

ಓಡಿ ಹೋಗಿ ಸ್ವಲ್ಪ ಯೋಚಿಸಲು ಸ್ವಲ್ಪ ಸಮಯವೂ ಪಾಪ ಆತನಿಗೆ ಬೇಕಾಗುತ್ತೆ. ಎದೆಯ ದವಡವ ಸ್ವಲ್ಪ ಅಡಗಿದ ಮೇಲೆ ಯೋಚಿಸುತ್ತಾರೆ. ಅಲ್ಲ, ಇದರಲ್ಲಿ ಸುಳ್ಳೇನು ಬಂತು? ಪಬ್ಲಿಷರ್ ಎಂದರೆ ತಪ್ಪೇನು? ಬೆಂಗಾಲಿಯಲ್ಲಾದರೂ ಪ್ರಕಾಶಕಿ ಎಂದು ಒಂದು ಶಬ್ದ ಇದೆ. ಇಂಗ್ಲೀಷಿನಲ್ಲಿ ಪಬ್ಲಿಷರ್ ಎಂದು ತಾನೆ ಹೇಳಬೇಕು. ಅದರ ಸ್ತ್ರೀಲಿಂಗ ಶಬ್ದ ಅವರಿಗೆ ಗೊತ್ತಿಲ್ಲವಾದ್ದರಿಂದ ಪಬ್ಲಿಷರ್ ಎನ್ನದೆ ಇನ್ನೇನು ಹೇಳುವುದು?

ಮನಸ್ಸಿನಲ್ಲೆ ತಲೆಯಲ್ಲಾಡಿಸುತ್ತಾರೆ ಶಾರದಾ ಪ್ರಸಾದ್, 'ಕೊಟ್ಟ' ಎಂದು ಹೇಳಿದ್ದು ತಪ್ಪು. 'ಕೊಟ್ಟರು' ಎಂದು ಹೇಳಬೇಕಾಗಿತ್ತು. ಏನೋ ಗೋಲ್ ಮಾಲ್ ಆಗಿಹೋಯಿತು. ಇನ್ನು ಮುಂದೆಯಾದರೂ ಹೇಳುವಾಗ ನಾಲಿಗೆ ಮೇಲೆ ಸ್ವಲ್ಪ ಹತೋಟಿ ಇಟ್ಟುಕೊಂಡಿರಬೇಕು. ಶಾರದಾ ಪ್ರಸಾದ್ ಏನಾದರೂ ಯೋಚಿಸಲಿ, ಆ ನೋಟಿನ ಕಂತೆಗಳ ಕಡೆ ನೋಡುತ್ತಾ ಸರೋಜಾಕ್ಷರು ಯೋಚಿಸಿದರು, ಏನು ಶಾರದಾ ಕಡೆಗೆ, ಕಳ್ಳತನ-ಕೊಳ್ಳೆಗೆ 'ಇಳಿದಿದ್ದಾನೇನು?'

ಶಾರದಾನೊಂದಿಗೆ ಈ ಕಳ್ಳತನ-ಕೊಳ್ಳೆ ಶಬ್ದವನ್ನು ಸೇರಿಸುವುದು ಕಷ್ಟ. ಆದರೆ ಯಾವ ಪಬ್ಲಿಷರ್ ಆದರೂ ನಿಜವಾಗಲೂ ಮೂರು ಸಾವಿರ ರೂಪಾಯಿ ಅಡ್‌ವಾನ್ಸ್ ಕೊಟ್ಟಿರಬಹುದೇ? ಮಾತಿಗೆ ಮರುಳಾಗಿ ಯಾರಾದರೂ ದುಡ್ಡು ಬಿಚ್ಚುತ್ತಾರೆಯೇ, ಅನುಭವಸ್ಥರಾದ ವ್ಯಾಪಾರಿಗಳು?

ಮತ್ತೇ ಇನ್ನೇನು?

ಇದುವರೆಗೆ ಶಾರದಾ ಕೆಲಸ ಹುಡುಕುತ್ತಿರುವುದು, ವಿಜಯಾ ಗಟ್ಟಿಯಾಗಿ ತಮ್ಮಷ್ಟಕ್ಕೇ ಹೇಳಿ ಬಹಿರಂಗಪಡಿಸುತ್ತಿದ್ದುದು, ಅವರು ತಮ್ಮ ನಿರ್ವಾಸನದ, ಬಾಗಿಲು ಹಾಕಿದ ಕೋಣೆಯಲ್ಲಿದ್ದೂ ಗೊತ್ತಾಗಿತ್ತು. ಆದರೆ ಆ ಪ್ರಯತ್ನದ ಗಿಡದಲ್ಲಿ ಫಲ ಬಿಟ್ಟು ಅದು ಇಷ್ಟರ ಮಟ್ಟಿಗೆ ಹಣ್ಣಾಗಿದೆ ಎಂದು ನಂಬುವುದು ಸಾಧ್ಯವೇ?

ದುಡ್ಡನ್ನು ಶಾರದಾ ಪ್ರಸಾದ್ ಯಾವುದೋ ಅಲೌಕಿಕ ರೀತಿಯಲ್ಲಿ ಪಡೆದಿದ್ದಾರೆ ಎಂಬುದು ಖಂಡಿತ. ಆದರೆ ಸರಳ ಬುದ್ಧಿಯ ಮನುಷ್ಯ ಯಾರ ಬಲೆಗೆ ಬಿದ್ದಿದ್ದಾನೋ ಅದಲ್ಲವೇ ಈಗ ಯೋಚಿಸಬೇಕಾಗಿರುವುದು?

ಅದಲ್ಲದೇ ಶಾರದಾ ಪ್ರಸಾದನ ಈ ನಡತೆಯೂ ಸ್ವಲ್ಪ ಯೋಚನೆಗೆ ಕಾರಣವಾಗಿದೆ. ತಂದು ಹಾಕಿಬಿಟ್ಟು ಓಡುವುದು ಏಕೆ? ನಾಚಿಕೆಯೇ?

ಇರಬಹುದು.

ಕೆಲವು ವಿಷಯಗಳಲ್ಲಿ ಅವನಿಗೆ ಕಾರಣವೇ ಇಲ್ಲದೆ ನಾಚಿಕೆ ಇದೆ. ಯಾರಲ್ಲಿಯೂ ದಯೆ. ಮಮಮತೆಗಳನ್ನು ತೋರಿಸಲು ಬರುವುದಿಲ್ಲ. ಅವನಿಗೆ ಅದೆಲ್ಲಾ ನಾಚಿಕೆಯ ವಿಷಯ ಅವನಿಗೆ. ಅದಕ್ಕೇ ಇರಬಹುದು, ಯಾವುದೋ ರೀತಿಯಲ್ಲಿ ಗಳಿಸಿದ ಹಣವನ್ನು ಈ ತರಹ--

ಆದರೆ ಸರೋಜಾಕ್ಷರು?

ಅವರಿಗೇನು ನಾಚಿಕೆ ಇಲ್ಲವೇ?

ಸರೋಜಾಕ್ಷರು ಅವನ ಈ ಅಪರೋಕ್ಷ ದಯೆ-ಮಮತೆಗೆ ಬಲಿಯಾಗುತ್ತಾರೆಯೇ?

ಇಲ್ಲ. ಅದಾಗುವುದಿಲ್ಲ.

ಅವರು ತಮ್ಮ ನಿರ್ವಾಸನದ ಕೋಣೆಯಿಂದ ಹೊರಗೆ ಬರಲೇ ಬೇಕಾಯಿತು.

ಓಡಿ ಹೋಗುತ್ತಿರುವ ಮನುಷ್ಯನನ್ನು ಕರೆದು ಹೇಳಬೇಕಾಯಿತು. "ಇದನ್ನು ತೆಗೆದುಕೊಳ್ಳಲಾಗುವುದಿಲ್ಲ."

ಶಾರದಾ ಪ್ರಸಾದ್ ತನ್ನ ಹಸುಳೆಯಂತಹ ಮುಖವನ್ನು ಎತ್ತಿ ಕೇಳಿದರು "ಆಗುವುದಿಲ್ಲ ಎಂದರೆ?"

"ಇದರ ಅರ್ಥ ಬಿಡಿಸಿ ಹೇಳಬೇಕೆ ಶಾರದಾ ? ಹೋಗಲಿ, ಹಾಗೆಯೇ ಇಟ್ಟುಕೊಳ್ಳೋಣ. ಯಾವುದೋ ಪಬ್ಲಿಷರ್ ನಿನಗೆ ಈ ದುಡ್ಡು ಕೊಟ್ಟಿದ್ದಾನೆ ಎಂದು ನೀನು ಅದನ್ನು ನನಗೇಕೆ ಕೊಡಬೇಕು? ನಾನು ತಾನೆ ಏಕೆ ತೆಗೆದುಕೊಳ್ಳಬೇಕು?"

"ನೀವೇಕೆ ತೆಗೆದುಕೊಳ್ಳಬೇಕು? ನಿಮಗೇಕೆ ನಾನು ಕೊಡಲು ಹೋಗಬೇಕು?" ಶಾರದಾ ಏನೂ ತೋಚದೇ, ಅವರ ಕಡೆ ನೋಡಿ, "ಮತ್ತೆ ಯಾರಿಗೆ ಕೊಡಲಿ?" ಎಂದರು.

ಸರೋಜಾಕ್ಷರು ಹೇಳಿದರು, "ಕೊಡುವ ಮಾತೆಲ್ಲಿ ಬಂತು? ನಿನ್ನ ದುಡ್ಡು ನಿನ್ನ ಹತ್ತಿರ ಇಟ್ಟುಕೊಳ್ಳುವುದು, ಬ್ಯಾಂಕಿನಲ್ಲಿ ಹಾಕಿಡುವುದು."

ನಿಧಾನವಾಗಿ ಶಾರದಾಪ್ರಸಾದರ ಮುಖ ಕೆಂಪಾಗುತ್ತೆ. ಆದರೂ ಉತ್ತೇಜನಗೊಳ್ಳದೆ ಶಾಂತ ಧ್ವನಿಯಲ್ಲಿ ಹೇಳಿದ, "ನನ್ನ ದುಡ್ಡು ನಾನು ಬ್ಯಾಂಕಿನಲ್ಲಿಡುತ್ತೇನೆ."

ಸದಾ ಉತ್ತೇಜನಗೊಂಡಿರುವ ಶಾರದಾಪ್ರಸಾದನ ಶಾಂತ-ಮುಖ ನೋಡಲು ಅಸ್ವಾಭಾವಿಕವಾಗಿದೆ. ಆದರೆ ಸರೋಜಾಕ್ಷರ ಕಣ್ಣಿಗೆ ಅದು ಬೀಳುವುದಿಲ್ಲವೇನೋ. ಕಾರಣ ಸರೋಜಾಕ್ಷರ ಕಣ್ಣುಗಳೆರಡೂ ಬೇರೆಯ ಕಡೆ ನೋಡುತ್ತಿದೆ. ಅವರು ಆಕಾಶವನ್ನು ನೋಡುತ್ತಾ ಮಾತಾಡುತ್ತಿದ್ದಾರೆ.

ಅದಕ್ಕೇ ಸರೋಜಾಕ್ಷರು ಮೊದಲಿನಂತೆಯೇ ಅದೇ ಧ್ವನಿಯಲ್ಲೇ "ಹೌದು, ಹಾಗೆಯೇ ಮಾಡಬೇಕು. ಅದೇ ತಾನೆ ಸ್ವಾಭಾವಿಕವಾದುದು. ಮುಂದೆ ಆ ದುಡ್ಡಿನಿಂದ ನಿನ್ನ ಪುಸ್ತಕದ ಬಾಕಿ ಖಂಡಗಳನ್ನು ಪಬ್ಲಿಷ್ ಮಾಡಬಹುದು. ಯಾವಾಗಲೂ ಇಂತಹ ಪಬ್ಲಿಷರ್ ಸಿಗದೇ ಹೋದರೂ ಹೋಗಬಹುದು" ಎಂದರು.

ಶಾರದಾ ಪ್ರಸಾದ್ ಈಗ ಬೇರೆ ಕಡೆ ತಿರುಗಿ ಕೊಂಡು ಮಾತಾಡಿದರು, "ಆ ದುಡ್ಡಿನಿಂದ ನನ್ನ ಭವಿಷ್ಯವನ್ನು ಯೋಚಿಸಲೇ? ಅದಕ್ಕಾಗಿಯೇ ನಾನು ಬಾಗಿಲುಗಳಲ್ಲಿ ಹೋಗಿ–" ಸುಮ್ಮನಾಗುತ್ತಾರೆ.

ಮುಂದಕ್ಕೆ ಹೇಳುವುದು ಸರಿಯಲ್ಲ ಎಂದೋ ಅಥವಾ ಇನ್ನು ಮುಂದೆ ಹೇಳಲಾಗದೆಯೋ ಏನೋ ಸುಮ್ಮನಾಗುತ್ತಾರೆ.

ಆದರೆ, ತಿಳಿದುಕೊಳ್ಳಲು ಆತ ಹೇಳಿದಷ್ಟೇ ಸಾಕು.

ಸರೋಜಾಕ್ಷರ ಮುಖ ಕೆಂಪಾಗಾಗುತ್ತೆ.

ಸರೋಜಾಕ್ಷರು ಗಂಭೀರ ಧ್ವನಿಯಲ್ಲಿ ಕೇಳಿದರು. "ನನಗಾಗಿ ನೀನು ಬಾಗಿಲು ಬಾಗಿಲಿಗೂ ಹೋಗಿ ದುಡ್ಡಿಗಾಗಿ ಅಲೆದೆಯಾ?"

“ಆಹಾ, ಹಾ ಏನಾಶ್ಚರ್ಯ! ಬಂದು, ಬಂದು ನಾನು ಹಾಗೆ ಹೇಳಿದನೆ? ಅಂದರೆ, ನಾನು ಹೇಳುವುದೇನೆಂದರೆ, ನಾನೊಬ್ಬ ಪರದೇಶಿ ಮನುಷ್ಯ, ದುಡ್ಡು-ಗಿಡ್ಡು ಇಟ್ಟುಕೊಂಡು ಏನು ಮಾಡಲಿ? ಒಂದು ವೇಳೆ ಎಲ್ಲೋ ಇಡಲು ಹೋಗಿ ಇನ್ನೆಲ್ಲೋ ಇಟ್ಟುಬಿಟ್ಟು ಹಾಳೂ ಮಾಡಿಕೊಳ್ಳಬಹುದು. ಇನ್ನೂ ನಿಮ್ಮ ಹತ್ತಿರ ಇದ್ದರೆ ಭದ್ರವಾಗಿರುತ್ತೆ.”

“ಅದು ಆಗುವುದಿಲ್ಲ.”

ಜಡ್ಜಿನ ತೀರ್ಪಂತೆ ಅದೊಂದು ಮಾತನ್ನು ಮಾತ್ರ ಉಚ್ಚರಿಸುತ್ತಾರೆ ಸರೋಜಾಕ್ಷರು. ಆದರೆ ಅದೇ ಸಾಕು.

ಶಾರದಾ ಪ್ರಸಾದನ ಕಣ್ಣುಗಳು ಬಿಸಿನೀರಿನ ವೇಗದಿಂದ ಕರೆ ಒಡೆಯುವಂತಾಗುತ್ತೆ. ಶಾರದಾ ಪ್ರಸಾದನ ಕಿವಿಗಳೆರಡರಲ್ಲೂ ಝುಯ್ಯೆಂದು ಶಬ್ದ ಕೇಳಿಸುತ್ತೆ. ಆ ದುಡ್ಡನ್ನು ಮೈಯ್ಯವಾಗಿಟ್ಟುಕೊಂಡು ಸವಿ ಸ್ವಪ್ನವನ್ನು ಕಾಣುತ್ತಾ ಬಂದಿದ್ದ ಮನುಷ್ಯ, ಇನ್ನೇನಿಲ್ಲ. ಸಿಹಿಯಾದ ಒಂದು ಪ್ರಸನ್ನ ಮಾತು. ಪುಸ್ತಕದ ವಿಷಯದಲ್ಲಿ ಇನ್ನೊಬ್ಬರು ಅಕ್ಕರೆ ತೋರುವುದನ್ನು ನೋಡಿ ಸ್ವಲ್ಪ ಸಂತೋಷಪಡುವಿಕೆ. ಮನಸ್ಸಿನಲ್ಲಿ ಒಂದು ರಿಹರ್ಸಲ್ಲನ್ನೂ ನಡೆಸುತ್ತಾ ಬಂದಿದ್ದ. ಪ್ರಕಾಶಕರ ಹೆಸರು ಕೇಳಿದರೆ ಏನು ಹೇಳೋಣ! ಎಂದೆಲ್ಲಾ--

ಸರೋಜಾಕ್ಷರು, ಶಾರದಾ ಪ್ರಸಾದನ ಆ, ರಂಗಿನ ಗಾಜಿನ ಹೂ-ದಾನಿಯನ್ನು ಅಪ್ಪಳಿಸಿ ಒಡೆದುಬಿಟ್ಟರು.

ಶಾರದಾ ಪ್ರಸಾದ್ ಹಾಗೂ ತನ್ನ ಬಿಸಿ ನೀರಿನಿಂದ ತುಳುಕುತ್ತಿದ್ದ ಕಣ್ಣುಗಳನ್ನು ಕಷ್ಟಪಟ್ಟು ಸಂಬಾಳಿಸಿಕೊಂಡು ಯೋಚಿಸಿದ, ‘ನನ್ನದೇ ತಪ್ಪು ನಾನು ಯೋಚಿಸಬೇಕಾಗಿತ್ತು. ಅಣ್ಣ ಈ ತರಹ ಮಾತನ್ನೇ ಏನಾದರೂ ಆಡುತ್ತಾರೆ ಎಂದು, ಅಣ್ಣನ ವಿಷಯ ನನಗೆ ಗೊತ್ತು? ದುಡ್ಡನ್ನು ಅತ್ತಿಗೆಯ ಕೈಯಲ್ಲಿ ಕೊಟ್ಟಿದ್ದರೆ ಸರಿಯಾಗಿರೋದು. ನಾನು ಅಣ್ಣನ ಸ್ವಲ್ಪ ಪ್ರಸನ್ನತೆಯ ಆಸೆಯಿಂದ ಇಂತಹ ಪೆದ್ದು ಕೆಲಸ ಮಾಡಿದೆ.’

ಅದಕ್ಕೇ ಶಾರದಾ ಪ್ರಸಾದ್ ಗಂಟಲನ್ನು ಕಷ್ಟಪಟ್ಟು ಸರಿಪಡಿಸಿಕೊಂಡು ಹೇಳಿದರು, “ಸರಿ ಹಾಗಾದರೆ ದುಡ್ಡು ನೀವು ತೆಗೆದುಕೊಳ್ಳಬೇಡಿ.”

ಹೇಳಿ ತಿರುಗಿ ಕೋಣೆಯೊಳಗೆ ಹೋಗಿ ನೋಟಿನ ಕಂತೆಯನ್ನು ತೆಗೆದುಕೊಂಡು ಮಹಡಿಯ ಮೆಟ್ಟಿಲ ಹತ್ತಿರ ಹೋದರು.

ಸರೋಜಾಕ್ಷರೇನೂ ಹಸುಳೆಯಲ್ಲ. ಶಾರದಾ ಪ್ರಸಾದನ ಉದ್ದೇಶ್ಯವೇನು ಎಂಬುದನ್ನು ಕಂಡುಕೊಳ್ಳುತ್ತಾರೆ.

ಅದಕ್ಕೇ ಗಂಭೀರವಾಗಿ ಕರೆದರು “ಶಾರದಾ!”

ಬರೀ ಶಾರದಾ! ಅದಕ್ಕಿಂತ ಹೆಚ್ಚಾಗಿ ಇನ್ನೇನಿಲ್ಲ.

ಆದರೂ ಕೇವಲ ಅದೊಂದು ಕರೆಯಲ್ಲೇ ಒಂದು ಭಯಂಕರವಾದ ಪ್ರತಿಭಟನೆ! ಶಾರದಾ ಪ್ರಸಾದನ ಕಾಲಿಗೆ ಸಂಕೋಲೆ ಬಿದ್ದಂತಾಗುತ್ತೆ.

ಆದ್ದರಿಂದ ಆತ ನಿಲ್ಲಲೇ ಬೇಕಾಯಿತು.

ಆ ನಿಂತುಕೊಳ್ಳುವುದರಲ್ಲೇ ಆತ ಶಕ್ತಿ-ಸಂಗ್ರಹ ಮಾಡಿಕೊಳ್ಳುತ್ತಿದ್ದರೇನೋ! ಭೇಷ್, ಅವರು ತೆಗೆದುಕೊಳ್ಳದಿದ್ದರೆ ಹೋಗಲಿ, ಅತ್ತಿಗೆ ಎಂದೂ--

ಯೋಚಿಸಿದರು ಶಕ್ತಿ ಕೂಡಿತು ಎಂದು.

ಅದಕ್ಕೇ ಶಾಂತವಾಗಿ ಕೇಳಿದರು, "ಏನು ಕರೆದಿರಿ?"

"ಕೇಳುತ್ತಿದ್ದೇನೆ. ನೀನು ದುಡ್ಡನ್ನು ತೆಗೆದುಕೊಂಡು ಮಹಡಿಗೆ ಏಕೆ ಹೋಗುತ್ತಿದ್ದೀಯ?"

"ಹೋಗುತ್ತೇನೆ, ಸುಮ್ಮನೆ."

"ಸುಮ್ಮನೆ ಅನ್ನುವುದು ಒಂದು ಕಾರಣವಲ್ಲ ಶಾರದಾ!"

"ಸುಮ್ಮನೆ ಅಂದರೇನು! ನಾನು ಮನೆಯ ಯಜಮಾನಿಗೆ ಕೊಡುತ್ತೇನೆ."

"ಅದು ಆಗುವುದಿಲ್ಲ ಶಾರದಾ."

"ಅದೂ ಆಗುವುದಿಲ್ಲವೇ?"

ಶಾರದಾ ಪ್ರಸಾದ್ ಮುಖವನ್ನು ಬೇರೆ ಕಡೆ ತಿರುಗಿಸಿಕೊಂಡು ಹೇಳಿದ, "ಮನೆಯ ಮಂದಿ, ಮನೆಯ ಹುಡುಗರು ಸಂಪಾದಿಸಿ ತಂದು, ಮನೆಯ ಹೆಡ್ ಹತ್ತಿರ ಕೊಡುವುದಿಲ್ಲವೇ?"

ಸರೋಜಾಕ್ಷರು ಸ್ವಲ್ಪ ಸುಮ್ಮನಾಗುತ್ತಾರೆ.

ಆಮೇಲೆ ತಿರುಗಿ ಮಾತಾಡುತ್ತಾರೆ. ಒಂದು ವೇಳೆ ಅವರ ಶತ್ರು-ಗ್ರಹವೇ ಮಾತನ್ನು ಆಡಿಸುತ್ತೇನೋ. ಇಲ್ಲದಿದ್ದರೆ ಸರೋಜಾಕ್ಷರು ಚರ್ಚೆ ಮಾಡುವ ಮನುಷ್ಯರಲ್ಲ. ಒಂದು ವಿಷಯವಾಗಿ ಎರಡನೇಯ ಮಾತನ್ನಾಡಲು ಇಷ್ಟ ಪಡುವವರಲ್ಲ. ಆದರೂ ಇಂದು ಹೇಳಿದರು, "ಅದು ನೀನು ಸಂಪಾದಿಸಿದ ದುಡ್ಡಾಗಿದ್ದಿದ್ದರೆ ಒಂದು ವೇಳೆ ಅಭ್ಯಂತರವಿಲ್ಲದೆ ತೆಗೆದುಕೊಳ್ಳಬಹುದು. ಆದರೆ ಇದು ಹಾಗಲ್ಲವಲ್ಲಾ!"

"ಇದು ಹಾಗಲ್ಲವೇ?"

ಶಾರದಾ ಪ್ರಸಾದ್ ನಾಜೂಕಾಗಿ ಷರ್ಟಿನ ಭುಜದಲ್ಲಿ ಮುಖ ಒರೆಸಿದಂತೆ ಮಾಡಿ, ಕಣ್ಣನ್ನು ಸ್ವಲ್ಪ ಒರೆಸಿಕೊಂಡು, ಸುಧಾರಿಸಿಕೊಂಡು ಕೇಳಿದ, "ಮತ್ತೆ ನಾನೇನು ಕದ್ದುಕೊಂಡು ಬಂದೆನೇ?" "ಏನು ಮಾಡಿದೆಯೋ ನಿನಗೇ ಗೊತ್ತು. ಆದರೆ ಹಠಾತ್ತನೆ ನೀನು--"

"ಅದು ಗೊತ್ತು" ಶಾರದಾ ಪೆಟ್ಟಾದ, ಕೋಪದ, ದುಃಖದ ಧ್ವನಿಯಿಂದ ಹೇಳಿದರು, "ಹಠಾತ್ತಾಗಿ ಯಾರೂ ನನ್ನನ್ನು ಒಬ್ಬ ಆಫೀಸರಿನ ಕುರ್ಚಿಯಲ್ಲಿ ಕೂಡಿಸಿದ್ದಾರೆಂದು ನಾನು ಹೇಳುತ್ತಿಲ್ಲ. ಪಬ್ಲಿಷರ್ ಕೊಟ್ಟರೆ, ಅದೂ ಸಂಪಾದನೆಯೇ ಅಲ್ಲವೇ?"

"ಪಬ್ಲಿಷರ್?"

ಸರೋಜಾಕ್ಷರ ಮುಖದ ಮೇಲೆ ಒಂದು ಸೂಕ್ಷ್ಮ ನಗು ಹೊರಬೀಳುತ್ತೆ.

ಅದು ಶಾರದಾ ಪ್ರಸಾದನ ಕಣ್ಣಿಗೆ ಬೀಳದೆ ಇರುವುದಿಲ್ಲ. ಶಾರದಾ ಪ್ರಸಾದನಿಗೆ ಮೆಟ್ಟಿಲುಗಳು ಅಲ್ಲಾಡುವಂತೆ ಭಾಸವಾಗುತ್ತೆ ಶಾರದಾಪ್ರಸಾದನಿಗೆ ಅನ್ನಿಸುತ್ತೆ – ಇದುವರೆಗೂ ಯಾವ ನೆಲವನ್ನು ನೆಲ ಎಂದು ತಿಳಿದಿದ್ದನೊ ಅದು ಕೇವಲ– ಮರಳು!

ಶಾರದಾಗೆ ತಲೆಯಿಂದ ಅಂಗುಷ್ಠದವರೆಗೂ ಒಂದು ಅಗ್ನಿ–ದ್ರಾವಕ ಓಡುವಂತೆ ಭಾಸವಾಗುತ್ತೆ. ಅವರ ಸಹನೆಯೆಲ್ಲಾ ಮಾಯವಾಗುತ್ತೆ. ಜೀವನದಲ್ಲಿ ಇದುವರೆಗೆ ಮಾಡದಿದ್ದುದನ್ನು ಮಾಡುತ್ತಾರೆ.

ಸರೋಜಾಕ್ಷರ ಮುಂದೆ ತೀವ್ರವಾದ ಗಂಟಲಿನಿಂದ ಕಿರುಚಿದರು, "ನಕ್ಕರಲ್ಲಾ? ಯಾಕೆ ನಕ್ಕಿರಿ?" ಸರೋಜಾಕ್ಷರು ಬೆಚ್ಚಿದರು.

ಸರೋಜಾಕ್ಷರಿಗೆ ಹಠಾತ್ತನೆ ಶಾರದಾ ಪ್ರಸಾದನ ಧ್ವನಿಯನ್ನು ಇದೇ ಮೊದಲನೆಯ ಬಾರಿ ಕೇಳಿದಂತೆ ತೋರುತ್ತೆ.

ಈ ಪರಿಚಯವಿಲ್ಲದ ಧ್ವನಿಯನ್ನು ಇನ್ನು ಕೇಳಲು ಧೈರ್ಯವಾಗಲಿಲ್ಲ ಅವರಿಗೆ. ಹೇಳಿದರು: "ನಾನು ಯಾಕೆ ನಗುತ್ತೇನೆ?" ಹೇಳಿಬಿಟ್ಟು ಕೋಣೆಯೊಳಗೆ ಹೋದರು.

"ನಕ್ಕಿದರಲ್ಲಾ" ಎಂದು ಹೇಳಿ ಶಾರದಾ ಪ್ರಸಾದರೂ ಹಿಂದೆ ಹಿಂದೆಯೇ ಕೋಣೆಯೊಳಗೆ ಬಂದರು. ಆದರೆ ಅಷ್ಟರಲ್ಲಿ ಬೇರೆ ಒಂದು ಘಟನೆ ನಡೆದುಹೋಗಿತ್ತು. ಶಾರದಾ ಪ್ರಸಾದನ ವಿಕೃತ ಗಂಟಲಿನ ಕೂಗು, ಸುನಂದಾ, ಮೀನಾಕ್ಷಿ ಮತ್ತು ವಿಜಯಾವನ್ನೂ ಅಲ್ಲಿಗೆ ಎಳೆದು ತಂದಿತ್ತು. ಆದರೆ ಯಾರಿಗೂ ಧೈರ್ಯ ಸಾಲಲಿಲ್ಲ.

ವಿಜಯಾ ಧೈರ್ಯ ತಳೆದರು.

ವಿಜಯಾ ಕೋಣೆಯೊಳಗೆ ಬಂದು ಕೇಳಿದರು, "ಏನಾಯಿತು ಅಳಿಯಂದಿರೆ? ಹಠಾತ್ತನೆ ಇದೇನು ಗಲಾಟೆ?"

"ಗಲಾಟೇ?"

ಶಾರದಾಪ್ರಸಾದನ ಒಳಗಿನ ಗುಹೆಯಲ್ಲಿನ ಎಚ್ಚೆತ್ತ ಹುಲಿ ತಿರುಗಿ ಗರ್ಜಿಸಿತು. "ನೀವೆಲ್ಲಾ ಏನು ತಿಳಿದುಕೊಂಡಿರಿ? ನಾನೂ ಒಬ್ಬ ಮನುಷ್ಯನಲ್ಲವೇ? ನನ್ನ ಸಂಪಾದನೆಯ ದುಡ್ಡನ್ನು ಅಣ್ಣನು ಕಾಲಿಂದಲೂ ಮುಟ್ಟಲಿಲ್ಲ. ನಂಬಿಕೆ ಇಲ್ಲದ ನಗು ನಕ್ಕರು. ಇನ್ನು ನೀವು–ನಿನ್ನ ಸಂಪಾದನೆ ದುಡ್ಡೆ––"

ಇಷ್ಟು ಹೊತ್ತಿಗೆ ವಿಜಯಾಗೆ ಶಾರದಾಪ್ರಸಾದನ ಕೈ ಮೇಲೆ ದೃಷ್ಟಿ ಬೀಳುತ್ತೆ ವಿಜಯಾರ ಕಣ್ಣಲ್ಲಿ ಲೋಭದ ಅಗ್ನಿ ಜ್ವಲಿಸುತ್ತೆ. ದುಡ್ಡು, ದುಡ್ಡೇ– ಅದರ ಬರುವಿಕೆ ಎಲ್ಲಿಂದಲಾದರೂ ಆಗಲಿ.

ಒಟ್ಟಿನಲ್ಲಿ ವಿಜಯಾ, ಅದರ ಬರುವಿಕೆಯ ಇತಿಹಾಸವನ್ನು ಅನುಮಾನಿಸುತ್ತಾರೆ. ಯಾವ ತರಹದಿಂದಲೋ, ಅಂತು ಶಾರದಾಪ್ರಸಾದ್ ಈ ದುಡ್ಡನ್ನು ತಂದಿದ್ದಾನೆ ಮತ್ತು ಸರೋಜಾಕ್ಷರಿಗೆ ಕೊಡಲು ಬಂದಿದ್ದಾನೆ. ಆದರೆ ಈ ಮಹಾಪುರುಷರು ತೆಗೆದುಕೊಳ್ಳಲು ಒಪ್ಪುತ್ತಿಲ್ಲ. ವಿಜಯಾ ಹೇಳಿದರು: "ನೀನೂ ಸರಿಯಾದವನೇ ಅಳಿಯದೇವ, ದುಡ್ಡನ್ನು

ತೆಗೆದುಕೊಂಡು ಕೊಡಲು ಹೋಗುವುದು ಪರಮಹಂಸ ದೇವರ ಹತ್ತಿರವೇ? ಯಾರ ಕಣ್ಣಿಗೆ ದುಡ್ಡು–ಮಣ್ಣು, ಮಣ್ಣು–ದುಡ್ಡು! ನಾವಾದರೆ ಸಂಸಾರಿಗಳು, ನಮ್ಮ ಹತ್ತಿರ ದುಡ್ಡು, ದುಡ್ಡೇ ನನಗೆ ಕೊಡು––"

ವಿಜಯಾ ತನ್ನ ಮಡಿಯನ್ನೂ ಮರೆತು, ದುಡ್ಡನ್ನು ಕಿತ್ತುಕೊಳ್ಳುವಂತೆ ಹೋಗುತ್ತಾರೆ. ಆದರೆ ಸರೋಜಾಕ್ಷರನ್ನು ಇಂದು, ಸರ್ವನಾಶದ ದೆಶೆ ಹಿಡಿದುಕೊಂಡಿದೆಯೇನೋ. ಅದಕ್ಕೇ ಅವರು ಗಡುಸಾಗಿ ಹೇಳಿದರು, "ಕೂಡದು, ತೆಗೆದುಕೊಳ್ಳಕೂಡದು. ಆ ದುಡ್ಡು, ಶಾರದಾ ತನ್ನ ಹೊಲ–ಜಮೀನುಗಳನ್ನು ಮಾರಿ ತಂದಿದ್ದಾನೆ–"

"ಹೊಲ–ಜಮೀನೇ?"

ಆಕಾಶದಿಂದ ಬಿದ್ದಂತಾಗುತ್ತೆ ಶಾರದಾಗೆ.

"ನೀವು ಹಾಗೇಂತ ತಿಳಿದುಕೊಂಡಿದ್ದೀರಾ?"

"ಮತ್ತೆ ಏನು, ಇದನ್ನು ನಿಜ ಎಂದು ನಂಬಲೇ? ನಿನ್ನ ಆ ಪುಸ್ತಕವನ್ನು ತೆಗೆದುಕೊಂಡು ಒಬ್ಬ ಪಬ್ಲಿಷರ್––"

"ಅದೋ, ತಿರುಗಿ ನೀವು ನಗುತ್ತಿದ್ದೀರಿ." ಶಾರದಾಪ್ರಸಾದನ ತಲೆಯಲ್ಲಿ ಅಗ್ನಿಯ ಜ್ವಾಲೆ. ಶಾರದಾಪ್ರಸಾದ್ ತಿರುಗಿ ಕೂಗಿ ಕೊಳ್ಳುತ್ತಾರೆ. ತೀರಾ, ಹೆಸರು ಹೇಳಕೂಡದೆಂಬ ನಿರ್ಬಂಧ ಇಲ್ಲದಿದ್ದರೆ ಈಗಲೇ ನಿಮ್ಮನ್ನು ಕರೆದುಕೊಂಡು ಹೋಗಿ ತೋರಿಸುತ್ತಿದ್ದೆ, ಯಾರಾದರೂ ಕೊಟ್ಟಿದ್ದಾರೋ ಇಲ್ಲವೋ ಎಂದು."

"ಹೆಸರು ಹೇಳಕೂಡದೇ?" ಮತ್ತೆ ಇನ್ನೇನು ಮಾಡೋಣ––ಸರೋಜಾಕ್ಷರು ಮಂಚದ ಮೇಲೆ ಕೂಡುತ್ತಾ ಹೇಳುತ್ತಾರೆ, "ಆದರೆ ಈ ಹೆಸರು ಕೇಳದ–ತಿಳಿಯದವರ ದುಡ್ಡನ್ನು ನಿನ್ನ ಅತ್ತಿಗೆ ತೆಗೆದುಕೊಳ್ಳಲು ನಾನು ಅನುಮತಿ ಕೊಡಲಾಗುವುದಿಲ್ಲವಲ್ಲ ಶಾರದಾ."

"ತೆಗೆದುಕೊಳ್ಳಲು ಅನುಮತಿ ಕೊಡುವುದಿಲ್ಲವೇ?"

ಶಾರದಾನೂ ಕೂತುಕೊಂಡುಬಿಡುತ್ತಾರೆ.

"ಇದರ ಅರ್ಥ, ನನಗೆ ಈ ಸಂಸಾರದಲ್ಲಿ ಯಾವ ಹಕ್ಕೂ ಇಲ್ಲ. ನನ್ನ ದುಡ್ಡನ್ನು ನೀವುಗಳು ಕಾಲಿನಿಂದಲೂ ಮುಟ್ಟುವುದಿಲ್ಲ. ಆದರೆ ನಾನು ಯಾವಾಗಲೂ ಇದನ್ನು ನನ್ನ ಮನೆಯೆಂದು ತಿಳಿದು––" ಶಾರದಾ ಪ್ರಸಾದ್ ಚಡಪಡಿಸುತ್ತಾ ಶತಪಥ ಮಾಡುತ್ತಾರೆ, ನಿರ್ಯೋಚನೆಯಿಂದ ತಿಂದಿದ್ದೇನೆ, ಉಟ್ಟಿದ್ದೇನೆ, ಬೇಕಾದುದನ್ನು ಕೇಳಿದ್ದೇನೆ. ಅದರ ಅರ್ಥ, ಅದೆಲ್ಲಾ ದಯೆಯಿಂದ ನೀಡಿದ ಭಿಕ್ಷೆಯನ್ನು ತಿಂದಿದ್ದೇನೆ. ಇದರ ಅರ್ಥ ನನ್ನನ್ನು ಮನೆಯ ಒಂದು ಸಾಕಿದ ಬೆಕ್ಕು ಅಥವಾ ನಾಯಿಯ ಹೊರತು ಬೇರೇನೂ ತಿಳಿದಿಲ್ಲ ನೀವು.

"ಆಃ!" ಸರೋಜಾಕ್ಷರು ಗದರಿಸಿಕೊಂಡೇಬಿಟ್ಟ ಹಾಗೆ ಹೇಳುತ್ತಾರೆ, "ಏನು ಸಿಕ್ಕಾಪಟ್ಟೆ ಮಾತಾಡುತ್ತೀಯ?"

"ಸಿಕ್ಕಾಪಟ್ಟೆಯಲ್ಲ, ಸರಿಯಾದದ್ದೇ ಹೇಳುತ್ತಾ ಇದ್ದೇನೆ––" ಶಾರದಾ ಸರೋಜಾಕ್ಷರ ಮುಂದೆ ಬಂದು ನಿಲ್ಲುತ್ತಾರೆ. ಕೆಂಪಾದ ಕಣ್ಣುಗಳಿಂದ ನೋಡುತ್ತಾ ಹೇಳುತ್ತಾರೆ, ಗೊತ್ತಾಗುತ್ತಾ

ಇದೆ. ಯಾವಾಗಲೂ ನೀವು ನನ್ನ ಬರವಣಿಗೆಯನ್ನು ವ್ಯಂಗ್ಯ ದೃಷ್ಟಿಯಿಂದಲೇ ನೋಡಿದ್ದೀರಿ. ಈವತ್ತು ಆ ನಗು ಎಲ್ಲವನ್ನೂ ಹೊರಗೆ ತಂದಿತು. ನಾನು ಒಬ್ಬ ಮೂರ್ಖ, ಕತ್ತೆ ಇಲ್ಲದ್ದನ್ನೆಲ್ಲಾ ನಂಬಿಕೊಂಡು ಬಂದಿದ್ದೇನೆ–" ಶಾರದಾಪ್ರಸಾದನ ಕಣ್ಣಿನ ನೀರು, ಆತನ ಪ್ರಯತ್ನವನ್ನು ಮೀರಿ ಈಗ ಶತ್ರುತ್ವ ತೋರಿಸುತ್ತೆ. ಶಾರದಾ ಒಡೆದ ಗಂಟಲಿಂದ ಹೇಳುತ್ತಾರೆ, "ಆದರೆ ಜಗತ್ತಿನಲ್ಲಿ ಒಬ್ಬರಾದರೂ ಅಪ್ಪಟ ಮನುಷ್ಯರಿದ್ದಾರೆ–ಹೋಗಿ ಕೇಳಿ ನಿಮ್ಮ ಚಿಕ್ಕಮ್ಮನ್ನ, ದುಡ್ಡು ಶಾರದಾಗೆ ಎಲ್ಲಿ ಸಿಕ್ಕಿತು ಎಂದು––"

ಆವೇಶ, ಉತ್ತೇಜನೆಯಲ್ಲಿ, ನಿರ್ಬಂಧದ ವಾಣಿಯನ್ನು ಕಾಪಾಡಲಾಗುವುದಿಲ್ಲ ಶಾರದಾನಿಂದ, ಹೇಳಿಬಿಟ್ಟು ಷರಟಿನ ಕೈಯಿಂದ ಬಾರಿ ಬಾರಿಗೂ ಕಣ್ಣೀರನ್ನು ಒರೆಸಲು ಪ್ರಾರಂಭಿಸಿದರು ಶಾರದಾ.

ಗಂಡಸಿನ ಕಣ್ಣಲ್ಲಿ ನೀರು ಎಂದರೆ ಅದು ಒಂದು ಮರ್ಮಭೇದಿಯಾದ ದೃಶ್ಯವೇ ಅಹುದು. ಬಹುಶಃ ಜಗತ್ತಿನ ಮರ್ಮಭೇದಕ ದೃಶ್ಯಗಳಲ್ಲೇ ಮುಖ್ಯವಾದುದು. ಸರೋಜಾಕ್ಷರು, ಸ್ವಲ್ಪ ಹತಬುದ್ಧಿಯಾಗುತ್ತಿದ್ದವರಿಗೆ, ಚಿಕ್ಕಮ್ಮಾ ಎನ್ನುವ ಶಬ್ದ, ಅವರ ತಲೆಯ ಮೇಲೆ ಒಂದು ಸುತ್ತಿಗೆಯ ಪೆಟ್ಟನ್ನು ಹಾಕಿದಂತಾಯಿತು. ಆ ಪೆಟ್ಟಿನಿಂದ ಸರೋಜಾಕ್ಷರ ಕಣ್ಣು ಮುಂದಿನ ಪರದೆ ಸರಿಯಿತು. ಸರೋಜಾಕ್ಷರಿಗೆ ಈ ಮಾರ್ಮಿಕ ದೃಶ್ಯವೂ ಕೂಡ ಈಗ ಕಷ್ಟಕರವಾಗಿ ತೋರಲಿಲ್ಲ.

ಸರೋಜಾಕ್ಷರು ತಲೆಯನ್ನು ಹಿಡಿದುಕೊಂಡು ಧಿಕ್ಕಾರದ ಧ್ವನಿಯಿಂದ ಹೇಳಿದರು. "ಶಾರದಾ, ನೀನು ನಿಜವಾಗಿಯೂ ಮೂರ್ಖ, ಬುದ್ಧಿಹೀನನು. ಅದಕ್ಕೇ ಚಿಕ್ಕಮ್ಮಾ ನಿನ್ನನ್ನು ಕಾರಣವಾಗಿಟ್ಟುಕೊಂಡು ನಿನ್ನ ಪಬ್ಲಿಷರ್ ಆಗಿ ಬಂದು, ಆ ದುಡ್ಡನ್ನು ನನ್ನ ಸಂಸಾರಕ್ಕೆ ಭಿಕ್ಷೆಯಾಗಿ ನೀಡಿದ್ದಾರೆ ಶಾರದಾ. ಗೊತ್ತು ಅವರಿಗೆ, ನೀನು ಇದನ್ನು ತಿಳಿಯುವುದಿಲ್ಲ ಎಂದು ನೀನು ನಿಜವಾಗಲೂ ನಂಬುತ್ತೀಯಾ ನಿನ್ನ ಆ ಚಿಂದಿ ಕಾಗದಗಳ ಮೂಟೆಯನ್ನು–"

ಮಾತಿನ ಮಧ್ಯೆ ನಿಂತು ಬಿಡುತ್ತಾರೆ ಸರೋಜಾಕ್ಷರು. ಬಹುಶಃ ಹಠಾತ್ತನೆ ಜ್ಞಾನೋದಯವಾಗುತ್ತೆ ಮಾತು ಎಲ್ಲಿಗೆ ಹೊರಟುಹೋಗುತ್ತಿದೆ ಎಂದು!

ಆದರೆ ಈ ತಿಳುವಳಿಕೆಯಿಂದ ಏನಾದರೂ ಉಪಕಾರವಾಗುತ್ತದೆಯೇ? ಯಾತರ ಸರಹದ್ದಿಗೆ ಹೋಗಿ ಸೇರುತ್ತಿದ್ದೇನೆ ಎಂದು ಹೆದರಿದರೋ, ಅಲ್ಲಿಗೆ ಆಗಲೇ ಸೇರಿದ್ದರು.

ಆ ಅರ್ಧ ಮಾತಿಗೇ ಶಾಂತವಾಗಿ ಹೋದರು ಶಾರದಾಪ್ರಸಾದ್. ಅವರ ಕಣ್ಣೀರೂ ಬತ್ತಿಹೋಯಿತು.

ಶಾರದಾಪ್ರಸಾದ್ ಆ ಬತ್ತಿದ ಕಣ್ಣು ಮತ್ತು ಶಾಂತವಾದ ಕಂಠದಿಂದ ಹೇಳಿದರು. "ಈಗ ಅದು ಗೊತ್ತಾಗುತ್ತಿದೆ. ಮೂರ್ಖನಿಗೆ ನೂರೆಂಟು ದೋಷಗಳು. ಇದು ಶಾಸ್ತ್ರದಲ್ಲೇ ಹೇಳಿದೆ. ಆದರೆ ಕುರುಡನಿಗೂ ಕಣ್ಣು ತೆರೆಯುತ್ತೆ."

ಹೇಳಿ ದುಡ್ಡನ್ನು ತೆಗೆದು ತಿರುಗ ಜೇಬಿನಲ್ಲಿ ಹಾಕಿಕೊಂಡು ಮೆಲ್ಲ ಮೆಲ್ಲಗೆ ಕೋಣೆಯಿಂದ ಹೊರಗೆ ಹೋಗುತ್ತಾರೆ. ಮೆಟ್ಟಲು ಇಳಿದು ಹೋಗುತ್ತಾರೆ.

ಸುನಂದಾ ನೋಡುತ್ತಾಳೆ. ಮೀನಾಕ್ಷಿ ನೋಡುತ್ತಾಳೆ, ನಡೆದದ್ದು ಏನೆಂದು ಸರಿಯಾಗಿ ತಿಳಿಯದಿದ್ದರೂ ಅವರುಗಳು ಭೀತರಾಗುತ್ತಾರೆ. ಆ ಸುಲಭ ಪ್ರಕೃತಿಯ ಮನುಷ್ಯನ ಹತ್ತಿರ ಹೋಗಿ ಎಲ್ಲಿಗೆ ಹೋಗುತ್ತೀರಿ? ಎಂದು ಕೇಳಲು ಅವರಿಗೆ ಧೈರ್ಯವಾಗುವುದಿಲ್ಲ. ಅಷ್ಟೇಕೆ, ವಿಜಯಾ ಕೂಡ ಮೂಕಳಾಗಿ ನಿಂತಿರುತ್ತಾರೆ.

ಆದರೆ ಸರೋಜಾಕ್ಷರು?

ಅವರು ಚಿರ–ಮೂಕರೇ ಅಲ್ಲವೇ?

ಅವರಿಗೆ, ತಾವೇ ತಮ್ಮ ಹೃದಯದ ಒಂದು ಚೂರನ್ನು ಕಿತ್ತೊಗೆದಂತೆ ಭಾಸವಾಗುತ್ತೆ. ಅದರ ಗಾಯ ಬಹುಶಃ ಚಿರಕಾಲವೂ ನಿಂತುಬಿಡುತ್ತೇನೋ.

ಸರೋಜಾಕ್ಷರು ಇನ್ನು ಯಾವಾಗಲೂ ಆ ಮೂಖ, ಬುದ್ಧಿಹೀನ ಮನುಷ್ಯನ ಮುಖವನ್ನು ನೋಡಲಾರರು.

ಆದರೆ, ಇನ್ನೇನು ತಾನೆ ಮಾಡಬಲ್ಲವರಾಗಿದ್ದರು ಸರೋಜಾಕ್ಷರು?

ವಿಜಯಾರ ಹಾಗೆ ದುಡ್ಡನ್ನು ಕೇವಲ ದುಡ್ಡಾಗಿ ಭಾವಿಸುವ ಮನೋಭಾವ ಅವರಿಗಿಲ್ಲ. ಆದರೆ ಅವರು ಈಗ ಒಪ್ಪಲೇಬೇಕು. ಮನುಷ್ಯ, ಪರಿಸ್ಥಿತಿಯ ದಾಸ ಎಂದು! ಪರಿಸ್ಥಿತಿಯನ್ನು ಒಪ್ಪಿಕೊಳ್ಳದೆ, ನನ್ನ ಇಷ್ಟದಂತೆ ನನ್ನನ್ನು ಇಟ್ಟುಕೊಂಡಿರುತ್ತೇನೆ ಎಂದಿದ್ದರೆ ಅದು ವ್ಯರ್ಥವಾದ ಒಂದು ಹೊರೆಯೇ ಆಗಿಹೋಗುತ್ತೆ.

ಸರೋಜಾಕ್ಷರು ನಾಳೆಯೇ ಹೋಗಿ ಕಾಲೇಜಿನ ಬಾಗಿಲಲ್ಲಿ ನಿಂತುಕೊಳ್ಳಬೇಕು. ತಲೆಬಾಗಿ ಹೇಳಬೇಕು, 'ನಾನು ತಪ್ಪು ಮಾಡಿದ್ದೆ' ಎಂದು.

'ನಾನು ತಪ್ಪು ಮಾಡಿದ್ದೆ.'

ದೇಹ–ಮನಗಳು ಒಪ್ಪದಿದ್ದರೂ ಮನುಷ್ಯ ಹೇಳಲೇ ಬೇಕಾಗುತ್ತೆ ಈ ಮಾತನ್ನು ನಾನು ತಪ್ಪು ಮಾಡಿದ್ದೆ.

ಹೇಳದಿದ್ದರೆ ಈ ಸಮಾಜದಲ್ಲಿ ಜಾಗ ಇರುವುದಿಲ್ಲ. ನೀನು ನಿನ್ನ ಕರ್ಮ–ಕ್ಷೇತ್ರದಲ್ಲಿ ಹೋಗಿ ಸಾಧುವಾಗಿ ಇರಲು ಬಯಸಿದರೆ, ಲಂಚ ತೆಗೆದುಕೊಳ್ಳಲು ಇಷ್ಟಪಡದಿದ್ದರೆ, ದುರ್ನೀತಿಗೆ ಆಶ್ರಯ ಕೊಡದೇ ಇರಬೇಕೆಂದು ಹೋದರೆ, ದುರ್ನೀತಿಯನ್ನು ಹೊರಗೆಳೆಯಲು ಹೋದರೆ ನಿನ್ನ ಭಾಗ್ಯದಲ್ಲಿ ಬಂದು ಸೇರುವುದು. ತೊಂದರೆ, ಅಪಕೀರ್ತಿ, ಅವಮಾನ, ದಾರಿದ್ರ್ಯ ಅಸಹಾಯದ ಪರಿಸ್ಥಿತಿ, ನಿಶ್ಚಯವಿಲ್ಲದ ಭವಿಷ್ಯ!

ನೀನು ಬಾಗಿಲು ಬಾಗಿಲುಗಳಲ್ಲಿ ಹೋಗಿ ಅಲೆದು ಪ್ರಪಂಚದ ಚಹರೆಯನ್ನು ನೋಡುವೆ. ಆಗ ನೀನು ಹೇಳಲು ಬಾಧ್ಯನಾಗುವೆ, ನಾನು ತಪ್ಪು ಮಾಡಿದೆ. ಸಾಧುವಾಗಿರುವ ಪಣತೊಟ್ಟು ತಪ್ಪು ಮಾಡಿದೆ.

ಆಗ ನೀನು 'ಪ್ರಪಂಚದ ಮಂತ್ರ' ದಿಂದ ದೀಕ್ಷಿತನಾಗುತ್ತೀಯ.

ಪ್ರಪಂಚವೇ ಕೊಡುತ್ತೆ ಆ ದೀಕ್ಷೆಯನ್ನು.

ಸರೋಜಾಕ್ಷರಿಗೆ ಯಾರೂ ದೀಕ್ಷೆ ಕೊಡಲು ಬರಲಿಲ್ಲ. ಆದರೆ ಭಿಕ್ಷೆ ನೀಡಲು ಬಂದಿದೆ. ಇದಕ್ಕಿಂತ ಅಸಹಾಯಕತೆ ಇನ್ನೇನಿದೆ?

ಆದ್ದರಿಂದ ಸರೋಜಾಕ್ಷರು ಹಳೆಯ ಬಾಗಿಲ ಹತ್ತಿರ ಹೋಗಿ ಹೇಳಲೇಬೇಕಾಗುತ್ತೆ, ನಾನು ತಪ್ಪು ಮಾಡಿದ್ದೆ' ಎಂದು. ಮತ್ತೆ ಹಾಗೆ ಹೇಳಲಾಗದಿದ್ದರೆ, ಭೀರು, ಹೇಡಿಯಂತೆ ಈ ಪ್ರಪಂಚದಿಂದ ಬೀಳ್ಕೊಂಡು ಹೋಗು.

ಸರೋಜಾಕ್ಷರು ಆ ದಾರಿಯನ್ನೇ ಹಿಡಿಯುವರೇ?

ಛೇಃ, ಛೇಃ!

ಅದರಲ್ಲಿ ತಾನೇ ಮರ್ಯಾದೆ ಎಲ್ಲಿದೆ, ಗೌರವ ಎಲ್ಲಿದೆ? ತನ್ನಿಷ್ಟದಂತೆ ಬದುಕುವ ಹಾಗಾಯಿತೇ? ತನ್ನಿಷ್ಟದಂತೆ ಸಾಯುವುದನ್ನು ಪ್ರಪಂಚ ಕ್ಷಮಿಸುವುದಿಲ್ಲ.

ಹೇಳುತ್ತೆ. ಛೇ: ಛೇ: ಮನುಷ್ಯ ಯುದ್ಧರಂಗದಿಂದ ಓಡಿಹೋದ! ಆದರೆ ಅಕಸ್ಮಾತ್ತಾಗಿ. ಸಹಜವಾಗಿ, ಸಾಧಾರಣವಾಗಿ ಮೃತ್ಯು ಬರುವುದು ಅಂತಹವರಿಗೇ, ಯಾರು ಈ ಪ್ರಪಂಚವನ್ನು ಬಿಗಿಯಾಗಿ ಹಿಡಿದುಕೊಂಡು ಬೇಕಾದಷ್ಟು, ಶ್ವಾಸ-ನಿಶ್ವಾಸಗಳನ್ನು ಎಣಿಸಲು ಬಯಸುತ್ತಾರೋ, ಅಂತಹವರಿಗೇಯೇ!

ಸರೋಜಾಕ್ಷರ ಬಾಗಿಲಲ್ಲಿ ಒಂದು ದಿನ ಮೃತ್ಯುದೇವತೆಯ ಕಾಲ ಸಪ್ಪುಳ ಕೇಳಿಸಿತ್ತಂತೆ. ಆದರೆ, ಬಾಗಿಲಿಗೆ ಬಂದು ಹಿಂದಿರುಗಿ ಹೋಗಿದೆ. ಒಳಗೆ ಹೋಗಿರಲಿಲ್ಲ. ಅತಃ ಸರೋಜಾಕ್ಷರು ಈಗ ಹೋಗಿ ಜೀವನದ ಬಾಗಿಲಲ್ಲಿ ನಿಂತು ಕೈಯೊಡ್ಡಬೇಕು.

ಕಾರಣ, ಪ್ರಪಂಚ ಯಾರಿಗಾದರೂ ದೀಕ್ಷೆ ಕೊಡಲಾಗದಿದ್ದರೆ. ಭಿಕ್ಷೆ ಕೊಡಲು ಬರುತ್ತೆ.

*****

ಅಧ್ಯಾಯ ಹತ್ತು

"ಸರಿ, ಹೀಗೆ ನನ್ನೊಂದಿಗೆ ಯಾಕೆ ಶತ್ರು ಹಾಗೆ ಆಡುತ್ತೀಯೆ, ಹೇಳು?"

ನೀಲಾಕ್ಷ ಬಹಳ ಪ್ರೀತಿಯೊಂದಿಗೆ ಹೆಂಡತಿಯನ್ನು ತನ್ನ ಬಾಹು ಬಂಧನದಲ್ಲಿ ಬಂಧಿಸಿ ಕೇಳಿದ, "ಅಂದಿನ ಕೋಪ ಇನ್ನೂ ಇಳಿದಿಲ್ಲವೇ?"

ಸುನಂದಾ ಕೌಶಲದಿಂದ ತನ್ನನ್ನು ಬಿಡಿಸಿಕೊಂಡು ಆಶ್ಚರ್ಯದ ಧ್ವನಿಯಲ್ಲಿ ಕೇಳಿದಳು, "ಕೋಪ ಏಕೆ? ಶತ್ರುತ್ವ ತಾನೆ ಏಕೆ?"

ನೀಲಾಕ್ಷ ಮನಸ್ಸಿನಲ್ಲೇ ಹಲ್ಲು ಕಡಿಯುತ್ತಾ, 'ವಿಶ್ವಾಸಘಾತಕಿ, ಬಜಾರಿ! ಮರ್ಯಾದೆಯಾದ ಮನೆಯ ಸೊಸೆಯಾಗಲು ಏಕೆ ಬಂದೆ ನೀನು? ಸ್ಟೇಜಿಗೆ ಹೋಗಲಿಲ್ಲ ಏಕೆ? ಪಬ್ಲಿಕ್ ಥಿಯೇಟರಿನ ಸ್ಟೇಜಿಗೆ? ಒಬ್ಬ 'ನಂಬರ್ ಒನ್' ಅಭಿನೇತ್ರಿಯಾಗುತ್ತಿದ್ದೆ. ಆದರೆ ನನಗಾಗಿ ಸ್ವಲ್ಪ ಪ್ರೇಮದ ಅಭಿನಯ ಮಾಡೆಂದರೆ ಸವೆದುಹೋಗುತ್ತೀಯಾ ನೀನು. ನನ್ನನ್ನು ಗೋಳು ಹುಯ್ದುಕೊಳ್ಳಲು ಎಷ್ಟಾರಮಟ್ಟಿಗೆ ಅಭಿನಯ ಹೆಚ್ಚಿಸುತ್ತೀಯೆಂದರೆ ಮೈಯೆಲ್ಲಾ ಉರಿಯುತ್ತೆ, ಗೊತ್ತಾಗುವುದಿಲ್ಲ ಅದು ನಿಜವೋ ಅಥವಾ ಅಭಿನಯವೋ ಎಂದು. ಯಾವತರಹ ಮೆಹರಾನ ಜೊತೆಯಲ್ಲಿ ಆಡುತ್ತಿದ್ದೆಯೋ ಹಾಗೆಯೇ ಆಡುತ್ತಿದ್ದೀಯ. ಸರಿ, ಯಾವಾಗ ಅವನು ಸ್ವಲ್ಪ ಮುಂದಕ್ಕೆ ಬಂದನೋ ಹಾಗೆಯೇ ನೀನು ಪತಿವ್ರತಾ– ಶಿರೋಮಣಿಯಾಗಿ ಓಡಿಬಂದು ಮನೆಯಲ್ಲಿ ಆಶ್ರಯ ತೆಗೆದುಕೊಂಡೆ! ಇನ್ನು ನನ್ನ ಗತಿ ಏನಾಗಬೇಕು, ಯೋಚಿಸಿದ್ದೀಯಾ? ಯೋಚಿಸಿದ್ದೀಯಾ ಒಂದು ಸಲವಾದರೂ? ಹಾಳಾದವನು ಈಗ ನನ್ನನ್ನು ಬೂಟ್ಸ್– ಕಾಲಿನಿಂದ ಒದ್ದು ಹಿಮ್ಮೆಟ್ಟಿದ್ದಾನಲ್ಲಾ, ಅದಕ್ಕೇನು ಮಾಡುವುದು? ಇಷ್ಟು ಮಟ್ಟಿಗೆ ಅವಮಾನಕ್ಕೆ ಗಂಡಸಿನ ಮರಿ ಎಗರಿ ಬೀಳುವುದಿಲ್ಲವೇ? ಆದರೆ ನಾನು ಆ ಹುಚ್ಚು ನಾಯಿಯ ಕೈಯಲ್ಲಿ ಕಚ್ಚಿಸಿಕೊಳ್ಳಬೇಕಾಗಿದೆ! ಪತಿವ್ರತೆಯಂತೆ! ಹಾಗಾದರೆ ಪತಿಗೆ ಸ್ವಲ್ಪ ಉಪಕಾರ ಮಾಡುವುದಿಲ್ಲವೇ? ಅರೆ, ನೀನೊಬ್ಬ ಮದುವೆಯಾದ ಹೆಂಗಸು, ನಿನಗೆ ಒಬ್ಬ, ಸ್ವಸ್ಥನಾದ ಗಂಡನಿದ್ದಾನೆ. ನಿನಗೇನು ಭಯ?'

ಆದರೆ ಮನಸ್ಸಿನಲ್ಲಿ ಕಚ್ಚುತ್ತಿರುವ ಹಲ್ಲು ಮನಸ್ಸಿನ ಹೊರಗೆ ಬಾಯಿಗೆ ಬರುವುದಿಲ್ಲ. ಬಾಯೊಳಗಿನ ಚೆನ್ನಾಗಿರುವ ಹಲ್ಲುಗಳೇ ಹೊರಗೆ ಕಾಣುಸುತ್ತೆ.

"ಕೋಪವಲ್ಲದೆ ಮತ್ತೇನು? ನನ್ನೊಂದಿಗೆ ಹೊರಗೆ ಬರುವುದೇ ಇಲ್ಲ ಈಗೆಲ್ಲಾ? ಮೆಹರಾ ಸಾಹೇಬ್ ಎಷ್ಟೋ ಪೇಚಾಡಿಕೊಂಡರು. ಹೇಳುತ್ತಿದ್ದರು, ಸಾರಾಯಿಯ ದೆಸೆಯಿಂದ ಏನೇನೋ ಹೇಳಿಬಿಟ್ಟೆ. ಅದಕ್ಕೋಸ್ಕರ ಮಿಸೆಸ್ ಎಷ್ಟು ಕೋಪಿಸಿಕೊಂಡುಬಿಟ್ಟರು ಎಂದರೆ–"

"ಹೇಳಿದರೇನು ಸಾಹೇಬರು ಹಾಗೆ?" ಸುನಂದಾ ಮೃದು ನಕ್ಕು ಹೇಳುತ್ತಾಳೆ,'ಯಾವುದನ್ನು "ಯಾವ ಸಂದರ್ಭದಲ್ಲಿ ಹೇಳಿದ್ದಾರೆ ಎನ್ನುವುದೇ ಸ್ವಲ್ಪ ತಲಕೆಳಕಾಗಿ ಹೋಗಿದೆ. ಆದರೆ ಇಂದು ನಿಮ್ಮ ಸಮಾಚಾರವೇನು? ಸ್ಥಿರವಾದ ಧ್ವನಿ, ಸರಿಯಾದ ನಡೆ, ಇವತ್ತೇನು ಡ್ರೈ–ಡೇನಾ?" ನೀಲಾಕ್ಷ ಇನ್ನೊಂದು ಸಲ ಮನಸ್ಸಿನಲ್ಲಿ ಹಲ್ಲು ಕಚ್ಚಿಕೊಂಡು, ಮುಖದ ಹಲ್ಲನ್ನು ತೋರುತ್ತಾ ನಗುತ್ತಾ ಹೇಳಿದ, "ನೀನು ಯಾವಾಗಲೂ ನನ್ನನ್ನು ಕುಡುಕನಾಗಿರುವುದನ್ನೇ ನೋಡಿದ್ದೀಯೆ. ಆದರೆ ಕ್ಲಬ್ಬಿನಲ್ಲಿ ಎಲ್ಲರೂ ಹೇಳುತ್ತಾರೆ, ಈ ಮೈತ್ರಾ ಒಬ್ಬನೇ ನಾವು ನೋಡಿದ ಹಾಗೆ ಒಬ್ಬ, ತನ್ನ ಕಾಲಿಂದಲೇ ನಡೆದುಕೊಂಡು ಹೋಗುತ್ತಾರೆ, ಯಾವತ್ತೂ ಎತ್ತಿಕೊಂಡು ಹೋಗಬೇಕಾಗಿ ಬಂದಿಲ್ಲ," ಎಂದು.

'ನಿಜವಾಗಲೂ?' ಸುನಂದಾ ನಗುತ್ತಾ ಕಣ್ಣು ತಿರುಗಿಸುತ್ತಾ ಹೇಳಿದಳು. "ಇದು ಒಳ್ಳೆ ಜೋರಾದ ಸರ್ಟಿಫಿಕೇಟ್ ಆಗಿದೆಯಲ್ಲಾ, ಭೇಷ್, ಭೇಷ್! "ನಗುವನ್ನು ನೋಡಿ ನೀಲಾಕ್ಷ ಮನಸ್ಸಿನಲ್ಲೇ ಅಂದುಕೊಂಡ ಗಂಡನ ಭೂಮಿಕೆಯನ್ನು ನಟಿಸ ಬೇಕಾಗುತ್ತೆ ನೀಲಾಕ್ಷ. 'ಯೋಚಿಸುತ್ತೇನೆ, ಇನ್ನು ಮೇಲೆ 'ಭೇಷ್' ಆಗಿ ಇರುವುದಿಲ್ಲ. ಕುಡುಕನಾಗುತ್ತೇನೆ! ರಸ್ತೆಯಲ್ಲಿ ಬಿದ್ದು ಹೊರಳಾಡುತ್ತೇನೆ–"

"ಮತ್ತೆ ನೀನು ನನ್ನ ಸಂಗ ಬಿಟ್ಟರೆ, ಹಾಳಾಗಿಹೋಗುವುದರ ಹೊರತು ನನಗೆ ಬೇರೆದಾರಿ ಏನು?" ಸುನಂದಾ ಮನಸ್ಸಿನ ದೃಷ್ಟಿಯನ್ನು ತೀಕ್ಷ್ಣವಾಗಿಸಿಕೊಳ್ಳುತ್ತಾಳೆ. ಅವನ ಕಡೆಯ ಅಸ್ತ್ರ ಇದು! ತಾನು ಹಾಳಾಗಿ ಹೋಗುವ ಭಯ ತೋರಿಸಿ ಹೆಂಡತಿಯನ್ನು ದಾರಿಯಲ್ಲಿ ತಳ್ಳಿಬಿಡುವ ಛಲ! ಆದರೆ, ದೊರೆ, ನಿನ್ನ ಇಷ್ಟದಿಂದಲೇ ಹೋಗುತ್ತೇನೆ. ಅದು ನರಕವಾದರೆ ಅಲ್ಲಿಗೂ ಸರಿಯೇ!

ಆದರೆ ಅವಳು ಮನಸ್ಸಿನಲ್ಲಿನ ನೆರಳನ್ನು ಹೊರಗೆ ಬೀಳಗೊಡುವುದಿಲ್ಲ. ಸುನಂದಾ ತಮಾಷೆಯ ಧ್ವನಿಯಿಂದ ಹೇಳುತ್ತಾಳೆ, "ಅದೇನು ಕಮ್ಮಿನೇ? ಹಾಳೂರು, ಈ ಪ್ರಪಂಚದಲ್ಲೇ ಬಹಳ ಒಳ್ಳೆಯ ಜಾಗವೆಂದು ಕೇಳಿದ್ದೇನೆ. ಒಂದು ವೇಳೆ ನನ್ನ ಒಳ್ಳೆಯದಕ್ಕಾಗಿ ನೀವು ಅಲ್ಲಿಗೆ ಹೋಗುವ ಟಿಕೆಟ್ಟನ್ನು ಗಳಿಸಿದರೆ ಅದರ 'ಕ್ರೆಡಿಟ್' ನನಗೇ!"

"ಅದು, ಆಮೇಲೆ ಕೊಟ್ಟುಕೊಳ್ಳುತ್ತೀಯಂತೆ. ಈವತ್ತು ಸ್ವಲ್ಪ ನನ್ನ ಜೊತೆಗೆ ಬಾರಲೆ!'

ಸುನಂದಾ ಮನಸ್ಸಿನಲ್ಲೇ, ಹೂಂ, ತಿಳಿಯಿತು, ಹೊಸದು ಯಾವುದೋ ದೊಡ್ಡ ಮೀನು ನೋಡಿರಬೇಕು, ಆಡಿಸಿ ಎಳೆಯಲು ಒಳ್ಳೆಯ 'ಬೆಯಿಟ್' ಬೇಕಾಗಿದೆ, ಅವರೆ ನಾನು ಇನ್ನು ನಿನ್ನ 'ಬೆಯಿಟ್' ಆಗುವುದಿಲ್ಲ. ಇಲ್ಲ, ಸತೀ ಧರ್ಮದ ರಕ್ಷಣೆಗಾಗಿಯಲ್ಲ. ಪವಿತ್ರತೆಯ ರಕ್ಷಣೆಗಾಗಿಯೂ ಅಲ್ಲ, ಕೇವಲ ನಿನ್ನ ಕೈಯಿನ ಬೊಂಬೆಯಾಗಿ ಇರದೆ ಹೋಗುವುದಕ್ಕಾಗಿಯೇ! ನೀನು ನಿನ್ನ ಸುಂದರಿ ಹೆಂಡತಿಯನ್ನು ಒಡೆದು ತಿನ್ನುತ್ತಿರಬೇಕು ಎನ್ನುವುದನ್ನು, ಇನ್ನು ಮಾಡಲು ಬಿಡುವುದಿಲ್ಲ, ನಿನಗಿಂತ ನಾನು ಮಂಕು ಎಂದು ತಿಳಿಯಬೇಡ.

ಬಾಯಲ್ಲಿ,

"ಈವತ್ತು ಆಗುವುದೇ ಇಲ್ಲ. ನನಗೆ ಸ್ವಲ್ಪ ವಿಶೇಷವಾದ ಕೆಲಸ ಇದೆ."

"ಕೆಲಸವೇ? ನಿನಗೇನು ಕೆಲಸ?"

"ಏಕೆ, ನನಗೇನೂ ಕೆಲಸ ಇರಬಾರದೇ?"

"ಆಹಾ! ಯಾಕೆ ಕೂಡದು? ಆದರೆ ನನಗೆ ಗೊತ್ತಿಲ್ಲದೆ, ಅದೇನು ವಿಶೇಷ ಕೆಲಸ?"–

"ಇದರಲ್ಲಿ ಆಶ್ಚರ್ಯ ಪಡಲು ಏನಿದೇ? ನನಗೆ ಗೊತ್ತಿಲ್ಲದಂತಹ ವಿಶೇಷ ಕೆಲಸಗಳು ಬೇಕಾದಷ್ಟು ಇರುತ್ತಲ್ಲಾ ನಿಮಗೆ?"

"ಅದು ಖಂಡಿತ ಇದೆ' ನೀಲಾಕ್ಷ ಹೆಮ್ಮೆಯ ಧ್ವನಿಯಲ್ಲಿ ಹೇಳುತ್ತಾನೆ. 'ಗಂಡಸಿಗೆ ಬೇರೆಯಾದ ಒಂದು ಕಾರ್ಮಿಕ ಜೀವನ ಇರುತ್ತೆ."

"ಹೆಂಗಸರಿಗೂ ಅದು ಇರಬಹುದು."

"ಏನು ವಿಷಯ! ಒಳಗೊಳಗೇ ಏನಾದರೂ ಉಪಾಯ ನಡೆಯುತ್ತಿದೆಯೇನು?" ಸುನಂದಾ ಆ ವ್ಯಂಗ್ಯ ನಗುವಿನ ಮುಖವಾಡವನ್ನು ತೆಗೆದು ಹಾಕಿಹೇಳುತ್ತಾಳೆ, "ಒಂದು ವೇಳೆ ಇದ್ದರೆ, ಅದೇನು ತಪ್ಪೇ? ಮನೆಯ ಪರಿಸ್ಥಿತಿ ಖಂಡಿತ ನಿಮಗೆ ಗೊತ್ತಿದೆ ಅಲ್ಲವೇ? ಸಂಸಾರದ್ದೇ?"

ನೀಲಾಕ್ಷ ತಕ್ಷಣ ಕೋಪದ ಧ್ವನಿಯಲಲಿ ಹೇಳುತ್ತಾನೆ, "ನಾನೇಕೆ ಸಂಸಾರದ ಸ್ಥಿತಿಯನ್ನು ಅರಿಯಲು ಹೋಗಬೇಕು? ಸಂಸಾರ ನನ್ನ ಸ್ಥಿತಿಯನ್ನು ನೋಡಲು ಬಂದಿದೆಯೇ ಎಂದಾದರೂ? ಇಂದೇನೋ ಎರಡು ಕಾಸು ಸಂಪಾದಿಸಿ ಉಣ್ಣುತ್ತಿದ್ದೇನೆ. ಒಂದು ಕಾಲದಲ್ಲಿ ಸಿಗರೇಟಿಗೂ ದುಡ್ಡು ಇಲ್ಲದೆ, ಸ್ನೇಹಿತರುಗಳ ಹತ್ತಿರ ಸಾಲ ತೆಗೆದುಕೊಂಡು, ಅವರ ಸ್ನೇಹವನ್ನೂ ಕಳೆದುಕೊಂಡಿದ್ದೇನೆ. ಒಂದನ್ನು ಬಿಟ್ಟು ಎರಡನೆಯ 'ವುಲ್ಲನ್' ಸೂಟು ಇರಲಿಲ್ಲ. ಆ ಕಡೆ ನೋಡಿದೆಯೇ ಸಂಸಾರ? ಇಲ್ಲ, ಇಲ್ಲ, ಸಂಸಾರ ನನ್ನಿಂದ ಏನನ್ನೂ ಆಶಿಸುವ ಹಾಗಿಲ್ಲ!"

"ಅದು ಆಶೆ ಇಟ್ಟುಕೊಂಡೂ ಇಲ್ಲ!"

ಸುನಂದಾ ಕಿಟಕಿಯ ಹತ್ತಿರ ಹೋಗಿ ನಿಂತು, "ಆ ಆಸೆ ಇಟ್ಟುಕೊಂಡೇ ಇಲ್ಲ."

"ಆದರೆ ನೀನು ನನ್ನ ಹೆಂಡತಿ, ನೀನು ತಾನೆ ಆ ಆಸೆ ಏಕೆ ತೋರಿಸಬೇಕು? ಎಷ್ಟೋ ಸಲ ಹೇಳಿದ್ದೇನೆ, ನಾವು ಇಲ್ಲಿಂದ ಹೋರಟುಹೋಗೋಣ–"

"ಆದರೆ, ಯಾವಾಗ ನಾನು ಹಾಗೆ ಹೇಳಿದೆನೋ, ನೀವೇಆಗ, ಹೊರಟುಹೋದರೆ ಮನೆಯಲ್ಲಿ ಭಾಗ ಸಿಗುವುದಿಲ್ಲ ಎಂದಿರಿ."

"ಹೇಳಿದ್ದೆ, ಒಪ್ಪಿಕೊಳ್ಳುತ್ತೇನೆ. ಆದರೆ ಯಜಮಾನರ ಸ್ಥಿತಿ–ಗತಿ ನೋಡಿದರೆ, ಮನೆಯ ಒಂದು ಇಟ್ಟಿಗೆಯೂ ನಮ್ಮಗಳಿಗೆ ಸಿಗುತ್ತದೆಂಬ ನಂಬಿಕೆ ನನಗೆ ತೋರುತ್ತಿಲ್ಲ. ತಾವು ಅಂತೂ ಜಡಭರತರಾಗಿ ಕುಳಿತಿದ್ದಾರೆ. ಯಾವತ್ತೋ ಒಂದು ದಿನ ನಾವು ಕೇಳಬಹುದು, ಮನೆ ಮಾರ್ಟ್‌ಗೇಜ್ ಆಗಿದೆ ಎಂದು! ಹೌದು, ಅಕಸ್ಮಾತ್ ಒಂದು ದಿನ

ಹೀಗೆ ಅಂತ ಕೇಳಿದರೆ ನಾನು ಆಶ್ಚರ್ಯಪಡುವುದಿಲ್ಲ. ಆಮೇಲೆ ಹಠಾತ್ತನೆ ಮನೆಯ ಯಜಮಾನರಿಗೆ ಮೈ ಏನಾದರೂ ಈ ಕಡೆ, ಆ ಕಡೆ ಆದರೆ ಆಗ? ಯೋಚಿಸಿದ್ದೀಯಾ ಆಗ ಏನೇನು ಕುತ್ತಿಗೆಗೆ ಕಟ್ಟುತ್ತೆ ಅಂತ? ವಿಧವೆ ತಾಯಿ, ಕನ್ಯೆ ತಂಗಿ, ಒಬ್ಬ ದಂಡದ ತಮ್ಮ, ಅದೇ ಅದೊಂದು 'ಪಾರಾಸೈಟ್' ಮತ್ತೆ ಸ್ವಂತ ಹೆಂಡತಿ ಮಕ್ಕಳು ಇದ್ದೇ ಇದೆ. ತಿಳಿಯಿತೆ ಪರಿಸ್ಥಿತಿ?"

"ತಿಳಿದೇ ಇದೆ!" ಸುನಂದಾ ಎಂದಳು, "ಆಹಾ, ಯೋಚಿಸಿದರೆ ಈಗಿನಿಂದಲೇ ನಿಮಗಾಗಿ ಕರುಣೆಯಾಗುತ್ತೆ. ಈ ವಂಗ-ಭೂಮಿಯಲ್ಲಿ ಯಾರ ಯಾರ ತಲೆಗೆ ಈ 'ಗಂಧಮಾದನ'ದ ಹೊರೆ ಏರಿದೆಯೋ! ನೀಲಾಕ್ಷ 'ಟ್ರವುಜರ್' ತೆಗೆದು, ಬಂದು ಪೈಜಾಮಾ ಹಾಕಿಕೊಳ್ಳುತ್ತಾ ಹೇಳಿದ, "ನನಗೆ ಗೊತ್ತು ನೀನು ಹಾಸ್ಯ ಮಾಡುತ್ತಿದ್ದೀಯ ಎಂದು, ಗೊತ್ತು, ನನ್ನ ಮೇಲೆ ನಿನಗೆ ಒಂದು ಬಿಡಿಕಾಸಿನಷ್ಟೂ ಸಹಾನುಭೂತಿಯೂ ಇಲ್ಲ ಎಂದು. ಏಕೆ ಇನ್ನೂ ನೀನು 'ಇವನು ನನ್ನ ಪಾಲಿನ ವಿಷ' ಎಂದು ಹೇಳಿ ಏಕೆ 'ಡೈವೋರ್ಸ್' ಸೂಟ್ ತಂದಿಲ್ಲ ಎಂದು ಒಂದೊಂದು ಸಲ ಯೋಚಿಸುತ್ತೇನೆ. ಒಂದುವೇಳೆ ನಿನ್ನ ಈ ಪೂಜನೀಯ ಅತ್ತೆ-ಮಾವ, ಪ್ರೀತಿಯ ನಾದಿನಿ, ಮೈದುನ, ಈ ಸಂಸಾರ ಬಿಟ್ಟು ಹೋಗುತ್ತಲ್ಲಾ ಎಂದು ಇರಬಹುದು!"

ಸುನಂದಾ ಕಿಲಕಿಲನೆ ನಕ್ಕಳು, "ಆಯಿತಾ? ಕಾರಣ ಕಂಡುಹಿಡಿದುಬಿಟ್ಟರಾ? ಅಬ್ಬಾ ನೀವೆಷ್ಟು ಗಟ್ಟಿಗರು!"

ನೀಲಾಕ್ಷ ಇದಕ್ಕೆ ಉತ್ತರ ಕೊಡುವುದಿಲ್ಲ.

ಅಕಸ್ಮಾತ್ತಾಗಿ ನೀಲಾಕ್ಷ ಕೇಳಿದ, "ಸರಿ, ಮೀನಾಗೆ ಏನಾಗಿದೆ, ಹೇಳು ನೋಡೋಣ?"

"ಮೀನಾಗೇ?"

"ಹೌದು, ಹಗಲು-ರಾತ್ರಿ ಕೋಣೆಯಲ್ಲಿ ಮಲಗಿದ್ದಾಳೆ ನೋಡುತ್ತಿದ್ದೇನೆ. ಕಾಲೇಜು-ಗೀಲೇಜಿಗೂ ಹೋಗುತ್ತಿಲ್ಲವೇ?"

"ಹಗಲು-ರಾತ್ರಿಯೇ?"

ಸುನಂದಾ ತಿರುಗಿ ಹಿ, ಹಿ ಎಂದು ನಗುತ್ತಾಳೆ, "ನಿಮಗೆ ಇಷ್ಟೆಲ್ಲಾ ನೋಡುವುದಕ್ಕೆ ಸಮಯ ಎಲ್ಲಿ ಸಿಕ್ಕಿತು? ನನ್ನನ್ನು ಆಶ್ಚರ್ಯಗೊಳಿಸುತ್ತಿದ್ದೀರಲ್ಲಾ? ಹಾಂ, ಹಗಲು-ರಾತ್ರಿ ಮನೆಯಲ್ಲಿ ಯಾರು ಏನು ಮಾಡುತ್ತಿದ್ದಾರೆ ಎಂದು ನೋಡುತ್ತಾ ಇದ್ದೀರಾ?"

ಹೈಮವತಿಯೂ, ಸರೋಜಾಕ್ಷರಂತೇ ಆಶ್ಚರ್ಯದಿಂದ ಕೇಳಿದರು, "ಏನಿದು?" ಶಾರದಾಪ್ರಸಾದ್ ಶಾಂತಧ್ವನಿಯಲ್ಲಿ ಹೇಳಿದರು, "ನೀವು ಕೊಟ್ಟಿದ್ದ ದುಡ್ಡು" "ನನ್ನ ದುಡ್ಡೇ?" ಭಯವಾಗುತ್ತೆ ಹೈಮವತಿಗೆ. ಹುಚ್ಚು, ಬೆಪ್ಪು ಮನುಷ್ಯ ಏನು ಹೇಳಲು ಏನು ತಿಳಿದುಕೊಂಡ? ಎಂದ.

ಆಕಾಶದಿಂದ ಬಿದ್ದಂತಾಯಿತು ಆಕೆಗೆ. ಕೇಳಿದರು, "ಯಾವ ದುಡ್ಡು?"

ಶಾರದಾಪ್ರಸಾದ್ ಗೋಡೆಯ ಕಡೆ ತಿರುಗಿಕೊಂಡು, ಗೋಡೆಯಂತೆಯೇ ಭಾವ

ಶೂನ್ಯ ಧ್ವನಿಯಲ್ಲಿ ಹೇಳುತ್ತಾರೆ, "ಪುಸ್ತಕದ ನೆಪವಾಗಿ ಯವುದನ್ನು ನನಗೆ ಭಿಕ್ಷೆಯಾಗಿ ಕೊಟ್ಟಿದ್ದರೋ ಅದು."

ಸದಾ ಉತ್ತೇಜಿತವಾಗಿರುತ್ತಿದ್ದ ಶಾರದಾಪ್ರಸಾದರ ಈ ಶಾಂತಮೂರ್ತಿ ಮತ್ತು ಸ್ವರ ಹೈಮವತಿಯನ್ನು ಭಯಗೊಳಿಸುತ್ತೆ ಅದಲ್ಲದೆ ಬರೀ ಧ್ವನಿ ಮಾತ್ರವೇ? ಭಾಷೆಯೂ ಅಲ್ಲವೇ? ಇದೇನು ಶಾರದಾಪ್ರಸಾದನ ಭಾಷೆಯೇ?

ಯಾವಾಗಲೂ ಸರಳ, ಯಾವಾಗಲೂ ಮಗುವಿನಂತಹ ಶಾರದಾಪ್ರಸಾದನದೇ? ಹೈಮವತಿ ಹೆದರಿದ ಧ್ವನಿಯಿಂಲೇ ಕೇಳಿದರು, "ನನಗೆ ನಿನ್ನ ಮಾತು ಅರ್ಥವಾಗುತ್ತಿಲ್ಲ ಶಾರದಾಪ್ರಸಾದ್?"

ಒಂದು ಸಲ ತಲೆಯಲ್ಲಾಡಿಸಿಕೊಳ್ಳುತ್ತಾರೆ ಶಾರದಾಪ್ರಸಾದ್.

ಬರೀ ಗೋಡೆಯಲ್ಲಿ ಏನೋ ಅದೃಶ್ಯ ಲಿಪಿಯನ್ನು ಓದುತ್ತಿರುವಂತಿದೆ ಶಾರದಾಪ್ರಸಾದ್. ಹೈಮವತಿ ಸ್ವಲ್ಪ ಹೊತ್ತು ಸುಮ್ಮನಿದ್ದು ತಿರುಗಿ ಕೇಳಿದರು, 'ಏನಾಗಿದೆ, ಸರಿಯಾಗಿ ಹೇಳು ನೋಡೋಣ, ನನಗ ನಿಜವಾಗಿಯೂ ಅರ್ಥವಾಗುತ್ತಿಲ್ಲ."

ಶಾರದಾಪ್ರಸಾದ್ ಆವಾಗಲೂ ತಿರುಗುವುದಿಲ್ಲ.

ಶಾರದಾ ಅದೇ ಶಾಂತ ಧ್ವನಿಯಲ್ಲಿ ದೃಢವಾಗಿ ಹೇಳುತ್ತಾರೆ, "ನಾನು ಮೂರ್ಖ, ಬುದ್ಧಿಯಿಲ್ಲದವ, ಕುರುಡ. ನನಗೆ ಎಷ್ಟೋ ವಿಷಯಗಳನ್ನು ತಿಳಿದುಕೊಳ್ಳುವುದು ಕಷ್ಟ. ಆದರೆ ನಿಮಗೆ ತಿಳಿಯದೇ ಇರುವುದು ಯಾವುದೂ ಇಲ್ಲವಲ್ಲ ಚಿಕ್ಕಮ್ಮಾ, ಆದರೆ ನಿಮ್ಮನ್ನು ನಾನು ನಂಬುತ್ತಿದ್ದೆ ಬುದ್ಧಿಯಿಲ್ಲದವನೆಂದು ನೀವೂ ನನ್ನನ್ನು ಹೀಗೆ ಮೋಸಗೊಳಿಸುತ್ತೀರೆಂದು ನಾನು ನಂಬಿರಲಿಲ್ಲ. ಮೂರ್ಖನಿಗೆ ಬುದ್ಧಿ ಒಂದು ವೇಳೆ ಹೀಗೆಯೇ ಬರುತ್ತೋ ಏನೋ! ಹೋಗಲಿ, ಏನೋ ಹೇಳಲು ಏನೋ ಹೇಳುತ್ತಾ ಇದ್ದೇನೇ. ತಪ್ಪು ತೀಳಿದುಕೊಳ್ಳಬೇಡಿ. ನಿಮ್ಮ ದುಡ್ಡು ಯಾವ ಕೆಲಸಕ್ಕೂ ಬರಲಿಲ್ಲ. ಅದಕ್ಕೆ ಇಟ್ಟುಬಿಟ್ಟು ಹೋಗುತ್ತೇನೆ. ಯಾವ ಚಿಂದಿ ಕಾಗದಗಳನ್ನು ನೆಪವಾಗಿಟ್ಟು ಅದನ್ನು ಕೊಟ್ಟಿದ್ದಿರೋ, ಅವುಗಳನ್ನು ಒಲೆಗೆ ಹಾಕಿಬಿಡಿ."

ಕುರ್ಚಿಯಿಂದ ಎದ್ದು, ಶಾರದಾಪ್ರಸಾದ್ ಯಾವ ಕಡೆಯೂ ನೋಡದೆ ನೆಟ್ಟಗೆ ಮೆಟ್ಟಿಲಿಳಿದು ಹೋಗುತ್ತಾರೆ.

ಹೈಮವತಿ ಕಲ್ಲಿನ ಬೊಂಬೆಯಂತೆ ಆತ ಹೋಗುವುದನ್ನು ನೋಡುತ್ತಾ ಇರುತ್ತಾರೆ.

ಆತ ಹೊರಟುಹೋಗುವುದನ್ನು ನೋಡಿ ಅವರ ಮನಸ್ಸಿಗೆ ಇನ್ನು ಸಂದೇಹವಿಲ್ಲದೆ ತೋರುತ್ತೆ, ಆ ದೀರ್ಘಕಾಯದ, ಸರಳ ಮನಸ್ಸಿನ ಮನುಷ್ಯನ ಹೋಗುವಿಕೆ ಚಿರಕಾಲದ್ದು, ಆತ ಇನ್ನು ತಿರುಗಿ ಯಾವಾಗಲೂ ಬರುವುದಿಲ್ಲ ಎಂದು.

ಆದರೆ ಹೈಮವತಿ ಆತನನ್ನು ತಡೆಯುವುದು ಹೇಗೆ?

ಹೈಮವತಿ ಏನು ಓಡಿ ಹೋಗಿ ಆತನ ಕೈಹಿಡಿದು ನಿಲ್ಲಿಸಿ, "ಹುಚ್ಚು ಹುಡುಗ, ಹಾಗೆ ಹೊರಟುಹೋದರೆ ಆಯಿತೇ? ಎಲ್ಲಾ ಮಾತೂ ಹೇಳದೆ ನೀನು ಹೇಗೆ ಹೋಗುತ್ತೀಯ ನೋಡೋಣ," ಎಂದು ಹೇಳಲು ಆಗುತ್ತದೆಯೇ?

ಇಲ್ಲ, ತಿರುಗಿ ಹಳೆಯ ರೀತಿಯಲ್ಲೇ ಉತ್ಸಾಹದಿಂದ ಹೇಳುವುದೇ, "ಏನಾಶ್ಚರ್ಯ? ನೀನು ಏನು ಹೇಳುತ್ತಿದ್ದೀಯ? ನಾನಾದರೆ ಈ ನನ್ನ ಹೊಸ 'ಬಿಸಿನೆಸ್' ಸಿನ ಉನ್ನತಿಯ ಸ್ವಪ್ನ ಕಾಣುತ್ತಿದ್ದೇನಲ್ಲಾ!"

ಇಲ್ಲ, ಅಷ್ಟು ನಿರ್ದಯಳಾಗಲಾರರು ಹೈಮವತಿ, ಇನ್ನು ಹುಡುಗಾಟಿಕೆ ಮಾಡಲಾಗುವುದಿಲ್ಲ. ಸೂಕ್ಷ್ಮ ಬುದ್ಧಿಯುಳ್ಳ ಹೈಮವತಿಗೆ, ಏನು ನಡೆದಿರಬಹುದೆಂದು ಅನುಮಾನಿಸುವುದು ಕಷ್ಟವಾಗಲಿಲ್ಲ. ತನ್ನನ್ನು ಬಹಳ ಕ್ಷುದ್ರಳಾಗಿ ತೋರುತ್ತೆ ಆಕೆಗೆ.

ತಲೆಯಲ್ಲಿನ ಪ್ರತಿಯೊಂದು ನರಗಳಲ್ಲೂ, ಒಂದು ಪಟ್ಟಾದ ಸ್ವರದ ಎಳೆತ ಅನವರತವೂ ಮಿಡಿಯುತ್ತಿದೆ, "ಬುದ್ಧಿಯಿಲ್ಲದವನೆಂದು ನೀವೂ ನನ್ನನ್ನು ಮೋಸಗೊಳಿಸುತ್ತೀರೆಂದು ನಾನು ನಂಬಿರಲಿಲ್ಲ." ಎಂಬ ಮಾತು.

ಹೌದು, ಹೈಮವತಿ ತಪ್ಪು ಮಾಡಿದ್ದಾರೆ.

ಬುದ್ಧಿಯಿಲ್ಲದವನೆಂದು ಮೋಸ ಮಾಡುವ ಪ್ರಯತ್ನವನ್ನೇ ಮಾಡಿದ್ದಾರೆ. ನಂಬಿದ ಒಂದು ಸರಳ ಹೃದಯವನ್ನು ಕಾಲ ಕೆಳಗೆ ಹಾಕಿ ತುಳಿದಿದ್ದಾರೆ. ಆದರೆ ತಿಳಿದಿದ್ದಾರೆ ಅವನಿಗೆ ಒಳ್ಳೆಯದನ್ನೇ ಮಾಡುತ್ತಿದ್ದೇನೆ ಎಂದು. ಇದರ ಅರ್ಥ, ಅವನನ್ನು ಕುರುಡನೆಂದು ತಿಳಿದು ನಿಶ್ಚಿಂತೆಯಿಂದಿದ್ದಿದ್ದಾರೆ. ಯೋಚಿಸಿದರು ಹೈಮವತಿ, ನಾನೇ ಎಷ್ಟರ ಮಟ್ಟಿಗೆ ಕುರುಡಾಗಿದ್ದೆ ಎಂಬುವುದನ್ನು ತಿಳಿದುಕೊಂಡಿರಲಿಲ್ಲ. ಅವನು ನನ್ನ ದೃಷ್ಟಿಯನ್ನು ತೆರೆದ.

ಆದರೆ ಆತನ ದೃಷ್ಟಿಯನ್ನು ತೆರೆದವರು ಯಾರು?

ವಿಜಯಾನೇ?

ಸರೋಜಾಕ್ಷರೇ?

ಅಯ್ಯೋ, ಹೈಮವತಿ ಏಕೆ ಕಾರಣರಾದರು?

ಹೈಮವತಿ ಟೇಬಲ್ಲಿನ ಮೇಲೆ ಬಿದ್ದಿರುವ ನೋಟುಗಳ ಕಡೆ ಎವೆಯಿಕ್ಕದೆ ನೋಡುತ್ತಾ ಕುಳಿತಿದ್ದರು.

* * *

ಕುರುಡನಿಗೆ ಬೆಳಕಿನ ಬಲವಾದ ಪೆಟ್ಟಿನಿಂದ ದೃಷ್ಟಿ ತಿರುಗಿ ಬಂದುಬಿಟ್ಟರೆ ಅವನು ಕಣ್ಣು ಇರುವವರಿಗಿಂತ ಚುರುಕಾಗಿಬಿಡುತ್ತಾನೇನೋ! ಅದಕ್ಕೆ ಶಾರದಾಪ್ರಸಾದ್ ಹೋಗುವಾಗ 'ಬೀಳ್ಕೊಳ್ಳುವ' ದೃಶ್ಯವನ್ನು ಅಭಿನಯಿಸುವುದಿಲ್ಲ, ನಿಃಶಬ್ದದಿಂದ ಯಾವಾಗಲೋ ಎಂದೆಂದಿಗಾಗಿಯೂ ಹೊರಟು ಹೋಗುತ್ತಾರೆ.

ಆತನ ಇಷ್ಟುದಿನದ 'ಅಧಿಕಾರ' ದಲ್ಲಿದ್ದ ಕೋಣೆಯಲ್ಲಿ, ಯಾವುದು ಸರೋಜಾಕ್ಷರೊಬ್ಬರಿಗೆ ಮಾತ್ರ 'ಅಧಿಕಾರ' ಎಂದೂ, ಇನ್ನೆಲ್ಲರಿಗೂ ಆಕ್ರಮಿಸಿಕೊಂಡಿರುವ ಭಾವನೆ ಇತ್ತೋ, ಆ ಕೋಣೆಯಲ್ಲಿದ್ದ ಸಾಮಾನುಗಳೆಲ್ಲ ಅದರದರ ಜಾಗದಲ್ಲಿ ಹಾಗೆಯೇ ಇತ್ತು. ಕೇವಲ, ಆ ತುಂಡು ಕಾಗದಗಳು, ಯಾವುದು, ಎರಡನೆಯ ಮತ್ತು ಮೂರನೆಯ

ಖಂಡವಾಗಿ ಪ್ರಕಟಣೆಯಾಗುವುದಕ್ಕಾಗಿ ದಾರದಿಂದ ಕಟ್ಟಲ್ಪಟ್ಟು ಕಾಯುತ್ತಿದ್ದುವೋ, ಆ ಜಾಗ ಮಾತ್ರ ಖಾಲಿಯಾಗಿತ್ತು.

ಮತ್ತು ಖಾಲಿಯಾಗಿತ್ತು ಶಾರದಾಪ್ರಸಾದ್ ಇದ್ದ ಜಾಗ.

ಆದರೆ ಈ ಮನೆಯಲ್ಲಿ ಬೇರೆ ಎಲ್ಲಾದರೂ ಜಾಗ ಇತ್ತೇ ಆತನಿಗೆ, ಸರೋಜಾಕ್ಷರ ಹೃದಯವನ್ನು ಬಿಟ್ಟು?

ಆದರೆ, ಆಶ್ಚರ್ಯ! ಸರೋಜಾಕ್ಷರ ನಿರ್ಮಮತೆಯಿಂದಲೇ ಆತ ಬೀಳ್ಕೊಂಡರು.

ಹೀಗೆಯೇ ಆಗುತ್ತದೇನೋ.

ಎಲ್ಲರಿಗಿಂತ ಪ್ರಿಯಜನರಿಂದಲೇ ಎಲ್ಲಕ್ಕಿಂತ ದೊಡ್ಡ ಪೆಟ್ಟು ಬರುತ್ತೆ. ಅವರ ಇಷ್ಟದಿಂದ, ಇಷ್ಟವಿಲ್ಲದೆ, ಅಜಾಗರೂಕತೆಯಿಂದ!

ಶಾರದಾಪ್ರಸಾದ್ ತಾನು ಇದ್ದ ಕುರುಪು ಇಲ್ಲದೆ ಚಿರಕಾಲಕ್ಕಾಗಿಯೂ ಹೊರಟು ಹೋಗಿರುವುದು ಎಲ್ಲರಿಗೂ ತಿಳಿಯಲು ಕೆಲದಿನಗಳೇ ಆಯಿತು. ಕಾರಣ, ಯಾರಿಗೂ ಆ ಶಂಕೆ ಇರಲಿಲ್ಲ. ಶಾರದಾಪ್ರಸಾದ್ ಯಾವಾಗ ಮನೆಯಿಂದ ಹೊರಡುತ್ತಾರೆ, ಯಾವಾಗ ಹಿಂದಿರುಗುತ್ತಾರೆ, ಯಾವಾಗ, ಎಷ್ಟು ಹೊತ್ತು ಕುಳಿತು ಜ್ಞಾನ-ಚರ್ಯೆ ನಡೆಸುತ್ತಾರೆ ಎಂದು ಕಂಡವರು ಯಾರು? ಕಂಡವರು ಸರೋಜಾಕ್ಷರೊಬ್ಬರೇ, ಆದರೆ ಈಚೀಚೆಗೆ ಅದೂ ಇಲ್ಲ. ಇಬ್ಬರ ಜೀವನವೂ ತಲೆಕೆಳಕಾಗಿ ಹೋಗಿತ್ತಲ್ಲಾ!

ಸರೋಜಾಕ್ಷರ ಜೀವನವು ದಂಡೆಯಾದ ಹಾರವಾಗಿದ್ದಾಗ, ಆತ ಯಾವಾಗಲೂ ತನ್ನ ಕೋಣೆಯಲ್ಲಿ ಕುಳಿತಿದ್ದಾಗ, ಇವರು ಕೆಲಸದಿಂದ ಹಿಂತಿರುಗಿದಾಗ ಪ್ರತಿ ದಿನವೂ ಕೇಳುವರು: "ಏನು ಶಾರದಾ, ಈವತ್ತು ಏನನ್ನು ಹೊಸದಾಗಿ ಕಂಡುಹಿಡಿದೆ?"

ಆದರೆ ಆ ಪ್ರಶ್ನೆಯಲ್ಲಿ ವ್ಯಂಗ್ಯವಿರುತ್ತಿತ್ತೇ?

ಇಲ್ಲ, ಅದರಲ್ಲಿ, ಸ್ನೇಹ, ಸಹೃದಯತೆಯೇ ಇರುತ್ತಿತ್ತು.

ಆದರೆ ಆ ಮಾತು ಈಗ ಅನ್ವಯಿಸುವುದಿಲ್ಲ. ಶಾರದಾಗೂ ಆ 'ಮಧುರಸುಳ್ಳ'ನ್ನು ಇನ್ನು ಮಧುರವಾಗಿ ಭಾವಿಸಲಾಗುವುದಿಲ್ಲ. ಇಡೀ ಜೀವನದ ಎಲ್ಲಾ ಸ್ನೇಹದ ಪ್ರಶ್ನೆಗಳೂ ಒಂದೊಂದು ವ್ಯಂಗ್ಯ-ಶರವಾಗಿ ಅವನನ್ನು ಶರ-ಶಯ್ಯೆಯಲ್ಲಿ ಮಲಗಿಸಿಬಿಡುತ್ತೆ. ಕಣ್ಣು ತೆರೆದ ಶಾರದಾಪ್ರಸಾದ್ ಈಗ ಪ್ರತಿ ಕ್ಷಣವೂ ನೆನೆಯಬಹುದು, ತನಗೆ ಸ್ವಲ್ಪವೂ ಅಧಿಕಾರವಿಲ್ಲದ ಒಂದು ಜಾಗದಲ್ಲಿ, 'ಅಧಿಕಾರ' ವನ್ನು ಇಟ್ಟುಕೊಂಡು ಇಷ್ಟು ದಿನವೂ ನಿಶ್ಚಿಂತೆಯಿಂದ, ಅಹಂಕಾರದಿಂದಿದ್ದಿದ್ದೇನೆ.

ಈಗ ಶಾರದಾಪ್ರಸಾದ್‌ಗೆ ಗೊತ್ತಾಗುತ್ತಿದೆ, ನೀಲಾಕ್ಷನ ತಲೆಹರಟೆಯ ಕಣ್ಣಲ್ಲಿ ಎಂತಹ ಭಾವನೆ ಇತ್ತು, ಮಯೂರಾಕ್ಷಿ ಎಂಬುವಳ ಅಸಹನೆಯಲ್ಲಿ ಎಂತಹ ವಿಷವಿತ್ತು, ವಿಜಯಾ ಎಂಬುವ ಅಹಂಕಾರಿಯ ಕಣ್ಣಲ್ಲಿ ಎಂತಹ ಅಸಡ್ಡೆ ಇತ್ತು. ಬಹಳ ದೂರ ಹೊರಟು ಹೋಗದಿದ್ದರೆ ಕ್ಯಾಮರಾವಿನ ಲೆನ್ಸ್‌ಲ್ಲಿ ಇಷ್ಟು ಸ್ಪಷ್ಟವಾಗಿ ಮೂರ್ತಿಯ ಸ್ವ-ರೂಪ ಕಾಣುವುದಿಲ್ಲವೇನೋ!

ಒಂದು ಕಾಲದಲ್ಲಿ ಸರೋಜಾಕ್ಷರು ಶಾರದಾರನ್ನು ವಿಚಾರಿಸುತ್ತಿದ್ದರು. ಈಗ ಅವರು ಸ್ತಬ್ಧರಾಗಿ ಕುಳಿತುಬಿಟ್ಟಿದ್ದಾರೆ. ಆದ್ದರಿಂದ ಶಾರದಾ ಹೊರಟುಹೋಗಿರುವುದು ಅವರಿಗೆ ಪತ್ತೆಯಾಗಲಿಲ್ಲ. ಪತ್ತೆಯಾಗಿದ್ದು ವಿಜಯಾಗೇ. ಯಾರ ಕಣ್ಣಲ್ಲಿ ಉದಾಸೀನತೆ, ಮತ್ತು ಅಸಡ್ಡೆಯೇ ಇರುತ್ತಿತ್ತೋ, ಆಕೆಗೇ ಪತ್ತೆಯಾಗಿದ್ದು!

ಕುತೂಹಲ ಮತ್ತು ಆಗ್ರಹವನ್ನು ಎಬ್ಬಿಸಿತ್ತು, ಶಾರದಾ ತಂದಿದ್ದ ಹಣ.

ಅದುಮಲಾಗದ ಕುತೂಹಲ ಮತ್ತು ವ್ಯಗ್ರತೆಯಿಂದ ಅಡಿಗಡಿಗೆ ತಮ್ಮ ಪೂಜೆಯ ಕೋಣೆಯಿಂದ ಕೆಳಗೆ ಇಳಿದು ಬಂದು ನೋಡುವರು. ಆದರೆ ಯಾವಾಗ ನೋಡಿದರೂ ಆಸಾಮಿ ಗೈರುಹಾಜರು!

ಅದಲ್ಲದೆ, ಯಾವಾಗಲೂ ತಿರುಗಿಸಿ, ಗಂಟಾಗಿಸಿ,ಮೇಲೆ ಸಿಕ್ಕಿಸಿರುತ್ತಿದ್ದ ಕೋಣೆಯ ಪರದೆ ಈಗೆಲ್ಲಾ ಒಂದು ಮೂಕ, ನಿಷೇಧಾಜ್ಞೆಯನ್ನು ಕೊಡುತ್ತಿರುವಂತೆ ಕೆಳಗೆ ಇಳಿದೇ ಇದೆ! ತಿಳಿಯದೇ ವಿಜಯಾ ಆ ಖಾಲಿ ಕೋಣೆಯ ಬಾಗಿಲಲ್ಲಿ ಬಂದು ನಿಂತು ಕೂಗಿದ್ದಾರೆ. "ಏನಪ್ಪಾ, ಅಳಿಯದೇವಾ, ನೀನೂ ನಿಮ್ಮ ಮೈದುನರ ಹಾಗ 'ಪರದೆ' ನಾ ? ಅದನ್ನು ತೆಗಿ, ಒಂದು ಮಾತಾಡಬೇಕಾಗಿದೆ."

ಪರದೆಯನ್ನು ಆಕೆ ಎತ್ತುವುದಿಲ್ಲ. ಕಾರಣ ಪೂಜೆ ಮಾಡುತ್ತಿದ್ದವರು. ಮಡಿಯಾಗಿದ್ದ ಹಾಗೆಯೇ ಬಂದಿದ್ದಾರೆ.

ಆದ್ದರಿಂದ ಕೂಗಾಟದಿಂದಲೇ ಪರದೆಯನ್ನು ಎತ್ತಲು ನೋಡುತ್ತಿದ್ದಾರೆ. "ಏನು ಸಮಾಚಾರ? ಈ ಸಾಯಂಕಾಲದಲ್ಲೇ ನಿದ್ದೆ ಮಾಡಿ ಆಯಿತೇನು? ಕೇಳುತ್ತಾ ಇದ್ದೇನೆ. ಇದೇನಿದು ಮರ್ಯಾದೆಯೇ? ಒಬ್ಬ ಅಧಮ ಮನುಷಿ ಇಷ್ಟು ಕೂಗುತ್ತಾ ಇದ್ದೇನೆ. ಲಕ್ಷ್ಯ ಇಲ್ಲವೇ?" ಒಂದು ಸಲ, ಎರಡು ಸಲ, ಮೂರು ಸಲ.

ಅದಾದ ಮೇಲೆ ತಿಳಿದು ಕೊಂಡಿದ್ದಾರೆ, ಮನುಷ್ಯ ಕೋಣೆಯಲ್ಲಿಲ್ಲ ಎಂದು. ಆದರೆ ಆ ನೋಟಿನ ಕಟ್ಟುಗಳು ಕಣ್ಣಲ್ಲಿ ಕಟ್ಟಿದೆ. ಮನುಷ್ಯನನ್ನು ಹಿಡಿಯದಿದ್ದರೆ ಹೇಗೆ ಆ ರಹಸ್ಯದ ಉದ್ಘಾಟನೆಯಾಗುವುದು? ಆಗಾಗಲೇ ಬಂಧು ನೋಡಿದ್ದಾರೆ ವಿಜಯಾ. ಶಾರದಾಪ್ರಸಾದ್ ಎನ್ನುವ ಮೂರ್ಖ ಇದ್ದಾನೆಯೇ ಎಂದು.

ಆದರೆ ಎಲ್ಲಿ, ಯಾವ ಸಮಯದಲ್ಲೂ ಇಲ್ಲವಲ್ಲಾ.

ಕಡೆಗೆ ಮೂರು–ನಾಲ್ಕು ದಿನಗಳಾದ ಮೇಲೆ ಅನುಮಾನವಾಗಿತ್ತು. ಕೆಳಗೆ ಇಳಿದು ಹೋಗಿ ಅಡಿಗೆಯ ಭಟ್ಟನನ್ನು ಕೇಳಿದರು. "ಏನಯ್ಯ ಭಟ್ಟರೇ, ಮಾವಯ್ಯನವರು ಊಟಮಾಡಿಕೊಂಡು ಹೊರಗೆ ಹೋದರೇ?"

ಭಟ್ಟ ಆಶ್ಚರ್ಯದಿಂದ ಕಣ್ಣರಳಿಸಿ, ತಿರುಗಿ ಹೇಳಿದ. "ಮಾವಯ್ಯನವರೇ?"

"ಹೌದು, ಹೌದು, ಏನು ಆಕಾಶದಿಂದ ಬಿದ್ದೆಯಲ್ಲಾ, ಕೇಳುತ್ತಿದ್ದೇನೆ, ಇಷ್ಟು ಹೊತ್ತಾಗಿ ಹೋಯಿತಲ್ಲಾ ಇನ್ನೂ ಹಿಂತಿರುಗಿಲ್ಲವಲ್ಲಾ ಎಂದು ಕೇಳಿದೆ, ಮನುಷ್ಯ ಊಟ ಮಾಡಿಕೊಂಡು ಹೋಗಿದ್ದಾರಾ ಎಂದು."

ಭಟ್ಟ ಈಗ ಅರ್ಥಮಾಡಿಕೊಂಡು ಹೇಳಿದುದರ ಸಾರಂಶವೇನೆಂದರೆ, "ಮಾವಯ್ಯನ ವಿಷಯವಾಗಿ ಏನು ಹೊಸದಾಗಿ ಕೇಳುವಿರಿ, ಅವರು ಈಗ ನಾಲ್ಕು ದಿನದಿಂದ ನಾಪತ್ತೆ. ಏಕೆ ಅಮ್ಮಾವರಿಗೆ ಆ ಮಾತು ಗೊತ್ತಿಲ್ಲವೇ? ಭಟ್ಟನಿಗೇನೋ ಅವರು ಹೇಳಿ ಹೋಗಿದ್ದಾರೆ, 'ಭಟ್ಟ, ನೀನು ನನಗೋಸ್ಕರ ಅಕ್ಕಿ ತೆಗೆದುಕೊಳ್ಳಬೇಡ, ನಾನು ಹೊರಟುಹೋಗುತ್ತಿದ್ದೇನೆ.' ಎಂದು. ಭಟ್ಟ ಸೌಜನ್ಯಕ್ಕಾಗಿ ಕೇಳಿದ್ದಾನೆ, 'ಯಾವಾಗ ಹಿಂತಿರುಗುತ್ತೀರಿ' ಎಂದು, ಅವರು ಹೇಳಿಹೋಗಿದ್ದಾರೆ, 'ಗೊತ್ತಿಲ್ಲ. ಏನೂ ನಿಶ್ಚಯವಿಲ್ಲ.' ಎಂದು. ಅಮ್ಮಾವರಿಗೆ ಇದೆಲ್ಲಾ ಏನೂ ಗೊತ್ತಿಲ್ಲವೇ?"

ವಿಜಯಾರ ಗೃಹಿಣಿ–ಗರ್ವಕ್ಕೆ ಸ್ವಲ್ಪ ಪೆಟ್ಟಾಗುತ್ತೆ.

ವಿಜಯಾ ಕೋಪದಿಂದ ಹೇಳುತ್ತಾರೆ, "ಗೊತ್ತಿಲ್ಲದೇ ಏನು? ದೊಡ್ಡದಾಗಿ ಹೋಗುತ್ತೇನೆ ಎಂದು ಹೇಳಿದ. ಆದರೆ ನೆನ್ನೆ ಅವರು ಹಿಂತಿರುಗಬೇಕಾಗಿತ್ತಲ್ಲಾ. ಹಿಂತಿರುಗಿಲ್ಲ ಅಂದರೆ?"

ಭಟ್ಟ ಮನಸ್ಸಿನಲ್ಲೇ ಮೃದುವಾಗಿ ನಕ್ಕುಕೊಳ್ಳುತ್ತಾನೆ.

ಈ, ನೆನ್ನೆ ವಾಪಸ್ಸು ಬರಬೇಕಾಗಿತ್ತು ಅನ್ನುವುದೆಲ್ಲಾ ಬರೀ ಸುಳ್ಳು ಎನ್ನುವುದು ಅವನಿಗೆ ತಿಳಿಯುತ್ತೆ, ಆದರೆ ಇದು ಮಾತ್ರ ಗೊತ್ತಾಗುವುದಿಲ್ಲ, ಮಾವಯ್ಯನ ವಿಷಯದಲ್ಲಿ ಇದ್ದಕ್ಕಿದ್ದ ಹಾಗೆ ಅಮ್ಮಾವರಿಗೇನು ಇಷ್ಟೊಂದು ಅಕ್ಕರೆ? ಎಂದು! ಯಾವ ಮನುಷ್ಯನ ಊಟದ ವಿಷಯವಾಗಿ ಅಮ್ಮಾವರು ಬೇಜಾರುಪಟ್ಟುಕೊಳ್ಳುವುದನ್ನೇ ಅವನು ನೋಡಿದ್ದಾನೋ ಅಂತಹವರನ್ನು ಈಗೇಕೆ ಇಷ್ಟೊಂದು ವಿಚಾರಿಸುತ್ತಿದ್ದಾರೆ? ಯಜಮಾನರೇ ಅವರನ್ನು ಯಾವಾಗಲೂ ವಿಚಾರಿಸಿ ಗಮನಿಸುತ್ತಿದ್ದರು.

ಈಚೀಚೆಗೆ ಯಜಮಾನರೂ ಲಕ್ಷ್ಯ ಮಾಡದೆಯೇ ಇದ್ದಿದ್ದಾರೆ. ಅಡಿಗೆಯ ಮನೆಯಲ್ಲೂ ಅತಂಥ ಸಂಭ್ರಮವಿಲ್ಲ. ಮಾವಯ್ಯನ ಆರಾಮವಾದ ಊಟದ ಪರ್ವವೂ ಇಲ್ಲ. ಯಾವಾಗಲಾದರೂ ಒಂದೊಂದು ಸಮಯ ಹೊರಗೆ ಹೋಗುವುದು, ಇದ್ದಕ್ಕಿದ್ದ ಹಾಗೆ ಬರುವುದು, ಯಾವಾಗಲಾದರೂ ಅವಸರವಾಗಿ ತಾನೇ ಬಂದು, ನೀರು, ಆಸನ ಹಾಕಿಕೊಂಡುಬಿಟ್ಟು, "ಭಟ್ಟಾ, ಅನ್ನ ಆಗಿದ್ದರೆ ನನಗೊಂದು ತುತ್ತು ಬಡಿಸಿಬಿಡು, ಇರಲಿ, ಇರಲಿ, ಮೀನು ತರಕಾರಿ ಆಗಿಲ್ಲದೆ ಹೋದರೆ ಪರವಾಗಿಲ್ಲ, ಬೇಳೆ ಆಗಿದೆಯೋ ಇಲ್ಲವೋ? ಅದೇ ಸಾಕು" ಅನ್ನೋದು, ಇದೆಲ್ಲಾ ಈಗಿಲ್ಲವೇ ಇಲ್ಲ.

ಒಂದೊಂದು ದಿನ ಮೂರು ಗಂಟೆಯ ವೇಳೆಗೆ ಮನೆಗೆ ಬಂದು, ಸ್ನಾನ ಮಾಡದೇ ಹಾಗೆಯೇ ಬಂದು ಹೇಳಿದ್ದಾರೆ, "ಭಟ್ಟಾ, ಬಹಳ ಹೊತ್ತಾಗಿಹೋಯಿತು. ನೀನೇಕೆ ಪಾಪ ಕುಳಿತಿದ್ದೆ? ಮುಚ್ಚಿಟ್ಟುಬಿಟ್ಟು ಹೋಗಬಹುದಾಗಿತ್ತಲ್ಲಾ" ಎಂದು.

ಒಂದೊಂದು ಸಲ ತಪ್ಪು ಮಾಡಿದವನಂತೆ, ಅವಸರವಾಗಿ ತಲೆಯ ಮೇಲೆ ಎರಡು ಚೊಂಬು ನೀರನ್ನು ಹಾಕಿಕೊಂಡು, ಮೈಮೇಲೆ ನೀರಿದ್ದ ಹಾಗೆಯೇ ಊಟ ಮಾಡಲು ಬಂದು ಕುಳಿತಿದ್ದಾರೆ.

ಆ ಮನುಷ್ಯನ ಮೇಲೆ ಭಟ್ಟನಿಗೆ ಏನೋ ಒಂದು ತರಹದ ಮಮತೆ ಇತ್ತು, ಆದ್ದರಿಂದಲೇ ಅನ್ನ ಇಟ್ಟುಕೊಂಡು ಕುಳಿತಿರುತ್ತಿದ್ದ.

ಅಮ್ಮಾವರು ಅದನ್ನು ಗಮನಿಸುತ್ತಿರಲಿಲ್ಲವಾದರಿಂದಲೇ ಪರವಾಗಿಲ್ಲ!– ಗಮನಿಸಿದ್ದರೆ, ಒಂದು ವೇಳೆ ಹುಕುಂ ಮಾಡಿರುತ್ತಿದ್ದರೋ ಏನೋ! "ಕೂತುಕೊಂಡಿರ ಬೇಕಾದ್ದೇನಿಲ್ಲಿ, ಅನ್ನ ಮುಚ್ಚಿಟ್ಟುಬಿಟ್ಟು ಹೋಗು" ಎಂದು.

ಅಂತಹ ಅಮ್ಮಾವರು ಏಕೆ ಇದ್ದಕ್ಕಿದ್ದಹಾಗೆ ಮಾವಯ್ಯನ ವಿಷಯದಲ್ಲಿ ಇಷ್ಟೊಂದು ವಿಚಾರಿಸುತ್ತಿದ್ದಾರೆ! ಮನುಷ್ಯ ಹೋಗಿ ಇಂದಿಗೆ ನಾಲ್ಕು ದಿನವಾಯಿತು, ಆ ಸಮಾಚಾರವನ್ನೂ ತಿಳಿದುಕೊಂಡಿಲ್ಲ!

ಭಟ್ಟ, ಅವನು ಇಲ್ಲಿಗೆ ಬಂದಾಗಿನಿಂದ ಶಾರದಾಪ್ರಸಾದ್ ಹೊರಟುಹೋಗಿರುವುದನ್ನು ಎಂದೂ ನೋಡಿದವನಲ್ಲ. ಅದಕ್ಕೇ ಈ ಹೊರಟುಹೋಗುವಿಕೆಯನ್ನು ನೋಡಿ ಅವನಿಗೂ ಅನ್ನಿಸಿತ್ತು, ಈ ಹೋಗುವಿಕೆ ಎಂದೆಂದಿಗಾಗಿಯೂ ಎಂದು. ಆತ ತನಗಾಗಿ ಅಕ್ಕಿ ತೆಗೆದುಕೊಳ್ಳ ಬೇಡ ಎಂದು ಹೇಳುವಾಗ, ಭಯಂಕರವಾದ, ವೇದನೆಯಿಂದ ಬಾಡಿದ ಮುಖವನ್ನೇ ಭಟ್ಟ ನೋಡಿದ್ದ.

ಆದರೆ ಅವನು ಅಡಿಗೆಯ ಆಳು. ಯಾರನ್ನು ಏನು ಕೇಳುವುದಕ್ಕಾಗುತ್ತೆ?

ಅದೂ ಅಲ್ಲದೆ ಮನೆಯೇನು ಮುಂಚಿನಹಾಗಿದೆಯೇ? ಏನೋ ಒಂದು ದೆವ್ವವಿದ್ದ ಮನೆಯಂತಾಗಿದೆ, ಅಮ್ಮಾ ಅಂತೂ ಯಾವಾಗಲೂ ಉಪ್ಪರಿಗೆಯಲ್ಲಿರುವವರು. ಆದರೆ ಅತ್ತಿಗೆ, ಅಣ್ಣಂದಿರುಗಳು, ಅಕ್ಕಂದಿರು, ಮಾವಯ್ಯ ಇವರುಗಳು ಮನೆಯನ್ನು ಲವಲವಿಕೆಯಿಂದಿಡುವರಲ್ಲಾ, ಸ್ವಲ್ಪ ಸ್ವಲ್ಪವಾಗಿ ಹೇಗೆ ಹೇಗೋ ಆಗಿಹೋಗಿದ್ದಾರೆ. ಆಮೇಲೆ ಒಡಕು ಜಾಸ್ತಿಯಾಗುತ್ತಲೇ ಇದೆಯಲ್ಲಾ! ಯಜಮಾನರು ಕೆಲಸ ಬಿಟ್ಟು ಬಿಟ್ಟು ಬೈರಾಗಿಯಾಗಿ ಮನೆಯಲ್ಲಿ ಕುಳಿತುಬಿಟ್ಟಿದ್ದಾರೆ.

ಚಿಕ್ಕಕ್ಕ ಕೋಣೆ ಬಿಟ್ಟು ಹೊರಗೆ ಬರುತ್ತಿಲ್ಲ. ದೊಡ್ಡಣ್ಣಾ ಕುಡುಕನಾಗಿ ತೂರಾಡುತ್ತಾ ಮನೆಗೆ ಬರುತ್ತಿದ್ದಾರೆ. ಇನ್ನು, ಆ ಪುಟ್ಟ ಹುಡುಗನನ್ನು ಬೋರ್ಡಿಂಗೋ ಅದೆಲ್ಲೋ ಬಿಟ್ಟಿದ್ದರಲ್ಲಾ ಅದು ಅಲ್ಲೇ ಇರುತ್ತೆ, ರಜೆಯಲ್ಲಿ ಮಾವನ ಮನೆಗೆ ಹೋಗುತ್ತೆ.

ಕಡೆಯದಾಗಿ ಮಾವಯ್ಯ ಇದ್ದ. ಅವನೂ ಮನೆಬಿಟ್ಟು ಹೋದ. ಮತ್ತೆ ದೆವ್ವ ಇರುವ ಮನೆ ಎಂತಲ್ಲದೆ ಇನ್ನೇನು ಹೇಳುತ್ತಾನೆ ಭಟ್ಟ? ಹಳಬ, ಎಲ್ಲವನ್ನೂ ನೋಡುತ್ತಿದ್ದಾನೆ ಹಳೆಯ ಕಾಲದ ಮನುಷ್ಯ!

ವಿಜಯಾರ ಕೋಪಕ್ಕೆ ಅವನು ಹೆದರುವುದಿಲ್ಲ. ಅಸಡ್ಡೆಯಿಂದ ಹೇಳುತ್ತಾನೆ. "ಹಿಂತಿರುಗಿಲ್ಲ, ಅದು ನೋಡುತ್ತಲೇ ಇದ್ದೀರಲ್ಲ, ನನಗಿನ್ನೇನು ಗೊತ್ತು? ನನಗೇನೋ ಎಂದೆಂದಿಗಾಗಿಯೂ ಹೊರಟುಹೋದರು ಎನ್ನಿಸಿತು."

ಏನೋ, ಯಾರಿಗೆ ಗೊತ್ತು, ವಿಜಯಾಗೆ ಬಹಳ ಭಯವಾಗುತ್ತೇ. ತಲೆಯಿಂದ ಕಾಲುವರೆಗೂ ವಿದ್ಯುತ್ಪ್ರವಾಹ ಹೋದಂತೆ ಭಾಸವಾಗುತ್ತೆ ವಿಜಯಾಗೆ. ಆದರೂ ಕೋಪದ

ಧ್ವನಿಯನ್ನು ಬದಲಾಯಿಸದೆ ಕೇಳುತ್ತಾರೆ, "ಓ, ಹಾಗೆ ಅನ್ನಿಸಿತ್ತೇ ನಿನಗೆ? ಹಾಗೆನಿಸಿದ್ದರೆ ನನಗೆ ಒಂದು ಸಲ ಹೇಳುವುದಕ್ಕೇನಾಗಿತ್ತು?"

ಭಟ್ಟ ಅಷ್ಟೇ ಅಸಡ್ಡೆಯ ಧ್ವನಿಯಿಂದ ಹೇಳಿದ, "ನಾನು ಸಂಬಳಕ್ಕಿರುವ ಆಳು. ನಾನು ನಿಮಗೇನು ಹೇಳುವುದಕ್ಕೆ ಹೋಗಲಿ? ಅದೂ, ನನಗೇನು ಗೊತ್ತು, ನಿಮಗೆ ಗೊತ್ತಿಲ್ಲ ಎಂದು?" ಮನುಷ್ಯ, ಬೀರ್‌ಭೂಮ್ ಜಿಲ್ಲೆಯವ, ಜೋರು. ಮುಚ್ಚುಮರೆ ಗೊತ್ತಿಲ್ಲ ಮಾತಲ್ಲಿ. ವಿಜಯಾ ಮಹಡಿಗೆ ಬಂದು ಸರೋಜಾಕ್ಷರನ್ನೇ ಹಿಡಿದರು. "ಅಳಿಯದೇವರು ಹೊರಟು ಹೋದರಲ್ಲಾ! ನನಗೆ ಹೇಳಬೇಕಾದ್ದು ಅವಶ್ಯಕ ಎಂದು ಯಾರಿಗೂ ತೋರಲಿಲ್ಲವೇನೋ? ವಿಜಯಾರ ಮಾತಿಗೆ ಸಾಮಾನ್ಯವಾಗಿ ಕಿವಿ ಕೊಡುವವರಲ್ಲ ಅವರು, ಆದರೆ ಈ 'ಹೊರಟು ಹೋದರು' ಮಾತನ್ನು ಕೇಳಿ ಚಕಿತರಾಗಿ ಕೇಳಿದರು, "ಎಲ್ಲಿಗೆ ಹೊರಟು ಹೋದರು?"

ಕಳೆದ ಮೂರು ದಿನಗಳಿಂದಲೂ ಅವರು ಸಂಕಲ್ಪ ಮಾಡುತ್ತಿದ್ದರು, ಏನಾದರೂ ಆಗಲಿ ಕೆಲಸಕ್ಕೆ ಹೋಗಿ ಸೇರಬೇಕು. ತಲೆ ಬಗ್ಗಿಸಿಕೊಂಡು ಹೇಳಬೇಕು, 'ನಾನು ತಪ್ಪುಮಾಡಿದ್ದೆ' ಎಂದು. ಆದರೆ ಈಗ ಅವರು ಸಂಕಲ್ಪ ಮಾಡಿ ಏನು ಪ್ರಯೋಜನ? ಯಾರಿಗೆ ಹೋಗಿ ಹೇಳುವುದು ಈ ಮಾತನ್ನು? ವಿದ್ಯಾರ್ಥಿ ಆಂದೋಲನದಿಂದ ಕಾಲೇಜು ಅನಿರ್ದಿಷ್ಟ ಕಾಲಕ್ಕಾಗಿ ಬಾಗಿಲು ಮುಚ್ಚಿದೆ. ಅವರುಗಳ 'ಡಿಮ್ಯಾಂಡ್' ಏನು ಎಂಬುದು ಸರೋಜಾಕ್ಷರಿಗೆ ಸರಿಯಾಗಿ ಗೊತ್ತಿಲ್ಲ. ಒಂದು ವೇಳೆ ಪರೀಕ್ಷೆಯನ್ನು ಮುಂದಕ್ಕೆ ತಳ್ಳಿಹಾಕುವ 'ಡಿಮ್ಯಾಂಡ್' ಅಥವಾ 'ಕ್ವೆಶ್ಚನ್' ಪೇಪರನ್ನು ಸುಲಭಮಾಡಬೇಕೆಂಬ 'ಡಿಮ್ಯಾಂಡ್' ಅಥವಾ ಯಾರಾದರೂ ಪ್ರೊಫೆಸರೋ ಅಥವಾ ಅಧ್ಯಕ್ಷರನ್ನೇ ಒಂದು ದಿನ 'ಘೆರಾವ್' ಮಾಡಿದ್ದರು ಅವರುಗಳು, ಆದರೆ ಅದರಿಂದ ಏನೂ ಉಪಯೋಗವಾಗಲಿಲ್ಲವಂತೆ. ಆದ್ದರಿಂದ ಈ 'ಸ್ಟ್ರೈಕ್'!

ಸರೋಜಾಕ್ಷರು ಮತ್ತೆ ಯಾರಲ್ಲಿ, ಎಲ್ಲಿಗೆ ಹೋಗಿ ದಾಖಲೆ ಮಡುವುದು ತಮ್ಮ ಈ ಬೇಡಿಕೆಯನ್ನು?

ಅಥವಾ ಕಲ್ಕತ್ತಾದಿಂದ ದೂರದಲ್ಲಿ ಹೊರಗೆ ಯಾವುದಾದರೂ ಶಿಕ್ಷಣ ಕೇಂದ್ರದಲ್ಲಿ ಕೆಲಸಕ್ಕೆ ಹೋಗುವುದೇ? ಎಲ್ಲಿ? ವಿಜಯಾ ಆಗಲಿ ಅಥವಾ ತಮ್ಮ ಪರಿವಾರದ ಇತರರು ಯಾರೂ ಬರುವುದಿಲ್ಲವೋ ಅಂತಹ ಕಡೆ ಹೋಗೋಣವೇ ಎಂದು ಯೋಚಿಸಿದರು ಸರೋಜಾಕ್ಷರು. ಒಂದು ವೇಳೆ ಹಾಗೆ ಮಾಡಿದರೆ ತಮ್ಮನ್ನು, ತಾವು ಸರಿಯಾಗಿ ತಿಳಿದು ಕೊಳ್ಳಬಹುದು ಎಂದು ಎಣಿಸಿದರು.

ಸಂಸಾರಕ್ಕೆ ತಾವು ಮಾಡಬೇಕಾದ ಕರ್ತವ್ಯ, ದುಡ್ಡು ಸಂಪಾದನೆ. ಅದನ್ನು ತಾವು ಮಿತವಾಗಿ ತಮ್ಮ ಖರ್ಚನ್ನು ಮುಗಿಸಿಕೊಂಡು ಮನೆಗೆ ದುಡ್ಡು ಕಳುಹಿಸಿ ಕೊಟ್ಟರೆ ಆಯಿತು. ಅಷ್ಟೇ. ಇಂತಹ ಸ್ವಪ್ನದ ಜಗತ್ತಿನಲ್ಲಿ ಅವರು ವಿಹರಿಸುತ್ತಿರುವಾಗಲೇ ವಿಜಯಾ ಕೇಳಿದ ಮಾತು ಕಲ್ಲಿನಿಂದ ಹೊಡೆದಂತೆ ಅವರನ್ನು ಎಚ್ಚಿಸಿತು.

ಶಾರದಾಪ್ರಸಾದನ ಬಾಡಿದ ಮುಖದ ದೃಶ್ಯವನ್ನು ಅವರು ತಮ್ಮ ನೆನಪಿನ ಪೆಟ್ಟಿಗೆಯೊಳಗೆ ಭಯ, ಆತಂಕದೊಂದಿಗೆ ಮುಚ್ಚಿಡಲು ಪ್ರಯತ್ನಿಸುತ್ತಿದ್ದರು. ಅದಕ್ಕೇ ಅವರು

ಒಂದು ಸಲ ಕೂಡ, ಶಾರದಾಪ್ರಸಾದನ ಸುಳಿವೇ ಕಾಣುತ್ತಿಲ್ಲವಲ್ಲಾ ಏಕೆ ಎಂದು ವಿಚಾರಿಸಲಿಲ್ಲ.

ಸರೋಜಾಕ್ಷರು ಅವರ ಕೋಣೆಯಿಂದ ಹೊರಗೆ ಬರುವಾಗಲೆಲ್ಲಾ, ಶಾರದಾಪ್ರಸಾದನ ಕೋಣೆಯ ಬಾಗಿಲಲ್ಲಿದ್ದ, ನೇತಾಡುವ ಪರದೆಯನ್ನು ನೋಡಿ ಸ್ತಂಭಿಸಿ ನಿಲ್ಲುತ್ತಿದ್ದರು. ತಾನು ಬರೆದ ಬರವಣಿಗೆಗಳನ್ನೆಲ್ಲಾ ಹರಿದುಹಾಕುತ್ತಿದ್ದಾನೆಯೇ? ಕೋಣೆಯೊಳಗೆಯೇ ಕುಳಿತು? ಎಂದು ಯೋಚಿಸುತ್ತಿದ್ದರು.

ನಕ್ಕರಲ್ಲಾ? ಏಕೆ ನಕ್ಕಿದಿರಿ? ಯಾರ ಪ್ರಶ್ನೆ ಅದು? ಯಾರ ಒಣಗಿದ ಧ್ವನಿ ಅದು? ಆ ಧ್ವನಿ ಅನವರತವೂ ಸುಡುತ್ತಿದೆ ಸರೋಜಾಕ್ಷರ ಹೃದಯವನ್ನು. ಅದರಿಂದ ದೂರ ಓಡಿಹೋಗಲು ಪ್ರಯತ್ನಿಸುತ್ತಿದ್ದಾರೆಯೇ ಅವರು? ಅವರಿಗೆ ಗೊತ್ತಿಲ್ಲ, ಆ ಧ್ವನಿಯೇ ಅವರಿಂದ ಬಹಳ ದೂರಕ್ಕೆ ಹೊರಟು ಹೋಗುತ್ತಿದೆ, ಅವರಿಗೆ ಮುಕ್ತಿಯನ್ನು ಕೊಡುತ್ತಿದೆ ಎಂದು!

ಅದಕ್ಕೆ ಚಕಿತರಾಗಿ ಕೇಳಿದರು, "ಎಲ್ಲಿ ಹೊರಟು ಹೋದ?"

"ಯಾಕೆ ಏನೂ ತಿಳಿಯದವರಂತೆ ಈ ವೇಷ? ನಿಮಗೆ ಗೊತ್ತಿಲ್ಲವೇ?"

"ಇಲ್ಲ"

"ಅಂದಿನ ಆ ದುಡ್ಡಿನ ಸಮಾಚಾರವಾದರೂ ಏನು?"

"ಗೊತ್ತಿಲ್ಲ".

"ನಿಮ್ಮ ಹತ್ತಿರವೂ ಏನೂ ಹೇಳಲಿಲ್ಲ ಎಂಬುದನ್ನು ನಾನು ನಂಬಲೇ?"

ಸರ್ರೋಜಾಕ್ಷರು ಸುಮ್ಮನಿದ್ದರು.

ವಿಜಯಾ ತಿರುಗಿ ಕೇಳಿದರು, "ಹೋಗುವಾಗ ನಿಮಗೂ ಹೇಳಿಬಿಟ್ಟು ಹೋಗಲಿಲ್ಲವೇ?"

ಸರೋಜಾಕ್ಷರು ಸುಮ್ಮನೆಯೇ ಇದ್ದರು.

ವಿಜಯಾ ಕೋಪದೊಂದಿಗೆ ನುಡಿದರು, "ಹೋಗಿದ್ದರೆ, ನಾನು ಸರಿಯಾಗಿ ನಡೆದುಕೊಂಡಿಲ್ಲ ಎಂದು ಹೋಗಿಲ್ಲ. ನಿಮ್ಮ ನಡತೆಯಿಂದಲೇ ಹೋಗಿದ್ದಾನೆ. ಜ್ಞಾಪಕ ಇಟ್ಟುಕೊಳ್ಳಿ."

ಸರೋಜಾಕ್ಷರು ಕಣ್ಣೆತ್ತಿ ನೋಡಿ ಮೆಲ್ಲಗೆ ಹೇಳಿದರು, "ಜ್ಞಾಪಕ ಇಟ್ಟುಕೊಳ್ಳುತ್ತೇನೆ. ನನ್ನ ಜೀವಮಾನದ ಅಂತ್ಯದವರೆಗೂ ಜ್ಞಾಪಕ ಇಟ್ಟುಕೊಳ್ಳುತ್ತೇನೆ."

"ಹುಡುಕಲು ಏರ್ಪಾಟು ಮಾಡುವುದಿಲ್ಲವೇ?"

"ಇಲ್ಲ"

ವಿಜಯಾ ಕೋಣೆಯಿಂದ ಹೊರಗೆ ಬಂದರು. ಎದುರುಗಡೆ ನೋಡಿ ಸ್ತಂಭಿಸಿ ನಿಲ್ಲುತ್ತಾರೆ. ನಾಟಕದ ಕಡೆಯಲ್ಲಿ ಇಳಿಬಿದ್ದಿರುವ ಪರದೆಯಂತೆ. ಆ ಕೋಣೆಯ ಪರದೆ ನಿಃಶಬ್ದದಿಂದ ಕೇಳುವಹಾಗೆ ತೋರುತ್ತೆ. "ಏಕೆ,ಮನಸ್ಸು ಈಗ ಹಾತೊರೆಯುತ್ತೆ? ಇದನ್ನೇ ತಾನೆ ನೀನು ಯಾವಾಗಲೂ ಬಯಸುತ್ತಿದ್ದುದು?"

ಹೌದು, ಬಯಸಿದ್ದರು.

ಆದರೆ ಆ ಬಯಕೆ ಒಂದು ಆಸೆಯ ರಶ್ಮಿಯನ್ನು ತೋರಿಸಿ ಹೊರಟುಹೋದರೆ ಅದು ಇಷ್ಟು ಬೀಭತ್ಸವಾಗಿ ತೋರುತ್ತದೆ ಎಂದು ವಿಜಯಾ ಎಣಿಸಿರಲಿಲ್ಲ.

ಸರೋಜಾಕ್ಷರೂ ಮೆಲ್ಲಗೆ ಹೊರಗೆ ಬಂದು ಆ ಕಡೆ ನೋಡಿದರು. ಅಲ್ಲಿ ಶಾರದಪ್ರಸಾದ್ ನಂತಹ ಒಬ್ಬ ಬುದ್ಧಿಹೀನ ವ್ಯಕ್ತಿ, ಬುದ್ಧಿ ವಿಕಾಸವಾದ ತಕ್ಷಣ, ನಾಟಕ–ಮುಕ್ತಾಯದ ಪರದೆಯನ್ನು ಎಳೆದುಬಿಟ್ಟು ಹೋಗಿರುವುದನ್ನು ಕಾಣುತ್ತಾರೆ. ಅವರಿಗೂ ಗೊತ್ತಾಗುತ್ತೆ ಈ ಅಗಲಿಕೆ ಚಿರಕಾಲಕ್ಕಾಗಿಯೂ ಎಂದು. ಏಕೆಂದರೆ ಅವರ ಕಿವಿಯಲ್ಲಿ ಅನವರತವೂ, ಒಂದು ವಿಷಬಾಣದಿಂದ ಗಾಯಗೊಂಡ ಆರ್ತಸ್ವರ ಕೇಳಿಸುತ್ತಿದೆ, "ನಕ್ಕರಲ್ಲಾ? ಏಕೆ ನಕ್ಕಿರಿ?" ನೀಲಾಕ್ಷನಿಗೆ ಸಮಾಚಾರವು, ಸಂಸಾರದ ಎಲ್ಲಾ ಗೂಢ, ಗೋಪ್ಯವಾದಂತಹ ವಿಷಯಗಳನ್ನು ಹೇಳಬೇಕಾದಂತಹ ಹೆಂಡತಿಯಿಂದ, ತಿಳಿಯಲಿಲ್ಲ. ಅವಳು ಯಾವಾಗಲೂ ಅಸಡ್ಡೆಯಿಂದಲೇ ತಾನೆ ಅವನೊಂದಿಗೆ ಮಾತಾಡುವುದು!

ಮಯೂರಾಕ್ಷಿ ಸಮಾಚಾರವನ್ನು ಹೇಳಿದ್ದಳು.

ಊರು, ಊರೆಲ್ಲಾ ಸುತ್ತಾಡಿಕೊಂಡು ಹೆಮ್ಮೆಯಿಂದ ಮೆರೆಯುತ್ತಾ, ಥಳಥಳಿಸುತ್ತಾ ಬಂದ ಮಗಳನ್ನು ಕಣ್ಣೆತ್ತಿಯೂ ನೋಡದೆ, ಮರೆಯಲ್ಲಿ ಕರೆದುಕೊಂಡು ಹೋಗಿ ಸಮಾಚಾರವನ್ನು ಹೇಳಿ ಕಲ್ಲಾಗಿಸಿದರು ವಿಜಯಾ!

ಸಹನೆಯಿಂದಿರುವ ಶಕ್ತಿ ಇಲ್ಲ ವಿಜಯಾಗೆ. ಸಹನೆಯಿಂದ ಉಪಯೋಗವಿದೆ ಎಂದು ನಂಬುವವರೂ ಅಲ್ಲ ಅವರು. ತಮ್ಮ ಮನಸ್ಸಿನ ಭಾರವನ್ನು ಒಂದಷ್ಟು ಮಗಳ ಮೇಲೆ ಹೇರಿಸಿ ಸ್ವಲ್ಪ ಹಗುರವಾದರು ವಿಜಯಾ.

ಮಯೂರಾಕ್ಷಿ ತನ್ನ ಮನೋಭಾರವನ್ನು ಹಗುರ ಮಾಡಿಕೊಳ್ಳಲು ಅಣ್ಣನ ಬಳಿ ಬಂದಳು.

ಆದರೆ ಅವಳ ಹಾಗೆ, ಎಲ್ಲಾ ಮಾತುಗಳಿಗೂ ಅಷ್ಟೊಂದು ಪ್ರಾಧಾನ್ಯತೆ ಕೊಡುವುದಿಲ್ಲ ನೀಲಾಕ್ಷ. ಅಪ್ಪಾ ಹೂಗ್ಲಿಯಲ್ಲಿ ಕಾಲೇಜಿಗೆ ಸೇರುತ್ತಾರಂತೆ ಎಂಬುದನ್ನು ಕೇಳಿ ಹೇಳಿದ, "ಅದರಲ್ಲಿ ತಪ್ಪೇನು? ಒಳ್ಳೆಯದೇ."

ಶಾರದಾಪ್ರಸಾದ ಹೊರಟುಹೋದದ್ದು? ಅದನ್ನು ಕೇಳಿ ಮನಸ್ಸು ಸ್ವಲ್ಪ ಅಳುಕಿದರೂ ಅದು ಒಳ್ಳೆಯದೇ ಎನಿಸಿತು.

ಆದರೆ ಮೀನಾಕ್ಷಿಯ ವಿಷಯವಾಗಿ ಎಲ್ಲಾ ಸಮಾಚಾರವೂ ಗೊತ್ತಾದಾಗ?

ಸಂಸಾರದ ಮೇಲೆ ಯಾವ ತರಹದ ಮಮತೆಯೂ ಇಲ್ಲದ ನೀಲಾಕ್ಷನೂ ಪೆಟ್ಟು ತಿಂದ ಹುಲಿಯಂತೆ ಗರ್ಜಿಸಿ ಹೇಳಿದ, "ಇದು ನಂಬಲಾಗದ ಮಾತು."

ಆದರೆ ಮಯೂರಾಕ್ಷಿ, ತಾನೇ ಕಲ್ಪಿಸಿ ಏನನ್ನೂ ಹೇಳಲು ಬಂದಿಲ್ಲವಲ್ಲಾ! "ಬೇಕಾದರೆ ಅಮ್ಮನನ್ನು ಕೇಳು" ಎಂದಳಲ್ಲಾ.

ಅಮ್ಮನನ್ನು ಕೇಳದೆ ಹೆಂಡತಿಯನ್ನೇ ಕೇಳಿದ, 'ನಿನಗೆ ಗೊತ್ತಿತ್ತೇ?'

ಸುನಂದಾ ಗಂಭಿರವಾಗಿ 'ಹೂಂ' ಎಂದಳು.

"ನನಗೆ ನೀನು ಹೇಳಲಿಲ್ಲವಲ್ಲಾ?"

"ಹೇಳಿದ್ದರೆ ಏನು ಮಾಡುತ್ತಿದ್ದಿರಿ?"

"ಏನು ಮಾಡುತ್ತಿದ್ದೇನೇ? ಆ ರಾಸ್ಕಲ್ಲನ್ನು ಹಿಡಿದೆಳೆದು ಕೊಂಡು ಬಂದು ಮದುವೆಗೆ ಒಪ್ಪಿಸುತ್ತಿದ್ದೆ!"

"ಆದರೆ ನೀವು ಒಪ್ಪಿಸಿ ಮಾಡುವ ಮದುವೆಗೆ ನಿಮ್ಮ ತಂಗಿ ಒಪ್ಪದಿದ್ದರೆ?"

"ಒಪ್ಪದಿದ್ದರೆ ಎಂದರೆ ಏನರ್ಥ? ಇದೇನು ತಮಾಷೆಯೇ? ಇರು, ತೋರಿಸುತ್ತೇನೆ ಹೇಗೆ ಒಪ್ಪಿಸಬೇಕು ಅನ್ನುವುದನ್ನು!"

ಸುನಂದಾ ದೃಢತೆಯಿಂದ ಹೇಳಿದಳು, "ಹುಚ್ಚು ಹುಚ್ಚಾಗಿ ಆಡಬೇಡಿ, ನಿಮ್ಮ ಲೆಕ್ಕದಂತೆ ನಡೆಯುವ ಹುಡುಗಿಯಲ್ಲ ಅವಳು."

ನೀಲಾಕ್ಷ ಕೋಪದಿಂದ ಹೇಳಿದ, "ಯಾವ ಹೆಣ್ಣುತಾನೆ ನ್ಯಾಯವಾಗಿ ಲೆಕ್ಕದಂತ ನಡೆದು ಕೊಳ್ಳತ್ತೆ? ನಂಬರ್ ಒನ್ ಕೆಟ್ಟ ಜಾತಿ."

ಸುನಂದಾ ಜವಾಬು ಕೊಡದೆ ಸ್ಥಿರವಾಗಿ ನೀಲಾಕ್ಷನನ್ನು ದಿಟ್ಟಿಸಿ ನೋಡುತ್ತಾಳೆ. ನೀಲಾಕ್ಷ ಬೇರೆಕಡೆ ತಿರುಗಿ ಕೊಳ್ಳುತ್ತಾನೆ.

ಕೇಳುತ್ತಾನೆ, "ಹೋಗಲಿ, ಮದುವೆಯಾಗಲು ಇಷ್ಟವಿಲ್ಲದಿದ್ದರೆ ಬಿಡಲಿ, ಅವನ ಹೆಸರು ವಿಳಾಸವನ್ನಾದರೂ ಹೇಳಲಿ, ಹೋಗಿ ಆ ರಾಸ್ಕಲ್ಲಿನ ಚರ್ಮವನ್ನು ಸುಲಿದು ಹಾಕುತ್ತೇನೆ." ಸುನಂದಾ ಏನೋ ಸಾಧಾರಣವಾಗಿ ಹೇಳುವಂತೆ ಹೇಳಿದಳು,– "ಹಾಗಾದರೆ ಬಹಳ ಒಳ್ಳೆಯದಾಗುತ್ತೆ. ಕೇಳುವಷ್ಟರಲ್ಲಿ ಚಾಕುವನ್ನು ಸಾಣೆ ಮಾಡಿಡಿ ನೋಡೋಣ."

ನೀಲಾಕ್ಷ ಉರಿಯುವ ಕಣ್ಣುಗಳನ್ನರಳಿಸಿ ಅವಳ ಕಡೆ ಒಂದು ಸಲ ನೋಡಿ ಬಿಟ್ಟು ದಬ ದಬನೆ ಮೀನಾಕ್ಷಿಯ ಕೋಣೆಯೊಳಗೆ ಬಂದು, ಯಾವ ಪೂರ್ವ ಪೀಠಿಕೆಯೂ ಇಲ್ಲದೆ ಕೇಳಿದ, "ಏ, ಮೀನಾ, ಆ ರಾಸ್ಕಲ್ಲಿನ ಹೆಸರು, ವಿಳಾಸವೇನು?"

ಮೀನಾಕ್ಷಿ ಬಹಳ ದಿನಗಳಾದ ಮೇಲೆ ಇಂದು ಅಣ್ಣನೊಂದಿಗೆ ಮಾತಾಡಿದಳು. ಅಣ್ಣನ ಕಡೆ ನೋಡಿದಳು. ಆಮೇಲೆ ಹೇಳಿದಳು—

"ಹೆಸರು ವಿಳಾಸ ತಿಳಿದುಕೊಂಡು ನಿನಗೇನೂ ಲಾಭವಾಗುವುದಿಲ್ಲ, ಅಣ್ಣಾ" ನೀಲಾಕ್ಷ ಕೋಪದಿಂದ ನುಡಿದ, "ಲಾಭವೋ ನಷ್ಟವೋ, ಅದು ನನಗೇ ಗೊತ್ತು. ನನಗೆ ಹೆಸರು ವಿಳಾಸ ತಿಳಿಯಬೇಕು."

"ಅವಶ್ಯಕತೆಯಿಲ್ಲ, ಅಣ್ಣಾ."

"ಅವಶ್ಯಕವಿಲ್ಲ ಎಂದರೆ ಏನರ್ಥ? ಅವನನ್ನು ಎಳೆದುಕೊಂಡು ಬಂದು ಮದುವೆಯಾಗುವ ಹಾಗೆ ಮಾಡುತ್ತೇನೆ."

ಮೀನಾಕ್ಷಿ ನೇರವಾಗಿ ಅಣ್ಣನ ಮುಖವನ್ನು ನೋಡುತ್ತಾ ಹೇಳಿದಳು, "ಈ ತರಹ ನೇರಾಗಿ ನಿನ್ನೊಂದಿಗೆ ಮಾತಾಡಬೇಕಾಗುವುದೆಂದು ನಾನು ಎಣಿಸಿರಲಿಲ್ಲ. ಒಂದು ವೇಳೆ

ಅಪ್ಪನ ದರ್ಬಾರಿನಲ್ಲಿ- ಹೇಳುವಾಗ, ಹೇಳಿಯೇಬಿಡುತ್ತೇನೆ, ಬಲವಂತವಾಗಿ ಮಾಡುವ ಮದುವೆಯಲ್ಲಿ ನಿನಗೆ ನಂಬಿಕೆ ಇದೆಯೇ?"

"ನಂಬಿಕೆ? ನಂಬಿಕೆ ಎಂದರೆ? ಯಾತರ ಮೇಲೆ ನಂಬಿಕೆ?"

"ಅಂದರೆ, ಅದು ಸುಖವಾಗಿ ಬಾಳುವ ಮದುವೆಯಾಗುತ್ತೆ ಎಂದು ನಂಬುತ್ತೀಯಾ?" ಸುಖವಾದ ಬಾಳು!

ನೀಲಾಕ್ಷನ ಮುಖದಲ್ಲಿ ಒಂದು ವಿರಕ್ತಿಯ ನಗು ಮೂಡುತ್ತೆ. ಬಲವಂತವಾಗಿ ಮಾಡಿದ ಮದುವೆಯಲ್ಲದ ಬಾಕಿ ಎಲ್ಲ ತರಹದ ಮದುವೆಯೂ ಸುಖಕರವಾಗಿರುತ್ತೆ ಎಂಬುದು ನಿನ್ನ ಭಾವನೆಯೇ?"

ಮೀನಾಕ್ಷಿ ಸ್ಥಿರವಾಗಿ ಹೇಳಿದಳು, "ಆದರೂ ಅದರಲ್ಲಿ ಒಂದು ಗೌರವ ಇದೆ ಅಲ್ಲವೇ?"

ಗೌರವವೇ? ಓಹೋ!

ನೀಲಾಕ್ಷ ಒಂದು ಒಣನಗುವಿನೊಂದಿಗೆ ಹೇಳಿದ, 'ಗೌರವ' ಅನ್ನುವ ಪದದ ಅರ್ಥ ವಾಗಿರಲಿ, ಅದನ್ನು ಹೇಗೆ ಬರೆಯುವುದು ಎಂಬುದೇ ನನಗೆ ಗೊತ್ತಿಲ್ಲ. ಯಾರಿಗೆ ಗೊತ್ತಿದೆಯೋ ಕಾಣೆ."

"ನೀನು ಇದೇನು ಹೇಳುತ್ತಿದ್ದೀಯ ಅಣ್ಣಾ?"

ನೀಲಾಕ್ಷ ಸಮಾಧಾನವಿಲ್ಲದೆ ಶತಪಥ ತಿರುಗುತ್ತಾ ಹೇಳಿದ, "ಸರಿಯಾಗಿಯೇ ಹೇಳುತ್ತಿದ್ದೇನೆ ಮೀನಾ. ಗೌರವ ಎಲ್ಲಿದೆ ನಮಗೆ ? ಗೌರವದ ಭಾವನೆಯಾದರೂ ಎಲ್ಲಿದೆ? ಸಮಾಜದ ಸರ್ವ ಉಚ್ಚ ಆಸನದಲ್ಲಿ ಕುಳಿತುಕೊಳ್ಳಬೇಕೆಂದು ನಾವು ನೀಚತೆಯ ಪಾತಾಳದಲ್ಲಿ ಇಳಿಯುವುದಕ್ಕೂ ಹಿಂಜರಿಯುವುದಿಲ್ಲ, ಅಗೌರವದ ನರಕಕ್ಕೆ ಇಳಿಯಲು ಹಿಂಜರಿಯುವುದಿಲ್ಲ. ಎಲ್ಲರಿಗೂ, ಎಲ್ಲರ ಅಸಲು ರೂಪ ಗೊತ್ತು. ಆದರೂ ಒಂದು ಮುಖವಾಡ ಹಾಕಿಕೊಂಡು ತಿರುಗುತ್ತೇವೆ. ಯಾರಾದರೂ ಆ ಮುಖವಾಡವನ್ನು ಕಿತ್ತೊಗೆದು ತಮ್ಮ ನಿಜರೂಪವನ್ನು ತೋರಿಸಿದರೆ ಛಿ, ಛಿ, ಎನ್ನುತ್ತೇವೆ. ಎಲ್ಲೂ, ಯಾರೂ, ಯಾರನ್ನೂ ಗೌರವದಿಂದ ನೋಡುವುದಿಲ್ಲ, ಇಂತಹ ಪರಿಸ್ಥಿತಿಯಲ್ಲಿ ಆ ಶಬ್ದದ ಬಗ್ಗೆ ತಲೆಯನ್ನು ಕೆಡಿಸಿಕೊಂಡು ಏನು ಪ್ರಯೋಜನ?"

ಮೀನಾಕ್ಷಿ ಮೃದುವಾಗಿ ನುಡಿದಳು: "ನಾನು ಇನ್ನೊಬ್ಬರ ಕಣ್ಣಿಗೆ 'ಗೌರವಸ್ಥಳಾಗಿ ಕಾಣುವ' ಬಗ್ಗೆ ಹೇಳಲಿಲ್ಲ ಅಣ್ಣಾ, ಆತ್ಮಗೌರವದ ಬಗ್ಗೆ ಹೇಳಿದೆ."

ನೀಲಾಕ್ಷ ತನ್ನ ಈ ಚಿಕ್ಕ ತಂಗಿಯ ಮುಖವನ್ನು ದಿಟ್ಟಿಸಿ ನೋಡುತ್ತಾನೆ, ಅವನಿಗೆ ಆಶ್ಚರ್ಯವಾಗುತ್ತೆ, ಅವನಿಗೆ ಅಕಸ್ಮಾತ್ ತೋರುತ್ತೆ, "ನಾನು, ಅವಳು ಚಿಕ್ಕವಳು, ಅಸಹಾಯಳು, ನಾನು ಅವಳ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕೆಂದು ಯೋಚಿಸುತ್ತಿದ್ದೆ! ಯಾವಾಗಲೋ ಅವಳು ದೊಡ್ಡವಳಾಗಿಬಿಟ್ಟಿದ್ದಾಳೆ! ಅವಳಿಗೆ ಯಾವ ತರಹ ಸಹಾಯವೂ

ಬೇಕಾಗಿಲ್ಲ. ತನ್ನ ತಪ್ಪನ್ನು ತಾನೇ ತಿದ್ದಿಕೊಳ್ಳಲು ಬಯಸುತ್ತಾಳೆ. ಇಂತಹ ಸಂದರ್ಭದಲ್ಲಿ ತಾನು ಮಾಡಬೇಕಾದುದು ಏನೂ ಇಲ್ಲ."

ಆದರೂ ತಾನು ಯೋಚಿಸಿಕೊಂಡು ಬಂದಂತೆಯೇ ಹೇಳುತ್ತಾನೆ.— "ಸರಿ, ಹಾಗಾದರ ಈ ಮದುವೆಯಲ್ಲಿ ನಿನಗೆ ಇಷ್ಟವಿಲ್ಲದಿದ್ದರೆ, ವಿಳಾಸ ಕೊಟ್ಟರೆ ಅವನನ್ನು ಹಿಡಿದು ಒದ್ದು ಬಿಟ್ಟು ಬರಬಹುದು."

"ಅದರಲ್ಲಿ ತಾನ ಗೌರವ ಎಲ್ಲಿರುತ್ತೆ ಅಣ್ಣಾ?"

"ಭೇಷ್,ಭೇಷ್! ನೀನು ಈ ನಿನ್ನ "ಫಾಲ್ಸ್ ಪ್ರೆಸ್ಟೀಜ್"ನ್ನಿಟ್ಟುಕೊಂಡು ಒದ್ದಾಡು. ಅಲ್ಲಿ ಒಬ್ಬ ರಾಸ್ಕಲ್ ಇಷ್ಟ ಬಂದ ಹಾಗೆ ನಡೆದುಬಿಟ್ಟು ಹಾಯಾಗಿ ಇರಲಿ! ಹೌದೇ?"

ಮೀನಾಗೆ ಇನ್ನು ತನ್ನ ಅಣ್ಣನ ಎದುರಿಗೆ, ಕಣ್ಣಲ್ಲಿ ಕಣ್ಣಿಟ್ಟು ಮಾತಾಡಲು ಆಗಲಿಲ್ಲ. ತಲೆ ಬಗ್ಗಿಸಿ ಮೆಲ್ಲಗೆ ಹೇಳಿದ್ದಳು, "ಎಲ್ಲಾ ತಪ್ಪನ್ನೂ ಇನ್ನೊಬ್ಬರ ಮೇಲೆ ಹಾಕುವುದರಲ್ಲಿ ಸಮಾಧಾನವಿರಬಹುದು. ಆದರೆ ಸತ್ಯವಿಲ್ಲ. ತಪ್ಪು ನನ್ನದೂ ಅಲ್ಲವೇ? ನಾನು ದುಸ್ಸಾಹಸದಿಂದ ನಡೆದಿದ್ದೇನೆ. ಯಾರನ್ನು ನಂಬಿಕೆಗೆ ಯೋಗ್ಯನಲ್ಲ ಎಂದು ತಿಳಿದಿದ್ದನೋ ಅವನನ್ನೇ ನಂಬುವ ಭಾವನೆಯಿಂದಿದ್ದಿದ್ದೇನೆ, ನಾನು ಅಮ್ಮನ ಮಾತಿಗೆ ಕಿವಿಗೊಟ್ಟಿಲ್ಲ. ಮತ್ತೆ ಮತ್ತೆ ನಾನು ನನ್ನ ಮನೆತನದ ಗೌರವವನ್ನು ಮರೆತು. ಒಬ್ಬ ಪುಂಡ ಹುಡುಗನೊಂದಿಗೆ ಸ್ನೇಹ ಬೆಳಸಿದೆ. ಪ್ರತೀಕ್ಷಣವೂ ನಾನು ತಪ್ಪು ಮಾಡುತ್ತಿದ್ದೇನೆ ಎನಿಸಿತ್ತು. ಆದರೂ ಮೋಹಗೊಂಡು. ಆ ತರಹದ ಭಾವನೆ ಬರುವುದು ಕು-ಸಂಸ್ಕಾರ, ಅದರಿಂದ ಮುಕ್ತಳಾಗಿದ್ದರೆಯೇ ಆಧುನಿಕ ಮಹಿಳೆ ಎನಿಸಿಕೊಳ್ಳುತ್ತೇನೆ ಎಂದುಕೊಂಡಿದ್ದೆ. ಅದಕ್ಕೆ ಒಂದು ಜುರ್ಮಾನೆ ತೆರಲೇಬೇಕಲ್ಲ."

ತನ್ನ ಅಣ್ಣನೊಂದಿಗೆ ಹೀಗೆ ಬಹಿರಂಗವಾಗಿ ಎಲ್ಲಾ ಮಾತಾಡುವುದು ಸಾಧ್ಯವಾಗುತ್ತದೆಂದು ಮೀನಾಕ್ಷಿ ಎಣಿಸಿದ್ದಳೇ? ಆದರೆ ಯಾವಾಗಲೂ ಅಷ್ಟೆ. ಮನಸ್ಸು ಒಂದು ಸಂಕಲ್ಪದಲ್ಲಿ ಸ್ಥಿರಗೊಂಡರೆ ಮನುಷ್ಯನಿಗೆ ಹೀಗೆಯೇ ಧೈರ್ಯ ಬರುತ್ತೆ. ಆಗ. ಹೇಳುವವರ, ಕೇಳುವವರ ಮನಸ್ಸು ಸನಿಹಕ್ಕೆ ಬರುತ್ತೆ. ಈಗಲೂ ಹಾಗೆಯೇ ಆಯಿತು.

ನೀಲಾಕ್ಷನಿಗೂ ಅಂತಹ ಪ್ರೇರಣೆಯೇ ಬಂದಿತು.

ಶತಪಥ ನಡೆಯುತ್ತಿದ್ದವನು ಹಾಗೆಯೇ ನಿಂತುಬಿಟ್ಟು ಕೇಳಿದ. 'ಹಾಗಾದರೆ ಏನು ಮಾಡಬೇಕೆಂದಿದ್ದೀಯಾ?'

"ಹಗಲು ರಾತ್ರಿ ಅದೇ ಯೋಚಿಸುತ್ತಿದ್ದೇನೆ."

ನೀಲಾಕ್ಷ ಸ್ವಲ್ಪ ಹಿಂಜರಿಯುತ್ತಾ ಹೇಳಿದ: "ಆದರೆ ಮಯೂರಾ ಹೇಳುತ್ತಿದ್ದಳು, ಇದಕ್ಕೆ ಸುಲಭವಾದ ಪರಿಹಾರ ಇದೆ ಎಂದು."

ಮೀನಾಕ್ಷಿ ತಲೆಯೆತ್ತಿ ಅಣ್ಣನನ್ನು ನೋಡುತ್ತಾಳೆ. ಅಲ್ಲಿ ಒಬ್ಬ ಹಿತೈಷಿಯಾದ ಅಣ್ಣನ ವ್ಯಾಕುಲತೆಯೇ ಕಾಣುತ್ತೆ ಮೀನಾಕ್ಷಿಗೆ ಆಶ್ಚರ್ಯವಾಗುತ್ತೆ ಇದುವರೆಗೂ ಅವಳು ತನ್ನ ಅಣ್ಣನನ್ನು 'ಹೃದಯಹೀನ'ನೆಂದೇ ತಿಳಿದು ಬಂದಿದ್ದಳು.

ಅಣ್ಣನಿಗೆ ಪರಿವಾರದ ಯಾರಲ್ಲಿಯೂ ಯಾವುದೇ ತರಹದ ಬಂಧವೂ ಇಲ್ಲವೆಂದೇ ತಿಳಿದಿದ್ದಳು. ಆದರೆ ಇಂದು ಅಣ್ಣ ತನ್ನ ಚಿಕ್ಕ ತಂಗಿಯ ಬಗ್ಗೆ ವ್ಯಾಕುಲಗೊಳ್ಳುತ್ತಿದ್ದಾನೆ. ಬಹುಶಃ ಹೀಗೆ ಬಂಧುವಿಲ್ಲದವನಂತೆ ಇರುವುದಕ್ಕೆ ಈ ಸಂಸಾರದ ಪರಿಸ್ಥಿತಿಯೇ ಕಾರಣವಾಗಿರಬಹುದು. ಅಮ್ಮನು ಯಾವಾಗಲೂ ತನ್ನ ಕಲ್ಪನೆಯ ಸ್ವರ್ಗದ ಸಿಂಹಾಸನದಲ್ಲಿ ಕುಳಿತಿರುತ್ತಾಳೆ. ಅಪ್ಪ ತನ್ನ ಅಹಂಕಾರದ ದಂತದ ಗೋಪುರದಲ್ಲಿ ಕುಳಿತಿರುತ್ತಾರೆ. ನಾವುಗಳು ಅ-ವಾಂಛಿತರು, ಬೇಡದವರುಗಳು. ಒಬ್ಬೊಬ್ಬರೂ ಒಂದೊಂದು ತೊಡಕು! ಅದಕ್ಕೆ ನಾವೂ ಸ್ವಾರ್ಥಿಗಳಾಗಿಯೇ ಬೆಳೆದಿದ್ದೇವೆ . ನಾವುಗಳು ಅಣ್ಣ-ತಂಗಿಯರು ಒಬ್ಬರನ್ನೊಬ್ಬರು ಪ್ರೀತಿಸಲು ಕಲಿಯದೇ, ಟೀಕಿಸಲು ಕಲಿತಿದ್ದೇವೆ. ಅಂತಹವರಲ್ಲೂ ಅಣ್ಣ ತನಗಾಗಿ ಉದ್ವಿಗ್ನನಾಗುತ್ತಿದ್ದಾನೆ. ವ್ಯಥೆ ಪಡುತ್ತಿದ್ದಾನೆ!

ಮೀನಾಕ್ಷಿಯ ಕಣ್ಣಂಚಿನಲ್ಲಿ ನೀರು ಹನಿಗಟ್ಟಿತು. ತಲೆ ತಗ್ಗಿಸಿ ಹೇಳಿದಳು, "ಅಕ್ಕ ಮಾತ್ರವೇ ಅಲ್ಲ, ಅಮ್ಮನೂ ಅದೇ ತರಹ ಪ್ರತೀಕಾರದ ಆದೇಶವನ್ನು ಕೊಡಲು ಬಂದಿದ್ದರು. ಅಣ್ಣಾ ಆದರೆ ಒಬ್ಬರಿಗ ಸುಲಭವಾಗಿರುವುದು, ಇನ್ನೊಬ್ಬರಿಗೆ ಸುಲಭವಲ್ಲದೆಯೂ ಇರಬಹುದಲ್ಲವೇ?

ಅಪರಾಧವನ್ನು ಮಾಡಿಬಿಟ್ಟು ದಂಡನೆಯನ್ನು ಮಾತ್ರ ತಪ್ಪಿಸಿಕೊಳ್ಳುವುದು ಎಂಬುದನ್ನು ನನ್ನಿಂದ ಯೋಚಿಸುವುದಕ್ಕೂ ಆಗುವುದಿಲ್ಲ. ಆದರೆ ನಿಮ್ಮನ್ನೆಲ್ಲಾ ಬಹಳ ದಿನಗಳು ಹೀಗೆ ಕಷ್ಟದಲ್ಲಿಡುವುದಿಲ್ಲ-"

ಗಾಬರಿಯ ಧ್ವನಿಯಲ್ಲಿ ಕೇಳಿದ ನೀಲಾಕ್ಷ, "ಹಾಗೆಂದರೆ? ಏನರ್ಥ? ಏನು ಮಾಡುತ್ತೀಯಾ? 'ಸುಯಿಸಾಯಿಡ್' ಮಾಡಿಕೊಳ್ಳುತ್ತೀಯಾ?"

ತಲೆಯೆತ್ತಿ ಮೃದುವಾಗಿ ನಕ್ಕಳು ಮೀನಾಕ್ಷಿ, "ಇಲ್ಲಣ್ಣಾ, ಅದೂ ದಂಡನೆಯನ್ನು ತಪ್ಪಿಸಿಕೊಂಡು ಓಡಿದಂತೆಯೇ ಅಲ್ಲವೇ? ಹಾಗಾಗಿದ್ದರೆ ಇಷ್ಟು ದಿನವೂ ಏಕೆ ಇಷ್ಟೊಂದು ಯೋಚಿಸಿ ಯೋಚಿಸಿ ಸಾಯುತ್ತಿದ್ದೇನೆ?"

ನೀಲಾಕ್ಷ ಶತಪಥ ಮಾಡುತ್ತಾ ಕೋಣೆಯನ್ನು ಇನ್ನೊಂದು ಸುತ್ತು ಸುತ್ತಿ ಬಂದು ಮೀನಾಕ್ಷಿಯ ಹತ್ತಿರ ಬಂದು ನಿಂತುಕೊಂಡು, "ನನಗೆ ಗೊತ್ತಿಲ್ಲ, ನೀನು ಏನು ಯೋಚಿಸಿ ಯಾವ ತೀರ್ಮಾನಕ್ಕೆ ಬರುತ್ತೀಯೋ ಏನೋ! ನನಗಂತೂ ಸುಮ್ಮಸುಮ್ಮನೆ ಹೀಗೆ ಕಷ್ಟ ಪಡುವುದರ ಅರ್ಥವೇ ಗೊತ್ತಾಗುತ್ತಿಲ್ಲ. ತುಚ್ಛವಾದ ಒಂದು 'ಸೆಂಟಿಮೆಂಟ್' ನಿಂದ ಜೀವನವನ್ನೇ ಒಂದು ತೊಡಕಾಗಿಸಿಕೊಳ್ಳುವುದರಲ್ಲಿ ಯಾವ ಯುಕ್ತಿ ಇದೆಯೋ ಆ ದೇವರೇ ಬಲ್ಲ. ಹೋಗಲಿ- ಏನು ಯೋಚಿಸುತ್ತೀಯೊ, ತೀರ್ಮಾನ ಮಾಡುತ್ತೀಯೋ ಅಂತೂ ದುಡ್ಡು-ಗಿಡ್ಡು ಬೇಕಾದರೆ, ಕೇಳಲು ನಾಚಿಕೊಳ್ಳಬೇಡ" ಎಂದು ಹೇಳಿ ಕೋಣೆಯಿಂದ ಹೊರಗೆ ಹೋದ.

ಹೋಗುತ್ತಿರುವ ಅಣ್ಣನನ್ನೇ ನೋಡುತ್ತಾ ಮೀನಾಕ್ಷಿ ಯೋಚಿಸಿದಳು, ತನಗಾಗಿ ಅಣ್ಣನ ಹೃದಯದಲ್ಲಿ ಇಷ್ಟೊಂದು ಮಮತೆ ಇದ್ದುದನ್ನು ಎಂದಾದರೂ ಅವಳು

ತಿಳಿದಿದ್ದಳೇ? ನೀಲಾಕ್ಷನಿಗೆ ತಾನೆ ಆಗಲಿ ತಿಳಿದಿತ್ತೆ? ಅವನು ಯಾವಾಗಲೂ ತನ್ನ ಮನಸ್ಸಿಗೆ ಹೇಳುತ್ತಿದ್ದ, 'ಈ ಸಂಸಾರದಲ್ಲಿ ಯಾರೂ ನನ್ನವರಲ್ಲ, ನಾನು ಯಾರಿಗೂ ಸೇರಿದವನಲ್ಲ' ಎಂದು, ಆದರೆ ಈಗ ಚಿಕ್ಕ ತಂಗಿಗಾಗಿ ಮನಸ್ಸು ವ್ಯಥೆ ಪಡುತ್ತಿದೆ, ಅವನು ತನ್ನ 'ಚೆಕ್–ಬುಕ್'ನ್ನೇ ಅವಳ ಕೈಯಲ್ಲಿಡಲು ಸಿದ್ಧನಾಗಿದ್ದಾನೆ!

ವಿಜಯಾ ಮೆಟ್ಟಲು ಹತ್ತಿ ಮೇಲೆ ಹೋಗುವಾಗೆಲ್ಲಾ, ಆ ಪರದೆ ಇಳಿಬಿಟ್ಟಿರುವ ಕೋಣೆಯ ಕಡೆ ನೋಡಲಾಗುತ್ತಿಲ್ಲ. ಮನಸ್ಸು ಕಳವಳಗೊಳ್ಳುತ್ತದೆ. ಆಕೆಗೆ ಯಾವಾಗಲೂ ಅನಿಸುತ್ತೆ, ಒಬ್ಬ ಮಗುವಿನಂತಹ ಮನುಷ್ಯ, ತಿನ್ನುತ್ತಿದ್ದ, ಬಿದ್ದಿರುತ್ತಿದ್ದನೆಂದು ವಿಜಯಾ ಆತನನ್ನು ವಿಷದಂತೆ ನೋಡುತಿದ್ದರು. ಆತನ ಉಚ್ಚಾಟನೆಗಾಗಿ ದೇವರ ಹತ್ತಿರ, ವ್ರತ–ಪರಕೆಗಳನ್ನು ಮಾಡುತ್ತಿದ್ದರು. ಅದೊಂದು ಕೋಣೆ ದಂಡವಾಗುತ್ತಿದೆಯೆಂದು ಆಕೆಗೆ ಕೋಪವಿತ್ತು. ಆದರೆ ಈಗ ಯಾಕೆ ಹೋಗಿ ಅಲ್ಲಿಯ ಹಳೆಯ ನೆನಪಿನ ಕುರುಹುಗಳನ್ನೆಲ್ಲಾ ತೊಡೆದುಹಾಕಿ ಆ ಕೋಣೆಯನ್ನು ಉಪಯೋಗಿಸೋಣವೆಂದು ತೋರುತ್ತಿಲ್ಲವೇಕೆ? ಒಂದು ವೇಳೆ ಹೀಗೆಯೇ ಆಗುತ್ತೇನೋ!

ಸರೋಜಾಕ್ಷರ ಸಹೋದ್ಯೋಗಿ ಡಾ॥ ಮಜುಂದಾರ್ ಒಂದು ದಿನ ಸರೋಜಾಕ್ಷರ ಮನೆಯನ್ನು ಹುಡುಕಿಕೊಂಡು ಬಂದರು. ಹೌದು, ಮತ್ತೆ, ಹುಡುಕಿಕೊಂಡೇ! ಅದಲ್ಲದೆ ಬೇರೆ ದಾರಿ? ಸರೋಜಾಕ್ಷರು ತಮ್ಮ ಮಿತ್ರರನ್ನು ಎಂದಾದರೂ ತಮ್ಮ ಮನೆಗೆ ಕರೆದಿದ್ದಾರೆಯೇ? ಯಾವಾಗಲೂ ಇಲ್ಲ. ಮಗಳ, ಮಗನ ಮದುವೆಗಳಲ್ಲೂ ಇಲ್ಲ!

ತನ್ನ ಸಾಂಸಾರಿಕ ಜೀವನದ ಬಗ್ಗೆ ತನ್ನ ಕರ್ಮಕ್ಷೇತ್ರದಲ್ಲಿ ಯಾರಿಗೂ ಏನೂ ತಿಳಿಯದ ಹಾಗೆ ಅವರು ನೋಡಿಕೊಂಡಿದ್ದರು. ಯಾರಾದರೂ ಏನಾದರೂ ಕೇಳಿದರೂ ಅದಷ್ಟು ಸಂಕ್ಷೇಪವಾಗಿ ಉತ್ತರ ಕೊಡುತ್ತಿದ್ದರು.

ಆದ್ದರಿಂದ ಸಜ್ಜನ ಮಜುಂದಾರ್, ಅವರ ಮನೆಯನ್ನು ಹುಡುಕಿಯೇ ಕಂಡುಹಿಡಿಯಬೇಕಾಯಿತು.

ಕಾಲೇಜು ಆಡಳಿತದ ದೂತರಾಗಿ ಬಂದು, ಅಧಿಕಾರಿಗಳು ಸರೋಜಾಕ್ಷರನ್ನು ತಿರುಗಿ ಕರೆಯುವುದಾಗಿ ತಿಳಿಸಿದರು.

ಸರೋಜಾಕ್ಷರು. 'ನನ್ನದೇ ತಪ್ಪು, ತಿರುಗ ಸೇರಿಕೊಳ್ಳುತ್ತೇನೆ' ಎಂದು ಕೇಳಿದ ತಕ್ಷಣವೇ ಏಕೆ ಸೇರಿಸಿಕೊಳ್ಳಲಾಗಲಿಲ್ಲ ಎಂಬುದರ ಕಾರಣವನ್ನು ಮಜುಂದಾರ್ ವಿವರಿಸಿ ಹೇಳಿ, ಅನುತಾಪ ಸೂಚಿಸಿಬಿಟ್ಟು, ಈಗ ಬಂದು ಸೇರಿಕೊಳ್ಳುವಂತೆ ಕೋರಿದ್ದಾರೆ ಎಂದು ಹೇಳಿದರು.

ಸಮಾಚಾರವನ್ನು ಕೇಳಿ ಸರೋಜಾಕ್ಷರಿಗೆ ಸಂತೋಷವಾಯಿತೇ ಅಥವಾ ಬೇಜಾರಾಯಿತೇ ಗೊತ್ತಾಗಲಿಲ್ಲ.

ಹಚ್ಚಿಕೊಳ್ಳದವರಂತೆ ಕೇಳಿದರು. "ಇದಾರಲ್ಲಾ ಅಲ್ಲೇ ಒಬ್ಬರು?"

ಮಜುಂದಾರ್ ನಕ್ಕು ಹೇಳಿದರು. "ಕಳುಹಿಸುವುದು ಎಷ್ಟು ಹೊತ್ತು? ಎಲ್ಲರೂ

ಸೇರಿ ಒಂದು 'ನೋ-ಕಾನ್‌ಫಿಡೆನ್ಸ್' ಸೂಚನೆ ತಂದರೆ-?"

ಸರೋಜಾಕ್ಷರು ಅಚ್ಚರಿಯಿಂದ ಕೇಳಿದರು, "ಏಕೆ, ಏನು? ಅವರು ಪಾಠ ಹೇಳುವುದು ಹುಡುಗರಿಗೆ ಇಷ್ಟವಾಗುತ್ತಿಲ್ಲ."

"ನಾನು ಪಾಠಹೇಳುವುದು ಇಷ್ಟವಾಗುತ್ತಿತ್ತೇ?"

"ಏನಾಶ್ಚರ್ಯ! ಅದು ಕೇಳಬೇಕೇ?"

ಸರೋಜಾಕ್ಷರು ಎಂದರು, "ಹಾಗಾದರೆ ಯಾರಾದರೂ ಒಬ್ಬರಾದರೂ ನನ್ನ ಹತ್ತಿರ ಬಂದು ಹೇಳುತ್ತಿದ್ದರು."

ಮನೋಭಾವವನ್ನು ಮುಚ್ಚಿಡಲು ತಿಳಿಯದ ಮಜುಂದಾರ್ ವ್ಯಂಗ್ಯ ನಗು ನಕ್ಕು ಹೇಳಿದರು "ಬಂದು ಹೇಳುತ್ತಿದ್ದರೇ? ಆಯಿತು ಬಿಡಿ. ಅವರುಗಳ ಹತ್ತಿರ ನಾವು ಅಷ್ಟೊಂದು ಆಶಿಸುವುದು ಸರಿಯಿಲ್ಲ. ಸರೋಜ್ ಬಾಬು, ಯಾರ ಕ್ಲಾಸಿನಲ್ಲಿ ನರಿ ಕೂಗುಗಳು ಕೇಳಿಸುವುದಿಲ್ಲವೋ ಅವರನ್ನು ಕಂಡರೆ, ಕಿಂಚಿತ್ ಇಷ್ಟಪಡುತ್ತಾರೆ ಎಂದರ್ಥ. ಸಭ್ಯ, ವಿನಯಿಯಾಗಿರುವ ಹುಡುಗರೂ ಇದಾರೆ. ಆದರೆ ವ್ಯಂಗ್ಯ, ಗೇಲಿಗಳಿಗೆ ಆಳಾಗಿ ಅವರುಗಳೂ 'ಮಸ್ತಾನ್'ಗಳಾಗಿಬಿಡುತ್ತಾರೆ. ನೀವು ಇದನ್ನೆಲ್ಲಾ ಗಮನಿಸುವವರಲ್ಲವಾದ್ದರಿಂದ ನೀವು ನೋಡಿಲ್ಲ. ಇಲ್ಲದಿದ್ದರೆ, ಕೇಳಿದ್ದೀರಾ ಈಗಿನ ಹುಡುಗರು ಬಳಸುವ ಭಾಷೆಯನ್ನು? ಸ್ನೇಹಿತರುಗಳು ಮಾತಾಡುತ್ತಿರುತ್ತಾರೆ, ಸ್ನೇಹದ ಸಂಬೋಧನೆಯಾಗಿ ಮಾತುಮಾತಿಗೂ ಹೇಳುವುದು, ಬ್ಲಡಿ, ರಾಸ್ಕಲ್ ಎಂದು. ಕಿವಿಗೆ ಬಿದ್ದರೆ ನಮಗೆ ಉರಿಯುತ್ತೆ. ಇದನ್ನೆಲ್ಲಾ ಕೀಳು ತರಹ ಮಾತೆಂದು ನಾವು ತಿಳಿದಿದ್ದೆವು. ಈಗೆಲ್ಲಾ ಅದೇ ದೊಡ್ಡಸ್ತಿಕೆಯಂತೆ! ಬರೀ ಒಂದು ನಮೂನೆಯೇ ನಾನು ನಿಮಗೆ ಹೇಳಿದ್ದು. ಎಲ್ಲಾ ಮಾತೂ ಕೇಳಲು ನಿಮ್ಮ ನರಗಳಿಗೆ ಶಕ್ತಿ ಇಲ್ಲ, ಅದಕ್ಕೆ ಹೇಳಲಿಲ್ಲ." ಮಾತು ನಿಲ್ಲಿಸಿ ಒಂದು ದೀರ್ಘ ಶ್ವಾಸವನ್ನು ಎಳೆದುಕೊಂಡರು ಮಜುಂದಾರ್. ಆಮೇಲೆ ತಿರುಗಿ ಹೇಳಲಾರಂಭಿಸಿದರು, "ಕೇಳಿದ್ದೇನೆ, ಶಿಕ್ಷಣವೇ ಸು-ರುಚಿಯ ವಾಹನವೆಂದು. ಆದರೆ ನಮ್ಮ ದೇಶದಲ್ಲಿ ಶಿಕ್ಷಣ ಪ್ರಸಾರವಾದ ಹಾಗೆಲ್ಲಾ ರುಚಿಯ ಗೋಜೇ ಇಲ್ಲದಂತಾಗುತ್ತಿದೆ. ಉಚ್ಚ ಶಿಕ್ಷಣದ ಕೇಂದ್ರಗಳಾಗಿರುವ ಕಾಲೇಜುಗಳನ್ನೇ ಇದರ ಅಳತೆಗೋಲಾಗಿ ಕೊಳ್ಳಬೇಕಲ್ಲವೇ? ನೋಡಿ, ಎಲ್ಲಾ ಕಡೆಯೂ ನೋಡಿ, ವಿದ್ಯಾರ್ಥಿ ಸಮಾಜದಲ್ಲಿ ಈಗ ಸಾರಾಯಿ ಕುಡಿಯದೆ ಇರುವುದು 'ಗಮ್ಮಾರತನ'! ಸಭ್ಯ ಭಾಷೆಯಲ್ಲಿ ಮಾತಾಡುವುದು 'ಅಜ್ಜನ' ಮಾತು! ಒಂದು, ನಾಲ್ಕೈದು ಗರ್ಲ್ ಫ್ರೆಂಡ್ಸ್'ಗಳಿಲ್ಲದಿದ್ದರೆ 'ದಡ್ಡತನ'! ಇಂತಹ ಹುಡುಗರೇ ಈ ಉಚ್ಚ ಶಿಕ್ಷಣದ ಬಲದಿಂದ ದೇಶದ ಕಚೇರಿ, ಕಚೇರಿಗಳಲ್ಲೂ ಹರಡಿಕೊಳ್ಳುತ್ತಾರೆ. ಉಚ್ಚ ಹುದ್ದೆಗಳಲ್ಲಿ ಹೋಗಿ ಕೂತುಕೊಳ್ಳುತ್ತಾರೆ, ಮತ್ತು ನಾವು ಮೂರ್ಖರಂತೆ ಕೂತುಕೊಂಡು ಯೋಚಿಸುತ್ತೇವೆ, ದೇಶದ ಸಮಸ್ಯೆ ಹೇಗೆ ಬಗೆ ಹರಿಯುತ್ತೆ ಎಂದು!"

ಸರೋಜಾಕ್ಷರು ಎದ್ದು ನೆಟ್ಟಗೆ ಕುಳಿತುಕೊಂಡರು, ಹೇಳಿದರು, "ಇಲ್ಲ, ಬರೀ ಅದನ್ನು ಮಾತ್ರ ಯೋಚಿಸಲು ಕೂತುಕೊಳ್ಳುವುದಿಲ್ಲ. ಯೋಚಿಸುತ್ತೇವೆ, ಯಾವ ಪದ್ಧತಿಯಲ್ಲಿ ಅರ್ಥದ

ಪುಸ್ತಕ ಬರೆದರೆ, ಹೆಚ್ಚು 'ಅರ್ಥ' ಗಳಿಸಬಹುದು. ಮತ್ತು ಯಾವ ಕ್ಲಾಸಿಗೆ ಹೇಗೆ ಚಕ್ಕರ್ ಕೊಟ್ಟು, 'ಪ್ರೈವೇಟ್ ಟ್ಯೂಷನ್ನಿ' ಗಾಗಿ ಸಮಯವನ್ನು ಒದಗಿಸಿಕೊಳ್ಳುವುದಕ್ಕಾಗುತ್ತೆ, ಎಂದು" ಮಜುಂದಾರರು ಈ 'ಪೆಟ್ಟು' ಗೆ ತಯಾರಾಗಿರಲಿಲ್ಲ. ಉತ್ತೇಜನಗೊಂಡು ಕೇಳಿದರು, "ಹಾಗಾದರೆ ನೀವು ಅವರುಗಳಿಗೇ ಸಮರ್ಥನೆಯನ್ನು ತೋರಿಸುತ್ತೀರಾ?"

"ತಪ್ಪು ತಿಳಿಯುತ್ತಿದ್ದೀರಿ ಮಜುಂದಾರ್ ಬಾಬು, ನಾನು ಯಾರನ್ನೂ ಸಮರ್ಥಿಸುವುದಿಲ್ಲ. ನಡೆಯುವುದನ್ನು ಹೇಳುತ್ತಿದ್ದೇನೆ."

ಮಜುಂದಾರರು ಕೆಲವು 'ಅರ್ಥದ' ಪುಸ್ತಕಗಳನ್ನೂ ಬರೆದಿದ್ದಾರೆ ಮತ್ತು ಪ್ರೈವೇಟ್ ಟ್ಯೂಷನ್ನೂ ಇಟ್ಟುಕೊಂಡಿದ್ದಾರೆ. ಅದಕ್ಕೇ ಈ ಮಾತು ಅವರನ್ನು ಚುಚ್ಚುತ್ತೆ. ಮನೆ ಹುಡುಕಿಕೊಂಡು ಬಂದು ಒಳ್ಳೆಯದನ್ನು ಮಾಡಲು ಬಂದವರಿಗೆ ಈ ತರಹದ ಸತ್ಕಾರವೇ?

ಮಜುಂದಾರರು ಹಾಗೆಯೇ ಉತ್ತೇಜನೆಗೊಂಡೇ ಹೇಳುತ್ತಾರೆ. "ಬರೀ, ನಡೆಯುವುದನ್ನು ಮಾತ್ರ ಹೇಳಿದಿರಾ? ಉದ್ದೇಶದಿಂದಲೇ ಹೇಳುತ್ತಿದ್ದೀರಿ. ಅದರೆ ನಿಮಗೆ ಒಳ್ಳೆಯದನ್ನು ಮಾಡುವುದಕ್ಕೇ ನಾನು ಬಂದೆ, ತಿಳಿದುಕೊಳ್ಳಿ."

ಸರೋಜಾಕ್ಷರು ಮೆಲ್ಲಗೆ ಹೇಳಿದರು. "ನೀವು ಉತ್ತೇಜನಗೊಳ್ಳಬೇಡಿ ಮಜುಂದಾರ್ ಬಾಬು! ಸ್ವಲ್ಪ ಯೋಚನೆಮಾಡಿ ನೋಡಿ. ನಮಗೆ ಈಗ ಆತ್ಮ ಸಂಶೋಧನೆಯ ಸಮಯ ಬಂದಿಲ್ಲವೇ? ಕೇವಲ ಹುಡುಗರ ಮೇಲೆ ತಪ್ಪನ್ನು ಹಾಕಿಬಿಟ್ಟು ನಿಶ್ಚಿಂತೆಯಿಂದ ಕುಳಿತು ಟೀಕಿಸುತ್ತಿದ್ದರೆ ನಮ್ಮ ಕರ್ತವ್ಯ ಮುಗಿಯಿತೇ?'

ಮಜುಂದಾರ್ ಉಷ್ಣತೆಯಿಂದಲೇ ನುಡಿದರು. "ಇದೆಲ್ಲಾ ಕೇಳುವುದಕ್ಕೆ ಚೆನ್ನ ಅಷ್ಟೇ. ಸಿನಿಮಾ ನಾಟಕಗಳಲ್ಲಿ ಗಟ್ಟಿಯಾಗಿ ಹೇಳಿದರೆ ಷಹಬಾಸ್ ಗಿರಿ ಪಡೆಯಬಹುದು. ಆದರೆ ಕಣ್ಣು ತೆರೆದು ಸ್ವಲ್ಪ ನೋಡಿದರೆ ನಮ್ಮ ಈ ಕಾಲದ ಹುಡುಗರು ಹೇಗಿದ್ದಾರೆಂಬುದು ಗೊತ್ತಾಗುತ್ತೆ. ಬೇರೇನೂ ಬೇಡ. ಈ ವರ್ಷಾಂತರದ ದಸರಾ (ದುರ್ಗಾ) ಪೂಜೆಗಳನ್ನು ನೋಡಿದರೆಯೇ ಗೊತ್ತಾಗುತ್ತೆ. ಎಲ್ಲರೂ ಒಂದೇಟಿಗೆ ಭಕ್ತ ಹನುಮಾನಾಗಳಾಗಿ ಬಿಟ್ಟಿದ್ದಾರೆ. ಪೂಜೆ ಮಾಡದಿದ್ದರೆ ಪ್ರಾಣ ಹೋಗುತ್ತೆ ಎಂಬಂತೆ! ಆದರೆ ಇದರ ಒಳಗುಟ್ಟು ಏನೆಂದು ಯೋಚಿಸಿದ್ದೀರಾ? ಈ ಸಾವಿರಾರು ಪೂಜೆಗಳಿಗೆ ದುಡ್ಡು ಎಲ್ಲಿಂದ ಬರುತ್ತೆ? ಹೆದರಿಸಿ ಸುಲಿಗೆ! ಬೆದರಿಸಿ ಜನರಿಂದ ಚಂದಾ ವಸೂಲಿ ಮಾಡಿ ಪೂಜೆಯ ನೆಪದಲ್ಲಿ, ಇಷ್ಟ ಬಂದ ಹಾಗೆ ಮಜಾ ಮಾಡಬೇಕು– ಇದೇ ಲಕ್ಷ್ಯ. ಒಂದೊಂದು ಪೂಜೆಯ ಪೆಂಡಾಲನ್ನೂ ನೋಡಿದರೆ ದೇಶದಲ್ಲಿ ದುಃಖ ಇರುವಂತಿದೆಯೇ? ದೈನ್ಯ. ಸಮಸ್ಯೆಗಳಿರುವಂತಿದೆಯೇ?"

ಮಜುಂದಾರರು ಬಹುಶಃ ಇಂತಹ ಒಂದು ಸುಲಿಗೆಯ ಬಲಿಪಶುವಾಗಿದ್ದಿರಬೇಕು. ಭಾರಿ ಅಂಕೆಯ ಚಂದಾ ತೆತ್ತಿರಬೇಕು. ಅದಕ್ಕೆ ಅವರಿಗೆ ಇನ್ನೂ ಕೋಪ ಇಮ್ಮಡಿಸುತ್ತೆ. ಹಾಗೆಯೇ ಉತ್ತೇಜನೆಗೊಂಡ ಕಂಠದಿಂದಲೇ ಹೇಳಿಕೊಂಡು ಹೋಗುತ್ತಾರೆ. "ಉಲ್ಲಾಸ, ಆಡಂಬರ ಅಷ್ಟೇ. ಹೃದಯ ಎಂದು ಒಂದು ವಸ್ತುವೇ ಇಲ್ಲ. ಚಿಂತೆ ಇಲ್ಲ. ಮಾನವೀಯತೆ

ಎಂಬುದೂ ಇಲ್ಲ. ಹಾಗಿದ್ದಿದ್ದರೆ ಬಂಗಾಳದ ಒಂದು ಪ್ರಾಂತ್ಯದಲ್ಲಿ ಜನ ಸತ್ತು ಸ್ಮಶಾನವಾಗುತ್ತಿರುವಾಗ, ಜನರಿಗೆ ಸ್ಫೂರ್ತಿಯಿಂದ ಕುಣಿಯಲು ಹೇಗೆ ಮನಸ್ಸು ಬರುತ್ತೆ? ಈ ಯುವಜನರುಗಳಿಗೆ, ಸಹಾನುಭೂತಿ ಇರಬೇಡವೇ? ಸಹಾಯ ನೀಡುವ ಬುದ್ಧಿ ಇರಬೇಡವೇ? ಪ್ರೇರಣೆ ಇರಬೇಡವೇ? ಪ್ರೇರಣೆ ಬರುತ್ತೆ ಕೇವಲ ತರುಣ-ತರುಣಿಯರು ಸೇರಿ ಹಾಡಿಕೊಂಡು ಲಾರಿಗಳಲ್ಲಿ ಹತ್ತಿಹೋಗಿ ದುಡ್ಡು-ಶೇಖರಣೆ ಮಾಡುವಾಗ ಮಾತ್ರ! ಆಮೇಲೆ ಅದರ ಲೆಕ್ಕ-ಪತ್ರ ಯಾರೂ ಏನೂ ಕೇಳುವ ಹಾಗಿಲ್ಲ!"

ಸರೋಜಾಕ್ಷರು ಮೃದು ನಕ್ಕು ಹೇಳಿದರು, "ಅದನ್ನೂ ಅವರುಗಳು ನಾಲ್ಕು ಕಡೆಗಳಲ್ಲಿ ನೋಡುತ್ತಿರುವುದನ್ನೇ ಕಲಿಯುತ್ತಿದ್ದಾರೆ ಎನ್ನಬಹುದು."

ಮಜುಂದಾರ್ ಹೇಳಿದರು, "ಓಹೋ, ಗೊತ್ತಾಯಿತು. ಈ 'ಘೆರಾವ್' ಆದ ಮೇಲೆ ನೀವು ಅವರಿಗೆ ಹೆದರುತ್ತಿದ್ದೀರಿ. ಆದರೆ ನಾನು ಅದನ್ನು ಸಮರ್ಥಿಸುವುದಿಲ್ಲ. ಒಂದು ನೂರು ಸಲ ಘೆರಾವ್ ಮಾಡಿದರೂ, ಇನ್ನೂರು ಬಾರಿ ಹೇಳುತ್ತೇನೆ, ನಮ್ಮ ಮುಂದಿನ 'ಜೆನರೇಷನ್' ಖಂಡಿತವಾಗಿಯೂ ಶುದ್ಧ ಹುಂಡರುಗಳು. ನೀವು ಅವರುಗಳ ಪರವಾಗಿ ಹೇಳುವುದರಿಂದ ಕೇಳುತ್ತೇನೆ. ಮನೆಯಲ್ಲಿ ತಂದೆ ಖಾಯಿಲೆ ಬಿದ್ದಿರುವಾಗ ನೀವು ಪೂಜೆ ಮಂಟಪದಲ್ಲಿ ಹೋಗಿ ಮೋಜು ಉಡಾಯಿಸುತ್ತಿದ್ದಿರಾ? ನನ್ನಿಂದ ಅದು ಯೋಚಿಸುವುದಕ್ಕೆ ಆಗುವುದಿಲ್ಲ. ನನ್ನ ಚಿಕ್ಕ ವಯಸ್ಸಿನಲ್ಲಿ ಮನೆಯಲ್ಲಿ ಯಾರದಾದರೂ ಸಖತ್ ಖಾಯಿಲೆ ಇರುವಾಗ ಗಟ್ಟಿಯಾಗಿ ನಗುವುದಕ್ಕಾಗುತ್ತಿರಲಿಲ್ಲ. ಆದರೆ ಈಗಿನ ಹುಡುಗರನ್ನು ಬಿಡಿ. ಹುಡುಗಿಯರೂ ಕೂಡ ಹಾಗೆಯೇ. ಇದೇ ನೋಡಿ ನಮ್ಮ ಎದುರು ಮನೆಯವರಿಗೆ ಸೀರಿಯಸ್ಸಾಗಿದೆ ಖಾಯಿಲೆ ಮನೆಯಲ್ಲಿ ಡಾಕ್ಟರುಗಳು, ಸ್ಪೆಷಲಿಸ್ಟುಗಳು ತುಂಬಿದ್ದಾರೆ. ಅವರ ಹದಿನಾಲ್ಕು-ಹದಿನೈದು ವರ್ಷದ ಧಾಂಡಿಗ ಹುಡುಗಿ, ಪೂಜಾ ಪಂಡಾಲಿನಲ್ಲಿ ಹುಡುಗಿ-ಹುಡುಗರುಗಳ ಜೊತೆ ಸೇರಿಕೊಂಡು ಓ ಓ ಎಂದು ಕುಣಿದಾಡುತ್ತಿದೆ.- ಕೇಳಿದೆ ಅಪ್ಪಾ ಹೇಗಿದ್ದಾರೆ' ಎಂದು. ತಕ್ಷಣ ಮುಖದಲ್ಲಿ ದುಃಖಭಾವ ಬರೆಸಿಕೊಂಡು. 'ಅಪ್ಪನಿಗೆ ಈವತ್ತು ಬಹಳ ಸೀರಿಯಸ್ಸಾಗಿದೆ' ಎನ್ನುತ್ತೆ! ನೋಡಿಕೊಳ್ಳಿ, 'ಬಹಳ ಸೀರಿಯಸ್ಸಾಗಿದೆ' ಅನ್ನುವಷ್ಟು ಜ್ಞಾನ ಇದೆ. ಆದರೆ ಮನಸ್ಸಿನಲ್ಲಿ ಒಂದಿಷ್ಟು ಮಮತೆ ಇಲ್ಲ, ಭಯ ಇಲ್ಲ, ಯಾರಾದರೂ ನೋಡಿದರೆ ಏನೆಂದಾರು ಎಂಬುವ ಭಯವಿಲ್ಲ. ಈಗಿನ ಕಾಲದ ಹುಡುಗರ ನಡತೆ, ಪರಿವಾರದಲ್ಲಿ ಬಂಧನ ಎನ್ನುವುದೇ ಇಲ್ಲ."

ಸರೋಜಾಕ್ಷರ ಮನಸ್ಸಿನ ಕಣ್ಣಿಗೆ ಏನು ಕಾಣುತ್ತಿದೆ!?

ಅವರದೇ ಪರಿವಾರದ ಸದಸ್ಯರುಗಳ ನಡತೆಯೇ? ಯಾರಿಗೆ ಗೊತ್ತು?

ಆದರೆ ಅವರ ಉತ್ತರ ಮೃದುವಾಗಿ ಹೊರಬಂತು. "ಅದಕ್ಕೂ ನಾವುಗಳೇ ಜವಾಬ್ದಾರರು, ಮಜುಂದಾರ್ ಬಾಬು. ಈ ಕೆಲ ತಿಂಗಳುಗಳ ಅವಕಾಶದಲ್ಲಿ ಕೂತು ಕೂತು ಅದನ್ನೇ ಯೋಚಿಸುತ್ತಿದ್ದೇನೆ. ಯೋಚಿಸಿ ಯೋಚಿಸಿ ನೋಡಿದರೆ ತೋರುತ್ತೆ ನಾವು ಬೇವನ್ನು ಪೈರು ಮಾಡಿ ಮಾವನ್ನು ಬಯಸುತ್ತಿದ್ದೇವೆ. ಯಾವ ಕರ್ತವ್ಯ ಬುದ್ಧಿ ಮತ್ತು

ಸಹಾನುಭೂತಿಯನ್ನು ನಾವು ಅವರಲ್ಲಿ ಎದುರುನೋಡುತ್ತೇವೋ, ಆ ಆದರ್ಶದ ನಿದರ್ಶನವಾಗಿ ನಾವು ಬಾಳಿ ತೋರಿಸುತ್ತಿಲ್ಲ. ನಾವು ಚಿಕ್ಕ ವಯಸ್ಸಿನಲ್ಲಿ ಹೇಗಿದ್ದೆವು ಎಂಬುದನ್ನು ಅವರು ನೋಡುವುದಕ್ಕಾಗುವುದಿಲ್ಲ. ಈಗ ಹೇಗಿದ್ದೇವೆಂದು ನೋಡುತ್ತಾರೆ. ನಾವು ನಮ್ಮ ನೆರೆಯವರಲ್ಲಿ ಸಹಾನುಭೂತಿಯಿಂದ ನಡೆದು ಕೊಳ್ಳುತ್ತಿದ್ದೇವೆಯೇ? ಇನ್ನೊಬ್ಬರ ಕಷ್ಟ-ಸುಖದ ವಿಚಾರವಾಗಿ ಯೋಚಿಸುತ್ತೇವೆಯೇ? ಅಷ್ಟೇಕೆ, ಒಂದೇ ಮನೆಯಲ್ಲಿ ಒಬ್ಬರನ್ನೊಬ್ಬರು ತಿಳಿದುಕೊಳ್ಳುತ್ತಿಲ್ಲ, ಒಬ್ಬರು ಇನ್ನೊಬ್ಬರ ಮನಸ್ಸನ್ನು ತೀವ್ರವಾಗಿ ನೋಯಿಸುತ್ತೇವೆ. ಅಂದಮೇಲೆ? –"

"ಅಂದಮೇಲ ಏನು? ನೀರಿನಲ್ಲಿ ಕೈ, ಕಾಲುಗಳನ್ನು ಹೊಡೆಯುವುದನ್ನು ಬಿಟ್ಟುಬಿಟ್ಟು ತೇಲಿಕೊಂಡು ಹೋಗಿ ಅಷ್ಟೇ" ಎಂದು ವ್ಯಂಗ್ಯವಾಗಿ ನುಡಿಯುತ್ತಾ ಮಜುಂದಾರ್ ಎದ್ದು ನಿಂತರು. "ಸರಿ ನಿಮ್ಮ ಇಷ್ಟ ಏನೆಂಬುದನ್ನು ಯೋಚಿಸಿ ತಿಳಿಸಿ" ಎಂದರು.

"ಯೋಚಿಸುವುದಕ್ಕೇನೂ ಇಲ್ಲ ಸ್ವಾಮಿ, ನಾನು ಹೂಗ್ಲಿ ಕಾಲೇಜಿಗೆ ಜಾಯಿನ್ ಆಗಬೇಕೆಂದು ತೀರ್ಮಾನಿಸಿದ್ದೇನೆ. ನಿಮ್ಮ ಸಹಾನುಭೂತಿಗಾಗಿ ಧನ್ಯವಾದಗಳು." ಎಂದರು ಸರೋಜಾಕ್ಷರು. ಡಾ॥ ಸುಜನ್ ಮಜುಂದಾರ್ ನಮಸ್ಕಾರ ಹೇಳಿ ಹೊರಬರುತ್ತಾ ಯೋಚಿಸಿದರು, "ಯಾವಾಗಲೂ ಚಿಂತೆಯಲ್ಲಿ ಮುಳುಗಿರುತ್ತೀಯಾ ಎಂದರೆ ಖಂಡಿತ ನಿನಗೆ ಎಲ್ಲೋ ತಲೆ ಕೆಟ್ಟುಹೋಗಿದೆ ಅಷ್ಟೇ!–"

ಹಾಗಯೇ ತಾನೆ ಜನ ಎಂದುಕೊಳ್ಳುವುದು.

ಯಾರಾದರೂ ಹೀಗೆ ಆತ್ಮ-ವಿಶ್ಲೇಷಣೆಕ್ಕೆ ಕುಳಿತರೆ. ಅಥವಾ ಕೂಲಂಕಷವಾಗಿ ವಿಚಾರಣೆಗೆ ಕೂಡದೆ, ಕೇವಲ ಅಭ್ಯಾಸದ ದೋಷದಿಂದ ನಡೆಯುವುದೇ ಸ್ವಾಭಾವಿಕ. ಮತ್ತು ಸ್ವಸ್ಥತೆಗೆ ನಿದರ್ಶನ!

*****

ಅಧ್ಯಾಯ ಹನ್ನೊಂದು

ಒಂದು ಗೋಣಿಚೀಲ ಪೂರ್ತಿ ಕಾಗದಗಳು ಹೈಮವತಿಯ ಮನೆಯಲ್ಲಿ ಬಿದ್ದಿತ್ತು. ಮಿಕ್ಕ ಗೋಣಿಚೀಲಗಳನ್ನು ಗಂಗೆಗೆ ಅರ್ಪಿಸಿಬಿಡಬೇಕೆಂದು ಯೋಚಿಸಿದರು ಶಾರದಾಪ್ರಸಾದ್. ಆದರೆ ಹಾಕುವುದಕ್ಕಾಗಲಿಲ್ಲ, ಗಂಗೆಯ ತೊರೆಯಲ್ಲಿ ಎಷ್ಟೊಂದು ಜನ! ಹೌರಾ ಬ್ರಿಡ್ಜ್ ಮೇಲೆ ಎಷ್ಟೊಂದು ಜನ! ಜನರ ಕಣ್ಣಿಗೆ ಹೆದರುತ್ತಾರೆ ಶಾರದಾಪ್ರಸಾದ್. ಹಾಗೆಯೇ ಮನಸ್ಸನ್ನು ಸಮಾಧಾನಪಡಿಸಿಕೊಳ್ಳುತ್ತಾರೆ ಶಾರದಾಪ್ರಸಾದ್. ಒಂದು ವೇಳೆ ತನ್ನ ಕೈಯಿಂದ ಹಾಕಲು ಮನಸ್ಸಿಗೆ ಅಳುಕುತ್ತಿದೆಯೇನೋ! ಆಮೇಲೆ ಯೋಚಿಸಿದರು, ಇಲ್ಲಿ ಕಲ್ಕತ್ತೆಯ ಗಂಗೆಯಲ್ಲಿ ಬೇಡ, ಇನ್ನೆಲ್ಲಾದರೂ, ಗೊತ್ತಿಲ್ಲದ ಯಾವುದಾದರೂ ನಿರ್ಜನವಾದ ತೊರೆಯಲ್ಲಿ ಮೆಲ್ಲಗೆ ಇಳಿಸಿ, 'ಅಮ್ಮಾ ಗಂಗೆ, ಇಡೀ ಜೀವನದ, ವ್ಯಥಾಸ್ವಪ್ನದ, ವ್ಯಥಾಶ್ರಮದ ಭಾರವನ್ನು ನಿನ್ನ ಮಡಿಲಲ್ಲೇ ಇಳಿಸಿಬಿಟ್ಟು ಹೋಗುತ್ತೇನೆ' ಎಂದು ಹೇಳೋಣ ಎಂದು–

ಇಳಿಸಿ, ಹೋಗುತ್ತೇನೆ?!

ಆದರೆ ಎಲ್ಲಿ ಹೋಗುವುದು? ಅದನ್ನು ಯೋಚಿಸಿಯೇ ಇರಲಿಲ್ಲ ಶಾರದಾಪ್ರಸಾದ್. ಎಲ್ಲಿ ಹೋಗುವುದು? ತನಗೆ ಗುರುತು, ಪರಿಚಯ ಕೂಡ ಇಲ್ಲದ ತನ್ನ ಅಣ್ಣನ ಮಕ್ಕಳ ಹತ್ತಿರ ಹೋಗುವುದೇ? ಆಮೇಲೆ, ಇದುವರೆಗೆ ಜ್ಞಾಪಕವೇ ಬಂದಿಲ್ಲದ ಒಂದು ವಿಷಯ ಜ್ಞಾಪಕಕ್ಕೆ ಬಂತು. ಅಂದೊಂದು ದಿನ ಮಾತಿನ ಮಧ್ಯೆ ಸರೋಜಾಕ್ಷರು ಒಂದು ಸಂದೇಹವನ್ನು ಎಬ್ಬಿಸಿದರಲ್ಲಾ, 'ಶಾರದಾಪ್ರಸಾದ್ ತನ್ನ ಜಮೀನನ್ನು ಮಾರಿದ್ದಾನೆ' ಎಂದು! ಅಂದು ಅವರು ಹೇಳಿದ್ದು ಈಗ ಜ್ಞಾಪಕಕ್ಕೆ ಬಂದಿತು. ತೋರಿತು, ಆ ಜಮೀನನ್ನು ಮಾರಬಹುದು, ಮಾರಿದರೆ ದುಡ್ಡು ಬರುತ್ತೆ. ಆದರೆ ಎಷ್ಟು ದುಡ್ಡು ಬರಬಹುದು? ಅದರಿಂದ ತನಗೆ ಬೇಕಾದ ಕಡೆ, ತನ್ನಿಷ್ಟದಂತೆ ಇರಬಹುದಲ್ಲವೇ?

ಆದರೆ ತನ್ನಿಷ್ಟ ತಾನೆ ಏನು?

ತನ್ನಿಷ್ಟದಂತೆ, ಎನ್ನುವುದರ ಒಂದು ಸ್ಪಷ್ಟವಾದ ರೂಪ ಏನು ಎಂದು ಶಾರದಾಪ್ರಸಾದ್‌ಗೆ ತಿಳಿಯಲಿಲ್ಲ. ಶಾರದಾ ಯಾವಾಗಲೂ ಅವರ ಪುಸ್ತಕಗಳ, ಬರಹಗಳಲ್ಲಿ ಮುಳುಗಿ ಇರುತ್ತಿದ್ದರು. ಈಗ ಹೇಗಿರುತ್ತೆ ಈ ಜೀವನ? ಇಡೀ ದಿವಸ ಅವರು ಏನು ಮಾಡುವುದು? ಹೇಗೆ ಸಮಯ ಕಳೆಯುವುದು ! ಒಮ್ಮೆ ಯೋಚಿಸಿದ್ದರಲ್ಲಿ ಕೆಲಸ ಮಾಡಬೇಕೆಂದು!

ಸಾಧಾರಣವಾಗಿ ಎಲ್ಲರೂ ಮಾಡುವುದನ್ನೇ ತಾನೂ ಮಾಡುವುದು, ಕೆಲಸವನ್ನು ತಾನೇ ಅವರ ಹುಡುಕುತ್ತಿದ್ದುದು, ಸರಿ ಹಾಗಾದರೆ, ಕೆಲಸ ಸಿಗುವವರಗೂ ಆ 'ಹುಡುಕುವ'

ಕೆಲಸವನ್ನೇ ಮಾಡುವುದು! ಆಮೇಲೆ ನಿಜವಾಗಿಯೂ ಕೆಲಸ ಸಿಕ್ಕಿದ ಮೇಲೆ–

ಆದರೆ, ಸಿಕ್ಕಿದರೆ ತಾನೆ ಏನು–?

ಯಾರಿಗೋಸ್ಕರ ಕೆಲಸ ಮಾಡಬೇಕು ಶಾರದಾಪ್ರಸಾದ್?

ಬರೀ ತಾನೊಬ್ಬ, ಒಂದು ಕಡೆ ಇದ್ದುಕೊಂಡು ಎರಡು ವೇಳೆ ಊಟ ಮಾಡುವುದಕ್ಕಾಗಿಯೇ? ಈ ಇರುವುದು, ಉಣ್ಣುವುದು, ಇದಕ್ಕೋಸ್ಕರ ಒಂದು ಸಮಯಕ್ಕೆ ಸರಿಯಾಗಿ ಏಳಬೇಕು, ಅಂಗಡಿಗೂ ಹೋಗಬೇಕು, ಆಮೇಲೇ ಷೇವ್ ಮಾಡಬೇಕು, ಸ್ನಾನ ಮಾಡಬೇಕು. ಬೆಳ್ಳಗಿನ ಬಟ್ಟೆಗಳನ್ನು ಹಾಕಿಕೊಂಡು, ದೊಂಬಿಯನ್ನು ತಳ್ಳಿಕೊಂಡು, ಹೋಗಿ ಬಸ್ಸನ್ನು ಹಿಡಿದು ಕೆಲಸದ ಸ್ಥಳಕ್ಕೆ ಹೋಗಿ ದಿನವೆಲ್ಲಾ ದುಡಿಯಬೇಕು.

ಆಮೇಲೆ?

ಆಮೇಲೆ, ಇನ್ನೇನು?

ಮನೆಗೆ ಹಿಂತಿರುಗಿ ಬಂದು, ತಿರುಗಿ ಮಾರ್ಕೆಟ್ಟಿಗೆ ಹೋಗಬೇಕು. ಅಡಿಗೆಗೆ ಇರುವ ಮನುಷ್ಯ ಒಳಗೆ ಬಂದು, ಶಾರದಾಪ್ರಸಾದರ ಪರ್ಸನ್ನು ಹೊಡೆದುಕೊಂಡು ಹೋಗಿಲ್ಲವೇ ಎಂದು ನೋಡಬೇಕು. ಹಾಗಿಲ್ಲದೆ ಅವನು, ಮನೆಗೆ ಬಂದ ತಕ್ಷಣ ತಿಂಡಿಯನ್ನು ರೆಡಿಯಾಗಿ ತಂದಿಟ್ಟರೆ ಕೃತಜ್ಞತೆಯಿಂದ ದೇವರಿಗೆ ಹತ್ತು ನಮಸ್ಕಾರಗಳನ್ನು ಹಾಕಿ, ಊಟ ಮಾಡಿಕೊಂಡು, ಮಾರನೇ ಬೆಳಗ್ಗೆ ಕೆಲಸಕ್ಕೆ ಹೋಗುವುದಕ್ಕಾಗಿ ಬೇಗ ನಿದ್ದೆಮಾಡಿ, ಏಳಬೇಕು. ಆದರೆ ಇದೆಲ್ಲಾ ಏಕೆ ಮಾಡಬೇಕು?

ಅದರ ಬದಲಿಗೆ ಏನು ಸಿಗುತ್ತೆ ಶಾರದಾಗೆ?

ಇನ್ನೇನು? ಅದೇ, ಆ ಇರುವುದು, ಉಣ್ಣುವುದು, ತಿರುಗಿ ತಿರುಗಿ ಅಲ್ಲೇ ಬಂದು ಮುಗಿಯುತ್ತೆ ಎಲ್ಲವೂ!

ಅದನ್ನು ಯೋಚಿಸಿ ಶಾರದಾಪ್ರಸಾದ್‌ಗೆ ನಗು ಬರುತ್ತೆ. ಬರೀ ಅಷ್ಟಕ್ಕಾಗಿಯೇ ಮನುಷ್ಯ ಇಷ್ಟೊಂದು ಒದ್ದಾಡುತ್ತಾನೆ? ಏನಾಶ್ಚರ್ಯ! ಎಷ್ಟು ವಿಚಿತ್ರವಾಗಿದೆ!

ಒಂದು ವೇಳೆ ತನಗೇ, ತನ್ನನ್ನು ಈ ರೀತಿ ಆಶ್ಚರ್ಯಕರವಾಗಿ ವಿಚಿತ್ರವಾಗಿ ತೋರುತ್ತೆ ಎಂದೇ, ಮನುಷ್ಯ ತನ್ನನ್ನು ಲೋಭವೆನ್ನುವ ರಥಕ್ಕೆ ಗಾಲಿಗಳಾಗಿಸಿಕೊಂಡಿದ್ದಾನೇನೋ! ಅರ್ಥ ಲೋಭ, ಪದವಿಯ ಲೋಭ, ನಾರೀಲೋಭ, ಉದ್ದೇಶ್ಯ ಸಿದ್ಧಿಯ ಲೋಭ, ಆತ್ಮ ಪ್ರಚಾರದ ಲೋಭ, ಈ ಲೋಭದ ರಥಗಳ ಚಕ್ರಗಳಾಗಿ ಜೀವನದ ಮುಳ್ಳುದಾರಿಯಲ್ಲಿ ತೆವಳುತ್ತಾ ಹೋಗಿ, ತಾನು ಸಂಧರ್ಭಗಳ ದಾಸನೆಂಬುದನ್ನು ಮರೆತಿರುತ್ತಾನೋ ಏನೋ! ಬರೀ ಇರುವುದು, ಮತ್ತು ತಿನ್ನುವುದಕ್ಕಾಗಿ ಬದುಕಿರುವುದು ಅರ್ಥಹೀನವಾಗಿ ತೋರುತ್ತಲ್ಲಾ!

ಈ ಅರ್ಥಹೀನ ಜೀವನಕ್ಕೆ ಒಂದು 'ಇತಿ' ಹಾಕಿಬಿಟ್ಟರೆ?

ಗಂಗೆಯಲ್ಲಿ ನೀರಿಗೇನೂ ಕಡಿಮೆಯಿಲ್ಲವಲ್ಲಾ!

ತಿರುಗಿ ತಾನೇ ಯೋಚಿಸಿ ಲಜ್ಜಿತನಾದ. ಛಿ.ಛಿ. ಎಂತಹ ಯೋಚನೆ ಮಾಡಿದೆ! ದೇವರ ಈ ರಾಜ್ಯದಲ್ಲಿ ಕೆಲಸಗಳಿಗೆ ಕಮ್ಮಿ ಏನಾದರೂ ಇದೆಯೇ?

* * *

ಮೀನಾಕ್ಷಿ ಯೋಚಿಸಿರಲಿಲ್ಲ, ದೇವರ ಈ ರಾಜ್ಯ–

ಅವಳು ಯೋಚಿಸುತ್ತಿದ್ದಳು, ಇಷ್ಟು ದೊಡ್ಡ ಪ್ರಪಂಚದಲ್ಲಿ ನಿರಾಲೋಚನೆಯಿಂದ, ತಲೆಯೆತ್ತಿಕೊಂಡು ಹಾಯಾಗಿ ಸುಧಾರಿಸಿಕೊಳ್ಳಲು ಒಂದು ಮೂಲೆ ಇಲ್ಲವೇ ನನ್ನ ಪಾಡಿಗೆ ಇರಲು?

ಆದರೆ ಅದು ಎಲ್ಲಿ ? ಏನೂ ತೋಚುವುದಿಲ್ಲ ಮೀನಾಕ್ಷಿಗೆ.

ಚಿಕ್ಕಮ್ಮನನ್ನು ಆಶ್ರಯಿಸಿ ಅಲ್ಲಿ ಹೋಗಿ ಇರುವುದೇ? ಕೆಲದಿನಗಳಿಗಾಗಿಯಾದರೂ? ಅವರು ವಿಶಾಲ ಹೃದಯವುಳ್ಳವರು. ಲೋಕನಿಂದೆಗೆ ಕಿವಿಗೊಡುವವರೂ ಅಲ್ಲ. ಆದರೆ ಅವರು ಈಗೆಲ್ಲಾ ಬರುವುದೇ ಇಲ್ಲ.

ಮಾವಯ್ಯ ಇದ್ದಿದ್ದರೆ ಅವರ ಕೈಯಲ್ಲು ಹೇಳಿಕಳುಹಿಸಬಹುದಾಗಿತ್ತು.

ಅವರ ಬಗ್ಗೆ ಯೋಚನೆ ಬಂದರೇನೇ ಕಣ್ಣೆಲ್ಲಾ ಬಿಸಿ ನೀರಿನಿಂದ ಉರಿಯುತ್ತೆ. ಯೋಚನೆ ಬರುತ್ತೆ, ಈ ಮಾವಯ್ಯನ ಮೇಲೆ ನನಗೆ ಇಷ್ಟು ಪಾಶವಿದ್ದುದು ನನಗೆ ತಿಳಿದಿರಲಿಲ್ಲವಲ್ಲಾ! ಅವರು ಮನಸ್ಸು ನೊಂದು ಹೊರಟುಹೋದರು ಎಂದು ನೆನೆಸಿಕೊಂಡರೆಯೇ ಮನಸ್ಸು ಕಸಿವಿಸಿಗೊಳ್ಳುತ್ತೆ. ಬೇಕೆಂದೇ ನಾವು ಅವರನ್ನು ಎಷ್ಟು ನೋಯಿಸಿದ್ದೇವೆ, ಗೇಲಿ ಮಾಡಿದ್ದೇವೆ, ಒಬ್ಬ ತಮಾಷೆಯ ಮನುಷ್ಯನಾಗಿಸಿ ನಡೆದುಕೊಂಡಿದ್ದೇವೆ!

ಆದರೆ ಈಗ ನೆನೆಸಿಕೊಂಡರೆ ಭೂಮಿ ಏಕೆ ನಮ್ಮನ್ನು ನುಂಗಿಕೊಳ್ಳಲಿಲ್ಲ ಎನ್ನುವಷ್ಟು ನಾಚಿಕೆಯಾಗುತ್ತೆ. ಎಷ್ಟು ಚಿಕ್ಕತನದಿಂದ ನಡೆದುಕೊಂಡಿದ್ದೇವೆ ಅವರೊಂದಿಗೆ! ಒಬ್ಬರನ್ನು ಕೀಳಾಗಿಸುವುದಕ್ಕೆ, ನಾವೇ ಎಷ್ಟು ಕೆಳಮಟ್ಟಕ್ಕೆ ಇಳಿಯುತ್ತೇವೆ ಎನ್ನುವುದು, ಆ ಎದುರಾಳಿ ಮನುಷ್ಯ ಹೊರಟು ಹೋದ ಮೇಲೆಯೇ ನಾವು ತಿಳಿದುಕೊಳ್ಳುತ್ತೇವೆ!

* * *

ಸುನಂದಾಳ ತಾಯಿ ಉದ್ವಿಗ್ನರಾಗಿದ್ದಾರೆ. ಈಗೆಲ್ಲಾ ಮಗಳು ಬರುವುದೇ ಇಲ್ಲ ಎಂಬುದೇ ಅವರ ವೇದನೆಗೆ ಕಾರಣ. ಗರ್ವಿ ಅಳಿಯ ಕೋಪಿಸಿಕೊಂಡುಬಿಟ್ಟಿಲ್ಲ ತಾನೇ? ಅಥವಾ ಮಗಳೇಯಾಗಲಿ ಕೋಪಿಸಿಕೊಂಡಿಲ್ಲ ತಾನೇ?

ಬಹಳ ಸರಳ ಸ್ವಭಾವದ ಹೆಂಗಸು ಆಕೆ. ಚಿಕ್ಕದೊಂದು ಗುಡಿಸಲೊಳಗಿನ ಜೀವನ ಆಕೆಯದು, ಅದರಲ್ಲೇ ಜೀವಮಾನವನ್ನು ಕಳೆದರು ಆಕೆ. ಆದರೆ ಅದಕ್ಕಾಗಿ ತಮ್ಮನ್ನು ಎಂದೂ ಕೀಳಾಗಿ ಭಾವಿಸಿಕೊಳ್ಳುವುದೂ ಇಲ್ಲ, ಅದಕ್ಕಾಗಿ ದೇವರನ್ನು ಶಪಿಸುವುದೂ ಇಲ್ಲ! ಆಕೆ, ದೇವರು ಕೊಟ್ಟಿರುವುದರಲ್ಲಿ ಸಂತುಷ್ಟರಾಗಿರಬೇಕು ಎಂಬುದನ್ನೇ ನಂಬಿದ್ದರು. ಮಗಳನ್ನು ಒಳ್ಳೆಯ ಕಡೆ ಮದುವೆ ಮಾಡಿಕೊಟ್ಟು ನಿಶ್ಚಿಂತೆಯಿಂದಿದ್ದರು ಅವರು. ಅಂತಹ ಹುಡುಗಿ ಈಗ ಹೇಗೆ ಹೇಗೆಯೋ ಬದಲಾಯಿಸಿ ಹೋಗಿದ್ದಾಳೆ. ಅದನ್ನು ಅವರು ಕನಸ್ಸಿನಲ್ಲೂ ನೆನೆಸಿರಲಿಲ್ಲ.

ಮಗಳ ಈ ಬದಲಾಯಿಸಿರುವ ರೂಪವನ್ನು ನೋಡಿ ಆಕೆಗೆ ಭಯವಾಗುತ್ತಿತ್ತು, ನಾಚಿಕೆಯಾಗುತ್ತಿತ್ತು. ಆದರೂ, ಅವಳು ಎಲ್ಲಿ ಬರದೇ ಇದ್ದುಬಿಡುತ್ತಾಳೋ ಎಂಬ ಹೆದರಿಕೆಯಿಂದ ಆ ವಿಷಯವಾಗಿ ಏನೂ ಹೇಳಲೂ ಆಕೆಗೆ ಧೈರ್ಯ ಬರುತ್ತಿರಲಿಲ್ಲ. ಹೀಗೆಯೇ ಏನೋ ಮಾತೃಹೃದಯದ ಅಸಹಾಯತೆ! ಆಮೇಲೆ ಅವಳು ಅಮ್ಮಾ ಎಂದು ಕರೆಯುತ್ತಾ ಬರದೆ ಹೋದರೆ? ಆ ಒಂದು ಭಯದಿಂದ, ಭಯಂಕರವಾದ ಒಂದು ಅನ್ಯಾಯವು ನಡೆಯುತ್ತಿದ್ದರೂ ಅದಕ್ಕೆ ಎಡೆಕೊಟ್ಟುಕೊಂಡು ಆ ತಾಯಿ ಸುಮ್ಮನಿರುತ್ತಿದ್ದಳು.

ಯಜಮಾನರ ಹತ್ತಿರ, ಒಂದು ದಿನ ಅತ್ತು ಕೇಳಿದಳು, "ಎಷ್ಟು ದಿನಗಳಾಯಿತು ಅವರುಗಳು ಬಂದು, ನೀವು ಹೋಗಿ ಕರೆದುಬಿಟ್ಟು ಬರುವುದಿಲ್ಲವೇ?"

ಸುನಂದಾ ತಂದೆ ಗಂಭೀರ ಧ್ವನಿಯಲ್ಲಿ ಹೇಳಿದರು, "ಅವರಿಗೆ ಇಷ್ಟವಿದ್ದಾಗ ಬರುತ್ತಿದ್ದರು, ಹಾಗೆ ನೋಡಿದರೆ, ಜಾಸ್ತಿಯಾಗಿಯೇ ಬರುತ್ತಿದ್ದರು. ಈಗ ಎಲ್ಲೋ ಇಷ್ಟಇಲ್ಲ, ಬರುತ್ತಿಲ್ಲ. ಅದಕ್ಕಾಗಿ ಹೋಗಿ ಹೇಳಬೇಕಾದುದೇನಿದೆ?"

ಪಿತೃ ಹೃದಯಕ್ಕೆ, ಮಾತೃಹೃದಯಕ್ಕಿಂತ ಲೋಕಾನುಭವ ಹೆಚ್ಚು.

ಸುನಂದಾಳ ತಂದೆ, ಮಗಳು–ಅಳಿಯ ದಿನ–ನಿತ್ಯವೂ ಅನವಶ್ಯಕವಾಗಿ ಬರುವುದನ್ನು ನೋಡಿ ಬಾಯಿ ತೆರೆದು ಏನೂ ಹೇಳದೆ, ಸುಮ್ಮನೆ ನೋಡುತ್ತಿದ್ದರೂ, ಮನಸ್ಸಿನೊಳಗೆ ಅಸಹನೆಯಿಂದ ನೋಡುತ್ತಿದ್ದರು. ಈಗೆಲ್ಲಾ ಅವರುಗಳು ಬರದೆ ಇರುವುದನ್ನು ನೋಡಿ ಒಂದು ತರಹ ಸಮಾಧಾನವನ್ನೇ ಹೊಂದಿದ್ದರು.

ಮಗಳು–ಅಳಿಯನ ನಿತ್ಯಾಗಮನದಿಂದ ಎಲ್ಲವೂ ಒಂದು ಅವಾಂತರವಾಗುತ್ತಿತ್ತು. ಊಟದ ಸಮಯಕ್ಕೆ ಒಂದು ಗೊತ್ತು ಗುರಿ ಇರಲಿಲ್ಲ. ನಿದ್ದೆಗೆ ಸ್ವಲ್ಪ ವಿಶ್ರಮಿಸಿಕೊಳ್ಳುವುದಕ್ಕೆ, ಎಲ್ಲಕ್ಕೂ ಅಷ್ಟೇ. ಇದರ ಮೇಲೆ ಒಬ್ಬ ತುಂಟ ಹುಡುಗನನ್ನು ಬೇರೆ ಬಿಟ್ಟು ಹೊರಟು ಹೋಗುತ್ತಿದ್ದರು. ಯಜಮಾನಿ ಅವರನ್ನು ಗೃಹಕರ್ತಾ ಹುದ್ದೆಯಿಂದ ಇಳಿಸಿ ಗೃಹ–ಭೃತ್ಯನ ಕೆಲಸ ಕೊಟ್ಟಿದ್ದಳು. ಅಳಿಯನಿಗಾಗಿ ತಿಂಡಿ–ಪದಾರ್ಥ ತರಲು ಅಂಗಡಿಗೆ ಓಡು. ಮೀನು–ಮಾಂಸ ತೆಗೆದುಕೊಂಡು ಬಾ. ಮೊಮ್ಮಗ ಅತ್ತರೆ ಪಾತಾಳಕ್ಕೆ ಇಳಿ– ಅಟ್ಟಕ್ಕೆ ಹತ್ತು! ಜೇಬಿನಲ್ಲಿ ದುಡ್ಡಿಲ್ಲದಿದ್ದರೂ, ದುಡ್ಡು ಖರ್ಚು ಮಾಡು! ಇತ್ಯಾದಿ–

ಹೆಂಗಸರು ಬೇರೆ ಯಾವದರಲ್ಲಿ ತಿಳುವಳಿಕೆ ಇದ್ದರೂ, ತವರುಮನೆ, ಅಳಿಯನ ಮನೆ ಈ ಎರಡು ಮನೆಯ ಅತಿಥಿಗಳ ವಿಷಯದಲ್ಲಿ ತಿಳುವಳಿಕೆಯಿಂದ ಖರ್ಚು ಮಾಡುವವರಲ್ಲ! ಅವರು ಸ್ವಲ್ಪ ನಿಶ್ಚಿಂತೆಯಿಂದ ಇದ್ದರು, ಸಧ್ಯ ಸಂಸಾರ ಒಂದು ಹತೋಟಿಗೆ ಬರುತ್ತಾ ಇದೆ, ಎಂದು. ಅಂತಹ ಸಮಯದಲ್ಲಿ, ಯಜಮಾನಿಯ ಈ ಮಾತು ಕೇಳಿ ಸ್ವಲ್ಪ ಬಿಗಿಯಾದರು. ಹಾಗೆಯೇ ಬಿಗುವಿನಿಂದಲೇ ಹೇಳಿದರು, "ನಾನೇನೂ ಅವರನ್ನು ಹೋಗೆಂದು ಹೇಳಲಿಲ್ಲವಲ್ಲ ಈಗ ಹೋಗಿ ಬಾ ಎಂದು ಕರೆಯುವುದಕ್ಕೆ!"

"ಮತ್ತೆ ನೀವು ಹೋಗುವುದಿಲ್ಲವೇ? ದಿನಾ ಬರುತ್ತಿದ್ದವರು ಈಗ ಹಠಾತ್ತನೆ–"

ಅವರು ಸ್ವಲ್ಪ ಬೇಜಾರಾಗಿ ನುಡಿದರು, "ಈಗೆಲ್ಲೋ ಜೇಬು ಸ್ವಲ್ಪ ಖಾಲಿಯಾಗಿರಬೇಕು. ಅದಕ್ಕೆ ಸ್ವಲ್ಪ ಮೋಜು ಮಾಡೋದು ಕಡಿಮೆಯಾಗಿರಬಹುದು. ಹುಡುಗನನ್ನೂ ಬೋರ್ಡಿಂಗಿನಲ್ಲಿ ಸೇರಿಸಿದ್ದಾರೆ. ಆದ್ದರಿಂದ ಈಗ ನಿನ್ನ ಸಹಾಯದ ಅವಶ್ಯಕತೆಯೂ ಇಲ್ಲ."

"ನೀವು ಯಾವಾಗಲೂ ಹೀಗಯೇ ಹೇಳುತ್ತಾ ಇರುತ್ತೀರಿ. ಅಲ್ಲ, ಮಾತಿಗೆ ಹೇಳುತ್ತೇನೆ, ಒಂದು ವೇಳೆ ಕೋಪ- ತಾಪ ಕೂಡ ಇರುವುದಿಲ್ಲವೇ?"

ಬೇಜಾರಿನಿಂದ ಸುನಂದಾಳ ತಂದೆ ಅಂದರು, "ಕೋಪ-ತಾಪವೇ? ಕೋಪ-ತಾಪ ಏತಕ್ಕೆ? ನೀನು ಅವರನ್ನು ಸ್ವಾಗತಿಸುವುದಕ್ಕೆ ಹೂವು-ಚಂದನ ಇಟ್ಟುಕೊಂಡೇ ಕುಳಿತಿದ್ದೆಯಲ್ಲಾ? ಯಾವತ್ತಾದರೂ ಹೇಳಿದೆನೆ, ಈ ಮನೆ ಹುಡುಗಿಯಾಗಿದ್ದುಕೊಂಡು, ನೀನು ಸಾರಾಯಿ ಕುಡಿಯುಬಿಟ್ಟು, ಹೇಗೆ ಇಲ್ಲಿ ಮುಖವನ್ನು ತೋರಿಸುತ್ತಿಯಾ ಎಂದು? ಇಲ್ಲವಲ್ಲ, ಅಳಿಯನಿಗೆ ಕಪಾಲಕ್ಕೆ ಒಂದು ಏಟು ಹೊಡೆಯೋಣ ಎಂದು ಕೋಪ ಬಂದಾಗಲೂ, ಅವನಿಗೋಸ್ಕರ ಅಂಗಡಿಯಿಂದ ತಿಂಡಿಯನ್ನು ತರಲು ಹೋಗುತ್ತಿರಲಿಲ್ಲವೇ? ಇಷ್ಟರ ಮೇಲೆಯೂ ಅವರುಗಳಿಗೆ ಕೋಪ-ತಾಪಗಳಾದರೆ ಏನೂ ಹೇಳುವ ಹಾಗಿಲ್ಲ!"

ಸುನಂದಾ ತಾಯಿ ಸ್ವಲ್ಪ ಬಿಗುಮಾನದಿಂದ ಅಂದರು, "ನನಗೆ ಗೊತ್ತು ನೀವು ಅಳಿಯನನ್ನು ವಿಷ-ದೃಷ್ಟಿಯಿಂದ ನೋಡುತ್ತೀರಿ ಎಂದು."

"ಗೊತ್ತೇ? ಹಾಗಿದ್ದೂ ನನ್ನನ್ನು ಹೋಗು ಅನ್ನುತ್ತೀಯಾ?'

ಸುನಂದಾ ತಾಯಿ ಕೋಪದಿಂದ ಕೇಳಿದರು "ಮತ್ತೆ ಏನು, ನಾನು ಹೋಗಲೇ?"

"ಹೋಗಬೇಕೇ ಎಂಬುದೇ ನನ್ನ ಪ್ರಶ್ನೆ"

"ಅದು ಹಾಗೆ ನೀವು ಕೇಳಬಲ್ಲಿರಿ, ನಿಮ್ಮ ಮನಸ್ಸು ಕಲ್ಲು !" ಅಳಲು ಪ್ರಾರಂಭಿಸಿದರು ಆಕೆ "ಅವರುಗಳು ಇನ್ನು ಬಾರದೆಯೇ ಇದ್ದರೂ ನಿಮಗೆ ಜ್ಞಾಪಕವೇ ಬರುವುದಿಲ್ಲ."

"ಹೀಗೆಯೇ ತಾನೆ ನೀನು ಗೆದ್ದುಕೊಂಡು ಬಂದೆ ಯಾವಾಗಲೂ!"

ಸುನಂದಾ ತಂದೆ ಸ್ವಲ್ಪ ತೆಪ್ಪಗಾಗಿ ಹೇಳುತ್ತಾರೆ, "ನೀನು ಹೇಳಿದರೆ ಹೋಗಲೇ ಬೇಕು. ಹೋಗಿ ಕರೆದು ಬಿಟ್ಟು ಬರುತ್ತೇನೆ. ನಿನ್ನ ಮಗಳು ಹಿಂದೆ ಇದ್ದ ಹಾಗೆ ಇದ್ದಾಳೆಯೇ? ಹೊಟ್ಟೆ ಬಿಟ್ಟುಕೊಂಡ ಕುಪ್ಪುಸ ಹಾಕಿಕೊಂಡು ಪಾರ್ಟಿಗೆ ಹೋಗುತ್ತಾಳೆ. ಕುಡಿದು ಬಿಟ್ಟು ತೂರಾಡುತ್ತಾಳೆ. ಅತ್ತೆ ಮೇಲಿನ ಕೋಪದಿಂದ, ನಿನ್ನನ್ನು ಅಮ್ಮಾ, ಅಮ್ಮಾ ಎಂದು ಕರೆಯುವುದಕ್ಕೆ ಬಂದಿದ್ದಾಳೆ. ಈಗ ಅವಶ್ಯಕತೆ ಮುಗಿಯಿತೇನೋ!"

ಸುನಂದಾ ತಾಯಿ ಅಳುವ ಧ್ವನಿಯಲ್ಲೇ ಕೇಳಿದರು, "ಹಾಗಾದರೆ ನೀವು ಅವರನ್ನು ಬರಹೇಳಿ ಕರೆಯಲು ಹೋಗುವುದಿಲ್ಲವೇ?"

'ಎಲ್ಲಿ, ಹಾಗೆ ಹೇಳಲು ಸಾಧ್ಯವಾಗುತ್ತಿಲ್ಲವಲ್ಲಾ! ಬೀಗರ ಮನೆ ಬಗ್ಗೆ ನೆನೆಸಿ ಕೊಂಡರೆಯೇ ತಲೆ ಕೆಟ್ಟುಹೋಗುತ್ತೆ. ಬೀಗರು, ಅವರು ಒಂದು ಮಾತಾದ ಮೇಲೆ ಎರಡನೆಯ ಮಾತು ಆಡುವವರಲ್ಲ. ಬೀಗಿತಿ ಅವರ ಊರ್ಧ್ವಲೋಕದಿಂದ ಇಳಿದು

ಬರುವುದೇ ಇಲ್ಲ. ಸ್ವಲ್ಪ ಮಾತಾಡುತ್ತಿದ್ದವರು ಆ ಮಾವಯ್ಯ. ಅವರೂ ಎಲ್ಲೋ ಹೊರಟುಹೋದರು ಎಂದು ಕೇಳಿದೆ !"

"ಸುನಂದಾ ಇದಾಳಲ್ಲಾ, ಅಥವಾ ಏನು, ಅವಳೂ ಮಾತಾಡುವುದಿಲ್ಲವೇ?"

"ಆಡಿದರೂ ಆಡಬಹುದು, ಅಥವಾ ಸುಮ್ಮನಿದ್ದರೂ ಇರಬಹುದು ಆದರೆ ನೀನು ಯಾವಾಗ ಹೋಗಲೇ ಬೇಕು ಅನ್ನುತ್ತೀಯೋ, ಅಗ ಹೋಗಲೇಬೇಕು."

ಹೀಗೆಯೇ ಸುನಂದಾ ತಾಯಿ–ತಂದೆಯರು.

ಅತಿ ಸಾಧಾರಣ ಮನುಷ್ಯರು.

ಅವರುಗಳು ಯಾವಾಗಲೂ ಪರಸ್ಪರರ ಮಧ್ಯೆ ಪ್ರೇಮದ ಮಾತುಗಳ ಬಳಕೆಯೂ ಮಾಡಿರಲಿಲ್ಲ, ಜೀವನದ ವ್ಯರ್ಥತೆಯ ಅಥವಾ ಸಾರ್ಥಕತೆಯ ವಿಚಾರವಾಗಿಯೂ ತಲೆಯನ್ನು ಕೆಡಿಸಿಕೊಂಡಿರಲಿಲ್ಲ. ಜೀವನವನ್ನು ಒಂದು ಭಾರವಾಗಿಯೂ ಎಣಿಸಿರಲಿಲ್ಲ.

ಸಾಮಾನು ತರುವುದು, ಅಡಿಗೆ ಮಾಡುವುದು, ಚಿಕ್ಕ ಪುಟ್ಟ ವಿಷಯದ ಬಗ್ಗೆ ಮಾತಾಡುವುದು, ಕೋಪಿಸಿಕೊಳ್ಳುವುದು, ತಿರುಗ 'ನೀನು ಹೇಳುವಾಗ ಹೇಗೆ ಮಾಡದೆ ಇರುವುದು' ಎಂದೂ ಹೇಳುವುದು. ಇದೇ ಅವರ ಜೀವನವಾಗಿತ್ತು.

ದಾಂಪತ್ಯ ಜಿವನದ ಇಂತಹ ಚಿತ್ರವನ್ನೇ ಸುನಂದಾ ತನ್ನ ಚಿಕ್ಕ ವಯಸ್ಸಿನಿಂದ ನೋಡುತ್ತಿದ್ದುದು, ನೋಡಿದ್ದಾಳೆ ಒಮ್ಮೊಮ್ಮೆ ಅಮ್ಮಅಪ್ಪನಿಗ ಹೆದರುತ್ತಾಳೆ. "ನೋಡಿಕೋ, ನಿಮ್ಮಪ್ಪ ಎಲ್ಲಾದರೂ ಕೇಳಿಯಾರು, ಅಷ್ಟೊಂದು ಕೋಪಿಷ್ಠರು. ತಿಳಿದರೆ ಆಮೇಲ ದೇವರೇ ಗತಿ."

ಒಂದೊಂದು ಸಲ ಅಪ್ಪ ಏನಾದರೂ ಕೆಲಸ ಮಾಡಿಬಿಟ್ಟು ಮೆಲ್ಲಗೆ ಮಗಳಿಗೆ ಹೇಳಿದ್ದಾರೆ, "ನೋಡಿಕೋಮ್ಮ, ನಿಮ್ಮಮ್ಮನಿಗೆ ಎಲ್ಲಾದರೂ ತಿಳಿದೀತು. ಗೊತ್ತಾದರೆ ಆಮೇಲೆ ಅತ್ತೂ–ಕರೆದು ಗಲಾಟೆ ಮಾಡುತ್ತಾಳೆ, ಅಂತಹ ಅಳುಮಣ್ಣಿ ಹೆಂಗಸು!"

ಸುನಂದಾ ದೊಡ್ಡ ಮಗಳಾದುದ್ದರಿಂದ ಅವಳನ್ನೇ ಇಬ್ಬರೂ ಸಲಹೆಗೆ ಕರೆಯುತ್ತಿದ್ದುದು. ಆ 'ಕೆಲಸಗಳು' ತಾನೇ ಮಹಾ! ಜ್ಞಾಪಕ ಬಂದರ ಸುನಂದಾಗ ಈಗಲೂ ನಗು ಬರುತ್ತೆ. ತಾಯಿ ಒಂದು ವೇಳೆ ಬಾಗಿಲಲ್ಲಿ ಬಟ್ಟೆಯವನ ಹತ್ತಿರ ಒಂದೆರಡು ಗಜ ಚೀಟಿ ಬಟ್ಟೆ ತೆಗೆದಿರಬಹುದು, ಅಥವಾ ಹಳೇ ಬಾಗಿನದವನ ಹತ್ತಿರ, ಹಳೇ ಪಾತ್ರೆಯನ್ನು ಕೊಟ್ಟು, ಎರಡು ಬಟ್ಟಲುಗಳನ್ನು ತೆಗೆದಿರಬಹುದು!– ಮತ್ತು ಅಪ್ಪಾ ಒಂದು ಸಮಯ ಸುನಂದಾಗೆ ತೆಗೆದುಕೊಡಲು ಹೋಗಿ, ಐದು ರೂಪಾಯಿನ ಜೋಡು ತೆಗೆದುಕೊಟ್ಟುಬಿಟ್ಟು, ಮನೆಗೆ ಬಂದು ನಿರ್ವಿಕಾರದಿಂದ ಹೇಳಿದ್ದಾರೆ. ಇಷ್ಟು ಪುಟ್ಟ ಜೋಡಿಗೆ ಎಂಟು ರೂಪಾಯಿ ತೆಗೆದುಕೊಂಡ, ನೋಡಿದೆಯಾ ಬೆಲೆಗಳು ಹೇಗಿದೆ?– ಅಥವಾ ಸುನಂದಾ ತಾಯಿಯ ಫರಮಾಯಿಷಿ ಸಾಮಾನು ಯಾವುದನ್ನೋ ತರಲು ಹೋಗಿ, ಅದರ ವಿಪರೀತವಾದ ಬೆಲೆಯನ್ನು ನೋಡಿಬಿಟ್ಟು ಹಾಯಾಗಿ ಬಂದು, "ಅಂಗಡಿಗಳೆಲ್ಲಾ ಸುತ್ತಿ ನೋಡಿದೆ ಗೊತ್ತೇ,

ಎಲ್ಲೂ ಸಿಗಲಿಲ್ಲ. ಅದು ಈಗೆಲ್ಲಾ ಸಿಗುವುದಿಲ್ಲವಂತೆ." ಎಂದಿದ್ದಾರೆ. ಈ ಗೂಢ ತಂತ್ರಕ್ಕೆ ಸೇರಿದ ಸುನಂದಾನೂ ಆಗ ಉತ್ಸಾಹದಿಂದ ಹೇಳಿದ್ದಾಳೆ, "ಅಬ್ಬಾ, ನಡೆದೂ, ನಡೆದೂ ಕಾಲೆಲ್ಲಾ ನೋವಾಗುತ್ತಾ ಇದೆ" ಎಂದು!

ಅಪ್ಪಾ ಯಾವಾಗಲಾದರೂ, "ಏನೇ, ಅಮ್ಮಾ ಏನಾದರೂ, ಬಟ್ಟೆ, ಪಾತ್ರೆಯವನನ್ನು ಕರೆದಿರಲಿಲ್ಲ ತಾನೇ?"

ಎಂದು ಕೇಳಿದರೆ, ಯೋಚನೆಯೇ ಮಾಡದೆ, "ಇಲ್ಲವಲ್ಲ ಅಪ್ಪಾ," ಎಂದಿದ್ದಾಳೇ ಹೀಗೆಯೇ ಇಂತಹ ಘಟನೆಗಳನ್ನಿಟ್ಟುಕೊಂಡೇ ಅವರುಗಳ, ಮಾನ– ಅಭಿಮಾನ, ಭಯ– ಜೂಟಾಟ, ಚಿಕ್ಕ ಮಕ್ಕಳ ಹಾಗೆ. ಇದೇ ಸುನಂದಾಗೆ ತಿಳಿದಿದ್ದುದು.

ಕೋಪ, ಅಸೂಯೆ, ಒಬ್ಬರನ್ನೊಬ್ಬರು ಹೇಯವಾಗಿ ಕಾಣುವುದು, ಪರಸ್ಪರರು ಬಂದು ಎದುರಾಳಿಯಂತಿರುವುದು, ಹೃದಯದಲ್ಲಿ ಒಂದು ಬಂಧವಿಲ್ಲದೆ ಒಂದೇ ಮನೆಯಲ್ಲಿ ಬಾಳುತ್ತಿರುವ ಜೀವನ, ಇದೆಲ್ಲಾ ಅವಳಿಗೆ ಗೊತ್ತಿರಲಿಲ್ಲ.

ಇವರುಗಳೇನು ಅಷ್ಟು ನೀಚರಾ? ತುಚ್ಛ ಜನರೇ?, ಮಾನ್ಯರಲ್ಲವೇ?

ಈ ಮನೆಗೆ ಬಂದ ಮೇಲೆ ಸುನಂದಾ, ಆ ಪರಿಚಿತ ಚಿತ್ರವನ್ನು ನೋಡುತ್ತಿಲ್ಲ. ಆಮೇಲೆ ತನ್ನ ಜೀವನದಲ್ಲಿಯೂ–

ಅವಳಿಗೆ ಗೊತ್ತು, ಏನಾದರೂ ಕೆಲಸವಾಗಬೇಕಾದ ಹೊರತು, ನೀಲಾಕ್ಷ ತನ್ನ, ಬಡವರಾದ ಅತ್ತೆ–ಮಾವನನ್ನು ಒಂದು ಚೂರು ಪ್ರೀತಿಯ ದೃಷ್ಟಿಯಲ್ಲಿ ನೋಡುವುದಿಲ್ಲ, ಎಂದು. ದುಡ್ಡಿನ ಕೊರತೆಯಿದ್ದೂ ಸುಖವಾಗಿ ಬಾಳಬಹುದೆಂದು ನಂಬಿಕೆ ಇರುವವರನ್ನು ಕಂಡರೆ ಅವನಿಗೆ ಬಹಳ ಅಸಡ್ಡೆ.

ನೀಲಾಕ್ಷನ ಲೆಕ್ಕದಲ್ಲಿ ದುಡ್ಡಿನ ಕೊರತೆಯೊಂದೇ ಜೀವನದ ಮುಖ್ಯವಾದ ಕೊರತೆ. ಅದಕ್ಕೇ ಅವನು ಬ್ರಹ್ಮ ಪ್ರಯತ್ನ ಪಡುತ್ತಿದ್ದ. ದುಡ್ಡನ್ನು ಶೇಖರಿಸಿ 'ಸುಖ' ಪಡುವ ಆಸೆಯಿಂದ! ಅವನ ಪ್ರಯತ್ನಕ್ಕೆ ಮೂಲಧನವಾಗಿ ಅವನು ಇಟ್ಟುಕೊಂಡಿದ್ದುದು ಸುನಂದಾಳನ್ನೇ. ಅದಕ್ಕೇ ಸುನಂದಾ ಆಡಿ–ಹಾಡಿ, ನಕ್ಕು–ನಲಿದು, ಅವನ 'ಡೀಲರು' ಗಳನ್ನು ಮುಗ್ಧರನ್ನಾಗಿ ಮಾಡಿ, ದೊಡ್ಡ ದೊಡ್ಡ 'ಬಿಸಿನೆಸ್' ಒಡಿದು ಕೊಟ್ಟಾಗ ಅವನು ಸಂತೋಷದಿಂದ ಅವಳನ್ನು ಅಪ್ಪಿಕೊಂಡು 'ನೀನು ನನ್ನ ಚಿನ್ನದ ಗಣಿ ಕಣೆ' ಎಂದಿದ್ದಾನೆ.

ಸುನಂದಾ ಹೇಳುತ್ತಿದ್ದಳು, "ನೀವು ನನ್ನನ್ನು ಒಡೆದು, ಒಡೆದು, ಚೂರು–ಚೂರು ಮಾಡಿ ದೊಡ್ಡ ಮನುಷ್ಯರಾಗಲು ನೋಡುತ್ತಿದ್ದೀರಿ" ಎಂದು.

ನೀಲಾಕ್ಷನೂ ಅಳುಕದೆ ಹೇಳುತ್ತಿದ್ದ, "ಮತ್ತೆ ನನ್ನ ಹತ್ತಿರ ಒಡೆಸುವಂತಹ ಐಶ್ವರ್ಯವಾದರೂ ಬೇರೆ ಏನಿದೆ! "ಈ ಮನೆಗೆ ಬಂದು, ಇಂತಹ ದಾಂಪತ್ಯ– ಸಂಪರ್ಕವನ್ನೇ ನೋಡುತ್ತಿದ್ದಾಳೆ ಸುನಂದಾ. ಆದರೂ ಇಲ್ಲೇ ಇರುತ್ತಿದ್ದಾಳೆ ಅವಳು" ಆಶ್ಚರ್ಯ!

ಹಾಗಾದರೆ ಏನು ಸುನಂದಾ ಮನಸ್ಸಿನಲ್ಲಿ ಈ ಮನುಷ್ಯನ ಮೇಲೆ ಸ್ವಲ್ಪ ಪ್ರೀತಿಯೂ ಇದೆಯೇ? ಸುನಂದಾ ಅದಕ್ಕೇ ಯೋಚಿಸಲು ಪ್ರಯತ್ನ ಪಡುತ್ತಿದ್ದಾಳೆಯೇ?

ಅವನು ಒಬ್ಬ ಬುದ್ಧಿಹೀನ ಮನುಷ್ಯ, ಶುದ್ಧವಾಗಿ ಮೂರ್ಖ, ಏನು ಕೊಟ್ಟು ಏನನ್ನು ಕೊಂಡುಕೊಳ್ಳುತ್ತಿದ್ದೇನೆಂಬುದು ಅವನಿಗೇ ಗೊತ್ತಾಗುತ್ತಿಲ್ಲ. ಆದರೆ ಅವನ ಮೇಲೆ ಪ್ರೀತಿ ಇದ್ದರೆ, ಯಾಕೆ ಅವನನ್ನು ಯಾವಾಗಲೂ ಮಾತಿನಿಂದ ಚುಚ್ಚಬೇಕೆಂದೆನಿಸುತ್ತೆ ?

ವ್ಯಂಗ್ಯ ನಗುವಿನ ಚೂಪಾದ ಚಾಕುವಿನಿಂದ ಇರಿದು, ಚೂಪಾದ ಮಾತಿನ ಬಾಣದಿಂದ ಏಕೆ ಚುಚ್ಚಬೇಕೆನಿಸುತ್ತೆ?

ಅವಳಿಗೇ ಗೊತ್ತಿಲ್ಲ.

ನೀಲಾಕ್ಷ, ಮೀನಾಕ್ಷಿಯ ಕೋಣೆಯಿಂದ ಹೊರಗೆ ಬಂದು ಬೇಜಾರಿನಿಂದ 'ಆ ರಾಸ್ಕಲ್ಲಿನ ಹೆಸರು-ವಿಳಾಸ ಅವಳು ಕೊಡಲಿಲ್ಲ,' ಎಂದು ಹೇಳಿದಾಗಲೂ ಹಾಗೆಯೇ ನಡೆದುಕೊಂಡಳು, ಇಂತಹ ಬಾಣವನ್ನೇ ಹೊಡೆದಳು, "ಅಯ್ಯೋ ನೀವೇಕೆ, ಇಷ್ಟೊಂದು ಪೆಚ್ಚಿಕೊಳ್ಳುತ್ತೀರಿ. ನೀವೇನೂ ಇಂತಹ ಕು-ಸಂಸ್ಕಾರಗಳನ್ನು ನಂಬುವವರಲ್ಲಾ. ಹೆಣ್ಣು-ಹುಡುಗಿಯರ ಜೀವನದಲ್ಲಿ ಇದೆಲ್ಲಾ ಒಂದು 'ಆಕ್ಸಿಡೆಂಟ್' ಮಾತ್ರವೇ, ಪವಿತ್ರತೆ, ಸತೀತ್ವ ಎನ್ನುವುದೆಲ್ಲಾ ನಿಮಗೆ ಬರೀ ಕು-ಸಂಸ್ಕಾರವಲ್ಲವೇ?"

ನೀಲಾಕ್ಷ ಕ್ರೋಧದಿಂದ ಹೇಳಿದ, "ಸತೀತ್ವ ಎಂದರೆ? ಅವಳಿಗೇನು ಮದುವೆಆಗಿದೆಯೇ?"

"ಓಹೊ ಹೊ ಹೋ! ಅದೂ ಸರಿಯೇ!" ಹೀ ಹೀ ಎಂದು ನಗುತ್ತಾ ಹೇಳಿದಳು ಸುನಂದಾ, "ಎಷ್ಟು ದಡ್ಡಿ ನಾನು, ಹಿ, ಹಿ, ಹಿ. ಪತಿಯೇ ಇಲ್ಲದೆ ಸತಿಯೇ? ನಾನೇಕೆ ಇಷ್ಟು ದಡ್ಡಿಯಾದೆ ಹೇಳಿನೋಡೋಣ?"

ಮತ್ತೆ ಹೀಗೆಯೇ ಅಸ್ವಾಭಾವಿಕವಾಗಿಯೇ ನಡೆದುಕೊಂಡು ಸುನಂದಾ ನಿಜವಾಗಿಯೂ, ಸ್ವಾಭಾವಿಕವಾಗಿರುವುದನ್ನೇ ಮರೆಯುತ್ತಾಳೇನೋ.

* * *

ಗ್ಯಾರೇಜಿನ ಬಾಗಿಲನ್ನು ತೆರೆದು ಸರೋಜಾಕ್ಷರು ಒಮ್ಮೆ ಗಾಡಿಯ ಮೇಲೆ ಕೈಯಾಡಿಸಿದರು. ಅವರು ಖಾಯಿಲೆ ಬಿದ್ದಾಗಿನಿಂದ ಬೀಗ ಹಾಕಿ ಬಿದ್ದಿದ್ದರಿಂದ ಅದರ ಮೇಲೆ ಬೇಕಾದಷ್ಟು ಧೂಳು ತುಂಬಿಕೊಂಡಿತ್ತು.

ನೀಲಾಕ್ಷ, ಮುಚ್ಚಿದ ಗ್ಯಾರೇಜಿನ ಕಡೆ ದುರುಗುಟ್ಟಿ ನೋಡಿಬಿಟ್ಟು ಟ್ಯಾಕ್ಸಿಯನ್ನು ಕರೆಯುತ್ತಿದ್ದ. ಕಮಲಾಕ್ಷ ಇದ್ದಾಗ ಅಮ್ಮನನ್ನು ಪೀಡಿಸಿದ್ದ, "ಹೋಗಿ ಹೇಗಾದರೂ ಅಪ್ಪನಿಂದ ಬೀಗದ ಕೈ ತೆಗೆಸಿಕೊಂಡು ಬಾ. ಗಾಡಿಯನ್ನು ತೆಗೆದುಕೊಂಡು ಹೊರಗೆ ಹೋಗಿಬರುತ್ತೇನೆ" ಎಂದು. ವಿಜಯಾ, ಮೊದಲು, "ಆಗಲಿ ತಲೆ ಒಡೆದುಕೊಂಡು ಬಂದಾಯಿತು, ಈಗ ಇನ್ನು ಕೈ-ಕಾಲು ಮುರಿದುಕೊಳ್ಳಬೇಡ, ನೀನು ಯಾವಾಗ ಕಲಿತೆ? ಬೀಗದ ಕೈ ಕೊಟ್ಟರೆ ನಡೆಸಿ ಬಿಡುವುದಕ್ಕೆ?" ಎಂದಿದ್ದರು. ಆಮೇಲೆ, "ಅವರು ಬೀಗದ ಕೈ ಕೊಟ್ಟರೆ ಅಲ್ಲವೇ? ಅವರಿಗೆ ಅದು ಗಾಡಿಯಲ್ಲ. ಅವರ ಸತ್ತುಹೋದ ಚಿಕ್ಕಪ್ಪ" ಎಂದಿದ್ದರು.

ಈ ಮಾತನ್ನು ಸರೋಜಾಕ್ಷರು ಕೇಳಿಸಿಕೊಂಡಿರಲಿಲ್ಲ. ಕೇಳಿಸಿದ್ದರೆ ಒಂದು ವೇಳೆ, ಇವಳು ಯಾವಾಗ ನನ್ನನ್ನು ಇಷ್ಟು ಚೆನ್ನಾಗಿ ತಿಳಿದುಕೊಂಡಳು! ಎಂದು ಆಶ್ಚರ್ಯ ಪಟ್ಟಿರುತ್ತಿದ್ದರು. ವಾಸ್ತವವಾಗಿಯೂ ಸರೋಜಾಕ್ಷರ ಮನಸ್ಸಿನಲ್ಲಿ ಗಾಡಿಯ ವಿಷಯದಲ್ಲಿ ಅಂತಹ ಭಾವನೆಯೇ ಇತ್ತು, ಪ್ರಿಯವಾದ ಸ್ಮೃತಿಯ ವಸ್ತುವಿನ ಮೇಲಿನ, ವಿಸ್ಮೃತಿಯ ಧೂಳನ್ನು ಒರೆಸಿದರೋ ಎಂಬಂತೆ ಅಷ್ಟು ಅಕ್ಕರೆಯಿಂದ ಧೂಳನ್ನು ಒರೆಸಿದರು.

ಆದರೆ ಇಷ್ಟು ದಿನ ಗಮನವಿಲ್ಲದೆ ಹಾಕಿದ್ದ ತಪ್ಪಿಗೆ, ಒಂದು ತೆರಿಗೆ ಕೊಟ್ಟೇ ಆಗಬೇಕೇನೋ! ಗಾಡಿ, ನಡೆಸಿಕೊಂಡು ಹೋಗುವ ಸ್ಥಿತಿಯಲ್ಲಿರಲಿಲ್ಲ. ಆದ್ದರಿಂದ ತಿರುಗಿ ಬೀಗ ಹಾಕಿ ಬಿಟ್ಟು ಬಸ್ಸು–ಸ್ಟಾಪಿಗೆ ನಡೆದರು.

ಹೊರಗೆ ಬಿಸಿಲಲ್ಲಿ ಬಸ್ಸು–ಟ್ರಾಮ್‌ಗಳಲ್ಲಿ ಹೋಗಲು ಡಾಕ್ಟರರ ನಿಷೇಧಾಜ್ಞೆ ಇತ್ತು ಅವರಿಗೆ. ಇಷ್ಟು ದಿನ ಅದನ್ನು ಅನುಸರಿಸಿಕೊಂಡು ಬಂದಿದ್ದರು. ಡಾಕ್ಟರರ ಮಾತನ್ನು ಮೀರಬಾರದೆಂಬ ನಿಷ್ಠೆಯಿಂದಲ್ಲ! ಅದು ಕೇವಲ ತಮ್ಮ ನಿಷ್ಕ್ರಿಯತೆಯಿಂದ ಅಷ್ಟೆ! ಏಕೆ?

ಅದು, ಒಂದು ವೇಳೆ ಅವರಿಗೇ ಗೊತ್ತಿತ್ತೋ ಇಲ್ಲವೋ. ಒಂದು ವೇಳೆ ದೊಡ್ಡ ಪೆಟ್ಟಿನಿಂದಾಗಿ ಸ್ತಂಭಿಸಿ ಹೋಗಿ, ನಿಶ್ಚೇಷ್ಟರಾಗಿ ಕೂತಿದ್ದರೋ, ಅಥವಾ ಜಡವಾಗಿ ಹೋಗಿದ್ದ ಮನಸ್ಸು ಒಂದು ದೊಡ್ಡ ಪೆಟ್ಟಿನಿಂದಾಗಿ ಬಹಳ ಚುರುಕಾಗಿಬಿಟ್ಟಿದ್ದರಿಂದ, ತಮ್ಮನ್ನು ಆ ಚಿಂತೆಯ ದುರ್ಗದಲ್ಲಿ ಬಂಧಿಸಿಟ್ಟಿದ್ದರೋ!

ಈಗ ತಿರುಗಿ ಆಕಸ್ಮಿಕವಾಗಿಯೇ ಆ ನಿಷ್ಕ್ರಿಯತೆಯಿಂದ ತಮ್ಮನ್ನು ಎಬ್ಬಿಸಿಕೊಂಡು ಬಂದು ಈ ಜನ ಸಮುದ್ರದ ಮಧ್ಯೆ ತಮ್ಮನ್ನು ಕೊಂಡೊಯ್ದರು.

ಆದರೆ ಏಕೆ?

ಮನೆಯಲ್ಲೂ ಯಾರಿಗೂ ಹೇಳದೆ, ತಮ್ಮದೇ ಕಲ್ಪಿತ ದುರ್ಗದಿಂದ ಹೊರಬರಲು ಅವರಿಗೆ ಏಕೆ ತೋರಿತು?

ಒಂದು ವೇಳೆ ಮನೆಯ ಕಳಂಕದ ಮಾತು ಕೇಳಿ ಮನೆಯ ಆವರಣದಿಂದ ಹೊರಗೆ ಹೋಗಬೇಕೆನ್ನಿಸಿತೇ?

ಆದರೆ ಅದೂ ಇಲ್ಲವಲ್ಲಾ.

ವಿಜಯಾ ಈ ಕಳಂಕದ ಮಾತನ್ನು ಅವರಿಂದ ಗೋಪ್ಯವಾಗಿಯೇ ಇಟ್ಟಿದ್ದಾರೆ, ಅವರಿಗೆ ಗೊತ್ತು ಯಾರಾದರೂ ಹತ್ತಿರ ಹೋಗಿ ಹೇಳದಿದ್ದರೆ, ಸರೋಜಾಕ್ಷರಿಗೆ ಅದನ್ನು ತಿಳಿದುಕೊಳ್ಳುವ ಶಕ್ಯತೆ ಇಲ್ಲ. ಯೋಚಿಸುತ್ತಿದ್ದರು, ಮೀನಾಕ್ಷಿಗೆ ಒಂದು ವೇಳೆ ತಿಳುವಳಿಕೆ ಬರಬಹುದು, ಕಡೆಯವರೆಗೂ ಗೋಪ್ಯವಾದ ಈ ಮಾತು, ಗೋಪ್ಯವಾಗಿಯೇ ಇದ್ದುಕೊಂಡು ಹೋಗುತ್ತೆ ಎಂದು. ವಿಜಯಾ ಯಜಮಾನರಿಗೆ ಹೆದರುವವರಲ್ಲ. ಅವರ ಇಷ್ಟ, ಅಥವಾ ಇಷ್ಟವಿಲ್ಲದಿರುವಿಕೆಗೆ ಬೆಲೆಯೂ ಕೊಡುವವರಲ್ಲ. ಆದರೂ ಈಗೇನೋ ಒಂದು ಭಯ ತೋರುತ್ತಿದೆ. ತಪ್ಪು ಮಾಡಿ, ಸಿಕ್ಕಿಕೊಂಡ ಭಾವನೆ ಬರುತ್ತಿದೆ.

ಆದರೆ ಭಯಪಡುವುದು ಅವರ ಸ್ವಭಾವಕ್ಕೆ ವಿರುದ್ಧವಾದ ಮಾತು.

ಅವರ ಸ್ವಭಾವದಂತಾದರೆ ಈಗ ಒಂದು ಬಿರುಗಾಳಿಯಂತೆ ಬಂದು ಯಜಮಾನರ ಮುಂದೆ ನಿಂತು, ಮಗಳನ್ನು ಇಷ್ಟ ಬಂದಹಾಗೆ ಓಡಾಡಲು ಅನುಮತಿ ಕೊಟ್ಟಿದ್ದಕ್ಕಾಗಿ ಎಲ್ಲಾ ಅಪರಾಧವನ್ನೂ ಅವರ ಮೇಲೆ ಹೊರಿಸಿ, ತಾನು ತನ್ನಿಷ್ಟದಂತೆ ಬೆಳಸಲು ಬಿಟ್ಟಿದ್ದರೆ ಇಂತಹ ಕಳಂಕ ಬರುತ್ತಿರಲಿಲ್ಲವೆಂದು ಘಂಟಾಘೋಷವಗಿ ಹೇಳಿರಬೇಕಾಗಿತ್ತು. ಆದರೆ ವಿಜಯಾ ಹಾಗೆ ಮಾಡಲಿಲ್ಲ.

ವಿಜಯಾಗೆ ಈಗ ಭಯವಾಗುತ್ತಿದೆ, ಆ ಧಿಕ್ಕಾರ ತಮ್ಮ ಮೇಲೆಯೇ ತಿರುಗುತ್ತೆ ಎಂದು. ವಿಜಯಾ ಯೋಚಿಸಿದರು, ಮಾತಾಡದೆ ಕೇವಲ ಒಂದು ನೋಟದಿಂದಲೇ ಸರೋಜಾಕ್ಷರು ಆಕೆಯನ್ನು ಧೂಳಾಗಿಸಬಲ್ಲರು. ಸರೋಜಾಕ್ಷರ ಒಂದು ಧಿಕ್ಕಾರವಾಣಿಸಾಕು, ಅದು ತಾಯಿ, ಮಗಳು ಇಬ್ಬರನ್ನೂ ಇರಿದು ಹಾಕಬಲ್ಲದು.

ಆ ನಿಃಶಬ್ದ ಧಿಕ್ಕಾರವಾಣಿಯ ಮುಂದೆ ತಮ್ಮ ಬಾಯಿ ತಡೆಯಲಾಗುವುದಿಲ್ಲವೆಂದು ವಿಜಯಾಗೆ ಗೊತ್ತು. ಮರ್ಯಾದೆಯ ಜ್ಞಾನವಿಲ್ಲದ ವಿಜಯಾ, ಯಜಮಾನರ ಹೃದಯ-ದುರ್ಗದಲ್ಲಿ ಪ್ರವೇಶಿಸುವ ದಾರಿ ತಿಳಿಯದೆ, ಯಾವಾಗಲೂ ಆ ದುರ್ಗದ ಬಾಗಿಲಲ್ಲೇ ನಿಂತು ಕೂಗಾಡಿಬಿಟ್ಟು, ಇದೇ ತಮ್ಮ ವಿಜಯವೆಂದುಕೊಂಡಿದ್ದಾರೆ. ಆದರೆ ಈಗೇಕೋ ಆ ಪದ್ಧತಿಯಲ್ಲಿ ನಂಬಿಕೆ ಬರುತ್ತಿಲ್ಲ. ಮೀನಾಕ್ಷಿ ಎಂಬ ಈ ಮಡುಗಿ ವಿಜಯಾರನ್ನು ಶಕ್ತಿಹೀನಳಾಗಿ ಮಾಡಿಬಿಟ್ಟಿದೆಯೇನೋ! ಈ ಸುಳ್ಳು ದಬ್ಬಾಳಿಕೆಯ ತನ್ನ ದುರ್ಗವನ್ನು ಇನ್ನು ಕಾಪಾಡುವುದು ಸಾಧ್ಯವಿಲ್ಲವೆಂದು ತೋರುತ್ತಿದೆ ವಿಜಯಾಗೆ!

ತನ್ನ ಪರವಾಗಿ ಎಷ್ಟೋ ಯುಕ್ತಿಗಳನ್ನು ವಿಜಯಾ ಯೋಚಿಸಿದರು. ಈ ಕಾಲದಲ್ಲಿ ನೀವುಗಳು ಹೆಣ್ಣು ಹುಡುಗಿಯರಿಗೆ ಇಷ್ಟ ಬಂದಂತೆ ನಡೆಯಲು ಮಾತ್ರ ಅನುಮತಿ ಕೊಟ್ಟುಬಿಡುತ್ತೀರಿ, ಅವರು, ತಿಳಿಯದೆ, ಬುದ್ಧಿಯಿಲ್ಲದೆ ಕೆಂಡದಲ್ಲಿ ಕಾಲಿಟ್ಟರೆ ಮಾತ್ರ ಆವಾಗ ಎಲ್ಲರೂ ಜೋರಾಗಿ ಹೇಳುತ್ತೀರಿ. ಅಮ್ಮನ ಮೇಲ್ವಿಚಾರಣೆ ಸರಿಯಾಗಿ ಇದ್ದಿದ್ದರೆ ಹೀಗೆ ಆಗುತ್ತಿತ್ತೇ? ಎಂದು ಅಮ್ಮ ಎಲ್ಲೋ ನೋಡುವುದಿಲ್ಲ. ಅದಕ್ಕೇ ಹೀಗೆ ಎನ್ನುವಿರಿ. ಎಂದು.

ಹೀಗೆಯೇ ಅಲ್ಲವೇ ಜನ ಅನ್ನುವುದು?

ಒಂದು ವೇಳೆ ಈ 'ಜನ' ರ ಮುಖಗಳು ಅವರ ಕಣ್ಣು ಮುಂದೆ ಹಾಯ್ದು ಹೋಯಿತೇನೋ ನಿಲ್ಲಿಸಿ 'ತಾಜಾ' ಮಾಡುತ್ತಿದ್ದಾರೆ. ಮೀನಾಕ್ಷಿ ಒಂದು ಸಲ ಅಮ್ಮನ ಮುಖ ನೋಡಿ. ಅಮ್ಮನ ಮಾತು ಕೇಳಿದರೆ ಎಲ್ಲವೂ ಸುಲಭವಾಗುತ್ತೇ ಎಂದು. ಮೀನಾಕ್ಷಿ ಹಟದಿಂದಿದ್ದಾಳೆ. ಅವಳ ಹಟವನ್ನು ಬಿಡಿಸುವ ಪ್ರಯತ್ನದಲ್ಲಿದ್ದಾರೆ ವಿಜಯಾ.

ಅದಕ್ಕೆ, ಆಕೆ ಇನ್ನೂ ಯಜಮಾನರ ಹತ್ತಿರ ಬಂದು ಈ ವಿಷಯವನ್ನು ಹೇಳಿಲ್ಲ.

ನಾಲ್ಕು ಗೋಡೆಗಳ ಮಧ್ಯೆ ಬೆಳೆಯುತ್ತಿರುವ ರಹಸ್ಯದ ಉದ್ಘಾಟನೆಯನ್ನು ಇನ್ನೂ ಮಾಡಿಲ್ಲ. ಆದ್ದರಿಂದ ಸರೋಜಾಕ್ಷರು ಯಾರಿಗೂ ಹೇಳದೆ ಹೊರಗೆ ಹೋಗುವುದಕ್ಕೆ ವಿಜಯಾ

ಕಾರಣರಾಗಿಲ್ಲ ವಿಚಲಿತ ಅವರು ತಾವೇ ಹೊರ ಪ್ರಪಂಚವನ್ನು ಮರೆತು ಬಿಡುತ್ತೇನೇನೋ ಎಂದು ಹೆದರಿ ಹೊರಗೆ ಹೊರಟಿರಬೇಕು!

ಡಾಕ್ಟರು ಬೇಡ ಎಂದು ಹೇಳಿದ್ದರೂ ಜನರಿಂದ ಕಿಕ್ಕಿರಿದ ಬಸ್ಸಿನಲ್ಲೇ ಸರೋಜಾಕ್ಷರು ಪತ್ತಿಕೊಂಡರು. ಜನಕಿಕ್ಕಿರಿಯದೆ ಇರುವ ಬಸ್ಸುತಾನೇ ಎಲ್ಲಿದೆ? ಈ ಮಧ್ಯಾಹ್ನದ ಹೊತ್ತಿನಲ್ಲೂ ಜನ ಕಿಟಕಿಯ ಕಂಬಿಗಳನ್ನು ಹಿಡಿದು ಜೋತುಕೊಂಡಿದ್ದಾರಲ್ಲಾ!

ಆಶ್ಚರ್ಯವಾಗಿದೆ ಎಷ್ಟು ಜನ ಈ ಪ್ರಪಂಚದಲ್ಲಿ , ಈ ನಗರದಲ್ಲಿ!

ಮಣ್ಣಿನ ಕೆಳಗೆ ಅನ್ನ-ನೀರು ಅವಿತುಕೊಂಡಿದೆ ಎಂಬುದನ್ನು ಜನ ಮರೆತೇಹೋದಂತಿವೆ. ಕೇವಲ ಅಗೆದು ತೆಗೆಯಬೇಕು ಅಷ್ಟೇ! ದಿಕ್ಕು ತೋರದೇ ಎಲ್ಲರೂ ಉಕ್ಕು-ಕಬ್ಬಿಣಗಳ ಕಡೆ ಓಡುತ್ತಿದ್ದಾರೆ. ಬರುತ್ತಾರೆ ಇಟ್ಟಿಗೆಯ ಮಾಳಿಗೆಯ ಮುಂದೆ, ಏನೋ ಎಲ್ಲಾ ಖಜಾನೆಯೂ ಅಲ್ಲೇ ಇದೇ ಎಂಬಂತೆ!

ಆದರೆ ತಲೆಯ ಮೇಲಿನ ಆಕಾಶ ಇನ್ನೂ ಮುಗಿದು ಹೋಗಿಲ್ಲ. ನೆಲದರಸ ಮುಗಿದು ಹೋಗಿಲ್ಲ. ಕೇವಲ ನಾವುಗಳೇ ಮುಗಿದು ಹೋಗುತ್ತಿರುವವರು!

ಲೋಭದ ಒದೆತದಿಂದಾಗಿ ಒಂದು ಶೂನ್ಯತೆಯ ಗವಿಯನ್ನು ಲಕ್ಷ್ಯವಾಗಿಟ್ಟುಕೊಂಡು ಓಡುತ್ತಾ ನಮ್ಮ ಸತ್ವವನ್ನೇ ಕಳೆದು ಕೊಳ್ಳುತ್ತಿದ್ದೇವೆ. ಅದಕ್ಕೇ ಲಕ್ಷ್ಯವಸ್ತುವಿಗೆ ಸೇರಬೇಕೆಂಬ ಧ್ಯೇಯವಿಲ್ಲ. ಸಾಫಲ್ಯದ ಆನಂದವಿಲ್ಲ. ಸುಮ್ಮನೆ ಕಣ್ಣುಮುಚ್ಚಿಕೊಂಡು, ಗುಂಪುಗಳನ್ನು ದಬ್ಬಿಕೊಂಡು ಒಂದು ಶೂನ್ಯತೆಯಲ್ಲಿ ಹೋಗಿ ಬೀಳುತ್ತೇವೆ!

ಮನುಷ್ಯ ಈ ಸ್ವಚ್ಛತೆಯ ಸರಪಳಿಯಲ್ಲಿ ಕಟ್ಟುಂಡಿರದಿದ್ದರೆ? ಬೇಕಾದಷ್ಟು "ಬೇಕು"ಗಳಿಗೆ ಆಸೆ ಪಡದೆ ಇದ್ದರೆ?

ಸರೋಜಾಕ್ಷರು ತಮ್ಮ ಮನಸ್ಸಿನ ವಿಚಿತ್ರ ಪ್ರಶ್ನೆಗೆ ತಾವೇ ವಿನೋದಪಟ್ಟುಕೊಂಡು ಒಂದು ಸರಸವಾದ ಉತ್ತರವನ್ನೂ ಹೇಳಿಕೊಳ್ಳುತ್ತಾರೆ. ಒಂದು ವೇಳೆ ಆ ಬಸ್ಸಿನಲ್ಲಿ ಇಷ್ಟೊಂದು ದೊಂಬಿಯಿರುತ್ತಿರಲಿಲ್ಲವೇನೋ!

"ಏನಜ್ಜಾ, ಏನು, ನಿಂತುಕೊಂಡು ಕನಸ್ಸು ಕಾಣುತ್ತಿದ್ದೀರಾ?

ಬೆಚ್ಚಿನೋಡಿದರು ಸರೋಜಾಕ್ಷರು.

ಯಾರು, ಯಾರನ್ನು ಈತರಹ ಕೇಳಿದ್ದು? ಅದೂ ಹೀಗೆ ನಿರಾಲೋಚನೆಯಿಂದ? ನನ್ನನ್ನಲ್ಲ ತಾನೇ? ನಾಲ್ಕು ಕಡೆ ತಿರುಗಿ ನೋಡಲೆತ್ನಿಸಿದರು.

ಕೇಳಿದವನು ಕಾಣಿಸಲಿಲ್ಲ.

ಆದ್ದರಿಂದ ತನ್ನನ್ನಲ್ಲ ಎಂದಾಯಿತು!

ಸರೋಜಾಕ್ಷರಿಗೆ, ಯಾರೋ ಉತ್ತರ ಕೊಟ್ಟಿದ್ದು ಕೇಳಿಸಿತು ಈಗ. ಆದ್ದರಿಂದ ಆ ಪ್ರಶ್ನೆಯಾರನ್ನು ಕುರಿತು, ಎಂದು ಗೊತ್ತಾಯಿತು. ತೆಳ್ಳನೆಯ ಒಬ್ಬ ಮುದುಕ. ಮೈಮೇಲೆ ಅರೆಮಾಸಲು ಪಂಚೆ ಹಾಕಿಕೊಂಡಿದ್ದು ಹಳೇಯ ಕಾಲದ ಕೋಟು. ಭುಜದ ಮೇಲೆ ಒಂದು ಶಾಲು ಅದನ್ನು ಹೊದ್ದುಕೊಳ್ಳುವಂತಹ ಚಳಿ ಇಲ್ಲ, ಮತ್ತೆ ಬಿಸಿಲಾಗಿರುವುದು ಅವರಿಗೆ

ತಿಳಿದಿಲ್ಲವೆಂದೂ ಹೇಳಲಾಗುವುದಿಲ್ಲ. ಏಕೆಂದರೆ ಬಿಸಿಲಿಗಾಗಿ ಕೈಯಲ್ಲಿ ಛತ್ರಿಯನ್ನೂ ಇಟ್ಟುಕೊಂಡಿದ್ದರು. ನೋಡಿದರೆ ಈ ನಗರದಲ್ಲಿ ವಾಸಮಾಡುವವರಲ್ಲ ಎಂದು ತೋರಿತು. ಇವರು ತಲೆಯ ಮೇಲೆ ಆಕಾಶ ಇದೆ ಎಂಬುದನ್ನು ತಮ್ಮ ಮನೆಯ ಮುಂದೆ ಕುಳಿತು ನಕ್ಷತ್ರಗಳಿಂದ ತುಂಬಿದ ಆಕಾಶವನ್ನು ನೋಡಿ ತಿಳಿದು ಕೊಳ್ಳುತ್ತಾರೆ. ಆದರೆ ಈ ಮಧ್ಯಾಹ್ನದ ಬಿಸಿಲಲ್ಲಿ ಊರಿನ ಜನಸಂದಣಿಯನ್ನು ಹೆಚ್ಚಿಸಲು ಇಲ್ಲಿಗೆ ಬರುತ್ತಾರೆ. ಬರುವುದಕ್ಕೆ ಕಾರಣ, ಈ ನಗರದ ಜನ ಮರೆತು ಬಿಟ್ಟಿದ್ದಾರೆ, ಮಣ್ಣಿನ ಕೆಳಗೆ ಅನ್ನ-ನೀರು ಇದೆ,ಇದು ಅವರ ತಾತ-ಮುತ್ತಾತಂದಿರಿಗೆ ಗೊತ್ತಿತ್ತು ಎಂಬುದನ್ನು ಜ್ಞಾಪಿಸುವುದಕ್ಕೇನೋ! ಮುದುಕರು ಕೇಳಿದರು, "ನನಗೆ ಹೇಳಿದೆಯಾ?" ಎಂದು.

ಸಾಧಾರಣವಾಗಿ "ರಾಕ್" ಸಭೆಯಲ್ಲಿ, ರೋಡಿನ ಮಧ್ಯೆ ಇಟ್ಟಿಗೆ ಇಟ್ಟು ಕ್ರಿಕೆಟ್ ಆಡುವ ಗುಂಪಿನಲ್ಲಿ, ಸಾರ್ವಜನಿಕ ದುರ್ಗಾಪೂಜೆಯ ಪ್ರತಿಮೆಯನ್ನು ನೀರಿಗೆ ಬಿಡಲು ಹೋಗುವ ಲಾರಿಯಲ್ಲಿ ಸರ್ವದಾ ನೋಡುವಂತಹ, ಅಂತಹ ಸಜ್ಜನ ಒಬ್ಬ ಉದ್ದವಾದ ಸಣಕಲುಹುಡುಗ, ಮುಖದಲ್ಲಿ ಒಂದು ವ್ಯಂಗ್ಯಭಾವದೊಂದಿಗೆ ಹೇಳಿದ. "ಹೌದು, ಅಜ್ಜ! ಬಹಳ ಹೊತ್ತಿನಿಂದ ಛತ್ರಿಯ ಇರಿತದಿಂದ ಹೃದಯವು ಸೀಳುತ್ತಿದೆಯಲ್ಲಾ ಎಂದು ಹೇಳಿದೆ." ಆ ಮಹನೀಯರಿಗೆ ಒಂದು ವೇಳೆ ಹುಡುಗನ ಈ ರೀತಿಯ ಭಾಷೆ ತಟ್ಟನೆ ಅರ್ಥವಾಗಲಿಲ್ಲವೋ ಏನೋ, ಅವರು ಆಶ್ಚರ್ಯದಿಂದ ಕೇಳಿದರು, "ಏನು ಹೇಳುತ್ತಿದ್ದೀಯಾ?"

"ಅಜ್ಜನಿಗೆ ಕಿವಿ ಸ್ವಲ್ಪ ಕಮ್ಮಿ ಕೇಳಿಸುತ್ತೇನೋ?"

ಬಸ್ಸಿನಲ್ಲಿ ಸ್ವಲ್ಪ ಮೃದು ನಗುವಿನ ಧ್ವನಿಕೇಳಿಸುತ್ತೆ. ಹುಡುಗನ ವ್ಯಂಗ್ಯಮಾತನ್ನು ಕೇಳಿ ಎಲ್ಲರೂ ಹಿಗ್ಗುತ್ತಿದ್ದಾರೆ ಎಂಬುದರಲ್ಲಿ ಸಂದೇಹವಿಲ್ಲ.

ಪಾಪ ಮುದುಕರು ತಮ್ಮ ಸುಕ್ಕಾದ ಮುಖದಲ್ಲಿ ಒಂದು ದೀನವಾದ ನಗುವಿನೊಂದಿಗೆ "ನಮ್ಮಂತಹ ಭಾಗ್ಯಹೀನರು ಕಿವಿಯಲ್ಲಿ ಸ್ವಲ್ಪ ಕಮ್ಮಿ ಕೇಳಿದರೆಯೇ ಒಳ್ಳೆಯದಪ್ಪಾ," ಎಂದರು. 'ಅದೇನೋ ಸರಿ"- ಹುಡುಗ ಕೇಕೆ ಹಾಕಿ ನಗುತ್ತಾ, "ಇನ್ನೊಬ್ಬ ಅಸ್ಥಿಪಂಜರವನ್ನು ಕೊರೆಯುತ್ತಾ ಧೈರ್ಯವಾಗಿ ಹೋಗುತ್ತೀರಿ. "ದಾರಿಬಿಡಿ ಸ್ವಾಮಿ" ಎಂದು ಕೇಳಲಾರಿರಿ! ಛತ್ರಿಯನ್ನು ದಯವಿಟ್ಟು ಕೆಳಗಿಳಿಸಿ, ಅಜ್ಜ! ಮಹನೀಯರು ಛತ್ರೀಯನ್ನು ಕೆಳಗಿಳಿಸಿ ಸ್ವಲ್ಪ ಕಾತರತೆಯಿಂದ, " ನಮ್ಮಂತಹ ಶಕ್ತಿಯಿಲ್ಲದ ಮನುಷ್ಯರು ಬಸ್ಸು-ಟ್ರಾಮುಗಳಲ್ಲಿ ಹತ್ತುವುದು ಯುಕ್ತವಲ್ಲ," ಎಂದರು.

ಹುಡುಗ ಸ್ವಲ್ಪ ನಾಲಿಗೆಯನ್ನು ತ್ಸೊ ತ್ಸೊ, ಎಂದು ಲೊಚಗುಟ್ಟಿ, " ಹೌದು ಅಜ್ಜಾ, ಅದೇ ನಾನೂ ಹೇಳುವುದು. ಏಕೆ ಕಷ್ಟಪಟ್ಟುಕೊಂಡು ಬಿಸಿಲಲ್ಲಿ ಹೊರಟಿರಿ? ನೆಮ್ಮದಿಯಾಗಿ ಮನೆಯಲ್ಲಿ, ಕೃಷ್ಣಾಜಿನವನ್ನು ಹಾಸಿ ಕೂತುಕೊಂಡು, ಅಜ್ಜಿ ಮಾಡಿಕೊಡುವ ಬೇಲದ ಪಾನಕವನ್ನು ಕುಡಿದು ತಾಳೆಗರಿಯ ಬೀಸಣಿಗೆಯ ಗಾಳಿಯನ್ನು ಸೇವಿಸುತ್ತಾ ಇರುವುದನ್ನು ಬಿಟ್ಟು, ಇಲ್ಲಿ ನಮ್ಮ ಪಕ್ಕೆಗೆ ಛತ್ರಿಯಿಂದ ಚುಚ್ಚಲು ಇಲ್ಲಿಗೆ-"

ಈಗ ನಗುವಿನ ಮೃದು ಗುಂಜನವಲ್ಲ, ನಗುವಿನ ಸ್ಪಷ್ಟವಾದ ಅಲೆಯೇ ಏಳುತ್ತೆ.

ಸ್ವಾಭಾವಿಕವೇ!

ಹಾಸ್ಯಕರವಾದ ಮಾತನ್ನು ಕೇಳಿದರೆ ಜನ ನಗದೇ ಇರುತ್ತಾರೆಯೇ?

ವಿಶೇಷವಾಗಿ ತುಂಬಾ ಜನ ಒಂದು ಕಡೆ ಕೂಡಿರುವಾಗ, ಅವರುಗಳು ಒಬ್ಬೊಬ್ಬ ವ್ಯಕ್ತಿಯಾಗಿ ಇರುವುದಿಲ್ಲ. "ಜನತೆ" ಯಾಗಿ ಹೋಗುತ್ತಾರೆ.

ಇದರ ಅಂಟು ಜಾಡ್ಯವನ್ನು ತಡೆಗಟ್ಟುವ ಶಕ್ತಿ ಯಾವುದಕ್ಕೂ ಇಲ್ಲ.

ಯಾವ ತರಹದ ಜಾಡ್ಯವಾಗಲಿ "ಜನತೆ" ಯನ್ನು ನಿಮಿಷ ಮಾತ್ರದಲ್ಲಿ ಆವರಿಸಿ ಬಿಡುತ್ತೆ. ಯಾವುದಾದರೊಂದು ಚಿಕ್ಕ ವಿಷಯವೇ ಆಗಲಿ ಅದನ್ನು ಹೊಡೆದೆಬ್ಬಿಸ ಬಹುದು, ಯಾವುದಾದರೊಂದು ಬಲವಾದ ಕಂಠ ಅದನ್ನು ಆಕರ್ಷಿಸ ಬಲ್ಲದು, ಅದಕ್ಕೇ, ಜನತೆಯ ಮಧ್ಯೆ ಒಬ್ಬರು ಅಸಭ್ಯರಾಗಿ ನಡೆದು ಕೊಂಡರೆ ಇಡೀ ಜನತೆಯೇ ಅಸಭ್ಯವಾಗುತ್ತೆ. ಒಬ್ಬರು ಸಿಕ್ಕಾಪಟ್ಟೆ ಮಾತಾಡಿದರೆ, ಎಲ್ಲರೂ ಹಾಗೆಯೇ ಮಾಡುತ್ತಾರೆ. ಏಕೆ, ಯಾರನ್ನು, ಏತಕ್ಕಾಗಿ ಎಂಬ ಯಾವ ಯೋಚನೆಯನ್ನೂ, ಯಾರೂ ಮಾಡುವುದಿಲ್ಲ.

ಹಾಗೆಯೇ, ನಗುವೂ ಒಂದೂ ಸಂಕ್ರಾಮಕ ರೋಗವೇ! ಆದ್ದರಿಂದ ಇದು ಜನತೆಯಲ್ಲಿ ಹರಡಲು ಹೊತ್ತು ಹಿಡಿಯುವುದಿಲ್ಲ, ಅದನ್ನು ನೋಡಿ, ಅದನ್ನು ಪ್ರಾರಂಭಿಸಿದವನು ಇನ್ನೂ ಹೊಸ ಹೊಸ ಹಾಸ್ಯಪದಗಳನ್ನು ಉಪಯೋಗಿಸುತ್ತಾನೆ. ಜನ ಇನ್ನೂ ನಗುತ್ತಾರೆ.

ಕೆಲವರು ಇದರಲ್ಲಿ ಪ್ರವೀಣರು, ಹಾಗೆಯೇ ಸುಮ್ಮನೆ ಅಂತಹ ರಸಿಕರನ್ನಲಾಗುವುದಿಲ್ಲ. ಆದರೆ ಹತ್ತಾರು ಜನ ಕೂಡಿರುವುದನ್ನು ಕಂಡರೆ ಅವರ ರಸನೆತಾನಾಗಿಯೇ ಸರಸವಾಗಿ ಬಿಡುತ್ತೆ. ಟ್ರಾಮಿನಲ್ಲಿ, ಬಸ್ಸಿನಲ್ಲಿ, ಟ್ರೇಯಿನಿನಲ್ಲಿ ಎಲ್ಲಾ ಕಡೆಯೂ ಇವರು ತಮ್ಮ ಮಾತಿನ ಮತಾಪನ್ನೂ ಕೆಡಹುತ್ತಾರೆ. "ಏನಣ್ಣಾ, ದಯುವಿಟ್ಟು ಸ್ವಲ್ಪ ಶ್ರೀ ಚರಣವನ್ನು ಮುದುಡಿಕೊಳ್ಳುತ್ತೀರಾ? ಇಲ್ಲದಿದ್ದರೆ ಭಾಗ್ಯಹೀನ ಇಲ್ಲಿ ಸಾಯುತ್ತಿದ್ದೇನೆ. ಅಲ್ಲಲ್ಲ, ಚಾಪೆ ಮುದುಡಿದ ಹಾಗಲ್ಲ, ಕೇವಲ ಸ್ವಲ್ಪ, "ಜಸ್ಟ್" ಮುದುಡಿಕೊಂಡು ಕೂಡುವುದು ಅಷ್ಟೆ..."

"ಏನಜ್ಜಾ, ಸ್ವಲ್ಪ ಕೃಪೆಯಿಟ್ಟು ನೀವು ಹಾಸಿಗೆಯನ್ನು ಎತ್ತಿದ್ದರೆ.... ಪಾಪ.... ಸಾಕು, ಸಾಕು, ಅಜ್ಜನಿಗೆ ಹಗಲು ನಿದ್ದೆಯ ಅಭ್ಯಾಸವಿದೆಯೇನೋ! ಅದಕ್ಕೇ ಮಧ್ಯಾಹ್ನದ ಹೊತ್ತೂ ಹಾಸಿಗೆ ಹಾಕಿಕೊಂಡು..! "ಅತ್ತೇ, ಏನಾದರೂ "ಟ್ರಾನ್ಸ್‌ಫರ್" ಆಗಿ, ಹೋಗುತ್ತಿದ್ದೀರಾ? ಜೊತೆಯಲ್ಲಿರುವ ಸಾಮಾನುಗಳನ್ನು ನೋಡಿ ಕೇಳಿದೆ...." ಇತ್ಯಾದಿ!

ಇವರ ಒಂದೊಂದು ಮಾತಿಗೂ ಕಂಪಾರ್ಟಮೆಂಟಿನ ಜನರೆಲ್ಲಾ, ಗೊಲ್, ಗೊಲ್ಲೆಂದು ನಗಲು ಪ್ರಾರಂಭಿಸುತ್ತಾರೆ, ಮಾತು ಎಷ್ಟೇ ಹೊಲಸು, ಹಳೆಯದು,ಅಗ್ಗವಾದದ್ದು, ಒಳ್ಳೆಯದು, ಯಾವುದೇ ಆಗಲಿ! ರಸಿಕನೂ ಹೊಸದು ಹೊಸದಾಗಿ ನವರಸಗಳನ್ನು ಮುಂದಿಡಲು ಶುರು ಮಾಡುತ್ತಾನೆ. ಅದರ ಧಾರೆಯನ್ನು ನಿಲ್ಲಗೊಡಿಸುವುದಿಲ್ಲ. ಇದನ್ನು ನಿಲ್ಲಿಸುವ ಶಕ್ತಿ ಇರುವುದು ರಾಜನೀತಿ ಒಂದಕ್ಕೇ ಅದೂ ಒಂದು ಭಯಂಕರವಾದ ಸಂಕ್ರಾಮಕ ರೋಗ-ಲವೇ?

ಅದು ಈ ನವರಸಗಳಲ್ಲಿ ಯಾವುದಾದರೊಂದು ರಸದ, ಹಿಂದೆಯಾದರೂ ಸರಿಯೇ ಅವಿತುಕೊಂಡಿರಬಲ್ಲದು, ಸಮಯ ಬಂದಾಗ ತಲೆಯನ್ನು ನೀಡಬಲ್ಲದು!

ಈ ಜೀರ್ಣ ಶರೀರದ ವೃದ್ಧವ್ಯಕ್ತಿಯನ್ನು ಕೇಂದ್ರವಾಗಿ ಶುರುವಾದ ಮಾತು ಬಹುಶಃ ರಾಜನೀತಿಯಲ್ಲಿ ಹೋಗಿ ಮುಕ್ತಾಯಗೊಂಡಿರಬಹುದು.

ಆದರೆ ಸರೋಜಾಕ್ಷರು ಅದಕ್ಕಿಂತ ಮುಂಚೆಯೇ ಇಳಿದು ಬಿಟ್ಟರು.

ಕೃಷ್ಣಾಜಿನ, ಬೇಲದ ಹಣ್ಣಿನ ಪಾನಕ ಈ ಮಾತುಗಳನ್ನು ಕೇಳಿ, ಜನತೆಯ ನಗುವನ್ನು ನೋಡಿ ಆ ಸುಕ್ಕಾದ ಮುದಿ–ಮುಖದಲ್ಲಿ, ಏನೋ ಒಂದು, ಅವಮಾನ, ಅಸಹಾಯತೆಯ ವೇದನೆ ಉಮ್ಮಳಿಸಿದಂತೆ ತೋರಿತ್ತು, ಅದನ್ನು ನೆನೆಸಿಕೊಂಡು ಸರೋಜಾಕ್ಷರ ಮನಸ್ಸು ವೇದನೆ ಪಡುತ್ತಿತ್ತು.

ಕುತ್ತಿಗೆಗೆ ಬಣ್ಣದ ಬಟ್ಟೆಯನ್ನು ಸುತ್ತಿಕೊಂಡಿದ್ದ ಆಹುಡುಗ, ಜನರ ನಗುವಿನಿಂದ ಇನ್ನೂ ಹೊಸ ಉತ್ಸಾಹದಿಂದ ಹೇಳತೊಡಗಿದ್ದ, "ಹೌದು, ಸುಮ್ಮ ಸುಮ್ಮನೆ ಏಕೆತಾನೆ ಬಸ್ಸಿನಲ್ಲಿ ಬರುತ್ತೀರೋ, ಅಜ್ಜಿ ಬೇಡ ಅನ್ನುವುದಿಲ್ಲವೇನೋ?

ಆಶ್ಚರ್ಯ! ಇದರಲ್ಲಡಗಿರುವ ಕ್ರೂರ, ನೋಯಿಸುವ ಭಾವ, ಜನರಿಗೆ ಅರ್ಥವಾಗುತ್ತಿಲ್ಲವೇ? ಸರೋಜಾಕ್ಷರಿಗೆ ಆಶ್ಚರ್ಯವಾಯಿತು, ಮನಸ್ಸು ಕಳವಳಗೊಂಡಿತು.ಅವರು ಕಿಟಕಿಯಿಂದ ಆಚೆ ನೋಡಲಾರಂಭಿಸಿದರು.

ಹಾಸ್ಯರಸ ತುಳುಕುತ್ತಿರುವ ಬಸ್ಸಿನಲ್ಲಿ, ಸಹಾನುಭೂತಿಯನ್ನು ತೋರುವಂತಹ ಒಂದು ಮುಖವನ್ನೂ ಕಾಣದೆ ವೃದ್ಧ ಮಹನೀಯರು ಸ್ವಲ್ಪ ಬೇಸರದಿಂದ, "ಇನ್ನೇನು ಇಳಿದು ಹೋಗುತ್ತೇನಪ್ಪಾ ಇನ್ನು ಹೆಚ್ಚು ಹೊತ್ತು ನಿಮಗೆ ತೊಂದರೆ ಕೊಡುವುದಿಲ್ಲ." ಎಂದರು.

ಹುಡುಗ ಮಂಡಿಯನ್ನು ಒಂದು ಸಲ "ಟ್ವಿಸ್ಟ್" ಆಡುವ ಭಂಗಿಯಲ್ಲಿ ಮಡಿಸಿ, ಲೊಚ್‌ಗುಟ್ಟಿ ಹೇಳಿದ, "ಅಯ್ಯಯ್ಯೋ, ತೊಂದರೆ ಏನು? ಇನ್ನೂ ಉಪಕಾರವೇ ಅನ್ನಿ ಮಧ್ಯೆ ಮಧ್ಯೆ ಹೀಗೆಯೇ ಯಾರಾದರೂ ಚುಚ್ಚುತ್ತಿರಬೇಕು. ಅದರಿಂದ ಕೆಟ್ಟ ಚಾಳಿಗೆ ಹೋಗುವ ಭಯ ಇರುವುದಿಲ್ಲ. ಆಗಿರುವುದು ಸರಿಯಾದ ಸಮಯದಲ್ಲಿ, ಸರಿಯಾದ ಕಡೆ ಒಂದು ಪೆಟ್ಟು ಬೀಳುತ್ತಿಲ್ಲವೆಂದು ತಾನೆ ಹೀಗೆ"

ಈಗ ಹಾಸ್ಯ ಧ್ವನಿ ಕೆರೆಯೊಡೆದು ಹೊರಟಿತು. ಆ ಕಡೆ ಒಂದು ಸಲ ನೋಡಿ ಬಿಟ್ಟು ಸರೋಜಾಕ್ಷರು ಇಳಿದು ಬಿಟ್ಟರು.

ಆಶ್ಚರ್ಯಕರವಾಗಿದೆ ಮನುಷ್ಯಜಾತಿಯ ಸ್ವಭಾವ! ಇಷ್ಟೊಂದು ನಾಚಿಕೆಯಿಲ್ಲದ, ಮಮತೆಯಿಲ್ಲದ್ದೇ ಅದು? ಅಲ್ಲ, ಮನುಷ್ಯ ಜಾತಿಯದಲ್ಲ, ಈ ಜನತೆಯೆಂಬ ಜಾತಿಯೇ ಹೀಗೆ! ನಿಧಾನವಾಗಿ ಸರೋಜಾಕ್ಷರು ನಡೆಯಲಾರಂಭಿಸಿದರು. ಎಲ್ಲಿಗೆ ಎಂಬುದು ಒಂದು ವೇಳೆ ಅವರಿಗೂ ಗೊತ್ತಿಲ್ಲವೇನೋ! ಬಿಸಿಲು ಏರಿದೆ. ಅದರ ಬಿಸಿ ಗಾಳಿ ಮೈ ಮೇಲೆ ಸೋಕುತ್ತಿದೆ. ಬಿಸಿಲು ಶುರುವಾದೊಡನೆ, ಎಳೆನೀರಿನ ವ್ಯಾಪಾರವೂ ಶುರುವಾಗುತ್ತೆ. ಮರದಡಿಯಲ್ಲಿ, ಫುಟ್‌ಪಾತಿನಲ್ಲಿ, ಸಿಗರೇಟು ಮತ್ತು ಎಲೆ–ಅಡಿಕೆಯ ಅಂಗಡಿಗಳಲ್ಲಿ, ಎಲ್ಲೆಲ್ಲೂ

ಅದರದೇ ವ್ಯಾಪಾರ. ಅಂಗಡಿಯವ, ತೇರಿದ ಕೈಯಿಂದ ಕಾಯಿಯ ಒಂದು ಕಡೆ ಕೊಯ್ದು, ಕೊಯ್ದು ನೀಡುತ್ತಿದ್ದಾನೆ, ಬಾಯಾರಿದ ಒಬ್ಬೊಬ್ಬರ ಮುಂದೆಯೂ. ಕೆಲವರು ಹಾಗೆಯೇ ಕುಡಿಯುತ್ತಿದ್ದಾರೆ.

ಕೆಲವರು ಕಾಗದದ ಕೊಳವೆಯ ಮೂಲಕ ಕುಡಿಯುತ್ತಿದ್ದಾರೆ.

ಸರೋಜಾಕ್ಷರಿಗೆ ತೋರುತ್ತೆ, ಸರಳವಾಗಿ ಬಾಳುವುದರಲ್ಲಿ ಒಂದು ಸುಖವಿದೆಯೇನೋ ಎಂದು, ನನಗಂತೂ ಯೋಚಿಸುವುದಕ್ಕೇ ಆಗುತ್ತಿಲ್ಲ, ರೋಡಿನ ಮಧ್ಯೆ ಹೀಗ ನಿಂತುಕೊಂಡು. ಏನನ್ನಾದರೂ ತಿನ್ನಬಲ್ಲೆನೆಂದು! ಇವರುಗಳಾದರೋ ಇಷ್ಟು ಸುಲಭವಾಗಿ...

ಬರೀ ಎಳೆ ತೆಂಗೇಕೆ? ಇನ್ನೂ ತರಹವಾರಿ ತಿಂಡಿಗಳೂ....

ನಗರದ ರಸ್ತೆಯ ಮೂಲೆಗಳಲ್ಲೂ, ಬಾಯಲ್ಲಿ ನೀರು ಬರಿಸುವಂತಹ ಅಸಂಖ್ಯಾತ ತಿನ್ನುವ ಪದಾರ್ಥಗಳ ಅಂಗಡಿಗಳು, ಮನುಷ್ಯನ ಇಷ್ಟದ ಬಾಗಿಲನ್ನು ತಟ್ಟಿ ಕರೆಯುತ್ತಿದೆ. ಮತ್ತೆ ಹೇಗೆ ಹೋಗದೆ ಇರುತ್ತಾನೆ?

ಆದರೆ ಸರೋಜಾಕ್ಷರ ಕೈಯಲ್ಲಿ ಅದು ಆಗುವುದಿಲ್ಲ. ಇವೇ ಅವರಲ್ಲಿರುವ ಕುಂದು. ಮಿಕ್ಕ ಹತ್ತುಜನ ಮಾಡುವುದನ್ನು ಅವರು ಮಾಡಲಾರರು. ಇದರಿಂದ ಮಿಕ್ಕವರಿಗೇನೂ ತೊಂದರೆ ಇಲ್ಲ. ತೊಂದರೆ ಅವರಿಗೆಯೇ!

"ಸಾರ್, ಇದೇನು ನೀವು ಇಲ್ಲಿ?" ಒಬ್ಬ ಹುಡುಗ ಬಗ್ಗಿ ನಮಸ್ಕಾರ ಮಾಡಲು ಬಂದ. "ಇರಲಿ,ಇರಲಿ" ಎಂದು ಹೆಜ್ಜೆ ಹಿಂದೆ ಸರಿದು ತಲೆಯೆತ್ತಿ ನೋಡಿಕೇಳಿದರು, "ಯಾರು?" "ಸಾರ್, ನಾನು ಶಿಖರೇಂದು" ನಾನು ಶಿಖರೇಂದು ಎಂದು ಅಷ್ಟು ಹೇಳಿದರೆಯೇ ಅವರಿಗೆ ಜ್ಞಾಪಕ ಬರುತ್ತೆ. ತಾನೂ ಯಾರು, ಅವರು ಯಾವಾಗ ತನಗೆ ಪಾಠ ಹೇಳಿದ್ದರು ಇತ್ಯಾದಿ ಎಂದುಕೊಂಡನೇನೋ ಹುಡುಗ! ಯೋಚಿಸಿ ತಾವೇ ಲಜ್ಜಿತರಾದರು.

ಹೌದು, ಅವರುಗಳು ಅಂತಹ ಭಾವನೆ ಇಟ್ಟುಕೊಂಡಿರುವುದು ಸಹಜವೇ. ಮೂರು, ನಾಲ್ಕು ವರ್ಷಗಳು ಅವರ ಹತ್ತಿರ ಪಾಠ ಹೇಳಿಸಿಕೊಂಡಿದ್ದಾನೆ, ದಿನವೂ ಅವರು ಅವನ ಮುಖವನ್ನು ನೋಡುತ್ತಾ ಬಂದಿದ್ದಾರೆ, ಅಂತಹದರಲ್ಲಿ, ಹೆಸರು ಕೇಳಿ, ಅಥವಾ ಮುಖವನ್ನು ನೋಡಿದರೆ ಜ್ಞಾಪಕ ಬರುತ್ತೆ ಎಂದು ಎದುರು ನೋಡುವುದು ಸಹಜವೇ.

ಒಂದು ವೇಳೆ ಮೇಧಾವಿಂಯಾಗಿಯೂ ಇದ್ದನೇನೋ ನನಗೆ ಪ್ರೀತಿ ಪಾತ್ರನಾಗಿದ್ದನೇನೋ, ನನಗೆ ಜ್ಞಾಪಕ ಬರುತ್ತಿಲ್ಲವಲ್ಲಾ ಎಂದುಕೊಂಡರು ಸರೋಜಾಕ್ಷರು.

ಅಥವಾ ಅಂದು ಘೆರಾವ್ ಮಾಡಿದ ಗುಂಪಿನಲ್ಲೇ ಇದ್ದನೋ! ಇಂದು ಒಬ್ಬನೇ ಇರುವುದರಿಂದ ಮರ್ಯಾದೆಯಿಂದ ನಡೆದು ಕೊಳ್ಳುತ್ತಾನೇನೋ, ಅಥವಾ ಅದಕ್ಕೆ ಸೇರಿದವನಲ್ಲವೋ, ಅಥವಾ ಹಳೆಯ ವಿದ್ಯಾರ್ಥಿಯೋ?

ಮನಸ್ಸಿನ ಈ ಅನುಮಾನವನ್ನು ಬದಿಗೊತ್ತರಿಸಿ ಒಂದು ಸೌಜನ್ಯದ ನಗು ನಕ್ಕು ಕೇಳಿದರು, "ನಾನೂ ನಿನ್ನನ್ನು ಅದೇ ಮಾತು ಕೇಳಬಹುದಲ್ಲಾ?" ಸರ್ ಎಂದು ಹೇಳಿ

ನಮಸ್ಕಾರ ಮಾಡಲು ಬಂದಿರುವಾಗ "ನೀನು" ಎಂದು ಹೇಳುವುದೇ ಸರಿಯೆಂದು ತೋರಿತು ಅವರಿಗೆ.

"ನನ್ನ ವಿಷಯವೇ ಸಾರ್?" ಏನೋ ಒಂದು ಅಸಡ್ಡೆಯಿಂದ ತಾನು ಒಬ್ಬ ಲೆಕ್ಕಕ್ಕಿಲ್ಲದವನೆಂಬಂತೆ ಹೇಳಿದ, "ನನ್ನ ವಿಷಯ ಬಿಡಿ, ಸಾರ್. ಕೆಲಸದ ಓಡಾಟದಲ್ಲಿ, ಸಮಯಾ ಸಮಯದ ಯೋಚನೆಯೇ ಇಲ್ಲ. ಅದೇ ಅರವತ್ತೈದನೇ ಇಸವಿಯಿಂದ, ಎಲ್ಲೆಲ್ಲೋ ಸುತ್ತಿ, ಯಾರು ಯಾರನ್ನೋ ಹಿಡಿದೆ, ಯಾವುದೂ ಇನ್ನೂ ಸಿಕ್ಕಿಲ್ಲ."

ಅರವತ್ತೈದನೇ ಇಸವಿಯೇ!

ಅಂದರೆ ಹಳೆಯ ವಿದ್ಯಾರ್ಥಿ!

"ಘೆರಾವ್" ಗುಂಪಿಗೆ ಸೇರಿದವನಲ್ಲ, ಹಾಗಾದರೆ.

ಮನಸ್ಸಿಗೆ ಸ್ವಲ್ಪ ಸಮಾಧಾನವಾಯಿತು. ಕೇಳಿದರು," ಎಲ್ಲಿದ್ದೀಯ ಈಗ?"

"ಇಲ್ಲೇ ಇದ್ದೇನೆ, ಈಗ ಸಧ್ಯಕ್ಕೆ ತಾಲ್‌ತೊಲಾದಲ್ಲಿ ಸೋದರತ್ತೆಯ ಮನೆಯಲ್ಲೇ. ಒಂದು ಕೆಲಸ ಸಿಕ್ಕಿ ಬಿಟ್ಟರೆ, ಆಮೇಲೆ ಒಂದು ಮನೆ ಬಾಡಿಗೆಗೆ ತೆಗೆದುಕೊಂಡು ಅಮ್ಮನನ್ನು ಕರೆದುಕೊಂಡು ಬರುತ್ತೇನೆ, ಊರಿನ ಮನೆಯಲ್ಲಿ ಒಬ್ಬರೇ ಇದಾರೆ."

ತನ್ನ ವಿಷಯ ಅಷ್ಟು ಮುಖ್ಯವಾದುದ್ದಲ್ಲ ಎಂಬಂತೆ ಮಾತಾಡಿದರೂ, ತನ್ನ ಸಮಾಚಾರವೇ ಮುಖ್ಯವಾಗಿತ್ತು ಮಾತಿನಲ್ಲಿ.

"ಕಡೆಯ ಕಾಲದಲ್ಲೂ ಅಮ್ಮನಿಗೆ ಸ್ವಲ್ಪ ಮನಃಶಾಂತಿಯಿಂದಿರುವ ಹಾಗೆ ಮಾಡದಿದ್ದರೆ ಏನು ಪ್ರಯೋಜನ! ಆದರೆ ಏನು ಹೇಳಲಿ ಸಾರ್, ನೌಕರಿಯ ಸಮಸ್ಯೆ ಹೇಗಾಗಿದೆಯೆಂದರೆ "ಬ್ಯಾಕಿಂಗ್" ಇಲ್ಲದೆ ಯಾವುದೂ ಸಿಗುವುದೇ ಇಲ್ಲ"

ಸರೋಜಾಕ್ಷರು ಹುಡುಗನ ನೀರಸವಾದ ಪ್ರಲಾಪ ಮತ್ತು ಮಾತೃಭಕ್ತಿಯ ಮಾತನ್ನು ಕೇಳಿ ಮೃದುವಾಗಿ ನಕ್ಕರು. ಇಂತಹ ಹುಡುಗನಾಗಿರುವುದರಿಂದಲೇ ಗುರು-ಶಿಷ್ಯ ಸಂಪರ್ಕವನ್ನು ಇನ್ನೂ ಮನಸ್ಸಿನಲ್ಲಿಟ್ಟು ಕೊಂಡಿದ್ದಾನೆ. ಅವರಿಗೆ ತೋರಿತು, ಅಮ್ಮನಿಗೆ ಮನಃಶಾಂತಿಯನ್ನು ನೀಡುವ ಉದ್ದೇಶದ ಹಿಂದೆ ಇರುವುದೇ ವಾಸ್ತವವಾದ ಉದ್ದೇಶ್ಯ. ಅಮ್ಮನಿಗೆ ಮನಃಶಾಂತಿ ನೀಡುವುದು ಒಂದು ತೋರಿಕೆ ಮಾತ್ರವೇ! ತನಗೆ, ತಾನೇ ಮಾಡುತ್ತಿರುವ ಆತ್ಮ-ವಂಚನೆ.

ಈ ಆತ್ಮ-ವಂಚನೆಯ ಹಿಂದೆ ಇರುವುದು. ಹೇಗಾದರೂ, ಯಾವುದಾದರೊಂದು ಕೆಲಸ ಹಿಡಿದು, ಮನೆ ಮಾಡಿಕೊಂಡು ಅಮ್ಮನನ್ನು ಕರೆಸಿ, ಆಮೇಲೆ ಅಮ್ಮನ ಉಪಚಾರಕ್ಕೆಂದು "ಸೇವಕಿ"ಯನ್ನು ತರುವುದು, ಆಮೇಲೆ ಕೆಲದಿನವಾದ ಮೇಲೆ ಅಮ್ಮನ ಮನಃಶಾಂತಿಗಾಗಿ ತಿರುಗಿ ಅಮ್ಮನನ್ನು ಊರಿನ ಮನೆಯಲ್ಲಿ ಬಿಟ್ಟು ಬಿಡುವುದು. ಈಗಿರುವುದಕ್ಕೂ, ಆಗ ಇರುವುದಕ್ಕೂ ವ್ಯತ್ಯಾಸವೇನೆಂದರೆ, ಈಗ ವಾರದಲ್ಲಿ ಒಮ್ಮೆಯಾದರೂ ಅಮ್ಮನನ್ನು ನೋಡಲು ಹೋಗುತ್ತಿದ್ದುದು, ಆಗ ಬರೀ ಮನಿ-ಆರ್ಡರ್ ಮೂಲಕ ಮಾತ್ರವೇ ಮಾತೃಭಕ್ತಿಯ ಸೂಚನೆ ಹೋಗುತ್ತೆ. ಅಷ್ಟೇ !

ಇಂತಹವರೇ ದೇಶದಲ್ಲಿ ತುಂಬಿದ್ದಾರೆ.

ಏನಾದರೂ ಕೇಳಬೇಕಲ್ಲಾ ಎಂದು ಕೇಳಿದರು, "ನಿನಗೆ ಯಾರೂ ಅಣ್ಣ–ತಮ್ಮಂದಿರು ಇಲ್ಲವೇ?" ಇದ್ದಾನೆ ಸರ್, ಒಬ್ಬ ತಮ್ಮ ಇದ್ದಾನೆ. ಈಗ ಹತ್ತನೇ ಕ್ಲಾಸಿಗೆ ಬಂದ. ಅವನನ್ನು ಹೈಯರ್ ಎಜುಕೇಷನ್‌ಗೆ ಕಳುಹಿಸುವುದು ಬೇಡ ಎಂದು ಯೋಚಿಸುತ್ತಿದ್ದೇನೆ. ಯಾವುದಾದರೂ ಟೆಕ್ನಿಕಲ್ ಲೈನಿನಲ್ಲಿ.

ಸರೋಜಾಕ್ಷರಿಗೆ ಬಳಲಿಕೆಯಾಗುತ್ತಿತ್ತು.

ಅವರಿಗೆ ಗಾಬರಿಯಾಗಿತ್ತು, ಎಲ್ಲಿ ಅವನು ಎಲ್ಲಾದರೂ ತನ್ನ ಮದುವೆಗಿರುವ ತಂಗಿಯ ವಿಚಾರ ಎತ್ತಿ, ಮದುವೆ ಮಾರ್ಕೆಟ್ಟಿನ ಬಗ್ಗೆ, ದಾರ್ಶನಿಕ ಮನೋಭಾವ ತೋರಿಸಿ ಏನಾದರೂ ಟೀಕೆ ಮಾಡಲು ಶುರು ಮಾಡುತ್ತಾನೋ ಎಂದು!

ಮಾತು ಮುಗಿಸುವುದಕ್ಕಾಗಿ ಹೇಳಿದರು "ಅದೇ ಸರಿ, ಈಗ ಎಲ್ಲಿ ಹೋಗುತ್ತಾ ಇದ್ದೆ ?" "ಇಲ್ಲೇ ಒಬ್ಬರನ್ನು ನೋಡಲು ಹೋಗುತ್ತಿದ್ದೆ. ಅವರ ಸೋದರಳಿಯನಿಗೆ, ಪಬ್ಲಿಕ್ ಸರ್ವಿಸ್ ಕಮಿಷನ್ನಿನ ಚೆಯರ್‌ಮನ್ ಚೆನ್ನಾಗಿ ಗುರುತಂತೆ. ನೋಡೋಣ, ಏನಾದರೂ ಹೇಳಿ, ಕೇಳಿ ಮಾಡುವುದಕ್ಕಾಗುತ್ತದೆಯೇ ಎಂದು. ಊರಿನ ಸ್ಕೂಲಿನಲ್ಲಿ ಮಾಸ್ಟರ್ ಕೆಲಸ ಸಿಕ್ಕಿತ್ತು. ಅಂದರೆ ಅವರುಗಳೇ ಬಹಳ ಕೇಳಿ ಕೊಂಡಿದ್ದರು. ಅಮ್ಮನಿಗೂ ಇಷ್ಟ ಇತ್ತು ಊರಲ್ಲೇ ಇರಬಹುದು ಎಂದು. ಈಗೆಲ್ಲಾ ಸಂಬಳವೂ ಹಿಂದಿನಕಾಲದ ಹಾಗೆ, ಹಾಗೇನೂ "ಪೂರ್" ಅಲ್ಲ, ಆದರೂ ಏನೋ ಒಂದು ತರಹ .... ಈ ಲೈನಿನಲ್ಲಿ ಮಾನ, ಮರ್ಯಾದೆ ಉಳಿಯುವುದಿಲ್ಲ, ಅಲ್ಲವೇ ಸಾರ್? ಸ್ಕೂಲ್ ಮಾಸ್ಟರ್ ಎಂದರೆಯೇ ಶ್ರದ್ಧೆಗೆ ಅರ್ಹರಲ್ಲ ಎಂಬಂತಾಗಿದೆ ಅಲ್ಲವೇ? ನೀವೇ ಹೇಳಿ ಸಾರ್?" ಎಂದು ಅವರ ಮುಖವನ್ನು ನೋಡುತ್ತಾನೆ ಶಿಖರೇಂದು, ಇದಕ್ಕೆ ಸರೋಜಾಕ್ಷರು ಏನು ಹೇಳುತ್ತಾರೆ? ಏನು ತಾನೆ ಹೇಳಬಲ್ಲರು? ಮಾತಿಗಾಗಿ ಹೇಳಿದರು "ಎಲ್ಲಾ ಕಡೆಯೂ ಹಾಗಿಲ್ಲ" ಎಂದು.

ಈಗ ಹುಡುಗನ ವಾದ ತೀವ್ರವಾಯಿತು, "ಏನು ಹಾಗೆ ಹೇಳುತ್ತೀರಾ ಸಾರ್? ಎಲ್ಲಾ ಕಡೆಯೂ ಹಾಗೆಯೇ ಇದೆ ಈಗೆಲ್ಲಾ ಶಿಷ್ಯರು ಗುರುವಿನ ಬೆತ್ತಕ್ಕೆ ಹೆದರುತ್ತಿಲ್ಲ. ಇನ್ನೂ ಗುರುಗಳೇ ಶಿಷ್ಯರಿಗೆ ಹೆದರುತ್ತಿದ್ದಾರೆ." ಚಿಕ್ಕವರಾಗಿದ್ದಾಗ ಯಾವುದೋ ತಲೆಕೆಳಕು ರಾಜ್ಯದಲ್ಲಿ, "ಸುಂಡಿಲಿಯನ್ನು ನೋಡಿ ಬೆಕ್ಕು ಓಡಿತು ಎಂದು ಓದಿದ್ದೆವಲ್ಲಾ, ಅಂತಹ ರಾಜ್ಯದಲ್ಲಿ ಈಗ ಇದ್ದೇವೆ ಎನಿಸುತ್ತೇ, ಇಲ್ಲದಿದ್ದರೆ ನಿಮ್ಮಂತಹವರನ್ನು..... ಹುಡುಗನಿಗೆ ಗಂಟಲು ಬಿಗಿಯುತ್ತೆ. "ಕೇಳಿದೆನಲ್ಲ, ಎಲ್ಲಾ ಪೇಪರಿನಲ್ಲಿ ಬಂದಿತ್ತು. ನಿಮ್ಮಂತಹ ಮನುಷ್ಯರನ್ನು ಹೀಗೆ....." ಮೃದುವಾದರೂ ದೃಢವಾದ ಧ್ವನಿಯಿಂದ ಸರೋಜಾಕ್ಷರು ಹೇಳಿದರು "ಹೋಗಲಿ ಆ ಮಾತು. ಬಹಳ ಹಳೆಯದಾಗಿ ಹೋಯಿತು."

ಇಂಗಿತವನ್ನು ತಿಳಿದುಕೊಳ್ಳದೆ ಶಿಖರೇಂದು ಇನ್ನೂ ಹಾಗೆಯೇ ಹೇಳಿಕೊಂಡು ಹೋದ, ನೀವು ಮಹಾನುಭಾವರು. ಅದಕ್ಕೆ ಅವಮಾನವನ್ನು ಲೆಕ್ಕಿಸಲಿಲ್ಲ. ಕೇಳಿ ನಮಗೆಲ್ಲಾ ಹೇಗಾಗಿತ್ತು ಗೊತ್ತೇ ಸಾರ್? ಇದೆಲ್ಲಾ ಬೇರೆನಿಲ್ಲ, ಬರೀ "ಪಾರ್ಟಿ ಪಾಲಿಟಿಕ್ಸ್" ಸಾರ್! ಈ

ಸ್ಟೂಡೆಂಟರ ಮಧ್ಯೆ ಒಂದೊಂದು "ಗೂಳಿ" ಇದೆ ಸಾರ್, ಇವರುಗಳು ಬೇಕೆಂದೇ ವರ್ಷ, ವರ್ಷವೂ "ಫೇಯಿಲ್" ಆಗಿ, ಕಾಲೇಜಿನಲ್ಲಿ "ಝೂಂಡಾ" ವಾಗಿ ಕೂತುಕೊಂಡು, ಬರುವ ಸ್ಟೂಡೆಂಟ್‌ಗಳ ಮನಸ್ಸನ್ನೆಲ್ಲಾ ವಿಷಮಯವಾಗಿಸುತ್ತಾರೆ ಸಾರ್! "

ಮೃದು ನಕ್ಕು ಸರೋಜಾಕ್ಷರು ಕೇಳಿದರು," ಬೇಕೆಂದು ಫೇಯಿಲ್ ಆಗುತ್ತಾರೆಯೇ?" "ನಗುತ್ತಾ ಇದ್ದೀರ ಸಾರ್ ನೀವು? ಎಲ್ಲಿದ್ದೀರಿ ನೀವು? ಶಿಕ್ಷಣ ಇಲಾಖೆಯಲ್ಲಿ ಸ್ಥಿತಿ ಈಗೆಲ್ಲಾ ಹೇಗಾಗಿದೆ ಗೊತ್ತೇ? ರಂಧ್ರ ರಂಧ್ರದಲ್ಲೂ ಶನಿ! ಎಲ್ಲೂ ಬಾಕಿ ಇಲ್ಲ. ಬರೀ ಕಲ್ಕತ್ತಾ ಯೂನಿವರ್ಸಿಟಿ ಮಾತ್ರವೇ ಅಲ್ಲ, ಎಲ್ಲೆಲ್ಲೂ ಹಾಗೆಯೇ. ನನ್ನ ಸೋದರತ್ತೆಯ ಮಗ ಒಬ್ಬ–" ಸರೋಜಾಕ್ಷರಿಗೆ ಇನ್ನು ತಿಳಿಯಲು ಬಾಕಿ ಇರುವುದಿಲ್ಲ. ಈ ಶಿಖರೇಂದು ಎನ್ನುವ ಹುಡುಗನಿಗೆ ಯಾವ ಅಭಿಪ್ರಾಯವೂ ಅವನ ಸ್ವಂತ ಚೇತನೆಯಿಂದ ಹೊರಬಂದಿಲ್ಲ. ಎಲ್ಲವೂ ಆ ಸೋದರ ಮಾವ, ಈ ಅತ್ತೆಯ ಮಗ ಇಂತಹವರ ಅಭಿಪ್ರಾಯವೇ. ಅವನ ಮನಸ್ಸಿಗೆ ಬೇಕಾದ ಹಾಗೆ ಒಂದು ಒಳ್ಳೆಯ ಕೆಲಸ, ಅದರಿಂದ ಈ ನಗರದಲ್ಲಿ ಒಂದು ಮನೆಮಾಡಿಕೊಂಡು ಇರುವ ಶಕ್ತಿ ಇದ್ದು, ಒಂದು "ಚಿಕ್ಕದ ಸಂಸಾರ" ರಚನೆಯಾಗಿ ಬಿಟ್ಟರೆ, ಈ ಉತ್ತೇಜನೆ, ಖಾರ, ಎಲ್ಲಾ ಹೊರಟು ಹೋಗುತ್ತೆ.

ಸಮಯಕ್ಕೆ ಸರಿಯಾಗಿ ಸಂಪಾದನೆ, ಸಮಯಕ್ಕೆ ಸರಿಯಾಗಿ ಮದುವೆ ಇವರಡೇ ಈ ಯುಗದ ಯಾತನೆಯ ಔಷಧಿ, ಇದರ ಅಭಾವದಿಂದಲೇ ಇವರುಗಳು ಎಲ್ಲವನ್ನೂ ಉರಿಸಿ ಭಸ್ಮ ಮಾಡುತ್ತಾರೆ.

ಸರೋಜಾಕ್ಷರಿಗೆ, ಅವನ ಅತ್ತೆಯ ಮಗನ ಅಭಿಪ್ರಾಯದ ಬಗ್ಗೆ ಕತೆ ಕೇಳಲು ಇಷ್ಟವಿರಲಿಲ್ಲ. ಆದರಿಂದ "ಹೌದು ಎಲ್ಲಾ 'ಪಾರ್ಟಿ–ಪಾಲಿಟಿಕ್ಸ್' ಎಂದು ಗೊತ್ತು." ಎಂದರು.

ಶಿಖರೇಂದು ಇನ್ನೂ ಉತ್ಸಾಹದೊಂದಿಗೆ ಹೇಳಲಾರಂಭಿಸಿದ. "ಅದನ್ನೇ ಹೇಳುತ್ತ ಇದ್ದೇನೆ ಸಾರ್. ನಿಮ್ಮ ವಿಷಯದಲ್ಲಿ ನಡೆದುಕೊಂಡ ವಿಧದಹಿಂದೆ ಇರುವುದೂ ಇದೇ ಕಾರಣ, ಇಲ್ಲದಿದ್ದರೆ" ಸರೋಜಾಕ್ಷರು ದೃಢವಾಗಿ ಹೇಳಿದರು. "ಇಲ್ಲ, ಇವರಲ್ಲಿ ಇನ್ನೇನೂ ಇಲ್ಲ. ಎಲ್ಲಾ ನನ್ನದೇ ತಪ್ಪು ನಾನು ಅವರಿಗೆ ಮರ್ಯಾದೆ ಕೊಟ್ಟು ನಡೆದುಕೊಳ್ಳಲಿಲ್ಲ. ಅದಕ್ಕೆ ಅವರುಗಳು ಸರಿಯಾದ ಜವಾಬುಕೊಟ್ಟರು. ನಾನು, ಇನ್ನೂ ಮರ್ಯಾದೆ, ಸಹನೆಗಳಿಂದ ನಡೆದುಕೊಳ್ಳ ಬೇಕಾಗಿತ್ತು."

ಈ ಮಾತು ಕೇಳಿ ಕಕ್ಕಾ–ಬಿಕ್ಕಿಯಿಂದ ನೋಡಿದ ಶಿಖರೇಂದು

ಮೆಲ್ಲಗೆ ಹೇಳಿದ, "ಆದರೆ ಪೇಪರಿನಲ್ಲಿ–"

"ಪೇಪರಿನ ವಿಷಯ ಬಿಡು, ಎಲ್ಲಾದಕ್ಕೂ ಇನ್ನಷ್ಟು ಬಣ್ಣ ಬಳಿದು ಬರೆಯುವುದೇ ಅವರಿಗೆ ಇಷ್ಟವಾದಂತಹದ್ದು. ಸರಿ–"

ಹೊರಡುವ ಇಂಗಿತವನ್ನು ಸೂಚಿಸಿದರು ಸರೋಜಾಕ್ಷರು.

ಗಂಟು ಬಿದ್ದ ಹುಡುಗ ಇನ್ನೂ ಬಿಡದೆ ಸ್ವಲ್ಪ ಬಾಡಿದ ಧ್ವನಿಯಿಂದ ಹೇಳಿದ, "ಒಂದು ವಿಷಯ ಮಾತ್ರ ಕೇಳಿ ಬಹಳ ದುಃಖವಾಯಿತು ಸಾರ್. ನೀವು ಕಾಲೇಜು ಬಿಟ್ಟು ಬಿಟ್ಟರಂತೆ?"

"ಕಾಲೇಜು ಬಿಟ್ಟಿಲ್ಲ, ಆ ಕಾಲೇಜು ಬಿಟ್ಟಿದ್ದೇನೆ ಅಷ್ಟೆ".

"ನೀವು ಇಲ್ಲ ಎನ್ನುವುದನ್ನು ಯೋಚಿಸುವುದಕ್ಕೇ ಆಗುತ್ತಿಲ್ಲ."

ಸರೋಜಾಕ್ಷರು ಈಗ ನಕ್ಕು ಹೇಳಿದರು, "ಅದರಿಂದ ನಿನಗೇನು ಇಷ್ಟೊಂದು ವ್ಯಥೆ? ನೀನೇನೂ ತಿರುಗ ಆ ಕಾಲೇಜಿಗೆ ಸೇರುತ್ತಿಲ್ಲವಲ್ಲಾ!"

ಶಿಖರೇಂದು ಸಹ ನಕ್ಕ.

"ಅದೇನಿಲ್ಲ, ಆವರೂ ಈಗಿನ ಸ್ಟೂಡೆಂಟರುಗಳಿಗಾಗಿಯೇ–"

"ಅಲ್ಲಿ ಮಾತ್ರವಲ್ಲದೆ ಬೇರೆ ಕಡೆಯೂ ಸ್ಟೂಡೆಂಟರು ಇದಾರಲ್ಲಾ. ಅವರನ್ನಿಟ್ಟುಕೊಂಡೇ ಕೆಲಸ ಮಾಡುವುದು. ನಿಜವಾಗಿಯೂ ಕೆಲಸ ಮಾಡಲು ಪ್ರಯತ್ನಿಸುತ್ತೇನೆ ಇನ್ನು ಮೇಲೆ, ಇಷ್ಟು ದಿನದ ಮೋಸಗಾರಿಕೆಗೆ ಪ್ರಾಯಶ್ಚಿತ್ತವಾಗಿ ನಿಜವಾಗಿ ಕೆಲಸ ಮಾಡುತ್ತೇನೆ."

"ಮೋಸಗಾರಿಕೆಯೇ ? ನೀವು ಮಾಡಿದಿರಾ?" ಶಿಖರೇಂದು ನಾಲಿಗೆಯನ್ನು ಕಚ್ಚಿಕೊಳ್ಳುತ್ತಾನೆ. "ಮೋಸ ನೀವು ಮಾಡಿದಿರಾ? ಇದನ್ನು ನಾನು ನಂಬುತ್ತೇನೆಯೇ? ಜನ ಹಾಗೆಂದು ಆಡಿಕೊಳ್ಳುತ್ತಾರೆಯೇ? ಛಿ, ಛಿ, ಯುಗ ಯುಗಾಂತರವೂ ಹೀಗೆ ನಡೆಯುತ್ತೆ ಸಾರ್, ಮಹತ್ವದ ಹಿಂದೆ ಯಾವಾಗಲೂ ಷಡಯಂತ್ರ ಪಿತೂರಿ ನಡೆಯುತ್ತಿರುತ್ತೇ!"

ದುಃಖದಿಂದ ತಲೆಬಾಗುತ್ತಾನೆ ಶಿಖರೇಂದು

ಆ ಕಡೆ ನೋಡದೆ ಸರೋಜಾಕ್ಷರು, "ನಿನಗೆ ಬೇಗ ಕೆಲಸ ಸಿಗುತ್ತದೆಂದು ಆಶಿಸುತ್ತೇನೆ. ಎಂದು ಹೇಳಿ ಹೊರಟರು. ಮೋಸವಲ್ಲದೆ ಮತ್ತೇನು ಮಾಡಿದೆ? ನೀನೂ ನನ್ನ ಕೈಯಲ್ಲೇ ತರಪೇತಾದವನಲ್ಲವೇ ಎಂದು ಯೋಚಿಸಿದರು.

* * *

ವಿಜಯಾ ಯಾವಸಮಾಚಾರವನ್ನು ಗೋಪ್ಯವಾಗಿಟ್ಟು ಕೊಂಡಿದ್ದರೋ, ಆ ಸುದ್ದಿಯೊಂದಿಗೆಯೇ ಸರೋಜಾಕ್ಷರ ಮುಂದೆ ಕೆರೆಯೊಡೆದು ಬಂದು ಬಿದ್ದರು. ಕಡೆಯುವರೆಗೂ ಅವರು ಸರೋಜಾಕ್ಷರಿಂದ ಹೀಗೆ ಒಬ್ಬರೇ ಹೋಗಿ ಇರುವುದು ಸಾಧ್ಯವಿಲ್ಲವೆಂದೇ ಎಣಿಸಿದ್ದರು. ತನ್ನ ಪೆಟ್ಟಿಗೆ–ಹಾಸಿಗೆ ಮಾತ್ರ ತೆಗೆದುಕೊಂಡು. ಜೀವನೋಪಾಯಕ್ಕೆ ಒಬ್ಬರೇ ಹೋಗುತ್ತಾರೆಯೇ, ಇದು ಅಸಂಭವವೆಂದು ತಿಳಿದಿದ್ದರು. ಆದರೆ, ನಾಳೆ ಬೆಳಗ್ಗೆ ಒಂಭತ್ತು ಗಂಟೆಯ ಗಾಡಿಯಲ್ಲಿ ಹೊರಡುತ್ತೇನೆಂದು ಅವರು ಘೋಷಿಸಿದ್ದನ್ನು ಕೇಳಿ ವಿಜಯಾಗೆ ಆಶಾಭಂಗವಾಯಿತು. ಅಡಿಗೆಯ ಭಟ್ಟನಿಂದ ಸಮಾಚಾರ ತಿಳಿಯಿತು ವಿಜಯಾಗೆ.

ಸರೋಜಾಕ್ಷರು ಅವನಿಗೆಯೇ ಹೇಳಿದ್ದರು ಬೆಳಗ್ಗೆ ಬೇಗ ಊಟಕ್ಕೆ ಬಡಿಸಬೇಕು ಎಂದು. ವಿಜಯಾ ಕೋಣೆಯೊಳಗೆ ಬಂದರು.

ಬಾಗಿಲನ್ನು ಮುಂದಕ್ಕೆ ತಳ್ಳಿ ಒರಗಿಕೊಂಡು ನಿಂತರು.

ಕಣ್ಣುಗಳಲ್ಲಿ ಕೋಪದ ಜ್ವಾಲೆ.

ಮುಖದಲ್ಲಿ ಕಲ್ಲಿನಂತಹ ಕಠಿಣತೆ.

ವಿಜಯಾ ಹಾಗೆ ಬಾಗಿಲನ್ನು ಹಾಕಿ,ಅಡ್ಡಿಯಾಗಿ ನಿಂತುಕೊಳ್ಳದಿದ್ದರೆ ಸರೋಜಾಕ್ಷರು ಒಂದು ವೇಳೆ ಏನೂ ಹೇಳುತ್ತಿರಲಿಲ್ಲವೇನೋ!

ಆಕಸ್ಮಿಕವಾಗಿ ಸರೋಜಾಕ್ಷರಿಗೆ ಬಹಳ, ಬಹಳ ಹಿಂದಿನ ದಿನದ ನೆನಪು ಬಂತು, ಆಗ ವಿಜಯಾರ ಈ ಮೂರ್ತಿಯನ್ನೇ ನೋಡಿದ್ದರು. ಆಗ ಸಾಮಾನ್ಯವಾಗಿ ರಾತ್ರಿ ಎರಡು ಗಂಟೆ, ಮೂರು ಗಂಟೆಯವರೆಗೂ ಅವರು ತಮ್ಮ 'ಸ್ಟಡಿ' ರೂಮಿನಲ್ಲೇ ಓದುತ್ತಾ ಬರೆಯುತ್ತಾ ಕಳೆದುಬಿಡುವರು, ಮತ್ತು ಮನಸ್ಸಿನಲ್ಲೇ, ಅಷ್ಟು ಹೊತ್ತಿಗೆ, ವಿಜಯಾ ನಿದ್ದೆಮಾಡಿರಲಿ ಎಂದು ಪ್ರಾರ್ಥಿಸಿಕೊಳ್ಳುವರು. ಹಾಗಾದರೆ, ರಾತ್ರಿ ಅವರು ಆ ಸೋಫಾದ ಮೇಲೆಯೇ, ರಾತ್ರಿಯ ಮಿಕ್ಕಿದ ಹೊತ್ತನ್ನೂ ಕಳೆದುಬಿಡಬಹುದು. ಆದರೆ ಅವರ ಆ ಪ್ರಾರ್ಥನೆ ಈಡೇರುತ್ತಿರಲಿಲ್ಲ.

ರಾತ್ರಿಯ ಮೊದಲ ಜಾಮದ ನಿದ್ದೆಯಿಂದ ಎಚ್ಚೆತ್ತು ವಿಜಯಾ ಇಳಿದು ಬಂದು, ಅವರ ಸ್ಟಡಿ ರೂಮಿನೊಳಗೆ ಬಂದು ಹೀಗೆಯೇ ಬಾಗಿಲನ್ನು ಹಾಕಿ ಒರಗಿಕೊಂಡು ನಿಂತುಕೊಳ್ಳುವಳು. ಅವಳ ಕಣ್ಣಿಂದ ಕೆಂಡದ ಜ್ವಾಲೆ, ಶ್ವಾಸದಲ್ಲಿ ಉರಿಯುವ ಬಿಸಿಗಾಳಿ ಹೊರಸೂಸುವುದು. ಆಗ ಅವಳನ್ನು ಒಂದು, ಸುಂದರಿಯಾದ ಪಿಶಾಚಿಯಂತೆ ತೋರುವುದು!

ವಿಜಯಾ ಹಲ್ಲು ಕಡಿಯುತ್ತಾ, ಅದುಮಿದ ರೂಕ್ಷ ಧ್ವನಿಯಲ್ಲಿ ಕೇಳುವಳು, "ಏನೂಂತ ತಿಳಿದು ಕೊಂಡಿದ್ದೀರಿ ನೀವು?–"

ಈ ಮೂರ್ತಿಯನ್ನು ನೋಡಿದರೆ ಸರೋಜಾಕ್ಷರಿಗೆ ಭಯವಾಗುತ್ತಿತ್ತು. ಕಾರಣ, ಅವರಿಗೆ ಗೊತ್ತು ಇದಕ್ಕೇನಾದರೂ ಜವಾಬು ಹೇಳಿದರೆ ಒಂದು ಅವಾಂತರವೇ ಆಗುತ್ತೆ ಎಂದು. ಆದ್ದರಿಂದ ಮೆಲ್ಲಗೆ ಕೇಳುವರು. "ನೀನು ಇನ್ನೂ ನಿದ್ದೆ ಮಾಡಲಿಲ್ಲವೇ?" ಎಂದು.

ವಿಜಯಾ ಕಟುವಾಗಿ ಹೇಳುವಳು, "ನಿದ್ದೆಯೇ? ಹೂಂ, ನಿಮಗೆ ಎಂದೆಂದಿಗೂ ಶಾಂತಿಯನ್ನು ಕೊಡಲು ಜೀವದಾಂತ್ಯವೂ ನಿದ್ದೆಮಾಡುತ್ತೇನೆ. ಅದರ ಔಷಧಿಯನ್ನು ನನಗೆ ಈಗಲೇ ತಂದುಕೊಡಿ. ನೀವು ತಂದುಕೊಡುವವರೆಗೂ–"

ಸರೋಜಾಕ್ಷರು ಪುಸ್ತಕ, ನೋಟುಗಳನ್ನು ಜೋಡಿಸಿಡುತ್ತಾ ಬೇಗ ಹೇಳುವರು, "ಏನು,ಏನೇನೋ ಮಾತಾಡುತ್ತೀಯೋ, ಓದುತ್ತಾ ಹಾಗೆಯೇ ಸ್ವಲ್ಪ ಅನ್ಯಮನಸ್ಕನಾಗಿ ಬಿಟ್ಟಿದ್ದೆ–"

"ಇರಲಿ, ಇರಲಿ, ದಿನಾ ಒಂದೇಕಾರಣವನ್ನು ಹೇಳುತ್ತಾ ಬರಬೇಡಿ. ನಿಮಗೆ ಹೇಳುವುದಕ್ಕೇ ಅಸಹ್ಯವಾಗದಿದ್ದರೂ, ನನಗೆ ಕೇಳುವುದಕ್ಕೆ ಅಸಹ್ಯವಾಗುತ್ತದೆ. ಇನ್ನೆಷ್ಟು ಕಪ್ಪು ಬಳಿಯುತ್ತೀರಿ ನನ್ನ ಮುಖಕ್ಕೆ? ಮನೆಯ ಆಳು, ಕೆಲಸದವಳಿಗೂ ನನ್ನ ಬೆಲೆ ಏನು ಎಂದು ತಿಳಿಯಲು ಬಾಕಿ ಇಲ್ಲ." ಉಸಿರಿನ ತಾಳಕ್ಕೆ ಸರಿಯಾಗಿ ಅವಳ ಎದೆಯು ಏರಿಇಳಿಯುವುದು ಎಲ್ಲಾ ಒಡೆದುಬೀಳುವುದೋ ಎಂಬಂತೆ!

ವಿಜಯಾರ ಆ ಹಳೆಯ ಮೂರ್ತಿಯನ್ನೇ ಈಗ ನೋಡಿದರು ಸರೋಜಾಕ್ಷರು. ಅದೇ ಕಂಠಧ್ವನಿ, "ಸಂಸಾರದ ಎಲ್ಲಾ ಭಾರವನ್ನೂ ನನ್ನ ಮೇಲೆ ಹಾಕಿಬಿಟ್ಟು ಪಾರಾಗಲು ನೋಡುತ್ತಿದ್ದೀರಿ ಅಲ್ಲವೇ?" ಸರೋಜಾಕ್ಷರು ಶಾಂತ ಕಂಠದಿಂದ ಹೇಳಿದರು, "ಸಂಸಾರದ ಭಾರವನ್ನು ಎಂದೂ ನಾನು ಹೊತ್ತುಕೊಂಡಿಲ್ಲವಲ್ಲ."

"ಅದೂ ಸರಿಯೇ, ಗೊತ್ತು ಯಾವಾಗಲೂ ನೀವು ಗಾಳಿಗೆ ಮೈಯೊಡ್ಡಿ ಹಾಯಾಗಿ ಇದ್ದಿದ್ದೀರಿ. ಆದರೆ ಅದಕ್ಕಾಗಿ ಯಾವಾಗಲೂ ಹಾಗೆಯೇ ನಡೆಯುತ್ತದೆಂದು ತಿಳಿಯಬೇಡಿ. ಯೋಚಿಸಿದ್ದೆ, ಹೇಳುವುದು ಬೇಡ ಎಂದು. ಹಾರ್ಟಿನ ಪೇಷಂಟಿಗೆ ಈ ಸರ್ವನಾಶದ ಸುದ್ದಿ ಹೇಳಿ ಹಾರ್ಟ್‌ಫೇಯಿಲ್ ಮಾಡುವುದು ಬೇಡ ಎಂದು. ಹಾರ್ಟಿನ ಪೇಷಂಟಿಗೆ ಈ ಸರ್ವನಾಶದ ಸುದ್ದಿ ಹೇಳಿ ಹಾರ್ಟ್ ಫೇಯಿಲ್ ಮಾಡುವುದೇ ಎಂದು ಸುಮ್ಮನಿದ್ದೆ. ಆದರೆ ನೀವು ನಿಶ್ಚಿಂತೆಯಿಂದ ಹೊರಟುಬಿಟ್ಟಿರುವುದರಿಂದ ಹೇಳದೆ ಬೇರೆ ದಾರಿ ಇಲ್ಲ. ನಾನು ಒಬ್ಬಳೇ ಹೆಣ್ಣು ಹೆಂಗಸು, ಮದುವೆಯಾಗದ ಹುಡುಗಿಯನ್ನು ಕರೆದುಕೊಂಡು ನರ್ಸಿಂಗ್ ಹೋಮಿಗೆ ಹೋಗಿ ಅಲೆಯಲೇ?"

ವಿಜಯಾರ ಎದೆ ಏರಿ ಇಳಿಯುತ್ತೆ.

ಕಂಠದಿಂದ ಅಗ್ನಿಸ್ಫುಲಿಂಗ ಹೊರಡುತ್ತೆ.

ಸರೋಜಾಕ್ಷರು ಸ್ತಬ್ಧರಾಗಿ ನೋಡುತ್ತಿದ್ದರು.

ವಿಜಯಾ ಅದುಮಿದ ಗಂಟಲಲ್ಲಿ ಇನ್ನೂ ಏನೇನೋ ಹೇಳಿಕೊಂಡು ಹೋಗುತ್ತಾರೆ. ಅದೆಲ್ಲಾ ಅವರಿಗೆ ಕೇಳಿಸುತ್ತಿಲ್ಲ. ಎದುರಿಗೆ ಒಂದು ಆಳವಾದ, ದೊಡ್ಡದಾದ ಹಳ್ಳ ಕಾಣುತ್ತಿದೆ ಅವರಿಗೆ ತಮ್ಮ ತ್ರುಟಿಯ, ತಮ್ಮ ಅಶಕ್ತತೆಯ ಹಳ್ಳ!

ವಿಜಯಾ ಹೇಳುತ್ತಾ ಹೋಗುತ್ತಿದ್ದಾರೆ, "ನನ್ನಿಂದ ಆಗುವುದಿಲ್ಲ, ನನ್ನಿಂದ ಆಗುವುದಿಲ್ಲವೆಂದು ನೀವು ಹಾಯಾಗಿ ಇದ್ದುಬಿಡುತ್ತೀರಿ. ಇದ್ದ–ಬಿದ್ದ ಜವಾಬ್ದಾರಿಯೆಲ್ಲಾ ಈ ಹೆಂಗಸಿನದು. ಆದರೆ ಏಕೆ? ಹೇಳಿ ನೋಡೋಣ? ಕುಡಿದುಬಿಟ್ಟು ತಡವರಿಸುತ್ತಾ ಬರುವ ಮಗ, ಸೊಸೆಯನ್ನು ಕರೆದು ಮಾತಾಡಿಸಬೇಕಾದವಳೂ ನಾನೇ. ಮದುವೆಯಾಗದ ಹುಡುಗಿಯ ಕಳಂಕವನ್ನು ಬಚ್ಚಿಡುವುದರ ಜವಾಬ್ದಾರಿಯೂ ನನ್ನದೇ, ನಾನೇ_"

ಆಕಸ್ಮಿಕವಾಗಿ ಸರೋಜಾಕ್ಷರು ದೃಢಸ್ವರದಲ್ಲಿ ಹೇಳಿದರು, "ಸಾಕು, ಸುಮ್ಮನಿರು".

"ಸುಮ್ಮನಿರಲೇ?"

"ಹೌದು, ಸುಮ್ಮನಿರು. ಇನ್ನೊಂದು ಮಾತೂ ಉಚ್ಚರಿಸಬೇಡ"

ಏನೇನೋ ಯುಕ್ತಿಗಳನ್ನು, ಮಾತುಗಳನ್ನು, ಆಡಬೇಕೆಂದು ವಿಜಯಾ ಯೋಚಿಸಿಕೊಂಡು ಬಂದಿದ್ದರು. ಆದರೆ ಇಂತಹ ಒಂದು ಪರಿಸ್ಥಿತಿಯನ್ನು ಎದುರಿಸಲು ತಯಾರಾಗಿರಲಿಲ್ಲ. ಹಠಾತ್ತನೆ ವಿಜಯಾ ತಮ್ಮ ಆತ್ಮಗೌರವವನ್ನು ತ್ಯಜಿಸಿ, ಅತ್ತುಬಿಟ್ಟರು.

ಅವಮಾನದ, ದುಃಖದ, ಅಸಹಾಯಕತೆಯ ಅಳು.

ಅದೇ ಅಳುತ್ತಿದ್ದ ಧ್ವನಿಯಿಂದಲೇ ಕೇಳಿದಳು, 'ಸರಿ, ಸುಮ್ಮನಿರುತ್ತೇನೆ. ಎಂದೆಂದಿಗಾಗಿಯೂ ಸುಮ್ಮನಾಗುತ್ತೇನೆ. ಇದನ್ನು ಮಾತ್ರ ಹೇಳಿ, ಹೋಗಿ. ಈಹುಡುಗಿಗೆ ನಾನೇನು ಮಾಡಲಿ?" ಜ್ವಾಲೆಯ ಜಾಗದಲ್ಲಿ ನೀರು!

ಸರೋಜಾಕ್ಷರು ಕೆಲವು ಕ್ಷಣಗಳು, ಆ ಕಡೆ ನೋಡುತ್ತಿದ್ದರು, ಆಮೇಲೆ ದೃಢತೆಯಿಂದ ಹೇಳಿದರು, "ಅವಳನ್ನ ನಾನು ಕರೆದುಕೊಂಡು ಹೋಗುತ್ತೇನೆ."

"ನಾನು ಕರೆದುಕೊಂಡು ಹೋಗುತ್ತೇನೆ." ಇದೆಂತಹ ಭಾಷೆ ! ಸರೋಜಾಕ್ಷರು ವಿಜಯಾ ಜೊತೆ ವ್ಯಂಗ್ಯದ ಮಾತಿಗೆ ಇಳಿದರೇ? ಅಥವಾ ಏನನ್ನೂ ತಿಳಿದುಕೊಳ್ಳದೆ ಹಾಗೆ ಹೇಳಿವರೇ? ವಿಜಯಾರ ಕಣ್ಣೀರು ಕ್ಷಣಮಾತ್ರದಲ್ಲಿ ಒಣಗಿಹೋಯಿತು. ಮಾಂತ್ರೀಕವಾಗಿ ಕೇಳಿದರು, "ನೀವು ಕರೆದುಕೊಂಡು ಹೋಗುತ್ತೀರಾ?"

"ಹೌದು, ಅವಳನ್ನು ತಯಾರಾಗಿರಲು ಹೇಳು."

ತಮ್ಮ ಆಜ್ಞೆಯನ್ನು ಹೇಳಿ ಸುಮ್ಮನಾದರು ಸರೋಜಾಕ್ಷರು. ವಿಜಯಾಗೆ ಗೊತ್ತು, ಇನ್ನು ಎರಡನೆಯ ಮಾತನ್ನು ಆಡುವವರಲ್ಲ ಅವರು ಎಂದು.

ಆದರೆ ಇದೆಂತಹ ಮಾತು?

ಇದೇನು ವಿಜಯಾಗೆ ಶಿಕ್ಷೆಯೇ?

ವಿಜಯಾಗೆ ತಿರುಗ ಅಳು ಮರುಕಳಿಸುತ್ತೆ, ಕಷ್ಟಪಟ್ಟು ತಡೆದುಕೊಂಡು ಕೇಳಿದರು, "ನೀವು ಅವಳನ್ನು ಕರೆದುಕೊಂಡು ಹೋಗಿ ಏನು ಮಾಡುತ್ತೀರಿ? ಎಲ್ಲಿ ಇಟ್ಟುಕೊಳ್ಳುತ್ತೀರಿ? ನನಗೆ ಶಿಕ್ಷೆ ಕೊಡುವುದಕ್ಕಾಗಿ_"

ಎಷ್ಟೋ ದಿನಗಳ ಮೇಲೆ ಇಂದು ವಿಜಯಾರನ್ನು, ಹೆಸರಿಂದ ಕರೆದು ಮಾತನಾಡಿದರು ಸರೋಜಾಕ್ಷರು. ಹೇಳಿದರು, "ನಿನಗೆ ಶಿಕ್ಷೆ ಕೊಡುವುದಕ್ಕಾಗಿ ಅಲ್ಲ ವಿಜಯಾ. ಇದನ್ನು ಶಿಕ್ಷೆ ಅಂತಲೇ ಇಟ್ಟುಕೊಂಡರೂ, ನನಗೆ ನಾನೇ ಶಿಕ್ಷೆ ಕೊಟ್ಟುಕೊಳ್ಳಲೆಂದಲೇ ಹೀಗೆ ಮಾಡುತ್ತೇನೆ." ಆ ಕರೆಯಿಂದಲೇ ವಿಜಯಾ ಮುಗ್ಧರಾದರೇ? ವಿಜಯಾ ಸ್ತಬ್ಧರಾಗಿ ನಿಂತರು.

ಮೆಲ್ಲಗೆ ಬಾಗಿಲು ಬಿಟ್ಟು ಸರಿದು ನಿಂತರು.

ಅವರ ಸ್ವಭಾವಕ್ಕೆ ವಿರುದ್ಧವಾದ, ನಮ್ರ, ಗಂಟಲು ಬಿಗಿದ ಧ್ವನಿಯಿಂದ ಕೇಳಿದರು. "ಅವಳಿಗೆ ಇದನ್ನು ನಾನು ಹೇಗೆ ಹೇಳಲಿ? ಅವಳು ಒಂದು ವೇಳೆ, ಅವಳ ಮೇಲಿನ ಕೋಪ ಅಸಹ್ಯಕ್ಕಾಗಿ, ನಿಮ್ಮ ಮೇಲೆಯೇ ನೀವು ಸೇಡು ತೀರಿಸಿಕೊಳ್ಳುವುದಾಗಿ ನೆನೆಸಿದರೆ?"

ಸರೋಜಾಕ್ಷರು, "ಸರಿ. ನೀನು ಹೇಳಬೇಡ. ನಾನೇ ಹೇಳುತ್ತೇನೆ." ಎಂದರು.

ಎಷ್ಟೋ ಕಾಲದ ಮೇಲೆ, ಯುಗಗಳಾದ ಮೇಲೆ ಎಂಬಂತೆ, ಸರೋಜಾಕ್ಷರು ಮಗಳ ಕೋಣೆಯ ಮುಂದೆ ಬಂದು ನಿಂತರು.

ಯಾವ ತರಹದ ಪೂರ್ವಪೀಠಿಕೆಯೂ ಇಲ್ಲದೆ, ಶಾಂತಸ್ವರದಲ್ಲಿ ಹೇಳಿದರು. "ಮೀನಾ, ನೀನು ನಿನ್ನ ಬಟ್ಟೆ-ಬರೆಗಳನ್ನು ರೆಡಿಯಾಗಿಟ್ಟುಕೋ. ನಾಳೆ ನನ್ನೊಂದಿಗೆ ಬರುತ್ತೀಯಂತೆ."

ಮೀನಾಕ್ಷಿಗೆ ಅಪ್ಪಾ ಹೋಗುತ್ತಿರುವುದು ಗೊತ್ತಿತ್ತು, ಆದರೂ ಉಸಿರೆತ್ತದೆ ತನ್ನ ಕೋಣೆಯಲ್ಲಿ ಕುಳಿತಿದ್ದಳು. ಮೀನಾಕ್ಷಿ ಅಂದುಕೊಂಡಿದ್ದಳು, ಅಪ್ಪನಿಗೆ ಖಂಡಿತ ಗೊತ್ತಾಗಿದೆ, ಅದಕ್ಕೇ ಅವರು ಅಸಹ್ಯದಿಂದ ಹೊರಟುಹೋಗುತ್ತಿದ್ದಾರೆ. ಅವಳು ಅಂದುಕೊಂಡಿದ್ದಳು, ಅಪ್ಪಾ ತನ್ನೊಂದಿಗೆ ಒಂದು ಮಾತೂ ಆಡದೆ ಹೊರಟುಹೋಗುತ್ತಾರೆ ಎಂದು.

ಬಾಗಿಲಲ್ಲಿ ತಂದೆಯನ್ನು ನೋಡಿದಾಗಲೂ ಅವನ್ನು ಹೇಳಿ ಹೋಗುವುದಕ್ಕಾಗಿಯೇ ಬಂದಿದ್ದಾರೆ ಎಂದುಕೊಂಡಿದ್ದಳು. ಪಕ್ಕನೆ ಎದ್ದು ಕುಳಿತು ಮನಸ್ಸನ್ನು ದೃಢಪಡಿಸಿಕೊಂಡು ಕುಳಿತಳು. ಇಲ್ಲ, ಅವಳು ಅತ್ತುಬಿಡುವುದಿಲ್ಲ.

ಆದರೆ ಅಪ್ಪಾ, ಅವಳು ಎಣಿಸಿರಲಿಲ್ಲವಾದಂತಹ ಮಾತನ್ನು ಅಂದರು!

ಅತಿ ಸಹಜವಾಗಿಯೇ, ಹಿಂದೆಲ್ಲಾ ಮೀನಾಕ್ಷಿಗೆ, "ಈ ಪಾಠವನ್ನು ಚೆನ್ನಾಗಿ ಕಲಿತುಕೊಂಡಿರು. ನಾಳೆ ನಾನು ಕೇಳುತ್ತೇನೆ." ಎಂದು ಹೇಳುತ್ತಿದ್ದ ಹಾಗೆ ಈಗಲೂ ಹೇಳಿದರಲ್ಲಾ. ಹಾಗಾದರೆ ಅಪ್ಪನಿಗೆ ವಿಷಯ ಗೊತ್ತಿಲ್ಲವೇ?

ಆದರೆ ಅಪ್ಪಾ ಹಠಾತ್ತನೆ ಏಕೆ ಮೀನಾಕ್ಷಿಯನ್ನು ಕರೆದುಕೊಂಡು ಹೋಗಲು ತೀರ್ಮಾನಿಸಿದರು? ಮೀನಾಕ್ಷಿ ಕಾಲೇಜಿಗೆ ಹೋಗುತ್ತಿಲ್ಲವೆಂಬುದು ಅವರಿಗೆ ಗೊತ್ತಾಯಿತೇ? ಇರಲಾರದು. ಇದೆಲ್ಲೋ ಅವರು ಮೀನಾಕ್ಷಿಗೆ ಕೊಡುತ್ತಿರುವ ಶಿಕ್ಷೆ ಇರಬೇಕು.

"ಅಪ್ಪಾ !"

ಹೊರಟುಹೋಗುತ್ತಿದ್ದವರು ನಿಂತು, "ನೀನು ಏನಾದರೂ ಹೇಳಬೇಕಾ?" ಎಂದರು.

"ಅಪ್ಪಾ, ನನ್ನನ್ನು ನನಗೆ ಬೇಕಾದ ಹಾಗೆ ಸಾಯಲು ಬಿಡಿ."

ಇದುವರೆಗೂ ಮೀನಾಕ್ಷಿಗೆ ಈ ಸಾಯುವ ಮಾತು, ಮನಸ್ಸಿನಲ್ಲಾಗಲಿ, ಬಾಯಲ್ಲಾಗಲಿ ಬಂದಿರಲಿಲ್ಲ. ಈಗ ಅಪ್ಪಾ, ಸಹಜವಾದ ಧ್ವನಿಯಲ್ಲಿ ಹೇಳಿದ ಆದೇಶ, ಮೃತ್ಯು-ದಂಡನೆಯಂತೆಯೇ ತೋರಿ, ಮೃತ್ಯು-ಚಿಂತೆಯನ್ನು ಅವಳ ಮನಸ್ಸಿನಲ್ಲಿ ಬರಿಸಿತು, ಅವಳಿಗೆ ಅನ್ನಿಸಿತು. ತಾನು ಸಾಯಲೇ ಬೇಕಾಗಿತ್ತು ಎಂದು!

ಸರೋಜಾಕ್ಷರು ಹೊರಟುಹೋಗುತ್ತಿದ್ದವರು ನಿಂತುಕೊಂಡು, "ತನ್ನ ಇಷ್ಟದಂತೆ ಯಾರಿಗೂ ಏನೂ ಮಾಡಲು ಹಕ್ಕಿಲ್ಲಮ್ಮ ಮೀನಾ. ಬದುಕುವುದಕ್ಕೂ ಇಲ್ಲ, ಸಾಯುವುದಕ್ಕೂ ಇಲ್ಲ." ಆದರೂ ಮೀನಾಕ್ಷಿ ತಲೆ ಬಗ್ಗಿಸಿಕೊಂಡೇ ಹೇಳಿದಳು, "ಹೋಗಬೇಕೆಂದು ನನಗೆ ಆದೇಶ ಮಾಡಬೇಡಿ ಅಪ್ಪಾ."

ಮಗಳ ಸುಲಿದ, ಬಿಳುಪೇರಿದ ಮುಖದ ಕಡೆ ಒಂದು ಸಲ ನೋಡಿ, ಹತ್ತ ಹತ್ತರ ಅವರಿಗೆ ಅಭ್ಯಾಸವಿಲ್ಲದ, ಒಂದು ಅಂತರಂಗವಾದ ಭಾವದೊಡನೆ, "ಏನಿದು? ಆದೇಶ ಎಂದು ಯಾರು ಹೇಳಿದ್ದು? ನಾನು ನಿನ್ನನ್ನು ಕೇಳಿಕೊಳ್ಳುತ್ತೇನೆ, ನಾನು ಹೊರಗೆ ಹೋಗುತ್ತಿದ್ದೇನೆ, ನನ್ನನ್ನು ನೋಡಿಕೊಳ್ಳಲು ಒಬ್ಬರು ಬೇಡವೇ?' ಎಂದರು.

ಸರೋಜಾಕ್ಷರೇ ಹೀಗೆ ಹೇಳುತ್ತಿರುವುದು? ನನ್ನನ್ನು ನೋಡಿಕೊಳ್ಳಲು ಒಬ್ಬರು ಬಂದರೆ ವಾಸಿ ಎಂದು? ಅವರು ಯಾವಾಗಿನಿಂದ ಹೀಗೆ ಬದಲಾಯಿಸಿ ಹೋದರು?

ಮೀನಾಕ್ಷಿ ಆಶ್ಚರ್ಯದಿಂದ ಅವರು ಹೋಗುತ್ತಿರುವುದನ್ನು ನೋಡುತ್ತಿರುತ್ತಾಳೆ.

ಎಲ್ಲೂ ಯಾವ ಬಂಧುವೂ ಇಲ್ಲವೆಂದು ಸರೋಜಾಕ್ಷರು ತಿಳಿದಿದ್ದರು. ಆದರೆ ಈಗ ನೋಡಿದರೆ ಸಾವಿರ ಬಂಧುಗಳು! ಪುಸ್ತಕದ ರಾಶಿಯೇ ಒಂದು ಗುಡ್ಡದಂತಿದೆ!

ಪರ್ವತದಂತಿರುವ ಈ ಪುಸ್ತಕದ ರಾಶಿಯನ್ನು ಎಲ್ಲಾದರೂ ಹೊತ್ತುಕೊಂಡು ಹೋಗುವುದಂತೂ ಸಾಧ್ಯವೇ ಇಲ್ಲ. ಇಟ್ಟು ಬಿಟ್ಟು ಹೋಗುವುದಕ್ಕೂ ಮನಸ್ಸು ಎಡೆಕೊಡುವುದಿಲ್ಲ. ಬಹಳ ಅವಶ್ಯಕವಾದದ್ದು ಎಂದು ಆರಿಸಿ ತೆಗೆದಿಟ್ಟದ್ದೇ ಸ್ವಲ್ಪಹೊತ್ತಿನ ಮೇಲೆ ನೋಡಿದರೆ ಒಂದು ಗುಡ್ಡವಾಗಿತ್ತು. ಇದನ್ನೆಲ್ಲಾ ತೆಗೆದು ಟ್ರಂಕುಗಳಲ್ಲಿ ತುಂಬಬೇಕೆಂದು ನೆನೆಸಿಕೊಂಡೇ ಬಳಲಿಕೆಯಾಯಿತು. ಎಲ್ಲಾ ಒಂದು ಬದಿಗಿಟ್ಟು ಎದ್ದು ನಿಂತವರು ಕಿಟಕಿಯ ಹತ್ತಿರ ಹೋಗಿ ನಿಂತರು.

ರಾತ್ರಿ ಎಷ್ಟು ಹೊತ್ತಿರಬಹುದು ಈಗ? ಎರಡೇ? ಎರಡೂವರೆಯೇ ಅಥವಾ ಮೂರೇ? ಕಲ್ಕತ್ತೆಯ ರಸ್ತೆಯನ್ನು ನೋಡಿ ರಾತ್ರಿಯ ಹೊತ್ತನ್ನು ತಿಳಿದುಕೊಳ್ಳುವುದು ಕಷ್ಟ. ಆದರೂ ರಾತ್ರಿ ಕಡೆಯ, ಒಂದು ಹಿಮ–ಪೂರಿತ ತಣ್ಣನೆಯ ಗಾಳಿಬರುತ್ತಿದೆ ಕಿಟಕಿಯಿಂದ– ತಂಗಾಳಿ ಅವರ ಕಣ್ಣುಗಳ, ಮುಖದ ಮೇಲೆ ಬೀಸುತ್ತಿತ್ತು.

ಯೋಚಿಸುತ್ತಿದ್ದರು, ನಿಯತಿ ಎಂದು ಏನಾದರೂ ಒಂದು ಇದೆಯೇ? ಇಂದು ಬೆಳಗ್ಗೆಯಾದರೂ ನಾನು ಯೋಚಿಸಿದ್ದನೇ_

ಹಿಂದೆ ಏನೋ ಶಬ್ದವಾಯಿತು.

ತಿರುಗಿನೋಡಿದರು.

ವಿಜಯಾ ಕೋಣೆಯಿಂದ ಬಂದರು.

ಶಂಕೆಯಿಂದ ಸರೋಜಾಕ್ಷರು ನೋಡಿದರು, ಇನ್ನೇನು ತಿರುಗ?

ಆದರೆ ವಿಜಯಾ ಹೇಗೆ ಮಡಿಯ ನಾತನ್ನೂ ಮರೆತು ಹಾಸಿಗೆಯ ಮೇಲೆ ಬಂದು ಕುಳಿತರು?

ತನ್ನ ಮಡಿಯಾದ ಹಾಸಿಗೆಯ ಹೊರತು ಬೇರೆ ಯಾರ ಹಾಸಿಗೆಯನ್ನು ಆಕೆ ಮುಟ್ಟುವವರೂ ಅಲ್ಲ. ಇಷ್ಟು ರಾತ್ರಿಯಲ್ಲಿ ಇನ್ನೆಂತಹ ಅವಶ್ಯಕತೆಯಿಂದ ಹೀಗೆ ಬಂದಿದ್ದಾರೆ? ಇನ್ನೇನು ಭಯಂಕರವಾದ ಗೋಪ್ಯವಾದ ಮಾತು ಇನ್ನೂ ಬಾಕಿ ಇದೆ ಹಾಗಾದರೆ? ಯಾವುದು ಆಕೆಯನ್ನು ಹೀಗೆ ತಲೆಕೆಳಕಾದ ವ್ಯಾಪಾರಗಳನ್ನು ಮಾಡಲು ಪ್ರೇರೇಪಿಸುತ್ತಿದೆ?

ನೋಡುತ್ತಿದ್ದಾರೆ ಸರೋಜಾಕ್ಷರು.

ಆದರೆ, ಇದೆಂತಹ ಗೋಪ್ಯವಾದ ಮಾತನ್ನು ವಿಜಯಾ ಹೊರಗೆಡಹಿದರು? ಇದೆಂತಹ ಮಾತು? ಅವರ ಅಂತರಂಗದ ಯಾವ ಮೂಲೆಯಲ್ಲಿ ಹುದುಗಿತ್ತು ಇದು? ವಿಜಯಾಗಾದರೂ ಅದು ಗೊತ್ತಿತ್ತೇ?

ಗೊತ್ತಿತ್ತೇ ಅವರಿಗೆ, ತಾನುಹೀಗೆ ಅಭಿಸಾರಿಕೆಯಂತೆ, ರಾತ್ರಿಯ ಮೌನವನ್ನು ಭಂಗಮಾಡಿಕೊಂಡು, ಸರೋಜಾಕ್ಷರೆಂಬ ಪಾಷಾಣಮೂರ್ತಿಯ ಕಾಲ ಕೆಳಗೆ ಬಂದು

ಬಿದ್ದು, 'ನನ್ನನ್ನು ಬಿಟ್ಟುಬಿಟ್ಟು ಹೊರಟುಹೋಗಬೇಡಿ' ಎಂದು ಪ್ರಾರ್ಥಿಸಬೇಕಾಗುತ್ತದೆಂದು ಗೊತ್ತಿತ್ತೇ?

"ನನ್ನನ್ನು ಬಿಟ್ಟು ಬಿಟ್ಟು ಹೋಗಬೇಡಿ"

ಇದೆಂತಹ ಅರ್ಥವಾಗದಂತಹ ಭಾಷೆ!

ವಿಜಯಾರ, ಒರಟು, ರೂಕ್ಷ, ಸ್ಥೂಲ ಶರೀರದ ಯಾವ ಮೂಲೆಯಲ್ಲಿ ಹುದುಗಿತ್ತು ಈ ಬೇಡಿಕೆಯ ಭಾಷೆ!

ಅವರು ಈಗ ಏನು ಮಾಡಬೇಕು?

ಅವರು ಒಂದು ಭಯಂಕರವಾದ ಧೈರ್ಯದ ಶಪಥದೊಂದಿಗೆ ಮೀನಾಕ್ಷಿ ಎಂಬ ಒಂದು ವಿಪತ್ತನ್ನು ಜೊತೆಯಲ್ಲಿ ಕರೆದುಕೊಂಡು ಹೋಗಲು ನಿಶ್ಚಯಿಸಿದ್ದರು. ಆದರೆ ಈ ಹೊಸ ವಿಪತ್ತಿನ ಮುಂದೆ ಕಕ್ಕಾಬಿಕ್ಕಿಯಾಗಿ ನಿಂತರು. ಸರಿ, ನೀನೂ ನಡಿ,ಎಂದೂ ಅವರಿಂದ ತಕ್ಷಣ ಹೇಳಲಾಗಲಿಲ್ಲ.

ಮೂಕ ಗೋಡೆಯನ್ನು ನೋಡುತ್ತಾ ನಿಂತರು. ಅಲ್ಲಿ ಅವರಿಗೆ ಬೇಕಾದ ಉತ್ತರ ಸಿಗಲಿಲ್ಲ. ಒಣಗಂಟಲಿನಿಂದ ಕೇಳಿದರು, "ನೀನೇ? ನೀನು ಹೇಗೆ ಅಲ್ಲಿಗೆ ಬರುತ್ತೀಯಾ?"

ಮುಖವೆತ್ತಿ ನೋಡಿದರು ವಿಜಯಾ ಸ್ಥಿರವಾಗಿ ಹೇಳಿದರು, "ಏಕೆ? ಹೇಗೆ ಹೆಂಡತಿ ಗಂಡನ ಹಿಂದೆ ಹೋಗುತ್ತಾಳೋ ಹಾಗೆಯೇ."

ಆದರೂ, ಅವರು ಹಿಂದೇಟು ಹಾಕುತ್ತಿದ್ದ ಮನಸ್ಸಿಗೆ, ಒಂದು ಮಾತನ್ನು ಕೇಳಿದಿರಲಾಗಲಿಲ್ಲ, "ಆದರೆ ನಿನ್ನ ಈ ದೇವರು-ಗೀವರು ಎಲ್ಲಾ_"

"ಅದರ ಯೋಚನೆ ನಾನು ಮಾಡಿಕೊಳ್ಳುತ್ತೇನೆ."

ಸರೋಜಾಕ್ಷರು ಕಣ್ಣರಳಿಸಿ ನೋಡುತ್ತಿದ್ದರು.

ತಮ್ಮ ಭವಿಷ್ಯದ ಜೀವನದ ಒಂದು ಚಿತ್ರಪಟವನ್ನೇ ಅವರ ಮನಸ್ಸಿನ ತೆರೆಯಲ್ಲಿ ನೋಡಿದರು. ಅಲ್ಲಿ ಒಂದು ತುಟುಕು ಬೆಳಕು ಬರುವ ಹಾಗಾಗಿತ್ತು. ಆದರೆ ನಿಯತಿಯ ಕಪ್ಪು ಕೈ ಅದರ ಒಳಗಿಂದ ನೀಡುತ್ತಿರುವ ಹಾಗೆ ಕಾಣಿಸಿತು. ಯಾವ ಕೈ, ಎಂದೆಂದಿಗಾಗಿಯೂ ಅದರ ಜೀವನವನ್ನು ತನ್ನ ಮುಷ್ಠಿಯಲ್ಲಿ ಇಟ್ಟುಕೊಂಡಿದೆಯೋ ಅದೆ ಕೈ, ಎಂದೆಂದಿಗಾಗಿಯೂ ಅವರ ಜೀವನವನ್ನು ತನ್ನ ಮುಷ್ಠಿಯಲ್ಲಿ ಇಟ್ಟುಕೊಂಡಿದೆಯೋ ಅದೇಕೈ, ಅದರಿಂದ ಅವರಿಗೆ ಮುಕ್ತಿಇಲ್ಲ. ಮತ್ತೆ ಇನ್ನು ಮುಂದೆ, ಈ ಪರಿಚಿತ ಸ್ಥಳವನ್ನು ಬಿಟ್ಟು, ಇನ್ನು ಯಾವುದೋ ಒಂದು ಹೊಸ ಜಾಗದಲ್ಲಿ, ವಿಜಯಾವನ್ನು ಕರೆದುಕೊಂಡು ಹೋಗಿ, ಹೊಸದಾಗಿ ಸಂಸಾರವನ್ನು ಪ್ರಾರಂಭಿಸಬೇಕು.

ವಿಜಯಾರ ಈ ಆವೇಗ, ವ್ಯಾಕುಲತೆ, ಆತ್ಮ-ನಿವೇದನ, ನಮ್ರತೆ ಇತ್ಯಾದಿ ಖಂಡಿತವಾಗಿಯೂ ತಾತ್ಕಾಲಿಕವಾದದ್ದೇ. ಆ ಹೊಸ ಜಾಗಕ್ಕೆ ಹೋಗಿ ನೆಲಸಿದ ಮೇಲೆ ಅವರು ತಮ್ಮ ಸ್ವ-ರೂಪಕ್ಕೆ ತಿರುಗುತ್ತಾರೆ, ಮತ್ತು ಮೀನಾಕ್ಷಿಯ ಸುತ್ತಲೂ ಒಂದು ಸುಳ್ಳಿನ ಬೇಲಿಯನ್ನೇ ರಚಿಸಲಾರಂಭಿಸಬಹುದು.

ಮೀನಾಕ್ಷಿ ಎಂಬ ಈ ವಿಪತ್ತನ್ನು ತಲೆಯ ಮೇಲೆ ಧೈರ್ಯವಾಗಿ ಹೊತ್ತುಕೊಂಡಾಗ ಸರೋಜಾಕ್ಷರು ಡಾಕ್ಟರು, ಮತ್ತು ದುಡ್ಡು ಇವೆರಡೂ ಇದ್ದುಬಿಟ್ಟರೆ ಆ ಹೊಸ ಸನ್ನಿವೇಶದಲ್ಲಿ, ಹಳೆಯ ಜೀವನಕ್ಕೆ ಸಂಬಂಧಿಸಿದವರು ಯಾರೂ ಇಲ್ಲದ ಜಾಗದಲ್ಲಿ, ಪರಿಸ್ಥಿತಿಯನ್ನು ಹತೋಟಿಗೆ ತಂದುಕೊಳ್ಳಬಹುದು ಎಂದು ಎಣಿಸಿದ್ದರು.

ಅಕ್ಕ-ಪಕ್ಕದವರು ಏನೆಂದುಕೊಂಡಾರು?

ಇಷ್ಟ ಬಂದಹಾಗೆ ಅಂದುಕೊಳ್ಳಲಿ!

ಯಾರೂ ಬಂದು ಅವರ ಜೀವನದ ಕಿಟಕಿಯಲ್ಲಿ ಇಣಿಕಿ ನೋಡುವುದಿಲ್ಲವೆಂದು ಅವರು ಎಣಿಸಿದ್ದರು.

ಆದರೆ ವಿಜಯಾ ಅವರ ಆ ನಿಶ್ಚಿಂತೆಯ ಚಿತ್ರದ ಮೇಲೆ ಒಂದು ದಪ್ಪ ತೂಲಿಕೆಯಿಂದ ಕಪ್ಪುಮಸಿಯ ಬರೆಯನ್ನು ಎಳೆದುಬಿಟ್ಟರು. ವಿಜಯಾ ಅಲ್ಲಿ ಹೋದರೆ, ಆ ಕಿಟಕಿಯ ಬಾಗಿಲು ಮುರಿದು ಬೀಳುತ್ತೆ ಮತ್ತು ವಿಜಯಾ ತಮ್ಮ ಸುಳ್ಳಿನ ಬಲೆಯಿಂದ ಅದನ್ನು ಮುಚ್ಚುವ ಹಾಸ್ಯಕರವಾದ ಪ್ರಯತ್ನವನ್ನು ಮಾಡುತ್ತಿರುತ್ತಾರೆ.

ಆ ಕ್ಷಣದಲ್ಲಿ_

ಆ ಕ್ಷಣದಲ್ಲಿ ಸ್ಪಷ್ಟವಾಗಿ ಯಾವುದನ್ನೂ ಒಂದು ವೇಳೆ ಯೋಚಿಸಲಾಗಲಿಲ್ಲವೇನೋ ಸರೋಜಾಕ್ಷರಿಂದ. ಆದರೆ ಆ ರೋಮದಿಂದ ಕೂಡಿದ ಪಂಜೆಯ ಹಿಂದೆ ಇಂತಹ ಅನೇಕ ಚಿತ್ರಗಳ ಸಾಲು ಅವರನ್ನು ವ್ಯಂಗ್ಯದ ದೃಷ್ಟಿಯಿಂದ ನೋಡಿಕೊಂಡು ಸಾಗಿತು.

ಅದರೂ, ಆ ರೋಮಾವೃತ ಪಂಜೆಯಲ್ಲೇ ಅವರು ಆತ್ಮ-ಸಮರ್ಪಣವನ್ನು ಮಾಡಿದರು. ಹೇಳಿದರು, "ಸರಿ, ನಡಿ, ನಿನಗೇನೂ ತೊಂದರೆ ಇಲ್ಲದಿದ್ದರೆ-"

"ತೊಂದರೆ ಎಲ್ಲಿಯದು?"

ಆದರೆ ವಿಜಯಾಗೆ ತೊಂದರೆ ಆಗಬೇಕಾದುದೇ. ಏಕೆಂದರೆ, ಅವರು ತಮ್ಮ 'ವಿಗ್ರಹ'ಗಳ ಸಂಸಾರವನ್ನು, ತಮ್ಮ ಹೊಸ ಸಂಸಾರ ಸ್ಥಳಕ್ಕೆ ತೆಗೆದುಕೊಂಡು ಹೋಗಬಲ್ಲರೇ?

ಅವರುಗಳಿಗೆ ಬೇಸಿಗೆಯಲ್ಲಿ ಗಾಳಿ ಬೀಸಿ 'ಬೆವರನ್ನು' ಒಣಗಿಸಬೇಕು. ಚಳಿಗಾಲದಲ್ಲಿ ಬೆಚ್ಚಗೆ ಹೊದಿಸಬೇಕು, ಬೆಳಗ್ಗೆ ಸುಪ್ರಭಾತ ಹೇಳಬೇಕು. ಕ್ಷಣಕ್ಷಣಕ್ಕೂ ನೈವೇದ್ಯವಾಗಬೇಕು ಅಂತಹವರಿಗೆ ಅಲ್ಲಿ ಏನು ಏರ್ಪಾಟು ಮಾಡುವುದಕ್ಕಾಗುತ್ತೆ?

ಅಲ್ಲಿ ಏನು ಏರ್ಪಾಡು ಮಾಡಲು ಸಾಧ್ಯ? ಇಲ್ಲ, ವಿಜಯಾ ಅವರ 'ದೇವರ-ಸಂಸಾರ'ವನ್ನು ಪುರೋಹಿತರ ಮನೆಯಲ್ಲಿ ಬಿಟ್ಟು ಹೋಗುತ್ತಾರೆ.

ವಿವೇಕದ ಏಟೇ?

ಅದೆಲ್ಲಾ ಏನಿಲ್ಲ. ಬೇಕಾದ 'ಸೇವೆ'ಗಳಿಗಾಗಿ ಒಂದು ಆಕರ್ಷಕ 'ಹುಂಡಿ'ಯನ್ನೇ ಏರ್ಪಾಡು ಮಾಡಿಬಿಟ್ಟೇ ಹೋಗುತ್ತಾರೆ.

ಸರೋಜಾಕ್ಷರು ಹೊರಟುಹೋದರೆ ವಿಜಯಾ, ಆ ಪಟಗಳು, ಬೊಂಬೆಗಳನ್ನಿಟ್ಟುಕೊಂಡು ಏನು ಮಾಡುತ್ತಾರೆ? ಶತ್ರುಪಕ್ಷವೇ ಹೊರಟುಹೋದರೆ, ಅಸ್ತ್ರ ಇಟ್ಟುಕೊಂಡು ಏನು ಪ್ರಯೋಜನ?

*****

ಅಧ್ಯಾಯ ಹನ್ನೆರಡು

ಹಳ್ಳಿಯ ಹೆಸರು ಮೌಟುಂಗ್ರಿ.

ಯಾರಿಗೆ ಗೊತ್ತು ಅದರ ಅರ್ಥ ಏನು ಎಂದು, ಅಥವಾ ಅದು ಯಾವುದಾದರೂ ಮಾತಿನ ಅಪಭ್ರಂಶ, ಯಾವುದೋ ಕಾರಣಗಳಿಂದ ಹೇಗೆ ಹೇಗೋ ಹೆಸರುಗಳ ಉದ್ಭವವಾಗುತ್ತೆ, ಈ ಹಳ್ಳಿ ಮತ್ತು ನಗರಗಳಿಗೆ!

ಒಂದು ವೇಳೆ ಇದು ಆದಿವಾಸಿಗಳ ಭಾಷೆಯೋ ಏನೋ. ಏಕೆಂದರೆ ಈ ಹಳ್ಳಿಯು ಆದಿವಾಸಿಗಳ ಒಂದು ಒಂದು ಹಳ್ಳಿಗೆ ಸೇರಿದಹಾಗಿದೆ. ಹಳ್ಳಿಯ ಪಕ್ಕದಲ್ಲಿ ಹೆಸರಿಲ್ಲದ ಯಾವುದೋ ಒಂದು ಸಣ್ಣ ನದಿ ಪ್ರವಹಿಸುತ್ತಿದೆ. ಪಕ್ಕದಲ್ಲೇ ಚಿಕ್ಕಪುಟ್ಟ ಗುಡ್ಡಗಳೂ ಇವೆ.

ಬಂಗಾಳದ ಹಳ್ಳಿಯಾದರೂ ಸಹ, ಮರ, ಗಿಡ, ಮೈದಾನಗಳಲ್ಲಿ ಬೀಹಾರಿನಒಣ ಭಾವ.ಇದೇ ಶಾರದಾ ಪ್ರಸಾದ್ ಹುಟ್ಟಿದ ಊರು.

ಎಷ್ಟೋ ವರ್ಷಗಳ ಹಿಂದೆ ಬಿಟ್ಟು ಹೋದ ಹಳ್ಳಿಯ ಬೀದಿಯಲ್ಲಿ, ಈಗ ಹೋಗುತ್ತಿದ್ದ ಶಾರದಾಪ್ರಸಾದ್ ಅವರಿವರನ್ನು ಕೇಳುತ್ತಿದ್ದರು, 'ಲಾಹಿರಿ' ಮನೆತನದವರ, 'ಮನೆ ಎಲ್ಲಿದೆ?' ಎಂದು.

ವಿಳಾಸವೇನೋ ಗೊತ್ತೇ ಇತ್ತು. ಏಕೆಂದರೆ ಜ್ಞಾತಿಗಳು ಆಗಾಗ್ಗೆ ಅವರ ಭಾಗದ ಬಾಬತ್ತು ಎಂದು ಅಲ್ಪ-ಸಲ್ಪ ಹಣವನ್ನು ಇದುವರೆಗೂ ಕಳುಹಿಸಿಕೊಡುತ್ತಿದ್ದರು.

ವಿವೇಕದ ಹೊಡೆತದಿಂದ ಖಂಡಿತ ಅಲ್ಲ, ಎಂದಾದರೂ ಒಂದು ವೇಳೆ ಶಾರದಾಪ್ರಸಾದ್ ಬಂದು ತನ್ನ ಭಾಗದ ವಿಷಯ ತಿಳಿದು, ಅದನ್ನೇನಾದರೂ ಮಾರಿಬಿಟ್ಟರೆ ಸುಮ್ಮನೆ ತೊಂದರೆ. ಅದಕ್ಕಿಂತ 'ಮುಷ್ಟಿಭಿಕ್ಷೆ' ಹಾಕುತ್ತಿರುವುದು ಒಳ್ಳೆಯದು, ಎಂದು ಕಳುಹಿಸುತ್ತಿದ್ದರೇನೋ!

ಅದರಿಂದ ಶಾರದಾಪ್ರಸಾದ್‌ಗೆ ಏನೂ ತೊಂದರೆಯಾಗಿಲ್ಲ. ಆರು ತಿಂಗಳು, ಎಂಟು ತಿಂಗಳಿಗೆ ಒಮ್ಮೆ ದುಡ್ಡು ಬಂದಾಗ, ಆತ ತನಗೆ ಬೇಕಾದ, ಕಾಗದ, ಇಂಕು, ಪೆನ್ನು ಮುಂತಾದ್ದನ್ನು ತಂದು ರಾಶಿ ಹಾಕಿಕೊಳ್ಳುತ್ತಿದ್ದರು.

ಬೇರೆ ಏನನ್ನಾದರೂ ಕೊಂಡುಕೊಳ್ಳುವ ಅವಶ್ಯಕತೆ ಇರುವಂತೆಯೇ ತೋರಿರಲಿಲ್ಲ ಆ ಮನುಷ್ಯನಿಗೆ!

ಷರಟು ಹರಿದುಹೋದರೆ ಅದನ್ನು ಹಾಕಿಕೊಂಡು ಹೊರಗೆಹೋಗುವುದಕ್ಕಾಗಲಿ, ಪಂಚೆ ಹರಿದು ಹೋದರೆ ಅದಕ್ಕೆ ಒಂದು ಸೇಫ್ಟಿ ಪಿನ್ನನ್ನು ಸಿಕ್ಕಿಸಿಕೊಂಡಾಗಲಿ ಹೊರಗೆ ಹೋಗಲು ಶಾರದಾಪ್ರಸಾದ್ ಹಿಂಜರಿಯುತ್ತಿರಲಿಲ್ಲ. ಅದು ಸರೋಜಾಕ್ಷರಂತಹ ಅನ್ಯಮನಸ್ಕನಾದ ಮನುಷ್ಯರ ಕಣ್ಣಿಗೂ ಬೀಳುವುದು. ಆದರೆ ಅದು ಯಾವಾಗಲೋ ಒಮ್ಮೆ

ಅಪರೂಪವಾಗಿ ನಡೆಯುವ ವಿಷಯ. ಸರೋಜಾಕ್ಷರಿಗಾಗಿ, ಷರಟು, ಬನಿಯನ್ನು, ಟವಲು ಇತ್ಯಾದಿ ಮನೆಗೆ ಬರುವಾಗ, ಶಾರದಾಪ್ರಸಾದ್‌ಗಾಗಿಯೂ ಒಂದೊಂದು ಮನೆಗೆ ಬಂದು ಬಿಡುತ್ತಿತ್ತು. ಇದು ಸರೋಜಾಕ್ಷರ ತಂದೆಯ ಕಾಲದಿಂದ ನಡೆದು ಬಂದ ಪದ್ಧತಿ.

ಇದನ್ನು ನೋಡಿ ಆಗೆಲ್ಲಾ ವಿಜಯಾರ ತಾಯಿಮನೆಯವರೆಲ್ಲಾ ತಮಾಷೆ ಮಾಡುತ್ತಿದ್ದರು. ಮಗಳು ಯಾವಾಗಲೋ ಸತ್ತುಹೋದಳು, ಮುದುಕ ಅಳಿಯನನ್ನು ಸಾಕುತ್ತಾ ಇದಾನೆ, ಪುಣ್ಯವಂತ! ಎನ್ನುವರು. ಹೋಗಲಿ, ಆ ಕಾಲ ಮುಗಿದು ಹೋಯಿತಲ್ಲ.

ಈಗ ಹೊಸದಾಗಿ ಶಾರದಾಪ್ರಸಾದ್ ತನ್ನ ಹುಟ್ಟಿದ ಊರಿಗೆ ಕಾಲಡಿಯಿಟ್ಟಿದ್ದಾರೆ. ಅವರಿವರನ್ನು ಕೇಳಿಕೊಂಡು, ದಾರಿಯನ್ನು ಕೇಳಿಕೊಂಡು ಬರುವಾಗಲೇ ಸ್ಮೃತಿಪಟಲದಲ್ಲಿ ದಾರಿಯು ಸ್ಪಷ್ಟವಾಗುತ್ತೆ.

ನಗರದ ರಸ್ತೆಯಾದರೆ ಬದಲಾವಣೆಗೊಳ್ಳುತ್ತಿರುತ್ತೆ.

ಇಂದು ಎಲ್ಲಿ ಮೈದಾನವೋ ನಾಳೆ ನೋಡಿದರೆ ಅಲ್ಲಿ ದೊಡ್ಡ ಕಟ್ಟಡ ಇರುತ್ತೆ. ಇಂದು ಒಂದೇ ಮಹಡಿಯ ಮನೆಯಾಗಿರುವುದು ನಾಳೆ ಮೂರುಮಹಡಿಯ ಮನೆಯಾಗಿರುತ್ತೆ. ಇಂದು, ದೊಡ್ಡ ಮನುಷ್ಯನ ಮನೆಯ ಮುಂದಿನ ಉದ್ಯಾನ, ನಾಳೆ ಅಂಗಡಿಗಳ ಸಾಲಾಗಿರುತ್ತೆ.

ಹಳ್ಳಿಯ ಚಹರೆ ಇಷ್ಟೊಂದು ಬದಲಾವಣೆಗೆ ಆಳಾಗುವುದಿಲ್ಲ. ಅಲ್ಲಿ ಬಹುಶಃ, ಯಾವುದೋ ದೊಡ್ಡ ಮನುಷ್ಯನ ಬಿದ್ದು ಹೋಗುತ್ತಿರುವ ಮನೆ, ಸ್ವಲ್ಪ ಸ್ವಲ್ಪವಾಗಿ ಬಿದ್ದು ಕಾಲಕ್ರಮದಲ್ಲಿ ನೆಲಸಮವಾಗುತ್ತೆ. ಒಂದು ವೇಳೆ ಶಿಥಿಲವಾಗುತ್ತಿರುವ ಗ್ರಾಮದೇವತೆಯ ಗುಡಿಯ ಗೋಪುರ ಸ್ವಲ್ಪ ಸ್ವಲ್ಪವಾಗಿ ಒಂದು ಕಡೆಗೆ ವಾಲಿರಬಹುದು. ಫಳ ಫಳವೆಂದು ಮಿನುಗುತ್ತಿದ್ದ ನಾಟ್ಯಮಂದಿರದ ನೆಲ ಬಿರುಕುಬಿಡುತ್ತಿರಬಹುದು. ಒಳಗಿನ ಮೀನುಗಳ ಓಡಾಟ ಕಾಣುತ್ತಿದ್ದಂತಹ ಸ್ವಚ್ಛ ನೀರಿನ ಕೊಳದಲ್ಲಿ ಪಾಚಿ ಕಟ್ಟುತ್ತಿರಬಹುದು.

ಹೆಚ್ಚೆಂದರೆ ಯಾರಾದರೂ ಹಳೆಯ ಮನೆಯನ್ನು ಹಾಗೆಯೇ ಹೊಸದು ಮಾಡುವ ಹಾಸ್ಯಕರವಾದ ಪ್ರಯತ್ನದಲ್ಲಿ, ನೀಡಿಕೊಂಡಿರುವ ಇಟ್ಟಿಗೆಯ ಗೋಡೆಯ ಮೇಲೆ ಸ್ವಲ್ಪ ಸುಣ್ಣವನ್ನು ಬರೆಬರೆಯಾಗಿ ಬಳಿದಿರಬಹುದು. ಯಾರಾದರೂ ಅಡಿಗೆಮನೆಯ ಮೇಲಿನ ಕಸಪರಕೆಗಳನ್ನೆಲ್ಲಾ ಬಿಸಾಕಿ ಅದರ ಮೇಲೆ ಜಿಂಕ್‌ಷೆಡ್ಡನ್ನು ಹಾಕಿರಬಹುದು. ಬಲವಾದ ಗಾಳಿ–ಮಳೆಗೆ ಒಂದೆರಡು ಪುರಾತನವಾದ ಮರಗಳು ಬಿದ್ದುಹೋಗಿರಬಹುದು ಅಷ್ಟೆ. ಇದಕ್ಕಿಂತ ಹೆಚ್ಚು ಬದಲಾವಣೆಗಳಿಗೆ ಮೌಟುಂಗ್ರಿ ಎಂಬ ಈ ಗ್ರಾಮದಲ್ಲಿ ಅವಕಾಶಗಳಿಲ್ಲವೇನೋ!

ರೈಲ್ವೆ ನಿಲ್ದಾಣಗಳಿರುವ ಹಳ್ಳಿಗಳು ನಾಗರಿಕತೆಯಲ್ಲಿ ಸ್ವಲ್ಪ ಮುಂದುವರೆದಿದೆ. ಅಲ್ಲೆಲ್ಲಾ ಸೈಕಲ್ಲು–ರಿಕ್ಷಾಗಳು ಬಂದಿವೆ. ಮನೆ ಮನೆಗಳಲ್ಲಿ 'ಬೈಸಿಕಲ್' ಕಾಣಬಹುದು. ತರುಣ ಸಮಾಜ ಪಂಚೆಯನ್ನು ಬಿಟ್ಟು ಷರಾಯಿಹಾಕಲು ಷುರುಮಾಡಿರುತ್ತೆ, ಮುಕ್ಕಾಲುಪಾಲು ಜನ ತಮ್ಮ ಜೇಬುಗಳಲ್ಲಿ ಟಾರ್ಚನ್ನು ಇಟ್ಟುಕೊಂಡಿರುತ್ತಾರೆ. ಇನ್ನೂ ಸ್ವಲ್ಪ ದುಡ್ಡಿರುವವನ ಹತ್ತಿರ ಒಂದು ಟ್ರಾಂಸಿಸ್ಟರನ್ನೂ ಕಾಣಬಹುದು!

ರೈಲು ನಿಲ್ದಾಣದ ಪಕ್ಕದ ಹಳ್ಳಿಗಳಲ್ಲಿ ಜನರಿಗೆ, ಒಂದೆರಡು ಸ್ಟೇಷನ್ನುಗಳಾಚೆ ಇರುವ ಊರಿಗೆ ಸಿನಿಮಾ ನೋಡಲು ಹೋಗುವ ಅನುಕೂಲವಿದೆ. ಮನದಿಷ್ಟದಂತೆ ಬಟ್ಟೆಬರೆ ಕೊಂಡುಕೊಳ್ಳಬಹುದು. ಹೈಸ್ಕೂಲು, ಆಸ್ಪತ್ರೆಗಳ ಸೌಕರ್ಯವನ್ನು ಉಪಯೋಗಿಸಿಕೊಳ್ಳಬಹುದು.

ಮೌಟುಂಗ್ರಿ ಎಂಬ ಈ ಹಳ್ಳಿ ರೈಲ್ವೇ ಸ್ಟೇಷನ್ನಿನಿಂದ ಬಹಳ ದೂರದಲ್ಲಿದೆ. ಇಲ್ಲಿ ಸೈಕಲ್ಲು ರಿಕ್ಷಾ ಸ್ವಪ್ನದ ವಸ್ತು. ತನ್ನದು ಮತ್ತು ಎತ್ತಿನ ಕಾಲುಗಳೇ ಭರವಸೆಗೆ ಇರುವಂತಹುದು. ಆದರೆ, ಸಾಮಾನುಗಳನ್ನು ಹೇರಿದ ಎತ್ತಿನ ಗಾಡಿಗಳಿಗೆ ಕಡಿಮೆ ಇಲ್ಲ. ಊರಾಚೆಯಲ್ಲಿ ನಿಂತು ಗ್ರಾಮದ ಅನ್ನವನ್ನು ಲೂಟಿಮಾಡಿಕೊಂಡು ಹೋಗುವ ಸಾಹುಕಾರನ ಲಾರಿ ನಿಂತಿರುತ್ತೆ. ಅವುಗಳನ್ನು ತುಂಬಲು ಉಪಯೋಗಕ್ಕೆ ಬರುವುದು ಈ ಎತ್ತಿನ ಗಾಡಿಗಳೇ!

ಇಂತಹ ಒಂದು ಎತ್ತಿನಗಾಡಿಯನ್ನು ಹೊಡೆಯುತ್ತಿದ್ದವನ ಸ್ನೇಹವನ್ನು ಸಂಪಾದಿಸಿಕೊಂಡು ಶಾರದಾಪ್ರಸಾದ್, ಅವನು ಹಿಂದಿರುಗುವಾಗ ಅವನ ಜೊತೆಯಲ್ಲಿ ಹಳ್ಳಿಯೊಳಗೆ ಬಂದಿದ್ದರು. ಗಾಡಿ ಹೊಡೆಯುವವರೆಲ್ಲಾ ಮುಕ್ಕಾಲು ಪಾಲು ಬೀಹಾರಿನವರು. 'ಲಾಹಿರಿ' ಮನೆಯವರ ಬಗ್ಗೆ ಅವರಿಗೇನೂ ಅಕ್ಕರೆ ಇಲ್ಲ.

ಹಳ್ಳಿಯೊಳಗೆ ಬಂದ ಮೇಲೆ ಒಂದೆರಡು ಕಡೆ ವಿಚಾರಿಸಿಕೊಂಡು ಮನೆಯ ಮುಂದೆ ಬಂದು ನಿಂತುಕೊಂಡರು ಶಾರದಾಪ್ರಸಾದ್.

ಆದರೆ, ಉದ್ದನೆಯ, ಶ್ಯಾಮವರ್ಣದ, ಸುಕುಮಾರ ಮುಖವುಳ್ಳ, ಮಧ್ಯವಯಸ್ಕನಾದ ಈ ಮನುಷ್ಯನನ್ನು ಬರಮಾಡಿಕೊಳ್ಳುವ ಅಕ್ಕರೆಯಾದರೂ ಅಲ್ಲಿ ಯಾರಿಗಿದೆ?

ತನ್ನ ಪರಿಚಯ ತಾನೇ ಕೊಡಬೇಕು.

ಯಾರಿಗೆ ತನ್ನ ಪರಿಚಯವನ್ನು ಕೊಡುವುದು? ಆತನಿಗೆ ತಾನೆ ಯಾರದಾದರೂ ಪರಿಚಯ ಇದೆಯೇ?

ಹತ್ತಿರ ಯಾರೂ ಕಾಣಿಸಲೂ ಇಲ್ಲವಲ್ಲಾ!

ಆದರೂ, ಮನಿ–ಆರ್ಡರ್ ಕೂಪನ್ನಿನಲ್ಲಿ ನೋಡಿದ್ದ ಹೆಸರನ್ನು ಜ್ಞಾಪಿಸಿಕೊಂಡು, ಆಹೆಸರನ್ನೇ ಹಿಡಿದು ಸ್ವಲ್ಪ ಗಟ್ಟಿಯಾಗಿ ಕೂಗಿದರು, "ಶ್ಯಾಮಾಪ್ರಸಾದ್ ಬಾಬು ಇದಾರೆಯೇ?"

ಕರೆಯಲ್ಪಟ್ಟವನು, ಸಂಬಂಧದಲ್ಲಿ ತನ್ನ ಅಣ್ಣನ ಮಗನಾದರೂ, 'ಬಾಬು' ಸೇರಿಸಿಯೇ ಕರೆದರು. ಕೆಲ ದಿನಗಳ ಹಿಂದೆ ಇಲ್ಲಿ ತನ್ನ-ಹುಟ್ಟಿದ್ದ ಊರನ್ನು ನೋಡಲು ಬಂದಿದ್ದಾರೆ ಆತ, ಅದೂ, ಬೇರೆ ಯಾವ ಜಾಗವೂ ಜ್ಞಾಪಕಕ್ಕೆ ಬಾರದಿದ್ದರಿಂದ, ಬಂದಿದ್ದಾರೆ. ಈ ಕೆಲದಿನಗಳಲ್ಲೇ ಪ್ರಪಂಚ–ಜ್ಞಾನದ ಅರಿವಿನಿಂದ ವಯಸ್ಸು ಜಾಸ್ತಿಯಾದಂತಿದೆ.

ಆಗಿನ ಸಂದರ್ಭದಲ್ಲಿ ಯೋಚಿಸುತ್ತಿದ್ದರು, ಎಷ್ಟೋ ದಿನಗಳಾದ ಮೇಲೆ ಬರುತ್ತಿದ್ದೇನೆ, ನನ್ನನ್ನು ಕಂಡು ಎಷ್ಟು ಸಂತೋಷ ಪಡುತ್ತಾರೋ, ಹಿಂದಿರುಗಿ ಹೋಗಲು ಬಿಡುತ್ತಾರೋ ಇಲ್ಲವೋ ಎಂದು. ಆದರೆ ಈಗ ವಯಸ್ಸು, ಪ್ರಪಂಚಜ್ಞಾನ ಜಾಸ್ತಿಯಾದ ಶಾರದಾಪ್ರಸಾದ್, ತನ್ನನ್ನು ಗುರುತು ಕಂಡುಹಿಡಿಯುತ್ತಾರೋ ಇಲ್ಲವೋ, ಇರಲು ಸ್ಥಳಬಿಟ್ಟು ಕೊಡುತ್ತಾರೋ

ಇಲ್ಲವೋ. ಎಂದು ಶಂಕೆಗೊಂಡರು.'ಬಾಬು' ಎಂದು ಹೇಳಿ ಕೂಗುವಾಗ ಆ ಸಂಶಯದ ಶಂಕೆ ಧ್ವನಿಯಲ್ಲಿ ಮೂಡಿತ್ತು.

ಒಂದೆರಡು ಸಲ ಕೂಗಿದ ಮೇಲೆ ವರಾಂಡದ ಒಂದು ಬಾಗಿಲು ಸ್ವಲ್ಪ ತೆರೆಯಿತು. ಚೀಟಿಯ ನಿಕ್ಕರನ್ನು ಹಾಕಿಕೊಂಡಿದ್ದ ಒಬ್ಬ ಚಿಕ್ಕ ಹುಡುಗ ಹೊರಗೆ ಬಂದು, 'ಯಾರು?' ಎಂದು ಕೇಳಿತು. "ನಿನಗೆ ನಾನು ಯಾರು ಎಂದು ಗೊತ್ತಾಗುವುದಿಲ್ಲ" ಎಂದು ಹೇಳಿ ಸ್ವಲ್ಪ ಮುಂದೆ ಬಂದು, "ನೀನು ಶ್ಯಾಮಾಪ್ರಸಾದ್‌ಬಾಬು ಮಗನೇ?"ಎಂದು ಕೇಳಿದರು.

ಹುಡುಗ ಅವರ ಪ್ರಶ್ನೆಗೆ ಉತ್ತರಕೊಡದೆ ಒಳಗಡೆ ನೋಡುತ್ತಾ ಕೂಗಿಕೊಂಡಿತು, "ಅತ್ತೆ, ನೋಡು, ಯಾರೋಬಂದಿದ್ದಾರೆ."

ಈಗ ಮಲಿನವಾದ ವಸ್ತ್ರವನ್ನುಟ್ಟಿರುವ ಒಬ್ಬ ವಿಧವೆ ಕಾಣಿಸಿದಳು. ವಯಸ್ಸಿಗೆ ಮೀರಿ ನಲಿದ ದೇಹ. ಒಂದು ಕೈಯಿಂದ ಬಾಗಿಲನ್ನು ಬಿಗಿಯಾಗಿ ಹಿಡಿದುಕೊಂಡು, ಸ್ವಲ್ಪ ರೂಕ್ಷತೆಯಿಂದಲೇ ಕೇಳಿದಳು, 'ಯಾರುಬೇಕು?'

ಶಾರದಾಪ್ರಸಾದ್‌ಗೆ ಈಗ ಪ್ರಪಂಚ ಜ್ಞಾನದಿಂದ ವಯಸ್ಸು ಹೆಚ್ಚಿದ್ದರೂ, ಅಕಾರಣವಾದ ಈ ರೂಕ್ಷತೆ ಏಕೆ ಎಂದು ಅರ್ಥವಾಗುವುದಿಲ್ಲ.

ಇವರುಗಳು, ಪರಿಚಯವಿಲ್ಲದ ಯಾರಾದರೂ ಸರಿಯೇ ಸ್ವಲ್ಪ ಸಂಶಯದಿಂದ ನೋಡುತ್ತಾರೆ, ಮತ್ತು ಅದರಿಂದ ರೂಕ್ಷತೆಯಿಂದ ನಡೆದುಕೊಳ್ಳುತ್ತಾರೆ ಎಂಬುದು ಆತನಿಗೆ ಗೊತ್ತಿರಲಿಲ್ಲ. ಈ ರೂಕ್ಷತೆಯಿಂದ ಮನಸ್ಸು ಇನ್ನೂ ನೊಂದಿತು.

ಮೆಲ್ಲಗೆ ಕೇಳಿದರು, "ಶ್ಯಾಮಾಪ್ರಸಾದ್ ಬಾಬು ಇದಾರೆಯೇ? ನಾನು ಅವರ ಚಿಕ್ಕಪ್ಪಾ ಶಾರದಾಪ್ರಸಾದ್. ಕಲ್ಕತ್ತಾದಿಂದ ಬಂದಿದ್ದೇನೆ."

ವಿಧವೆ ಹೆಂಗಸು ಈಗ ಸ್ವಲ್ಪ ಸಹಜವಾದ ಧ್ವನಿಯಲ್ಲಿ ಹೇಳಿದಳು, 'ಓ, ಗೊತ್ತಾಯಿತು, ಹೊಸ ಅಜ್ಜನ ಮಗ ನೀವು ಅಲ್ಲವೇ? ನಾನು ಶ್ಯಾಮಾನ ಅಕ್ಕಾ. ನೀವು ಈಗತಾನೆ ಬಂದಿರಾ?'

ಧ್ವನಿಯಲ್ಲಿ ಆ ಒರಟುತನ ಇಲ್ಲದಿದ್ದರೂ, ಸಂತೋಷದ ಕುರುಹೇನೂ ಕಾಣಲಿಲ್ಲ. ಇನ್ನೂ ಸ್ವಲ್ಪ ಅಸಂತುಷ್ಟಿಯ ಭಾಸವೇ ತೋರಿತು.

ಪ್ರಶ್ನೆ ಕೇಳಿ ಶಾರದಾಪ್ರಸಾದ್ ಅವಾಕ್ಕಾದರು.

ಈಗತಾನೆ ಬಂದಿರ ಎನ್ನುವುದರ ಅರ್ಥವೇನು? ಅವರಿಗೆ ಇಲ್ಲಿ ಎಲ್ಲಾದರೂ ಬೇರೆಜಾಗ ಇದಯೇ ಬಂದು, ಇಳಿದು, ನಿಧಾನವಾಗಿ ಸ್ನಾನ-ಪಾನಾದಿಗಳನ್ನು ಮುಗಿಸಿಕೊಂಡು, ಜ್ಞಾತಿ-ಗೋತ್ರದವರ ಮನೆಗೆ ನಿಧಾನವಾಗಿ ಭೇಟಿ ಕೊಡುವುದಕ್ಕೆ?!

ಅವಾಕ್ಕಾದ, ಅಸಹನೆಯ ಧ್ವನಿಯಿಂದಲೇ ಶಾರದಾಪ್ರಸಾದ್ ಹೇಳಿದರು, "ಈಗ ಅಲ್ಲದೆ ಮತ್ತೆ ಯಾವಾಗ? ಈಗ ತಾನೆ ಬರುತ್ತಾ ಇದ್ದೇನೆ. ಅಬ್ಬಾ, ಎಷ್ಟೊಂದು ಧೂಳು, ಗಂಟಲೆಲ್ಲಾ ಒಣಗಿಹೋಯಿತು. ಎಲ್ಲಿ, ಒಂದು ಲೋಟಾ ನೀರು ಬೇಕಾಗಿತ್ತಲ್ಲಾ?"

ನೀನು, ಅಥವಾ ನೀವು, ಯಾವುದೆಂಬ ಪ್ರಶ್ನೆಯನ್ನು ದಾಟುವುದಕ್ಕಾಗಿ ಹೀಗೆ!

ಹೆಂಗಸು ಇದರಿಂದ ಬಹಳ ವ್ಯಸ್ತಳಾದ ಹಾಗೆ ಕಾಣಲಿಲ್ಲ, ಆ ಹುಡುಗನ ಹಾಗೆಯೇ ಒಳಗಿನ ಕಡೆ ನೋಡುತ್ತಾ, ಯಾರನ್ನೋ ಉದ್ದೇಶಿಸಿ ಹೇಳಿದಳು, "ಏಯ್, ಒಂದು ಲೋಟಾ ನೀರು ತೆಗೆದುಕೊಂಡು ಬಾ."

ಹೆಂಗಸಿನ ಮಾತಿನಲ್ಲಿ, ಆ ಜಿಲ್ಲೆಯ ಮಾತಿನ ಒಂದು ಎಳೆತ ಇತ್ತು ಅದೇ ಧ್ವನಿಯಲ್ಲೇ ಅವಳು ಕೇಳಿದಳು, "ಈಗತಾನೆ ಬಂದೆ ಎನ್ನುತ್ತೀರಿ, ಜೊತೆಯಲ್ಲಿ, ಸಾಮಾನು-ಗೀಮಾನು ಏನೂ ಇಲ್ಲವೇ?" ಓಹೋ ಅದಕ್ಕೇ ಮತ್ತೆ ಮೊದಲು ಅವಳು ಹಾಗೆ ಕೇಳಿದ್ದು, ಎಂದು ಕೊಂಡರು.

ಊರಿನಿಂದ ಬರುವವರ ಜೊತೆಯಲ್ಲಿ ಏನಾದರೂ ಸಾಮಾನೂ ಇದ್ದೇ ಇರುತ್ತೆ. ಇನ್ನೇನಿಲ್ಲದಿದ್ದರೂ ಒಂದು ಬ್ಯಾಗಾದರೂ ಇರುತ್ತೆ. ಆದರೆ ಶಾರದಾಪ್ರಸಾದರ ಕೈಯಲ್ಲಿ ಏನೂ ಇಲ್ಲ, ಆತನ ಮನಸ್ಸಿನಂತೆಯೇ ಕೈಯೂ ಬರಿದಾಗಿದೆ.

ಆದರೆ ಏಕೆ?

ಶಾರದಾಪ್ರಸಾದರ ಕೈ ಬರಿಗೈ ಏಕೆ? ಏನಾದರೂ ಇದ್ದಿರ ಬೇಕಲ್ಲವೇ? ಸರೋಜಾಕ್ಷರ ಮನೆಯಲ್ಲಿನ ಕೋಣೆಯನ್ನು ಖಾಲಿ ಮಾಡುವುದಕ್ಕಾಗಿ, ಅವರ ನೋಟು-ಪುಸ್ತಕಗಳನ್ನೆಲ್ಲಾ, ಮೂಟೆಯಗಿ ಕಟ್ಟಿ ತಂದಿರಲಿಲ್ಲವೇ ಅವರು?

ತಾನು ಜೀವದಾದ್ಯಂತ ಪೈರುಮಾಡಿದ್ದ ಚಿನ್ನದ ಫಸಲಿನ ಅರ್ಧ ಭಾಗವನ್ನು ಆತ ಹೈಮವತಿಯ ಟೇಬಲ್ಲಿನ ಮೇಲೆ ಬಿಟ್ಟಿದ್ದರು. ಬಾಕಿಯನ್ನು ಏನು ಮಾಡಿದರು? ಅದನ್ನಾದರೂ ತಂದಿರಬೇಕಲ್ಲಾ! ಅದನ್ನು ಅವರು ತಂದಿಲ್ಲವಲ್ಲಾ!

ಆದರೆ ಆ ಹೊರೆಯನ್ನು ಶಾರದಾಪ್ರಸಾದ್ ಇಟ್ಟುಕೊಂಡಾದರೂ ಏನು ಮಾಡುತ್ತಾರೆ? ಪ್ರಿಯ ಜನರು ಎಷ್ಟೇ ಪ್ರಾಣಪ್ರಿಯರಾದರೂ, ಅವರ ಮೃತದೇಹವನ್ನು ಯಾರೂ ಹೊತ್ತುಕೊಂಡು ಓಡಾಡುವುದಿಲ್ಲವಲ್ಲಾ! ಅದರ ಸಮಾಪ್ತಿಯಾಗುವುದೂ ಅಗ್ನಿಯಲ್ಲೋ, ನೀರಿನಲ್ಲೋತಾನೆ?

ಶಾರದಾಪ್ರಸಾದರ ಆ 'ಪ್ರಾಣಪ್ರಿಯ' ನೋಟು-ಪುಸ್ತಕಗಳಿಗೂ ಸಾವು ಬಂದಾಯಿತು. ಆದ್ದರಿಂದ ಅದಕ್ಕೂ ಅವೆರಡರಲ್ಲಿ ಒಂದು ತರಹದ ಅಂತ್ಯವೇ ಆಗಿರಬೇಕು.

ಎಂದೆಂದಿನಿಂದಲೂ ತಾನು ಬೇಡವಾಗಿದ್ದ ಈ ಪಿತೃಭೂಮಿಗೆ, ಆಪ್ತಬಂಧುವನ್ನು ದಹನ ಮಾಡಿಬಿಟ್ಟು ಸ್ಮಶಾನದಿಂದ ಹಿಂತಿರುಗಿದವನಂತೆ ಬಂದಿದ್ದಾರೆ ಈಗ.

ಇಂತಹಮೂರ್ತಿಯಾಗಿ ಬಂದವರನ್ನು ಯಾರು ಬರಮಾಡಿಕೊಳ್ಳುತ್ತಾರೆ?

ಥಳಥಳಿಸುತ್ತಿರುವ ಸೂಟ್ಕೇಸನ್ನು ಹಿಡಿದುಕೊಂಡು, ಕಟ್ಟುಮಸ್ತಾದ, ನಗರದ ಬಳಗದವ ಬಂದರೆ, ಹಳ್ಳಿಯ ಜ್ಞಾತಿಗಳು ಬಾಯಿ ಬಿಟ್ಟುಕೊಂಡು, ಆದರ, ಆತಿಥ್ಯವನ್ನು ಮಾಡುತ್ತಾರೆ. ಇಂತಹ ಬರಿಗೈಯನ್ನು ಯಾರೂ ಹತ್ತಿರ ಸೇರಿಸುವುದಿಲ್ಲ.

ಅದಕ್ಕೇ, ಶ್ಯಾಮಾಪ್ರಸಾದನ ಅಕ್ಕ, ಒಳಗೆ ನೋಡಿ ನೀರು ತರುವಂತೆ ಹೇಳಿದರೂ, ಬಾಯಾರಿದವನ ಆತಿಥ್ಯಕ್ಕಾಗಿ ಆತುರಗೊಳ್ಳಲಿಲ್ಲ, ಕುಳಿತುಕೊಳ್ಳಲೂ ಹೇಳಲಿಲ್ಲ. ಇನ್ನೂ

ಜವಾಬು ಬರದಿದ್ದದನ್ನು ನೋಡಿ, ಪ್ರಶ್ನೆಗಳ ಬಲೆ ಬೀಸಿ ಸಮಾಚಾರಗಳ ಕಿರುಮೀನುಗಳನ್ನು ಹಿಡಿಯಲು ಪ್ರಯತ್ನಿಸಿದಳು. "ಯಾವಾಗಲೂ ಬಂದಹಾಗಿಲ್ಲವಲ್ಲಾ, ಈಗ ಊರು ಜ್ಞಾಪಕ ಬಂತೇ?"

"ಹೇಗೋ, ಬರುವುದಕ್ಕಾಗಿರಲಿಲ್ಲ"– ಶಾರದಾಪ್ರಸಾದ್ ಎಲ್ಲೋ ಅನ್ಯಮನಸ್ಕರಾಗಿ, ಕುಳಿತುಕೊಳ್ಳಲು ಎಲ್ಲಾದರೂ, ಏನಾದರೂ ಇದೆಯೆ ಎಂದು ಆ ಕಡೆ, ಈ ಕಡೆ ನೋಡಿದರು. ಎತ್ತರವಾದ ವರಾಂಡಾಗೆ ಹತ್ತಿ ಹೋಗುವ, ಮೂಲೆ ಒಡೆದ, ನಡೆದು ಸವೆದ ಮೆಟ್ಟಲುಗಳನ್ನು ಬಿಟ್ಟರೆ, ಬೇರೆ ಏನೂ ಇರಲಿಲ್ಲ.ಅದೂ ಧೂಳಿನಿಂದ ತುಂಬಿತ್ತು.

ಬಳಲಿದ ಧ್ವನಿಯಲ್ಲಿ ಕೇಳಿದರು, "ಶ್ಯಾಮಾಪ್ರಸಾದ್ ಯಾವಾಗ ಬರುತ್ತಾನೆ?"

"ಅವನು ಬರುವುದಕ್ಕೆ ಹೊತ್ತಾಗುತ್ತೆ." "ಎಲ್ಲೋ ಅಟಲ್, ನೀರು ತರಲಿಲ್ಲವೇ?"

ಇಷ್ಟು ಹೊತ್ತಿಗೆ ಅಟಲ್ ನಾಮಧಾರಿಯಾದ ಸ್ವಲ್ಪ ದೊಡ್ಡ ಹುಡುಗ, ಪಳಪಳವೆಂದಿರುವ ಚೊಂಬಿನಲ್ಲಿ ನೀರನ್ನೂ, ಇನ್ನೊಂದು ಕೈಯಲ್ಲಿ ಒಂದು ಚಿಕ್ಕ ಸ್ಟೂಲನ್ನೂ ಸಿಕ್ಕಿಸಿಕೊಂಡು ಬಂದ. ಶ್ಯಾಮಾಪ್ರಸಾದನ ಅಕ್ಕ ಸ್ವಲ್ಪ ಬೇಸರದಿಂದ, ಆಕಡೆ ನೋಡಿ, 'ಇಷ್ಟು ಭಾರವನ್ನು ನೀನೇ ಹೊತ್ತುಕೊಂಡು ಬಂದಿಯಾ? ರಾಖಾಲ್ ಏನು ಮಾಡುತ್ತಾ ಇದ್ದಾನೆ?' ಎಂದಳು.

"ಅವನು ಹಸು ಬಿಡಲು ಹೋಗಿದ್ದಾನೆ."

"ಇಡೀ ದಿನ ಹಸು ಬಿಡುತ್ತಾ ಇದಾನಾ?" ಅಲ್ಲಿ ಎದುರಿಗಿಲ್ಲದ ರಾಖಾಲಿನ ಸೋಮಾರಿತನದ ತಪ್ಪನ್ನೆಲ್ಲಾ, ಶಾರದಾಪ್ರಸಾದರಮೇಲೆ ಹೊರಿಸುವಂತೆ ಹೇಳಿದಳು, "ಊಂ, ಕೂತುಕೊಳ್ಳಿ ಚಿಕ್ಕಪ್ಪಾ. ಶ್ಯಾಮಾಮನೆಯಲ್ಲಿದ್ದಾಗ ಬಂದಿದ್ದರೆ ನಿಮಗೆ ಇಷ್ಟು ತೊಂದರೆಯಾಗುತ್ತಿರಲಿಲ್ಲ."

"ಇಲ್ಲ,ಇಲ್ಲ, ತೊಂದರೆ ಏನು?"

ಶಾರದಾಪ್ರಸಾದ್ ವರಾಂಡವನ್ನು ಹತ್ತಿಬಂದು,ಸ್ಟೂಲಿನ ಮೇಲೆಕುಳಿತು, ಚೊಂಬಿನಲ್ಲಿದ್ದ ನೀರನ್ನೆಲ್ಲಾ ಕುಡಿದು, ಒಂದು ದೀರ್ಘಶ್ವಾಸವನ್ನು ಎಳೆದುಕೊಂಡು, ಪಂಚೆಯ ತುದಿಯಿಂದ

ಮುಖ, ಕತ್ತಿನ ಮೇಲೆ ಬಿದ್ದನೀರನ್ನು ಒರೆಸಿಕೊಳ್ಳಲಾರಂಭಿಸಿದರು, ಚೊಂಬಿನಿಂದ ನೀರು ಕುಡಿದು ಅಭ್ಯಾಸವಿಲ್ಲ ಆತನಿಗೆ!

ಶ್ಯಾಮಾಪ್ರಸಾದನ ಅಕ್ಕ ಮನಸ್ಸಿನಲ್ಲಿ ಅಂದುಕೊಂಡಳು, ನಗರದ ಭೂತ! ಚೊಂಬಿಗೆ ಬಾಯಿ ಹಾಕಿ ನೀರು ಕುಡಿಯುತ್ತೆ! ಬಾಯಲ್ಲಿ ಹೇಳಿದಳು, "ನೀವು ಕೈ–ಕಾಲು ತೊಳೆದುಕೊಳ್ಳುತ್ತೀರಾ?" ಶಾರದಾ ಪ್ರಸಾದ್ ಸ್ವಲ್ಪ ಪೆಚ್ಚಾದ ಧ್ವನಿಯಲ್ಲಿ ಕೇಳಿದರು, 'ಕೈ–ಕಾಲೇ? ಏಕೆ, ಸ್ನಾನ ಮಾಡಲು ಅನುಕೂಲವಿಲ್ಲವೇ?'

"ಅಯ್ಯೋ! ಅಮ್ಮ! ಕೇಳು ಮಾತನ್ನ ! ಸ್ನಾನಕ್ಕೇನು ತೊಂದರೆ? ಕೊಳದಲ್ಲಿ ನೀರಿಲ್ಲವೇ? ಆದರೆ ನಿಮ್ಮ ಹತ್ತಿರ, ಬಟ್ಟೆ, ಟವಲ್ಲು, ಏನೂ ಕಾಣಲಿಲ್ಲವಲ್ಲಾ_"

ಶ್ಯಾಮಾಪ್ರಸಾದನ ಅಕ್ಕ ಯಾವಾಗಲೂ ಬೇಜಾರು ಪಟ್ಟುಕೊಂಡೇ ಇರುವವಳು. ಬಹಳ ಸಾಮಾನುಗಳೊಂದಿಗೆ ಬರುವ ಅತಿಥಿಯು, ಹೇಗೆ ಝಾಂಡಾ ಹೂಡುತ್ತಾನೋ ಎಂಬ ಭಯವನ್ನುಂಟು ಮಾಡುತ್ತಾನೋ ಹಾಗೆಯೇ ಬರಿಗೈಯಲ್ಲಿ ಬರುವ ಅತಿಥಿಯೂ ಭಯಕ್ಕೆ ಆಸ್ಪದಕೊಡುತ್ತಾನೆ. ಹೇಳಲು ಹೋದರೆ ಇನ್ನೂ ಸ್ವಲ್ಪ ಜಾಸ್ತಿಯೇ! ಸ್ನಾನಕ್ಕೇ ಸಿದ್ಧವಾದೊಡನೆಯೇ ಮೊದಲು, ಎಣ್ಣೆ, ಟವಲನ್ನು ಕೇಳುತ್ತಾನೆ, ಆಮೇಲೆ ಪಂಚೆ!

ಇದೆಂತಹ ತೊಂದರೆ ಇದು! ಈತೊಂದರೆಯನ್ನು ಕಾಣುತ್ತಿರುವ ಭಾವ ಅವಳ ಮುಖದಲ್ಲಿ ಎದ್ದುಕಾಣುತ್ತಿದೆ. ಅದನ್ನು ನೋಡಿ ಚಕಿತರಾಗುತ್ತಾರೆ ಶಾರದಾಪ್ರಸಾದ್.

ಶಾರದಾಪ್ರಸಾದ್‌ಗೆ ತಾನು ಒಂದು ನಿರ್ಗತಿಕನ ಸ್ಥಿತಿಗೆ ಬಂದಂತೆ ತೋರುತ್ತೆ.

ಅದಕ್ಕೆ ಬೇಗ ಹೇಳಿದರು, "ಹಾಗಾದರೆ ಇರಲಿ, ಇರಲಿ, ಶ್ಯಾಮಾಪ್ರಸಾದ್ ಬರಲಿ. ಸಾಮಾನುಗಳನ್ನು ತರಲಿಲ್ಲ. ಅಂದರೆ ಹಠಾತ್ತನೆ ಬಂದೆನೋ ಇಲ್ಲವೋ ಅದಕ್ಕೆ–"

ಶ್ಯಾಮಾಪ್ರಸಾದನ ಅಕ್ಕನಿಗೆ ಈ'ಹಠಾತ್ತಿ'ನ ಕಾರಣವನ್ನು ತಿಳಿಯಲಾಗಲಿಲ್ಲ. ಆದರೂ ಅದೇ ಧ್ವನಿಯಲ್ಲೇ ಹೇಳಿದಳು, "ಸರಿ, ಹಾಗಾದರೆ ಕುಳಿತುಕೊಳ್ಳಿ, ಶ್ಯಾಮಾ ಬರಲಿ.ಆದರೆ ನೀವು ಹೀಗೆ ಏಕ–ವಸ್ತ್ರದೊಂದಿಗೆ ಬಂದಿದ್ದು ಸರಿಯಲ್ಲ ಚಿಕ್ಕಪ್ಪಾ."

"ಒಂದು ಹೊತ್ತು ನಿಲ್ಲಬೇಕಾದರೂ ಮನುಷ್ಯನಿಗೆ ಒಂದು ಪಂಚೆ, ಟವಲ್ಲು ಬೇಕಾಗುತ್ತೆ." ಎಂದು ತಿರುಗಿ, ಚಿಕ್ಕಪ್ಪನಿಗೆ ಉಪದೇಶಾಮೃತವನ್ನು ದಾನ ಮಾಡಿಬಿಟ್ಟು ಆಕೆ ಒಳಗೆ ಹೋದಳು. ಮರೆಯದೇ ಬಾಗಿಲು ಹಾಕಿಕೊಂಡು ಹೋದಳು.

ನೋಡಿಲ್ಲದ, ಅಥವಾ ಮರೆತುಹೋದ ಆ ಸೋದರ ಪುತ್ರನ ದಾರಿ ನೋಡುತ್ತಾ ಕುಳಿತಿರುತ್ತಾರೆ ಶಾರದಾಪ್ರಸಾದ್. ಏನೋ ಅವನು ಬಂದರೆ ತನ್ನನ್ನು ತಿಳಿದುಕೊಳ್ಳುತ್ತಾನೆ ಎಂದು ಆಸೆಯೊಂದಿಗೆ! ಒಂದು ವೇಳೆ ತಿಳಿದುಕೊಳ್ಳುತ್ತಿದ್ದನೋ ಏನೋ ಶ್ಯಾಮಾಪ್ರಸಾದ್.

ಎಷ್ಟಾದರೂ ರಕ್ತದ ಸಂಬಂಧವಿರುವವನಲ್ಲವೇ?

ಆದರೆ ಶ್ಯಾಮಾಪ್ರಸಾದನಿಗೆ ತಿಳಿದದ್ದು ದುಡ್ಡುಕಾಸಿನ ವಿಚಾರ ಮಾತ್ರವೇ. ಅವನಿಗೆ. ಮೈಯಲ್ಲಿನ ರಕ್ತಕ್ಕಿಂತ ಹೆಚ್ಚಾದದು ಅದು!

ಆದ್ದರಿಂದ ಮನೆಗೆ ಬಂದು ಚಿಕ್ಕಪ್ಪನನ್ನು ನೋಡಿದ ಶ್ಯಾಮಾಪ್ರಸಾದನಿಗೆ ಸಂತೋಷವೇನೂ ಆಗುವುದಿಲ್ಲ.

ಆಗುವುದು ತಾನೇ ಹೇಗೆ?

ಮನೆಯಲ್ಲಿ ಶಾರದಾಪ್ರಸಾದನ ಅಪ್ಪನ ಭಾಗಕ್ಕೆ ಬಂದಿದ್ದ ಜಾಗದಲ್ಲೇ ಈಗ ಶ್ಯಾಮಾಪ್ರಸಾದ್ ಇದಾನೆ ಅಲ್ಲವೇ! ತನ್ನ ಕಡೆಯ ಅಡಿಗೆಯ ಮನೆ ಬಿದ್ದು ಹೋಗಿರುವುದರಿಂದ, ಶಾರದಾಪ್ರಸಾದನ ಕಡೆಯ ಉಗ್ರಾಣದ ಕೋಣೆಯೇ ಈಗ ಇವರ ಅಡಿಗೆಯಮನೆಯಾಗಿಲ್ಲವೇ? ಶ್ಯಾಮಾಪ್ರಸಾದನ ಮನೆಯ ಕಡೆಗೆ ಇರುವ ಭಾವಿಯ ಕಟ್ಟೆ ಬಿದ್ದುಹೋಗಿರುವುದರಿಂದ, ಶಾರದಾಪ್ರಸಾದನ ಕಡೆಯಿಂದ ನೀರು ಸೇದಿಕೊಳ್ಳುತ್ತಿಲ್ಲವೇ? ಇದಲ್ಲದೆ ತೋಟ, ಕೊಳ, ಎಲ್ಲವೂ ಹಾಗೆಯೇ. ಮತ್ತೆ? ಇಂತಹ ಮಾನಸಿಕ ಸ್ಥಿತಿಯಲ್ಲಿ,

ಯಾರಿಗೆ ತಾನೆ, ಚಿಕ್ಕಪ್ಪಾ ಬಂದ ಎಂದು ಸಂತೋಷಪಡುವುದಕ್ಕಾಗುತ್ತೆ? ಶ್ಯಾಮಾಪ್ರಸಾದನಿಂದ ಅಂತು ಅದು ಆಗುವುದಿಲ್ಲ. ಈ ಒಣಮಣ್ಣಿನ ಮಡಿಲಿನಿಂದ ಅನ್ನವನ್ನು ಹೊರತೆಗೆದು ಬದುಕಬೇಕು ಅವನು.

ಈ ಜ್ಞಾತಿಯ ಚಿಕ್ಕಪ್ಪನಿಗೆ ಅವನ ಪಾಲಿನ ಜಾಗಗಳನ್ನು ತೋರಿಸಿದರೆ, ಆಮೇಲೆ ಶ್ಯಾಮಾಪ್ರಸಾದನ ಗತಿ ಏನು?

ಆದರೆ ಶಾರದಾಪ್ರಸಾದ್ ಹಳೆಯ ಜ್ಞಾಪಕವನ್ನು ಮಂಥನ ಮಾಡಿಕೇಳಿದರು, "ಸರಿ, ನಾವು ಯಾವ ಕಡೆ ಇದ್ದೆವು, ಅದೇ ಒಂದು ದೊಡ್ಡ ಹಜಾರ ಇತ್ತಲ್ಲಾ, ಅಲ್ಲಿ ಅಪ್ಪಾ ಕುಳಿತುಕೊಳ್ಳುತ್ತಿದ್ದರು. ಇನ್ನೂ ಯಾರು ಯಾರೋ ಬರುತ್ತಿದ್ದರು, ಪಗಡೆಯಾಡುತ್ತಿದ್ದರು–".

ಶ್ಯಾಮಾಪ್ರಸಾದ್ ಅಟ್ಟಹಾಸ್ಯವಾಗಿ ನಕ್ಕು ಹೇಳಿದ, "ಅಯ್ಯೋ ಅದೃಷ್ಟವೇ! ಆ ಹಜಾರವೇ? ಅದು ಯಾವಾಗಲೋ ಬಿದ್ದಾಯಿತು. ಪಿತ್ರಾರ್ಜಿತ ಮನೆ ನೋಡಿಕೊಳ್ಳದೆ ಹೋದರೆ, ಆಗುವುದು ಹೀಗೆಯೇ ಕೇಳಿದ್ದೆ, ನೀನು ಈ ಊರಿನ ಸ್ಕೂಲಿನಲ್ಲಿ ಓದು ಮುಗಿಸಿದ ತಕ್ಷಣ, ಕಲ್ಕತ್ತಾದಲ್ಲಿ ಸೋದರಮಾವನ ಮನೆಯಲ್ಲಿ ಇದ್ದುಕೊಂಡು, ಕಾಲೇಜಿಗೆ ಹೋದೆ, ಆಮೇಲೆ ಯಾರೋ ದೊಡ್ಡಮನುಷ್ಯರ ಮನೆ ಹುಡುಗಿಯನ್ನು ಮದುವೆಯಾಗಿ ಮಾವನ 'ಮನೆ–ಅಳಿಯನಾಗಿ' ಇದ್ದುಕೊಂಡಿದ್ದ, ಈ ಕಡೆ ಮುಖವನ್ನೂ ತೋರಿಸಲಿಲ್ಲ ಎಂದು ಕೇಳಿದ್ದೆ ಮನುಷ್ಯನಂತೆಯೇ ಮನೆಗೂ ಅನ್ನ–ನೀರು ಕೊಡುತ್ತಾ ಇದ್ದರೆಯೇ ಅದು ನಿಲ್ಲುವುದು ಆದರೆ ನೀನು ಕೇಳಲೇ ಇಲ್ಲ, ಇನ್ನೂ ಆ ಮನೆ ವಿಷಯ ನಿನಗೆ ಜ್ಞಾಪಕ ಇರುವುದೇ ವಿಶೇಷವಾದ ಮಾತು."

ತನ್ನ ಸಮವಯಸ್ಕನಾದ ಸಹೋದರ–ಪುತ್ರನ ಮಾತು ಕೇಳಿ ಶಾರದಾಪ್ರಸಾದ್‌ಗೆ ತನ್ನ ಜ್ಞಾಪಕ ಶಕ್ತಿಗಾಗಿ ನಾಚಿಕೆಯಾಗುತ್ತೆ. ತಾನು ಅದರ ಬಗ್ಗೆ ಕೇಳಿದುದು ಇನ್ನೂ ತಪ್ಪು ಎನಿಸುತ್ತೆ.

ಅವಸರವಾಗಿ ಶಾರದಾಪ್ರಸಾದ್ ಹೇಳಿದರು, "ಇಲ್ಲ, ಇಲ್ಲ, ಏನೋ ಹೀಗೆಯೆ ಜ್ಞಾಪಕ ಬಂತು ಅಷ್ಟೆ. ನಿಜವಾಗಿಯೂ ಅದು ಹೇಗೆ ಇರುವುದು ಸಾಧ್ಯ? ಬಿದ್ದೇತಾನೆ ಹೋಗುತ್ತೆ!"

ಶ್ಯಾಮಾಪ್ರಸಾದನ ಮನಸ್ಸು ಹಗುರವಾಗುತ್ತೆ.

ಯೋಚಿಸುತ್ತಾನೆ, ಸಧ್ಯ ಹಜಾರದ ಮಧ್ಯಕ್ಕೆ ಸರಿಯಾಗಿ ಒಂದು ಗೋಡೆ ಹಾಕಿಸಿದ್ದ, ಇಲ್ಲದಿದ್ದರೆ ಇಗ ಕಣ್ಣಿಗೆ ಬಿದ್ದಿರುತ್ತಿತ್ತು!

ಆದರೆ ನೆರೆಯಲ್ಲಿ ಏನಿಲ್ಲವೆಂದರೂ ಒಬ್ಬಿಬ್ಬಿರು ಕುಯುಕ್ತಿಯುಳ್ಳ ಮನುಷ್ಯರು ಇಲ್ಲದೆ ಇಲ್ಲ! ಶ್ಯಾಮಾ ಒಬ್ಬನೇ ಸಿಕ್ಕಿದರೆ ಎಲ್ಲಾ ವಿಷಯಗಳನ್ನು ಕೇಳುತ್ತಾರೆ, 'ಏನೋ, ಎಷ್ಟು ದಿನ ಇರುವ ಯೋಚನೆಯಲ್ಲಿ ಬಂದಿದ್ದಾನೋ. ಸಾಮಾನು ಏನೂ ಇಲ್ಲದೆ ಇರುವುದನ್ನು ನೋಡಿದರೆ ಹೆಚ್ಚು ದಿನ ನಿಲ್ಲಲಾರ ಎನಿಸುತ್ತೆ. ಆದರೆ ಒಂದು ಹೊತ್ತಿಗಾಗಿ

ಬರಬೇಕಾದರೂ ಜನ ಹೀಗೆ ಬರಿಗೈಯಲ್ಲಿ ಬರುತ್ತಾರೆಯೇ? ಒಂದು ವೇಳೆ ಪೆಟ್ಟಿಗೆ ಏನಾದರೂ ದಾರಿಯಲ್ಲಿ ಕಳವು–ಗಿಳವು ಆಯಿತೋ, ಏನೋ ಯಾರಿಗೆ ಗೊತ್ತು! ದೇವರೇ ಬಲ್ಲ, ನೋಡಿದರಂತೂ ಭಿಕಾರಿಯಾಗಿ ಬಂದಿರುವ ಹಾಗಿದೆ. ಏನಾದರೂ ಆಗಲಿ, ಚೆನ್ನಾಗಿ ಕಂಗಾಣಿಸುತ್ತಿರಬೇಕು! ನೆರೆಹೊರೆಯವರ ಜೊತೆಯಲ್ಲಿ ಸೇರಲು ಬಿಡಕೂಡದು.ಎಷ್ಟು ದಿನ ಇರುತ್ತಾನೋ! ಸ್ವಲ್ಪ 'ಇದಾಗಿ' ಇರಬೇಕು. ಅಕ್ಕರೆ ತೋರಿಸಿ, ಮರ್ಯಾದೆಯಾವುದೂ ಮಾಡಕೂಡದು. ಅಕ್ಕರೆ–ಗಿಕ್ಕರೆಯಿಂದ ನೋಡಿಕೊಂಡು ಬಿಟ್ಟರೆ ಆಮೇಲ್ ದೇವರೇ ಗತಿ. ಲಕ್ಷ್ಮೀ, ಬಾ. ತೊಂದರೆ ತೊಲಗು. ಇದೇ ನನಗೆ ಗೊತ್ತಿರುವ ಸಾರ–ನಾದ.

ನಿರಕ್ಷರಕುಕ್ಷಿಯಾದ ಆ ಹಳ್ಳಿ ಗಮಾರನೂ, ಅವನ ಸಂಸಾರದ ಜನರೂ ತಮಗೆ ಏನೂ ತಿಳಿಯದ ಹಾಗೆ ನಡೆದುಕೊಂಡರು. ಮನೆಯ ಯಾವ ಹೆಂಗಸು, ಹುಡುಗನ ಕೈಯಲ್ಲಿ, ನೀರೂ, ಸ್ಟೂಲೂ ತರಿಸಿದ್ದಳೋ, ಅವಳನ್ನು ಶ್ಯಾಮಾಪ್ರಸಾದ್ ಒಳಗೆ ಹೋಗಿ, ಅದುಮಿದ ಧ್ವನಿಯಲ್ಲಿ ಗದರಿಸಿದ, "ನಿನ್ನನ್ನು ಯಾರು ಅಧಿಕ–ಪ್ರಸಂಗಿತನ ಮಾಡುವುದಕ್ಕೆ ಹೇಳಿದರು? ಏನು, ಯಾರು ಹೇಳಿದರು ಅಂತ ಕೇಳುತ್ತೇನೆ? ಜೋಕೆ, ಹೆಚ್ಚು ಆಸ್ಪದ ಕೊಡಲು ಹೋಗಬೇಕಾಗಿಲ್ಲ. ಅಂದರೆ ಹೊರಗೆ ಕಳುಹಿಸುವ ದಾರಿಯನ್ನು ನೋಡಬೇಕು."

ಆ ದಾರಿಯನ್ನು ನೋಡಬೇಕಾದ ಅವಶ್ಯಕತೆ ಇರಲಿಲ್ಲ ಶಾರದಾಪ್ರಸಾದರ ವಿಷಯದಲ್ಲಿ!

ಇಲ್ಲ.

ಶಾರದಾಪ್ರಸಾದ್ ತಾನಾಗಿಯೇ ಹೊರಟುಹೋದರು.

ಶಾರದಾಪ್ರಸಾದ್ ತನ್ನ ಸೋದರ–ಪುತ್ರನ, ಉದ್ವಿಗ್ನವಾದ ಮುಖವನ್ನು ನೋಡಿ, ಮೃದು ನಕ್ಕು ಹೇಳಿದರು, "ಬಂದಿರುವಾಗ ಎರಡು ದಿನ ಇದ್ದುಹೋಗು ಅನ್ನುತ್ತೀಯಾ? ಅದು–ಇರುವುದಕ್ಕಾಗಿದ್ದಿದ್ದರೆ ನನಗೂ ಚೆನ್ನಾಗಿರುತ್ತಿತ್ತು, ಆದರೆ ಇರುವುದು ಹೇಗೆ ಸಾಧ್ಯ?"

ಶ್ಯಾಮಾಪ್ರಸಾದನ ಮುಖದ ಮೇಲಿನ ಆ ಗಾಬರಿಯ ಭಾವ ಮಾಯವಾಯಿತು. ಅವನು, "ಚಿಕ್ಕಪ್ಪಾ, ಇಷ್ಟು ದಿನಗಳಾದ ಮೇಲೆ ಊರಿಗೆ ಬಂದು. ನೀನು ಒಂದೆರಡು ದಿನ ಇದ್ದು ಹೋಗುವುದಕ್ಕಾಗಲಿಲ್ಲವಲ್ಲಾ," ಎಂದು ಒಂದು ದೊಡ್ಡ ನಿಟ್ಟುಸಿರನ್ನು ಬಿಟ್ಟು ಹೇಳುತಿದ್ದರು. ಅಲ್ಲಿ ಝಿರಿ ಝಿರಿಯೆಂದು ಎಲೆಗಳ ಒಂದು ಪರಮಸುಂದರವಾದ ಆಟ ವಿರಾಮವಿಲ್ಲದೆ ನಡೆಯುತ್ತಿತ್ತು. ಪ್ರಕೃತಿಯ ಮಡಿಲಲ್ಲಿ ಇಂತಹ ಎಷ್ಟೋ ಐಶ್ವರ್ಯ, ಸೌಂದರ್ಯ ಸಂಚಿತವಾಗಿದೆ, ಯಾವುದನ್ನು ನೋಡುತ್ತಾ ಸುಮ್ಮನೆ, ಗಂಟೆಗಟ್ಟಲೆ ಸಮಯವನ್ನು ಕಳೆದುಬಿಡಬಹುದು. ಆದರೆ ಶಾರದಾಪ್ರಸಾದ್ ಎಂದೂ, ಈ ಬಿಟ್ಟಿಯ, ಕೊನೆಯಿಲ್ಲದ ಸೌಂದರ್ಯವನ್ನು, ತಿರುಗಿಯೂ ನೋಡಿರಲಿಲ್ಲ! ಹತ್ತು–ಹನ್ನೆರಡು ಅಡಿಯ ಚಮರದ ಕೋಣೆಯಲ್ಲಿ ಅಡಗಿದ್ದು, ಒಬ್ಬ ಮೂರ್ಖನ ಸ್ವರ್ಗದ ಕನಸನ್ನು ಕಂಡಿದ್ದಾರೆ!

ಪ್ರಕೃತಿಯ ಈ ಕೊನೆಯಿಲ್ಲದ, ಐಶ್ವರ್ಯದ, ಸಾಮ್ರಾಜ್ಯದಲ್ಲಿ ಶಾರದಾಪ್ರಸಾದ್‌ಗೆ ಇರಲು ಒಂದು ಚೂರು ಜಾಗ ಸಿಗದೆ ಹೋಗುತ್ತದೆಯೇ? ಶ್ಯಾಮಾಪ್ರಸಾದನ ಗಾಬರಿಗೆ

ಕಾರಣವಾಗಿದ್ದುಕೊಂಡು ಇಲ್ಲಿ, ಈ ಮೌಟುಂಗ್ರಿಯಲ್ಲಿ ಇರಬೇಕೆ ಆತ? ಇಲ್ಲ, ಶಾರದಾಪ್ರಸಾದ್‌ಗೆ ಇರುವ ಇಷ್ಟ ಇಲ್ಲ. ಇನ್ನೂ ಸಾವಿರಾರು ಹಳ್ಳಿಗಳಿದೆಯಲ್ಲ ಈ ಬಂಗಾಳದಲ್ಲಿ . ಅದೂ ಆತನ ಮಾತೃಭೂಮಿ ತಾನೇ! ಹಾಗಾದರೆ ಅಂದು ಶಾರದಾಪ್ರಸಾದ್ ತನ್ನ ತಾತ-ಮುತ್ತಾತನ ಊರಿನಿಂದ, ಸ್ನಾನ-ಆಹಾರ ಯಾವುದೂ ಇಲ್ಲದೆ ಹೊರಟುಹೋದರೇ?

ಇಲ್ಲ,ಇಲ್ಲ, ಎಲ್ಲಾದರೂ ಉಂಟೇ? ಶ್ಯಾಮಾಪ್ರಸಾದನಾದರೂ ಅಷ್ಟು ಕಟುಕನೇ? ಸ್ನಾನವಾಗದಿದ್ದರೂ, ಆಹಾರವಂತೂ ಖಂಡಿತ ಆಗಿತ್ತು.

ಸ್ನಾನಕ್ಕೂ ಹೇಳಿದ್ದ ಶ್ಯಾಮಾಪ್ರಸಾದ್, "ನಿನ್ನ ಹತ್ತಿರ ಬೇರೆ ಪಂಚೆ ಇಲ್ಲದುದರಿಂದ, ಹಾಗೆಯೇ ಸ್ನಾನಮಾಡಿಕೊಂಡು ಬಂದು, ನನ್ನ ಪಂಚೆ ಉಟ್ಟುಕೊಂಡು ನಿನ್ನದನ್ನು ಒಣಗಲು ಹಾಕು, ಊಟ-ಗೀಟಮಾಡು, ಅಷ್ಟು ಹೊತ್ತಿಗೆ ನಿನ್ನದು ಒಣಗಿಹೋಗುತ್ತೆ. ಬಿಸಿಲು ಜೋರಾಗಿದೆ."

ಬಿಸಿಲು ಜೋರಾಗಿದೆ?!

ಹೌದು, ಅವನ್ನು ತನ್ನ ದೇಹದ ಅಣು-ಅಣುವಿನಲ್ಲೂ ಅನುಭವಿಸುತ್ತಿದ್ದರು ಶಾರದಾಪ್ರಸಾದ್. ಎರಡು ದಿನದಿಂದ ಸ್ನಾನ ಆಗಿರಲಿಲ್ಲ. ಸ್ನಾನವೇ ಕೇವಲ ಒಂದು ವಿಲಾಸ (ಲಗ್ಷುರಿ) ಆಗಿತ್ತು ಆತನಿಗೆ!

ಅದಕ್ಕಾಗಿಯೇ ವಿಜಯಾ ಕೋಪದಿಂದ ಹೇಳುತ್ತಿದ್ದರು, 'ನವಾಬ ಅಳಿಯ, ತೊಟ್ಟಿಯಲ್ಲಿರುವ ಎಲ್ಲಾ ನೀರನ್ನೂ ಖಾಲಿ ಮಾಡುತ್ತಿದ್ದಾನೆ. ಬೇರೆಯಾರಿಗೂ ನೀರಿನ ಅವಶ್ಯಕತೆಯೇ ಇಲ್ಲವೇನೋ! ಎಂದು' ವಿಜಯಾರ ಮಾತನ್ನು ಯಾರೂ ಕಿವಿಗೆ ಹಾಕಿಕೊಳ್ಳುತ್ತಿರಲಿಲ್ಲ. ಶಾರದಾಪ್ರಸಾದರಿಗಂತೂ ಯಾರ ಮಾತನ್ನೂ ಮೈಗಂಟಿಸಿಕೊಳ್ಳುವ ಅಭ್ಯಾಸವೇ ಇರಲಿಲ್ಲ. ಹಠಾತ್ತಾಗಿ ಹೇಗೋ ಆತನ ಈ ಅಭ್ಯಾಸವೇ ಬುಡಸಮೇತ ಬದಲಾಯಿಸಿಹೋಯಿತು.

ಅದಕ್ಕೇ ಆತ ಬಿಸಿಲನ್ನು ನೋಡಿಬಿಟ್ಟು ಬೇರೆ ಕಡೆ ನೋಡುತ್ತಾ, 'ಇರಲಿ, ಇಷ್ಟು ಹೊತ್ತಿನಲ್ಲಿ ಸ್ನಾನಮಾಡುವುದಿಲ್ಲ,' ಎಂದರು.

ಕೈ-ಕಾಲುಗಳನ್ನು ಮಾತ್ರತೊಳೆದುಕೊಂಡು, ಊಟಕ್ಕೆ ಕುಳಿತುಕೊಂಡರು. ಅನ್ನ, ವ್ಯಂಜನಗಳನ್ನು ತಟ್ಟೆಯಲ್ಲಿ ಅಚ್ಚುಕಟ್ಟಾಗಿ ಇಟ್ಟಿದ್ದರು. ಯಾವಳದೋ, ಎದುರಿಗೆ ಕಾಣದವಳ, ಶ್ರದ್ಧೆ ಮತ್ತು ಅಕ್ಕರೆಯ ಒಂದು ತುಣುಕು ಆತನಿಗೆ ಭಾಸವಾಯಿತೋ ಏನೋ.

ಇರುವುದಿಲ್ಲ, ಹೊರಟುಹೋಗುತ್ತಾನೆ.

ಈ ಮಾತಿನಿಂದ ಶ್ಯಾಮಾಪ್ರಸಾದ್ ಎಷ್ಟು ಪ್ರೀತನಾಗಿದ್ದ ಎಂದರೆ, ಒಳಗೆ ಬಂದು ಹೇಳಿದ್ದ, "ಗಸ-ಗಸೆಯ ಸಂಡಿಗೆ-ಗಿಂಡಿಗೆ ಒಂದೆರಡು ಮಾಡಿಕೊಡೆ, ಮತ್ತು ಇನ್ನೊಂದು ಹೊತ್ತಿಗಾಗಿ ಎತ್ತಿಟ್ಟಿರುವ ಮೀನು ಇದ್ದರೆ ಅದರಿಂದಲೂ ಸ್ವಲ್ಪ-"

ಶ್ಯಾಮಾಪ್ರಸಾದನ ಹೆಂಡತಿ ಹೇಳಿದಳು, "ಸಾಕು,ಸಾಕು, ನೀವೇನೂ ಹೇಳಿಕೊಡಲು ಬರಬೇಡಿ. ಮನೆಯ ಮನುಷ್ಯರು, ಮನೆಗೆ ಬಂದಿರುವಾಗ ಸ್ವಲ್ಪ ಸಾದರದ ಊಟ ಸಿಗಬೇಡವೆ

ಅವರಿಗೆ? ಮಾವನವರು ಎನ್ನುವವರನ್ನು ಎಂದೂ ಕಣ್ಣಿಂದ ಕಾಣಲಿಲ್ಲ. ಚಿಕ್ಕಪ್ಪನನ್ನು ನೋಡಿದರೆ, ಹೋಗಿ ಕಾಲಿಗೆ ಬಿದ್ದು ನಮಸ್ಕಾರ ಮಾಡೋಣ ಎಂದು ಆಸೆಯಾಗುತ್ತೆ."

"ಸಾಕು, ಇಚ್ಛಾಮಯಿಗೆ ಇಷ್ಟೆಲ್ಲಾ ಆಸೆ ಬೇಡ!" ಸಂದೇಹದ ಧ್ವನಿಯಲ್ಲಿ ಕೇಳಿದ ಶ್ಯಾಮಾಪ್ರಸಾದ್, "ಯಾವಾಗ ನೋಡಿದೆ ನೀನು?" ಎಂದು.

"ಆಹಾ, ಎದುರಿಗೆ ವರಾಂಡದಲ್ಲಿ ಕುಳಿತಿದ್ದರಲ್ಲಾ. ಕಿಟಕಿಯಿಂದ ಕಾಣುವುದಿಲ್ಲವೇ?"

"ಇರುವುದಿಲ್ಲ, ಹೊರಟು ಹೋಗುತ್ತಾನೆ."

ಈ ಮಂತ್ರದ ಬಲದಿಂದಲೇ ಶ್ಯಾಮಾಪ್ರಸಾದ್ ಈ ಪ್ರತಿಕೂಲ ಪರಿಸ್ಥಿತಿಯನ್ನು ಸಾಗಹಾಕುತ್ತಿದ್ದ. ಇಲ್ಲದಿದ್ದರೆ ಈ, 'ಕಿಟಕಿಯಿಂದ ಕಂಡಿದ್ದರ' ಮೇಲೆಯೇ ಒಂದು ದೊಡ್ಡ ಲಟಾ-ಪಟಿಯಾಗಿಹೋಗುತ್ತಿತ್ತು. ಸಾಯಂಕಾಲವಾಗುತ್ತಿರುವಾಗಲೇ ಬೀಳ್ಕೊಂಡರು ಶಾರದಾಪ್ರಸಾದ್.

ಶ್ಯಾಮಾಪ್ರಸಾದನ ಅಕ್ಕ ಸೆರಗಿನಿಂದ ಕಣ್ಣೊರೆಸಿಕೊಳ್ಳುತ್ತಾ ಚಿಕ್ಕಪ್ಪನನ್ನು ಬೀಳ್ಕೊಡುವಾಗ ಹೇಳಿದಳು, "ಬರೀ ಒಂದು ವೇಳೆ ಬಂದು ಇದ್ದು ಪ್ರೀತಿಯ ಮಾಯೆಯನ್ನು ಹೆಚ್ಚಿಸಲು ಬಂದೆಯಾ ಚಿಕ್ಕಪ್ಪಾ. ಒಂದೆರಡು ದಿನವಾದರೂ ಇರಬಹುದಾಗಿತ್ತು. ನೆಂಟರಿಷ್ಟರು ಯಾರಿಗೂ ತಿಳಿಸಲಾಗಲಿಲ್ಲ. ನೀನೂ ಯಾರನ್ನೂ ನೋಡಲಾಗಲಿಲ್ಲವಲ್ಲಾ" ಎಂದಳು.

ಶಾರದಾಪ್ರಸಾದ್ ಆ ಕಡೆ ಹಣಸೇ ಎಲೆ ಬೀಳುವ ದೃಶ್ಯವನ್ನೇ ನೋಡುತ್ತಾ ಮೃದು ನಕ್ಕು ಹೇಳಿದರು, "ನೋಡಿದರೂ ಒಂದೇ, ನೋಡದಿದ್ದರೂ ಒಂದೇ, ನನ್ನನ್ನು ಯಾರು ಗುರುತಿಸುತ್ತಾರೆ?"

"ಗುರುತು ಸಿಗದಿದ್ದರೆ ಏನಂತೆ? ಮೊಸ ಅಜ್ಜನ ಹೆಸರಿಂದಲೇ ತಿಳಿದುಕೊಳ್ಳುತ್ತಿದ್ದು."

"ಆ ಕಾಲದವರು ಯಾರೂ ಬದುಕಿಲ್ಲವಲ್ಲಾ!"

"ಇದಾರೆ, ಒಬ್ಬಿಬ್ಬರು ಇದಾರೆ,-" ಜಾಗರೂಕತೆಯಿಂದ ಹೇಳಿದ ಶ್ಯಾಮಾಪ್ರಸಾದ್. "ಹೆಸರು ಹೇಳಿದರೆ ಗೊತ್ತಿರುವವರೂ ಇದಾರೆ ಕೆಲವರು!"

ಜಾಗರೂಕತೆಯಿಂದಲೇ ಹೇಳಿದ. ಏಕೆಂದರೆ, ಆತುರದಿಂದ ಹೇಳಿದಂತಹ ಅಭಿನಯವನ್ನು ನಿಜವೆಂದು ನಂಬಿ, ಮನಸ್ಸು ಬದಲಾಯಿಸಿ ಆತ ಎಲ್ಲಾದರೂ ನಿಂತು ಬಿಟ್ಟರೆ?

ಶಾರದಾಪ್ರಸಾದ್ ಮನಸ್ಸಿನಲ್ಲೇ ಅಂದುಕೊಂಡರು, 'ಎಲ್ಲಿ ಹೋಗುವುದು ಎಂದು ನನಗೇಗೊತ್ತಿಲ್ಲ. ಆದರೆ ಹೋಗಲೇಬೇಕು, ಅದೇ ಮುಖ್ಯ.'

ಈ ವೇಳೆಯಲ್ಲಿ ಇನ್ನು ಎತ್ತಿನಗಾಡಿ ಸಿಗುವುದಿಲ್ಲ. ವೇಗವಾಗಿ ನಡೆದೇ ಹೋಗುತ್ತಿದ್ದರು ಶಾರದಾಪ್ರಸಾದ್. ಆದಿವಾಸಿಗಳ ಹಳ್ಳಿಯ ಕಡೆಗೆ ನಡೆಯುತ್ತಿದ್ದರು. ಆ ಚಿಕ್ಕ ಚಿಕ್ಕ ಮಣ್ಣಿನ ಕುಟೀರಗಳು ನೋಡಲು ಬಹಳ ಅಂದವಾಗಿ ಕಾಣಿಸುತ್ತಿದೆ.

ಅಲ್ಲಿಗೆ ಹೋಗಬೇಕು.

ಒಂದು ವೇಳೆ, ಮನುಷ್ಯನಲ್ಲಿರುವ ಸರಳತೆಯನ್ನು ಅಲ್ಲಿ ನೋಡಲು ಸಿಗುವುದೇನೋ! ಒಂದು ವೇಳೆ ಜೀವನದ ಮಿಕ್ಕಿದ್ದ ಕಾಲವೆಲ್ಲವೂ, ಮರದ ಎಲೆಗಳ ಉದುರುವಿಕೆಯ ಝಿರಿ ಝಿರಿಯನ್ನು ನೋಡುತ್ತಾ ಕಳೆದುಬಿಡಬಹುದು.

ಪ್ರಕೃತಿಯ ಈ ಹಸುರಿನ ಭಂಡಾರ ವಿಷದಿಂದ ನೀಲಿಯಾಗಿಲ್ಲ. ತನ್ನ ವಿಪುಲವಾದ ಹಸುರಿನ ಐಶ್ವರ್ಯವನ್ನು ಹಾಗೆಯೇ ಇಟ್ಟುಕೊಂಡಿದೆ. ಇಟ್ಟುಕೊಂಡೂ ಇರುತ್ತೆ. ಕೇವಲ ವಿಷದಿಂದ ನೀಲಿಯಾಗಿಹೋದ ಮನುಷ್ಯ ಒಂದು ಸಲವಾದರೂ ಹಿಂದಿರುಗಿ ನೋಡಿದರೆ ಅವನಿಗೆ ಗೊತ್ತಾಗುತ್ತೆ.

ಎಷ್ಟೋ ದೂರ ಬಂದ ಮೇಲೆ ಹಿಂದೆ ಏನೋ ಶಬ್ದ ಕೇಳಿ ಶಾರದಾಪ್ರಸಾದ್ ಹಿಂತಿರುಗಿ ನೋಡಿದರು. "ಅಜ್ಜ, ಅಜ್ಜ, ಎಂದು ಯಾರು, ಯಾರನ್ನು ಕರೆಯುತ್ತಿದ್ದಾರೆ?"

ಬೆಳಗ್ಗೆ ನೀರು ತಂದುಕೊಟ್ಟ ಆ ಹುಡುಗ, ಕೈಯಲ್ಲಿ, ಎಲೆಯಲ್ಲಿ ಸುತ್ತಿದ್ದ ತಿಂಡಿಯ ಪೊಟ್ಟಣವನ್ನು ಇಟ್ಟುಕೊಂಡಿದ್ದ. ಕೈಯ್ಯಲ್ಲಾಗದಷ್ಟು ಜೋರಾಗಿ ಓಡಿ ಬಂದುದರಿಂದ ಏದುಸಿರು ಬಿಡುತ್ತಿದ್ದ ಪಾಪ. ಅದಕ್ಕೇ ಮಾತಾಡಲು ಸ್ವಲ್ಪ ಹೊತ್ತು ಬೇಕಾಯಿತು.

ಶಾರದಾಪ್ರಸಾದ್ ಪ್ರೀತಿಯಿಂದ ಕೇಳಿದರು, 'ಏನೋ?'

ಮಾತಾಡಲು ಸಾಧ್ಯವಾದ ಮೇಲೆ ಹುಡುಗ ಹೇಳಿದ, "ಅಜ್ಜಾ, ನೀನು ರಾತ್ರಿ ಊಟಕ್ಕೆ ನಿಲ್ಲಲಿಲ್ಲವಲ್ಲ, ಅದಕ್ಕೇ ಅಮ್ಮ ನಿನಗಾಗಿ ಕೈಯಲ್ಲಿ ತಿಂಡಿ ಕಟ್ಟಿಕಳುಹಿಸಿದ್ದಾಳೆ."

ಶಾರದಾಪ್ರಸಾದ್ ಕೆಲಕ್ಷಣಗಳು ಸ್ತಬ್ಧನಾಗಿ ನಿಂತುಬಿಡುತ್ತಾರೆ. ಆಮೇಲೆ ಮೆಲ್ಲಗೆ ಕೇಳಿದರು, "ನಾನು ನಿನಗೆ ಅಜ್ಜ ಆಗಬೇಕು ಎಂದು ಯಾರು ನಿನಗೆ ಹೇಳಿದ್ದು?"

"ಅಮ್ಮ, ಅಮ್ಮ ಹೇಳಿದಳು. ನಿನ್ನ ಮನೆ-ಗಿನೆಯೆಲ್ಲಾ ತಾನು ತೆಗೆದುಕೊಂಡು ಅಪ್ಪ ನಿನ್ನನ್ನು ಓಡಿಸಿ ಬಿಟ್ಟು, ಇರಗೊಡಲಿಲ್ಲ."

ಶಾರದಾ ಮೃದುವಾಗಿ ಗದರಿಸಿ ಹೇಳಿದರು, "ಛಿ,ಹಾಗೆ ಹೇಳಬಾರದು, ನಾನು ಹುಚ್ಚು, ಬೆಪ್ಪು ಮನುಷ್ಯ, ಒಂದು ಕಡೆ ಸ್ಥಿರವಾಗಿ ಇರಬಲ್ಲನೇ? ಓಡಾಡುತ್ತಿರುತ್ತೇನೆ. ಅದು ಸರಿ ಪಾಪ,ನೀನು ಎಷ್ಟು ದೂರ ಓಡಿ ಬಂದಿದ್ದೀಯ!"

"ಬರದೆ ಮತ್ತೆ? ಅಮ್ಮ ಹೇಳಲಿಲ್ಲವೇ? ಅಮ್ಮ ಹಿರಿಯವಳಲ್ಲವೇ?"

"ಹೌದು, ಅದು ನಿಜವೇ."

ಶಾರದಾಪ್ರಸಾದ್ ಹುಡುಗನ ತಲೆಯ ಮೇಲೆ ಕೈಯನ್ನಿಟ್ಟು, "ಚೆನ್ನಾಗಿ ಬಾಳಪ್ಪಾ, ಸುಖದಿಂದಿರು." ಎಂದು ಹಾರೈಸಿ ಆಮೇಲೆ ಹೇಳಿದರು, "ಇಷ್ಟೊಂದು ತಿಂಡಿಗಳು ಇದೆಯಲ್ಲಾ, ತುಂಬಾ ಜಾಸ್ತಿ ಇರುವಹಾಗಿದೆ, ನೀನೂ ಸ್ವಲ್ಪ ತಿನ್ನು."

'ಅಯ್ಯೋ,' ನಕ್ಕು ಹೇಳಿದ ಹುಡುಗ, ನಿನಗಾಗಿಯೇ ತಂದಿರುವುದು, ತೆಂಗಿನಕಾಯಿ ಲಾಡು, ಪರೋಟಾ, ಕಡಲೆಗೊಜ್ಜು, ಇದೆ. ಎಲ್ಲಾ ತಿನ್ನಬೇಕು. ಆಮೇಲೆ ನೋಡು, ಅಮ್ಮಾ ನಿನಗೆ ನಮಸ್ಕಾರ ತಿಳಿಸ ಹೇಳಿದಳಯಶಾರದಾಪ್ರಸಾದ್ ಬೇರೆ ಕಡೆ ತಿರುಗಿಕೊಳ್ಳುತ್ತಾರೆ.

ಅವರಿಗೆ ಎಲ್ಲಾದರೂ ಒಂದು ಕಡೆ ಕುಳಿತುಬಿಡಬೇಕು ಎನಿಸುತ್ತದೆ. ಸ್ವಲ್ಪ ಹೊತ್ತಿನ ಮೇಲೆ ಬಿಗಿದ ಗಂಟಲಿನಿಂದ ಹೇಳಿದರು, "ನಿಮ್ಮಮ್ಮನಿಗೆ ನನ್ನ ಆಶೀರ್ವಾದ ತಿಳಿಸಿದೆ ಎಂದು ಹೇಳಪ್ಪಾ, ಇನ್ನೂ ಹೇಳು, ಈಊಟ ಕೊಟ್ಟಿದುದರಿಂದ ಬದುಕಿದೆ ಇಲ್ಲದಿದ್ದರೆ, ರಾತ್ರಿ ಉಪವಾಸವಾಗಿ ಕಳೆಯ ಬೇಕಲ್ಲಾ ಎಂದು ಯೋಚಿಸುತ್ತಿದ್ದೆ."

ಶಾರದಾಪ್ರಸಾದ್ ಬೇಗ ಹೆಜ್ಜೆ ಹಾಕುತ್ತಾ ನಡೆಯಲಾರಂಭಿಸಿದರು. ಹಿಂತಿರುಗಿ ನೋಡಲಿಲ್ಲ, ಆದರೂ, ಅವರಿಗೆ ಆ ಹುಡುಗ ಇನ್ನೂ ನಿಂತಿದ್ದಾನೆ ಎಂದು ತೋರುತ್ತಿತ್ತು.

ಆತನ ಮನಸ್ಸಿಗೆ ತೋರುತ್ತೆ, ಒಂದು ಅತಿ–ಕೊಳಕು ಸೀರೆಯುಟ್ಟು, ಬಹಳ ಸಾಧಾರಣವಾದ ಗ್ರಾಮದ ಹೆಣ್ಣು, ಅವರ ಹಿಂದೆ ಎಲ್ಲೋ ಒಂದು ತೆರದ ಬಾಗಿಲ ಚಿಲಕವನ್ನು ತೆರೆದು ಹಿಡಿದು ನೋಡುತ್ತಾಳೆ. ಯಾವ ಅನ್ಯಾಯದ ಪ್ರತೀಕಾರವನ್ನೂ ಮಾಡುವ ಶಕ್ಯತೆ ಅವಳಿಗಿಲ್ಲ. ಆದರೂ ಅದರ ಲೆಕ್ಕಹಾಕಿ ಮನಸ್ಸಿನಲ್ಲಿ ನೊಂದುಕೊಳ್ಳುತ್ತಿದ್ದಾಳೆ.

ಮುಂದಕ್ಕೆ ಸಾಗುತ್ತಿದ್ದಾರೆ ಶಾರದಾಪ್ರಸಾದ್.

* * *

ಪ್ರಯಾಣಕ್ಕೆ ಎಲ್ಲಾ ಸಿದ್ಧವಾಗಿತ್ತು. ದಾಟಲಾಗದ, ಅನಿವಾರ್ಯವನ್ನು ಸ್ವೀಕರಿಸಿ ಭವಿಷ್ಯದ ಎಲ್ಲಾ ಚಿಂತೆಯನ್ನೂ ಒಂದು ಬದಿಗಿರಿಸಿ ಒಂದು ಮಹಾನ್ ತ್ಯಾಗಕ್ಕಾಗಿ ಸರೋಜಾಕ್ಷರು ತಮ್ಮನ್ನು ತಯಾರುಪಡಿಸಿಕೊಂಡಿದ್ದರು. ಆದರೆ ಆ ಅಮೋಘವಾದ ಅನಿವಾರ್ಯವೇ, ಒಂದು ನಾಚಿಕೆಗೇಡಾದ ಆಟ, ವ್ಯಂಗ್ಯ ನಗು ತೋರಿಸಿ, ಅವರ ತ್ಯಾಗವನ್ನು, ಸಾಹಸದ ಶಕ್ತಿಯನ್ನು, ಬೆಲೆಯಿಲ್ಲದಾಗಿಸಿ, ನೆಲಸಮ ಮಾಡಿ ಹೊರಟು ಹೋಯಿತು!

ಈ ನಾಚಿಕೆಗೇಡಾದ ಆಟ ಮೃತ್ಯುವಿನ ರೂಪದಲ್ಲಿ ಬಂದಿತು.

ಇದು ಬಂದಿತು ಅಂದು ರಾತ್ರಿಯಾಗುವುದಕ್ಕೆ ಮುಂಚೆಯೇ ಬೆಳಗಾಗಿ ಎದ್ದು, ಸರೋಜಾಕ್ಷರು ಊರಿಗೆ ಹೊರಡಬೇಕಾಗಿತ್ತು. ಆದರೆ ಮೃತ್ಯುವಿನ ರಾಜ, ಸಮಾರೋಹದಿಂದ ಅಲ್ಲಿ ಮೆಲ್ಲಮೆಲ್ಲಗೆ ಕಳ್ಳನಂತೆ ಬಂದ. ಈ ತಸ್ಕರ ರೂಪ ಬಹಳ ಅಸಹ್ಯ, ಕುರೂಪ ಮತ್ತು ಅಶುಚಿಯಾಗಿದೆ. ಈ ಅಶುಚಿಯ ಮುಂದೆ ಶೋಕದ ಪವಿತ್ರತೆ ತಲೆಬಾಗಿ ಸ್ತಬ್ಧವಾಗಿ ನಿಲ್ಲುತ್ತೆ ಅದು ಆತಂಕವಾಗಿ ಹೊರಬರುತ್ತೆ.

ಈ ತಸ್ಕರನು ಬಂದು ಸರೋಜಾಕ್ಷರ ಸಂಸಾರವನ್ನು ಇಣಿಕಿ ನೋಡಿದ. ಬಂದು, ಒಂದು ಬೆಲೆಬಾಳುವ ವಸ್ತುವನ್ನು ತೆಗೆದುಕೊಂಡು ಹೋದ, ಮತ್ತು ಹಾಗೆಯೇ ಒಂದು ಕ್ರೂರನಗು ನಕ್ಕು ಹೇಳಿ ಹೋದ, ಕೇವಲ ನಿನ್ನ ಕರ್ತವ್ಯ ಮುಗಿದುಹೋಗುವುದಿಲ್ಲ ಸರೋಜಾಕ್ಷಾ, ಕೇವಲ 'ಶಾಂತಿಪ್ರಿಯ'ನಾದ ಮಾತ್ರಕ್ಕೆ ನಿನ್ನ ಕರ್ತವ್ಯ ಮುಗಿದುಹೋಗುವುದಿಲ್ಲ. ಅದನ್ನು, ಶಾಂತಿಯನ್ನು ರಕ್ಷಿಸುವ ಜವಾಬ್ದಾರಿಯನ್ನೂ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಹೀಗೆಯೇ ಆಗುತ್ತೆ, ಯಾವ ಸಂದಿಯಿಂದಲೋ ಈ ವಿಧಿ ಬಂದು ನಿನ್ನ ಸಂಸಾರದ ಸೌಂದರ್ಯದ ಹಸಿರನ್ನೆಲ್ಲಾ ವಿಷದಿಂದ ನೀಲಿಯಾಗಿಸಿ ಹೋಗಿದೆ. ನೀನು ಆಕಡೆ ತಿರುಗಿಯೂ ನೋಡಲಿಲ್ಲ. ಕೇವಲ ನಿನ್ನನ್ನು ನೀನು ಮರ್ಯಾದಸ್ಥನಾಗಿ ಇಟ್ಟುಕೊಂಡಿರುವ

ಪ್ರಯತ್ನದಲ್ಲಿ ನಿನ್ನ ಸುತ್ತಲೂ ಒಂದು ಕೋಟೆಯನ್ನು ಎಬ್ಬಿಸಿಕೊಂಡಿದ್ದೀಯಾ. ಈಗ ಅದರ ಪರಿಣಾಮವನ್ನು ನೋಡು?

ನೋಡು, ನಿನ್ನ ಕೋಟೆಯ ಹೊರಗಿನ ಗೋಡೆಯ ಆಚೆ ಎಷ್ಟೊಂದು ವಿಷ ತುಂಬಿತ್ತು. ಒಂದು ವೇಳೆ ನೀನು ಸ್ವಲ್ಪ ಅಕ್ಕರೆ ತೆಗೆದುಕೊಂಡು, ದುಃಖಾರ್ತಳಾದ ಆತ್ಮದ ಸ್ವಾಭಿಮಾನ ಉಳಿಯುವ ಹಾಗೆ ನಿನ್ನ ನೆರಳಿನಲ್ಲಿ ಆಶ್ರಯವನ್ನು ಕೊಟ್ಟಿದ್ದರೆ, ಅದು ಅವಳ ಕಾಲ ಕೆಳಗಿನ ನೆಲವನ್ನು ನಿಲ್ಲಿಸುತ್ತಿತ್ತು. ಏಕೆಂದರೆ ಅವಳು ನಿನ್ನಲ್ಲಿ,ಮರ್ಯಾದೆ, ಭಕ್ತಿ ವಿಶ್ವಾಸಗಳನ್ನು ಇಟ್ಟುಕೊಂಡಿದ್ದಳು. ಆದರೆ ನೀನು ಉದಾಸೀನತೆಯಿಂದ ಯಾವುದನ್ನೂ ತಲೆಯೆತ್ತಿ ನೋಡಲಿಲ್ಲ.

ಈಗ ನೋಡು, ಎಂತಹ ನಿವಾರಣೆಯಿಲ್ಲದ ಅವಮಾನ ನಿನಗೆ! ಎಂತಹ ಅಸಹನೀಯ ಪರಾಜಯ ಬಂದಿತು!

ಯಾರೂ ಹೀಗೆ ಹೇಳಲಿಲ್ಲ. ಆದರೆ ಆ ಮೃತ್ಯು-ನೀಲ ಮುಖವನ್ನು ನೋಡಿ ಸರೋಜಾಕ್ಷರೇ ಹೀಗೆ ಯೋಚಿಸುತ್ತಿದ್ದರು.

ಅವಳನ್ನು ಈ ಮನೆಗೆ ಕರೆದು ತಂದಾಗ ನಾನು ಎಷ್ಟೋ, ಸ್ನೇಹ, ಮಮತೆ ಮತ್ತು ಆದರಗಳಿಂದ ಕರೆದು ತಂದೆ, ಆದರೆ ಆಮೇಲೆ ಮರೆತುಬಿಟ್ಟೆ. ಅವಳಂತೂ, ಹಾಗೆಯೇ ತಿಳಿದು ಹೋದಳು. ನನ್ನ ಅಲಕ್ಷ್ಯವನ್ನು, ನಿರ್ಲಿಪ್ತತೆಯನ್ನು ಧಿಕ್ಕರಿಸಿ ಹೊರಟುಹೋದಳು.

ಆದರೆ ಯಾವಾಗಲೂ ಆತ್ಮ-ಹತ್ಯೆಯ ಸಂಕಲ್ಪವನ್ನು ಘೋಷಣೆ ಮಾಡುತ್ತಿದ್ದವರು ವಿಜಯಾ. ತನ್ನ ಇಷ್ಟ ಇಷ್ಟವಿಲ್ಲದಿರುವಿಕೆಯ 'ಕೋಲ್ಡ್-ವಾರ್' ಯುದ್ಧದಲ್ಲಿ ಯಜಮಾನರನ್ನು ದಾಳಿಯಲ್ಲಿ ಸೋಲಿಸಲು ಹೇಳುತ್ತಿದ್ದರು, 'ನೇಣು ಹಾಕಿಕೊಳ್ಳುತ್ತೇನೆ' ಎಂದು ಈ ಘೋಷಣೆಯ ಉಪಾಯವಿಲ್ಲದಿರುವಿಕೆಯ ಹಗ್ಗ ಸರೋಜಾಕ್ಷರ ಕುತ್ತಿಗೆಯನ್ನು ಬಿಗಿದು ಅವರನ್ನು ಸೋಲಿಸುತ್ತಿತ್ತು.

ಅದೇ ವಿಜಯಾಗೆ ಎಂತಹ ದೀನವಾದ ಪರಾಜಯವಾಯಿತು!

ವಿಜಯಾ ಸರೋಜಾಕ್ಷರ ಕಾಲಡಿಯಲ್ಲಿ ಬಂದು ಬಿದ್ದು 'ನನ್ನನ್ನು ನಿಮ್ಮ ಜೊತೆಯಲ್ಲಿ ಕರೆದುಕೊಂಡು ಹೋಗಿ' ಎಂದು ಬೇಡಿದ್ದರು.

ವಿಜಯಾಗೆ ತಮ್ಮ ಕೈಯಲ್ಲಿರುವ ಅಸ್ತ್ರದ ನೆನಪು ಆಗ ಬರಲಿಲ್ಲ. ಬಂದಿದ್ದರೆ ತಮ್ಮ ಎದುರಾಳಿಯನ್ನು ಚಿರಕಾಲಕ್ಕಾಗಿಯೂ ಅವರು ಸೋಲಿಸಬಹುದಾಗಿತ್ತು!

ಅದನ್ನು ಮಾಡದೆ ತಾವೇ ಸೋತರು ವಿಜಯಾ.

ಸಾಯುವುದರ ಬದಲು ಸೋತರು ವಿಜಯಾ.

ಸಾಯುವ ಮಾತು ಈ ಮನೆಯ ಚಿಕ್ಕಮಗಳ ಮನಸ್ಸಿನಲ್ಲೂ, ಬಾರದೆ ಇರಲಿಲ್ಲ. ಸಾಯುವುದೇ ಸಂಕಟವನ್ನು ದಾಟುವ ಸುಲಭವಾದ ಉಪಾಯವಾಗಿತ್ತು. ಆದರೆ ಅವಳು ಸುಲಭವಾದ ದಾರಿಯನ್ನು ಹಿಡಿಯಲಿಲ್ಲ.

ಸಮಸ್ಯೆಯ ಬಲೆಯಲ್ಲಿ ತಾನು ಕಟ್ಟುಂಡು, ಎಲ್ಲರನ್ನೂ ಅದರೊಳಗೆ ಎಳೆದಿದ್ದಾಳೆ.

ಆದರೆ ಸಾಯುವ ಮಾತೇಯಾರ ಹತ್ತಿರದಿಂದ ಸುಳಿದೂ ಇರಲಿಲ್ಲವೋ ಅಂತಹ ಒಂದು ವ್ಯಕ್ತಿ, ಅಮ್ಲಾನವದನಳಾಗಿ ಒಂದು ಹಿಡಿ ನಿದ್ರೆಯ ಗುಳಿಗೆಗಳನ್ನು ನುಂಗಿ ಸತ್ತುಹೋದಳು. ಹಿಂದಿನ ದಿನದ ಸಾಯಂಕಾಲವೂ ಸುನಂದಾ ಮೈಮೇಲೆ ಜರತಾರಿಯ ಸೀರೆಯನ್ನು ಸುತ್ತಿಕೊಂಡು, ಮುಖಕ್ಕೆ ಬಣ್ಣವನ್ನು ಬಳಿದುಕೊಂಡು, ಗಂಡನ ಜೊತೆಯಲ್ಲಿ, ಯಾರದೋ, ಬೆಲೆಬಾಳುವ ಕಾರಿನಲ್ಲಿ ಸುತ್ತಿಬಿಟ್ಟು ಬಂದಿದ್ದಾಳೆ.

ಕೆಲವು ದಿನಗಳಿಂದ ಇತಂಹ ಮೋಜಿನ ಸುತ್ತಾಟಕ್ಕೆ ಅವಳು ಹೋಗುತ್ತಿರಲಿಲ್ಲ, ಸಾಧಾರಣವಾದ ಸೀರೆಯನ್ನು ಉಟ್ಟುಕೊಂಡು, ಮನೆಯಲ್ಲೇ ಕೂತಿದ್ದು, ಪುಸ್ತಕ ಓದುತ್ತಾ,ಅಥವಾ ಚಿತ್ರ ಬರೆಯುತ್ತಾ ಕಾಲ ಕಳೆಯುತ್ತಿದ್ದಳು.

ಒಂದೊಂದು ದಿನ ಒಬ್ಬಳೇ ತನ್ನ ತಾಯಿಯನ್ನು ನೋಡಲು ಹೋಗುತ್ತಿದ್ದಳು.

ಇಂತಹ ಒಂದು ಸಂದರ್ಭದಲ್ಲೇ ತನ್ನ ತಾಯಿಯನ್ನು ನೋಡಲು ಹೋದಾಗ, ಅವಳು ಅಮ್ಮನ ಅಡಿಗೆ ಮನೆಯ ಮುಂದೆ, ಧೂಳಿನ ಮೇಲೆಯೇ ಕುಳಿತುಕೊಂಡು ಬಿಟ್ಟು ಕೇಳಿದ್ದಳು, "ಏನಮ್ಮಾ, ಇಲ್ಲಿಂದ ಎಲ್ಲಾದರೂ ದೂರ, ಓಡಿ ಹೊರಟುಹೋಗೋಣ ಎನ್ನಿಸುವುದಿಲ್ಲವೆ ನಿನಗೆ?"

ಕೇಳಿದ್ದಳು, "ಬದುಕಿರುವುದರ ಅರ್ಥವೇನು ಎನಿಸುವುದಿಲ್ಲವೇ?"

ಅಮ್ಮಾ ಹೇಳಿದ್ದಾಳೇ, "ಆಗದೆ ಏನು? ಹಗಲೂ, ರಾತ್ರಿ ತೋರುತ್ತೆ, ಇಂತಹ ದುರ್ಗತಿಯ ಬಾಳು, ಬಾಳಿ ಬದುಕಿರುವುದಕ್ಕಿಂತ ಸಾಯುವುದೇ ಮೇಲು ಎನಿಸುತ್ತೆ." ಎಂದು ಹೇಳಿದ್ದಾಳೆ, ಜೊತೆಗೆ ಅಕ್ಕರೆಯಿಂದ ಬೇಳೆಯನ್ನು ನೈಸಾಗಿ, ನುಣ್ಣಗೆ ಅರೆದಿದ್ದಾಳೆ! ಬಾಳೆಯ ಹೂವನ್ನು ಸಣ್ಣಸಣ್ಣದಾಗಿ ಹೆಚ್ಚಿದ್ದಾಳೆ! ಮಾವಿನಕಾಯಿಗೆ ಎಣ್ಣೆ–ಮಸಾಲಾ ಹಚ್ಚಿದ್ದಾಳೆ!

ಮೃದುವಾಗಿ ನಕ್ಕು ಎದ್ದು ಬಂದಿದ್ದಾಳೆ ಸುನಂದಾ.

ಒಂದು ದಿನ ಅಮ್ಮ ಹೇಳಿದ್ದಳು, "ಇರುವುದು ಒಂದು ಮಗು, ಅದನ್ನೂ ಬೋರ್ಡಿಂಗಿನಲ್ಲಿ ಬಿಟ್ಟುಬಿಟ್ಟಿದ್ದೀಯ, ಮನಸ್ಸಿಗೆ 'ಬಿಕೋ' ಎಂದೇ ಎನಿಸುತ್ತೆ. ಇದರಲ್ಲಿ ಆಶ್ಚರ್ಯವೇನಿದೆ?" ಸುನಂದಾ ಹೇಳಿದ್ದಳು, "ನೀನು ಅವನನ್ನು ಇಟ್ಟುಕೊಳ್ಳುವ ಹಾಗಿದ್ದರೆ ಬೋರ್ಡಿಂಗಿನಿಂದ ಕರೆದುಕೊಂಡು ಬರುತ್ತೇನೆ. ಇಲ್ಲಿ ಬಿಟ್ಟುಹೋಗುತ್ತೇನೆ."

ಅಮ್ಮ ಹೇಳಿದ್ದಳು, "ಸರಿಹೋಯಿತು! ನಾನು ಯಾಕೆ ಕರೆದು ಇಟ್ಟುಕೊಳ್ಳಲಿ? ನಿನ್ನವಸ್ತು ನಿನ್ನ ಹೃದಯವನ್ನು ತುಂಬಿಕೊಂಡು ಇರಲಿ. ಆದರೆ ನನ್ನ ಹತ್ತಿರ ಬಿಟ್ಟಿರಲು ಇಷ್ಟಪಟ್ಟರೆ–" ಸುನಂದಾ ನಿಟ್ಟುಸಿರು ಬಿಟ್ಟು, "ಬೇಡ, ಇರುವ ಹಾಗೆಯೇ ಇರಲಿ ಬಿಡು", ಎಂದಿದ್ದಳು.

ನೆನ್ನೆ ತಾಯಿ ಮನೆಗೂ ಹೋಗಿರಲಿಲ್ಲ ಅವಳು.

ನೆನ್ನೆ ಜರತಾರಿಯ ಸೀರೆಯನ್ನು ಸುತ್ತಿಕೊಂಡು ಗಂಡನೊಂದಿಗೆ ಪಾರ್ಟಿಯಲ್ಲಿ ಕುಡಿಯಲು ಹೋಗಿದ್ದಳು. ಯಾವ ನರ್ತನದ ವೈಭದಿಂದ ಅವಳ ಗಂಡನ ದೌಲತ್ತು ಹೆಚ್ಚಾಗುವ ಸಂಭವವಿತ್ತೋ, ಅಲ್ಲಿಗೆ ಹೋಗಿದ್ದಳು.

ಅದಕ್ಕಾಗಿಯೇ ಅವಳಿಗೆ ವಿನತಿ ಮಾಡಿದ್ದ ಅವಳ ಗಂಡ, ಅವಳ ಕೈಕಾಲು ಹಿಡಿದು ಹೇಳಿದ್ದ, "ದುಡ್ಡಿಲ್ಲದೆ ಬದುಕಿರುವುದರಲ್ಲೇ ಏನೂ ಅರ್ಥವಿಲ್ಲ ಸುನಂದಾ!"

ನರ್ತನವಾದ ಮೇಲೆ ಎಲ್ಲೋ ಸುನಂದಾ ಮಾಯವಾಗಿದ್ದಳು. ಒಂದು ಕಡೆ ಒಬ್ಬನೇ ಕುಳಿತು ನೀಲಾಕ್ಷ ಒಂದಾದಮೇಲೊಂದು ಗ್ಲಾಸು ಮದಿರೆಯನ್ನು ಒಳಗಿಳಿಸುತ್ತಿದ್ದ. ನಿಲ್ಲಲ್ಲಾಗುತ್ತಿರಲಿಲ್ಲ. ತೂರಾಡುತ್ತಿದ್ದ. ಆಮೇಲೆ ಸುನಂದಾನೂ ವಾಪಸ್ಸು ಬಂದಳು, ತೂರಾಡುವಂತೆಯೇ, ನಗುನಗುತ್ತಾ, ಗಾಡಿಯಲ್ಲಿ ಕುಳಿತುಕೊಂಡು, ಹೀಗೆ ಒಂದು ದೊಡ್ಡ ಮೀನನ್ನು, ನೀಲಾಕ್ಷ ಜೀವಿಸಿರಲು ಬೇಕಾದ ಸಲಕರಣೆಗಳನ್ನು ಒದಗಿಸುವ ಪ್ರತಿಜ್ಞೆಯನ್ನು ಮಾಡಿಸಿ ಬಂದಿದ್ದಾಳೆ ಎಂಬುವ ಕತೆಯನ್ನು ಸರಸವಾಗಿ ಹೇಳುತ್ತಾ ಬಂದಳು.

ನೀಲಾಕ್ಷನಿಗೆ ಅಮಲೇರಿದ್ದರೂ ಇಂಗಿತದಿಂದ 'ಡ್ರೈವರ'ನ್ನು ತೋರಿಸಿದ್ದ, ಅದನ್ನು ಲಕ್ಷ್ಯವೇ ಮಾಡಿದೆ ಸುನಂದಾ ಹಿ.ಹೀ ಎಂದು ನಗುತ್ತಾ, "ಅಯ್ಯೋ ಅವರುಗಳಿಗೇನು ಕೇಳಿಸುತ್ತೆ, ಅವರುಗಳೆಲ್ಲಾ, ಕುರುಡು, ಕಿವುಡು, ಮೂಕರು" ಎಂದಳು.

ನೀಲಾಕ್ಷ ಇನ್ನೇನೂ ಹೇಳಲಿಲ್ಲ. ಆಗವನು, ಅವಳಿಗೆ ಕೋಪಗೊಳ್ಳುವಂತೆ ಮಾಡಲು ಇಷ್ಟಪಡಲಿಲ್ಲ. ಮನೆಗೆ ಹಿಂತಿರುಗಿಯೂ ತಾಜಾನೇ ಮಾಡಿದ್ದಾನೆ. ಆದರೆ ಯಾವ ಸಂದಿಯಲ್ಲೋ ಒಂದು ಹಿಡಿ ನಿದ್ದೆಯ ಗುಳಿಗೆಗಳನ್ನು ನುಂಗಿ ಕೂತುಕೊಂಡಳು ಅವಳು.

ಶಂಕೆಯಿಲ್ಲದ ನೀಲಾಕ್ಷ ಒಂದು ನಿದ್ದೆಯಾದ ಮೇಲೆ ಹಠಾತ್ತನೆ, ಅಭಿಮಾನಿನಿಯನ್ನು ಸ್ವಲ್ಪ ಸಮಾಧಾನ ಮಾಡೋಣವೆಂದು ಹತ್ತಿರ ಎಳೆದುಕೊಳ್ಳಲು ಹೋದವನು, ಷಾಕ್ ಹೊಡೆಸಿಕೊಂಡವನಂತೆ ಮಂಚದ ಮೇಲಿಂದ ಧುಮುಕಿದ, ಬಾಗಿಲು ತೆರೆದುಕೊಂಡು ಹೋಗಿ ಅಮ್ಮನ ಕೋಣೆಯ ಬಾಗಿಲನ್ನು, "ಅಮ್ಮ,ಅಮ್ಮಾ, ಬೇಗ ಒಮ್ಮೆ ಈ ಕೋಣೆಗೆ ಬಾಮ್ಮಾ!"

ಒಂದು ವೇಳೆ ಸರೋಜಾಕ್ಷರು ಇನ್ನು ಈ ಮನೆಯನ್ನು ಬಿಟ್ಟುಹೋಗುವುದು ಸಾಧ್ಯವೇ ಆಗುವುದಿಲ್ಲವೇನೋ. ಒಂದು ವೇಳೆ ಇದೇ ನಗರದಲ್ಲೇ ಯಾವುದಾದರೊಂದು ಕರ್ಮಸ್ಥಳವನ್ನು ಆರಿಸಿಕೊಂಡು, ಮೆಲ್ಲಗೆಹೋಗಿ ಟ್ರಾಮು, ಬಸ್ಸು ಹಿಡಿಯ ಬೇಕು, ಕೊಡೆಯನ್ನು ಯಾವಾಗಲೂ ಕೈಯಲ್ಲಿಟ್ಟುಕೊಂಡಿರಬೇಕು. ಅಡಿಗಡಿಗೆ ಕರವಸ್ತ್ರವನ್ನು ಹೊರತೆಗೆದು ಮುಖದ ಬೆವರನ್ನು ಒರೆಸುತ್ತಿರಬೇಕು.

ಚಿಕ್ಕಂದಿನಿಂದ ಸರೋಜಾಕ್ಷರು ಒಂದೇ ಒಂದು ವಸ್ತುವನ್ನು ಬಯಸಿದ್ದರು, ಆದರೆ ಅವರಿಗೆ ಅದು ಸಿಗಲಿಲ್ಲ. ಸುಂದರವಾದುದಕ್ಕೆ ಬದಲು ಸುಂದರವಲ್ಲದ್ದೇ ಸಿಕ್ಕುತ್ತಾ ಬಂದಿದೆ. ಕಾರಣ ಅವರ ತಾಯಿ–ತಂದೆ, ಜೀವನದ ಅರ್ಥವನ್ನು, 'ವರೇಂದ್ರ' ಬ್ರಾಹ್ಮಣರ, ಕುಲಶೀಲ, ಗೋತ್ರದ ಪರ್ಯಾಯದಲ್ಲೇ ಹುಡುಕುತ್ತಿದ್ದರು. ಸರೋಜಾಕ್ಷರ ಹೆಂಡತಿ, ಜೀವನದ ಅರ್ಥವನ್ನು,

'ಐಹಿಕ' ಪ್ರಾಪ್ತಿಯಲ್ಲಿ ಹುಡುಕುತ್ತಿದ್ದರು. ಅವರ ಮಗ ನೀಲಾಕ್ಷ, ಜೀವನದ ಅರ್ಥವನ್ನು ಬ್ಯಾಂಕಿನ ಜಮಾ ಪುಸ್ತಕದಲ್ಲಿ ಹುಡುಕುತ್ತಿದ್ದ.

ಬಹುಶಃ ಸರೋಜಾಕ್ಷರೊಬ್ಬರಿಗೆ ಮಾತ್ರವೇ ಅಲ್ಲ, ಎಲ್ಲರಿಗೂ ಹೀಗೆಯೇ ಆಗುತ್ತೆ. ಒಂದು ವೇಳೆ 'ಸುಂದರತ್ವ'ವನ್ನು ಬಯಸುವುದು ಒಂದು ಅಸಂಭವವಾದ ವಸ್ತುವನ್ನು ಬಯಸಿದಂತೆ ಇರಬಹುದು. ಕಾರಣವೇನೆಂದರೆ ಮನುಷ್ಯ ಬಹಳ ಬುದ್ಧಿಹೀನನು. ಆ 'ಸುಂದರತ್ವ' ವನ್ನು ತನ್ನ ಕೈಯಿಂದಲೇ ಧ್ವಂಸ ಮಾಡುತ್ತಾನೆ.

ಅಂತಹವರನ್ನು ನೋಡಿದರೆ ಅವರುಗಳು 'ದಾನವ'ರು ಎನಿಸುತ್ತೆ. ಆದರೆ ಅದು ನಿಜವಲ್ಲ. ಅಸಲು ಮಾತು, ಅವರುಗಳು ಬುದ್ಧಿಹೀನರು, ಅದಕ್ಕೆ ತಮ್ಮ ಕೈಯಿಂದಲೇ ನಿರ್ಮಿತವಾದ ಸಭ್ಯತೆಯನ್ನು ತಾವೇ ಧ್ವಂಸ ಮಾಡಿ, ಉಲ್ಲಾಸದ ನಗು ನಕ್ಕು, ಗೆದ್ದೆವು, ಎನ್ನುತ್ತಾರೆ.

ಸರೋಜಾಕ್ಷರ ವಿಧ್ಯಾರ್ಥಿಗಳೂ ಗುರುವಿನ ಅವಮಾನವನ್ನು ಮಾಡಿ, ಮಹೋಲ್ಲಾಸದಿಂದ ಅಂದುಕೊಂಡಿದ್ದರು, ನಾವು ಗೆದ್ದೆವು, ಗೆದ್ದೆವು, ಎಂದು.

ದಿವಾಕರನೆನ್ನುವ ಮಹಾ ಮೂರ್ಖನೂ ತನ್ನ ಸ್ವರ್ಣದ ಹಂಸವನ್ನು ಕೊಂದು, ಉಲ್ಲಾಸದಿಂದ ಗೆದ್ದೆ, ಗೆದ್ದೆ, ಎಂದುಕೊಂಡಿದ್ದ.

ವಿಜಯಾ ಬಹುಶಃ ಎಂದಾದರೊಂದು ದಿನ ಸರ್ವಸ್ವವೂ ಹೋದ, ರೋಗ-ಜೀರ್ಣ ಮನುಷ್ಯನ ದೇಹದ ಸೇವೆಯನ್ನು ಮಾಡುವ ಅಧಿಕಾರ ಸಿಕ್ಕರೆ, ಅದಕ್ಕೇ ಪುಳಕಿತರಾಗಿ ಯೋಚಿಸಬಹುದು, 'ನಾನು ಗೆದ್ದೆ' ಎಂದು.

ವಿಜಯಾರ ದೊಡ್ಡ ಮಗಳು ತನ್ನ ಗಂಡನ 'ಬ್ಲಾಕ್ ಮಾರ್ಕೆಟ್' ಸಂಪಾದನೆಯ ದುಡ್ಡಿನಿಂದ ಖರೀದಿಯಾದ ಬೆಲೆಬಾಳುವ ಸೀರೆಯನ್ನುಟ್ಟುಕೊಂಡ, 'ಆಹಾ, ಎಂತಹ ಗೆಲವು ಗೆದ್ದೆ' ಎಂದುಕೊಳ್ಳ ಬಹುದು.

ವಿಜಯಾರ ಚಿಕ್ಕಮಗ ತನ್ನೆದುರು ಪಕ್ಷದ ಮುಖಂಡನ ತಲೆಯನ್ನು ಒಡೆದು, ನಾನೇ ಗೆದ್ದೆ, ಗೆದ್ದೆ ಎಂದುಕೊಳ್ಳಬಹುದು.

ಕೇವಲ ವಿಜಯಾರ ದೊಡ್ಡ ಮಗ ಏನನ್ನೂ ಯೋಚಿಸುವುದಿಲ್ಲ. ಸುಮ್ಮನೆ ಕುಳಿತು, ಕುಡಿದು, ಕುಡಿದು, ತನ್ನಷ್ಟಕ್ಕೆ ತಾನೇ ನಶೆಯಲ್ಲಿ ಮಾತಾಡಿಕೊಳ್ಳಬಹುದು. ಮತ್ತು ವಿಜಯಾರ ಚಿಕ್ಕ ಮಗಳು, ತನ್ನ ಅಗ್ಗವಾದ ಸ್ಕೂಲು ಟೀಚರ್ ಕೆಲಸದೊಂದಿಗೆ ಒಂದು ಅವಾಂಛಿತ ಶಿಶುವಿನ ಭಾರವನ್ನು ಹೊತ್ತುಕೊಂಡು, ಗೆದ್ದೆನೆ ಅಥವಾ ಸೋತೆನೇ? ಎಂದು ಯೋಚಿಸಬಹುದು.

ಒಣಗಿದ, ಶುಷ್ಕವಾದ ಇಂತಹ ಮನುಷ್ಯ ಕ್ರಮೇಣ ಒಂದು ಕಹಿ ನೆನಪಿನ ಬೊಂಬೆಯೇ ಆಗಿತಿರುಗುತ್ತಿರುತ್ತಾನೆ. ಕಾರಣ, ಯವುದು 'ಸುಂದರ' ಎಂಬುದು ಅವನಿಗೆ ಗೊತ್ತಿರಲಿಲ್ಲ.

* * *

ಇನ್ನೊಂದು ತರಹದ ಬುದ್ಧಿಹೀನರಿದ್ದಾರೆ ಈ ಜಗತ್ತಿನಲ್ಲಿ, ಇಡೀ ಜೀವನದಲ್ಲೂ ಇವರ ಜ್ಞಾನದ ಕಣ್ಣು ತೆರೆಯುವುದಿಲ್ಲ. ಇಡೀ ಜೀವನದಲ್ಲೂ ಅವರಿಗೆ ಲಾಭ–ನಷ್ಟದ ಲೆಕ್ಕ ಗೊತ್ತಾಗುವುದಿಲ್ಲ. ಶಾರದಾಪ್ರಸಾದ್ ಯಾವಾಗಲೂ ಇಂತಹವರ ಗುಂಪಿಗೆ ಸೇರಿದ ಮನುಷ್ಯ. ಅದಕ್ಕೇ ಶಾರದಾಪ್ರಸಾದ್, ಮೌಟುಂಗ್ರಿ ಗ್ರಾಮದ ಬಾಗಿಲು ಬಾಗಿಲಿಗೂ ಸಂಗ್ರಹಣೆಗೆ ಹೋಗಿ, ತನ್ನ ಸಂಪತ್ತನ್ನು ಅನ್ಯಾಯವಾಗಿ ಆಕ್ರಮಿಸಿಕೊಂಡವನನ್ನು ಬಿಡಿಸುವ ಪ್ರಯತ್ನಕ್ಕೆ ಹೋಗದೆ, ಆಗ್ರಾಮವನ್ನೇ ಬಿಟ್ಟು ಹೊರಟು ಹೋದರು. ಆದರೆ, ಆತ ಹುಡುಕಿದ್ದರೆ ಸಹಾಯ ಸಿಕ್ಕಿರುತ್ತಿತ್ತು.

ಸ್ವಲ್ಪ ಕಮಿಷನ್ನಿನ ಆದಾಯ ಇದೆ ಎಂದು ತಿಳಿದರೆ ನ್ಯಾಯದ ಪರವಾಗಿ ಮಾತನಾಡುವ ಜನರಿಗೇನೂ ಕಮ್ಮಿ ಇರಲಿಲ್ಲ ಆ ಗ್ರಾಮದಲ್ಲಿ!

ಶಾರದಾಪ್ರಸಾದ್ ಆ ಸಹಾಯವನ್ನು ಹುಡುಕಿಕೊಂಡು ಹೋಗದೆ ನೇರಾದ ದಾರಿಯನ್ನು ಹಿಡಿದರು. ಆದರೆ ಇಂದಿಗೂ, ಸತ್ಯತೆ, ಸರಳತೆ, ವಿಶ್ವಾಸ, ಎಂಬಿವುಗಳು ಇರುವಂತಹ ಜಾಗ ಶಾರದಾಪ್ರಸಾದ್‌ಗೆ ಸಿಕ್ಕೀತೇ?

ಯಾರಿಗೆ ಗೊತ್ತು ಅಂತಹ ಜಾಗ ಆತನಿಗೆ ಸಿಕ್ಕಿತೋ, ಇಲ್ಲವೋ, ಅಂತೂ ದಾರಿ ನಡೆಯುವುದನ್ನು ನಿಲ್ಲಿಸಿ ಆತ, ಒಂದು ಕಡೆ ಕುಳಿತಿರುವುದು ಕಾಣಿಸುತ್ತಿದೆ. ಆತ ಕುಳಿತಿರುವಲ್ಲಿಂದ ಮುಂದೆ ಸರಸರನೇ ಓಡುವ ತಿಳಿನೀರಿನ ಒಂದು ಧಾರೆ ಓಡುತ್ತಿದೆ, ತಲೆ ಎತ್ತಿ ನೋಡಿದರ ಎದುರಿಗೆ ಆಕಾಶಕ್ಕೆ ಸೇರುತ್ತಿರುವಂತೆ ಚಿಕ್ಕ ಚಿಕ್ಕ ಗುಡ್ಡಗಳು ಕಾಣಿಸುತ್ತಿದೆ.

ಆತ ಕುಳಿತಿರುವ ಜಾಗವನ್ನು ಅಂತಹ ಆದರ್ಶವಾದ ಆಶ್ರಯವೆಂದು ಹೇಳಲಾಗುವುದಿಲ್ಲ, ಏಕೆಂದರೆ ಮರದಡಿಯಲ್ಲಿ ಕುಳಿತಿರುವುದನ್ನು ಯಾರೂ ಆದರ್ಶ–ಆಶ್ರಯವೆಂದು ಹೇಳುವುದಿಲ್ಲ. ಆದರೆ ಆತ, ಯಾರಾದರೂ, ಏನಾದರೂ ಹೇಳುವುದಕ್ಕೂ, ಹೇಳದೇ ಇರುವುದರ ಬಗ್ಗೆಯೂ ಚಿಂತಿಸುವವರೇ?

ಆ ಮರದಡಿಯೇ, ಅಷ್ಟೊಂದು ದೀಪ್ತವಾಗಿದೆ. ಅಂತೂ ಅವರ ಮುಖ ನೋಡಿದರ ಹಾಗೆ ತೋರುತ್ತೆ, ಅಷ್ಟೊಂದು ದೀಪ್ತವಾದ ಮುಖದಲ್ಲಿ ಸಂತೋಷದ ಕಾಂತಿ, ಕಣ್ಣಲ್ಲಿನ ಉತ್ಸಾಹದ ಜ್ಯೋತಿ. ಸುಕ್ಕಿಲ್ಲದ ನೆತ್ತಿಯಲ್ಲಿ ನಿರ್ಮಲ ಸುಖದ ಮುದ್ರೆ ಕಾಣುತ್ತಿದೆ. ಸಿಂಹಾಸನವು ಕೇವಲ ಒಂದು ಮರದಡಿ, ಅದೂ ಧೂಳು ನೆರೆದಿದ್ದು, ಮತ್ತು ಅದರ ಹಿಂದೆ ಇರುವ 'ಅರಮನೆ' ಒಂದು ಮಣ್ಣಿನ ಗುಡಿಸಲು, ಎಂಬ ಅರಿವು ಇದೆ ಎಂಬಂತೆ ಅವರ ಮುಖದಲ್ಲಿ ಕಾಣಿಸುತ್ತಿಲ್ಲ. ಆ ಮಣ್ಣಿನ ಗೋಡೆಯ ಮೇಲೆ, ಸುಂದರವಾದ, ಅದ್ಭುತವಾದ, ರಂಗೋಲಿಯ ಚಿತ್ರ ಅಂಕಿತವಾಗಿದೆ. ಮರದ ಸುತ್ತಲೂ ಕೆಳಗೆ ಕೆಮ್ಮಣ್ಣಿನಿಂದ ಸಾರಿಸಿದೆ. ಮಣ್ಣಿನ ಕುಟೀರದ ಪಕ್ಕದಿಂದ ಹೋಗುವ ಸಣ್ಣ, ಕಾಲುದಾರಿ, ಅಡತೆಯಾದ ತಲೆಕೂದಲಿನ ಮಧ್ಯೆ ಇರುವ ಬೈತಲೆಯಂತೆ ಹೋಗಿ ಹಿಂದೆ, ಯಾವುದೋ ಒಂದು ಕಾಡಿನಲ್ಲಿ ಮಾಯವಾಗುತ್ತೆ. ಇದೇ ಈತನ ಸಂಪತ್ತು.

ಈ ಜಾಗ ಎಲ್ಲೋ ಮೌಟುಂಗ್ರಿ ಗ್ರಾಮದ ಪಕ್ಕದಲ್ಲೇ ಇದ್ದಿರಬೇಕು. ಆ ಗ್ರಾಮದ ಇತರೆ ಹೆಂಗಳೆಯರನ್ನು ನೋಡಿ, ತಾನೂ ತನ್ನ ಅಡಿಗೆ ಮನೆಯ ಗೋಡೆಯ ಮೇಲೆ,

ಬಣ್ಣದ ರಂಗೋಲಿ ಹಾಕುತ್ತಿದ್ದಳು, ಶ್ಯಾಮಾಪ್ರಸಾದನ ಹೆಂಡತಿ, ಅದನ್ನು ನೋಡಿ ಅವಳ ವಿಧವೆ ನಾದಿನಿ, 'ಏನೇ ಸೂಸೆ?' 'ಸಂತಾಲಿ' ಗಳನ್ನು ನೋಡಿ ನೋಡಿ, 'ಸಂತಾಲಿ' ಆಗಿಹೋಗುತ್ತಿದೀಯಾ? ನಿನ್ನ ಅಭಿರುಚಿಯೆಲ್ಲಾ ಹಾಗೆಯೇ ಆಗುತ್ತಿದೆಯಲ್ಲಾ?" ಎನ್ನುವಳು.

ಅಂತೂ ಶಾರದಾಪ್ರಸಾದ್ ಮೌಟುಂಗ್ರಿಯಿಂದ ಹೆಚ್ಚು ದೂರಕ್ಕೆ ಹೋಗಿರಲಿಲ್ಲ. ಬಹುಶಃ ಆತ ಬಹಳ ದೂರ ಹೋಗುವುದಕ್ಕೆ ಮುಂಚೆಯೇ ಆತ ಹುಡುಕುತಿದ್ದಂತಹ ಸ್ಥಳ ಸಿಕ್ಕಿರಬೇಕು. ಒಂದು ವೇಳೆ ಆ ಸರಳತೆ, ಸತ್ಯತೆ, ವಿಶ್ವಾಸವೆಂಬ ದುಷ್ಪ್ರಾಪ್ಯ ವಸ್ತುಗಳು ಆತನಲ್ಲಿಯೇ ಇದ್ದುದನ್ನು ಆತ 'ಸಿಕ್ಕಿತು' ಎಂದು ಗಮನಿಸಿದರೋ ಏನೋ!

ಯಾವುದೋ ಒಂದು ದೊಡ್ಡ ಸುತ್ತಿಗೆಯ ಪೆಟ್ಟಿನಿಂದ ಆತನ ಈ ಅಮೂಲ್ಯ ವಸ್ತುಗಳ ಪೆಟ್ಟಿಗೆಯ ಮುಚ್ಚಳ ಒಡೆದು ಚೂರಾಗಿತ್ತು. ಆದರೆ ಈಗ ಹೇಗೆ ತಾನೇ ಸೇರಿಕೊಂಡಿತೋ ಗೊತ್ತಿಲ್ಲ, ಒಂದು ವೇಳೆ ಹುಣಸೇ ಎಲೆಗಳ ಆ ಝಿರಿ ಝಿರಿ ಬೀಳುವಿಕೆ, ಸರಸರನೆ ಓಡುವ ತಿಳಿನೀರಿನ ಈ ಧಾರೆ, ಸಾಲಿನ ಮರದ ಕಾಡಿನಿಂದ ಬರುವ ಆ ಹಸಿ ಮರದ ವಾಸನೆಯೋ, ಯಾವುದಕ್ಕೋ ಆ ಒಡೆದ ಪದಾರ್ಥವನ್ನು ತಿರುಗಿ ಜೋಡಿಸಿ ಅಂಟಿಸುವ ಶಕ್ತಿ ಇದ್ದಿರಬೇಕು!

ಬಾರಿ ಬಾರಿಗೂ ಖಾಲಿಯಾಗುವ ಭಂಡಾರವನ್ನು ತಿರುಗಿ ತುಂಬಿಸುವ. ರಹಸ್ಯಮಯಿಯಾದ ಆ ಪ್ರಕೃತಿಯ ತೀರ ಹತ್ತಿರ ಬಂದು ಕುಳಿತರೆ ಮನುಷ್ಯನಿಗೂ ನವಜೀವನ ಬರುತ್ತೆ. ಅಥವಾ ಎಲ್ಲರಿಗೂ ಹಾಗೆ ಆಗುವುದಿಲ್ಲವೋ! ಸರಳಹೃದಯದ ಶಾರದಾನಂತಹ ಮನುಷ್ಯರು ಮಾತ್ರ ಹಾಗೆ ಆಗುತ್ತಾರೋ? ಸರಳವಾದ ಆತನ ಸ್ನೇಹಕ್ಕೆ ಬರುವವರೂ ಅಂತಹವರೇ!

ಅದಕ್ಕೆ ಆತನ ಸಂಗವನ್ನು ಬಿಡಲೇವೊಲ್ಲರು. ಆತನನ್ನು ನೋಡಿದರೆಯೇ ಉಲ್ಲಾಸದಿಂದ ಕೂಗಿಕೊಳ್ಳುವರು, 'ಹುಚ್ಚು ಮೇಷ್ಟರು ಬಂದರು' ಎಂದು. 'ಮೇಷ್ಟರು' ಎಂಬ ಪದವಿ ಹೇಗೆ ಬಂತು ಎಂಬುದು ಆತನಿಗೆ ಗೊತ್ತಿಲ್ಲ.

ಚಿಕ್ಕ ಚಿಕ್ಕ ಪಂಚೆಯ ತುಂಡುಗಳನ್ನು ಅಡ್ಡಗಚ್ಚೆ ಹಾಕಿ. ಬರೀ ಮೈಯಲ್ಲಿ ಬರುವ ಹುಡುಗರಿಗೆ ಆತ ಎಂದೂ ಸ್ಲೇಟು, ಪುಸ್ತಕ ಇಟ್ಟುಕೊಂಡು ಪಾಠ ಹೇಳಿದವರಲ್ಲ. ಅವರೊಂದಿಗೆ ಸಂಬಂಧ ಕೇವಲ ಕತೆ ಹೇಳುವುದರಲ್ಲಿ, ಅಷ್ಟೇ. ಆದರೆ ಅದನ್ನು ಬಹಳ ಅಕ್ಕರೆಯಿಂದ ಹೇಳುತ್ತಿದ್ದರು ಶಾರದಾಪ್ರಸಾದ್.

ಚಿಕ್ಕ ಹುಡುಗರಾದರೂ ಯಾವಾಗಲೂ ಆಟವಾಡಿಕೊಂಡಿರಲು ಅವರುಗಳಿಗೆ ಬಿಡುವು ಸಿಗುತ್ತಿರಲಿಲ್ಲ. ಚಿಕ್ಕ. ಚಿಕ್ಕ ಮಕರಿಯಂತಹದ್ದನ್ನು ಕವಿಚಿ. ಟೋಪಿಯ ಹಾಗೆ ಹಾಕಿಕೊಂಡು ಒಂದು ಕೋಮಿನ ಗಿರಿಜನರು ದನಮೇಯಿಸಲು ಹೋಗುತ್ತಿದ್ದು. ತಂದೆ, ತಾತಂದಿರ ಜೊತೆ ಹೊಲದಲ್ಲಿ ಕೆಲಸಕ್ಕೂ ನೆರವಾಗುತ್ತಿದ್ದರು ಈ ಹುಡುಗರು. ಅಮ್ಮನಿಗೂ ಚಿಕ್ಕಪುಟ್ಟ ಕೆಲಸಗಳಿಗೆ ಕೂಡ ನೆರವಾಗುತ್ತಾ ಇದ್ದು ಮಧ್ಯೆ ಸ್ವಲ್ಪ ಬಿಡುವು ಸಿಕ್ಕಿದ ತಕ್ಷಣ ಓಡಿಬಂದು. ಕೊಡೆಯಂತೆ ಹರಡಿರುವ ಆ ದೊಡ್ಡ 'ಛಾತಿಮ್'ಮರದ ಕೆಳಗೆ, ಕತೆ ಕೇಳಲು

ಬಂದು, ಹೊಸ ಜಗತ್ತಿನ ಪರಿಚಯವಾದ ಉತ್ಸಾಹದಿಂದ, ಕೇಳುತ್ತಿದ್ದವು, 'ಆಮೇಲ ಏನಾಯಿತು?' ಎಂದು.

ಶಾರದಾಪ್ರಸಾದ್ ಹೇಳಲಾರಂಭಿಸುತ್ತಾರೆ.

ಕೊನೆಯಿಲ್ಲದಷ್ಟು ಕತೆಯ ಭಂಡಾರವಿದೆ ಅವರಲ್ಲಿ, ಈ ಹಾತೊರೆಯುತ್ತಿರುವ ಭೂಮಿಯಲ್ಲಿ ಬೀಜಗಳನ್ನು ಹರಡುತ್ತಾರೆ ಶಾರದಾ.

ಕತೆ ಹೇಳುತ್ತಾರೆ ಮತ್ತು ಮಧ್ಯೆ ಮಧ್ಯೆ ಉತ್ಸಾಹದಿಂದ ಕೇಳುತ್ತಾರೆ, 'ಹಾಗಾದರೆ ಗೊತ್ತಾಯಿತೇ? ಈ ವಿಲಾಯಿತಿಯವರ ಕಂಡುಹಿಡಿಯುವಿಕೆ, ಏನನ್ನೂ ಹೊಸದಾಗಿ ತರಲಿಲ್ಲ. ಇದೇ 'ಟ್ಯೂಬುವೆಲ್' ನೋಡುತ್ತಾ ಇದ್ದೀರಲ್ಲಾ, ಏನು ಹೇಳುತ್ತೀರಿ ನೀವು? ಇದು, 'ಅದುಮುವ ಕೊಳಾಯಿ' ಅಲ್ಲವೇ? ಸಾವಿರಾರು ವರ್ಷಗಳ ಹಿಂದೆಯೂ ಇತ್ತು ಇದು. ಭೀಷ್ಮತಾತರು 'ತಣ್ಣನೆಯ ನೀರು ಬೇಕು' ಎಂದು ಕೇಳಿದಾಗ, ಅರ್ಜುನ ಬಾಣ ಹೊಡೆದು ಅದನ್ನು ಹೊರಗೆ ಬರಮಾಡಿದ ಎಂದರೆ ಇನ್ನೇನರ್ಥ? ಇದೇಯೇ!

"ಮತ್ತೆ ಹಾರುವ ಗಾಡಿಯ ಮಾತು. ಅಂದೇ ಹೇಳಿದೆನಲ್ಲಾ. ಈಗೆಲ್ಲಾ ಎಷ್ಟೆಷ್ಟೋ, ಅಸ್ತ್ರ-ಶಸ್ತ್ರಗಳನ್ನು ಮಾಡುತ್ತಿದ್ದಾರೆ. ಎಲ್ಲಾ ಮನುಷ್ಯನನ್ನು ಕೊಲ್ಲುವುದಕ್ಕೆ ಅಷ್ಟೇ. ಎಲ್ಲಿ, ನೋಡೋಣ, ಸತ್ತವನನ್ನು ಬದುಕಿಸುವುದಕ್ಕಾಗುತ್ತದೆಯೇ? ಇಲ್ಲ. ಆದರೆ ಅದಕ್ಕೂ ಪ್ರಯತ್ನ ನಡೆಸುತ್ತಿದ್ದಾರೆ. ಆದರೆ ಸಾವಿರಾರು ವರ್ಷಗಳ ಹಿಂದೆ ನಗುನಗುತ್ತಾ, ಸತ್ತವನನ್ನು ಬದುಕಿಸಲಾಗುತ್ತಿತ್ತು."

ತನ್ನ ಶ್ರೋತಾಗಳ ಗ್ರಹಿಸುವ ಶಕ್ತಿಯನ್ನೂ ಮರೆತು ಉತ್ಸಾಹದಿಂದ ಹೇಳಿಕೊಂಡು ಹೋಗುತ್ತಾರೆ.

"ಲಕ್ಷ ಮನುಷ್ಯರನ್ನು ಕೊಲ್ಲುವುದಕ್ಕಿಂತ, ಒಬ್ಬನನ್ನು ಬದುಕಿಸುವುದು ಎಷ್ಟು ಕಷ್ಟ! ಅದನ್ನು ಯೋಚಿಸುತ್ತಾರೆಯೇ? ಬರೀ ಹೊಡೆದಾಟ, ಬಡಿದಾಟ, ಪ್ರಪಂಚದಲ್ಲೆಲ್ಲಾ ಇದೇಯಾ! ಶ್ರೋತಾಗಳಲ್ಲೇ, ಯಾವನಾದರೊಬ್ಬ, ಅವರನ್ನು ಅವರ ಉತ್ಸಾಹದ ಆಕಾಶದಿಂದ ಇಳಿಸುತ್ತಾನೆ. "ಅದೇ, ಮತ್ತೆ, ಅಂದಿನಿಂದ ನಾವೇನಾದರೂ ಹೊಡೆದಾಡಿದೇವೆಯೇ ಮೇಷ್ಟರೇ?" ಕೆಳಗಿಳಿದ ಶಾರದಾನೂ ಹೇಳುತ್ತಾರೆ, "ಎಲ್ಲಾದರೂ ಉಂಟೇ? ನೀವೆಲ್ಲಾ ಚಿನ್ನದಂತಹ ಮಕ್ಕಳು."

ಆ 'ಚಿನ್ನ'ದಂತಹ ಮಕ್ಕಳಲ್ಲಿ ಒಬ್ಬಿಬ್ಬರು ಪಕ್ಕದ ಹುಡುಗನನ್ನು ಜಿಗುಟುವುದರಲ್ಲಿ ಇಷ್ಟು ಹೊತ್ತೂ ಮಗ್ನನಾಗಿದ್ದವನು, ಕೈಯನ್ನು ಮುಂದಕ್ಕೆ ತಂದು, ಅಲೌಕಿಕವಾದ ಶಾಂತತೆಯಿಂದ ಕೇಳುತ್ತಾನೆ, "ಆ ಬೆಟ್ಟು ಕತ್ತರಿಸುವ ಕತೆಯನ್ನು ತಿರುಗ ಹೇಳಿ ಮೇಷ್ಟರೆ. ಧನೂ ಆವತ್ತು ಅದನ್ನು ಕೇಳಲಿಲ್ಲ, ಅವರಪ್ಪ ಅವನನ್ನು ಆವತ್ತು ಸಂತೆಗೆ ಕರೆದುಕೊಂಡು ಹೊರಟುಹೋಗಿದ್ದ."

ಬೆಟ್ಟು ಕತ್ತರಿಸುವ ಕತೆ! ಅಂದರೆ ಏಕಲವ್ಯನ ಕತೆ, ಏಕಲವ್ಯನ ಕತೆ, ಉತ್ತರನಕತೆ, ಬಕ ರಾಕ್ಷಸನ ಕತೆ, ಜತುಗೃಹದಾಹದ ಕತೆ, ಇವೆಲ್ಲಾ ಅವರುಗಳಿಗೆ ಮುಕ್ಕಾಲು ಪಾಲು

ಕಂಠಪಾಠವಾಗಿ ಹೋಗಿದೆ. ಅಂದರೆ, ಶಾರದಾ, ಅವರುಗಳ ತಲೆಗೆ ತುರುಕಿದ ಮೇಲೆಯೇ ಬಿಟ್ಟಿದ್ದಾರೆ!

ಮನೆಗೆ ಹೋಗಿ ತಮ್ಮ ಅಮ್ಮ–ಅಪ್ಪನ ಹತ್ತಿರ ಕತೆಗಳನ್ನು ಅವರುಗಳು ಹೇಳುತ್ತಾರೆ. ಕೆಲವುವೇಳೆ ಕೆಲವನ್ನು ಮರೆತು, ಅಥವಾ ಒಂದರ ಸನ್ನಿವೇಶವನ್ನು ಇನ್ನೊಂದರ ಜೊತೆ ಸೇರಿಸಿಕೊಂಡು ಹೇಳುತ್ತಾರೆ. ಆದರೂ ಅವರುಗಳನ್ನು ಹೆತ್ತವರು, ಶಾರದಾಪ್ರಸಾದನನ್ನು ಶ್ರದ್ಧೆ ಮತ್ತು ಭಕ್ತಿಯಿಂದ ನೋಡುತ್ತಿದ್ದರು. ಹರಿಕಥೆ ಹೇಳುವವರಂತೆ ರಾಗವಾಗಿ ಹೇಳುತ್ತಿದ್ದರೂ ಈ ಮೇಷ್ಟರು, ಆ ದೇವರ ಕತೆಗಳನ್ನೇ ಹೇಳುತ್ತಿದ್ದಾರೆ ಎಂದು ಸಮಾಧಾನ ಹೊಂದಿದ್ದರು.

ಶಾರದಾಪ್ರಸಾದರ 'ಸಭೆ'ಯಲ್ಲಿ ಹೆಣ್ಣು ಹುಡುಗೀರು ಇರಲಿಲ್ಲ. ಹುಡುಗಿಯರು ಚಿಕ್ಕಂದಿನಿಂದಲೇ ಅಮ್ಮಂದಿರ ಜೊತೆಯಲ್ಲಿ ಕೆಲಸಕ್ಕೆ ತರಪೇತಾಗುತ್ತಾರೆ. ಬೀದಿಗಳಲ್ಲಿ ಅಷ್ಟಾಗಿ ಓಡಾಡುವುದಿಲ್ಲ. ಅವರುಗಳೂ, ತಲೆಯ ಮೇಲೆ ಗೂಡೆಯ ಟೋಪಿ ಹಾಕಿಕೊಂಡು ಹೋಗುವಾಗ ಶಾರದಾಪ್ರಸಾದರನ್ನು ನೋಡಿದರೆ, "ಹುಚ್ಚು ಮೇಷ್ಟರೇ, ನಮಸ್ಕಾರ." ಎಂದು ಕೂಗಿಕೊಳ್ಳುವವರು.

ಶಾರದಾ ನಕ್ಕು ಕೇಳುವರು, "ನಮಸ್ಕಾರ. ನೀವುಗಳು ಏಕೆ ಕತೆ ಕೇಳಲು ಬರುವುದಿಲ್ಲ?" ಅವರುಗಳು ಹಿ.ಹಿ ಎಂದು ನಗುವರು, ಮತ್ತು ಓಡುತ್ತಾ ಹುಚ್ಚು ಮೇಷ್ಟರು, ಹುಚ್ಚುಮೇಷ್ಟರು ಎಂದು ಕೂಗಿಕೊಳ್ಳುವರು.

ಹಾಸ್ಯಮಾಡಿ ಅಲ್ಲ. ಪ್ರೀತಿಯಿಂದಲೇ ಹಾಗೆ ಕೂಗಿಕೊಳ್ಳುವರು.

ತಮ್ಮ ಅಣ್ಣ–ತಮ್ಮಂದಿರಂತೆ ಬಂದು ಪ್ರತ್ಯಕ್ಷವಾಗಿ ಕತೆ ಕೇಳದಿದ್ದರೂ, ತಮಗೂ ತಿಳಿದಿದೆ, ಗೊತ್ತು ಎಂದು ತೋರಿಸಿಕೊಳ್ಳುವುದಕ್ಕಾಗಿ ಈ ಕೂಗು.

ಹುಚ್ಚು ಮೇಷ್ಟರು ದಾರಿಯಲ್ಲಿ ನಡೆಯುತ್ತಾ ಯೋಚಿಸುತ್ತಾರೆ ಈವತ್ತು ಯಾವ ಕತೆ ಹೇಳೋಣ ಎಂದು. ಹನುಮಂತನ ಬಾಲಕ್ಕೆ ಕಟ್ಟಿದ ಬಟ್ಟೆಗಳ ಬೆಂಕಿಯಿಂದ ಲಂಕಾದಹನದ ಕತೆಯೇ? ಅಥವಾ ಗಂಧಮಾದನ ಪರ್ವತವನ್ನು ಹೊತ್ತುತಂದ ಕತೆಯನ್ನು ಹೇಳಲೇ? ಅಳಿಲು ಸೇತುಬಂಧನ ಮಾಡಲು ಮಾಡಿದ ಸಾಹಸದ ಕತೆಯೇ? ಇವೆಲ್ಲಾ ಕೇಳಲು ಬಹಳ ಉತ್ಸಾಹ ಅವರುಗಳಿಗೆ. ಬಿದ್ದೂ ಬಿದ್ದೂ ನಗುತ್ತಾರೆ. ಎಲ್ಲರೂ ಸೇರಿ ತಳ್ಳಿ ಒಂದು ಮಣ್ಣಿನ ಮೂಟೆಯನ್ನು ತಲೆಯಮೇಲೆ ಎತ್ತಿ ತಾನು ಹನುಮಂತ, ಎನ್ನುವರು. ಶಾರದಾಪ್ರಸಾದನಿಗೆ ಮಹಾಭಾರತದ ಕತೆ ಹೇಳಲು ಉತ್ಸಾಹ ಹೆಚ್ಚು. ಆತ. ಆ ಕಾಲವನ್ನು ಈ ಕಾಲಕ್ಕೆ ಹೋಲಿಸಿ. ಈ ಕಾಲದ ಮುಂದುವರಿಕೆ ಅಂತಹ ಆಶ್ಚರ್ಯಕರವಾದದ್ದೇನಲ್ಲ ಎಂದು ಹೇಳಿ ಅವರುಗಳ ಜ್ಞಾನದ ಕಣ್ಣನ್ನು ತೆರೆಯುವ ಪ್ರಯತ್ನವನ್ನು ಮಾಡುತ್ತಾರೆ.

ಹುಡುಗಿಯರು, ಹೆಂಗಸರು ವಿಶೇಷವಾಗಿ ಬರುವುದಿಲ್ಲ. ಕೇವಲ ಮಧ್ಯೆಮಧ್ಯೆ ಒಬ್ಬ ಮಹಿಳೆ ಮಾತ್ರ ಬರುತ್ತಾಳೆ. ಶ್ರೋತಾವಾಗಿ ಬಂದು ಕುಳಿತುಕೊಳ್ಳುತ್ತಾಳೆ. ಆಗ ಶಾರದಾಪ್ರಸಾದ್ ಸ್ವಲ್ಪ ಗಡಿಬಿಡಿಯಿಂದ, ಪಂಚೆಯ ತುದಿಯಿಂದ ಮರದ ಕೆಳಗಿನ ಧೂಳನ್ನು ಒದರಿ, ಕೂಡಲು ಜಾಗ ಮಾಡುತ್ತಾರೆ.

ಬರುವವಳು ಕತೆ ಕೇಳುವುದಕ್ಕೆ ಬರುವುದಿಲ್ಲ. ಏನಾದರೂ ತಿಂಡಿ ತಂದು ಕೊಡಲು ಬರುತ್ತಾಳೆ. ಅದು ಬಹಳವೇ ಸಾಮಾನ್ಯವಾದ ವಸ್ತುವಾಗಿರಬಹುದು ಆದರೆ ತರುವವಳ ಮನಸ್ಸಿನ ಶ್ರದ್ಧೆ, ಅಕ್ಕರೆಗಳಿಂದ, ಆ ತುಚ್ಛ ವಸ್ತುವೇ ಅಮೂಲ್ಯ, ಅಮೃತವಾಗುತ್ತೆ. ಆ ಮಲಿನ-ವಸನಧಾರಿ ವಿಧವೆ ಹೆಂಗಸಿನ ಮುಖದಲ್ಲಿ ರಾಣಿಯ ಕಳೆಯನ್ನು ನೋಡುತ್ತಾರೆ ಶಾರದಾಪ್ರಸಾದ್.

ಅವಳು ಒಬ್ಬಳೇ ಬರುವುದಿಲ್ಲ. ಜೊತೆಯಲ್ಲಿ ಹುಡುಗರಿಬ್ಬರೂ ಬರುತ್ತಾರೆ. ದೊಡ್ಡವ ಒಂದೊಂದು ದಿನ ಹೇಳುತ್ತಾನೆ, "ಅಜ್ಜಾ, ಗೊತ್ತೇ, ನೀನು ಹೇಳಿದ ಆ ರಾಮಚಂದ್ರನ ಕತೆ, ನಮ್ಮ ಪಾಠದ ಪುಸ್ತಕದಲ್ಲಿದೆ."

ಶಾರದಾಪ್ರಸಾದ್ ಅವನ ತಲೆಯನ್ನು ಸವರಿ ಹೇಳುತ್ತಾರೆ, "ಆಗಲೇ ಮೂರು ಮೈಲಿ ನಡೆದು ಸ್ಕೂಲಿಗೆ ಹೋಗಿ ಬರುತ್ತೀಯಾ, ಈಗೇಕಪ್ಪಾ ತಿರುಗಿ ಎರಡು ಮೈಲಿದಾರಿ ನಡೆದು ಇಲ್ಲಿಗೆ ಬರುತ್ತೀಯಾ?"

ಶಾರದಾರ ಆತಂಕವನ್ನು ಹೋಗಲಾಡಿಸಲು ಹೇಳುತ್ತಾನೆ, "ಹೂಂ,ಅಮ್ಮನ ಜೊತೆಯಲ್ಲಿ ಬರದೇ ಇರುತ್ತೇನೆಯೇ ? ಗಂಡು ಹುಡುಗನಿಗೆ ನಡೆದರೆ ಕಷ್ಟ ಆಗುತ್ತದೆಯೇ? ಏನಮ್ಮಾ?" ಅಮ್ಮ, ತಲೆಯ ಮೇಲೆ ಹೊದ್ದು ಕೊಂಡಿರುವ ಸೆರಗಿನ ಹಿಂದಿನಿಂದ, ಮೃದು ನಕ್ಕು ಹೇಳುತ್ತಾಳೆ, "ಇಲ್ಲ"!

ಶಾರದಾಪ್ರಸಾದ್ ಹೇಳುತ್ತಾರೆ, "ನೀನಾದರೂ ಏಕೆ ಕಷ್ಟಪಟ್ಟುಕೊಂಡು ಅಡಿಗಡಿಗೆ ಹೀಗೆ ಬರುತ್ತೀಯಾಮ್ಮಾ? ನಾನೇ ಬೇಕಾದರೆ ಬಂದು ತಿನ್ನುತ್ತೇನೆ."

ಅಟಲ್ ಎಂಬುವ ಆ ಹುಡುಗ ನಕ್ಕು ಹೇಳುತ್ತಾನೆ, "ಅಮ್ಮಾ ಏನು ತಂತಿ ಮೂಲಕ ಸಮಾಚಾರ ಕೊಡುವುದಕ್ಕಾಗುತ್ತದೆಯೇ? ಇಂದು ಬಾಳೆಕಾಯಿ ಬೋಂಡಾ ಮಾಡಿದ್ದೇನೆ, ಇಂದು ದೋಸೆ ಮಾಡಿದ್ದೇನೆ ಎಂದು? ನಿನಗೆ ಹೇಗೆ ಗೊತ್ತಾಗೋದು?"

ಶಾರದಾಪ್ರಸಾದ್ ಅಂದರು, "ಅದೆಲ್ಲಾ ಯಾಕಮ್ಮಾ ಇಷ್ಟೊಂದು ಮಾಡಲು ಹೋಗುತ್ತೀಯಾ? ನಿನಗೆ ಮೈಯೂ ಸರಿಯಾಗಿಲ್ಲಾ-"

ಅಟಲ್ ಹೇಳುತ್ತಾನೆ, "ಅಮ್ಮಹೇಳುತ್ತಾಳೆ, ಇಡೀ ದಿನ ಏನು ಮಾಡಲಿ ಎನ್ನುತ್ತಾಳೆ."

ಅದೂ ನಿಜವೇ. ಶ್ಯಾಮಾ ಪ್ರಸಾದನ ಆಕಸ್ಮಿಕ ಮರಣ, ಅವನ ಚಿರ-ಬಂದಿನಿಯಾಗಿದ್ದ ಹೆಂಡತಿಗೆ, ಭಯಂಕರವಾದ ಮುಕ್ತಿಯ ಶೂನ್ಯತೆಯನ್ನು ಕೊಟ್ಟು ಹೋಗಿದೆ, ಮತ್ತು ಅದರ ಜೊತೆಗೆ ಸ್ವಲ್ಪ ಸ್ವಾತಂತ್ರ್ಯವನ್ನೂ ಕೊಟ್ಟಿದೆ.

ಅದರಿಂದಲೇ ಅವಳು ಭಾಳೇಕಾಯಿ ಬೊಂಡಾ, ತಾಟೀ ನುಂಗಿನ ವಡೆ, ಎಂದು ತಿಂಡಿ ತಿನಿಸುಗಳನ್ನು ಮಾಡಿಕೊಂಡು, ಎರಡು ಮೈಲಿ ದಾರಿಯನ್ನು ನಡೆದು, ತಾನು ತನ್ನ ಜೀವನದ ಆದಿಯಿಂದ ನೋಡಿಲ್ಲದ ಈ ಚಿಕ್ಕ-ಮಾವನಿಗೆ ಹೊತ್ತುಕೊಂಡು ಬಂದಳು. ನಾದಿನಿಯಾದವಳು ಕೋಪದಿಂದ ಹೇಳಿದ್ದಳು, "ಶ್ಯಾಮಾ ಹೋಗಿದ್ದು ನಿನಗೆ ಬಹಳ ಗರಿ ಮೊಳೆತು ಕೊಂಡಿದೆ! ಅಲ್ಲಾ, ಕೇಳುತ್ತೇನೆ. ಏಳು ಜನ್ಮದಿಂದ ನೋಡದ, ಕಾಣದ ಮಾವನ

ಮೇಲೆ ಯಾಕೆ ಇಷ್ಟೊಂದು ಭಕ್ತಿ ಉಕ್ಕುತ್ತಿದೆ ನಿನಗೆ? ಮುದಿ–ಮುದುಕ ಏನಲ್ಲಾ, ನಡುವಯಸ್ಸಿನ ಗಂಡಸು, ಅವನ ಹತ್ತಿರ ಹೋಗಿ ನಿನಗೇನಾಗಬೇಕು?"

ಆದರೆ ಸೊಸೆಬಾಯಿ ಬಿಡುವುದಿಲ್ಲ, ಅಂತೂ ಹೋಗುತ್ತಾಳೆ.

ನಾದಿನಿ ಕೇಳುತ್ತಾಳೆ, "ತಲೆಯ ಸೆರಗನ್ನೂ ತೆಗೆದು ಬಿಟ್ಟು ಹರಟೆ ನಡೆಯುತ್ತೇನೋ ಮಾವನ ಜೊತೆಯಲ್ಲಿ?"

ಸೊಸೆ ಹೇಳುತ್ತಾಳೆ, "ಹೊಲಸು ಮಾತಾಡಿ ದೇವರು ಕೊಟ್ಟ ಬಾಯನ್ನು ಕೆಡಸಿಕೋಬೇಡ ಠಾಕುರ್‌ಝಿ" ನಾದಿನಿಗೆ ಇದರಿಂದ ಕೋಪ ಇನ್ನೂ ಉಕ್ಕುತ್ತೆ, ಹಣೆಗೆ ಹೊಡೆದು ಕೊಳ್ಳುತ್ತಾಳೆ, "ಶ್ಯಾಮಾ ಹೋಗಿದ್ದು ನಿನ್ನ ಕಾಲು ಮಾತ್ರ ಉದ್ದವಾಗಿಲ್ಲ, ನಿನ್ನ ನಾಲಿಗೆಯನ್ನೂ ಉದ್ದವಾಗಿಸಿದೆ.... ಅಯ್ಯೋ ಶ್ಯಾಮಾ, ನೋಡು ನಿನ್ನ ಹೆಂಡತಿಯ ಧಾಂಡಿಗತನವನ್ನು.... ಕಪಾಳಕ್ಕೆ ಹೊಡೆದರೂ ಬಾಯಿ ಬಿಡದಿದ್ದವಳು ಈಗ ಹೇಗೆ ಲಟಾಪಟಿ ಮಾಡುತ್ತಾ ಇದ್ದಾಳೆ....!"

"ಲಟಾಪಟಿ ನಾನೇನೂ ಮಾಡುತ್ತಾ ಇಲ್ಲ ಠಾಕುರ್‌ಝಿ" ಎಂದು ಹೇಳಿ ಇಬ್ಬರು ಹುಡುಗರಗಳ ಕೈಯನ್ನೂ ಹಿಡಿದುಕೊಂಡು ಹೊರಡುತ್ತಾಳೆ.

ನಾದಿನಿಗೆ ಮೊಳಕಾಲಿನಲ್ಲಿ ವಾತದ ನೋವು, ಅದಕ್ಕೆ ಹಿಂದೆ ಹಿಂದೆ ಹೋಗಿ ಕದ್ದು ನೋಡಲು ಆಗುವುದಿಲ್ಲ. ಹಿಂದೆಯೇ ನಿಂತು ನೆಟ್ಟಿಗೆ ಮುರಿಯುತ್ತಾಳೆ, ಮತ್ತು ಕೂಗಿ ಕೊಳ್ಳುತ್ತಾಳೆ. "ಮತ್ತೆ ಹೇಳಿಬಿಟ್ಟು ಹೋಗು, ಎಲ್ಲಿಗೆ ಹೋಗುತ್ತೀಯೆಂದು, ಹೇಳಿ ಹೋಗು.' ಎಂದು.ಏಕೆ ಹೋಗುತ್ತಾಳೆ ಎಂಬುದನ್ನು ಶ್ಯಾಮಾ ಹೆಂಡತಿ ನಾದಿನಿಯ ಹತ್ತಿರ ಹೇಳುವುದಿಲ್ಲ. ಆದರೆ ಮುಖ್ಯವಾಗಿ ಹೇಳಬೇಕಾದ ಕಡೆ ಹೇಳುತ್ತಾಳೆ. ಆದರೆ ತಲೆಯ ಸೆರಗು ಹೊದ್ದುಕೊಂಡು, ಹುಡುಗರ ಮೂಲಕವೇ ಹೊರತು ನೇರಾಗಿ ಅಲ್ಲ.

ಅಟಲ್ ಹೇಳುತ್ತಾನೆ, "ಅಜ್ಜಾ, ಅಮ್ಮಾ ಹೇಳುತ್ತಾ ಇದ್ದಾಳೆ, ಮೌಟುಂಗ್ರಿ ಗ್ರಾಮದಲ್ಲಿ ನಿನ್ನ ರಾಜ್ಯ–ಸಂಪತ್ತು ಬಿದ್ದಿರುವಾಗ, ನೀನೇಕೆ ಇಲ್ಲಿ ನಾಲ್ಕು ಜನರ ದಯೆಯನ್ನು ಕಾಯುತ್ತಾ ಬಿದ್ದಿರಬೇಕು?" ಎಂದು.

ಶಾರದಾಪ್ರಸಾದ್ ನಕ್ಕು ಹೇಳುತ್ತಾರೆ, "ನಿಮ್ಮಮ್ಮನಿಗೆ ಹೇಳಪ್ಪಾ, ನಿನ್ನಜ್ಜನಿಗೆ ಇದೂ ಆ ರಾಜ್ಯ ಸಂಪತ್ತೇ. ರಾಜಾವಾಗಿ ನಾನು ಕುಳಿತುಕೊಳ್ಳುತ್ತೇನೆ ಅಂತ ಕುಳಿತುಕೊಳ್ಳುವವರ ರಾಜ್ಯವನ್ನು ಕಿತ್ತುಕೊಳ್ಳುವುದು ಯಾರಿಂದ ತಾನೆ ಸಾಧ್ಯ?"

"ಅಮ್ಮಾ ಹೇಳುತ್ತಾಳೆ, ನೀನು ಅಲ್ಲಿ ಬಂದು ನಮ್ಮನ್ನು ನೋಡಿಕೊಳ್ಳುವ ಭಾರವನ್ನು ತೆಗೆದುಕೊಳ್ಳಬೇಕಂತೆ, ನಮ್ಮನ್ನು ಆಳಾಗಿಸುವ ಭಾರವನ್ನು ತೆಗೆದುಕೊಳ್ಳಬೇಕಂತೆ."

"ಛೆ.ಛೆ!" ನಗುತ್ತಾರೆ ಶಾರದಾಪ್ರಸಾದ್, "ನಿಮ್ಮ ಅಜ್ಜ ತಾನೇ ಒಬ್ಬ ಮನುಷ್ಯನಾಗಿಲ್ಲ, ಅವನು ಆಳಾಗಿಸುವುದೆಲ್ಲಿ? ನಿಮ್ಮಮ್ಮನಂತಹ ಅಮ್ಮ ಸಿಕ್ಕಿರುವಾಗ ನೀವು ಆಳಾಗುವುದನ್ನು ತಡೆಯುವವರು ಯಾರು?"

"ಅಮ್ಮ ಹೇಳುತ್ತಾಳೆ, ನಿಮ್ಮ ಆಸ್ತಿ–ಪಾಸ್ತಿ ನೀವು ಅನುಭವಿಸಲು ಬಿಡದೆ ನಾವು ಇಟ್ಟುಕೊಂಡು ಬಿಟ್ಟು ಮಹಾಪಾಪವನ್ನು ಮಾಡುತ್ತಿದ್ದೇವೆ, ಎಂದು."

ಈ ಮಾತನ್ನು ಕೇಳಿ ಕೋಪಬರುತ್ತೆ ಶಾರದಾಪ್ರಸಾದ್‌ಗೆ. ಆದ್ದರಿಂದ ಈ ಮಧ್ಯಸ್ತಿಕೆ ಬಿಟ್ಟು ನೇರಾಗಿ ಹೇಳಿದರು, "ಈ ಮಾತು ಮಾತ್ರ ನೀನು ಹೇಳುವಂತಹ ಮಾತಾಗಲಿಲ್ಲವಲ್ಲಾ ಸೊಸೆಯಮ್ಮಾ, ನನ್ನ ಆಸ್ತಿ–ಪಾಸ್ತಿಗಳನ್ನು ನನ್ನ ಮೊಮ್ಮಕ್ಕಳಲ್ಲದೆ, ಇನ್ನು ಯಾರು ಅನುಭವಿಸಬೇಕು? ಹೇಳು. ನಾನೊಬ್ಬ ಪರದೇಶಿ, ಹುಚ್ಚ, ಆಸ್ತಿಪಾಸ್ತಿಯ ಮರ್ಮವೆಲ್ಲಾ ನನಗೇನು ಗೊತ್ತಾಗುತ್ತೆ. ಹೀಗಿದ್ದುಕೊಂಡು ಒಳ್ಳೆ ಸೌಖ್ಯವಾಗಿದೇನೆ. ಒಂದು ಐದು–ಹತ್ತು ಜನರ ಪ್ರೀತಿ, ವಿಶ್ವಾಸದಿಂದ ಉಣ್ಣೋದು, ಇರುವುದು ಕಳೆದುಹೋಗುತ್ತೆ. ಅವರೊಂದಿಗೆ ಆನಂದವಾಗಿದ್ದೇನೆ."

ತಾಯಿ ಹೇಳಿಕೊಟ್ಟ ಹಾಗೆ ಹುಡುಗ ತಿರುಗ ಹೇಳುತ್ತಾನೆ, "ಅಮ್ಮ ಹೇಳುತ್ತಾಳೆ, ನಿನಗೂ ಒಂದು ಮರ್ಯಾದೆ ಅನ್ನುವುದು ಇದೆ. ನೀನೇಕೆ ಯಾವಾಗಲೂ ಊಟಕ್ಕೆ ಇನ್ನೊಬ್ಬರ ದಯೆಗೆ ಕಾಯಬೇಕು?"

"ಇನ್ನೊಬ್ಬರು ಏಕೆ ಊಟ ಹಾಕಬೇಕೆ?!"

ಶಾರದಾಪ್ರಸಾದ್ ಹೋ, ಹೋ ಎಂದು ನಗುತ್ತಾರೆ. "ಯಾಕೆ ಊಟ ಹಾಕಬೇಕಂತೆ! ಕೇಳುಮಾತನ್ನು! ಮನೆಯಲ್ಲಿರುವ ದೇವರಿಗೆ ಜನ ಏಕೆ ಉಣಿಸುತ್ತಾರೆ? ಬೆಳಸಿದ ನಾಯಿಗೆ ಏಕೆ ಉಣಿಸುತ್ತಾರೆ? ಉಣಿಸದಿದ್ದರೆ ಅವರಿಗೆ ಉಣಿಸುವವರು ಯಾರು, ಎಂದು ಯೋಚಿಸಿಯೇ ಉಣಿಸುತ್ತಾರೆ? ಆ ಉಣಿಸುವಿಕೆಯಿಂದ ದೇವರೂ ನಾಚುವುದಿಲ್ಲ ನಾಯಿಯೂ ಅಲ್ಲ. ಮತ್ತೆ? ಅದಲ್ಲದೆ ಈ ಹುಡುಗ ಇದಾನಲ್ಲಾ, ಬಲೇ ಬುದ್ಧಿವಂತ ಗೊತ್ತೇನಮ್ಮಾ? ಒಂದು ಮಾತಿನಿಂದಲೇ ಎಲ್ಲಾ ಅರ್ಥಮಾಡಿ ಕೊಳ್ಳುತ್ತಾನೆ. ನಿನ್ನ ಅಟಲ್ ಕೂಡ ಹಾಗೆಯೇ ಎಲ್ಲಾ ಅರ್ಥಮಾಡಿ ಕೊಳ್ಳುತ್ತಾನೆ. ಆವತ್ತು ಹೇಳುತ್ತಾ ಇದ್ದ ನೋಡು, ನಮ್ಮ ಭಾರತದಲ್ಲಿ ಹಿಂದಿನ ಕಾಲದ ಋಷಿ ಮುನಿಗಳೆಲ್ಲಾ, ಎಲ್ಲಾ ತರಹದಿಂದಲೂ ದೇಹವನ್ನು ಗಟ್ಟಿಯಾಗಿಸಿಕೊಳ್ಳಲು, ಬೇಸಿಗೆಯಲ್ಲಿ ಬೆಂಕಿಯನ್ನು ಹೊತ್ತಿಸಿಕೊಂಡು ಮತ್ತು ಚಳಿಗಾಲದಲ್ಲಿ ಕತ್ತಿನವರೆಗೂ ನೀರಿನಲ್ಲಿ ನಿಂತು, ಮಳೆಗಾಲದಲ್ಲಿ ತೆರೆದ ಆಕಾಶದ ಕೆಳಗೆ ನಿಂತುಕೊಂಡು ತಪಸ್ಸು ಮಾಡುತ್ತಿದ್ದರು, ಎಂದು ಹೇಳಿದೆ. ಅದಕ್ಕೇ ಕೇಳಿದ, ಅದೆಲ್ಲಾ ಕೇಳಿಕೇಳಿಯೇ ವಿದೇಶಿಯರು ಎಲ್ಲಾ ವಿದ್ಯೆಗಳನ್ನೂ ಕಲಿತು ಬಿಟ್ಟಿದ್ದಾರೆ. ಅಲ್ಲವೇ ಅಜ್ಜಾ? ನಮ್ಮ ಸ್ಕೂಲಿನಲ್ಲಿ ಮೇಷ್ಟರೂ ಹೇಳಿದ್ದರು. ವಿದೇಶದಲ್ಲಿ ಅವರುಗಳು ಚಂದ್ರಲೋಕಕ್ಕೆ ಕಳುಹಿಸುವುದಿಲ್ಲವೇ, ಅವರುಗಳಿಗೂ ಈ ತರಹ, ಉಷ್ಣ, ಶೀತ, ಊಟಮಾಡದೆ ಇರುವುದು ಇಂಥಾದ್ದಲ್ಲೆಲ್ಲಾ ಪಳಗಿಸಿ ಆಮೇಲೆ ಕಳುಹಿಸುತ್ತಾರಂತೆ" ಎಂದು ಹೇಳಿದ.

"ಕೇಳಿ ನನಗಂತೂ ಆಶ್ಚರ್ಯವಾಗಿ ಹೋಯಿತು. ಇಷ್ಟುದ್ದ ಹುಡುಗ, ಅವನ ತಲೆಯಲ್ಲಿ ಹೊಳೆದಿದೆ ನೋಡು. ಸರಿಯಾಗಿ ತಿಳಿದುಕೊಂಡಿದ್ದಾನೆ. ಗೊತ್ತೇ ಸೊಸೆಯಮ್ಮಾ, ಹೀಗೆಯೇ ಹಿಂದಿನ ಮುನಿ–ಋಷಿಗಳು, ಆಕಾಶದಲ್ಲಿ ಹೋಗುತ್ತಿದ್ದರು. ಪಾತಾಳಕ್ಕೆ ಹೋಗುತ್ತಿದ್ದರು.

ಹಾಗೆ ನೋಡಿದರೆ ಈಗಿನ ಕಾಲದಲ್ಲಿ ತಾಯಿಯ ಹೊಟ್ಟೆಯಲ್ಲಿರುವ ಮಗುವಿಗೆ ಹೊರಗಿನ ಪ್ರಪಂಚದ ವಿಷಯ ಗೊತ್ತಿಲ್ಲ ಎನ್ನುತ್ತಾರೆ ಶಾರದಾಪ್ರಸಾದ್, ಆದರೆ ಹಿಂದಿನ ಕಾಲದಲ್ಲಿ? ಹಾಸ್ಯದ ನಗುನಕ್ಕು ಹೇಳುತ್ತಾರೆ ಶಾರದಾಪ್ರಸಾದ್, "ಆದರೆ ಹಿಂದಿನಕಾಲದಲ್ಲಿ ಅದುವರೆಗೂ ಹಾಸ್ಯದ ನಗುನಕ್ಕು ಹೇಳುತ್ತಾರೆ ಮುಂದುವರೆದಿತ್ತು ವಿಜ್ಞಾನ. ಅಭಿಮನ್ಯುವೇ ಅದಕ್ಕೆ ಸಾಕ್ಷಿ. ಎಲ್ಲಿ? ಅವರುಗಳ ಊರಲ್ಲಿ ಇಂತಹ ಒಂದು ವಿಷಯ ನಡೆಯಲಿ ನೋಡೋಣ, ಎಲ್ಲಾ ಕಡೆಯೂ ಧನ್ಯ! ಧನ್ಯ!ವೆನ್ನುತ್ತಾರೆ. ಎಲ್ಲರೂ ಹೇಳುತ್ತಾರೆ, ಓಹೋಹೋ ವಿಜ್ಞಾನದ ಶಕ್ತಿ ಎಷ್ಟು! ಎಂದು ಆದರೆ ನಮ್ಮ ದುರದೃಷ್ಟ ಯಾರೂ ನಮ್ಮ ಮನೆಯ ಕಡೆ ಹಿಂದಿರುಗಿಯೂ ನೋಡುವುದಿಲ್ಲ. ಮಹಾಭಾರತವನ್ನು ಆ ಮೇಷ್ಟರ ಮುಂದೆ ಹಿಡಿದು, ಓದಿ ನೋಡಿ, ನಿಮ್ಮ ಕೈಯಲ್ಲಾದರೆ ಓದಿ ನೋಡಿ, ಗೊತ್ತಾಗುತ್ತೆ, ನೀವು ಯಾವುದನ್ನೂ ಹೊಸದಾಗಿ ಕಂಡುಹಿಡಿಯಲಿಲ್ಲ, ಎಂದು ಹೇಳಬಹುದಾಗಿತ್ತು."

ಹೇಳುತ್ತಾ ಗಂಟಲು ಬಿಗಿಯುತ್ತೆ ಶಾರದಾಗೆ, ಕಣ್ಣುಗಳು ಪಳಪಳಿಸುತ್ತೆ, ತನ್ನ ಒಂದು ಕೈಯಿಂದ ಇನ್ನೊಂದು ಕೈಯಲ್ಲಿ ಗುದ್ದಿ ಹೇಳುತ್ತಾರೆ, "ಮುಖ್ಯ ವಿಷಯ ಏನು ಗೊತ್ತೇನಮ್ಮಾ, ನಮ್ಮ ದೇಶದಲ್ಲಿ ಯಾರೂ ಇದನ್ನು, ಅಷ್ಟೇಕೆ, ಯಾವುದನ್ನೂ ಯೋಚಿಸಿ ನೋಡುವುದಿಲ್ಲ. ಕಿವಿಹಿಡಿದು ತೋರಿಸಿದರೂ, ಆಶ್ಚರ್ಯಪಡುವುದರ ಬದಲು ನಗುತ್ತಾರೆ. ಆದರೆ ನಾನು ಹೇಳುತ್ತೇನೆ, ನೋಡುತ್ತಾ ಇರು, ಒಂದಲ್ಲ ಒಂದು ದಿನ ಖಂಡಿತ ಈ ನಗುವುದು ನಿಲ್ಲುತ್ತೆ. ಒಂದಲ್ಲ ಒಂದುದಿನ ಯಾವಾಗ ಅವರುಗಳೇ, ವಿದೇಶಿಯರೇ, ಒಪ್ಪಿಕೊಂಡು ಹೇಳುತ್ತಾರೋ 'ನಾವುಗಳು ಕಲಿತಿರುವುದೆಲ್ಲಾ ನಿಮ್ಮ ಭಾರತವರ್ಷದ್ದೇ, ನಿಮ್ಮ ಸಂಸ್ಕೃತ ಶಾಸ್ತ್ರದ ಗ್ರಂಥಗಳೇ ನಮ್ಮ ಕೈಗೆ ಸಿಕ್ಕಿತ್ತು. ಎಲ್ಲಾ, ಇದೆಲ್ಲಾ ಅದರಿಂದಲೇ ಸಾಧ್ಯವಾಯಿತು' ಎನ್ನುತ್ತಾರೋ ಆಗ ಪಾಪ,ನಮ್ಮವರು, 'ಹೌದಲ್ಲವೇ, ಅದಕ್ಕೇ ಎಲ್ಲಾ ನಮ್ಮ ಹಿಂದಿನ ಕಾಲದಲ್ಲಿ ನಡೆದ ಹಾಗೆಯೇ ಇದೆ," ಎನ್ನುತ್ತಾರೆ!

ಮಧ್ಯಾಹ್ನದ ಸೂರ್ಯ ನಿಧಾನವಾಗಿ ಪಶ್ಚಿಮ ಗಗನದಲ್ಲಿ ಇಳಿಯಲಾರಂಭಿಸುತ್ತಾನೆ. ಅದರ ಚಿನ್ನದ ಬಣ್ಣ ದಿಗಂತವೆಲ್ಲಾ ಹರಡಿಕೊಳ್ಳುತ್ತದೆ.

ಅರೆ ಹುಚ್ಚ, ಒಬ್ಬ ಪ್ರೌಢವ್ಯಕ್ತಿಯ ಸುತ್ತಲೂ ಕುಳಿತಿರುವ ಕೆಲವು ಅಬೋಧ ಬಾಲಕರುಗಳ ಗೋಷ್ಠಿ ಮತ್ತು ಮಲಿನ ವಸನದ ವಿಧವೆಯೊಬ್ಬಳು.

ಶಾರದಾಪ್ರಸಾದರ ಮಾತುಗಳನ್ನು ಅವರುಗಳು, ಅರ್ಥ ಮಾಡಿಕೊಳ್ಳುತ್ತಾರೋ ಇಲ್ಲವೋ ಅಂತೂ ಶಾರದಾಪ್ರಸಾದರನ್ನು ಚೆನ್ನಾಗಿ ತಿಳಿದುಕೊಂಡಿದ್ದಾರೆ. ಒಂದು ಮಿತವಾದ ಕುತೂಹಲವಿದೆ ಆ ತಿಳುವಳಿಕೆಯಲ್ಲಿ.

ಎಷ್ಟೋ ದಿನಗಳಿಂದ, ಇಂತಹ ದೃಷ್ಟಿಯಿಂದ ನೋಡುವವರ ಪ್ರತೀಕ್ಷೆಯಲ್ಲಿ ತಾನೆ ಇದ್ದ ಆತನೂ!

ಇಂತಹ ಭಯಂಕರ, ವಿಸ್ಮಯಕರವಾದ ತತ್ವವನ್ನು ಕಂಡುಹಿಡಿದವರನ್ನು, ತಮ್ಮ ಮುಗ್ಧ ದೃಷ್ಟಿಯ ದೀಪವನ್ನು ಹಚ್ಚಿ ಪೂಜಿಸದೆ ಇರುತ್ತಾರೆಯೇ?!

ಶಾರದಾ ಪ್ರಸಾದ್ ಗಂಭೀರ ಧ್ವನಿಯಿಂದ ಹೇಳುತ್ತಾ ಹೋಗುತ್ತಾರೆ, ಒಂದಾದ ಮೇಲೊಂದು ಕತೆ. ಆಮೇಲೆ ಅದರ ವ್ಯಾಖ್ಯಾನಗಳು.

ಆತನ ರಾಶಿ ರಾಶಿ ಕಾಗದದ ಸ್ತೂಪವನ್ನು ತಾವೇ ವಿಸರ್ಜನೆಮಾಡಿ ಬಂದಿದ್ದಾರೆ. ಆದರೆ ಏನು ಕಳೆದುಹೋದದ್ದು, ಅದರಿಂದ? ಯಾವುದು ಮರೆತುಹೋಗಿದೆ?

ಎಲ್ಲವೂ ಶಾರದಾಪ್ರಸಾದರ ಮನಸ್ಸಿನ ಹಾಳೆಗಳಲ್ಲಿ ಮುದ್ರಿತವಾಗಿಲ್ಲವೇ?

ಮುದ್ರಣ ಶಾಲೆಯಲ್ಲಿ, ತನ್ನ ಅಪೂರ್ವವಾದ ಆರಾಯ್ಕೆಗಳು ಮುದ್ರಣವಾಗಲಿಲ್ಲವೆಂಬ ಕೋಪವಾಗಲಿ, ವ್ಯಥೆಯಾಗಲಿ, ಇಲ್ಲ ಶಾರದಾಪ್ರಸಾದ್‌ಗೆ. ಪ್ರಾಯಶಃ ಅರಣ್ಯದಂತಿರುವ ಈ ಗ್ರಾಮದ ಮಡಿಲಲ್ಲಿ, ಮರದ ನೆರಳಲ್ಲಿ ತನ್ನನ್ನು, ಶಿಷ್ಯ-ಪರಿವೇಷ್ಟಿತ ಒಬ್ಬ ಋಷಿಯಂತೆ ತೋರುತ್ತೆ ಆತನಿಗೆ!

ಅತಃ ಶಾರದಾಪ್ರಸಾದ್‌ಗೆ ಮುನಿ ಋಷಿಗಳ ದಿವ್ಯಜ್ಞಾನವೂ ಲಭಿಸುತ್ತದೋ ಏನೋ!

ಗಂಭೀರವಾದ ಕಂಠದಿಂದ ಹೇಳುತ್ತಾ ಹೋಗುತ್ತಾರೆ. "ಇಷ್ಟೆಲ್ಲಾ, ಜ್ಞಾನ, ವಿಜ್ಞಾನ ಎಲ್ಲಾಇದ್ದುದನ್ನು ಭಾರತವರ್ಷ ಹೇಗೆ ಕಳೆದುಕೊಂಡಿತು ಅರ್ಥವಾಯಿತೇ? ಕೇವಲ, ಶಕ್ತಿಯ ಅಹಂಕಾರದಿಂದಾಗಿ, ತಮ್ಮ ತಮ್ಮಲ್ಲೇ ಹೊಡೆದಾಡಿ, ಲಂಕಾಕಾಂಡವಾದ ಮೇಲೆ ತ್ರೇತಾಯುಗ ಧ್ವಂಸವಾಯಿತು. ಕುರುಕ್ಷೇತ್ರದ ನಂತರ ದ್ವಾಪರ ಮುಗಿಯಿತು. ಆದರೂ ಭಾಗ್ಯಹೀನನಾಧ ಈ ಕಲಿಯುಗಕ್ಕೆ ಎಚ್ಚರಿಕೆ ಇಲ್ಲ. ತನ್ನನ್ನು ಧ್ವಂಸಮಾಡಿ, ಮುಂದುವರಿದಿದ್ದೆಲ್ಲವನ್ನೂ, ಸಮುದ್ರದ ನೀರಿನಲ್ಲಿ ನಾಶಮಾಡಿ, ತಿರುಗಿ ಗುಹೆಯ ಮನುಷ್ಯನಾಗಿ ಹೋದ ಮೇಲೆಯೇ ಇದಕ್ಕೆ ವಿರಾಮವೇನೋ! ಆಗುತ್ತೆ, ಆಗುತ್ತಾ ಇದೆ. ಈ ಹಿಪ್ಪಿಗಳೇ ಇದಕ್ಕೆ ಸೂಚನೆ."

ಕೇಳುವವರ ಪರಿವೆಯೇ ಇರುವುದಿಲ್ಲವೇನೋ ಶಾರದಾಪ್ರಸಾದ್‌ಗೆ. ತನ್ನಷ್ಟಕ್ಕೇ ಹೇಳಿಕೊಂಡು ಹೋಗುತ್ತಾರೆ, ಮತ್ತೆ ಏಕೆ ನಿನಗೆ ಇಷ್ಟೊಂದು ಹೆಮ್ಮೆ? ವಿಧಾತನ ನಿಯಮದಂತೆಯೇ ನಡೆಯುತ್ತೀರಿ ನೀವುಗಳು, ಹೇಗೆ, ಹಗಲಾದ ಮೇಲೆ ರಾತ್ರಿಯೋ, ಹಾಗೆಯೇ ಬೆಳಕಿನ ಕಡೆಯಲ್ಲಿ ಇರುಳು, ತಮ್ಮ ಸೃಷ್ಟಿಯನ್ನು ತಾವೇ ಧ್ವಂಸಮಾಡಿ, ತಿರುಗಿ, ಕಟ್ಟಿಗೆ ತಾಕಿಸಿ ಬೆಂಕಿಯನ್ನು ಹೊತ್ತಿಸುತ್ತಾನೆ ಮನುಷ್ಯ. ಇದನ್ನೂ ಹಳೆಯ ಕಾಲದ ಮುನಿ ಋಷಿಗಳು ಬರೆದಿಟ್ಟುಬಿಟ್ಟೇ ಹೋಗಿದ್ದಾರೆ!

ISBN No : 978-81-906101-1-7